# ತಪ್ಪು ಕಲ್ಪನೆಗಳು

## ಇಸ್ಲಾಮ್: ತಪ್ಪುತಿಳುವಳಿಕೆಯ ಪರದೆಯನ್ನು ಕಿತ್ತೊಗೆಯೋಣ

ಸೈಯದ್ ಹಾಮಿದ್ ಮುಹ್ಸಿನ್

SALAAM Centre

ಶಾಂತಿ ಮತ್ತು ಭ್ರಾತೃತ್ವವನ್ನು ಬಲಿಷ್ಠಗೊಳಿಸುವುದೇ ನಮ್ಮ ಧ್ಯೇಯ.

www.salaamcentre.in www.misconceptions.in

TAPPU KALPANEGALU ( Kannada )
Facts vs Fictions ( English )
Copyright © 2015 SYED HAMID MOHSIN.
ISBN: 978-81-928089-3-2

1st Edition : 5000, 2nd edition : 5000, 3rd edition : 5000
4th Edition : 5000, 5th Edition : 5000

All rights reserved. No part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the author, except for the situation below which is permitted.

For Reprinting: Reprinting or reproducing this book on the condition that absolutely no change, addition, or omission is introduced is permitted free of charge. To make high quality reprints, you may contact the author / salaam centre to obtain free copies of the soft copy or printing files of this book.

This e-book is available on the Web, world wide at:
**www.misconceptions.in** **www.salaamcentre.in**

Price: Rs. 250/-

Printed and Published by :
SALAAM CENTRE
#65, Ist main, S.R.K. Garden, Jayanagar, Bangalore – 560 041
Contact: +91 99011 29956 / +91 99451 77477 / 080-2663 9007
Email: salaamcentrebangalore@gmail.com

## ಒಳಪುಟಗಳಲ್ಲಿ...


| | | |
|---|---|---|
| ★ | ಪ್ರವೇಶ | |
| ★ | ಮೊದಲ ಮಾತು | |
| ★ | ಮಿಥ್ಯೆ ಮತ್ತು ವಾಸ್ತವ | 1 |
| ★ | ಪ್ರೀತಿ ನಮ್ಮನ್ನು ಜೋಡಿಸುತ್ತದೆ | 3 |
| ★ | ಜನಪ್ರಿಯ ಸಿದ್ಧ ಮಾದರಿಗಳು | 5 |
| ★ | ಪೂರ್ವಗ್ರಹಪೀಡಿತ ಇತಿಹಾಸ | 6 |
| ★ | ಬಹುಪತ್ನಿತ್ವ | 7 |
| ★ | ಪಾಕಿಸ್ತಾನ ಮತ್ತು ಭಾರತೀಯ ಮಸ್ಲಿಮರು | 9 |
| ★ | 786 | 9 |
| ★ | ಬಾಲಚಂದ್ರ ಮತ್ತು ನಕ್ಷತ್ರ, ಮತಾಂಧ ಅಪಪ್ರಚಾರಗಳು | 11 |
| ★ | ಕಿಡಿಗೇಡಿತನ | 12 |
| ★ | ಪಾಕಿಸ್ತಾನಿ ಧ್ವಜ | 12 |
| ★ | ಆಕ್ಷೇಪಾರ್ಹ ಮಾಂಸ | 13 |
| ★ | ಲವ್ ಜಿಹಾದ್ | 14 |
| ★ | ಹಸಿರು ಬಣ್ಣ | 15 |
| ★ | ವಂದೇ ಮಾತರಂ: ರಾಷ್ಟ್ರೀಯತೆಗೂ ಮೀರಿದ ರಾಜಕಾರಣ | 16 |
| ★ | ತಲಾಕ್ (ವಿಚ್ಛೇದನ) | 18 |
| ★ | ಖುಲಾ (ಮಹಿಳೆಯರಿಗೆ ವಿಚ್ಛೇದನದ ಹಕ್ಕು) | 21 |
| ★ | ಫತ್ವಾ | 22 |
| ★ | ಕುಫ್ರ್ ಮತ್ತು ಕಾಫಿರ್ | 24 |
| ★ | ಮುಸ್ಲಿಮರು ಏಕೆ ಮಾಂಸಾಹಾರ ಸೇವಿಸುತ್ತಾರೆ ? | 25 |
| ★ | ಮಾಂಸಾಹಾರ ಮನುಷ್ಯರನ್ನು ಹಿಂಸಾವಾದಿಯಾಗಿಸುತ್ತಿದೆಯೇ ? | 28 |
| ★ | ಹಲಾಲ್ ಮತ್ತು ಹರಾಮ್ (ಕಾನೂನುಸಮ್ಮತ ಮತ್ತು ನಿಷಿದ್ಧ) | 29 |
| ★ | ಹಲಾಲ್: ಪ್ರಾಣಿವಧೆಯ ಇಸ್ಲಾಮೀ ಕ್ರಮ | 30 |

☆ ಹರಾಮ್: ಮದ್ಯಪಾನ ಮತ್ತು ಜೂಜಿಗೆ ನಿಷೇಧ 30

☆ ಅತ್ಯಾಚಾರ: ಲೈಂಗಿಕ ಭಯೋತ್ಪಾದನೆ 32

☆ ಇಸ್ಲಾಮೀ ಕಾನೂನಿನಲ್ಲಿ ವ್ಯಭಿಚಾರ ಮತ್ತು ಅತ್ಯಾಚಾರದ ನಡುವಿನ ವ್ಯತ್ಯಾಸ 33

☆ ಅತ್ಯಾಚಾರಕ್ಕೆ ಪಶ್ಚಿಮದ ಲೌಕಿಕ ಶಿಕ್ಷೆ 35

☆ ಇಸ್ಲಾಮೀ ರಾಷ್ಟ್ರ ಅಥವಾ ಮುಸ್ಲಿಮ್ ರಾಷ್ಟ್ರ: ಏನಿದು ವ್ಯತ್ಯಾಸ? 37

☆ ಮುಸ್ಲಿಮರೋ? ಮಹಮದೀಯರೋ ? 39

☆ ಷಿಯಾ ಮತ್ತು ಸುನ್ನಿ ಮುಸ್ಲಿಮರು ? 41

☆ ಉರ್ದು ವಿದೇಶಿ ಭಾಷೆಯೇ ? 45

☆ ಇಸ್ಲಾಮಿನಲ್ಲಿ ಪೌರೋಹಿತ್ಯವಿಲ್ಲ 46

☆ ಮದ್ರಸಾ ಶಿಕ್ಷಣ 47

☆ ಮದ್ರಸಾ ಮತ್ತು ಮಕ್ತಬಾ 49

☆ ಮಸೀದಿ ಅಥವಾ ಮಸ್ಜಿದ್ 50

☆ ಮಸೀದಿಯ ಒಳಗೆ ಪ್ರವೇಶಿಸಿದಾಗ... 52

☆ 'ಇಡೀ ಜಗತ್ತೇ ಒಂದು ಮಸೀದಿಯಾಗಿದೆ...' 53

☆ ಅದಾನ್ – ಪ್ರಾರ್ಥನೆಯ ಕರೆ 54

☆ ಮುಸ್ಲಿಮರು ಕಾಬಾವನ್ನು ಪೂಜಿಸುವರೇ ? 56

☆ ಕಪ್ಪು ಶಿಲೆ (ಹಜರುಲ್ ಅಸ್ವದ್) 58

☆ ಮುಸ್ಲಿಮರು ಕಪ್ಪು ಶಿಲೆಯನ್ನು ಪೂಜಿಸುತ್ತಾರೆಯೇ ? 59

☆ ಮುಸ್ಲಿಮೇತರರಿಗೆ ಮಕ್ಕಾ ಪ್ರವೇಶಿಸಲು ಯಾಕೆ ಅನುಮತಿ ಇಲ್ಲ? 60

☆ ದರ್ಗಾಗಳಿಗೆ ಭೇಟಿ 62

☆ ದರ್ಗಾ ಮತ್ತು ಮಸೀದಿ ನಡುವಣ ವ್ಯತ್ಯಾಸ 63

☆ ದೇವರ ಮತ್ತು ಪ್ರವಾದಿಯ ಚಿತ್ರಗಳು ಏಕಿಲ್ಲ ? 65

☆ ಪ್ರವಾದಿ ಮುಹಮ್ಮದ್ ಖಡ್ಗದ ಮೂಲಕ ಇಸ್ಲಾಮ್ ಪ್ರಚಾರ ಮಾಡಿದರೆ ? 68

☆ ಇಸ್ಲಾಮ್ ಬಲಪ್ರಯೋಗದಿಂದ ಹಬ್ಬಿತೇ ? 71

★ ವೈಯಕ್ತಿಕ ಕಾನೂನು 80
★ ಹಜ್ಜ್ ಸಬ್ಸಿಡಿ 80
★ ಜನಸಂಖ್ಯೆಯ ಭೂತ 81
★ ಮುಸ್ಲಿಮರ ಓಲೈಕೆ 83
★ ಟಿಪ್ಪು ಸುಲ್ತಾನ್: ದೂಷಣೆಗೀಡಾದ ದೇಶಪ್ರೇಮಿ 88
★ ಪ್ರಾಚೀನ ವೈರತ್ವ, ಆಧುನಿಕ ದ್ವೇಷ 97
★ ಕೋಮು ವಿಷದಿಂದ ನಮ್ಮ ರಾಜಕೀಯ
ವ್ಯವಸ್ಥೆಯನ್ನು ಮುಕ್ತಗೊಳಿಸುವುದು 110
★ ಜಿಹಾದ್ 115
★ ಜಿಹಾದ್‌ನ ನಾನಾ ಮುಖಗಳು 115
★ ಅತ್ಯಂತ ದೊಡ್ಡ ಜಿಹಾದ್ 116
★ ಶ್ರೇಷ್ಠ ಜಿಹಾದ್ 117
★ ಸಣ್ಣ ಜಿಹಾದ್ 117
★ ಬೌದ್ಧಿಕ ಜಿಹಾದ್: 118
★ ಸಾಮಾಜಿಕ ಜಿಹಾದ್ 119
★ ಯುದ್ಧ: ಪ್ರವಾದಿ ಮುಹಮ್ಮದ್ ಹೇಳಿದ್ದೇನು ? 122
★ ಜಿಹಾದ್: ಬಳಕೆ ಮತ್ತು ದುರ್ಬಳಕೆ 125
★ ಧರ್ಮದ ದುರ್ಬಳಕೆ 129
★ ಮರ್ದನ ಮತ್ತು ಭಯೋತ್ಪಾದನೆ: ವ್ಯತ್ಯಾಸ ಇದೆಯೇ ? 132
★ ಇಸ್ಲಾಮೊಫೋಬಿಯಾ (ಇಸ್ಲಾಮಿನ ಭೀತಿ)ದ ಉತ್ಪಾದನೆ 138
★ ಭಯೋತ್ಪಾದನೆ ಕುರಿತು ಮಾಧ್ಯಮದ ದ್ವಿಮುಖ ನೀತಿ 142
★ ಭಯೋತ್ಪಾದನೆಯ ಬೇರುಗಳು 145
★ ಹಿಂಸೆ, ಭಯೋತ್ಪಾದನೆ ಮತ್ತು ನರಮೇಧ – ಪಾಶ್ಚಿಮಾತ್ಯ ನಾಯಕತ್ವ 150
★ ಇಸ್ಲಾಮ್ ಆತ್ಮಹತ್ಯಾ ದಾಳಿಯನ್ನು ನಿಷೇಧಿಸುತ್ತದೆ 156
★ ಇಸ್ಲಾಮೀ ಮೂಲಭೂತವಾದ 161
★ ಮಹಿಳೆ: ಗುಪ್ತ ಚರಿತ್ರೆ ಮತ್ತು ಅನಿಶ್ಚಿತ ವರ್ತಮಾನ 164

✖ ಮಹಿಳೆಯರ ಬಗ್ಗೆ ಇಸ್ಲಾಮಿನ ದೃಷ್ಟಿಕೋನ–ಮೂಲ ಆಕರಗಳಿಂದ 171
✯ ಇಸ್ಲಾಮೀ ಕಾನೂನಿನ ಪ್ರಕಾರ ಮಹಿಳೆಯರ ಹಕ್ಕುಗಳು 174
✯ ಇಸ್ಲಾಮ್‌ನಲ್ಲಿ ಮಹಿಳೆಯರ ಕರ್ತವ್ಯಗಳು 177
✯ ಹಿಜಾಬ್ ಅಥವಾ ಬುರ್ಖಾ 178
✯ ಹಿಜಾಬ್: ‘ ದೇವರನ್ನು ಮೆಚ್ಚಿಸಲು ’ ಮಹಿಳೆಯ ಆಯ್ಕೆ 179
✯ ಹಿಜಾಬ್: ಬೌದ್ಧಿಕತೆ ಮತ್ತು ನಾಜೂಕುತನದ ಉತ್ಕೃಷ್ಟ ಮಟ್ಟ 182
✯ ಮುಸ್ಲಿಮ್ ಮಹಿಳೆಗೆ ಸಂಬಂಧಿಸಿದ ಕೆಲ ವಿವಾದಾತ್ಮಕ ವಿಷಯಗಳು 183
✯ ಇಸ್ಲಾಮೀ ಕಾನೂನಿನ ಪ್ರಕಾರ ವಾರೀಸು ಹಕ್ಕಿನಲ್ಲಿ
ಮಹಿಳೆಯರ ಪಾಲು ಪುರುಷನಿಗಿಂತ ಅರ್ಧದಷ್ಟು ಮಾತ್ರ ಏಕೆ ? 183
✯ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮಹಿಳೆಗೆ ಮತದಾನ ಹಕ್ಕಿದೆ ? 185
✯ ಮಹಿಳೆಯ ಶಿಕ್ಷಣ ಪಡೆಯುವ ಮತ್ತು ವಾಹನ ಚಲಾಯಿಸುವ ಹಕ್ಕು? 187
✯ ಬಹುಪತ್ನಿತ್ವ ಮತ್ತು ಏಕಪತ್ನಿತ್ವ 189
✯ ಬಹುಪತ್ನಿತ್ವ – ಪಾಶ್ಚಿಮಾತ್ಯರ ಒಂದು ಅಸ್ತ್ರ 189
✯ ಯಹೂದಿ ಧರ್ಮದಲ್ಲಿ ಬಹುಪತ್ನಿತ್ವ 190
✯ ಕ್ರೈಸ್ತ ಧರ್ಮದಲ್ಲಿ ಬಹುಪತ್ನಿತ್ವ 192
✯ ಹಿಂದೂ ಧರ್ಮದಲ್ಲಿ ಬಹುಪತ್ನಿತ್ವ 193
✯ ಪಾಶ್ಚಾತ್ಯ ಸಮಾಜದಲ್ಲಿ ಬಹುಪತ್ನಿತ್ವ 193
✯ ಇಸ್ಲಾಮಿನಲ್ಲಿ ಬಹುಪತ್ನಿತ್ವ 195
✯ ಪ್ರವಾದಿ ಮುಹಮ್ಮದ್ ಮತ್ತು ಅವರ ಕೌಟುಂಬಿಕ ಬದುಕು 200
✯ ಇಸ್ಲಾಮಿನಲ್ಲಿ ವಿಚ್ಛೇದಿತೆಯರು ಮತ್ತು ವಿಧವೆಯರ ಮರುವಿವಾಹ 203
✯ ಅಪಾರ್ಥಕ್ಕೊಳಗಾದ ಕುರ್‌ಆನ್ ಸೂಕ್ತಗಳು 206
✯ ಕೃತಜ್ಞತೆ 218

# ಪ್ರವೇಶ

ನಾವು ತೀರಾ ಪ್ರಕ್ಷುಬ್ಧವಾದ ಒಂದು ಕಾಲಘಟ್ಟದಲ್ಲಿ ಬದುಕುತ್ತಿದ್ದೇವೆ. ರಾಷ್ಟ್ರಗಳ ಕಲ್ಪನೆಯು ಜನರ ಮಧ್ಯೆ ಅಗಾಧ ಒಡಕನ್ನು ಸೃಷ್ಟಿಸಿದೆ. ಧರ್ಮ, ಜಾತಿ ಮತ್ತು ಭಾಷೆಗೆ ಸಂಬಂಧಿಸಿ ಭಾವನೆಗಳನ್ನು ದುರ್ಬಳಕೆ ಮಾಡಿಕೊಳ್ಳುವ ಶಕ್ತಿಗಳಿಂದಾಗಿ ಸಮುದಾಯಗಳ ನಡುವಣ ಸಂಬಂಧಗಳು ಗಂಡಾಂತರಕ್ಕೆ ಸಿಲುಕಿವೆ. ಜನರನ್ನು ಒಡೆಯುವುದಕ್ಕಾಗಿ ಧರ್ಮವನ್ನು ಬಳಸಲಾಗುತ್ತಿದೆಯೇ ವಿನಾ ಅವರಿಗೆ ಅಧ್ಯಾತ್ಮಿಕ ನೆಮ್ಮದಿಯನ್ನು ಒದಗಿಸುವ ಮಾರ್ಗವಾಗಿ ಅಲ್ಲ. ಗ್ರಾಹಕವಾದ ಮತ್ತು ವ್ಯಾಪಾರೀಕರಣವು ಜನರ ಮತ್ತು ದೇಶಗಳ ಕೈಯಿಂದ ನೈಸರ್ಗಿಕ ಸಂಪನ್ಮೂಲ ಮತ್ತು ಶಾಂತಿಯನ್ನು ಕಿತ್ತುಕೊಳ್ಳುತ್ತಿದೆ. ಜಾಗತಿಕ ಶಕ್ತಿಗಳನ್ನು ಹಿಡಿತದಲ್ಲಿಟ್ಟುಕೊಂಡಿರುವ ಉಪಭೋಗ ಸಂಸ್ಕೃತಿಯ ವಕ್ತಾರರು ಶಸ್ತ್ರಾಸ್ತ್ರ ತಯಾರಿಕಾ ಉದ್ಯಮದ ಬೆಳವಣಿಗೆಗಾಗಿ ಯುದ್ಧಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಇವರ ಸಂಚುಗಳನ್ನು ಬಯಲಿಗೆಳೆಯಬೇಕಾಗಿದ್ದ ಶಿಕ್ಷಣವೇತ್ತರು, ಸಂಶೋಧನಾ ಸಂಸ್ಥೆಗಳು ಮತ್ತು ಮಾಧ್ಯಮಗಳು ಮಾತೆತ್ತಲಿಕ್ಕೂ ಹಿಂದೇಟು ಹಾಕುತ್ತಿವೆ. ಯಾಕೆಂದರೆ ಇವರೂ ಈ ಪಾಪದ ಗಳಿಕೆಯ ಫಲಾನುಭವಿಗಳೇ. ಹೀಗಾಗಿ ನಾಗರಿಕ ಸಮಾಜದ ಧ್ವನಿಯೇ ಇಂದು ಕೇಳಿಸದಂತಾಗಿದೆ.

ಯುದ್ಧಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ದ್ವೇಷವನ್ನು ಹರಡಲು ಮತ್ತು ವೈರವನ್ನು ಪ್ರಚೋದಿಸಲಿಕ್ಕಾಗಿ ಸಿದ್ಧ ಮಾದರಿಗಳನ್ನು ಜನಪ್ರಿಯಗೊಳಿಸಲಾಗುತ್ತದೆ. ಇದೇ ಉದ್ದೇಶಕ್ಕಾಗಿ ಮಾಧ್ಯಮಗಳ ಮೂಲಕ ಇಸ್ಲಾಮನ್ನು ಒಂದು ಪಿಡುಗಿನ ರೂಪದಲ್ಲಿ ಚಿತ್ರಿಸುವ ಅಭಿಯಾನ ನಡೆದಿದೆ. ಇದು ಜಗತ್ತಿನಾದ್ಯಂತ ಸಾಮಾಜಿಕ ಸ್ವಾಸ್ಥ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರಿದೆ. ಇಂದು ಜಾಗತಿಕ ಸುದ್ದಿ ಮಾಧ್ಯಮಗಳು ದ್ವೇಷದ ದಳ್ಳುರಿಯನ್ನೇ ಹಬ್ಬಿಸಿ ಬಿಟ್ಟಿವೆ. ಅಧಿಕಾರದ ಕೇಂದ್ರಗಳ ಮೂಲಕ ಯುದ್ಧೋನ್ಮಾದದ ಹಪಾಹಪಿ ಕಂಡು ಬರುತ್ತಿದೆ. 'ನೀವು ಒಂದೋ ನಮ್ಮೊಂದಿಗಿದ್ದೀರಿ, ಇಲ್ಲವೇ ಭಯೋತ್ಪಾದಕರೊಂದಿಗಿದ್ದೀರಿ' ಎಂಬಂತಹ ಘೋಷಣೆಗಳು ಆಗಿಂದಾಗ್ಗೆ ಕೇಳಿ ಬರುತ್ತಿವೆ. ತನ್ಮೂಲಕ ಜಾಗತಿಕ ವಿದ್ಯಮಾನಗಳ ಬಗ್ಗೆ ತೀರ್ಮಾನ ಕೈಗೊಳ್ಳಲು ಸಾಧ್ಯವಾಗದವರು, ತಮ್ಮ ಪಾಡಿಗೆ ಇರುವವರು ಮತ್ತು ತಟಸ್ಥರಾಗಿರುವವರನ್ನು ಕೂಡಾ ಯುದ್ಧದ ವಿರುದ್ಧ ಸ್ವರ ಎತ್ತದಂತೆ ಮಾಡಲಾಗಿದೆ.

ಇಸ್ಲಾಮ್ ಮತ್ತು ಮುಸ್ಲಿಮ್ ಎಂಬ ಪದಗಳು ಗುಂಡಿನ ಗಾಯದಿಂದ ಜರ್ಝರಿತವಾದ ಕಣ್ಣುಗಳನ್ನು ಹೊಂದಿದ ಮತ್ತು ಹೆಗಲ ಮೇಲೆ ಕ್ಷಿಪಣಿಗಳನ್ನು ಹೊತ್ತ ಗಡ್ಡಧಾರಿ ಹೋರಾಟಗಾರರ ಚಿತ್ರಣವನ್ನು ಮನದಲ್ಲಿ ಮೂಡಿಸುತ್ತಿದೆ. ನಿಜವಾಗಿ ಈ ಚಿತ್ರಣಗಳೇ ಇಂದು ನಮ್ಮ ತರಂಗಾಂತರಗಳು, ಟಿ.ವಿ. ಪರದೆಗಳು ಮತ್ತು ಸಮಾಚಾರ ಪತ್ರಿಕೆಗಳಲ್ಲಿ ರಾರಾಜಿಸುತ್ತಿವೆ. ಜಿಹಾದ್, ಮುಲ್ಲಾ, ಮುಜಾಹಿದೀನ್, ಫತ್ವಾ, ಕಾಫಿರ್, ಶರಿಯಾ, ಷಿಯಾ, ಸುನ್ನಿ, ವಹ್ಹಾಬಿ ಮತ್ತು ಮದ್ರಸಾಗಳ ಸುತ್ತಲೇ ಇಂದು ರಾಜಕೀಯ ಚರ್ಚೆಗಳು ಗಿರಕಿ ಹೊಡೆಯುತ್ತಿವೆ. 'ಭಯೋತ್ಪಾದನೆಯ ವಿರುದ್ಧದ ಸಮರ'ವನ್ನು ಸಮರ್ಥಿಸಲು ಈ ಪಾರಿಭಾಷಿಕಗಳನ್ನು ಪಾಶ್ಚಾತ್ಯ ಜಗತ್ತು ಬಳಸಿಕೊಳ್ಳುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಮುಸ್ಲಿಮ್ ಸಮುದಾಯವೇ ಮಾಧ್ಯಮಗಳ ಪ್ರೊಪಗಂಡಾದ ಮುಖ್ಯ ಗುರಿಯಾಗಿ ಬಿಟ್ಟಿದೆ. ಇತಿಹಾಸದ ಬಗೆಗಿನ ತಪ್ಪು ತಿಳುವಳಿಕೆಗಳು, ಸಂಪನ್ಮೂಲಗಳ ಮೇಲೆ ಆಧಿಪತ್ಯ ಸಾಧಿಸುವ ಪೈಪೋಟಿ ಮತ್ತು

ರಾಜಕೀಯ ಹಿತಾಸಕ್ತಿಗಳಿಗಾಗಿ ಮುಸ್ಲಿಮರ ವಿರುದ್ಧ ಪೂರ್ವಗ್ರಹಗಳನ್ನು ಹಬ್ಬಿಸುವ ವ್ಯವಸ್ಥಿತ ಪ್ರಯತ್ನಗಳು ನಡೆದಿವೆ. ಬಡವರು, ಅಧಿಕಾರವಿಲ್ಲದವರು ಮತ್ತು ಬದಿಗೆ ತಳ್ಳಲ್ಪಟ್ಟವರು ಆಚರಿಸುವ ಧರ್ಮ ಮತ್ತು ಸಾಮಾಜಿಕ ರಿವಾಜುಗಳೆಲ್ಲವೂ ಮಾಧ್ಯಮಗಳ ಮೂಲಕ ನೇತ್ಯಾತ್ಮಕವಾಗಿ ಚಿತ್ರಿತವಾಗುತ್ತಿವೆ. ಜಗತ್ತಿನ ಪ್ರತಿಯೊಂದು ಸಮಸ್ಯೆಯ ಹೊಣೆಯನ್ನೂ ಅವರ ಕೊರಳಿಗೆ ಕಟ್ಟಲಾಗುತ್ತಿದೆ. ತಮಾಷೆಯೆಂದರೆ, ಜಗತ್ತಿನ ಬೃಹತ್ ಶಕ್ತಿಗಳ ಭಯೋತ್ಪಾದನೆ ಮತ್ತು ಆರ್ಥಿಕ ದಾಹಕ್ಕೆ ತುತ್ತಾಗಿ ನರಳುತ್ತಿರುವ ಜನರನ್ನೇ ಭಯೋತ್ಪಾದಕರನ್ನಾಗಿ ಚಿತ್ರಿಸಲಾಗುತ್ತಿದೆ. ಜಿಹಾದ್ ಮತ್ತಿತರ ಪಾರಿಭಾಷಿಕಗಳನ್ನು ನಿರಪರಾಧಿ ಜನಸಾಮಾನ್ಯರ ಮೇಲೆ ನಡೆಸುವ ಯುದ್ಧ ಎಂಬಂತೆ ವ್ಯಾಖ್ಯಾನಿಸಲಾಗುತ್ತಿದೆ. ಅಮಾಯಕರನ್ನೇ ಖಳನಾಯಕರನ್ನಾಗಿ ಚಿತ್ರಿಸುತ್ತಿರುವುದರ ಹಿಂದೆ ಇರುವ ಶಕ್ತಿಗಳು ಯಾರು ಎಂಬುದು ಗುಟ್ಟಾಗಿ ಉಳಿದಿಲ್ಲ.

ಜಗತ್ತಿನ ತೈಲ ಬಾವಿಗಳು, ಇಂಧನ ಸಂಪನ್ಮೂಲಗಳ ಮೇಲೆ ಕಣ್ಣಿಟ್ಟಿರುವವರು ಹಾಗೂ ಅದಕ್ಕಾಗಿ ದ್ವೇಷ ಮತ್ತು ಯುದ್ಧಗಳಿಗಾಗಿ ಹಪಹಪಿಸುತ್ತಿರುವವರು ಯಾರೆಂಬುದು ಎಲ್ಲರಿಗೂ ಗೊತ್ತು. ಈ ಸಂಚನ್ನು ಅರ್ಥಮಾಡಿಕೊಂಡು ಸುಳ್ಳುಗಳನ್ನು ಬಯಲುಗೆಳೆಯುವ ಕಾಲ ಇಂದು ಸನ್ನಿಹಿತವಾಗಿದೆ. ಪರಸ್ಪರರ ನಂಬಿಕೆ ಮತ್ತು ಧರ್ಮಗಳ ಬಗ್ಗೆ ಒಂದು ಸಕಾರಾತ್ಮಕವಾದ ತಿಳುವಳಿಕೆಯನ್ನು ಮೂಡಿಸುವ ಮೂಲಕ ಜನರನ್ನು ಒಗ್ಗೂಡಿಸಲು ಹಾಗೂ ಧನಾತ್ಮಕ ಅಂಶಗಳಿಂದ ಲಾಭ ಪಡೆಯಲು ಸಾಧ್ಯವಿದೆ.

ಸಮುದಾಯಗಳ ಮಧ್ಯೆ ತಪ್ಪುತಿಳುವಳಿಕೆಗಳನ್ನು ಹೆಚ್ಚಿಸಲು ಪಾಶ್ಚಾತ್ಯ ಜಗತ್ತು ಸಾಕಷ್ಟು ಪ್ರಯತ್ನಗಳನ್ನು ನಡೆಸಿದೆ. ಪಶ್ಚಿಮ ಏಷ್ಯಾದಲ್ಲಿ ಒಂದು ದಶಲಕ್ಷಕ್ಕೂ ಹೆಚ್ಚು ಜನರ ಸಾವಿಗೆ ಕಾರಣವಾದ 'ಭಯೋತ್ಪಾದನೆ ವಿರೋಧಿ ಯುದ್ಧ'ದ ಹಿನ್ನೆಲೆಯಲ್ಲಿರುವುದು ಕೂಡಾ 'ನಾಗರಿಕತೆಗಳ ನಡುವಣ ಸಂಘರ್ಷ' ಅಥವಾ 'ಬಿಳಿಯರೇ ಮೇಲು' ಎಂಬ ಮಿಥ್ಯ ಸಿದ್ಧಾಂತ. 'ದ್ವಿರಾಷ್ಟ್ರ ತತ್ವ'ದಿಂದ ಉಪಖಂಡದಲ್ಲಿ ಎಂತಹ ಅನಾಹುತ ನಡೆಯಿತು ಎಂಬುದನ್ನು ನಾವು ಕಳೆದ ಶತಮಾನದಲ್ಲಿ ಕಂಡೆವು. ಆದ್ದರಿಂದ ಈ ಅಪಾಯಕಾರಿ ಶಕ್ತಿಗಳನ್ನು ಸೈದ್ಧಾಂತಿಕ ಮತ್ತು ವೈಚಾರಿಕ ನೆಲೆಯಲ್ಲೇ ಎದುರಿಸಬೇಕಾದ ಅಗತ್ಯವಿದೆ. ಆದರೆ ಸದ್ಯದ ಸಂಕಥನವು ಏಕಮುಖವಾಗಿ ಚಲಿಸುತ್ತಿದ್ದು ತೃತೀಯ ಜಗತ್ತಿನಲ್ಲಿ ಪಶ್ಚಿಮದ ಹಸ್ತಕ್ಷೇಪವನ್ನಾಗಲೀ, ದುರ್ಬಲ ರಾಷ್ಟ್ರಗಳಲ್ಲಿ ಪಶ್ಚಿಮ ಪ್ರಾಯೋಜಿಸುತ್ತಿರುವ ದಂಗೆ ಮತ್ತು ಕೈಗೊಂಬೆ ಆಡಳಿತಗಾರರ ಸ್ಥಾಪನೆಯ ಬಗ್ಗೆ ಜನರಿಗೆ ತಿಳುವಳಿಕೆ ನೀಡುವ ಯಾವುದೇ ಪ್ರಯತ್ನ ನಡೆದಿಲ್ಲ. ಅದೇ ರೀತಿ ಇಸ್ರೇಲ್ ನಡೆಸುತ್ತಿರುವ ದೌರ್ಜನ್ಯಗಳ ಬಗ್ಗೆಯೂ ಒಂದು ರೀತಿಯ ನಿಗೂಢ ಮೌನ ಆವರಿಸಿದೆ. ಯಹೂದಿಯರ ಮೇಲೆ ಯುರೋಪ್ ನಡೆಸಿದ ದೌರ್ಜನ್ಯಗಳ ಪ್ರಾಯಶ್ಚಿತ್ತವನ್ನು ಈಗ ಫೆಲೆಸ್ತೀನಿಯರ ಕೊರಳಿಗೆ ನೇತು ಹಾಕಲಾಗಿದೆ.

ಭಾರತೀಯ ಉಪಖಂಡದ ಮೇಲೆ ಪ್ರಭಾವ ಬೀರುವಂತಹ ಜಾಗತಿಕ ವಿದ್ಯಮಾನಗಳನ್ನು ಈ ಪುಸ್ತಕದಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದ್ದರೂ ಇಲ್ಲಿ ಮುಖ್ಯವಾಗಿ ಒಬ್ಬ ಸಾಮಾನ್ಯ ಭಾರತೀಯನ ಮನೋಭೂಮಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಿಂದೂ–ಮುಸ್ಲಿಮ್ ಸಂಬಂಧಗಳ ಬಿರುಕಿಗೆ ಮೂಲವಾಗಿರುವ ತಪ್ಪುತಿಳುವಳಿಕೆಗಳ ಬಗ್ಗೆಯೇ ಹೆಚ್ಚಿನ ಒತ್ತು ನೀಡಲಾಗಿದೆ. ಈ ಕೃತಿಯಲ್ಲಿ ಇಸ್ಲಾಮಿನ ಮೂಲಭೂತ ಸಿದ್ಧಾಂತಗಳ ಬಗ್ಗೆ

ಚರ್ಚಿಸಲಾಗಿದ್ದು, ಭಾರತೀಯ ಮೌಲ್ಯಗಳು, ಸಂಪ್ರದಾಯ ಮತ್ತು ಸನ್ನಿವೇಶವು ಉಪಖಂಡದ ಮುಸ್ಲಿಮರ ಸಾಂಸ್ಕೃತಿಕ ಆಚರಣೆಗಳ ಮೇಲೆ ಬೀರಿದ ಪ್ರಭಾವವನ್ನೂ ಇಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಜಾಗತಿಕ ಶಕ್ತಿಗಳು ತಮ್ಮ ಸ್ವಾರ್ಥ ಉದ್ದೇಶಕ್ಕಾಗಿ ಯಾವ ರೀತಿ ಭಯೋತ್ಪಾದನೆ ವಿರೋಧಿ ಸಮರವನ್ನು ದುರುಪಯೋಗಪಡಿಸಿಕೊಳ್ಳುತ್ತಿವೆ, ಚುನಾವಣಾ ರಾಜಕೀಯ ಮತ್ತು ಅದರ ಅಗತ್ಯಗಳಿಗೋಸ್ಕರ ಸ್ವಾರ್ಥ ಹಿತಾಸಕ್ತಿಗಳು ಹೇಗೆ ಕಿಡಿಗೇಡಿತನ ಎಸಗುತ್ತವೆ ಎಂಬಿತ್ಯಾದಿ ವಿಷಯಗಳನ್ನೂ ಇಲ್ಲಿ ಚರ್ಚಿಸಲಾಗಿದೆ. ಮುಸ್ಲಿಮರನ್ನು ಅಪರಂಜಿಯಂತೆ ಚಿತ್ರಿಸುವುದಾಗಲೀ ಅವರನ್ನು ಸಂಪೂರ್ಣ ನಿರ್ದೋಷಿಗಳೆಂದು ಘೋಷಿಸುವುದಾಗಲೀ ಈ ಪುಸ್ತಕದ ಉದ್ದೇಶವಲ್ಲ. ಮುಸ್ಲಿಮರ ಕರ್ತವ್ಯಲೋಪ, ಮಾರ್ಗಭ್ರಷ್ಟತೆ ಮತ್ತು ವಕ್ರ ಆಚರಣೆಗಳನ್ನೂ ಇಲ್ಲಿ ವಿಮರ್ಶೆಗೆ ಗುರಿಪಡಿಸಲಾಗಿದೆ. ಜತೆಗೆ ದಕ್ಷಿಣ ಏಷ್ಯಾದ ಸಮಾಜಗಳಲ್ಲಿ ಜನಸಂಖ್ಯಾ ಸ್ಫೋಟ ಮತ್ತು ಸಂಪನ್ಮೂಲಗಳ ಮಿತಿಯಿಂದಾಗಿ ಉದ್ಭವಿಸಿರುವ ಪೈಪೋಟಿ ಹಾಗೂ ಅದು ಹಲವೊಮ್ಮೆ ಪಡೆಯುವ ಕಮ್ಯೂನಲ್ ಬಣ್ಣವನ್ನೂ ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

ಈ ಕೃತಿಯನ್ನು ಪಶ್ಚಿಮದ ಬಗ್ಗೆ ಮುಸ್ಲಿಮರಿಗಿರುವ ದೂರುದುಮ್ಮಾನಗಳ ಕಥನವೆಂದು ಭಾವಿಸಿದರೆ ಅದರಲ್ಲಿ ಯಾವ ತಪ್ಪೂ ಇಲ್ಲ. ಇಷ್ಟು ವರ್ಷಗಳ ಕಾಲ ಭಯೋತ್ಪಾದಕ ಕೃತ್ಯಗಳ ನೆಪವೊಡ್ಡಿ ಸೃಷ್ಟಿಸಲಾಗುವ ಶಬ್ದಗಳ ಸಂತೆಯಲ್ಲಿ ಈ ಧ್ವನಿಗಳು ಕಳೆದುಹೋಗಿದ್ದವು. ಹಿಂಸೆಯ ಹೊಣೆಯನ್ನು ಮುಸ್ಲಿಮರ ಕೊರಳಿಗೆ ಕಟ್ಟಿ ಅವರನ್ನು ಧ್ವನಿಯೆತ್ತದಂತೆ ಮಾಡಲಾಗುತ್ತಿತ್ತು. ಮಾಧ್ಯಮದ ಸೌಲಭ್ಯಗಳಿಂದ ವಂಚಿತವಾದ ಮುಸ್ಲಿಮ್ ಜನಾಂಗಕ್ಕೆ ತನ್ನ ಧ್ವನಿಯನ್ನು ಇತರರಿಗೆ ತಲುಪಿಸಲು ಸಾಧ್ಯವೇ ಆಗುತ್ತಿರಲಿಲ್ಲ. ಒಂದು ವೇಳೆ ಸಾಧ್ಯವಾದರೂ ಅದನ್ನು ಪರಿಣಾಮಕಾರಿಯಾಗಿ ಮತ್ತು ನಾಜೂಕಾಗಿ ಪ್ರಸ್ತುತಪಡಿಸಲು ಬೇಕಾದ ಪ್ರಾವೀಣ್ಯತೆ ಅವರಲ್ಲಿರಲಿಲ್ಲ. ಆದ್ದರಿಂದ ಈ ಕೃತಿಯ ಮೂಲಕ ಸಮಕಾಲೀನ ಸಂಕಥನದಲ್ಲಿ ಮುಸ್ಲಿಮರ ನಿಲುವು ಏನು? ಅವರ ಭಾವನೆ, ಯೋಚನೆಗಳೇನು? ಮುಸ್ಲಿಮರ ಲೋಕದೃಷ್ಟಿಯು ಹೇಗೆ ಇತರರೊಂದಿಗೆ ಬೆರೆಯುತ್ತದೆ? ಯಾವೆಲ್ಲಾ ನೆಲೆಗಳಲ್ಲಿ ಪರಸ್ಪರ ಮುಖಾಮುಖಿಯಾಗುತ್ತವೆ? ಎಂಬಿತ್ಯಾದಿ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇಸ್ಲಾಮ್ ಮತ್ತು ಪಶ್ಚಿಮದ ನಡುವಿನ ವಿಭಾಜಕ ರೇಖೆಯ ಆಚೆ ಮತ್ತು ಈಚೆ ಇರುವ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳ ಬ್ಯಾಲನ್ಸ್ ಷೀಟ್ ರಚಿಸುವುದು ನಮ್ಮ ಉದ್ದೇಶವಲ್ಲ. ಉಭಯ ಬಣಗಳ ಮಧ್ಯೆ ತಿಳುವಳಿಕೆ ಮೂಡಿ ಹೆಚ್ಚಿನ ಸಹಕಾರಕ್ಕೆ ದಾರಿ ಮಾಡಿಕೊಡಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ಕೆ ನಾವು ಕೈಹಾಕಿದ್ದೇವೆ.

ನಾವು ಕೆಲವು ಗೆಳೆಯರು ಹಲವು ವರ್ಷಗಳಿಂದ ಈ ರೀತಿಯ ಪ್ರಯತ್ನಗಳಲ್ಲಿ ತೊಡಗಿಕೊಂಡಿದ್ದೇವೆ. ಈ ಪ್ರಯತ್ನವನ್ನು ಇನ್ನಷ್ಟು ತ್ವರಿತಗೊಳಿಸಬೇಕಾದ, ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಕಾರ್ಯಕರ್ತರನ್ನು, ಶಿಕ್ಷಕರನ್ನು ಮತ್ತು ಈ ಬಗ್ಗೆ ಕಳಕಳಿ ಹೊಂದಿರುವ ಜನಸಾಮಾನ್ಯರನ್ನು ಜತೆಗೂಡಿಸುವ ಅಗತ್ಯವಿದೆ. ಈ ಮಹತ್ವದ ಕೆಲಸಕ್ಕೆ ಹೆಚ್ಚಿನ ಬಲ ಒದಗಿಸುವುದಕ್ಕಾಗಿಯೇ ನಾವು 'ತಪ್ಪು ಕಲ್ಪನೆಗಳು, ಇಸ್ಲಾಮ್ : ತಪ್ಪುತಿಳುವಳಿಕೆಯ ಪರದೆಯನ್ನು ಕಿತ್ತೊಗೆಯೋಣ' ಎಂಬ ಈ ಪುಸ್ತಕವನ್ನು ಹೊರತಂದಿದ್ದೇವೆ.

# ಮೊದಲ ಮಾತು

ಇಂದು ನಾವು ಪರಸ್ಪರ ಸಂವಹನ ಮತ್ತು ಒಡನಾಡುವ ರೀತಿಯಿಂದಾಗಿ ಜಗತ್ತೇ ಒಂದು ಪುಟ್ಟ ಜಾಗತಿಕ ಹಳ್ಳಿಯಾಗಿ ಮಾರ್ಪಟ್ಟಿದೆ. ಹೊಸ ಮಾಧ್ಯಮಗಳು ಭೌಗೋಳಿಕ ಗಡಿಗಳನ್ನು ಅಪ್ರಸ್ತುತಗೊಳಿಸಿವೆ ಆದರೆ ಇದು ಅನ್ವಯವಾಗುವುದು ಜನತೆ ಮತ್ತು ರಾಷ್ಟ್ರಗಳು ಇದನ್ನು ಹೇಗೆ ಪರಿಭಾವಿಸಿಕೊಂಡಿವೆ ಎಂಬುದರ ಆಧಾರದಲ್ಲಿ. ನಾವೆಲ್ಲರೂ ಒಂದು ಜಾಗತಿಕ ಹಳ್ಳಿಯ ಪ್ರಜೆಗಳೇನೋ ಎಂಬ ಭಾವನೆಯನ್ನು ಮಾಹಿತಿ ಕ್ರಾಂತಿಯು ನಮ್ಮಲ್ಲಿ ಮೂಡಿಸಿದೆ. ನಾವು ಪ್ರತ್ಯೇಕ ಪ್ರತ್ಯೇಕವಾದ ಮತ್ತು ಹೆಚ್ಚಾಗಿ ಪರಸ್ಪರ ಕಾದಾಡುತ್ತಿರುವ ರಾಷ್ಟ್ರಗಳಿಗೆ ಸೇರಿದವರೆಂದು ನಮಗೆ ಅನಿಸುತ್ತಿಲ್ಲ. ಆದರೆ ನಮ್ಮೊಳಗೆ ತೀವ್ರವಾದ ತುಡಿತ ಇದ್ದಾಗ ಮಾತ್ರ ಪ್ರತ್ಯೇಕತೆಯನ್ನು ಮೀರಿ ನಿಂತು ಸಮಾನವಾದ ಮೌಲ್ಯಗಳನ್ನು ಎತ್ತಿಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಇಂದು ಜನರ ಮುಂದೆ ಇರುವ ಆಯ್ಕೆಗಳು ಎರಡು. ಒಂದೋ ನಾವು ವಿಭಿನ್ನ ಸಾಂಸ್ಕೃತಿಕ ಘಟಕಗಳಿರುವ ಒಂದು ವರ್ಣರಂಜಿತ ಕಸೂತಿಯಾಗಬೇಕು. ಇಲ್ಲವೇ ಸದಾ ಕಚ್ಚಾಡುವ ರಾಷ್ಟ್ರಗಳ ಕುದಿಯುಂಡೆಯಾಗಬೇಕು.

ಜಗತ್ತು ಕಳೆದ ಒಂದು ಶತಮಾನದ ಅವಧಿಯಲ್ಲಿ ಎರಡು ಮಹಾಯುದ್ಧಗಳನ್ನು, ಸುದೀರ್ಘವಾದ ಶೀತಲ ಸಮರ ಮತ್ತು ತಥಾಕಥಿತ ಭಯೋತ್ಪಾದನೆ ವಿರೋಧಿ ಯುದ್ಧವನ್ನು ಕಂಡಿದೆ. ಈ ಯುದ್ಧಗಳು ಜಗತ್ತನ್ನು ಬದುಕಿಗೆ ಅನುಯೋಜ್ಯವಾದ, ಸಮೃದ್ಧ ಮತ್ತು ಶಾಂತಿಯ ತಾಣವಾಗಿ ಮಾರ್ಪಡಿಸಿವೆಯೇ? ಶಾಂತಿ ಎಂಬುದು ಇಂದು ಹಿಂದಿಗಿಂತಲೂ ಹೆಚ್ಚು ಮರೀಚಿಕೆಯಾಗಿದೆ ಮತ್ತು ಶಾಂತಿಯ ಮಾತುಗಳು ಕೇವಲ ಚರ್ವಿತಚರ್ವಣವಾಗಿ ಉಳಿದಿವೆಯೇ ಹೊರತು ಅದರಲ್ಲಿ ಯಾವುದೇ ತಥ್ಯ ಉಳಿದಿಲ್ಲ. ಶಸ್ತ್ರಾಸ್ತ್ರ ತಯಾರಿಕಾ ಸಂಸ್ಥೆಯ ಲಾಬಿಗಳ ಒತ್ತೆಸೆರೆಯಲ್ಲಿರುವ ಪ್ರಜಾಪ್ರಭುತ್ವಗಳೇ ಬಹುತೇಕ ಯುದ್ಧಗಳ ಹಿಂದಿವೆ. 'ಭಯೋತ್ಪಾದನೆ ವಿರೋಧಿ ಯುದ್ಧ'ವಂತೂ ಜನರನ್ನು ಭೀತಿಗೊಳಪಡಿಸಿದ್ದು ಬೆನ್ನು ಬೆನ್ನಿಗೆ ಹಲವು ರಾಷ್ಟ್ರಗಳನ್ನು ಕಸದ ದೊಡ್ಡಿಗೆ ತಳ್ಳಿದೆ. ದೀರ್ಘ ಕಾಲದಿಂದ ನ್ಯಾಯದಿಂದ ವಂಚಿತರಾದವರಿಗೆ ಯಾವುದೇ ಪರಿಹಾರವನ್ನು ಒದಗಿಸಲು ಈ ಯುದ್ಧದಿಂದ ಸಾಧ್ಯವಾಗಿಲ್ಲ. ಮನಸ್ಸುಗಳ ನಡುವೆ ಗೋಡೆ ನಿರ್ಮಿಸಲು ಮಾಧ್ಯಮಗಳನ್ನು ಬಳಸಲಾಗುತ್ತಿದೆಯೇ ವಿನಾ ಹೃದಯಗಳನ್ನು ಜೋಡಿಸುವುದಕ್ಕಲ್ಲ. ಬಡವರು ಮತ್ತು ಸಂಪನ್ಮೂಲಗಳಿಂದ ವಂಚಿತರಾದವರ ಹೊಟ್ಟೆಗೆ ಕಲ್ಲು ಹಾಕಿ ಸಂಪತ್ತು ಮತ್ತು ಕೌಶಲ್ಯ ಹೊಂದಿರುವವರ ಸಮೃದ್ಧಿಯನ್ನು ಖಾತ್ರಿಪಡಿಸುವ ಪ್ರಯತ್ನ ನಡೆಯಿತ್ತಿದೆ. ದುರದೃಷ್ಟವಶಾತ್, ಈ ಹಕ್ಕುವಂಚಿತ ವರ್ಗಗಳನ್ನೇ ರಾಕ್ಷಸರಂತೆ ಚಿತ್ರಿಸಲಾಗುತ್ತಿದೆ.

ಆದ್ದರಿಂದ ಜಗತ್ತಿನಲ್ಲಿ ಶಾಂತಿಯನ್ನು ಖಾತರಿಪಡಿಸಲು ಏನು ಮಾಡಬೇಕು ಎಂಬ ಪ್ರಶ್ನೆಯನ್ನು ಎತ್ತಬೇಕಾದ ಸಮಯ ಬಂದಿದೆ. ಅನ್ಯರನ್ನು ಕರಾಳವಾಗಿ ಚಿತ್ರಿಸುವುದಾಗಲೀ ಭಯ ಸೃಷ್ಟಿಸುವುದಾಗಲೀ ನಮ್ಮನ್ನು ಶಾಂತಿಯ ಕಡೆಗೆ

ಒಯ್ಯಲಾರದು. ದ್ವೇಷದಿಂದ ದ್ವೇಷವೇ ಹುಟ್ಟುತ್ತದೆ. ಜನಾಂಗೀಯ, ಧಾರ್ಮಿಕ, ಮತೀಯ ಮತ್ತು ಜಾತೀಯ ಭಿನ್ನತೆಗಳು ಎಲ್ಲ ಕಾಲಗಳಲ್ಲೂ ಇರುತ್ತವೆ. ಅವು ನಮ್ಮ ಇರುವಿಕೆಗೆ ಹೆಚ್ಚಿನ ಹೊಳಪು ಮತ್ತು ಬಣ್ಣವನ್ನು ನೀಡುತ್ತವೆ; ಮನುಕುಲವನ್ನು ಕಳಾಹೀನವಾಗುವುದರಿಂದ ರಕ್ಷಿಸುತ್ತದೆ. ಆದರೆ ಅವು ಜನರ ಮಧ್ಯೆ ಒಡಕು, ಸಂಘರ್ಷ ಮತ್ತು ಪ್ರಕ್ಷುಬ್ಧತೆ ಹುಟ್ಟುವುದಕ್ಕೆ ನೆಪವಾಗಕೂಡದು. ಪ್ರೀತಿ, ಕರುಣೆ ಮತ್ತು ಸಹಿಷ್ಣುತೆಯ ದಾರ ನಮ್ಮನ್ನು ಒಟ್ಟುಗೂಡಿಸಬೇಕು. ದ್ವೇಷ, ಅಸಹನೆ ಮತ್ತು ಪೂರ್ವಗ್ರಹದ ಮೂಲಕ ನಮ್ಮ ಪ್ರತ್ಯೇಕತೆ ಪ್ರಕಟವಾಗಕೂಡದು. ಸಮತೆ, ಸಮಾನತೆ, ಮತ್ತು ನ್ಯಾಯವು ಭವಿಷ್ಯದೆಡೆಗಿನ ನಮ್ಮ ಪಯಣಕ್ಕೆ ಮಾರ್ಗಸೂಚಿಯಾಗಬೇಕೇ ಹೊರತು ಅಸೂಯೆ, ಪ್ರತೀಕಾರ ಮತ್ತು ಜಗತ್ತಿನಲ್ಲಿರುವ ಸೀಮಿತ ಸಂಪನ್ಮೂಲಗಳನ್ನು ಕೈವಶಮಾಡಿಕೊಳ್ಳುವ ಪೈಪೋಟಿಯಲ್ಲ. ಸಮೃದ್ಧಿಯ ಬದಲಿಗೆ ಸಂತೃಪ್ತಿ, ಏಕಸ್ವಾಮ್ಯದ ಬದಲಿಗೆ ಹಂಚಿಕೆ, ಬಳಕೆಯ ಬದಲಿಗೆ ಉಳಿಕೆ ನಮ್ಮ ದಾರಿದೀಪವಾಗಬೇಕು. ವೈವಿಧ್ಯತೆಯ ಬಗ್ಗೆ ಸಂಭ್ರಮಪಡುವವರು, 'ಅನ್ಯ'ವನ್ನು ಗೌರವಿಸುವವರು ಮತ್ತು ಹಂಚುವುದರಲ್ಲಿ, ಸೇವೆಯಲ್ಲಿ ನಂಬಿಕೆ ಇರುವುವರ ಕೈಯಲ್ಲಿ ಖಂಡಿತವಾಗಿಯೂ ಜಗತ್ತು ಸುರಕ್ಷಿತವಾಗಿರುತ್ತದೆ. ಪೂರ್ವಗ್ರಹಗಳನ್ನು ಹಬ್ಬಿಸುವವರು, ದ್ವೇಷವನ್ನು ಮಾರಾಟಮಾಡುವವರು ಮತ್ತು ಜಗತ್ತನ್ನೇ ಜಯಿಸುವ ಹಪಾಹಪಿಗೆ ಬಿದ್ದವರ ಕೈಯಲ್ಲಿ ಮನುಕುಲಕ್ಕೆ ಭವಿಷ್ಯವಿಲ್ಲ.

ಸಹನೆ ಮತ್ತು ಸಹಬಾಳ್ವೆ ಭಾರತೀಯತೆಯ ತಿರುಳು. 'ಭಾರತ್ ವರ್ಷ್' ಎಂದು ನಾವು ಕರೆಯುವ ಈ ನೆಲವು ಸಹಸ್ರಮಾನಗಳ ಕಾಲ ವೈವಿಧ್ಯತೆಯನ್ನು ಉಳಿಸಿಕೊಂಡು ಬಂದಿದೆ. ಎಲ್ಲರಿಗೂ ಸಮಾನತೆ ಮತ್ತು ನ್ಯಾಯವನ್ನು ಕಲ್ಪಿಸುವ, ಜತೆಗೆ ಜನರ ಮಧ್ಯೆ ತಲೆಮಾರುಗಳಿಂದ ಉಳಿದುಕೊಂಡು ಬಂದ ವೈವಿಧ್ಯತೆಗೂ ಅವಕಾಶ ಕಲ್ಪಿಸುವಂತಹ ಒಂದು ಸಂವಿಧಾನವನ್ನು ನಮಗೆ ಕೊಟ್ಟ ನಮ್ಮ ನಾಯಕರ ದೂರದೃಷ್ಟಿಗೆ ನಾವು ಋಣಿಯಾಗಿರಬೇಕು. ಮತೀಯ ಆಧಾರದಲ್ಲಿ ನಡೆದ ವಿಭಜನೆಯ ಯಾತನೆಯನ್ನು ನೀಗಿಸಿ ನಮ್ಮ ಅನನ್ಯತೆಯನ್ನು ಪೋಷಿಸಿಕೊಳ್ಳಲು ಸಾಧ್ಯವಾಗುವಂತಹ ಮಾರ್ಗನಿರ್ದೇಶಕ ತತ್ವಗಳನ್ನು ನಮಗೆ ಒದಗಿಸಿದವರ ಬಗ್ಗೆ ನಮಗೆ ಗೌರವವಿದೆ. ಆದರೆ ಕೆಲವು ಸಮುದಾಯಗಳನ್ನು ಹೀಯಾಳಿಸುವ ಮತ್ತು ಅವರನ್ನು ಭೀಕರವಾಗಿ ಚಿತ್ರಿಸುವ ಮೂಲಕ ಹಲವು ದಶಕಗಳ ಕಾಲ ಜೋಪಾನದಿಂದ ಕಾಯ್ದುಕೊಂಡು ಬಂದ ಈ ಕಾಪಿ ಪುಸ್ತಕದಲ್ಲಿ ಚಿತ್ತು ಮಾಡಲು ಯತ್ನಿಸುತ್ತಿರುವ ಕೆಲವು ಶಕ್ತಿಗಳಿಂದಾಗಿ ನಮ್ಮ ಕನಸುಗಳು ಸ್ವಲ್ಪ ಮಟ್ಟಿಗೆ ಭಗ್ನಗೊಂಡಿವೆ. ಆದರೆ ಇದನ್ನು ಮುಂದುವರಿಯಲು ಬಿಡಬಾರದು. ದ್ವೇಷವು ಮನಸ್ಸಿನೊಳಗೆ ಗೋಡೆಗಳನ್ನು ಸೃಷ್ಟಿಸಿ ಬೀದಿಗಳಲ್ಲಿ ಹೊಡೆದಾಟಕ್ಕೆ ಕಾರಣವಾಗುತ್ತದೆ. ಇದು ದೇಶದ ಮುಖಕ್ಕೆ ರಾಚುವಂತೆ ಸ್ಫೋಟಗೊಂಡು ಭಾರೀ ದುಷ್ಪರಿಣಾಮಗಳನ್ನುಂಟು ಮಾಡಲು ಒಂದು ಸಣ್ಣ ಕಿಡಿ ಸಾಕು.

ಜನಸಂಖ್ಯೆಯಲ್ಲಿ ಶೇ.13ರಷ್ಟಿರುವ ಮುಸ್ಲಿಮ್ ಸಮುದಾಯದ ಬಗ್ಗೆ ಪೂರ್ವಗ್ರಹಗಳನ್ನು ಹಬ್ಬಿಸುತ್ತಿರುವವರು ಖಂಡಿತವಾಗಿಯೂ ದೇಶದ

ಹಿತಬಯಸುವವರಲ್ಲ. ಎಲ್ಲರನ್ನೂ ಒಳಗೊಳ್ಳುವಂತಹ ಭಾರತೀಯ ಸಮಾಜದಲ್ಲೇ ನಮ್ಮ ಭವಿಷ್ಯ ಅಡಗಿದೆ. ಪ್ರತ್ಯೇಕತೆಯು ಮೊದಲು ಮನಸ್ಸಿನಲ್ಲಿ ಹುಟ್ಟಿ ನಂತರ ನಮ್ಮ ಒಟ್ಟು ರಾಜಕಾರಣದ ಮೇಲೆ ತನ್ನ ಕರಿನೆರಳನ್ನು ಹರಡುತ್ತದೆ. ನಾವು ಹಲವು ಭಯಾನಕ ಕ್ಷಣಗಳ ಮೂಲಕ ಹಾದು ಬಂದಿದ್ದೇವೆ. ಆದ್ದರಿಂದ ಪೂರ್ವಗ್ರಹಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕುವ ಅಗತ್ಯವಿದೆ. ನಮ್ಮ ಇತಿಹಾಸ ಪುಸ್ತಕಗಳೊಳಗೆ, ಸಾಹಿತ್ಯ, ಪತ್ರಿಕೋದ್ಯಮ, ಮಾಧ್ಯಮ ಮತ್ತು ರಾಜಕೀಯ ಚರ್ಚೆಯೊಳಗಡೆ ಅದಕ್ಕೆ ಜಾಗವಿರಕೂಡದು.

ಮುಸ್ಲಿಮರ ಬಗ್ಗೆ ಇತ್ತೀಚಿಗೆ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ತಪ್ಪುತಿಳುವಳಿಕೆಗಳು ಹಬ್ಬಿವೆ. ಸಲಾಮ್ ಸೆಂಟರ್‌ನ ಸ್ಥಾಪಕರೂ ಅಧ್ಯಕ್ಷರೂ ಆದ ಸೈಯದ್ ಹಾಮಿದ್ ಮುಹ್ಸಿನ್ ಅವರು ಈ ತಪ್ಪುತಿಳುವಳಿಕೆಗಳನ್ನು ಕ್ರೋಢೀಕರಿಸಿ ವಸ್ತುಸ್ಥಿತಿಯನ್ನು ಮನಗಾಣಿಸಲು ಈ ಕೃತಿಯ ಮೂಲಕ ಶ್ರಮಿಸಿದ್ದಾರೆ. ಇಲ್ಲಿ ಮಿಥ್ಯೆಯ ವಿರುದ್ಧ ವಾಸ್ತವವನ್ನು ಮುಖಾಮುಖಿಯಾಗಿಸಿದ್ದಾರೆ. ವಂಚನೆಯ ಪರದೆಯನ್ನು ಸರಿಸಿ ಭಯೋತ್ಪಾದನೆಯನ್ನು ಜಿಹಾದ್ ಜತೆಗೆ ಥಳುಕು ಹಾಕುವುದು ಸೇರಿದಂತೆ ಇಸ್ಲಾಮಿನ ಬಗ್ಗೆ ಸುಳ್ಳುಗಳನ್ನು ಹರಡುವವರನ್ನು ಬೆತ್ತಲಾಗಿಸಿದ್ದಾರೆ. ಜತೆಗೆ ಮುಸ್ಲಿಮರ ಹುಳುಕುಗಳನ್ನೂ ಈ ಕೃತಿಯಲ್ಲಿ ಟೀಕಿಸಲಾಗಿದೆ. ಇಸ್ಲಾಮಿನ ಶ್ರೇಷ್ಠತೆಯನ್ನು ಸಾಬೀತುಪಡಿಸುವ ಅತ್ಯುತ್ಸಾಹದಲ್ಲಿ ಕೆಲವೊಮ್ಮೆ ಮುಸ್ಲಿಮರು ತಮ್ಮನ್ನೇ ಮುಖ್ಯವಾಹಿನಿಯಿಂದ ಪ್ರತ್ಯೇಕಿಸಿಕೊಳ್ಳುವುದಿದೆ. ಈ ಮೂಲಕ ಅವರು ಬಲಪಂಥೀಯ ಶಕ್ತಿಗಳ ಸಂಚಿಗೆ ಸುಲಭದ ತುತ್ತಾಗುತ್ತಾರೆ. ಈ ಆತ್ಮಾವಲೋಕನದ ಧಾಟಿಯು ಮುಹ್ಸಿನ್ ಅವರ ಪುಸ್ತಕದ ಹೆಚ್ಚುಗಾರಿಕೆ. ಈ ಕೃತಿಯನ್ನು ಪ್ರತಿಯೊಬ್ಬ ಭಾರತೀಯನೂ ಓದಬೇಕೆಂಬುದು ನನ್ನ ಅಪೇಕ್ಷೆ. ತನ್ಮೂಲಕ ಮುಸ್ಲಿಮೇತರರಲ್ಲಿ ಮುಸ್ಲಿಮ್ ಸಮುದಾಯದ ಬಗ್ಗೆ ಇರುವ ಅನಪೇಕ್ಷಿತ ಭಯ ಹಾಗೂ ಮುಸ್ಲಿಮರಲ್ಲಿರುವ ತಾವೊಂದು ವಿಭಿನ್ನ ಸಮುದಾಯವಾಗಿದ್ದೇವೆಂಬ ಭ್ರಮೆ ಕಡಿಮೆಯಾಗಬಹುದು. ನಾವೆಲ್ಲರೂ ಭಾರತೀಯರು. ಇದಕ್ಕಿಂತ ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ. ಜತೆ ಜತೆಯಾಗಿ ಸಾಗುವುದರಲ್ಲೇ ನಮ್ಮ ಭವಿಷ್ಯ ಅಡಗಿದೆ. ತಪ್ಪಿದರೆ ಅವಶೇಷವೂ ಸಿಗದಂತೆ ನಾವು ಅಳಿದು ಹೋಗಲಿದ್ದೇವೆ.

ಬೆಂಗಳೂರು, **ಪ್ರೊ. ಯು.ಆರ್. ಅನಂತಮೂರ್ತಿ**

ಫೆಬ್ರವರಿ 15, 2013

# ಮಿಥ್ಯೆ ಮತ್ತು ವಾಸ್ತವ

ವ್ಯಕ್ತಿ, ಸಮುದಾಯ, ರಾಷ್ಟ್ರ ಮತ್ತು ಧರ್ಮಗಳ ನಡುವಿನ ಸಮೀಕರಣ ನಿರಂತರ ಬದಲಾಗುತ್ತಲೂ ಸಾರ್ವಜನಿಕ ಚಿಂತನಾಕ್ರಮದ ಮೇಲೆ ಪರಿಣಾಮ ಬೀರತ್ತಲೂ ಇರುವ ಕಾಲಘಟ್ಟದಲ್ಲಿ ನಾವು ಇಂದು ಬದುಕುತ್ತಿದ್ದೇವೆ. ಇದು, ನಮ್ಮ ವ್ಯಕ್ತಿತ್ವ ಮತ್ತು ಕ್ರಿಯೆಗಳನ್ನು ನಾವು ಸದಾ ಮರುವ್ಯಾಖ್ಯಾನಿಸುತ್ತಲೂ ನಮ್ಮ ಆಚರಣೆ, ನಂಬಿಕೆ, ನೋಟ ಮತ್ತು ಸಿದ್ಧಾಂತಗಳ ಮೇಲೆ ಆವರಿಸಿದ ಧೂಳನ್ನು ನಿರಂತರ ಕೊಡವಿಕೊಳ್ಳುತ್ತಲೂ ಇರಬೇಕಾದ ಕಾಲ.

ಭಾರತಕ್ಕೆ ಇಸ್ಲಾಮ್ ಪ್ರವೇಶಿಸಿ ಸಾವಿರ ವರ್ಷ ಕಳೆದಿದ್ದರೂ ಹತ್ತು ಹಲವು ಪ್ರಶ್ನೆಗಳನ್ನು ಅದು ಇಂದಿಗೂ ಎದುರಿಸುತ್ತಿದೆ. ಹಾಗೆ ನೋಡಿದರೆ ಹಿಂದೂಗಳು ಮತ್ತು ಮುಸ್ಲಿಮರು ಉಪಖಂಡದಲ್ಲಿ ಪ್ರತ್ಯೇಕ ದ್ವೀಪಗಳಾಗಿ ಎಂದೂ ಬದುಕಿರಲಿಲ್ಲ. ಎರಡು ಸಮುದಾಯಗಳ ಜನರು ಒಂದೇ ನೆಲವನ್ನು ಹಂಚಿಕೊಂಡದ್ದು ಮಾತ್ರವಲ್ಲ ಗಂಗಾ ಮತ್ತು ಸಿಂಧೂ ನದಿಯ ನೀರನ್ನು ಜತೆಯಾಗಿ ಕುಡಿದು, ಕಲೆ, ಸಂಸ್ಕೃತಿ, ಕರಕುಶಲತೆ, ಸಂಪ್ರದಾಯಗಳಲ್ಲಿ ಪರಸ್ಪರ ಮುಖಾಮುಖಿಯಾಗುತ್ತಾ ಬದುಕು ಸಾಗಿಸಿದ್ದರು ಎನ್ನುತ್ತದೆ ಇತಿಹಾಸ.

ಆದರೂ, ಸಮೂಹ ಮಾಧ್ಯಮಗಳು, ವಿಭಜನಕಾರಿ ರಾಜಕಾರಣ, ಹಾಗೂ ಉಪಖಂಡದ ರಾಷ್ಟ್ರಗಳ ತದ್ವಿರುದ್ಧ ವ್ಯೂಹಾತ್ಮಕ ಹಿತಾಸಕ್ತಿಯ ಫಲವಾಗಿ ಇಸ್ಲಾಮಿನ ತತ್ವಗಳು ಹಾಗೂ ಮುಸ್ಲಿಮರ ನಡವಳಿಕೆಗಳ ಮೇಲೆ ಆಗೊಮ್ಮೆ ಈಗೊಮ್ಮೆ ಸಂಶಯದ ಕಾರ್ಮೋಡಗಳು ಆವರಿಸುತ್ತಿರುತ್ತವೆ. ಇದರಿಂದಾಗಿ ನೆರೆಹೊರೆಯವರ ನಡುವಿನ ಅಂತರವು ಹೆಚ್ಚುತ್ತಾ ಹೋಗಿದ್ದು ಎರಡೂ ದೇಶಗಳ ಸಾಮಾನ್ಯ ನಾಗರಿಕರ ಸಹಜ ವರ್ತನೆಗಳು ಕೂಡಾ ಹಲವೊಮ್ಮೆ ರಾಜಕೀಯ ಅರ್ಥವನ್ನು ಪಡೆದು ಅಚ್ಚರಿಗೆ ಕಾರಣವಾಗುತ್ತಿವೆ.

ಅರೇಬಿಯಾ ನೆಲದಲ್ಲಿ ಇಸ್ಲಾಮ್ ಮೊಳಕೆಯೊಡೆದ ಒಂದು ನೂರು

ವರ್ಷದೊಳಗೆ ಅದು ಸಿಂಧ್‌ನ ಬಾಗಿಲು ಬಡಿಯಲು ಆರಂಭಿಸಿತು. ಆದರೆ ದೆಹಲಿಯಲ್ಲಿ ಮೊಟ್ಟ ಮೊದಲ ಮುಸ್ಲಿಮ್ ಸುಲ್ತಾನಶಾಹಿ ಅಸ್ತಿತ್ವಕ್ಕೆ ಬಂದದ್ದು ಕ್ರಿ.ಶ. 1191ರಲ್ಲಿ. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಆರಂಭಗೊಳ್ಳುವುದಕ್ಕೆ ಬಹಳ ಹಿಂದೆಯೇ ಬಹಳಷ್ಟು ಮಂದಿ ಸೂಫಿ ಸಂತರು ಇಲ್ಲಿ ತಮ್ಮ ಆಶ್ರಯ ಮತ್ತು ಆರೋಗ್ಯಧಾಮಗಳನ್ನು ಸ್ಥಾಪಿಸಿದ್ದರು. ತನ್ಮೂಲಕ ಎಲ್ಲ ಧರ್ಮಗಳ ಜನರ ಮಧ್ಯೆ ಅಧ್ಯಾತ್ಮಿಕತೆ, ಶಾಂತಿ ಮತ್ತು ಬೆಳಕನ್ನು ಪಸರಿಸುವ ಕೈಂಕರ್ಯ ಆರಂಭಿಸಿದ್ದರು.

ಸೂಫಿಗಳ ಒಂದು ದೊಡ್ಡ ಸರಪಣಿಯೇ ಉಪಖಂಡದಲ್ಲಿ ಶಾಂತಿ, ಪ್ರೀತಿ ಮತ್ತು ಸೌಹಾರ್ದದ ಸಂದೇಶವನ್ನು ಪ್ರಚುರಪಡಿಸುವಲ್ಲಿ ತಲ್ಲೀನವಾಗಿತ್ತೆಂಬುದು ಇತಿಹಾಸದ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಈ ಸೂಫಿಗಳು ಜಾತಿ ಮತಗಳ ಭೇದವಿಲ್ಲದೆ ಅಪಾರ ಸಂಖ್ಯೆಯ ಜನರ ಪ್ರೀತಿ ಮತ್ತು ಭಕ್ತಿಯನ್ನು ದಕ್ಕಿಸಿಕೊಂಡಿದ್ದರು. ಇದು ಹಿಂದೂ ಮತ್ತು ಇಸ್ಲಾಮೀ ಸಂಸ್ಕೃತಿ, ಭಾಷೆ ಮತ್ತು ವಾಸ್ತುಶಿಲ್ಪದ ಸಂಯೋಜನೆಗೆ ನಾಂದಿಯಾಯಿತು. ಈ ಸಂಯೋಗ ಮತ್ತು ಸಂವಹನವು ಹಿಂದೂಸ್ತಾನಿ ಸಂಗೀತ, ಖವ್ವಾಲಿ, ಗಝಲ್, ಉರ್ದು ಭಾಷೆ, ಮೊಘಲ್ ಪಾಕಶಾಸ್ತ್ರ, ಚಿತ್ರಕಲೆ, ಸಿಖ್ ಧರ್ಮ, ಕಬೀರ್ ಪಂಥ, ಆರ್ಯ ಸಮಾಜ ಸೇರಿದಂತೆ ಇನ್ನೂ ಹತ್ತು ಹಲವು ಹೊಸತನಗಳಿಗೆ ಹಾದಿ ಮಾಡಿತು.

ಹತ್ತು ಹಲವು ರಾಜವಂಶಗಳು ಗುದ್ದುಗೆಗೆ ಬಂದವು, ಹೊರಟು ಹೋದವು. ಯುದ್ಧಗಳು ಗಡಿಗಳನ್ನು ಬದಲಿಸಿದವು ಮತ್ತು ರಾಜಕೀಯ ಬದಲಾವಣೆಗಳು ಹೊಸ ಸಮೀಕರಣಗಳನ್ನು ಸೃಷ್ಟಿಸಿದವು. ಆಂದೋಲನಗಳ ಉಗಮ ಮತ್ತು ಆಡಳಿತಗಳ ಪತನವು ಈ ಸಮೀಕರಣಗಳ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿದವು.

ಕ್ರಿ.ಶ. 1857 ಇಸವಿಯು ಮೊಘಲ್ ಆಡಳಿತಕ್ಕೆ ಕೊನೆ ಹಾಡುವುದರ ಜತೆಗೆ ಬ್ರಿಟಿಷರು ಈ ನೆಲದ ಹೊಸ ಮಾಲೀಕರಾಗಿರುವುದನ್ನೂ ಘೋಷಿಸಿತು. ವಸಾಹತುಶಾಹಿ ಆಡಳಿತಕ್ಕೆ ಭಾರತ ಒಳಪಟ್ಟಿದ್ದರೂ ದೂರದ ಬ್ರಿಟನ್‌ನಿಂದ ಅದನ್ನು ನಿಯಂತ್ರಿಸುವುದು ಸುಲಭದ ವಿಷಯವಾಗಿರಲಿಲ್ಲ. ಹಾಗಾಗಿ ಜನರನ್ನು ಒಂದುಗೂಡಿಸುವ ಅಂಶಗಳಿಗಿಂತಲೂ ಅವರನ್ನು ವಿಭಜಿಸುವ ಸಂಪ್ರದಾಯಗಳನ್ನು ಹುಡುಕುವುದು ಬ್ರಿಟಿಷರಿಗೆ ಮುಖ್ಯವಾಗಿತ್ತು. ಆದ್ದರಿಂದ ತಮ್ಮ ಗುಮಾಸ್ತಗಿರಿಗೆ ಅಗತ್ಯವಿರುವ ಮತ್ತು ಅದೇ ವೇಳೆ ಜನರ ನಡುವಿನ ಕಂದರವನ್ನು ಹೆಚ್ಚಿಸುವ ಶಿಕ್ಷಣ ವ್ಯವಸ್ಥೆಯೊಂದನ್ನು ಅವರು ಇಲ್ಲಿ ಜಾರಿಗೊಳಿಸಿದರು. ಧರ್ಮದ ಆಧಾರದಲ್ಲಿ ಎಂದಿಗೂ ಪರಸ್ಪರರನ್ನು ದ್ವೇಷಿಸದ ಭಾರತೀಯರು ಮೊಟ್ಟ ಮೊದಲ ಬಾರಿಗೆ "ನಾವು ಮತ್ತು ಅವರು" ಎಂಬ ಧಾಟಿಯಲ್ಲಿ ಮಾತನಾಡತೊಡಗಿದರು.

ಶೈಕ್ಷಣಿಕವಾಗಿ ಹಿಂದುಳಿದಿರುವ ಮತ್ತು ಸ್ಥಳೀಯ ಭಾಷೆಗಳಲ್ಲಿ ಸಂವಹನ ಸಾಧಿಸಲು ಸಾಧ್ಯವಾಗದ ಪರಿಣಾಮವಾಗಿ ಮುಸ್ಲಿಮರು ಇಂದಿಗೂ ತಮ್ಮ ಕತೆಯನ್ನು ದೇಶವಾಸಿಗಳ ಮುಂದೆ ತೆರೆದಿಡುವಲ್ಲಿ ವಿಫಲರಾಗಿದ್ದಾರೆ. ಇದರಿಂದಾಗಿ ಅವರ ವರ್ಚಸ್ಸಿಗೆ ಧಕ್ಕೆಯುಂಟಾಗಿದ್ದು ಅವರ ಬಗ್ಗೆ ಸುಳ್ಳುಗಳನ್ನು ಸೃಷ್ಟಿಸಿ ಹರಿಯಬಿಡಲಾಗುತ್ತಿದೆ. ವಿಕೃತ ಇತಿಹಾಸವು ಜನಸಾಮಾನ್ಯರ ಮೆದುಳುಗಳನ್ನೂ ವಿಷಮಯಗೊಳಿಸಿದೆ. ಮುಸ್ಲಿಮರ ವೈಫಲ್ಯಗಳನ್ನು ವೈಭವೀಕರಿಸಿ ಸಾಧನೆಗಳನ್ನು ಬದಿಗೊತ್ತಲಾಗುತ್ತಿದೆ. ಜನಸಾಮಾನ್ಯರ ನಡುವಿನ ಸಂಪರ್ಕದ ಕೊಂಡಿಯನ್ನೇ ಕಡಿದು ಹಾಕಲಾಗಿದೆ. ಸಮುದಾಯಗಳ ಮಧ್ಯೆ ಸಂವಹನದ ಮಾರ್ಗಗಳನ್ನು ಮತ್ತೆ ಜೋಡಿಸುವ ಹಾಗೂ ಬಲಿಷ್ಠಗೊಳಿಸುವ ಅಗತ್ಯವಿದೆ. ಇಲ್ಲದೇ ಹೋದರೆ ತಪ್ಪು ಮಾಹಿತಿ ಮತ್ತು ಅಪಪ್ರಚಾರಗಳ ಕತ್ತಲೆಯಲ್ಲಿ ಅಲೆದಾಡುವುದರಿಂದ ಬಿಕ್ಕಟ್ಟು ಮತ್ತಷ್ಟು ಜಟಿಲಗೊಳ್ಳಲಿದೆ.

## ಪ್ರೀತಿ ನಮ್ಮನ್ನು ಜೋಡಿಸುತ್ತದೆ

ಭಾರತದ ಉದ್ವಿಗ್ನ ಧಾರ್ಮಿಕ ಸನ್ನಿವೇಶವನ್ನು ಉಗ್ರಗಾಮಿಗಳು, ಅಪರಾಧಿಗಳು ಮತ್ತು ರಾಜಕಾರಣಿಗಳು ಕೂಡಾ ತಮಗಿಷ್ಟ ಬಂದಂತೆ ತಿರುಚುತ್ತಿರುವುದು ನಮ್ಮ ದೇಶದಲ್ಲಿ ಧಾರ್ಮಿಕ ಭಾವನೆಗಳು ಎಷ್ಟರ ಮಟ್ಟಿಗೆ ದುರ್ಬಳಕೆಯಾಗುತ್ತಿವೆ ಎಂಬುದಕ್ಕೆ ಕನ್ನಡಿಯಾಗಿದೆ. ಇದು ಭಾರತದಲ್ಲಿ ಹಿಂದೂ ಮತ್ತು ಮುಸ್ಲಿಮ್ ಸಮುದಾಯಗಳ ನಡುವಣ ಅಂತರವನ್ನು ಮತ್ತಷ್ಟು ಹೆಚ್ಚಿಸಿದೆ.

ಭಾರತದ ಹಿರಿಯ ರಾಜಕೀಯ ಮುಖಂಡರೊಬ್ಬರು ಹೇಳಿದ ಮಾತನ್ನು ಗಮನಿಸಿ: "ಭಾರತದಲ್ಲಿ ಮುಸಲ್ಮಾನರನ್ನು ನಮ್ಮವರು ಎಂಬುದಕ್ಕಿಂತಲೂ 'ಅವರು' ಎಂದು ನೋಡುವ ಪ್ರವೃತ್ತಿ ಆಗಾಗ್ಗೆ ಕಾಣಿಸುತ್ತದೆ. ಈ ಪ್ರವೃತ್ತಿಯು ಹಲವು ಭೀಕರ ರೂಪಗಳಲ್ಲಿ ಅನಾವರಣಗೊಳ್ಳುತ್ತದೆ. ಇಂದಿಗೂ 'ಭಾರತದ ಮುಖ್ಯವಾಹಿನಿ' ಯಲ್ಲಿ ಬಹುತೇಕ ಮುಸ್ಲಿಮರಿಗೆ ಸ್ಥಾನವಿಲ್ಲ."

ಅಪನಂಬಿಕೆಯಿಂದ ಹುಟ್ಟುವ ತೀವ್ರವಾದವು ಅರ್ಧ ಸತ್ಯ ಮತ್ತು ಮಿಥ್ಯೆಯ ಮೂಲಕ ಮತ್ತಷ್ಟು ಕೊಬ್ಬುತ್ತದೆ. ಆದ್ದರಿಂದ ತೀವ್ರವಾದಿ ಶಕ್ತಿಗಳು ದ್ವೇಷವನ್ನು ಪ್ರಚೋದಿಸುವ ಮತ್ತು ಉದ್ರೇಕವನ್ನು ಸೃಷ್ಟಿಸುವ ಎಲ್ಲ ವಿಷಯಗಳನ್ನೂ ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಾರೆ. ಇವರು 'ಅನ್ಯರ' ಬಗ್ಗೆ ವಿನಾಕಾರಣ ದ್ವೇಷ ಭಾವವನ್ನು ಮೂಡಿಸಿ ತಮ್ಮವರ ಬಗ್ಗೆ ಅನಪೇಕ್ಷಿತ ಅಹಂಭಾವವನ್ನು ಬೆಳೆಸುತ್ತಾರೆ. ಇತರರನ್ನು ಹಳಿಯುವುದು

ಮತ್ತು ತಮ್ಮ ಮಹತ್ವ, ಅಧಿಕಾರ ಮತ್ತು ಸ್ಥಾನಮಾನವನ್ನು ವೈಭವೀಕರಿಸುವುದು ಅವರ ಅತ್ಯಂತ ಪ್ರಿಯವಾದ ಪಾಸ್‌ಟೈಮ್ ಆಗಿಬಿಡುತ್ತದೆ. ಈ ಉದ್ದೇಶಕ್ಕಾಗಿ ಅವರು ಬಳಸುವ ಆಯುಧಗಳು ಇತಿಹಾಸವನ್ನು ತಮ್ಮ ಮೂಗಿನ ನೇರಕ್ಕೆ ತಿರುಚುವುದಕ್ಕೂ, ತೇಜೋವಧೆಯ ಪ್ರಯತ್ನ ಹಾಗೂ ಆಕ್ರಮಣಕ್ಕೊಳಗಾಗಿದ್ದೇವೆ ಎಂಬ ಭಾವವನ್ನು ಬೆಳೆಸಲಿಕ್ಕೂ ನೆರವಾಗುತ್ತಿವೆ.

ಭಾರತದಲ್ಲಿ 20 ಕೋಟಿಗೂ ಹೆಚ್ಚು ಮುಸ್ಲಿಮರಿದ್ದಾರೆ. ಇವರು ಟೀಕೆ ಮತ್ತು ತೇಜೋವಧೆಯ ಪ್ರಯತ್ನಗಳಿಗೆ ತುತ್ತಾಗುತ್ತಲೇ ಬಂದಿದ್ದಾರೆ. ಹೆಚ್ಚು ಕಡಿಮೆ ಎಲ್ಲ ಸಮುದಾಯಗಳ ಅವಸ್ಥೆಯೂ ಇದುವೇ. ಇದು ಕೋಮುವಾದಿ ಪೈಪೋಟಿಗೆ ಹಾದಿ ಮಾಡಿಕೊಡುತ್ತದೆ. ಗಲಭೆಯ ಬೆಂಕಿ ಹರಡಲು ಸಣ್ಣದೊಂದು ಘಟನೆ ಸಾಕು. ನಮ್ಮ ವರ್ತನೆಗಳು ಜಾತ್ಯತೀತ ಮತ್ತು ಬಹುಧರ್ಮೀಯ ಪ್ರಜಾಪ್ರಭುತ್ವದ ನಾಗರಿಕರಂತಿಲ್ಲ. ಧರ್ಮವು ಜನರನ್ನು ಪ್ರೀತಿ, ಪರಸ್ಪರ ಗೌರವ ಮತ್ತು ಭ್ರಾತೃತ್ವದ ಬೆಸುಗೆಯಲ್ಲಿ ಒಗ್ಗೂಡಿಸಿ ಮುನ್ನಡೆಸುವ ಸಕಾರಾತ್ಮಕ ಶಕ್ತಿಯಾಗಿ ಬಳಕೆಯಾಗುತ್ತಿಲ್ಲ.

ಇದನ್ನು ಯಾರು ಮಾಡಿದರು, ಏಕೆ ಎಂಬ ಪ್ರಶ್ನೆಗಳಿಗೆ ಉತ್ತರಗಳು ಸಿಗುವುದು ಕಡಿಮೆ. ಇನ್ನೊಬ್ಬರ ಮೇಲೆ ಎರಚಲು ಬಳಸಿದ ಕೆಸರು ಸ್ವಲ್ಪಮಟ್ಟಿಗೆ ನಮ್ಮ ಕೈಗೂ ಅಂಟಿರುತ್ತದೆ ಮತ್ತು ಅದನ್ನು ತೊಳೆದುಕೊಳ್ಳಲು ಸಾಕಷ್ಟು ಶ್ರಮ ಪಡಬೇಕಾಗುತ್ತದೆ. ಎರಡು ಪ್ರಮುಖ ಸಮುದಾಯಗಳಿಗೆ ಸೇರಿದ ಜನರು ಸಂವಹನದ ಮಾರ್ಗಗಳನ್ನು ತೆರೆದುಕೊಂಡು ಪರಸ್ಪರರನ್ನು ಸಾಮಾಜಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲು ಯತ್ನಿಸಿದಾಗ ಮಾತ್ರವೇ ಇದು ಸಾಧ್ಯ. ಪರಸ್ಪರರ ನಂಬಿಕೆಯನ್ನು ಗೌರವಿಸುತ್ತಲೇ, ಭ್ರಾತೃತ್ವ ಮತ್ತು ಕೋಮು–ಸೌಹಾರ್ದದ ಭಾವನೆಗಳನ್ನು ಗಟ್ಟಿಗೊಳಿಸಬೇಕಾಗಿದೆ. ದ್ವೇಷವು ನಮ್ಮನ್ನು ಒಡೆದರೆ ಪ್ರೀತಿ ನಮ್ಮನ್ನು ಜೋಡಿಸುತ್ತದೆ. ನಮ್ಮ ನಡುವಿನ ಸ್ನೇಹವನ್ನು ಗಟ್ಟಿಗೊಳಿಸಿ ಅಭಿವೃದ್ಧಿಯ ಕಡೆಗೆ ಧಾಪುಗಾಲು ಹಾಕಲು ಇದೊಂದೇ ಮಂತ್ರ.

# ಜನಪ್ರಿಯ ಸಿದ್ಧ ಮಾದರಿಗಳು

ಮುಸ್ಲಿಮರ ಇಮೇಜ್ ಮತ್ತು ಮನೋಭಾವಕ್ಕೆ ಸಂಬಂಧಿಸಿದಂತೆ ಸಮಾಜದಲ್ಲಿ ಕೆಲವು ಸಿದ್ಧ ಕಲ್ಪನೆಗಳಿವೆ. ಉದಾಹರಣೆಗೆ, ಮುಸ್ಲಿಮ್ ವೈಯಕ್ತಿಕ ಕಾನೂನು ಪುರುಷರಿಗೆ ನಾಲ್ವರು ಪತ್ನಿಯರನ್ನು ಇಟ್ಟುಕೊಳ್ಳಲು ಮತ್ತು ತನಗಿಷ್ಟ ಬಂದಾಗ ತಲಾಕ್ (ವಿಚ್ಛೇದನ) ನೀಡುವ 'ಸೌಲಭ್ಯ' ಕಲ್ಪಿಸುತ್ತದೆ ಎಂಬ ಭಾವನೆ ಜನಸಾಮಾನ್ಯರಲ್ಲಿದೆ. ಅಂತೆಯೇ ಎಲ್ಲ ಮುಸಲ್ಮಾನರು ಕುಟುಂಬ ಯೋಜನೆಯನ್ನು ಒಪ್ಪುವುದಿಲ್ಲ ಎಂಬುದು ಇನ್ನೊಂದು ಜನಪ್ರಿಯ ಗ್ರಹಿಕೆ. ಮುಸ್ಲಿಮರ ಈ ನಿಲುವಿನಿಂದಾಗಿ ಅವರ ಜನಸಂಖ್ಯೆ 'ತೀವ್ರವಾಗಿ ಹೆಚ್ಚುತ್ತಿದೆ' ಮತ್ತು ಕ್ರಮೇಣ ಬಹುಸಂಖ್ಯಾತರನ್ನೂ ಅವರು ಜನಸಂಖ್ಯೆಯಲ್ಲಿ ಹಿಂದಿಕ್ಕಲಿದ್ದಾರೆ ಎಂಬ ಪ್ರಚಾರವೂ ಇಂದು ಚಾಲ್ತಿಯಲ್ಲಿದೆ. ಇತಿಹಾಸವನ್ನು ತಿರುಚುವ ಮೂಲಕ ಇಂಥ ಕಲ್ಪನೆಗಳಿಗೆ ಇನ್ನಷ್ಟು ಜೀವ ತುಂಬಲಾಗಿದೆ. ಮುಸ್ಲಿಮರು ಜನರನ್ನು ಒತ್ತಾಯಪೂರ್ವಕವಾಗಿ ಇಸ್ಲಾಮಿಗೆ ಮತಾಂತರಗೊಳಿಸಿದರು, ದೇಗುಲಗಳನ್ನು ಧ್ವಂಸಗೊಳಿಸಿ ಮಸೀದಿಗಳನ್ನು ನಿರ್ಮಿಸಿದರು, ಮೂರ್ತಿಗಳನ್ನು ಧ್ವಂಸಗೊಳಿಸಿದರು ಎಂಬಿತ್ಯಾದಿ ಸುಳ್ಳುಗಳನ್ನು ಪ್ರಚುರಪಡಿಸುವ ಮೂಲಕ ಮುಸ್ಲಿಮರಿಗೆ ಖಳನಾಯಕ ಪಟ್ಟವನ್ನು ಕಟ್ಟಿ ಅವರ ವಿರುದ್ಧ ದ್ವೇಷ ಮತ್ತು ಪ್ರತೀಕಾರದ ಭಾವನೆ ಬಿತ್ತಲಾಗುತ್ತಿದೆ ಅಥವಾ ಸಮರ್ಥಿಸಲಾಗುತ್ತಿದೆ. ಮುಸ್ಲಿಮರು ಸಾರಾಸಗಟಾಗಿ ನಿರ್ದಿಷ್ಟ ಪಕ್ಷದ ಪರವಾಗಿ ಮತದಾನ ಮಾಡುತ್ತಾರೆ ಎಂಬ ಮಿಥ್ಯೆಯನ್ನು ಹಬ್ಬಿಸಲಾಗಿದ್ದು ಮುಸ್ಲಿಮ್ ಪಕ್ಷಗಳು ಚುನಾವಣಾ ರಂಗಕ್ಕೆ ಪ್ರವೇಶಿಸುವ ಪ್ರಯತ್ನಗಳನ್ನು 'ರಾಜಕೀಯ ಸಂಚು' ಎಂಬಂತೆ ಚಿತ್ರಿಸಲಾಗಿದೆ. ಕೆಲವು ರಾಜಕೀಯ ಪಕ್ಷಗಳು ಪ್ರವಾದಿಯವರ ಜನ್ಮದಿನವನ್ನು ಸಾರ್ವತ್ರಿಕ ರಜಾದಿನವಾಗಿ ಘೋಷಿಸಿದಾಗ ಅಥವಾ ಮುಸ್ಲಿಮರನ್ನು ಅವರ ಶೋಚನೀಯ ಸ್ಥಿತಿಯಿಂದ ಮೇಲೆತ್ತಲು ಪ್ರಯತ್ನಿಸಿದಾಗ ಅದನ್ನು ಅಲ್ಪಸಂಖ್ಯಾತರ ಓಲೈಕೆಯ ಕಸರತ್ತು ಎಂಬಂತೆ ಚಿತ್ರಿಸಿವೆ. ಹೀಗೆ ಮಾನಸಿಕ ಹಿಂಸೆ ಮತ್ತು ಸಂಘರ್ಷಕ್ಕೆ ವೇದಿಕೆಯನ್ನು ಈಗಾಗಲೇ ಸಜ್ಜುಗೊಳಿಸಲಾಗಿದೆ.

## ಪೂರ್ವಗ್ರಹಪೀಡಿತ ಇತಿಹಾಸ

ಔರಂಗಜೇಬ್ ಮತ್ತು ಟಿಪ್ಪು ಸುಲ್ತಾನರನ್ನು ಪೂರ್ವಗ್ರಹಪೀಡಿತವಾಗಿ ಚಿತ್ರಿಸಿದ್ದು ಕೂಡಾ ಹಿಂದೂ ಮತ್ತು ಮುಸ್ಲಿಮರ ನಡುವಿನ ಕಂದರವನ್ನು ಹೆಚ್ಚಿಸುವ ವಿಭಜನಕಾರಿ ರಾಜಕೀಯಕ್ಕೆ ಪೂರಕವಾಗಿದೆ. ಇದರಿಂದ ಹಿಂದೂ ಮತ್ತು ಮುಸಲ್ಮಾನರ ನಡುವಣ ಅಂತರ ಹೆಚ್ಚುತ್ತಾ ಹೋಯಿತು. ಉದಾಹರಣೆಗೆ, ಔರಂಗಜೇಬನು ಬನಾರಸ್‌ನ ದೇಗುಲವನ್ನು ಧ್ವಂಸಗೊಳಿಸಿದ ಎಂಬ ವಿಚಾರವನ್ನು ಅತಿರಂಜಿತವಾಗಿ ಚಿತ್ರಿಸಲಾಗಿದೆ. ಅದೇ ವೇಳೆ ಕುತ್ಬ್‌ಶಾಹಿ ಆಡಳಿತದ ಅರಸ ಅಬುಲ್ ಹಸನ್ ತನಾಷಾ ಅಕ್ರಮವಾಗಿ ಗಳಿಸಿದ ಆಸ್ತಿಯನ್ನು ರಕ್ಷಿಸಿಡಲು ಗೋಲ್ಕೊಂಡಾದ ಜಾಮಾ ಮಸೀದಿಯನ್ನು ದುರ್ಬಳಕೆ ಮಾಡಿಕೊಂಡಾಗ ಇದೇ ಔರಂಗಜೇಬನು ಆ ಮಸೀದಿಯನ್ನೂ ಧ್ವಂಸಗೊಳಿಸಿದ್ದ ಎಂಬ ಸತ್ಯವನ್ನು ಮರೆಮಾಚಲಾಗಿದೆ. ಎರಡೂ ಪ್ರಕರಣದಲ್ಲಿ ಔರಂಗಜೇಬನಿಗೆ ಪ್ರಾರ್ಥನಾ ಸ್ಥಳಗಳನ್ನು ಕೆಡಹಲು ಇದ್ದ ಏಕೈಕ ಕಾರಣ ಅವು ದುರ್ಬಳಕೆ ಆಗುತ್ತಿದ್ದವು ಎಂಬುದು ಮಾತ್ರ.

# ಬಹುಪತ್ನಿತ್ವ

ಮುಸ್ಲಿಮರಲ್ಲಿ ಬಹುಪತ್ನಿತ್ವ ಚಾಲ್ತಿಯಲ್ಲಿದೆ ಎಂಬ ಮಿಥ್ಯೆಯೂ ಜನರ ಮನದಲ್ಲಿ ಬಲವಾಗಿ ಬೇರೂರಿದೆ. ಬಹುಪತ್ನಿತ್ವ ಮತ್ತು ಜನಸಂಖ್ಯೆಯ ಹೆಚ್ಚಳದ ನಡುವಿನ ಸಂಬಂಧದ ಸರಳೀಕೃತ ಗ್ರಹಿಕೆಯೂ ಮನಸ್ಸನ್ನು ಕೊರೆಯುತ್ತಿದೆ. ನಿಜ ಹೇಳಬೇಕೆಂದರೆ ಎಷ್ಟು ಮಹಿಳೆಯರು ಸಂತಾನೋತ್ಪತ್ತಿಯ ವಯೋಮಿತಿಯಲ್ಲಿ ಇದ್ದಾರೆ ಎಂಬ ಅಂಶದ ಮೇಲೆ ಎಷ್ಟು ಮಕ್ಕಳು ಹುಟ್ಟುತ್ತಾರೆ ಎಂಬುದು ನಿರ್ಧಾರವಾಗುತ್ತದೆ. ಒಬ್ಬ ಪುರುಷ ಎಷ್ಟು ಪತ್ನಿಯರನ್ನು ಹೊಂದಿದ್ದಾನೆ ಎಂಬುದಕ್ಕಿಂತಲೂ ಎಷ್ಟು ಮಹಿಳೆಯರು ಸಂತಾನೋತ್ಪತ್ತಿಯ ವಯೋಮಿತಿಯಲ್ಲಿ ಇದ್ದಾರೆ ಎಂಬುದರ ಮೇಲೆ ಮಕ್ಕಳ ಸಂಖ್ಯೆ ನಿರ್ಧಾರವಾಗುತ್ತದೆ. ಒಬ್ಬ ಪುರುಷನಿಗೆ ಎಷ್ಟು ಪತ್ನಿಯರಿದ್ದಾರೆ ಎಂಬ ಅಂಶ ಇಲ್ಲಿ ಅಪ್ರಸ್ತುತ. ಹೆಣ್ಣು ಭ್ರೂಣಹತ್ಯೆ, ವಧುವಿನ ದಹನ ಮತ್ತು ವರನ ಪೋಷಕರಿಂದ ವರದಕ್ಷಿಣೆ ಹೆಸರಿನಲ್ಲಿ ಆಗುವ ಸುಲಿಗೆ ಇತ್ಯಾದಿ ಸಂಗತಿಗಳೇ ಮಹಿಳೆಯರ ಅನುಪಾತದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ.

ಎರಡನೆಯದಾಗಿ, ಗಂಡು ಮತ್ತು ಹೆಣ್ಣಿನ ಸದ್ಯದ ಅನುಪಾತ ನೋಡಿದರೆ ಮುಸ್ಲಿಮ್ ಪುರುಷರಿಗೆ ನಾಲ್ವರು ಪತ್ನಿಯರನ್ನು ಹೊಂದುವುದು ಸಾಧ್ಯವಿಲ್ಲ. ಒಂದು ವೇಳೆ ಇದು ನಿಜವೇ ಆಗಿರುತ್ತಿದ್ದರೆ, ಕನಿಷ್ಠ ಶೇ 75ರಷ್ಟು ಪುರುಷರು ಅವಿವಾಹಿತರಾಗಿಯೇ ಉಳಿಯುತ್ತಿದ್ದರು. 1981ರ ಜನಗಣತಿ ಅನುಸಾರ ಮುಸ್ಲಿಮರಲ್ಲಿ ಗಂಡು–ಹೆಣ್ಣಿನ ಅನುಪಾತ 1,000:1,068 ಇದ್ದರೆ ಹಿಂದೂಗಳಲ್ಲಿ 1,000:1,072 ಇತ್ತು. ಅಂದರೆ ಪ್ರತಿ ಸಾವಿರ ಮುಸ್ಲಿಮ್ ಮಹಿಳೆಯರಿಗೆ 1,068 ಪುರುಷರು ಇದ್ದರೆ ಪ್ರತಿ ಸಾವಿರ ಹಿಂದೂ ಮಹಿಳೆಯರಿಗೆ 1,072 ಪುರುಷರಿದ್ದರು. ಈ ಅಂಕಿ ಅಂಶಗಳ ಹಿನ್ನೆಲೆಯಲ್ಲಿ ಎಲ್ಲ ಮುಸಲ್ಮಾನ ಪುರುಷರು ನಾಲ್ವರು ಪತ್ನಿಯರನ್ನು ಹೊಂದುವುದು ಅಸಾಧ್ಯ ಎಂಬ ಸರಳ ಸತ್ಯ ಮನದಟ್ಟಾಗುತ್ತದೆ.

ಇದಕ್ಕಿಂತ ಸ್ವಲ್ಪ ಹಳೆಯದಾದ ಆದರೆ ಈಗಲೂ ಪ್ರಸ್ತುತವಾದ ಇನ್ನೊಂದು ಅಂಕಿ ಅಂಶದ (1961 ಜನಗಣತಿ ವರದಿ) ಮೂಲಕ ಮುಸ್ಲಿಮರ ಬಹುಪತ್ನಿತ್ವ ಕುರಿತ ಮಿಥ್ಯೆಯನ್ನು ಬೆತ್ತಲೆಗೊಳಿಸಲು ಸಾಧ್ಯವಿದೆ. ಜನಗಣತಿಯ ವರದಿ ಪ್ರಕಾರ,

ಬಹುಪತ್ನಿತ್ವವು ಆದಿವಾಸಿಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿದ್ದು (15.25%) ನಂತರದ ಸ್ಥಾನದಲ್ಲಿ ಬೌದ್ಧರು (7.9%), ಜೈನರು (6.72%), ಹಿಂದೂಗಳು (5.80%) ಮತ್ತು ಮುಸ್ಲಿಮರು (5.70%) ಇದ್ದಾರೆ. ಪುಣೆಯ ಗೋಖಲೆ ಇನ್‌ಸ್ಟಿಟ್ಯೂಟ್‌ನ ಮಲ್ಲಿಕಾ ಬಿ. ಮಿಸ್ತ್ರೀ ನಡೆಸಿದ ಸಂಶೋಧನೆಯಲ್ಲಿಯೂ ಬಹುಪತ್ನಿತ್ವದ ಮದುವೆಗಳು ಹಿಂದೂಗಳಿಗಿಂತ ಮುಸ್ಲಿಮರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದೆ ಎಂಬುದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ ಎಂದು ಅಭಿಪ್ರಾಯಪಟ್ಟಿದೆ.

ಕೆಲವು ತೀವ್ರವಾದಿ ಸಂಘಟನೆಗಳ ಪ್ರಚಾರ ಪ್ರವೀಣರು 'ಹಮ್ ದೋ, ಹಮಾರೆ ದೋ; ವೋ ಪಾಂಚ್, ವುನ್‌ಕೇ ಪಚ್ಚೀಸ್" (ನಾವು ಹಿಂದೂಗಳು ಇಬ್ಬರು ಮಕ್ಕಳನ್ನು ಪಡೆಯುವ ಪ್ರವೃತ್ತಿ ಹೊಂದಿದ್ದರೆ; ಮುಸ್ಲಿಮರು ನಾಲ್ವರು ಪತ್ನಿಯರು, ಇಪ್ಪತ್ತೈದು ಮಕ್ಕಳನ್ನು ಹೊಂದುತ್ತಾರೆ) ಎಂಬ ಘೋಷಣೆಯ ಮೂಲಕ 'ಗಮನಾರ್ಹ ಸಾಧನೆ'ಯನ್ನೇ ಮಾಡಿದ್ದಾರೆ. ತನ್ಮೂಲಕ ಇಡೀ ಮುಸ್ಲಿಮ್ ಸಮುದಾಯದ ವರ್ಚಸ್ಸಿಗೆ ಮಸಿಬಳಿಯಲು ಪ್ರಯತ್ನಿಸಲಾಗುತ್ತಿದೆ.

1993ರಲ್ಲಿ ಗುಜರಾತ್‌ನ ಅಹಮದಾಬಾದ್‌ನ ಎಂಟು ಬ್ಲಾಕ್‌ಗಳಲ್ಲಿ ಮುಸ್ಲಿಮ್ ಕುಟುಂಬಗಳನ್ನು ಕೇಂದ್ರೀಕರಿಸಿ ನಡೆಸಿದ ಸಮೀಕ್ಷೆಯಲ್ಲಿ ಕೇವಲ 279 ಜನರು ಮಾತ್ರ ಇಬ್ಬರು ಪತ್ನಿಯರನ್ನು ಹೊಂದಿದ್ದರು. ಈ ಫಲಿತಾಂಶವನ್ನು ವರದಿ ಮಾಡುತ್ತಾ ಹಿಂದೂಸ್ತಾನ್ ಟೈಮ್ಸ್ (ದಿನಾಂಕ, ಜುಲೈ 13, 2003) ಹೀಗೆ ವರದಿ ಮಾಡಿತ್ತು: '(ಬಹುಪತ್ನಿತ್ವಕ್ಕೆ ಸಂಬಂಧಿಸಿ) ಮುಸಲ್ಮಾನರನ್ನು ಸಾಮಾನ್ಯವಾಗಿ ದೂಷಿಸಿದರೂ ಹಿಂದೂಗಳು ಕೂಡಾ ಆ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ. ಗೆಳೆತನದ ಕರಾರಿನ ಒಟ್ಟು 29,951 ಪ್ರಕರಣಗಳು ಅಧಿಕೃತವಾಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನೋಂದಣಿಯಾಗಿರುವುದು ಬೆಳಕಿಗೆ ಬಂದಿದೆ. ಪತ್ನಿ ಜೀವಂತವಿದ್ದಾಗ, ಮತ್ತೊಂದು ಮದುವೆಗೆ ಹಿಂದೂ ವಿವಾಹ ಕಾಯ್ದೆ ನಿರ್ಬಂಧ ಹೇರುವುದರಿಂದ ಮೈತ್ರಿ ಕರಾರು ಎಂಬುದು, ವಿವಾಹಿತ ಹಿಂದೂ ಪುರುಷ ಮತ್ತು 'ಇನ್ನೊರ್ವ ಮಹಿಳ' ನಡುವಿನ ಒಪ್ಪಂದವಾಗಿ ಮಾರ್ಪಡುತ್ತದೆ'. ಇದೇ ವರದಿಯು ಮುಂದುವರಿಯುತ್ತಾ ಹೀಗೆ ಹೇಳುತ್ತದೆ:

> "ಮೈತ್ರಿ ಕರಾರನ್ನು ಕಾನೂನು ಪ್ರಕಾರ ಜಾರಿಗೊಳಿಸಲು ಬರುವುದಿಲ್ಲವಾದರರೂ, ವಿವಾಹಿತ ಪುರುಷನ 'ಅನ್ಯ ಮಹಿಳೆ'ಯ ಮನದಲ್ಲಿ ಸುರಕ್ಷತೆಯ ಭಾವವನ್ನು ಅದು ಮೂಡಿಸುತ್ತದೆ."

## ಪಾಕಿಸ್ತಾನ ಮತ್ತು ಭಾರತೀಯ ಮುಸ್ಲಿಮರು

ಮುಸ್ಲಿಮರ ಮಟ್ಟಿಗೆ ಪಾಕಿಸ್ತಾನವು ಒಂದು ಪವಿತ್ರ ಭೂಮಿ ಎಂಬುದು ತೀವ್ರಗಾಮಿ ಗುಂಪುಗಳು ಹಬ್ಬಿಸಿರುವ ಮತ್ತೊಂದು ದೊಡ್ಡ ಮಿಥ್ಯೆ. ವಾಸ್ತವದಲ್ಲಿ ಭೂಮಿಯ ನಿರ್ದಿಷ್ಟ ತುಂಡಿಗೆ ಪಾವಿತ್ರ್ಯವನ್ನು ಕಲ್ಪಿಸಲಾಗದು. ಅಲ್ಲದೆ ಮಕ್ಕಾ ಮತ್ತು ಮದೀನಾಗಳಿಗೆ ಇರುವಂತೆ ಪಾಕಿಸ್ತಾನಕ್ಕೆ ಯಾವುದೇ ಇಸ್ಲಾಮೀ ಮಹತ್ವವೂ ಇಲ್ಲ. ಮಕ್ಕಾದಲ್ಲಿ ಕಾಬಾ (ಪ್ರಥಮ ಆರಾಧನಾಲಯ)ವಿದ್ದರೆ ಮದೀನಾದಲ್ಲಿ ಮಸ್ಜಿದುನ್ನಬವಿ ಅರ್ಥಾತ್ ಪ್ರವಾದಿ ಮುಹಮ್ಮದ್‌ರ ಮಸೀದಿಯಿದೆ. ಪಾಕಿಸ್ತಾನವು ಜಗತ್ತಿನಲ್ಲಿರುವ 56 ಮುಸ್ಲಿಮ್ ರಾಷ್ಟ್ರಗಳ ಪೈಕಿ ಒಂದು. ಮುಸ್ಲಿಮರ ಮಟ್ಟಿಗೆ ಅದು ಮಲೇಶ್ಯ, ಚಾಡ್ ಮತ್ತು ಉಝ್ಬೇಕಿಸ್ತಾನ್‌ಗಿಂತ ಭಿನ್ನವಲ್ಲ. ಅದೇ ರೀತಿ ಮುಸ್ಲಿಮರಿಗೂ ಪಾಕಿಸ್ತಾನದ ಧ್ವಜಕ್ಕೂ ಯಾವುದೇ ಸಂಬಂಧವಿಲ್ಲ. ಮುಸ್ಲಿಮರು ಅದನ್ನು ಪೂಜಿಸುವುದಿಲ್ಲ ಮತ್ತು ಅದನ್ನು ಹಾರಿಸುವುದು ಪುಣ್ಯದ ಕೆಲಸ ಎಂದು ಭಾವಿಸುವುದಿಲ್ಲ. ಅದು ಯಾವುದೇ ಇತರ ರಾಷ್ಟ್ರಗಳಿಗಿರುವಂತೆ ಒಂದು ಧ್ವಜ ಅಷ್ಟೆ. ಯಾವುದೇ ಧಾರ್ಮಿಕ, ಸಾಮಾಜಿಕ ಅಥವಾ ರಾಜಕೀಯ ನಾಯಕನೂ ಪಾಕಿಸ್ತಾನ ಕ್ರಿಕೆಟ್ ಅಥವಾ ಹಾಕಿ ಪಂದ್ಯಗಳಲ್ಲಿ ಜಯ ಗಳಿಸಿದಾಗ ಸಂಭ್ರಮಪಡಬೇಕೆಂದು ಕರೆ ನೀಡಿದ ಇತಿಹಾಸವಿಲ್ಲ. ಪಾಕಿಸ್ತಾನದಲ್ಲಿ ಭಾರತೀಯ ಮುಸ್ಲಿಮರು ಸಂದರ್ಶಿಸಲೇ ಬೇಕಾದ ಯಾವುದೇ ಪುಣ್ಯಕ್ಷೇತ್ರ ಇಲ್ಲ. ಹಾಗೆ ನೋಡಿದರೆ ಭಾರತೀಯ ಸಿಕ್ಖರ ಮಟ್ಟಿಗೆ ಪವಿತ್ರವಾದ ಗುರುದ್ವಾರವೊಂದು ಲಾಹೋರ್‌ನಲ್ಲಿದೆ.

## 786

ಶಿಲುಬೆ ಕ್ರೈಸ್ತರ ಚಿಹ್ನೆ. ಓಂ ಅಥವಾ ಸ್ವಸ್ತಿಕ್ ಹಿಂದೂ ಧರ್ಮದ ಸಂಕೇತ. ಹೀಗೆ ಧರ್ಮದೊಂದಿಗೆ ನಿರ್ದಿಷ್ಟ ಚಿಹ್ನೆ ಮತ್ತು ಸಂಕೇತಗಳನ್ನು ಜೋಡಿಸಬಯಸುವವರು 786 ಅಥವಾ ಅರ್ಧಚಂದ್ರಾಕೃತಿ ಹಾಗೂ ಅದರ ಮೇಲಿನ ನಕ್ಷತ್ರವನ್ನು ಇಸ್ಲಾಮಿನ ಚಿಹ್ನೆ ಎಂದು ಭಾವಿಸುತ್ತಾರೆ. ಇದು ಎಷ್ಟರ ಮಟ್ಟಿಗೆ ಮನಸ್ಸಿನಲ್ಲಿ ಬೇರೂರಿದೆ ಎಂದರೆ ನಿರ್ದಿಷ್ಟ

ಧರ್ಮದ ಅನುಯಾಯಿಗಳನ್ನು ಗುರಿಯಾಗಿಸಿ ಜಾರಿಗೊಳಿಸುವ ವಿಜ್ಞಾಪನಾ ಪತ್ರವು ಆಯಾ ಧರ್ಮದ ಹೆಗ್ಗುರುತನ್ನು ಹೊಂದಿರುತ್ತದೆ. ಆದರೆ ಇಸ್ಲಾಮ್ ಯಾವುದೇ ಚಿಹ್ನೆಯನ್ನು ತನ್ನ ಅಧಿಕೃತ ಹೆಗ್ಗುರುತಾಗಿ ಅಂಗೀಕರಿಸಿಲ್ಲ ಅಥವಾ ಶಿಫಾರಸು ಮಾಡಿಲ್ಲ.

786 ಎಂಬುದು ಅರಬಿ ಭಾಷೆಯಲ್ಲಿ 'ಬಿಸ್ಮಿಲ್ಲಾಹಿರ್ರಹ್‌ಮಾನಿರ್ರಹೀಂ' ಎಂಬುದರ ಪ್ರತೀಕ ಎನ್ನಲಾಗುತ್ತದೆ. ಇದು ಪವಿತ್ರ ಕುರ್‌ಆನ್‌ನ ಪ್ರತಿ ಅಧ್ಯಾಯದ ಆರಂಭದಲ್ಲಿ ಬರುವ ಸಣ್ಣ ಪ್ರಾರ್ಥನೆ. ಮುಸ್ಲಿಮರು ತಮ್ಮ ಎಲ್ಲ ಕಾರ್ಯಕ್ರಮವನ್ನು ಈ ಪ್ರಾರ್ಥನೆಯೊಂದಿಗೆ ಆರಂಭಿಸಬೇಕು. 'ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ (ನಾನು ಆರಂಭಿಸುತ್ತೇನೆ)' ಎಂಬುದು ಅದರ ಅರ್ಥ. ಅರಬಿ ಭಾಷೆಯಲ್ಲಿ ಪ್ರತಿ ಅಕ್ಷರಕ್ಕೂ ಒಂದು ಸಾಂಖ್ಯಿಕ ಮೌಲ್ಯವಿದೆ. ಇದನ್ನು ಲೆಕ್ಕಶಾಸ್ತ್ರದಲ್ಲಿ 'ಅಬ್ಜದ್' ಎನ್ನಲಾಗುತ್ತದೆ. ಈ ಸೂತ್ರವನ್ನು ಬಳಸಿದಾಗ 'ಬಿಸ್ಮಿಲ್ಲಾಹಿರ್ರಹ್‌ಮಾನಿರ್ರಹೀಂ'ನ ಸಾಂಖ್ಯಿಕ ಮೌಲ್ಯ 786 ಆಗುತ್ತದೆ. ಮುಸ್ಲಿಮರ ಪೈಕಿ ಕೆಲವರು ಇಡೀ ಪ್ರಾರ್ಥನೆಯನ್ನು ಬರೆಯುವ ಬದಲಿಗೆ 786 ಎಂದು ಬರೆಯುತ್ತಾರೆ. ಆದರೆ ಹೀಗೆ ಮಾಡುವುದಕ್ಕೆ ಇಸ್ಲಾಮ್‌ನಲ್ಲಿ ಯಾವುದೇ ಮಾನ್ಯತೆ ಇಲ್ಲ. ಇದು ಅರೆಬಿಕ್ ಸಾಹಿತ್ಯದಲ್ಲಿ ಇರುವ ಸಂಪ್ರದಾಯ ಮಾತ್ರ. ಆದ್ದರಿಂದ ಇದಕ್ಕೆ ಯಾವುದೇ ಧಾರ್ಮಿಕ ಮಹತ್ವ ಕಲ್ಪಿಸಬೇಕಾಗಿಲ್ಲ.

ಕೆಲವು ಮೂಢನಂಬಿಕೆಗಳು ಆಧುನಿಕ ಕಾಲದಲ್ಲಿ ನವೀನ ರೂಪ ಪಡೆದು ಪ್ರತ್ಯಕ್ಷಗೊಳ್ಳುತ್ತವೆ. ಅದೇ ರೀತಿ, 786 ಕೂಡಾ ಆಧುನಿಕ ಸಾಧನ ಸಲಕರಣೆಗಳ ಮೇಲೆ ತನ್ನ ಛಾಯೆಯನ್ನು ಮೂಡಿಸಿದೆ. ಕೆಲವು ಸಿರಿವಂತ ಮುಸ್ಲಿಮರು ತಮ್ಮ ಕಾರುಗಳ ನೋಂದಣಿ ಸಂಖ್ಯೆಯ ಕೊನೆಯ ಮೂರು ಅಂಕೆಗಳು 786 ಆಗಿರಬೇಕು ಎಂದು ಬಯಸುತ್ತಾರೆ. ಕೆಲವರು ಈ ಮೂರು ಸಂಖ್ಯೆಗಳು ತಮ್ಮ ಮೊಬೈಲ್ ದೂರವಾಣಿಯ ಕಡೆಯ ಮೂರು ಅಂಕಿಗಳಾಗಿರಬೇಕೆಂದು ಅಪೇಕ್ಷಿಸುತ್ತಾರೆ. ಇದನ್ನು ಪಡೆಯಲು ಅವರು ಹೆಚ್ಚುವರಿ ಹಣ ಪಾವತಿಸಲಿಕ್ಕೂ ಸಿದ್ಧರಿರುತ್ತಾರೆ. ಇನ್ನು ಕೆಲವರು ಈ ಸಂಖ್ಯೆಯನ್ನು ಜ್ಞಾಪಕದಲ್ಲಿಡಲು ಮತ್ತು ಇತರರಿಗೆ ತಿಳಿಸಲು ಸುಲಭವಾಗುತ್ತದೆ ಎಂಬ ಕಾರಣಕ್ಕೆ ಬಯಸುತ್ತಾರೆ. ಚಿತ್ರೋದ್ಯಮ ಕೂಡಾ ಈ ಸಂಖ್ಯೆಯನ್ನು ಜನರ ಭಾವನೆಗಳ ಲಾಭವನ್ನು ಪಡೆಯಲು ಬಳಕೆ ಮಾಡುತ್ತದೆ. ಶಾರುಖ್ ಖಾನ್ ಬಾಲಿವುಡ್ ಗಲ್ಲಾಪೆಟ್ಟಿಗೆಯಲ್ಲಿ ದಾಖಲೆ ನಿರ್ಮಿಸಿದ 'ವೀರ್–ಜ್ಹಾರಾ' ಚಿತ್ರದಲ್ಲಿ 'ಕೈದಿ ನಂ.786 ಇನ್ ಲಾಹೋರ್ ಜೈಲ್' ಪಾತ್ರದಲ್ಲಿ ಕಾಣಿಸಿಕೊಂಡಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. 'ಕೂಲಿ' ಹಿಂದಿ ಚಿತ್ರದಲ್ಲಿ ಹಮಾಲಿ ನಂಬರ್ 786 ಆಗಿ 'ದೀವಾರ್' ಚಿತ್ರದಲ್ಲಿ ಸ್ಮಗ್ಲರ್ ಬಿಲ್ಲಾ ನಂಬರ್ 786 ಆಗಿಯೂ ಇದು ದುರುಪಯೋಗಗೊಂಡಿದೆ.

# ಬಾಲಚಂದ್ರ ಮತ್ತು ನಕ್ಷತ್ರ , ಮತಾಂಧ ಅಪಪ್ರಚಾರಗಳು

ಇಸ್ಲಾಮ್ ಧರ್ಮಾನುಯಾಯಿಗಳು ಚಂದ್ರಮಾನ ಕ್ಯಾಲೆಂಡರ್ ಅನುಸರಿಸುತ್ತಾರೆ. ಎರಡನೇ ಖಲೀಫ (ಇಸ್ಲಾಮೀ ರಾಷ್ಟ್ರದ ಅಧ್ಯಕ್ಷ) ಹಝ್ರತ್ ಉಮರ್‌ರ ಆಡಳಿತಾವಧಿಯಲ್ಲಿ ಜಾರಿಗೊಂಡ ಹಿಜ್ರಿ ಕ್ಯಾಲೆಂಡರ್ ಕೂಡಾ ಚಂದ್ರಮಾನ ದಿನಗಣನೆಯನ್ನು ಅವಲಂಭಿಸಿದ್ದು ಪ್ರವಾದಿ ಮುಹಮ್ಮದ್ (ಅವರ ಮೇಲೆ ಅಲ್ಲಾಹನ ಶಾಂತಿಯಿರಲಿ) ಮಕ್ಕಾದಿಂದ ಮದೀನಾಕ್ಕೆ ವಲಸೆ(ಹಿಜ್ರಾ) ಹೋದ ಘಟನೆಯಿಂದ ಇದು ಆರಂಭವಾಗುತ್ತದೆ. ಇಸ್ಲಾಮಿನ ಪ್ರಮುಖ ಆಚರಣೆಗಳಾದ ಹಜ್ಜ್, ರಮದಾನ್ ತಿಂಗಳ ಉಪವಾಸ, ಈದುಲ್–ಫಿತ್ರ್, ಈದುಲ್ ಅಝ್ಹಾ ಇತ್ಯಾದಿಗಳೆಲ್ಲವೂ ಚಂದ್ರನ ಚಲನೆಯ ವಿವಿಧ ಹಂತಗಳನ್ನು ಆಧರಿಸಿದೆ. ಹೀಗಾಗಿ ಇಸ್ಲಾಮ್ ಧರ್ಮದಲ್ಲಿ ಚಂದ್ರದರ್ಶನದೊಂದಿಗೆ ತಿಂಗಳು ಆರಂಭಗೊಳ್ಳುವ ಕಾರಣ ಚಂದ್ರನ ಚಲನೆಯನ್ನು ನಿಖರವಾಗಿ ದಾಖಲಿಸುವ ಪರಿಪಾಠ ಬೆಳೆದುಬಂದಿದೆ. ಯುರೋಪ್ ಮತ್ತು ಏಷಿಯಾದ ದೊಡ್ಡ ಭಾಗವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಟರ್ಕಿಯ ಉಸ್ಮಾನಿಯಾ ಖಿಲಾಫತ್ ಮೊಟ್ಟ ಮೊದಲ ಬಾರಿಗೆ ಅರ್ಧಚಂದ್ರ ಮತ್ತು ನಕ್ಷತ್ರವನ್ನು ತನ್ನ ಸಂಕೇತವಾಗಿ ಘೋಷಿಸಿ ತನ್ನ ಧ್ವಜದ ಮೇಲೂ ಅದಕ್ಕೆ ಜಾಗ ಕಲ್ಪಿಸಿತು. ಅಂದಿನಿಂದ ಮುಸ್ಲಿಮ್ ಜಗತ್ತಿನ ಹಲವು ರಾಷ್ಟ್ರಗಳು ಬಾಲಚಂದ್ರ ಮತ್ತು ನಕ್ಷತ್ರವನ್ನು ತಮ್ಮ ರಾಷ್ಟ್ರೀಯ ಲಾಂಛನದ ಭಾಗವಾಗಿ ಅಂಗೀಕರಿಸಿವೆ. ಹಾಗಿದ್ದರೂ ಬಾಲಚಂದ್ರ ಮತ್ತು ನಕ್ಷತ್ರಕ್ಕೆ ಇಸ್ಲಾಮ್ ಧರ್ಮದಲ್ಲಿ ಅಂತಹ ವಿಶೇಷತೆ ಇಲ್ಲ.

ಕೆಲವು ತಿಳುವಳಿಕೆಯಿಲ್ಲದ ಮುಸ್ಲಿಮರು ಚಂದ್ರ ಮತ್ತು ನಕ್ಷತ್ರವನ್ನು ಇಸ್ಲಾಮ್‌ನ ದ್ಯೋತಕ ಎಂದು ಪರಿಗಣಿಸುತ್ತಾರೆ. ಇದೇ ಕಾರಣದಿಂದ ಅನೇಕ ದರ್ಗಾಗಳು ಮತ್ತು ಖಬರಸ್ತಾನಗಳ ಬಳಿ ಅರ್ಧ ಚಂದ್ರ ಮತ್ತು ನಕ್ಷತ್ರವನ್ನು ಹೊಂದಿದ ಹಸಿರು ಧ್ವಜಗಳು ರಾರಾಜಿಸುವುದನ್ನು ಕಾಣಬಹುದು. ಅಮೆರಿಕದಲ್ಲಿ ಮುಸ್ಲಿಮರ ಅಸ್ತಿತ್ವ ಮತ್ತು ಪ್ರಭಾವವನ್ನು ಗುರುತಿಸುವುದಕ್ಕಾಗಿ ವಾಷಿಂಗ್ಟನ್ ಡಿಸಿ.ಯ ಶ್ವೇತಭವನದ ಎದುರಿಗಿರುವ ಉದ್ಯಾನದಲ್ಲಿಯೂ ಬಾಲಚಂದ್ರ ಮತ್ತು ನಕ್ಷತ್ರದ ಲಾಂಛನವನ್ನು ಇತ್ತೀಚೆಗೆ ನೇತು ಹಾಕಲಾಗಿದೆ. ಆದರೆ ಇಸ್ಲಾಮಿನ ಪವಿತ್ರ ಗ್ರಂಥಗಳಲ್ಲಿ ಇದನ್ನು ಮುಸ್ಲಿಮ್ ರಾಷ್ಟ್ರದ ಲಾಂಛನ, ಮುದ್ರೆ ಅಥವಾ ಧ್ವಜವಾಗಿ ಬಳಸಬೇಕೆಂದು ಶಿಫಾರಸು ಮಾಡಿರುವುದು ಅಥವಾ ಅದಕ್ಕೆ ಮಾನ್ಯತೆ ಕಲ್ಪಿಸಿರುವುದು ಕಂಡು ಬರುವುದಿಲ್ಲ. ಆದ್ದರಿಂದ ಈ ಲಾಂಛನಕ್ಕೆ ಯಾವುದೇ ಧಾರ್ಮಿಕ ಮಹತ್ವ ಇಲ್ಲ.

## ಕಿಡಿಗೇಡಿತನ

ಬಲಪಂಥೀಯ ಶಕ್ತಿಗಳು, ಬಾಲಚಂದ್ರ ಮತ್ತು ನಕ್ಷತ್ರವನ್ನೊಳಗೊಂಡ ಹಸಿರು ಧ್ವಜ ಮತ್ತು ಪಾಕಿಸ್ತಾನದ ರಾಷ್ಟ್ರ ಧ್ವಜದ ಮಧ್ಯೆ ಇರುವ ವ್ಯತ್ಯಾಸವನ್ನು ಗುರುತಿಸದೆ ಜನರನ್ನು ಗೊಂದಲಕ್ಕೀಡು ಮಾಡಲು ಪ್ರಯತ್ನಿಸುತ್ತವೆ. ಮುಸ್ಲಿಮರು ಸಾಮಾನ್ಯವಾಗಿ ಸಮಾಧಿ ಮತ್ತು ದರ್ಗಾಗಳ ಮೇಲೆ ಹಾರಿಸುವ ಹಸಿರು ಧ್ವಜದಲ್ಲಿ ಬಾಲಚಂದ್ರ ಮತ್ತು ನಕ್ಷತ್ರಗಳಿರುತ್ತವೆ. ಆದರೆ ಇದು ಪಾಕಿಸ್ತಾನದ ರಾಷ್ಟ್ರಧ್ವಜವಲ್ಲ. ಪಾಕಿಸ್ತಾನದ ಧ್ವಜವೂ ಹಸಿರು ವರ್ಣದ್ದಾಗಿದ್ದು ಅದರಲ್ಲಿ ಬಾಲಚಂದ್ರ ಮತ್ತು ನಕ್ಷತ್ರಗಳಿವೆ. ಆದರೆ ಹೆಚ್ಚುವರಿಯಾಗಿ ಪಾಕಿಸ್ತಾನದ ಧ್ವಜದಲ್ಲಿ ಬಿಳಿ ಬಣ್ಣದ ಲಂಬಾಕಾರದ ಪಟ್ಟಿಯಿದ್ದು ಇದು ಒಟ್ಟು ಧ್ವಜದ ನಾಲ್ಕನೇ ಒಂದು ಭಾಗದಷ್ಟಿದೆ.

## ಪಾಕಿಸ್ತಾನಿ ಧ್ವಜ

ಸ್ವಾರಸ್ಯದ ಸಂಗತಿಯೆಂದರೆ ಮುಸ್ಲಿಮರ ರಾಷ್ಟ್ರಪ್ರೇಮದ ಬಗ್ಗೆ ಆಗಿಂದಾಗ್ಗೆ ಅನುಮಾನ ವ್ಯಕ್ತಪಡಿಸುವ ಬಲಪಂಥೀಯರು, ಮುಸ್ಲಿಮರು ಸಾಂಪ್ರದಾಯಿಕವಾಗಿ ಬಳಸುತ್ತಾ ಬಂದಿರುವ ಬಾಲಚಂದ್ರ ಮತ್ತು ನಕ್ಷತ್ರವಿರುವ ಹಸಿರು ಧ್ವಜವು ಪಾಕಿಸ್ತಾನದ ಧ್ವಜವಾಗಿದೆ ಎಂದು ಸುಳ್ಳು ಪ್ರಚಾರ ಮಾಡಿ ಗೊಂದಲ ಮೂಡಿಸುತ್ತಿರುತ್ತಾರೆ.

ಆದರೆ ಈ ಕೋಮುವಾದಿ ಶಕ್ತಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸ್ವತಃ ತಾವೇ ಪಾಕಿಸ್ತಾನಿ ಧ್ವಜವನ್ನು ಹಾರಿಸಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಕರ್ನಾಟಕದ ಸಿಂಧಗಿಯ ಸರಕಾರಿ ಕಚೇರಿಯ ಎದುರು ಪಾಕಿಸ್ತಾನಿ ಧ್ವಜ ಹಾರಿಸುವ ಮೂಲಕ ಈ ಶಕ್ತಿಗಳು ಕೋಮು ಘರ್ಷಣೆಯನ್ನು ಹುಟ್ಟುಹಾಕಲು ಯತ್ನಿಸಿದ್ದು ಈಗ ಜಗಜ್ಜಾಹೀರಾಗಿದೆ. ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಪೊಲೀಸರು ಬೆಳಗಾವಿಯ ಸಿಂಧಗಿಯಿಂದ ಈ ಪ್ರಕರಣಕ್ಕೆ ಸಂಬಂಧಿಸಿ ಆರು ಮಂದಿ ಶ್ರೀರಾಮಸೇನೆ ಕಾರ್ಯಕರ್ತರನ್ನು ದಸ್ತಗಿರಿ ಮಾಡಿದ್ದಾರೆ. (ನೋಡಿ ದಿ ಹಿಂದೂ, ಜನವರಿ 11, 2012)

ಸ್ವಾರಸ್ಯದ ಸಂಗತಿಯೆಂದರೆ ರಾಮಸೇನೆಯ ಯುವಕರು ಸ್ವತಃ ಪಾಕಿಸ್ತಾನಿ ಧ್ವಜವನ್ನು ತಹಸೀಲ್ದಾರ್ ಕಚೇರಿಯ ಮೇಲೆ ಹಾರಿಸಿ, ಮುಸ್ಲಿಮರ ಮೇಲೆ ಆ ಕೃತ್ಯದ ಹೊಣೆಯನ್ನು ವಹಿಸಲು ಸಜ್ಜಾಗಿದ್ದರು. ಕೋಮುವಾದಿಗಳು ಜನರ ಭಾವನೆಗಳನ್ನು ಕೆರಳಿಸಲು ಇಂತಹ ಕಚ್ಚಾ ವಿಧಾನಗಳನ್ನು ಅನುಸರಿಸಬಹುದು ಮತ್ತು ಅದರಲ್ಲಿ ತಾವೇ ಸಿಕ್ಕಿ ಬೀಳಬಹುದು ಎಂದು ಯಾರೂ ಊಹಿಸಿರಲಿಲ್ಲ.

# ಆಕ್ಷೇಪಾರ್ಹ ಮಾಂಸ

2012ರ ಏಪ್ರಿಲ್‌ನಲ್ಲಿ ಹೈದರಾಬಾದ್‌ನ ಕೆಲವು ಮಂದಿರಗಳ ಮೇಲೆ ಕಿಡಿಗೇಡಿಗಳು ದನದ ಮಾಂಸ ಎಸೆಯುವ ಮೂಲಕ ಕೋಮು ಹಿಂಸೆ ಹಬ್ಬಿಸಿದ್ದರು. ಆದರೆ ಈ ಪ್ರಕರಣದ ಬೆನ್ನು ಬಿದ್ದ ಪೊಲೀಸರು ಮಾಂಸದ ತುಂಡು ಎಸೆದವರು ನಾಲ್ಕು ಹಿಂದೂ ಯುವಕರೆಂಬುದನ್ನು ಪತ್ತೆ ಹಚ್ಚಿ ಅವರನ್ನು ಬಂಧಿಸಿದರು.

ಧಾರ್ಮಿಕ ಸಂಕೇತಗಳು ಮತ್ತು ಅವುಗಳನ್ನು ಅಪವಿತ್ರಗೊಳಿಸುವುದಕ್ಕೆ ಸಂಬಂಧಿಸಿ ಜನರು ಅನಗತ್ಯವಾಗಿ ಭಾವುಕರಾಗಕೂಡದು ಎಂಬುದನ್ನು ಈ ಘಟನೆಗಳು ಸ್ಪಷ್ಟಪಡಿಸುತ್ತವೆ. ಭಾರತದಂತ ಸಮ್ಮಿಶ್ರ ಸಂಸ್ಕೃತಿಯ ದೇಶದಲ್ಲಿ ಇಂತಹ ಭಾವನೆಗಳನ್ನು ದುರುಪಯೋಗಪಡಿಸುವ ಕಿಡಿಗೇಡಿಗಳು ಇದ್ದೇ ಇರುತ್ತಾರೆ. ಇವರು ಕೆಲವೊಮ್ಮೆ ಸಮಾಜಕ್ಕೆ ಬೆಂಕಿ ಇಡುವಲ್ಲೂ ಯಶಸ್ವಿಯಾಗುತ್ತಾರೆ. ಭಾವನೆಗಳನ್ನು ಕೆರಳಿಸಲು ತೀವ್ರವಾದಿ ಸಂಘಟನೆಗಳು ಬಾಡಿಗೆ ಬಂಟರನ್ನು ನೇಮಿಸಿ ಸಮಾಜವನ್ನು ಧಾರ್ಮಿಕ ನೆಲೆಯಲ್ಲಿ ಒಡೆದು ಚುನಾವಣೆಯಲ್ಲಿ ಲಾಭ ಪಡೆಯಲು ಪ್ರಯತ್ನಿಸುವುದು ಕೂಡಾ ಇತ್ತೀಚೆಗೆ ಮಾಮೂಲಾಗಿದೆ. ಮೇಲಿನ ಎರಡು ಘಟನೆಗಳಿಂದ ಸ್ಪಷ್ಟವಾಗುವಂತೆ ಬಲಪಂಥೀಯ ಶಕ್ತಿಗಳು ಸ್ವತಃ ಆಕ್ಷೇಪಾರ್ಹ ಕೃತ್ಯಗಳನ್ನು ಎಸಗಿ ಅದನ್ನು ಮುಸ್ಲಿಮರ ತಲೆಗೆ ಕಟ್ಟಲು ಪ್ರಯತ್ನಿಸಿದ್ದಾರೆ.

ತಮ್ಮ ತಂತ್ರಗಳು ಫಲ ನೀಡದಿರುವ ಬಗ್ಗೆ ಬಲಪಂಥೀಯ ಶಕ್ತಿಗಳು ಎಷ್ಟು ಹತಾಶವಾಗಿ ಬಿಟ್ಟಿವೆ ಎಂಬುದನ್ನೂ ಈ ಘಟನೆಗಳು ಎತ್ತಿ ತೋರಿಸುತ್ತವೆ. ಅಯೋಧ್ಯೆಯಂತಹ ಹಾಲು ನೀಡುವ ಕೆಚ್ಚಲು ಬರಿದಾದ ಬಳಿಕ ತಮ್ಮ ವೋಟು ಬ್ಯಾಂಕನ್ನು ಭದ್ರಪಡಿಸಲು ಮತ್ತು ಅದಕ್ಕಾಗಿ ಕೋಮು ಭಾವನೆಗಳನ್ನು ಬಡಿದೆಬ್ಬಿಸಲು ಯಾವುದೇ ರೀತಿಯ ಕಿಡಿಗೇಡಿ ಕೃತ್ಯ ನಡೆಸಲಿಕ್ಕೂ ಈ ಶಕ್ತಿಗಳು ಸಿದ್ಧವಾಗಿವೆ. ಆದರೆ ಜನತೆ, ಹಿಂದೂ ಮುಸ್ಲಿಮ್ ಎಂಬ ಭೇದವಿಲ್ಲದೆ ಇಂತಹ ಪ್ರಚೋದಕ ಕೃತ್ಯಗಳಿಗೆ ಸಂಯಮದಿಂದ ಪ್ರತಿಕ್ರಯಿಸುವ ಅಗತ್ಯವಿದೆ. ಒಂದು ವೇಳೆ ಜನರು ಜಾಗೃತರಾಗಿದ್ದರೆ ಮತ್ತು ಕಾನೂನು ಮತ್ತು ಸುವ್ಯವಸ್ಥೆಯ ಹೊಣೆಗಾರರು ನಿಷ್ಪಕ್ಷಪಾತವಾಗಿ ವರ್ತಿಸಿದರೆ ಸಮಾಜವನ್ನು ಅಸ್ಥಿರಗೊಳಿಸಲು ಹೊರಟಿರುವ ಶಕ್ತಿಗಳು ನಡೆಸುವ ಇಂತಹ ಕಿಡಿಗೇಡಿ ಷಡ್ಯಂತ್ರಗಳು ಯಶಸ್ವಿಯಾಗುವುದಿಲ್ಲ.

# ಲವ್ ಜಿಹಾದ್

ಮುಸ್ಲಿಮ್ ಯುವಕರ ಮೂಲಕ ಹಿಂದೂ ಯುವತಿಯರನ್ನು ಪ್ರೀತಿಯ ಬಲೆಯೊಳಗೆ ಕೆಡವಿ ಅವರನ್ನು ಇಸ್ಲಾಮಿಗೆ ಮತಾಂತರಗೊಳಿಸಲು ಮುಸ್ಲಿಮ್ ಸಂಘಟನೆಗಳು ಷಡ್ಯಂತ್ರ ರೂಪಿಸಿವೆ ಎಂದು ಕರ್ನಾಟಕದ ಮಾಧ್ಯಮಗಳಲ್ಲಿ ಸುಳ್ಳುಗಳ ಕಂತೆಯನ್ನೇ ಹರಿಯಬಿಡಲಾಗಿತ್ತು. ಈ ವಿಚಾರವು ವಾರಗಟ್ಟಲೆ ಮಾಧ್ಯಮಗಳಲ್ಲಿ ರಾರಾಜಿಸಿದ್ದೇ ಅಲ್ಲದೆ ಕರ್ನಾಟಕ ಮತ್ತು ಕೇರಳದ ವಿಧಾನಸಭೆಗಳಲ್ಲೂ ಚರ್ಚೆಗೆ ಕಾರಣವಾಯಿತು. ಈ ಬಗ್ಗೆ ತನಿಖೆ ನಡೆಸಿದ ಕರ್ನಾಟಕದ ಪೊಲೀಸರು ಈ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದು ತೀರ್ಮಾನಕ್ಕೆ ಬಂದರು. ವಿಶೇಷವಾಗಿ ಕರಾವಳಿ ಜಿಲ್ಲೆಗಳಲ್ಲಿ ಕೋಮುಭಾವನೆಗಳನ್ನು ಕೆರಳಿಸಲು ಈ ವಿವಾದವನ್ನು ಹುಟ್ಟು ಹಾಕಲಾಗಿದೆ ಎಂಬುದು ಸಾಬೀತಾಯಿತು. ಈ ಅಪಪ್ರಚಾರ ನಡೆಯುವುದಕ್ಕೆ ಮುಂಚೆ ಸಾರ್ವಜನಿಕ ಸ್ಥಳಗಳಲ್ಲಿ ಹಿಂದೂ ಹೆಣ್ಮಕ್ಕಳೊಂದಿಗೆ ಮಾತನಾಡಿದ ಮತ್ತು ಸಾರಿಗೆ ವಾಹನಗಳಲ್ಲಿ ಒಟ್ಟಿಗೆ ಪ್ರಯಾಣಿಸಿದ ನೆಪವೊಡ್ಡಿ ಮುಸ್ಲಿಮ್ ಹುಡುಗರ ಮೇಲೆ ಹಲ್ಲೆಗಳು ನಡೆದಿದ್ದವು.

ಈ ವಿವಾದದ ಹಿಂದೆ ರಾಜಕೀಯ ಕಾರಣಗಳೂ ಇದ್ದವು. ಬಲಪಂಥೀಯ ಸಂಘಟನೆಗಳಿಗೆ ತಾವು ಹಿಂದೂಗಳ ಸಂರಕ್ಷಕರೆಂದೂ, ಹಿಂದೂ ತರುಣಿಯರು ಮುಸ್ಲಿಮ್ ಹುಡುಗರಿಗೆ ಬಲಿಯಾಗುವುದನ್ನು ತಡೆಯುವ ಮತ್ತು ಹಿಂದೂಗಳಲ್ಲಿ ಒಗ್ಗಟ್ಟು ಮೂಡಿಸುವ ಕೆಲಸವನ್ನು ತಾವು ಮಾಡುತ್ತಿದ್ದೇವೆ ಎಂಬ ಭಾವನೆಯನ್ನು ಸಮಾಜದಲ್ಲಿ ಮೂಡಿಸುವ ಅಗತ್ಯವಿತ್ತು. ಹೆಣ್ಮಕ್ಕಳು ಒಂದು ಸಮುದಾಯದ ಮರ್ಯಾದೆಯ ಪ್ರತೀಕ ಮತ್ತು ಅವರನ್ನು ಸಮುದಾಯದ ತೆಕ್ಕೆಯಿಂದ ಹೊರಗೆ ಎಳೆಯುವುದು ಅವಮಾನಕಾರಿ ಸಂಗತಿ ಎಂಬ ಚಿಂತನೆಯೂ ಇದರ ಹಿಂದಿತ್ತು. ಆದರೆ ಬಲಪಂಥೀಯ ಸಂಘಟನೆಗಳ ಈ ಅಭಿಯಾನ ಆರಂಭದಲ್ಲೇ ವಿಶ್ವಾಸಾರ್ಹತೆಯ ಸಮಸ್ಯೆ ಎದುರಿಸಿತ್ತು. ಈ ಆರೋಪಗಳು ಮೊದಲು ಕೇಳಿ ಬಂದಾಗ ಕರ್ನಾಟಕ ಹೈಕೋರ್ಟ್ ತನಿಖೆಗೆ ಆದೇಶಿಸಿತು. ಒಬ್ಬ ಡಿಐಜಿ ದರ್ಜೆಯ ಅಧಿಕಾರಿ ನೇತೃತ್ವದಲ್ಲಿ ನಡೆದ ತನಿಖೆಯು ಮುಸ್ಲಿಮ್ ಯುವಕರು ಹಿಂದೂ ತರುಣಿಯರನ್ನು ಪ್ರೇಮ ಪಾಶಕ್ಕೆ ಸಿಲುಕಿಸುತ್ತಿದ್ದಾರೆ ಎಂಬ ಆರೋಪವು ಕೇವಲ ಕಪೋಲಕಲ್ಪಿತವಾದದ್ದು ಎಂದು ವರದಿ ನೀಡಿತು.

ಅಂತರ್ಧರ್ಮೀಯ ಮದುವೆಯ ಪ್ರಕರಣಗಳು ನಡೆದಿವೆಯಾದರೂ ಅಲ್ಲಿ ಯಾವುದೇ ರೀತಿಯ ಬಲಾತ್ಕಾರ ನಡೆದಿಲ್ಲ. ಇನ್ನೊಂದು ವರದಿಯ ಪ್ರಕಾರ ಈ ರೀತಿಯ ಸಂಬಂಧಗಳನ್ನು ವ್ಯವಸ್ಥಿತವಾಗಿ ಪ್ರೋತ್ಸಾಹಿಸಲು 'ಲವ್ ಜಿಹಾದ್' ಎಂಬ ಹೆಸರಿನಲ್ಲಿ ಸಂಘಟನೆ ಅಸ್ತಿತ್ವದಲ್ಲಿಲ್ಲ ಎಂದೂ ಅದು ಸ್ಪಷ್ಟಪಡಿಸಿತು. ಅಂತರ್ಧರ್ಮೀಯ ವಿವಾಹಗಳ ಸಂದರ್ಭದಲ್ಲಿ ಪತಿಯು ಮುಸ್ಲಿಮ್ ಆಗಿದ್ದರೆ ಹೆಣ್ಣಿನ ಮೇಲೆ ಮತಾಂತರವಾಗುವಂತೆ ಸ್ವಲ್ಪ ಮಟ್ಟಿನ ಒತ್ತಡ ಇದೆ ಎಂಬುದನ್ನೂ ವರದಿ ಬೊಟ್ಟು ಮಾಡಿತು. ಆದರೆ ಯಾವುದೇ ವ್ಯವಸ್ಥಿತ ಪ್ರಯತ್ನ ಅಥವಾ ಬಲಪ್ರಯೋಗ ನಡೆದಿಲ್ಲ ಎಂದು ತನಿಖಾ ವರದಿಗಳು ಸ್ಪಷ್ಟಪಡಿಸುವುದರೊಂದಿಗೆ ಈ ಸುಳ್ಳು ಪ್ರಚಾರದ ಅಭಿಯಾನ ಠುಸ್ಸೆಂದಿತು. ಆದರೆ ಪುಂಡರ ಗುಂಪುಗಳು ಮುಸ್ಲಿಮರ ವಿರುದ್ಧ ಅಪಪ್ರಚಾರ ನಡೆಸುವುದನ್ನು ಮಾತ್ರ ಇನ್ನೂ ನಿಲ್ಲಿಸಿಲ್ಲ. ಅದೇ ರೀತಿ ವಿಭಿನ್ನ ಧರ್ಮಕ್ಕೆ ಸೇರಿದ ಹುಡುಗ ಹುಡುಗಿಯರು ಮಾತನಾಡುವುದನ್ನು ತಡೆಯುವ ಪ್ರಯತ್ನಗಳು ಈಗಲೂ ಮುಂದುವರಿದಿವೆ.

ಒಟ್ಟಿನಲ್ಲಿ 'ಲವ್ ಜಿಹಾದ್' ಎಂಬ ಹೆಸರಿನಲ್ಲಿ ಸಂಘಟನೆ ಅಸ್ತಿತ್ವದಲ್ಲಿದೆ ಎಂಬುದೇ ತರ್ಕ ಮತ್ತು ಬುದ್ಧಿಗೆ ನಿಲುಕದ್ದು. ಒಂದು ವೇಳೆ 'ಜಿಹಾದ್'ನ್ನು ದುರ್ಬಳಕೆ ಮಾಡಲಾಗುತ್ತಿದೆ ಎಂದಿಟ್ಟುಕೊಂಡರೂ ಇಬ್ಬರು ವ್ಯಕ್ತಿಗಳ ಮಧ್ಯೆ ಪ್ರೇಮಾಂಕುರಗೊಳಿಸಲು ಇದನ್ನು ಬಳಸಲು ಸಾಧ್ಯವಿಲ್ಲ. ಪ್ರೀತಿ ಎಂಬುದು ಇಬ್ಬರು ವ್ಯಕ್ತಿಗಳ ನಡುವಿನ ಸಹಜ ಮತ್ತು ಸ್ವಯಂಪ್ರೇರಿತ ಸಂಬಂಧ ತಾನೆ? ಪ್ರೀತಿಯು ಮನಸ್ಸಿನಲ್ಲಿ ಹುಟ್ಟಿ ಪರಸ್ಪರ ಸಂಬಂಧದ ಮೂಲಕ ಬೆಳೆಯುತ್ತಾ ಹೋಗುತ್ತದೆ. ಆದ್ದರಿಂದ ಒತ್ತಡ ಮತ್ತು ಬಲಾತ್ಕಾರದ ಪ್ರಶ್ನೆ ಉದ್ಭವಿಸುವುದೇ ಇಲ್ಲ.

## ಹಸಿರು ಬಣ್ಣ

ಅದೇ ರೀತಿ ಹಸಿರು ಮುಸ್ಲಿಮರ ಪವಿತ್ರ ಬಣ್ಣ ಎಂಬ ನಂಬಿಕೆಯೂ ಪ್ರಚಲಿತದಲ್ಲಿದೆ. ಆದರೆ ಇಸ್ಲಾಮಿನಲ್ಲಿ ಪವಿತ್ರ ಬಣ್ಣ ಎಂಬ ಕಲ್ಪನೆಯೇ ಇಲ್ಲ. ಎಲ್ಲ ಬಣ್ಣಗಳನ್ನೂ ದೇವರೇ ಸೃಷ್ಟಿಸಿದ್ದು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಹಸಿರು ಬಣ್ಣವನ್ನು ಇಷ್ಟ ಪಟ್ಟಿದ್ದರು. ಆದರೆ ಇದಕ್ಕೆ ಆ ಬಣ್ಣ ಕಣ್ಣನ್ನು ತಂಪಾಗಿಸುತ್ತದೆ ಎಂಬುದೇ ಕಾರಣ. ಆಧುನಿಕ ಕಾಲದಲ್ಲಿ ಹಸಿರು ಬಣ್ಣವು ಪ್ರಕೃತಿಯೊಂದಿಗಿನ ಪ್ರೀತಿ ಮತ್ತು ಪರಿಸರ ಸಂರಕ್ಷಣೆಯ ಪ್ರತೀಕವಾಗಿ ಬಳಕೆಯಾಗುತ್ತದೆ ಎಂಬುದು ಗಮನಾರ್ಹ.

## ವಂದೇ ಮಾತರಂ: ರಾಷ್ಟ್ರೀಯತೆಗೂ ಮೀರಿದ ರಾಜಕಾರಣ

ಈ ಗೀತೆ ಒಂದು ಸಂಕೀರ್ಣವಾದ ಇತಿಹಾಸವನ್ನು ಹೊಂದಿದೆ. ಇದನ್ನು ಬಂಕಿಂ ಚಂದ್ರ ಚಟರ್ಜಿ ಅವರು ರಚಿಸಿದ್ದು, ಬಳಿಕ 'ಆನಂದ ಮಠ' ಕಾದಂಬರಿಯಲ್ಲೂ ಸೇರ್ಪಡೆಗೊಳಿಸಿದರು. ಇದು ಅತ್ಯಂತ ತೀವ್ರವಾದ ಮುಸ್ಲಿಮ್ ವಿರೋಧಿ ಒಕ್ಕಣೆಗಳನ್ನು ಒಳಗೊಂಡಿರುವ ಕೃತಿ. ಸಮಾಜದ ಕೆಲವು ವರ್ಗದ ಜನರಲ್ಲಿ ವಂದೇಮಾತರಂ ಬಹಳ ಜನಪ್ರಿಯವಾಗಿದೆ. ಆದರೆ, ಇಸ್ಲಾಮ್ ಏಕದೇವಾರಾಧನೆಯ ಧರ್ಮವಾಗಿರುವುದರಿಂದ ಅಲ್ಲಾಹನ ಹೊರತು ಬೇರಾವುದೇ ದೇವರು ಮತ್ತು ದೇವತೆಯರನ್ನು ಅಂಗೀಕರಿಸುವುದಿಲ್ಲ. ಆದರೆ, ಕೆಲವು ಶಕ್ತಿಗಳು ಈ ವಿರೋಧವನ್ನೇ ಮುಸ್ಲಿಮ್ ಸಮುದಾಯವನ್ನು ಹೆದರಿಸುವುದಕ್ಕೆ ನೆಪವಾಗಿಸಿಕೊಂಡಿದ್ದು, ಈ ಗೀತೆಯನ್ನು ಹಾಡಲು ನಿರಾಕರಿಸುವುದನ್ನು ರಾಷ್ಟ್ರ ವಿರೋಧಿ ಎಂದು ಬಿಂಬಿಸಲು ಪ್ರಯತ್ನಿಸುತ್ತಿವೆ.

ರಾಷ್ಟ್ರೀಯತೆ ಮತ್ತು ತಾಯಿನಾಡಿನೊಂದಿಗಿನ ಪ್ರೇಮವು ಮುಸ್ಲಿಮರ ರಕ್ತದಲ್ಲೇ ಇದೆ. ಆದರೆ ಈ ಭಾವನೆಗಳು ಯಾವುದೇ ದೇಶವನ್ನು ಪೂಜಿಸುವುದಕ್ಕೆ ಸಮರ್ಥನೆಯಾಗುವುದಿಲ್ಲ. ಆದ್ದರಿಂದ ಮುಸ್ಲಿಮರು ದೇಶಪ್ರೇಮ ಮತ್ತು ದೇಶವನ್ನು ಪೂಜಿಸುವುದರ ಮಧ್ಯೆ ಇರುವ ಅಂತರವನ್ನು ಕಾಯ್ದುಕೊಳ್ಳುತ್ತಾರೆ. ಮುಸ್ಲಿಮರು ಸೌದಿ ಅರೇಬಿಯಾ, ಇರಾನ್ ಅಥವಾ ಇನ್ನೆಲ್ಲೇ ವಾಸವಾಗಿದ್ದರೂ ಅಲ್ಲಿಯ ಸರಕಾರ ಅವರನ್ನು ದೇಶವನ್ನು ಪೂಜಿಸಬೇಕೆಂದು ಹೇಳುವುದಿಲ್ಲ. ದೇಶದ ಬಗ್ಗೆ ಇರುವ ನಿಷ್ಠೆಯ ಕಾರಣದಿಂದ ದೇಶವನ್ನೇ ದೇವತ್ವಕ್ಕೆ ಏರಿಸುವುದು ಸಾಧ್ಯವಿಲ್ಲ.

ರವೀಂದ್ರನಾಥ ಟಾಗೋರ್ ಅವರು ರಚಿಸಿರುವ 'ಜನಗಣ ಮನ' ಗೀತೆಯನ್ನು ರಾಷ್ಟ್ರಗೀತೆ (national anthem) ಯಾಗಿ ಆಯ್ಕೆ ಮಾಡಿದ್ದು, ಅದು ದೇಶದ ವೈವಿಧ್ಯತೆ ಮತ್ತು ಬಹುತ್ವವನ್ನು ಎತ್ತಿಹಿಡಿಯುತ್ತದೆ ಎಂಬ ಕಾರಣಕ್ಕಾಗಿ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ವಂದೇ ಮಾತರಂನ ಮೊದಲ ಎರಡು ಚರಣಗಳು ಮಾತ್ರ ರಾಷ್ಟ್ರೀಯ ಪದ್ಯ (national song) ಎಂಬ ಮಾನ್ಯತೆಯನ್ನು ಪಡೆದಿವೆ. ರಾಷ್ಟ್ರವನ್ನು ಹಿಂದೂ ದೇವತೆಗೆ ಹೋಲಿಸಿರುವ ಇತರ ಭಾಗಗಳಿಗೆ ಈ ಮಾನ್ಯತೆ ನೀಡಲಾಗಿಲ್ಲ.

ವಂದೇ ಮಾತರಂ ಪರವಾಗಿ ಇರುವ ಕೆಲವು ಶಕ್ತಿಗಳು "ಜನಗಣ ಮನ..." ವನ್ನು ಐದನೇ ಜಾರ್ಜ್ ದೊರೆಯನ್ನು ಹೊಗಳಲು ಬರೆದ ಗೀತೆ ಎಂದು ಬಣ್ಣಿಸುತ್ತವೆ. ಠಾಗೋರ್ ವಸಾಹತುಶಾಹಿತ್ವದ ಬದ್ಧ ವಿರೋಧಿಯಾಗಿದ್ದರೆಂಬುದು ಜನಜನಿತ.

ಆದ್ದರಿಂದ ಇದು ನೋಬೆಲ್ ಪ್ರಶಸ್ತಿ ಪುರಸ್ಕೃತ ಸಾಹಿತಿಗೆ ಕೆಟ್ಟ ಹೆಸರು ತರಲು ಇತ್ತೀಚೆಗೆ ಹರಡಲಾಗಿರುವ ಒಂದು ಮಿಥ್ಯೆ.

ನೇತಾಜಿ ಸುಭಾಷ್ ಚಂದ್ರ ಭೋಸ್ ಅವರ ಆಜಾದ್ ಹಿಂದ್ ಫೌಜ್ ಕೂಡಾ ಠಾಗೋರ್ ಅವರ 'ಜನಗಣ ಮನ...'ವನ್ನು ರಾಷ್ಟ್ರಗೀತೆಯಾಗಿ ಅಂಗೀಕರಿಸಿತ್ತು. ಗಾಂಧೀಜಿ ಇದನ್ನು ರಾಷ್ಟ್ರೀಯ ಜೀವನದಲ್ಲಿ ಸ್ಥಾನ ಪಡೆದ ಹಾಡು ಎಂದು ಹೇಳಿದ್ದರು. 'ಜನಗಣ ಮನ..' ಗೀತೆಯ ಬದಲಿಗೆ ಬಂಕಿಮ್‌ಚಂದ್ರ ಚಟರ್ಜಿ ಅವರ ವಂದೇ ಮಾತರಂ ಹಾಡನ್ನು ರಾಷ್ಟ್ರಗೀತೆಯಾಗಿ ಪರಿಗಣಿಸಬೇಕೆಂದು ಕೆಲವರು ಕಾತರಿಸುತ್ತಿರುವುದಕ್ಕೆ ಇದುವೇ ಕಾರಣ.

'ವಂದೇ ಮಾತರಂ..' ಗೀತೆ ಹಾಡುವುದಕ್ಕೆ ಮುಸ್ಲಿಮರು ವಿರೋಧ ವ್ಯಕ್ತಪಡಿಸುತ್ತಿರುವುದಕ್ಕಿಂತಲೂ 'ಜನಗಣ ಮನ..' ಗೀತೆಯನ್ನು ತುಚ್ಛೀಕರಿಸಲು ಕೆಲವು ಶಕ್ತಿಗಳು ಪ್ರಯತ್ನಿಸುತ್ತಿವೆ ಎಂಬ ಅಂಶ ಗಮನಾರ್ಹ. ಇಲ್ಲಿ ಒಂದು ಸಮುದಾಯವನ್ನು ಇಕ್ಕಟ್ಟಿಗೆ ಸಿಲುಕಿಸುವ ಕೋಮುವಾದಿ ರಾಜಕೀಯ ಕೆಲಸ ಮಾಡುತ್ತಿದೆಯೇ ಹೊರತು ರಾಷ್ಟ್ರೀಯ ಸಂಕೇತಗಳಿಗೆ ಗೌರವ ನೀಡಬೇಕು ಎಂಬ ಪ್ರಶ್ನೆ ಅಲ್ಲ.

ಸುಪ್ರೀಮ್ ಕೋರ್ಟ್ ಕೂಡಾ ಈ ವಿಷಯವನ್ನು ಸ್ಪಷ್ಟಪಡಿಸಬೇಕಾಗಿ ಬಂತು. ಯಹೋವನ ಸಾಕ್ಷಿಗಳು ಎಂಬ ಧಾರ್ಮಿಕ ಗುಂಪಿಗೆ ಸೇರಿದ ವಿದ್ಯಾರ್ಥಿಗಳು ಶಾಲೆಯಲ್ಲಿ 'ಜನಗಣಮನ' ಗೀತೆಯನ್ನು ಹಾಡಲು ಧಾರ್ಮಿಕ ಕಾರಣಗಳಿಗಾಗಿ ನಿರಾಕರಿಸಿದರು. ಶಾಲೆಯ ಆಡಳಿತವು ಮಕ್ಕಳನ್ನು ಅಮಾನತುಪಡಿಸಿತು. ವಿಷಯ ಸುಪ್ರೀಂ ಕೋರ್ಟ್‌ವರೆಗೂ ಹೋದಾಗ, ಸೆಕ್ಯುಲರ್ ನ್ಯಾಯಾಲಯವು ಧಾರ್ಮಿಕ ನಂಬಿಕೆಗಳಿಗೆ ಸಂಬಂಧಿಸಿ ಸರಿ ತಪ್ಪುಗಳನ್ನು ನಿರ್ಧರಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿತು. ಸುಪ್ರೀಂ ಕೋರ್ಟ್ ವಿದ್ಯಾರ್ಥಿಗಳ ಉಚ್ಚಾಟನೆಯನ್ನು ರದ್ದುಪಡಿಸಿ, ಇದು ಸಂವಿಧಾನದ ವಿಧಿ 25ರ ಅನುಸಾರ ಇರುವ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆಯಾಗುತ್ತದೆ ಎಂದು ಪ್ರತಿಪಾದಿಸಿತು. ಬಳಿಕ ವಿದ್ಯಾರ್ಥಿಗಳ ಅಮಾನತು ಆದೇಶವನ್ನು ವಾಪಸು ಪಡೆಯಲಾಯಿತು.

ಈ ತೀರ್ಪಿನ ಹಿಂದಿರುವ ಉದ್ದೇಶವನ್ನು ಹಿರಿಯ ನ್ಯಾಯವಾದಿ ಸೋಲಿ ಸೊರಾಬ್ಜಿ ಅವರು ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಅವರ ತೀರ್ಪಿನ ಬೆಳಕಿನಲ್ಲಿ ಹೀಗೆ ವ್ಯಾಖ್ಯಾನಿಸಿದ್ದಾರೆ: "ನಮ್ಮ ಸಂಪ್ರದಾಯ ಸಹನೆಯನ್ನು ಬೋಧಿಸುತ್ತದೆ. ನಮ್ಮ ತತ್ವಶಾಸ್ತ್ರವೂ ಸಹನೆಯನ್ನು ಬೋಧಿಸುತ್ತದೆ. ನಮ್ಮ ಸಂವಿಧಾನ ಸಹನೆಯನ್ನು ಪಾಲಿಸುತ್ತದೆ. ನಾವು ಇದನ್ನು ದುರ್ಬಲಗೊಳಿಸುವುದು ಬೇಡ."

# ತಲಾಕ್
## (ವಿಚ್ಛೇದನ)

ಮದುವೆ ಮತ್ತು ವಿಚ್ಛೇದನಕ್ಕೆ ಸಂಬಂಧಿಸಿ ವಿಸ್ತೃತ ಮತ್ತು ಸರಳ ಕ್ರಮಗಳನ್ನು ನಿಗದಿಪಡಿಸಿದ ಮೊದಲ ಧರ್ಮ ಇಸ್ಲಾಮ್. ಕುರ್‌ಆನ್‌ನ ಪ್ರಕಾರ ಒಬ್ಬ ಗಂಡು ಮತ್ತು ಹೆಣ್ಣು ಸಾಮಾಜಿಕ ಒಪ್ಪಂದವೊಂದಕ್ಕೆ ಕಾಲಿಡುವ ಮೂಲಕ ವಿವಾಹ ಬಂಧಕ್ಕೆ ಒಳಗಾಗುತ್ತಾರೆ. ಒಬ್ಬ ಪುರುಷ ಮತ್ತು ಮಹಿಳೆ ಕೆಲವು ಜನರ ಸಮ್ಮುಖದಲ್ಲಿ ವಿವಾಹದ ಒಪ್ಪಂದಕ್ಕೆ ಒಳಪಡುತ್ತಾರೆ. ಎರಡೂ ಕಡೆಯಿಂದ ತಲಾ ಒಬ್ಬರು ಸಂಬಂಧದ ಪ್ರಸ್ತಾವ ಇಡುತ್ತಾರೆ. ಇಬ್ಬರು ವ್ಯಕ್ತಿಗಳು ಈ ಒಪ್ಪಂದಕ್ಕೆ ಸಾಕ್ಷಿ ಆಗುತ್ತಾರೆ. ಖಾಝಿ ಈ ಒಪ್ಪಂದವನ್ನು ಬರಹ ರೂಪದಲ್ಲಿ ದಾಖಲಿಸುತ್ತಾರೆ. ಪವಿತ್ರ ಕುರ್‌ಆನ್‌ನ ಕೆಲವೊಂದು ಸಾಲುಗಳನ್ನು ಓದಿ 'ನಿಕಾಹ್'ನ ಪ್ರವಚನ ನೀಡುತ್ತಾರೆ. ಪುರುಷ ಮತ್ತು ಮಹಿಳೆ ಇಬ್ಬರೂ ಮದುವೆಯ ಒಪ್ಪಂದಕ್ಕೆ ಸಹಿ ಹಾಕುತ್ತಾರೆ. ಇದು ಒಪ್ಪಂದಕ್ಕೆ ಇಬ್ಬರು ನೀಡುವ ಲಿಖಿತ ಮಾನ್ಯತೆ. ಇಲ್ಲಿಗೆ ಸಮಾರಂಭ ಮುಗಿಯುತ್ತದೆ.

ಇಸ್ಲಾಮ್ ಮನುಷ್ಯ ಸ್ವಭಾವವನ್ನು ಪರಿಪೂರ್ಣವಾಗಿ ಅರಿತುಕೊಂಡ ಧರ್ಮವಾಗಿರುವುದರಿಂದ ದಂಪತಿಗೆ ಹೊಂದಿಕೆ ಆಣುವುದಿಲ್ಲ, ಒಟ್ಟಾಗಿ ಬದುಕಲು ಆಗುವುದಿಲ್ಲ ಎಂಬ ಪರಿಸ್ಥಿತಿ ಉದ್ಭವಿಸಿದ ಸಂದರ್ಭದಲ್ಲಿ ದಂಪತಿಗೆ ಸಂತಾನವಿದ್ದರೂ ಗೌರವಯುತವಾಗಿ ಪ್ರತ್ಯೇಕವಾಗಲು ಅವಕಾಶ ಕಲ್ಪಿಸುತ್ತದೆ. ಆದರೆ ಪತಿ ಮತ್ತು ಪತ್ನಿಗೆ ಬೇರ್ಪಡೆಗೊಳ್ಳಲು ನಿಗದಿಪಡಿಸಿರುವ ಪ್ರಕ್ರಿಯೆಯು ವಿವಾಹದ ಪ್ರಕ್ರಿಯೆಗಿಂತ ದೀರ್ಘವಾದದ್ದು. ಒಬ್ಬ ಮುಸ್ಲಿಮನು ಮೂರು ಬಾರಿ ತಲಾಕ್ ತಲಾಕ್ ತಲಾಕ್ ಎಂದು ಉಚ್ಚರಿಸುವ ಮೂಲಕ ಪತ್ನಿಗೆ ವಿಚ್ಛೇದನ ನೀಡಬಹುದು ಎಂಬ ಸಾರ್ವತ್ರಿಕ ಭಾವನೆ ಸಮಾಜದಲ್ಲಿದೆ. ತಲಾಕ್‌ಗೆ ಸಂಬಂಧಿಸಿದಂತೆ ಇನ್ನೂ ರೋಚಕವಾದ ಕೆಲವು ಸಂಗತಿಗಳು ಇತ್ತೀಚೆಗೆ ಬೆಳಕಿಗೆ ಬಂದಿವೆ. ಇತ್ತೀಚೆಗೆ ಕೆಲ ಮೌಲ್ವಿಗಳು ಮೊಬೈಲ್ ಫೋನ್, ಫೋನ್ ಅಥವಾ ಎಸ್‌ಎಂಎಸ್, ಅಥವಾ ಇ–ಮೇಲ್ ಮೂಲಕ ತಲಾಕ್ ಹೇಳಿದರೂ ಅದು ಸಿಂಧುವಾಗುತ್ತದೆ ಎಂದು ಫತ್ವಾ ಹೊರಡಿಸಿದ್ದಾರೆ. ಇದಕ್ಕೆ ಮಸಾಲೆ ಹಚ್ಚುವಂತಹ ಫತ್ವಾಗಳೂ ಇತ್ತೀಚೆಗೆ ಕೆಲವು ಮೌಲವಿಗಳಿಂದ ಬಂದಿವೆ. ನಿದ್ದೆಗಣ್ಣಿನಲ್ಲಿ ಅಥವಾ ಕುಡಿತದ ಅಮಲಿನಲ್ಲಿರುವಾಗ ತಲಾಕ್ ಹೇಳಿದರೂ ಅದು ಕ್ರಮಬದ್ಧವಾಗಿರುತ್ತದೆ ಎಂಬುದು ಈ ಪೈಕಿ ಹೆಚ್ಚು ತಮಾಷೆಗೆ ಕಾರಣವಾಗಿರುವಂತದ್ದು. ಬಾಲಿವುಡ್‌ನ ಕೆಲ ಸಿನಿಮಾಗಳಿಗೂ ಇದು ಒಳ್ಳೆಯ ಮಸಾಲೆ ಒದಗಿಸಿದೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಇಸ್ಲಾಮಿನ ದೃಷ್ಟಿಯಲ್ಲಿ ಕುಡಿತದ

ಮತ್ತಿನಲ್ಲಿ ಮಾಡುವ ನಮಾಜ್ ಕೂಡಾ ಸಿಂಧುವಲ್ಲ. ಹೀಗಿರುವಾಗ ಅಮಲಿನಲ್ಲಿ ನೀಡಿದ ತಲಾಖ್ ಹೇಗೆ ಕ್ರಮಬದ್ಧವಾಗುತ್ತದೆ ಎಂಬುದನ್ನು ಫತ್ವಾ ನೀಡಿದವರೇ ಹೇಳಬೇಕು. ಇಸ್ಲಾಮಿನ ಬಗ್ಗೆ ಮತ್ತು ಇಸ್ಲಾಮಿನ ಕೌಟುಂಬಿಕ ನಿಯಮಗಳ ಬಗ್ಗೆ ತಪ್ಪುತಿಳುವಳಿಕೆ ಮೂಡಿಸಲು ಕೆಲವು ಹಿತಾಸಕ್ತಿಗಳು ಪ್ರಯತ್ನಿಸುತ್ತಿವೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂತಹ ನಿಯಮಗಳನ್ನು ಸ್ಥಿಮಿತದಲ್ಲಿರುವ ಯಾವನೇ ವ್ಯಕ್ತಿ ಅಂಗೀಕರಿಸಲು ಸಾಧ್ಯವಿಲ್ಲ.

ಕೆಲವು ಪೂರ್ವಗ್ರಹಪೀಡಿತ ಮಾಧ್ಯಮಗಳು ಈ ವಿಷಯವನ್ನು ವೈಭವೀಕರಿಸಿ ಕಿಡಿಗೇಡಿತನ ಮೆರೆಯುತ್ತಿವೆ. ಮೊಟ್ಟ ಮೊದಲನೆಯದಾಗಿ ಮುಸ್ಲಿಮರ ಮದುವೆಗಳು ತಲಾಖ್‌ನಲ್ಲಿ ಅಂತ್ಯವಾಗುವುದು ತೀರಾ ಅಪರೂಪ. ಎರಡನೆಯದಾಗಿ, ಕೆಲವು ಮಾಧ್ಯಮಗಳು ತಮ್ಮ ಟಿಆರ್‌ಪಿ ಹೆಚ್ಚಿಸಿಕೊಳ್ಳಲು ಇಂತಹ ಪ್ರಕರಣಗಳನ್ನು ಸ್ವತಃ ಹುಟ್ಟುಹಾಕುತ್ತವೆ ಅಥವಾ ವೈಭವೀಕರಿಸುತ್ತವೆ ಎಂಬ ಅಂಶವನ್ನು ನಾವು ಮರೆಯಬಾರದು. ಅರೆಬರೆ ಜ್ಞಾನವಿರುವ ಧರ್ಮ ಪಂಡಿತರಿಂದ ಫತ್ವಾಗಳನ್ನು ಹೊರಡಿಸಿ ಶರಿಯತ್ ಮತ್ತು ಅದರ ವಿಧಿನಿಯಮಗಳಿಗೆ ಕೆಟ್ಟ ಹೆಸರು ತರುವ ಪ್ರಯತ್ನವನ್ನೂ ಅಲ್ಲಗಳೆಯಲಾಗದು. ಮೂರನೆಯದಾಗಿ, ಕೆಲವು ತಿಳುವಳಿಕೆಯಿಲ್ಲದ ಮುಸ್ಲಿಮ್ ಪುರುಷರು ದುಡುಕಿನಿಂದ ಒಂದೇ ಉಸಿರಿಗೆ ಮೂರು ತಲಾಕ್ ಹೇಳಿ ಒಂದು ಹೆಣ್ಣಿನ ಬದುಕನ್ನೂ ಇಸ್ಲಾಮ್ ಧರ್ಮದ ವರ್ಚಸ್ಸನ್ನೂ ಹಾಳು ಮಾಡಿ ಬಿಡುತ್ತಾರೆ. ಇದು ಇಸ್ಲಾಮ್‌ನಲ್ಲಿ ಇರುವ ತಲಾಖ್ ಎಂಬ ವಿಧಿಯನ್ನು ತೇಜೋವಧೆ ಮಾಡಲು ಆಹಾರ ಒದಗಿಸುತ್ತದೆ.

ಇಸ್ಲಾಮ್ ಧರ್ಮವು ಪುರುಷ ಮತ್ತು ಮಹಿಳೆಯ ವಿಭಿನ್ನ ಪ್ರಕೃತಿಯನ್ನು ಮಾನ್ಯ ಮಾಡುತ್ತದೆ. ನಿಕಾಹ್ ಅವರನ್ನು ಪತಿ, ಪತ್ನಿಯಾಗಿ ಒಂದುಗೂಡಿಸಿದರೂ ಪರಸ್ಪರ ಹೊಂದಾಣಿಕೆ ಸಾಧ್ಯವಾಗದಿದ್ದರೆ ಪ್ರತ್ಯೇಕವಾಗುವ ಅವಕಾಶವನ್ನೂ ಮಾನವರ ಸೃಷ್ಟಿಕರ್ತನಾದ ದೇವರು ಕಲ್ಪಿಸಿಕೊಟ್ಟಿದ್ದಾರೆ. ವಿಚ್ಛೇದನಕ್ಕೆ ಅವಕಾಶ ಕಲ್ಪಿಸದೇ ಇದ್ದರೆ ಕೆಲವು ದಂಪತಿಗಳ ಪಾಲಿಗೆ ಬದುಕು ನಿತ್ಯ ನರಕವಾಗಿ ಬಿಡುತ್ತಿತ್ತು ಎಂಬುದನ್ನು ಯಾರೂ ನಿರಾಕರಿಸಲಾರರು. ಪುರುಷ ತನ್ನ ಪತ್ನಿಯನ್ನು ಕೊಲ್ಲುವ ಅಥವಾ ಅನಪೇಕ್ಷಿತ ದಾಂಪತ್ಯದಿಂದ ಹೊರಬರಲಿಕ್ಕಾಗಿ ಮಹಿಳೆಯರು ಆತ್ಮಹತ್ಯೆಯ ಮೊರೆ ಹೋಗುವ ಸಾಧ್ಯತೆಯೂ ಇತ್ತು. ಪರಸ್ಪರರ ಅಭಿರುಚಿ, ಸ್ಥಾನಮಾನ ಮತ್ತು ಸ್ವಭಾವ ತದ್ವಿರುದ್ಧವಾಗಿದ್ದರೂ ಗಂಡು ಮತ್ತು ಹೆಣ್ಣು ಒಟ್ಟಾಗಿಯೇ ಜೀವಿಸಬೇಕೆಂಬ ನಿರ್ಬಂಧವನ್ನು ಇಸ್ಲಾಮ್ ಹೇರುವುದಿಲ್ಲ. ಇಂಥ ಸಂಬಂಧದಿಂದ ಗೌರವಯುತವಾಗಿ ಹೊರನಡೆಯಲು ಇಸ್ಲಾಮ್ ಕಲ್ಪಿಸಿರುವ ಅವಕಾಶವೇ ತಲಾಕ್. ಮದುವೆಯ ಬಂಧನದಿಂದ ಹೊರಬರಲು ಅವಕಾಶವೇ ನೀಡದ ಧರ್ಮಗಳಲ್ಲಿ ಮಹಿಳೆಯರು

ಕಿರುಕುಳ, ಹಿಂಸೆ ಮತ್ತು ಜೀವಂತ ಸುಡುವಂತಹ ಯಾತನೆಗಳನ್ನು ಅನುಭವಿಸಬೇಕಾಗುತ್ತದೆ.

ವಾಸ್ತವವೆಂದರೆ ಕಾಲಾನುಕ್ರಮದಲ್ಲಿ ಮುಸ್ಲಿಮ್ ಪುರುಷರು ತಲಾಕ್‌ನ ನಿಯಮವನ್ನು ವ್ಯಾಪಕವಾಗಿ ದುರ್ಬಳಕೆ ಮಾಡುತ್ತಾ ಬಂದಿದ್ದಾರೆ. ಇಸ್ಲಾಮೀ ಕಾನೂನುಗಳ ದುರ್ವ್ಯಾಖ್ಯಾನವು ಅದರ ದುರ್ಬಳಕೆ ಮತ್ತು ಸಮರ್ಥನೆಗೆ ಹಾದಿ ಮಾಡಿಕೊಟ್ಟಿದೆ. ಇಸ್ಲಾಮಿನ ದೃಷ್ಟಿಯಲ್ಲಿ ತಲಾಖ್ ಅಪ್ರಿಯ ಮತ್ತು ಅನಪೇಕ್ಷಿತ ದಾಂಪತ್ಯದಿಂದ ಬಿಡುಗಡೆ ಪಡೆಯುವ ಕಾನೂನುಸಮ್ಮತ, ಆದರೆ ಅಪ್ರಿಯವಾದ ಕ್ರಮ. ಆದ್ದರಿಂದಲೇ ಪವಿತ್ರ ಕುರ್‌ಆನ್ ತಲಾಕ್‌ಗೆ ಅನುಮತಿ ನೀಡಿದ್ದರೂ ಪ್ರವಾದಿ ಮುಹಮ್ಮದ್‌ರು "ಎಲ್ಲ ಸಮ್ಮತಾರ್ಹ ಕ್ರಮಗಳ ಪೈಕಿ ದೇವರಿಗೆ ಅತ್ಯಂತ ಅಪ್ರಿಯವಾದುದು ತಲಾಕ್ ಆಗಿದೆ" ಎಂದು ಹೇಳಿದ್ದರು.

ಪತಿಯು ಪತ್ನಿಗೆ ವಿಚ್ಛೇದನ ನೀಡುವ ಕ್ರಮವನ್ನು ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತದೆ:

> **"ತಲಾಕ್ (ವಿಚ್ಛೇದನ) ಎರಡು ಬಾರಿ (ಎರಡು ಹಂತಗಳಲ್ಲಿ). ಆ ಬಳಿಕ (ಪತಿಯು ಪತ್ನಿಯನ್ನು ಪತ್ನಿಯಾಗಿ) ಉತ್ತಮ ರೀತಿಯಲ್ಲಿ ಉಳಿಸಿಕೊಳ್ಳಬೇಕು ಅಥವಾ ಉದಾರವಾಗಿ ಬಿಡುಗಡೆಗೊಳಿಸಬೇಕು." (ಕುರ್‌ಆನ್ 2:229).**

ಮುಂದುವರಿಯುತ್ತಾ ಹೀಗೆ ಹೇಳಲಾಗಿದೆ:

> **"ಮತ್ತು ನೀವು ಅವರಿಗೆ (ಪುರುಷರು ಸ್ತ್ರೀಯರಿಗೆ) ಕೊಟ್ಟಿರುವ ಏನನ್ನೂ ಮರಳಿ ಪಡೆಯುವುದು ನಿಮ್ಮ ಪಾಲಿಗೆ ಸಮ್ಮತವಲ್ಲ ಅವರಿಬ್ಬರಿಗೂ ಅಲ್ಲಾಹನು ವಿಧಿಸಿರುವ ಮಿತಿಗಳನ್ನು ಪಾಲಿಸಲು ತಮಗೆ ಸಾಧ್ಯವಾಗಲಾರದೆಂಬ ಭಯವಿರುವ ಸ್ಥಿತಿಯ ಹೊರತು." (ಕುರ್‌ಆನ್ 2:229)**

ಮೇಲಿನ ಸೂಕ್ತಗಳನ್ನು ನಾಲ್ಕನೇ ಅಧ್ಯಾಯ (ಅನ್ನಿಸಾ)ದ 34 ಮತ್ತು 35ನೇ ಸೂಕ್ತಗಳ ಜತೆಗಿಟ್ಟು ಓದಿದಾಗ, ಇಸ್ಲಾಮ್‌ನ ಪ್ರಕಾರ ವಿವಾಹ ವಿಚ್ಛೇದನಕ್ಕೆ ಏಳು ಹಂತದ ಪ್ರಕ್ರಿಯೆಗಳಿರುವುದು ಸ್ಪಷ್ಟವಾಗುತ್ತದೆ. ಆದರೆ ಈ ವಿಧಿವಿಧಾನಗಳನ್ನು ಬದಿಗೊತ್ತಿ ಒಂದೇ ಉಸಿರಿಗೆ ಮೂರು ಬಾರಿ ಹೇಳುವ ತಲಾಕ್‌ಗೂ ಖಾಜಿಗಳು (ನ್ಯಾಯಮೂರ್ತಿಗಳು) ಮಾನ್ಯತೆ ನೀಡುತ್ತಿರುವುದು ದುರದೃಷ್ಟಕರ.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ), ಈ ರೀತಿ ವಿಚ್ಛೇದನ ಪಡೆಯುವ ಜನರು ಸೃಷ್ಟಿಕರ್ತನ ನಿಯಮಗಳ ಜತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಘೋಷಿಸಿದ್ದರು. ಪ್ರವಾದಿವರ್ಯರ ನಿಕಟ ಸಂಗಾತಿಯಾಗಿದ್ದ ಉಮರ್ ತಮ್ಮ ಆಡಳಿತಾವಧಿಯಲ್ಲಿ ಹೀಗೆ ವಿಚ್ಛೇದನ ಪಡೆದವರನ್ನು ದಂಡನೆಗೂ ಗುರಿಪಡಿಸುತ್ತಿದ್ದರು.

# ಖುಲಾ

## ಮಹಿಳೆಯರಿಗೆ ವಿಚ್ಛೇದನದ ಹಕ್ಕು

ದಾಂಪತ್ಯ ಜೀವನವನ್ನು ಮುಂದುವರಿಸಲು ಸಾಧ್ಯವಿಲ್ಲ ಎಂಬ ಸ್ಥಿತಿ ನಿರ್ಮಾಣವಾದಾಗ ವಿಚ್ಛೇದನ ಪಡೆಯುವ ಹಕ್ಕನ್ನು ಇಸ್ಲಾಮ್ ಮಹಿಳೆಯರಿಗೂ ನೀಡಿದೆ. ಪತಿಯು ವಿಚ್ಛೇದನ ನೀಡಲು ನಿರಾಕರಿಸಿದರೆ ಆತನಿಂದ ವಿಚ್ಛೇದನ ಕೊಡಿಸುವಂತೆ ಪತ್ನಿಯು ಖಾಜಿ (ನ್ಯಾಯಮೂರ್ತಿ)ಯ ಮೊರೆ ಹೋಗಬಹುದು.

ಆದರೆ, ಬೇರ್ಪಡುವ ಪ್ರಕ್ರಿಯೆ ದಿಢೀರನೆ ನೆರವೇರುವುದಿಲ್ಲ. ಅದಕ್ಕೆ ಇದ್ದತ್ ಅಥವಾ ನಿರೀಕ್ಷಣಾ ಅವಧಿ ಪೂರೈಸಬೇಕು. ಪ್ರೊಫೆಸರ್ ಕೌಲ್ಸನ್‌ರ ಪ್ರಕಾರ ಇದು 'ಕುರ್‌ಆನ್‌ನ ಅತ್ಯಂತ ಶ್ರೇಷ್ಠ ಸಂಶೋಧನೆಯಾಗಿದೆ'. ಈ ನಿರೀಕ್ಷಣಾ ಅವಧಿಯು ಪತ್ನಿ ಮೂರು ಋತುಚಕ್ರದ ಅವಧಿಯನ್ನು ಪೂರ್ಣಗೊಳಿಸುವವರೆಗೆ ಅಥವಾ ಗರ್ಭಿಣಿಯಾಗಿದ್ದರೆ ಮಗುವಿಗೆ ಜನ್ಮ ನೀಡುವವರೆಗೂ ಇರುತ್ತದೆ.

ಈ ಅವಧಿಯಲ್ಲಿ ಮಹಿಳೆಯ ಪೋಷಣೆಯ ಜವಾಬ್ದಾರಿಯೂ ಪತಿಯ ಮೇಲಿರುತ್ತದೆ. ಈ ಅವಧಿಯನ್ನು ಸಂಧಾನದ ಅವಧಿಯಾಗಿಯೂ ಬಳಸಿಕೊಳ್ಳಬಹುದು. ಪ್ರವಾದಿವರ್ಯರನ್ನುದ್ದೇಶಿಸಿ ಪವಿತ್ರ ಕುರ್‌ಆನ್ ಹೀಗೆ ಹೇಳುತ್ತದೆ:

> **"ಪ್ರವಾದಿವರ್ಯರೇ, (ವಿಶ್ವಾಸಿಗಳೊಡನೆ ಹೇಳಿರಿ;) ನೀವು ಮಹಿಳೆಯರಿಗೆ (ಪತ್ನಿಯರಿಗೆ) ತಲಾಕ್ ನೀಡುವಾಗ (ವಿಚ್ಛೇದಿಸುವಾಗ) ಅವರ (ನೈರ್ಮಲ್ಯದ) ಅವಧಿಯಲ್ಲಿ ತಲಾಕ್ ನೀಡಿರಿ ಮತ್ತು ಅವಧಿಯ ದಿನಗಳನ್ನು ಸರಿಯಾಗಿ ಎಣಿಸಿರಿ. ಮತ್ತು ನಿಮ್ಮೊಡೆಯನಾದ ಅಲ್ಲಾಹನಿಗೆ ಅಂಜಿರಿ. ಅವರು ಸ್ಪಷ್ಟವಾದ ಅಶ್ಲೀಲ ಕೃತ್ಯವನ್ನು ಎಸಗಿರದಿದ್ದರೆ ಅವರನ್ನು (ಇದ್ದತ್ ಅವಧಿಯಲ್ಲಿ) ಅವರ ಮನೆಗಳಿಂದ ಹೊರ ಹಾಕಬೇಡಿ ಮತ್ತು ಸ್ವತಃ ಅವರೂ ಹೊರಹೋಗದಿರಲಿ." (ಕುರ್‌ಆನ್ 65:1)**

ಪತಿಯಂದಿರಿಗೆ ಕುರ್‌ಆನ್‌ನ ಎಚ್ಚರಿಕೆ:

ತಾನು ವಿಚ್ಛೇದಿಸಿದ ಪತ್ನಿಯರು ಬೇರೆ ವಿವಾಹವಾಗಲು ಹೊರಟಾಗ ಅದನ್ನು ತಡೆಯಬಾರದೆಂಬುದು ಪತಿಯಂದಿರಿಗೆ ಕುರ್‌ಆನ್ ನೀಡಿರುವ ಇನ್ನೊಂದು ಎಚ್ಚರಿಕೆಯಾಗಿದೆ:

> **"ಮತ್ತು ನೀವು ಪತ್ನಿಯರಿಗೆ ತಲಾಕ್ ನೀಡಿರುವಾಗ, ಅವರು ತಮ್ಮ ಅವಧಿಯನ್ನು ಪೂರ್ತಿಗೊಳಿಸಿದ ಬಳಿಕ ನಿಯಮಾನುಸಾರ, ಪರಸ್ಪರ ಒಪ್ಪಿಗೆಯೊಂದಿಗೆ ತಮ್ಮ (ಆಯ್ಕೆಯ) ಬೇರೆ ಪತ್ನಿಯರನ್ನು ವಿವಾಹವಾಗುವುದಕ್ಕೆ ನೀವು ತಡೆಯೊಡ್ಡಬೇಡಿ. ನಿಮ್ಮ ಪೈಕಿ ಅಲ್ಲಾಹನಲ್ಲಿ ಮತ್ತು ಅಂತಿಮ ದಿನದಲ್ಲಿ ನಂಬಿಕೆಯುಳ್ಳವರಿಗಾಗಿ ಇದನ್ನು ಬೋಧಿಸಲಾಗುತ್ತಿದೆ. ಇದು ನಿಮ್ಮ ಪಾಲಿಗೆ ಹೆಚ್ಚು ಶುದ್ಧ ಹಾಗೂ ನಿರ್ಮಲ ಧೋರಣೆಯಾಗಿದೆ. ಅಲ್ಲಾಹನು ಬಲ್ಲನು. ಆದರೆ ನೀವು ಅರಿತಿಲ್ಲ." (ಕುರ್‌ಆನ್ 2:232)**

## ಫತ್ವಾ

ಫತ್ವಾ ಇಸ್ಲಾಮೀ ಧರ್ಮಶಾಸ್ತ್ರದ ಪ್ರಕಾರ ಒಂದು ನ್ಯಾಯಿಕ ಅಭಿಪ್ರಾಯ. ಅದರೆ, ಹೆಚ್ಚಿನವರು ಇದನ್ನು ಧಾರ್ಮಿಕ ನ್ಯಾಯಾಲಯದ ಆದೇಶ ಎಂದೇ ಭಾವಿಸುತ್ತಾರೆ. ಕೆಲವೊಂದು ಹಾಸ್ಯಾಸ್ಪದ ಫತ್ವಾಗಳಿಗೆ ನೀಡಲಾದ ಭಾರಿ ಪ್ರಚಾರವೇ ಇದಕ್ಕೆ ಕಾರಣ. ಮುಸ್ಲಿಮರು ಇಂಥ ಫತ್ವಾಗಳಿಗೆ ಬದ್ಧರಾಗಿ ಬದುಕು ಸಾಗಿಸುತ್ತಾರೆ ಎಂಬ ಭಾವನೆ ಇಂದು ಜನಸಾಮಾನ್ಯರಲ್ಲಿ ಬೇರೂರಿದೆ. ಆದರೆ ವಾಸ್ತವವೆಂದರೆ ಮುಸ್ಲಿಮರು ಯಾವುದೇ ವಿಷಯದ ಬಗ್ಗೆ ಕಾನೂನಿನ ಅಭಿಪ್ರಾಯವನ್ನು ಪಡೆಯಲು ಧರ್ಮಪಂಡಿತರ ಬಳಿಗೆ ಹೋಗುವುದು ತೀರಾ ಅಪರೂಪ.

ಒಂದು ವೇಳೆ ನಿರ್ದಿಷ್ಟ ಫತ್ವಾ ಅರೋಚಕ ಎಂದು ತೋರಿದಲ್ಲಿ ಅಥವಾ ನ್ಯಾಯಸಮ್ಮತವಲ್ಲ ಎಂದು ಮೇಲ್ನೋಟಕ್ಕೆ ಕಂಡು ಬಂದರೂ ಅದು ವಿವಾದಕ್ಕೆ ಕಾರಣವಾಗಬೇಕಾದದ್ದಿಲ್ಲ. ಆದರೆ ಇಸ್ಲಾಮೀ ಧಾರ್ಮಿಕ ವಿಧಿಗಳನ್ನು ತೇಜೋವಧೆಗೆ ಗುರಿಪಡಿಸುವ ಏಕೈಕ ಉದ್ದೇಶದಿಂದ ಮಾಧ್ಯಮಗಳು ಕೆಲವೊಮ್ಮೆ ಇಂತಹ ತರ್ಕಹೀನ ಮತ್ತು ವಿಚಿತ್ರ ಫತ್ವಾಗಳಿಗೆ ಮಹತ್ವ ನೀಡುತ್ತವೆ. ಭಾರತದಲ್ಲಿ ಸಹಸ್ರಾರು ಮದ್ರಸಾಗಳು ಮತ್ತು ಪಂಚಾಯ್ತಿಗಳು ಇರುವ ಕಾರಣ ನಿರ್ದಿಷ್ಟ ವಿಷಯದ ಬಗ್ಗೆ ಅಸಂಖ್ಯ ಅಭಿಪ್ರಾಯಗಳು ಇರುವುದು ಸಾಧ್ಯ. ವಿಚಿತ್ರವೆಂದರೆ ಈ ಪೈಕಿ ಕೆಲವು ಫತ್ವಾಗಳು ಪೂರ್ವಗ್ರಹಪೀಡಿತ

ಮಾಧ್ಯಮಗಳ ಕಣ್ಣಿಗೆ ಬಿದ್ದು ಅನಗತ್ಯ ಪ್ರಚಾರ ಪಡೆದುಕೊಳ್ಳುತ್ತವೆ. ಈ ಫತ್ವಾಗಳು ನ್ಯಾಯಾಲಯದ ತೀರ್ಪುಗಳೇನೋ ಎಂಬಂತೆ ಪ್ರಚಾರ ಗಿಟ್ಟಿಸಿ, ಮುಸ್ಲಿಮ್ ಸಮುದಾಯದ ಸಂಪ್ರದಾಯಶರಣತೆಯ ಪ್ರತೀಕವೆಂಬಂತೆ ಬಿಂಬಿಸಲ್ಪಡುತ್ತವೆ. ಈ ಅಭಿಪ್ರಾಯಗಳಿಗೆ ಮುಸ್ಲಿಮರು ಭಾರಿ ಮನ್ನಣೆ ನೀಡುತ್ತಾರೆ ಎಂಬ ನಂಬಿಕೆಯೂ ಬಲವಾಗಿ ಬೇರೂರಿದೆ.

ಫತ್ವಾ ಎಂಬುದು ನ್ಯಾಯಾಂಗದ ಆದೇಶವಲ್ಲ. ಎ ಶಾರ್ಟರ್ ಎನ್‌ಸೈಕ್ಲೊಪೀಡಿಯಾ ಆಫ್ ಇಸ್ಲಾಮ್ ಫತ್ವಾಕ್ಕೆ ನೀಡಿರುವ ವ್ಯಾಖ್ಯಾನ ಇಲ್ಲಿ ಗಮನಾರ್ಹ:

> “ಇದು ಮುಫ್ತಿಯೊಬ್ಬರು ಇಲ್ಲವೆ ನ್ಯಾಯವೇತ್ತರೊಬ್ಬರು ಖಾಸಗಿ ವ್ಯಕ್ತಿ ಇಲ್ಲವೆ ನ್ಯಾಯಾಲಯ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿ ಪ್ರಶ್ನೆ ಮುಂದಿಟ್ಟಾಗ ನೀಡಿದ ಅಧಿಕೃತ ಕಾನೂನು ಅಭಿಪ್ರಾಯ.”

ಫತ್ವಾ ಎಂಬುದು ಕೇವಲ ಒಂದು ಅಭಿಪ್ರಾಯವಾಗಿದ್ದು, ಅದರ ಅನುಷ್ಠಾನ ಕಡ್ಡಾಯವಲ್ಲ. ಅದನ್ನು ಒಪ್ಪಲೂಬಹುದು ಅಥವಾ ನಿರಾಕರಿಸಲೂ ಬಹುದು. ಅಭಿಪ್ರಾಯವನ್ನು ನೀಡುವವರು ಕೂಡಾ ಅದನ್ನು ಪಾಲಿಸಬೇಕು ಎಂದು ತಾಕೀತು ಮಾಡುವುದಿಲ್ಲ. ‘ಇದನ್ನು ಸ್ವೀಕರಿಸಿ ಅಥವಾ ಕೈಬಿಡಿ. ಅದು ನಿಮ್ಮ ಇಚ್ಛೆ’, ಎಂದು ಅವರೇ ಸಲಹೆ ನೀಡುತ್ತಾರೆ. ಸಂಕೀರ್ಣ ಸಮಸ್ಯೆಗಳು ಎದುರಾದಾಗ ಜನರು ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಹಲವು ಧಾರ್ಮಿಕ ಸಂಸ್ಥೆಗಳಿಂದ ಅಭಿಪ್ರಾಯ ಕೇಳುತ್ತಾರೆ. ಹಲವೊಮ್ಮೆ ಈ ಅಭಿಪ್ರಾಯಗಳು ತದ್ವಿರುದ್ಧವಾಗಿರುತ್ತವೆ ಮತ್ತು ಇದು ಆಶ್ಚರ್ಯದ ವಿಷಯವಲ್ಲ.

# ಕುಫ್ರ್ ಮತ್ತು ಕಾಫಿರ್

ಕಾಫಿರ್ ಎಂಬ ಪದದ ಬಗ್ಗೆ ಸಾಮಾನ್ಯವಾಗಿ ಆಕ್ಷೇಪಗಳು ಕೇಳಿ ಬರುತ್ತವೆ. ಮುಸ್ಲಿಮೇತರರನ್ನು ಹೀಯಾಳಿಸಲು ಇದನ್ನು ಬಳಸಲಾಗುತ್ತದೆ ಎಂದು ಹೇಳುವ ಮೂಲಕ ಮಾಧ್ಯಮದ ಒಂದು ವರ್ಗ ಇದನ್ನು ವಿವಾದದ ವಸ್ತುವಾಗಿಸಿಬಿಟ್ಟಿದೆ. ಈ ಪದ ಮತ್ತು ಅದರ ಪರಿಣಾಮಗಳು ವ್ಯಾಪಕವಾಗಿ ಅಪಾರ್ಥಕ್ಕೊಳಗಾಗಿವೆ.

ಕಾಫಿರ್ ಎಂಬುದು ಕುಫ್ರ್ ಎಂಬ ಮೂಲ ಪದದಿಂದ ಹುಟ್ಟಿದ್ದು ಕುಫ್ರ್‌ನ ಅರ್ಥ ಮರೆ ಮಾಚುವುದು, ಬಚ್ಚಿಡುವುದು ಎಂದಾಗಿದೆ. ರಾತ್ರಿಯ ಕತ್ತಲು ಎಲ್ಲವನ್ನು ಬಚ್ಚಿಡುವ ಕಾರಣ ರಾತ್ರಿಯನ್ನು ಕಾಫಿರ್ ಎಂದು ಕರೆಯಲಾಗುತ್ತದೆ. ಅದೇ ರೀತಿ ದಟ್ಟ ಮೋಡವು ಹೊಳೆಯುವ ಆಗಸ, ಸೂರ್ಯನನ್ನು ಮರೆಮಾಚುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಕಾಫಿರ್ ಎಂದು ಕರೆಯಲಾಗುತ್ತದೆ. ರೈತ ಮಣ್ಣಿನಲ್ಲಿ ಬೀಜವನ್ನು ಮರೆಮಾಚುತ್ತಾನೆ, ಅಡಗಿಸಿಡುತ್ತಾನೆ ಎಂಬ ಕಾರಣದಿಂದ ರೈತನನ್ನು ಕಾಫಿರ್ ಎಂದು ಕರೆಯಲಾಗುತ್ತದೆ. ಈ ಪದಗಳಿಗೆ ಯಾವುದೇ ನಕಾರಾತ್ಮಕ ಬಣ್ಣ ಇಲ್ಲ. ಆದ್ದರಿಂದ ಇದು ಯಾರನ್ನೂ ಕುಪಿತಗೊಳಿಸುವಂತಹದ್ದಲ್ಲ. ಕಾಫಿರ್ ಎಂಬುದು ಮುಸ್ಲಿಮೇತರರು ಎಂದು ಹೇಳುವುದಕ್ಕೆ ಪರ್ಯಾಯವಲ್ಲ. ಅದೇ ರೀತಿ ಎಲ್ಲ ಮುಸ್ಲಿಮೇತರರು ಕಾಫಿರ್ ಅಲ್ಲ. ಧಾರ್ಮಿಕ ಪಾರಿಭಾಷಿಕದ ಪ್ರಕಾರ ಕಾಫಿರ್ ಎಂದರೆ ಏನನ್ನಾದರೂ ತಿರಸ್ಕರಿಸುವ, ನಿರಾಕರಿಸುವ ವ್ಯಕ್ತಿ. ಅಂದರೆ ಒಂದು ಧರ್ಮದ ಜನರು ಇನ್ನೊಂದು ಧರ್ಮದ ದೃಷ್ಟಿಯಲ್ಲಿ ಕಾಫಿರ್ ಆಗುತ್ತಾರೆ. ಬಡವರು ಮತ್ತು ಬಂಡವಾಳಶಾಹಿಗಳು ಪರಸ್ಪರರ ಮಟ್ಟಿಗೆ ಕಾಫಿರ್‌ಗಳು. ಆದರೂ, ಇಸ್ಲಾಮೀ ಪಾರಿಭಾಷಿಕದ ಪ್ರಕಾರ ಅಲ್ಲಾಹನನ್ನು ಹೊರತು ಪಡಿಸಿ ಯಾವುದೇ ದೇವರನ್ನು ಪೂಜಿಸಲು ನಿರಾಕರಿಸುವವನನ್ನು ಸತ್ಯವಿಶ್ವಾಸಿ ಎಂದು ಕರೆಯಲಾಗುತ್ತದೆ. ಕಾಫಿರ್ ಎಂದರೆ ನಿರಾಕರಿಸುವವ ಎಂದರ್ಥ. ಆದರೆ ಇದು ಯಾವ ರೀತಿಯಲ್ಲೂ ಒಂದು ಬೈಗುಳವಲ್ಲ.

ಧಾರ್ಮಿಕ ವಿಷಯಗಳಲ್ಲಿ ದೇವರು ಮನುಷ್ಯನಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು.

> **"ಧರ್ಮದಲ್ಲಿ ಬಲವಂತವಿಲ್ಲ. ಖಂಡಿತವಾಗಿಯೂ ಸರದಾರಿಯು ತಪ್ಪು ದಾರಿಗಳಿಂದ ಪ್ರತ್ಯೇಕವಾಗಿದೆ. ಎಲ್ಲ ಮಿಥ್ಯ ಶಕ್ತಿಗಳನ್ನು ಧಿಕ್ಕರಿಸಿ ಅಲ್ಲಾಹನಲ್ಲಿ ನಂಬಿಕೆ ಇಟ್ಟವನು ಬಲಿಷ್ಠ ಆಶ್ರಯವೊಂದನ್ನು ಅವಲಂಬಿಸಿದನು. ಅದು ಎಂದಿಗೂ ಮುರಿಯದ ಆಶ್ರಯವಾಗಿದೆ ಮತ್ತು ಅಲ್ಲಾಹನು ಎಲ್ಲವನ್ನೂ ಕೇಳುವವನೂ ಎಲ್ಲವನ್ನೂ ಬಲ್ಲವನಾಗಿದ್ದಾನೆ." (ಕುರ್‌ಆನ್ 2: 256)**

ಏಕದೇವನಲ್ಲಿ ಮತ್ತು ಆತನ ಸಂದೇಶವಾಹಕರಲ್ಲಿ ವಿಶ್ವಾಸವಿಡದ ವ್ಯಕ್ತಿಗಳನ್ನು ನಿಂದಿಸಲು ಇಸ್ಲಾಮ್ ಮತ್ತು ಅದರ ಅನುಯಾಯಿಗಳಾದ ಮುಸ್ಲಿಮರಿಗೆ ಅವಕಾಶವಿಲ್ಲ.

## ಮುಸ್ಲಿಮರು ಏಕೆ ಮಾಂಸಾಹಾರ ಸೇವಿಸುತ್ತಾರೆ ?

ಮಾನವಕುಲವು ಪರಂಪರಾಗತವಾಗಿ ಆಹಾರಕ್ಕೋಸ್ಕರ ಎರಡು ಮೂಲಗಳನ್ನು ನೆಚ್ಚಿಕೊಂಡಿದೆ. ಮೊದಲನೆಯದು: ಕೃಷಿ, ಉದ್ಯಾನ, ತೋಟ. ಎರಡನೆಯದು: ಪ್ರಾಣಿಗಳು. ಅದು ಭೂಮಿಯ ಮೇಲೆ ಇರುವ ಜಾನುವಾರುಗಳಾಗಿರಬಹುದು ಅಥವಾ ಸಮುದ್ರದಲ್ಲಿ ಸಿಗುವ ಜೀವಿಗಳಾಗಿರಬಹುದು. ಕೇವಲ ಕೃಷಿಯ ಮೂಲದಿಂದ ಬಂದ ಆಹಾರವನ್ನು ಸೇವಿಸಿ ಬದುಕುವವರಿಗೆ ಸಸ್ಯಾಹಾರಿಗಳೆಂದೂ ಪೌಷ್ಟಿಕಾಂಶವನ್ನು ಪ್ರಾಣಿಗಳಿಂದ ಪಡೆಯುವವರನ್ನು ಮಾಂಸಾಹಾರಿಗಳೆಂದೂ ಕರೆಯಲಾಗುತ್ತದೆ. ಮೂರನೆಯ ಇನ್ನೊಂದು ವರ್ಗವನ್ನು 'ವೇಗನ್'ಗಳೆಂದು ಕರೆಯಲಾಗುತ್ತದೆ. ಇವರು ಮಾಂಸಾಹಾರವನ್ನು ಮಾತ್ರವಲ್ಲ, ಪ್ರಾಣಿ ಮೂಲದಿಂದ ಬರುವ ಯಾವುದೇ ಉತ್ಪನ್ನವನ್ನು ಹಾಲು, ಜೇನು, ಮೊಟ್ಟೆ ಮತ್ತು ಯಾವುದೇ ರೀತಿಯ ಡೈರಿ ಉತ್ಪನ್ನವನ್ನು ಸೇವಿಸುವುದಿಲ್ಲ.

ಸಸ್ಯಾಹಾರ ಮತ್ತು ವೇಗನಿಸಮ್ ಇತ್ತೀಚಿನ ವರ್ಷಗಳಲ್ಲಿ ಆಂದೋಲನದ ರೂಪ ತಾಳಿವೆ. ಪ್ರಾಣಿಗಳ ಬದುಕುವ ಹಕ್ಕನ್ನು ಗೌರವಿಸಬೇಕು ಮತ್ತು ಆಹಾರಕ್ಕಾಗಿಯಾಗಲೀ ಇತರ ಯಾವುದೇ ಲಾಭಕ್ಕಾಗಿಯಾಗಲಿ ಅವುಗಳನ್ನು ಕೊಲ್ಲಬಾರದು ಎಂಬ ಸಿದ್ಧಾಂತದ ಮೇಲೆ ಇದು ನಿಂತಿದೆ.

ಕ್ರೈಸ್ತ ಮತ್ತು ಯಹೂದಿ ಧರ್ಮದಂತೆಯೇ ಇಸ್ಲಾಮ್ ಕೂಡಾ ಗ್ರಾಮೀಣ ಪರಿಸರ ಮತ್ತು ಸಮಾಜದಲ್ಲಿ ಆವಿರ್ಭವಿಸಿತು ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಈ ಮೂರು ಪ್ರಮುಖ ಧರ್ಮಗಳು ಅಂಗೀಕರಿಸುವ ಪ್ರವಾದಿಗಳ ಶೃಂಖಲೆಯು ಪ್ಯಾಲೇಸ್ತೈನ್ ಮೂಲದಿಂದ ಬಂದಿದ್ದು, ಒಣಭೂಮಿಯಲ್ಲೇ ಈ ಧರ್ಮಗಳು ಬೆಳವಣಿಗೆ ಕಂಡವು. ಅವರ ಮಟ್ಟಿಗೆ ಪ್ರಾಣಿ ಸಾಕಣೆ ಪ್ರಮುಖ ಉದ್ಯೋಗವಾಗಿತ್ತು. ಈ ಮೂರು ಧರ್ಮದ ಅನುಯಾಯಿಗಳು ಪ್ರಾಣಿಗಳನ್ನೇ ಪೌಷ್ಟಿಕಾಂಶದ ಮೂಲವಾಗಿಸಿಕೊಂಡಿದ್ದ ಜನರ ಆಹಾರ ಸಂಪ್ರದಾಯವನ್ನು ಬಳುವಳಿಯಾಗಿ ಪಡೆದುಕೊಂಡರು. ಆದರೆ ಈ ಧರ್ಮಗಳು ಪ್ರಾಣಿಗಳನ್ನು ಬೇಟೆಯಾಡುವುದು ಅಥವಾ ಕೊಲ್ಲುವುದನ್ನು

ಕಡ್ಡಾಯಗೊಳಿಸಿತೆಂದೋ ಮಾಂಸಾಹಾರವನ್ನು ಆಹಾರಕ್ರಮದ ಕಡ್ಡಾಯ ಭಾಗವಾಗಿ ಮಾರ್ಪಡಿಸಿತೆಂದೋ ಹೇಳಲಾಗದು.

ಎರಡನೆಯದಾಗಿ ಬಹುತೇಕ ಧರ್ಮಗಳು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದನ್ನು ಒಪ್ಪಿಕೊಂಡಿವೆ. ಆದರೆ ಕೆಲವು ಧರ್ಮಗಳು ಇದನ್ನು ಅನಾಗರಿಕವೆಂದು ಹೇಳದಿದ್ದರೂ ಅನೈತಿಕ ಎಂದು ಭಾವಿಸುತ್ತವೆ. ಇಷ್ಟಾಗಿಯೂ ಮಾನವೀಯತೆ ಮತ್ತು ಅಂತಃಕರಣವನ್ನು ಆಹಾರಕ್ರಮದ ಜತೆಗೆ ಸಮೀಕರಿಸಲಾಗದು. ಒಬ್ಬ ಮಾಂಸಾಹಾರಿಯು ಉದಾರಿಯೂ ಸಹಾನುಭೂತಿಯುಳ್ಳ ವ್ಯಕ್ತಿಯೂ ಒಬ್ಬ ಶುದ್ಧ ಸಸ್ಯಾಹಾರಿಯು ಕ್ರೂರಿಯೂ ದುಷ್ಟನೂ ಆಗಿರಲು ಸಾಧ್ಯವಿದೆ.

ಮೂರನೆಯದಾಗಿ, ಆಧುನಿಕ ಸಂಶೋಧಕರು ಸಸ್ಯಗಳು ಕೂಡಾ ಜೀವ ಹೊಂದಿದ್ದು ಅವುಗಳಿಗೂ ನೋವಾಗುತ್ತದೆ, ಸಂಗೀತ ಮತ್ತಿತರ ಬಾಹ್ಯ ಪ್ರಭಾವಗಳಿಗೆ ಪ್ರತಿಕ್ರಿಯಿಸುವ ಸಾಮರ್ಥ್ಯ ಹೊಂದಿವೆ, ಅವುಗಳಿಗೂ ಸಂತೋಷ ಮತ್ತು ದುಃಖವಾಗುತ್ತದೆ ಎಂದೂ ಬಾಯಾರಿದಾಗ ಅಳುತ್ತವೆ ಎಂದೂ ಕಂಡು ಕೊಂಡಿದ್ದಾರೆ. ಸಸ್ಯಗಳು ಬಾಯಾರಿಕೆಯಾದಾಗ ಅಳುವುದನ್ನು ದಾಖಲಿಸುವ ಯಂತ್ರವನ್ನು ಅಮೆರಿಕದ ರೈತರು ಸಂಶೋಧನೆ ಮಾಡಿದ್ದು, ಶಬ್ಧಸಂವೇದಿಯಾದ ನೀರಾವರಿ ಪದ್ಧತಿಯನ್ನು ಆವಿಷ್ಕರಿಸುವ ಹಂತದಲ್ಲಿದ್ದಾರೆ.

ಭೂಮಿಯ ಮೇಲೆ ಮನುಷ್ಯನೇ ಶ್ರೇಷ್ಠ ಜೀವಿಯಾಗಿದ್ದು ತನ್ನ ಅನುಕೂಲಕ್ಕಾಗಿ ಪ್ರಕೃತಿಯಲ್ಲಿರುವ ಸಂಪನ್ಮೂಲಗಳನ್ನು ಯುಕ್ತ ರೀತಿಯಲ್ಲಿ ಬಳಸಲು ಆತನಿಗೆ ಹಕ್ಕಿದೆ ಎಂಬುದು ಇಸ್ಲಾಮಿನ ನಿಲುವು. ಆದರೆ, ಯಾವುದನ್ನೂ ಹಾಳು ಮಾಡದೆ ಉಪಯೋಗಿಸಬೇಕೆಂದು ಆತನಿಗೆ ಆದೇಶಿಸಲಾಗಿದೆ. ಆಧುನಿಕ ಪಾರಿಭಾಷಿಕದಲ್ಲಿ ಇದನ್ನು ಸುಸ್ಥಿರ ಬಳಕೆ ಎಂದು ಕರೆಯಲಾಗುತ್ತದೆ. ಇದರ ಪ್ರಕಾರ ಪ್ರಕೃತಿಯು ಸಹಜವಾಗಿಯೇ ಮರುಪೂರಣಗೊಳಿಸಲು ಸಾಧ್ಯವಿರುವಂತೆ ನಾವು ಸಂಪನ್ಮೂಲಗಳನ್ನು ಬಳಸಬೇಕು.

ಮನುಷ್ಯನು ಭೂಮಿಯ ಮೇಲಿರುವ ಮತ್ತು ಅದು ಉತ್ಪಾದಿಸುವ ಎಲ್ಲ ವಸ್ತುಗಳ ಸುಪರ್ದುದಾರನಂತೆ ವರ್ತಿಸಬೇಕೆಂಬುದು ಇಸ್ಲಾಮಿನ ನಿಲುವಾಗಿದೆ. ಭೂಮಿಯ ಮೇಲಿರುವ ಪ್ರತಿಯೊಂದನ್ನೂ ಸೃಷ್ಟಿಸಿರುವ ದೇವರಿಗೆ ಅದರ ಒಡೆತನವೂ ಸೇರಿದೆ. ಮನುಷ್ಯನು ಸುಪರ್ದುದಾರನೆಂಬ ನೆಲೆಯಲ್ಲಿ ಈ ಸಂಪನ್ಮೂಲವನ್ನು ತನ್ನ ಅಗತ್ಯಗಳ ಈಡೇರಿಕೆಗಾಗಿ ಬಳಸಬೇಕೇ ಹೊರತು ತನ್ನ ದುರಾಸೆಯನ್ನು ಈಡೇರಿಸಲಿಕ್ಕಾಗಿ ಸಂಪನ್ಮೂಲಗಳನ್ನು ಶೇಖರಿಸಬಾರದೆಂಬುದು ಇಸ್ಲಾಮಿನ ವಾದ.

ಕುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ.

> **"ವಿಶ್ವಾಸಿಗಳೇ, ಪ್ರತಿಜ್ಞೆಗಳನ್ನು ಪಾಲಿಸಿರಿ. ನಾಲ್ಕು ಕಾಲಿನ ಜಾನುವಾರುಗಳನ್ನು ನಿಮ್ಮ ಪಾಲಿಗೆ ಸಮ್ಮತಗೊಳಿಸಲಾಗಿದೆ (ಪ್ರತ್ಯೇಕವಾಗಿ) ನಿಮಗೆ ತಿಳಿಸಲಾಗುವವುಗಳ ಹೊರತು." (ಕುರ್‌ಆನ್ 5:1)**

ಇನ್ನೊಂದೆಡೆ ಕುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ:

> **"ಜಾನುವಾರುಗಳಲ್ಲೂ ನಿಮಗೆ ಖಂಡಿತ ಪಾಠವಿದೆ. ಅವುಗಳ ಹೊಟ್ಟೆಯಲ್ಲಿರುವುದನ್ನು (ಹಾಲನ್ನು) ನಾವು ನಿಮಗೆ ಕುಡಿಸುತ್ತೇವೆ. ಅವುಗಳಲ್ಲಿ ನಿಮಗೆ (ಇತರ) ಹಲವಾರು ಪ್ರಯೋಜನಗಳಿವೆ ಮತ್ತು ಅವುಗಳಲ್ಲಿ (ಕೆಲವನ್ನು) ನೀವು ತಿನ್ನುತ್ತೀರಿ." (ಕುರ್‌ಆನ್ 23:21).**

ಮಾಂಸ ಅಥವಾ ಪ್ರಾಣಿಗಳ ಪ್ರೊಟೀನ್ ಸಮಗ್ರ ಆಹಾರವಾಗಿದ್ದು ಮಾನವ ದೇಹಕ್ಕೆ ಅಗತ್ಯವಿರುವ ಎಲ್ಲ ಎಂಟು ರೀತಿಯ ಅಮೈನೊ ಆ್ಯಸಿಡ್‌ಗಳನ್ನು ಒದಗಿಸುತ್ತವೆ ಎಂಬುದನ್ನು ಪೌಷ್ಠಿಕಾಂಶ ತಜ್ಞರು ಒಪ್ಪುತ್ತಾರೆ. ಮಾಂಸಾಹಾರವು ಕಬ್ಬಿಣ, ವಿಟಮಿನ್ ಬಿ–ಐ, ನಿಯಾಸಿನ್‌ನ್ನು ಒಳಗೊಂಡಿದೆ. ಆದರೆ ಸಸ್ಯಾಹಾರವನ್ನು ಅವಲಂಬಿಸಿದ ಆಹಾರಕ್ರಮವು ಪ್ರೊಟೀನ್‌ಗಳ ತೀವ್ರ ಕೊರತೆಗೆ ಕಾರಣವಾಗಲಿದ್ದು ಇದು ರಕ್ತಹೀನತೆಗೂ ದಾರಿ ಮಾಡಬಹುದು. ಪ್ರೊಟೀನ್ ಆಧಾರಿತ ಪೌಷ್ಠಕಾಂಶವನ್ನು ಸಾಕಷ್ಟು ಪ್ರಮಾಣದಲ್ಲಿ ಪಡೆಯದ ಹೆಚ್ಚಿನ ಭಾರತೀಯರು ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ.

ಮಾನವನ ಬಾಯಿಯೊಳಗಿನ ಅಂಗರಚನೆಯನ್ನು ಗಮನಿಸಿದಾಗಲೂ ಅದರಲ್ಲಿ ಕಚ್ಚುವುದಕ್ಕೆ ಮತ್ತು ಅಗಿಯುವುದಕ್ಕೆ ಬೇಕಾದ ಎರಡೂ ರೀತಿಯ ಹಲ್ಲುಗಳಿರುವುದನ್ನು ಮೇಲ್ನೋಟಕ್ಕೆ ಗುರುತಿಸಬಹುದು. ಆದ್ದರಿಂದ ಮನುಷ್ಯನು ಪ್ರಕೃತಿದತ್ತವಾಗಿ ಎರಡೂ ರೀತಿಯ ಆಹಾರ ಸೇವಿಸಬಲ್ಲವನಾಗಿದ್ದಾನೆ. ಅದೇ ಸಂದರ್ಭದಲ್ಲಿ ಜಾನುವಾರುಗಳಿಗೆ ಕೇವಲ ಸಮಮಟ್ಟದ ಹಲ್ಲುಗಳು ಮಾತ್ರವಿದ್ದು ಜಗಿಯಲಿಕ್ಕೆ ಮಾತ್ರ ಉಪಯುಕ್ತವಾಗಿವೆ. ಮತ್ತೊಂದೆಡೆ ಮೃಗಗಳಿಗೆ ಚೂಪಾದ ಹಲ್ಲುಗಳು ಮಾತ್ರವಿದ್ದು, ಅವು ಆಹಾರವನ್ನು ಕಚ್ಚಿ ತಿನ್ನಲಿಕ್ಕೂ ಹರಿದು ತಿನ್ನಲಿಕ್ಕೂ ಅನುಕೂಲಕರವಾಗಿವೆ.

ಸಸ್ಯಾಹಾರ ಅಥವಾ ಮಾಂಸಹಾರ ಎರಡೂ ರೀತಿಯ ಆಹಾರವನ್ನು ಮನುಷ್ಯ ಸೇವಿಸಬಹುದು ಎಂಬುದನ್ನು ಇದು ಎತ್ತಿ ತೋರಿಸುತ್ತದೆ. ಅಂತೆಯೇ, ಮನುಷ್ಯನ ಪಚನ ವ್ಯವಸ್ಥೆಯು ಎರಡೂ ರೀತಿಯ ಆಹಾರವನ್ನು ಅರಗಿಸಿಕೊಳ್ಳುವ ಸಾಮರ್ಥ್ಯ ಹೊಂದಿದೆ.

# ಮಾಂಸಾಹಾರ ಮನುಷ್ಯರನ್ನು ಹಿಂಸಾವಾದಿಯಾಗಿಸುತ್ತದೆಯೇ ?

ಆಹಾರ ಮತ್ತು ಆಹಾರಕ್ರಮ ವಿಷಯದಲ್ಲಿ ಇಸ್ಲಾಮ್ ಕೆಲವೊಂದು ನಿಯಮಗಳನ್ನು ನಿಗದಿಪಡಿಸಿದೆ. ಮುಖ್ಯವಾಗಿ ಸಸ್ಯಾಹಾರಿ ಜಾನುವಾರುಗಳನ್ನು ತಿನ್ನಲು ಅದು ಅನುಮತಿ ನೀಡುತ್ತದೆ. ಇದರ ಪ್ರಕಾರ ಎಂಟು ಬಗೆಯ ಚತುಷ್ಪಾದಿ ಪ್ರಾಣಿಗಳನ್ನು ತಿನ್ನಬಹುದು. ಅವುಗಳೆಂದರೆ ಹಸು, ಕುರಿ, ಮೇಕೆ ಒಂಟೆ, ಎಮ್ಮೆ ಇತ್ಯಾದಿ. ಆದರೆ ಪ್ರಕೃತಿದತ್ತವಾಗಿ ಮಾಂಸಾಹಾರಿಯಾಗಿರುವ ಮತ್ತು ತಮ್ಮ ಆಹಾರಕ್ಕಾಗಿ ಇತರ ಜಾನುವಾರುಗಳನ್ನು ಬೇಟೆಯಾಡುವ ಪ್ರಾಣಿಗಳನ್ನು ತಿನ್ನಲು ಇಸ್ಲಾಮ್ ಅನುಮತಿಸುವುದಿಲ್ಲ. ಅಷ್ಟೇ ಅಲ್ಲ, ಸಮ್ಮತಾರ್ಹವಾದ ಸಸ್ಯಾಹಾರಿ ಜಾನುವಾರುಗಳನ್ನು ಕೂಡಾ ಹಲಾಲ್ ಕ್ರಮದಲ್ಲಿ ಕೊಯ್ದ ಬಳಿಕವೇ ಸೇವಿಸಬೇಕು. ಹಂದಿ ಸಸ್ಯಾಹಾರಿಯಾಗಿದ್ದರೂ ಮುಸ್ಲಿಮರಿಗೆ, ಯಹೂದ್ಯರಿಗೆ ಅದನ್ನು ಸೇವಿಸುವುದು ಧರ್ಮಸಮ್ಮತವಲ್ಲ.

ಮಾಂಸಾಹಾರವನ್ನು ತಿನ್ನುವವರು ಹಿಂಸಾವಾದಿಗಳಾಗುತ್ತಾರೆ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಸಾಕ್ಷ್ಯ ಇಲ್ಲ. ಮೊದಲೇ ಹೇಳಿದಂತೆ ಮನುಷ್ಯನ ಬೆಳವಣಿಗೆ ಮತ್ತು ಲೋಕದೃಷ್ಟಿಯು ಆತನನ್ನು ಹಿಂಸಾವಾದಿಯೋ ಶಾಂತಿಪ್ರಿಯನೋ ಆಗಿಸುತ್ತದೆಯೇ ಹೊರತು ಆತನ ಆಹಾರಕ್ರಮವಲ್ಲ. ಉದಾಹರಣೆಗೆ, ಜರ್ಮನಿಯ ಆಡೋಲ್ಫ್ ಹಿಟ್ಲರ್ ಸಸ್ಯಾಹಾರಿಯಾಗಿದ್ದರೂ, ನೆರೆಯ ರಾಷ್ಟ್ರಗಳನ್ನು ತನ್ನ ಅಡಿಯಾಳಾಗಿಸುವ ದುಷ್ಟ ಮಹತ್ವಾಕಾಂಕ್ಷೆಗಳನ್ನು ಇಟ್ಟುಕೊಂಡಿದ್ದ ಮತ್ತು ಮಿಲಿಯಗಟ್ಟಲೆ ಜನರ ಸಾವಿಗೆ ಕಾರಣನಾಗಿದ್ದ. ಆದ್ದರಿಂದ ಇಂತಹ ಮಿಥ್ಯೆಗಳನ್ನು ಸಾರಾಸಗಟಾಗಿ ತಿರಸ್ಕರಿಸುವ ಅಗತ್ಯವಿದೆ. ಪ್ರೀತಿ ಮತ್ತು ಕರುಣೆ, ದ್ವೇಷ ಮತ್ತು ಸಂಘರ್ಷವನ್ನು ಆಹಾರ ಪದ್ಧತಿಹೊಂದಿಗೆ ಸಮೀಕರಿಸುವ ಅಗತ್ಯವಿಲ್ಲ. ಭಾರತದಲ್ಲಿ ಆದಿವಾಸಿಗಳು ವಿವಿಧ ಬಗೆಯ ಪ್ರಾಣಿಗಳನ್ನು ತಿನ್ನುತ್ತಾರೆ. ಆದರೆ, ಅವರು ಹಿಂಸಾತಿರೇಕದಲ್ಲಿ ತೊಡಗಿದ್ದಾರೆಂಬುದಕ್ಕೆ ಯಾವುದೇ ಆಧಾರ ಇಲ್ಲ.

# ಹಲಾಲ್ ಮತ್ತು ಹರಾಮ್
## (ಕಾನೂನುಸಮ್ಮತ ಮತ್ತು ನಿಷಿದ್ಧ)

ಇಸ್ಲಾಮ್ ತನ್ನ ಅನುಯಾಯಿಗಳಿಗೆ ಜೀವನದಲ್ಲಿ ಪಾಲಿಸಬೇಕಾದ ಶಿಸ್ತುಸಂಹಿತೆಗೆ ಸಂಬಂಧಿಸಿದಂತೆ ವಿಸ್ತೃತ ಮಾರ್ಗಸೂಚಿಗಳನ್ನು ನಿಗದಿಪಡಿಸಿದೆ. ಮುಸ್ಲಿಮರಿಗೆ ಧರ್ಮಸಮ್ಮತವಾಗಿರುವ ಆಹಾರ, ಆಚರಣೆಗಳನ್ನು ಹಲಾಲ್ ಎಂದೂ ನಿಷೇಧಿಸಲಾಗಿರುವ ವಿಷಯಗಳಿಗೆ ಹರಾಮ್ ಎಂದೂ ಹೇಳಲಾಗುತ್ತದೆ. ಹರಾಮ್‌ನ ವ್ಯಾಪ್ತಿಗೆ ಬರುವ ಆಹಾರವನ್ನು ತಿನ್ನುವುದಾಗಲಿ ಹರಾಮ್ ಕೃತ್ಯಗಳನ್ನು ಎಸಗುವುದಾಗಲಿ ದೇವರಿಗೆ ಅಪ್ರಿಯವಾಗಿದ್ದು ಹೀಗೆ ಮಾಡುವವರಿಗೆ ಪವಿತ್ರ ಕುರ್‌ಆನ್‌ನಲ್ಲಿ ದಂಡನೆಯ ಎಚ್ಚರಿಕೆ ನೀಡಲಾಗಿದೆ. ಇವುಗಳನ್ನು ಪಾಪಕೃತ್ಯಗಳೆಂದು ಕರೆಯಲಾಗುತ್ತದೆ ಮತ್ತು ಮುಸ್ಲಿಮರು ಇವುಗಳಿಂದ ದೂರವಿರಬೇಕು. ಉದಾಹರಣೆಗೆ ಆಹಾರ ಸೇವನೆಯ ವಿಚಾರಕ್ಕೆ ಬಂದಾಗ ಹಂದಿ ಮಾಂಸ ಮತ್ತು ಮದ್ಯ ಆಥವಾ ಮತ್ತು ಬರಿಸುವ ಯಾವುದೇ ವಸ್ತುವನ್ನು ಸೇವಿಸುವುದು ನಿಷಿದ್ಧವಾಗಿದೆ.

ಉಡುಪಿನ ವಿಚಾರಕ್ಕೆ ಬಂದಾಗ ಮುಸ್ಲಿಮ್ ಪುರುಷರಿಗೆ ಚಿನ್ನಾಭರಣ ಮತ್ತು ರೇಷ್ಮೆ ಧರಿಸದಂತೆ ಆದೇಶಿಸಲಾಗಿದೆ. ಚಿನ್ನಾಭರಣ ಧರಿಸುವುದಕ್ಕೆ ಸಂಪೂರ್ಣ ನಿಷೇಧವಿದ್ದರೂ ರೇಷ್ಮೆಯನ್ನು ಇತರ ಬಟ್ಟೆಯೊಂದಿಗೆ – ಅಂದರೆ ಹತ್ತಿ, ಉಣ್ಣೆ ಬಟ್ಟೆ – ಜೊತೆಗೆ ಬೆರೆಸಿ ಧರಿಸಬಹುದು.

ವರ್ತನೆ ಮತ್ತು ಗಳಿಕೆಗೆ ಸಂಬಂಧಿಸಿದಂತೆಯೂ ಹಲಾಲ್ ಮತ್ತು ಹರಾಮ್‌ನ ನಿಯಮಗಳು ಅನ್ವಯವಾಗುತ್ತವೆ. ಒಬ್ಬ ಮುಸ್ಲಿಮನು ಕಳ್ಳತನ, ಮೋಸ, ಭ್ರಷ್ಟಾಚಾರ, ಲಂಚ, ಸುಲಿಗೆ, ಬಡ್ಡಿ, ಇತರರ ಆಸ್ತಿ ಕಬಳಿಕೆ ಮತ್ತಿತರ ಅಕ್ರಮ ಮಾರ್ಗಗಳಿಂದ ಆದಾಯ ಗಳಿಸಬಾರದು. ಹರಾಮ್ ಮಾರ್ಗದಿಂದ ಸಂಪತ್ತನ್ನು ಗಳಿಸಿ ಜೀವನ ಸಾಗಿಸುವವನು ಪಾಪಿ ಎನಿಸಿಕೊಳ್ಳುತ್ತಾನೆ. ಅಂತೆಯೇ, ಒಬ್ಬ ಸತ್ಯವಿಶ್ವಾಸಿಯು ವ್ಯಭಿಚಾರದಲ್ಲಿ ತೊಡಗಬಾರದು. ಪರನಿಂದೆ, ಕಲಬೆರೆಕೆ ಮಾಡುವುದು; ಸುಳ್ಳು ಹೇಳುವುದು, ಸಲಿಂಗ ಕಾಮ, ಗೂಢಚಾರಿಕೆ ನಡೆಸುವುದು, ವ್ಯಂಗ್ಯ, ಅಪಹಾಸ್ಯ ಇತ್ಯಾದಿ ವರ್ತನೆಗಳಲ್ಲಿ ತೊಡಗುವುದು ಅನಪೇಕ್ಷಿತ ಮತ್ತು ನಿಷಿದ್ಧ ಕಾರ್ಯಗಳ ವ್ಯಾಪ್ತಿಗೆ ಬರುತ್ತದೆ.

## ಹಲಾಲ್: ಪ್ರಾಣಿವಧೆಯ ಇಸ್ಲಾಮೀ ಕ್ರಮ

ಆಹಾರಕ್ಕಾಗಿ ಧರ್ಮಸಮ್ಮತವಾಗಿರುವ ಪ್ರಾಣಿಗಳನ್ನು ಅದರ ಕತ್ತಿನ ಕೆಳಭಾಗದಿಂದ ಕೊಯ್ಯುವ ಸಂಪ್ರದಾಯ ಮುಸ್ಲಿಮರಲ್ಲಿ ಮತ್ತು ಯಹೂದಿಯರಲ್ಲಿದೆ. ಇದು ಹತ್ಯೆಗೀಡಾಗುತ್ತಿರುವ ಪ್ರಾಣಿಯ ರಕ್ತವು ಸಂಪೂರ್ಣವಾಗಿ ಹೊರಹೋಗಲು ನೆರವಾಗುತ್ತದೆ. ಈ ವಿಧಾನವು ಪ್ರಾಣಿಯ ರಕ್ತವು ನರಗಳಲ್ಲಿ ಜಡಗಟ್ಟದಂತೆ ಮಾಡುತ್ತದೆ ಮತ್ತು ಪ್ರಾಣಿಯನ್ನು ಸಂಪೂರ್ಣ ಶುಚಿಗೊಳಿಸುತ್ತದೆ. ಇದನ್ನು ಮುಸ್ಲಿಮರು ನೆರವೇರಿಸಿದಾಗ ಹಲಾಲ್ ಅಥವಾ ಧರ್ಮಸಮ್ಮತವೆನಿಸುತ್ತದೆ. ಇದು, ಮುಸ್ಲಿಮ್ ಮತ್ತು ಯಹೂದಿಯರ ಸಮ್ಮತಾರ್ಹ ಆಹಾರಕ್ರಮದ ಭಾಗವಾಗಿದೆ. ಇಸ್ಲಾಮ್ ಮತ್ತು ಯಹೂದಿ ಧರ್ಮವು ಪ್ರಾಣಿಗಳನ್ನು ಕತ್ತಿನ ಮೇಲ್ಭಾಗದಿಂದ ಕೊಯ್ಯಬಾರದೆಂದು ಆದೇಶಿಸುತ್ತದೆ. ಪ್ರಾಣಿಯನ್ನು ಕತ್ತಿನ ಕೆಳಭಾಗದಿಂದ ಕೊಯ್ದರೆ ಮೆದುಳಿನೊಂದಿಗೆ ಅದರ ಸಂಬಂಧ ಒಮ್ಮೆಲೆ ಕಡಿದು ಹೋಗುವುದಿಲ್ಲ. ಆದ್ದರಿಂದ ಮೆದುಳು ರಕ್ತ ಹೊರಹೋಗಲು ಅವಕಾಶ ಮಾಡಿಕೊಡುತ್ತದೆ ಮತ್ತು ಸತ್ತ ಪ್ರಾಣಿಯ ದೇಹದಿಂದ ರಕ್ತವು ಸಂಪೂರ್ಣ ಹೊರಹೋಗುತ್ತದೆ. ರಕ್ತದಿಂದ ಮುಕ್ತವಾದ ಮಾಂಸವು ಆರೋಗ್ಯಕರವಾಗಿದ್ದು ತುಂಬಾ ಕಾಲದವರೆಗೆ ತಾಜಾ ಆಗಿರುತ್ತದೆ. ಈ ವಿಧಾನದಲ್ಲಿ ವಾಯುನಾಳ, ಧಮನಿಗಳು ಮತ್ತು ಗಂಟಲು ಒಂದೇ ಏಟಿಗೆ ತುಂಡಾಗುತ್ತವೆ. ಆದರೆ ರಕ್ತದ ಕೊನೆಯ ಹನಿ ದೇಹದಿಂದ ಹೊರ ಬರುವವರೆಗೂ ಇದು ಸಕ್ರಿಯವಾಗಿರುತ್ತದೆ. ಪ್ರಾಣಿಯು ಸಂಪೂರ್ಣ ಸತ್ತು ದೇಹ ನಿಶ್ಚಲವಾದ ನಂತರ ರುಂಡವನ್ನು ಕಡಿಯಲಾಗುತ್ತದೆ ಮತ್ತು ಮಾಂಸ ತುಂಡರಿಸುವ ಪ್ರಕ್ರಿಯೆ ಆರಂಭವಾಗುತ್ತದೆ.

ನಿರ್ಜೀವ ಪ್ರಾಣಿಯ ರಕ್ತವು ಕೀಟಾಣು, ಬ್ಯಾಕ್ಟೀರಿಯಾ ಮತ್ತು ವಿಷ ಪದಾರ್ಥಗಳಿಗೆ ಆಶ್ರಯ ಕೊಡುತ್ತದೆ. ಆದ್ದರಿಂದ ಮುಸ್ಲಿಮರು ಅನುಸರಿಸುವ ವಧಾಕ್ರಮವು ಇತರ ಹತ್ಯಾ ಕ್ರಮಗಳಿಗೆ ಹೋಲಿಸಿದರೆ ಹೆಚ್ಚು ಆರೋಗ್ಯಕರ, ಶುದ್ಧ ಮತ್ತು ಸ್ವಚ್ಛವಾಗಿದೆ.

## ಹರಾಮ್: ಮದ್ಯಪಾನ ಮತ್ತು ಜೂಜಿಗೆ ನಿಷೇಧ

ಮದ್ಯಪಾನ ಮತ್ತು ಜೂಜಾಟವನ್ನು ಕುರ್‌ಆನ್ ಸತ್ಯವಿಶ್ವಾಸಿಗಳ ಮಟ್ಟಿಗೆ ನಿಷೇಧಿಸಿದೆ. ಮದ್ಯವು ಮನುಷ್ಯನ ಬುದ್ಧಿಯ ಮೇಲೆ ಪ್ರಭಾವ ಬೀರುತ್ತದೆ ಮತ್ತು ಆತನ ಸಾಮಾಜಿಕ ವರ್ತನೆಗಳ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತದೆ ಎಂಬುದೇ ಇದಕ್ಕೆ ಕಾರಣ. ಮದ್ಯವೂ ಸೇರಿದಂತೆ ಅಮಲು ಪದಾರ್ಥಗಳು ಹಲವು ಸಾಮಾಜಿಕ ಕೆಡುಕುಗಳಿಗೆ ಹಾದಿ

ಮಾಡಿಕೊಡುತ್ತದೆ ಎಂಬುದು ಎಲ್ಲರೂ ಒಪ್ಪುವ ಮಾತು. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದು ಅಪಘಾತಕ್ಕೆ ಕಾರಣವಾಗಬಹುದು. ಬೀದಿಜಗಳ, ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳಿಗೂ ಮದ್ಯಪಾನದ ಚಟವೇ ಕಾರಣ. ಮದ್ಯದ ಮತ್ತಿನಲ್ಲಿ ವ್ಯಕ್ತಿಯು ಸಾಮಾಜಿಕ ಶಿಷ್ಟಾಚಾರ ಮತ್ತು ಘನತೆಯನ್ನು ಮರೆಯುತ್ತಾರೆ. ಸ್ತ್ರೀಯರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳಲ್ಲಿ ಅಪರಾಧಿಗಳು ಹೆಚ್ಚಾಗಿ ಮದ್ಯಪಾನಿಗಳೇ ಆಗಿರುತ್ತಾರೆ. ಅಮೆರಿಕದ ಪಬ್‌ಗಳಲ್ಲಿ ಗುಂಡಿನ ಚಕಮಕಿ ಇತ್ತೀಚೆಗೆ ಸಾಮಾನ್ಯವಾಗುತ್ತಿದ್ದು ಇದಕ್ಕೂ ಮದ್ಯಪಾನಕ್ಕೂ ನಿಕಟ ಸಂಬಂಧವಿದೆ. ಕುರ್‌ಆನ್ ತನ್ನ ಅನುಯಾಯಿಗಳಿಗೆ ಮದ್ಯಪಾನ, ಜೂಜಾಟ ಮತ್ತಿತರ ದುರಭ್ಯಾಸಗಳಿಂದ ದೂರವಿರುವಂತೆ ಆದೇಶಿಸುತ್ತದೆ.

> **"ವಿಶ್ವಾಸಿಗಳೇ, ಮದ್ಯ, ಜೂಜಾಟ, ವಿಗ್ರಹಗಳು ಮತ್ತು ದಾಳದಾಟ ಇವೆಲ್ಲಾ ಶೈತಾನನ ಮಲಿನ ಚಟುವಟಿಕೆಗಳಾಗಿವೆ." (ಕುರ್‌ಆನ್ 5:90).**

ಆರೋಗ್ಯದ ಮೇಲಿನ ದುಷ್ಪರಿಣಾಮದ ಜತೆಗೆ ಮದ್ಯಪಾನವು ಆರ್ಥಿಕ ವ್ಯವಸ್ಥೆಯ ಮೇಲೂ ಕೆಟ್ಟ ಪ್ರಭಾವ ಬೀರುತ್ತದೆ. ಅಮಲು ಪದಾರ್ಥದ ಪ್ರಭಾವದಲ್ಲಿರುವವರು ಸಾಮಾನ್ಯವಾಗಿ ಲೈಂಗಿಕ ಅಕೃತ್ಯಗಳನ್ನೆಸಗುವ ಸಾಧ್ಯತೆ ಅಧಿಕವಿದ್ದು ಚುಡಾಯಿಸುವಿಕೆ, ಮಾನಭಂಗ, ರಕ್ತಸಂಬಂಧಿಗಳೊಂದಿಗೆ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವುದರ ಹಿಂದೆಯೂ ಇದರ ಪ್ರಭಾವವಿದೆ.

ಜೂಜಾಟವನ್ನೂ ಇಸ್ಲಾಮ್ ನಿಷೇಧಿಸಿದ್ದು ಇದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು. ಆರ್ಥಿಕತೆಯನ್ನು ಅದು ಹಾಳು ಮಾಡಿಬಿಡುತ್ತದೆ. ಲಾಟರಿ, ಕುದುರೆ ಜೂಜು, ಇತ್ಯಾದಿ ಯಾವುದೇ ವಿಧಾನದಲ್ಲಿ ಜೂಜಾಟ ನಡೆದರೂ ಅದರಲ್ಲಿ ಹೆಚ್ಚಿನವರು ನಷ್ಟ ಅನುಭವಿಸಲೇಬೇಕು. ಇದರ ಗೀಳು ಅಂಟಿಸಿಕೊಂಡವನು ರಚನಾತ್ಮಕ ಚಟುವಟಿಕೆಗಳಲ್ಲಿ ಆಸಕ್ತಿ ಕಳೆದುಕೊಂಡು, ಅದೃಷ್ಟದ ಲಾಭಗಳಿಕೆಯ ಹಿಂದೆ ಬೀಳುತ್ತಾನೆ. ವಿಧಿಯು ಕೆಲವೊಮ್ಮೆ ಅವನ ಕಡೆಗೆ ನಗೆ ಬೀರಿದರೂ, ಹೆಚ್ಚಿನ ಬಾರಿ ಜೂಜಾಟವು ಜನರನ್ನು ದಿವಾಳಿಯನ್ನಾಗಿಸುತ್ತದೆ ಅಥವಾ ಸಾಲದ ಕುಣಿಕೆ ಮತ್ತು ಯಾತನೆಯಲ್ಲಿ ಸಿಲುಕಿಸುತ್ತದೆ.

ಅಮೆರಿಕದ ನ್ಯಾಯ ಇಲಾಖೆಯ ಅಧೀನವಿರುವ ನ್ಯಾಷನಲ್ ಕ್ರೈಮ್ ವಿಕ್ಟಿಮೈಜೇಷನ್ ಸರ್ವೆ ಬ್ಯೂರೋ ಆಫ್ ಜಸ್ಟೀಸ್‌ನ ಅಂಕಿ ಅಂಶಗಳ ಪ್ರಕಾರ, 1996ರಲ್ಲಿ ಪ್ರತಿದಿನ ಸರಾಸರಿ 2,713 ಅತ್ಯಾಚಾರ ಪ್ರಕರಣಗಳು ನಡೆದಿವೆ. ಅಂಕಿ ಅಂಶಗಳ ಪ್ರಕಾರ ಹೆಚ್ಚಿನ ಸಂದರ್ಭಗಳಲ್ಲಿ ಅತ್ಯಾಚಾರಿಗಳು ಮದ್ಯದ ಅಮಲಿನಲ್ಲಿದ್ದರು. ಲೈಂಗಿಕ ಕಿರುಕುಳದ ವಿಚಾರಕ್ಕೂ ಇದು ಅನ್ವಯವಾಗುತ್ತದೆ.

# ಅತ್ಯಾಚಾರ: ಲೈಂಗಿಕ ಭಯೋತ್ಪಾದನೆ

ಇಸ್ಲಾಮಿನಲ್ಲಿ ಅತ್ಯಾಚಾರವನ್ನು ಶರೀಯಾ ಕಾನೂನಿನನ್ವಯ ಭಿನ್ನ ಸ್ವರೂಪದ ಅಪರಾಧ ಎಂದು ವರ್ಗೀಕರಿಸಲಾಗಿಲ್ಲ. ಇದರಿಂದಾಗಿ ಈ ಅಪರಾಧಕ್ಕೆ ವಿಧಿಸುವ ಶಿಕ್ಷೆಗೆ ಸಂಬಂಧಿಸಿದ ಕೆಲವು ಗೊಂದಲಗಳಿವೆ. ಕೆಲವರು ಅತ್ಯಾಚಾರವನ್ನು ವ್ಯಭಿಚಾರದ ಜತೆಗೆ ಥಳುಕು ಹಾಕುತ್ತಾರೆ. ಆದರೆ ವಾಸ್ತವವಾಗಿ ಅತ್ಯಾಚಾರ 'ಹಿರಾಬಾ' ಅಥವಾ ಭಯೋತ್ಪಾದನೆ ಅಪರಾಧಗಳ ವ್ಯಾಪ್ತಿಯಲ್ಲಿ ಬರುತ್ತದೆ.

'ಹಿರಾಬಾ' ಎಂದರೆ ಜನರ ಮೇಲೆ ದಾಳಿ ನಡೆಸಿ ಆಯುಧಗಳಿಂದ ಅಥವಾ ಬಲಪ್ರಯೋಗದ ಬೆದರಿಕೆಯಿಂದ ಅವರನ್ನು ಹಿಂಸಿಸುವುದು, ಕೊಲೆ ಮಾಡುವುದು ಅಥವಾ ಭಯಭೀತಗೊಳಿಸುವುದು ಅವರ ಆಸ್ತಿಯನ್ನು ಹೆದರಿಸಿ ಅಥವಾ ಎದುರೆದುರೇ ಜಪ್ತಿ ಮಾಡಿಕೊಳ್ಳುವುದು. 'ಹಿರಾಬಾ'ದಲ್ಲಿ ಆಸ್ತಿಯನ್ನು ಪ್ರಸ್ತಾಪಿಸಿರುವುದಕ್ಕೆ ಅದು ದರೋಡೆಯೊಂದಿಗೆ ಸಮೀಕರಣಗೊಂಡಿರುವುದೇ ಕಾರಣ. ಆದರೆ ಅದರ ನಿಯಮಗಳು ಅತ್ಯಾಚಾರಕ್ಕೋಸ್ಕರ ಜನರನ್ನು ಹೆದರಿಸುವುದಕ್ಕೂ ಅನ್ವಯವಾಗುತ್ತವೆ.

ಇಸ್ಲಾಮ್‌ನಲ್ಲಿ 'ಹಿರಾಬಾ' ಪ್ರಮುಖ ಅಪರಾಧಗಳ ಪೈಕಿ ಅತ್ಯಂತ ಗಂಭೀರವಾದುದಾಗಿದ್ದು, ಕುರ್‌ಆನ್ ಮತ್ತು ಸುನ್ನತ್‌ನ ಆಧಾರದಲ್ಲಿ ಅದು ನಿಷಿದ್ಧವಾಗಿದೆ. ಇಂಥ ಅಪರಾಧಗಳಿಗೆ ನಿಗದಿಪಡಿಸಿರುವ ಶಿಕ್ಷೆಯನ್ನು ಕುರ್‌ಆನ್ ಹೀಗೆ ವಿವರಿಸುತ್ತದೆ.

> **"ಅಲ್ಲಾಹ್ ಮತ್ತು ಅವನ ದೂತರ ವಿರುದ್ಧ ಯುದ್ಧ ಸಾರಿದವರಿಗೆ ಮತ್ತು ಭೂಮಿಯಲ್ಲಿ ಅಶಾಂತಿ ಹಬ್ಬಲು ಹೆಣಗಾಡುವವರಿಗೆ ಇರುವ ಪ್ರತಿಫಲವೇನೆಂದರೆ ಅವರನ್ನು ಕೊಲ್ಲಬೇಕು ಅಥವಾ ಶಿಲುಬೆಗೇರಿಸಬೇಕು ಅಥವಾ ಅವರ ಕೈಗಳನ್ನು ಹಾಗೂ ಕಾಲುಗಳನ್ನು ವಿರುದ್ಧ ಕಡೆಗಳಲ್ಲಿ (ಉದಾ: ಬಲಗೈ ಮತ್ತು ಎಡಗಾಲು) ಕತ್ತರಿಸಬೇಕು ಅಥವಾ ಅವರನ್ನು ನಾಡಿನಿಂದ ಹೊರಗಟ್ಟಬೇಕು. ಇದು ಇಹಲೋಕದಲ್ಲಿ ಅವರಿಗಿರುವ ಅಪಮಾನ. ಇನ್ನು ಪರಲೋಕದಲ್ಲಂತೂ ಅವರಿಗಾಗಿ ಭಾರಿ ಹಿಂಸೆ ಕಾದಿದೆ. ನಿಮ್ಮ ನಿಯಂತ್ರಣಕ್ಕೆ ಬರುವ ಮುನ್ನವೇ ಪಶ್ಚಾತ್ತಾಪ ಪಟ್ಟವರು ಇದಕ್ಕೆ ಹೊರತಾಗಿದ್ದಾರೆ. ನಿಮಗೆ ತಿಳಿದಿರಲಿ, ಅಲ್ಲಾಹನು ತುಂಬಾ ಕ್ಷಮಿಸುವವನೂ ಕರುಣಾಮಯಿಯೂ ಆಗಿದ್ದಾನೆ." (ಕುರ್‌ಆನ್ 5:53–34).**

## ಇಸ್ಲಾಮೀ ಕಾನೂನಿನಲ್ಲಿ ವ್ಯಭಿಚಾರ ಮತ್ತು ಅತ್ಯಾಚಾರದ ನಡುವಿನ ವ್ಯತ್ಯಾಸ

ಆರಂಭ ಕಾಲದ ಇಸ್ಲಾಮೀ ಪಂಡಿತರು, ಅದರಲ್ಲೂ ವಿಶೇಷವಾಗಿ ಅಲ್ ದಾಸುಖಿ ಮತ್ತು ನ್ಯಾಯಮೂರ್ತಿ ಇಬ್ನ್ ಅಲ್ ಅರಬಿ ಅವರು, ಅತ್ಯಾಚಾರವನ್ನು ಯಾಕೆ 'ವ್ಯಭಿಚಾರ' ಎಂದು ಪರಿಗಣಿಸದೇ 'ಹಿರಾಬಾ' (ಭಯೋತ್ಪಾದನೆಯ ಅಪರಾಧ) ಎಂದು ಪರಿಗಣಿಸಬೇಕು ಎಂಬುದನ್ನು ವಿವರಿಸಿದ್ದಾರೆ.

ಇಬ್ನ್ ಅಲ್ ಅರಬಿ ಅವರು ಇದಕ್ಕೆ ಪೂರಕವಾಗಿ ನಿರ್ದಿಷ್ಟ ಗುಂಪೊಂದರ ಮೇಲೆ ದಾಳಿ ನಡೆದು ಅದರಲ್ಲಿದ್ದ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆದ ಘಟನೆಯನ್ನು ಉದಾಹರಿಸುತ್ತಾರೆ. ಈ ಪ್ರಕರಣದಲ್ಲಿ 'ಹಣ ಲೂಟಿ ಮಾಡಿಲ್ಲ ಅಥವಾ ಯಾವುದೇ ಆಯುಧ ಬಳಕೆಯಾಗಿಲ್ಲ. ಹೀಗಾಗಿ, ಇದು ಹಿರಾಬಾ ವ್ಯಾಪ್ತಿಗೆ ಬರುವುದಿಲ್ಲ' ಎಂಬ ವಾದಕ್ಕೆ ಪ್ರತಿಕ್ರಿಯಿಸುತ್ತಾ, ಇಬ್ನ್ ಅಲ್ ಅರಬಿ ಅವರು, ಗುಪ್ತಾಂಗಗಳ ಮೇಲೆ ನಡೆಯುವ ದಾಳಿಯು ಆಯುಧದ ಮೂಲಕ ನಡೆಯುವ 'ಹಿರಾಬಾ'ಕ್ಕಿಂತ ಭೀಕರವಾದುದು. ಅತ್ಯಾಚಾರಕ್ಕೊಳಗಾಗುವುದು ಮತ್ತು ದರೋಡೆಗೊಳಗಾಗುವುದರ ಮಧ್ಯೆ ಆಯ್ಕೆ ಇದ್ದರೆ ಯಾರಾದರೂ ಎರಡನೆಯದನ್ನೇ ಆಯ್ಕೆ ಮಾಡುತ್ತಾರೆ. ಈ ವಾದ ಅತ್ಯಂತ ತರ್ಕಬದ್ಧವಾದುದು. ಯಾಕೆಂದರೆ ಇಲ್ಲಿ ದಾಳಿಗೊಳಗಾಗುತ್ತಿರುವ ವ್ಯಕ್ತಿಯು ತನ್ನ ಆಸ್ತಿ (ಅತ್ಯಾಚಾರಕ್ಕೊಳಗಾದವಳ ಪ್ರತಿಷ್ಠೆ ಮತ್ತು ಸುರಕ್ಷತೆ) ಯನ್ನು ಕಳೆದುಕೊಳ್ಳುತ್ತಾಳೆ.

'ಹಿರಾಬಾ'ದಂತೆಯೇ ಅತ್ಯಾಚಾರವೂ ಅತ್ಯಂತ ಹಿಂಸಾತ್ಮಕ ಅಪರಾಧವಾಗಿದ್ದು, ಲೈಂಗಿಕ ತೃಷೆಯನ್ನು ಇಲ್ಲಿ ಆಯುಧವಾಗಿ ಬಳಸಲಾಗುತ್ತದೆ. ಅಂದರೆ, ಇಲ್ಲಿ ಅತ್ಯಾಚಾರಿಯ ಉದ್ದೇಶ ಮತ್ತು ಕೃತ್ಯವೇ 'ಹಿರಾಬಾ' ಕಾನೂನಿನ್ವಯ ವಿಚಾರಣೆ ನಡೆಯುವಾಗ ಆರೋಪಿಯ ವಿರುದ್ಧದ ಪ್ರಬಲ ಸಾಕ್ಷಿಯಾಗುತ್ತದೆಯೇ ಹೊರತು ವಿವಶಾವಸ್ಥೆಯಲ್ಲಿ ಮಹಿಳೆ ಅತ್ಯಾಚಾರಕ್ಕೆ ಸಮ್ಮತಿ ನೀಡಿದ್ದಳೋ ಇಲ್ಲವೋ ಎಂಬುದಲ್ಲ. ಪಾಕಿಸ್ತಾನದ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ನೈಜಿರಿಯಾದಲ್ಲಿ ಕೆಲವು

ಖೋಟಾ ಶರಿಯಾ ಮಂಡಳಿಗಳು ವಾದಿಸುತ್ತಿರುವಂತೆ 'ಹಿರಾಬಾ'ದಲ್ಲಿ ಅಪರಾಧ ದೃಢಪಡಿಸಲು ನಾಲ್ವರ ಸಾಕ್ಷಿ ಬೇಕಾಗಿಲ್ಲ. ಸಾಂದರ್ಭಿಕ ಸಾಕ್ಷಿ, ವೈದ್ಯಕೀಯ ಅಂಕಿ ಅಂಶಗಳು, ತಪಾಸಣೆ ಆಧರಿಸಿ ಶಿಕ್ಷೆ ವಿಧಿಸಲಾಗುತ್ತದೆ.

ಅಂತೆಯೇ, ಅಪರಾಧ ಪ್ರಕರಣಗಳ ವಿಚಾರಣೆಯ ಸಂದರ್ಭದಲ್ಲಿ ನಿರ್ದಿಷ್ಟ ಅಪರಾಧವು ಅತ್ಯಾಚಾರವೋ ಅಲ್ಲವೋ ಎಂಬುದನ್ನು ದೃಢಪಡಿಸುವುದು ಇಸ್ಲಾಮೀ ನ್ಯಾಯಾಲಯದಲ್ಲಿ ಅತ್ಯಂತ ಮುಖ್ಯವಾದದ್ದು. ಯಾಕೆಂದರೆ ಇದು ಆರೋಪಿಯ ಮಟ್ಟಿಗೆ ಸಾವು ಮತ್ತು ಬದುಕಿನ ಪ್ರಶ್ನೆ. ಆದ್ದರಿಂದ ಇಂತಹ ಆರೋಪಗಳು ವಿಚಾರಣೆಗೆ ಬಂದಾಗ ವ್ಯಕ್ತಿಯು ನಿಜವಾಗಿಯೂ ತಪ್ಪಿತಸ್ಥನೇ ಎಂಬುದನ್ನು ದೃಢಪಡಿಸಲು ಸಮಗ್ರ ಮೌಲ್ಯಮಾಪನ ನಡೆಯುತ್ತದೆ. ಒಂದು ವೇಳೆ ಸಂಭೋಗವು ಹೆಣ್ಣು ಮತ್ತು ಗಂಡಿನ ಸಮ್ಮತಿಯಿಂದ ನಡೆದಿದೆ ಎಂಬುದು ಸಾಕ್ಷ್ಯಗಳಿಂದ ಸಾಬೀತಾದರೆ ಮತ್ತು ಅತ್ಯಾಚಾರ ಆರೋಪಿಯು ಅನಗತ್ಯವಾಗಿ ಖಟ್ಲೆಗೆ ಗುರಿಯಾಗಿದ್ದಾನೆಂದು ಸಾಬೀತಾದರೆ ಅವರಿಬ್ಬರೂ ವ್ಯಭಿಚಾರ ಎಸಗಿದ ಅಪರಾಧಕ್ಕಾಗಿ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

## ಅತ್ಯಾಚಾರಕ್ಕೆ ಪಶ್ಚಿಮದ ಲೌಕಿಕ ಶಿಕ್ಷೆ

ಪಾಶ್ಚಿಮಾತ್ಯ ದೇಶಗಳ, ಅದರಲ್ಲೂ ಮುಖ್ಯವಾಗಿ, ಅಮೆರಿಕದಲ್ಲಿ ಅಪರಾಧ ಪ್ರಕರಣಗಳಲ್ಲಿ ಆಗುತ್ತಿರುವ ಶಿಕ್ಷೆಯ ಪ್ರವೃತ್ತಿಯನ್ನು ಗಮನಿಸಿದರೆ ಅತ್ಯಾಚಾರದ ವಿಷಯದಲ್ಲಿ ಅಲ್ಲಿನ ವೈದ್ಯರು, ಪೊಲೀಸ್ ಅಧಿಕಾರಿಗಳು, ಕುಟುಂಬಗಳು, ಅತ್ಯಾಚಾರಕ್ಕೆ ಒಳಗಾದವರು ಎಂತಹ ವಿವಶತೆಗೆ ಒಳಗಾಗಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ವರದಿಗಳ ಪ್ರಕಾರ, ಶೇ. 60ರಷ್ಟು ಅತ್ಯಾಚಾರ ಪ್ರಕರಣಗಳು ಕಾನೂನು ಜಾರಿ ಅಧಿಕಾರಿಗಳ ಗಮನಕ್ಕೂ ಬರುವುದಿಲ್ಲ.

ಈ ಕಳವಳಕಾರಿ ಅಂಕಿಸಂಖ್ಯೆಗಳ ಹಿಂದಿರುವ ಕಾರಣಗಳು ಏನು? ಇದನ್ನು ತಿಳಿಯಲು ನಾವು ಮೊದಲಿಗೆ ಸಮಸ್ಯೆಯ ಸ್ವರೂಪವನ್ನು ವಸ್ತುನಿಷ್ಠವಾಗಿ ಅರ್ಥ ಮಾಡಿಕೊಳ್ಳಬೇಕು.

ಕ್ರಿ.ಶ. 2003ರಲ್ಲಿ ಅಮೆರಿಕದಲ್ಲಿ 198,850 ಮಂದಿ ಅತ್ಯಾಚಾರ, ಮಾನಭಂಗ ಯತ್ನ ಅಥವಾ ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದಾರೆ. ಇವರ ಪೈಕಿ ಅತ್ಯಾಚಾರಕ್ಕೊಳಗಾದವರು 81,000, ಅತ್ಯಾಚಾರ ಯತ್ನಕ್ಕೊಳಗಾದವರು 61,060 ಮತ್ತು ಲೈಂಗಿಕ ಕಿರುಕುಳಕ್ಕೆ ತುತ್ತಾದವರು 80,910 ಮಂದಿ.

ಕ್ರಿ.ಶ. 2003ರಲ್ಲಿ ನಡೆದ ಅತ್ಯಾಚಾರ ಮತ್ತು ಅತ್ಯಾಚಾರ ಯತ್ನದ ಪ್ರಕರಣಗಳ ಪೈಕಿ ಕೇವಲ ಶೇ. 40ರಷ್ಟು ಮಾತ್ರ ಕಾನೂನು ಜಾರಿ ಅಧಿಕಾರಿಗಳ ಗಮನಕ್ಕೆ ಬಂದಿದೆ.

ಅಮೆರಿಕದಲ್ಲಿ ಪ್ರತಿ 2.5 ನಿಮಿಷಕ್ಕೆ ಒಬ್ಬರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ.

ಇಂಥ ದೌರ್ಜನ್ಯಗಳ ಪರಿಣಾಮವಾಗಿ ಸುಮಾರು 4,065 ಮಂದಿ ಗರ್ಭ ಧರಿಸಿದ್ದಾರೆ.

(ಅಂಕಿ ಅಂಶಗಳ ಮೂಲ: ಪೆನಿಸಿಲ್ವೆನಿಯಾ ಕೊಯೇಲಿಷನ್ ಎಗೇನ್ಸ್ಟ್ ರೇಪ್ http://pcarorg/aboutsa/stats.html)

ಅಮೆರಿಕದಂಥ ಮುಕ್ತ ಸಮಾಜದಲ್ಲಿಯೂ ಅತ್ಯಾಚಾರ ಏಕೆ

ಸಾಮಾನ್ಯವಾಗಿಬಿಟ್ಟಿದೆ? ಇದಕ್ಕೆ ಅನೇಕ ಕಾರಣಗಳಿರಬಹುದಾದರೂ, ಯಾವುದೇ ಅಪರಾಧಕ್ಕೆ ಶಿಕ್ಷೆಯಾಗಬೇಕಾದ ಸಾಧ್ಯತೆ ತೀರಾ ಕಡಿಮೆಯಿದ್ದು ಲಾಭ ಜಾಸ್ತಿಯಿದ್ದಾಗ ಅಪರಾಧಿಯು ಆ ಕೃತ್ಯಕ್ಕೆ ಮುಂದಾಗುವ ಸಂಭವ ಹೆಚ್ಚು. ದುರದೃಷ್ಟವಶಾತ್, ಅರ್ಥಶಾಸ್ತ್ರಜ್ಞ ಕಿಪ್ ವಿಸ್ಕ್ಯೂ ಅವರು ತಮ್ಮ 'ಜರ್ನಲ್ ಆಫ್ ಲೇಬರ್ ಎಕನಾಮಿಕ್ಸ್' ನಲ್ಲಿ ಹೀಗೆ ಬರೆದಿದ್ದಾರೆ: "(ಪಶ್ಚಿಮದಲ್ಲಿ) ಕ್ರಿಮಿನಲ್ ಅನುಷ್ಠಾನ ವ್ಯವಸ್ಥೆಯಿಂದ ಎದುರಾಗಬಹುದಾದ ಅಪಾಯ ತುಂಬಾ ಕಡಿಮೆ. ಯುವ ಅಪರಾಧಿಗಳು ಇದನ್ನು ಅರಿತಿದ್ದಾರೆ ಎಂಬುದನ್ನು ಅಂಕಿ ಅಂಶಗಳು ದೃಢಪಡಿಸುತ್ತವೆ."

ಅಲ್ಲದೆ, ಅತ್ಯಾಚಾರ ಪ್ರಕರಣದಲ್ಲಿ ಕ್ರಿಮಿನಲ್ ವಿಚಾರಣೆಗೆ ಗುರಿಯಾಗುವ ಜನರ ಸಂಖ್ಯೆ ಎಷ್ಟೆಂಬುದನ್ನು ಗಮನಿಸಿದಾಗ ದಿಗಿಲಾಗುತ್ತದೆ. ಶೇ. 60 ರಷ್ಟು ಅತ್ಯಾಚಾರ/ಲೈಂಗಿಕ ಆಕ್ರಮಣದ ಪ್ರಕರಣಗಳು ವರದಿಯೇ ಆಗದಿರುವ ಕಾರಣ ಇಲ್ಲಿ ಅಪರಾಧಿಗಳಿಗೆ ಜೈಲು ಅಥವಾ ಇತರ ಯಾವುದೇ ಶಿಕ್ಷೆಯಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೆ, ವರದಿಯಾದ ಪ್ರಕರಣಗಳ ಗತಿಯಾದರೂ ಏನು? ಅಪರಾಧ ವರದಿ ಮಾಡಲಾಗಿದೆ ಎಂಬ ಮಾತ್ರಕ್ಕೆ ನಿರ್ದಿಷ್ಟ ಪ್ರಕರಣದಲ್ಲಿ ಸಂತ್ರಸ್ತರಿಗೆ ನ್ಯಾಯ ಸಿಗುತ್ತದೆ ಎಂಬ ಗ್ಯಾರಂಟಿ ಇದೆಯೇ? ರೇನ್ (RAINN Rape, Abuse and Incest National Nettwork. www.rainn.org) ಕಲೆಹಾಕಿದ ಅಂಶಗಳಿಂದ ಈ ಕೆಳಗಿನ ಸಂಗತಿಗಳು ಬೆಳಕಿಗೆ ಬಂದಿವೆ

# ಇಸ್ಲಾಮೀ ರಾಷ್ಟ್ರ ಅಥವಾ ಮುಸ್ಲಿಮ್ ರಾಷ್ಟ್ರ: ಏನಿದು ವ್ಯತ್ಯಾಸ ?

'ಮುಸ್ಲಿಮ್ ರಾಷ್ಟ್ರ'ಗಳಲ್ಲಿ ವೈಯಕ್ತಿಕ ಮತ್ತು ಆಡಳಿತದ ನೆಲೆಗಳಲ್ಲಿ ಇಸ್ಲಾಮೀ ಕಾನೂನು ಜಾರಿಯಲ್ಲಿದೆ ಎಂಬ ತಪ್ಪುತಿಳುವಳಿಕೆ ಹೆಚ್ಚಿನವರಲ್ಲಿದೆ. ಕೆಲವೊಂದು ಸಂದರ್ಭಗಳಲ್ಲಿ ಈ ತಪ್ಪುತಿಳುವಳಿಕೆಯು 'ಮುಸ್ಲಿಮ್' ರಾಷ್ಟ್ರಗಳ ಪ್ರತಿಯೊಂದು ನಡೆಯನ್ನೂ ಇಸ್ಲಾಮಿನ ಜತೆಗೆ ತಳುಕು ಹಾಕುವಷ್ಟರ ಮಟ್ಟಿಗೆ ವ್ಯಾಪಕವಾಗಿದೆ. ಹೆಚ್ಚಿನ ಸಂದರ್ಭಗಳಲ್ಲಿ ಇದು ನಿಜವಾಗಿರುವುದಿಲ್ಲ.

ಆದರೆ, ಮುಸ್ಲಿಮ್ ರಾಷ್ಟ್ರಗಳು ಸ್ವತಂತ್ರಗೊಂಡ ನಂತರ ಎಲ್ಲ ಕಡೆಯೂ ಇಸ್ಲಾಮೀ ಆಂದೋಲನಗಳು ಆಯಾ ರಾಷ್ಟ್ರಗಳಲ್ಲಿ ಇಸ್ಲಾಮೀ ಆಡಳಿತ ಸ್ಥಾಪನೆಗಾಗಿ ಪ್ರಯತ್ನಿಸುತ್ತಿರುವುದನ್ನು ಗಮನಿಸಬಹುದು. ಇಸ್ಲಾಮೀ ಆಡಳಿತವೆಂದರೆ ಅಲ್ಲಿ ಶರೀಯತ್ ಅಥವಾ ಇಸ್ಲಾಮೀ ಕಾನೂನು ಜಾರಿಗೊಳ್ಳಬೇಕು. ಅಲ್ಲಿ ಧಾರ್ಮಿಕ ನಾಯಕರು ಅಥವಾ ಇಸ್ಲಾಮೀ ಆಂದೋಲನದ ನೇತಾರರು ಸರಕಾರದಲ್ಲಿ ನಿರ್ಣಾಯಕ ಪಾತ್ರ ಹೊಂದಿರುತ್ತಾರೆ ಇಲ್ಲವೇ ರಾಜಕೀಯ ಅಧಿಕಾರದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ, ಹಲವು ಮುಸ್ಲಿಮ್ ರಾಷ್ಟ್ರಗಳು ತಮ್ಮನ್ನು ಇಸ್ಲಾಮೀ ರಾಷ್ಟ್ರಗಳೆಂದು ಘೋಷಿಸಿ ಶರೀಯಾ ಜಾರಿಗೊಳಿಸಿವೆ. ಆದರೆ ಇಲ್ಲಿ ನಿಜವಾಗಿ ಜಾರಿಯಾಗಿರುವುದು ಶಿಕ್ಷೆಗೆ ಸಂಬಂಧಿಸಿದ, ಮಹಿಳೆಯರ ಸ್ಥಾನಮಾನ ಮತ್ತಿತರ ವಿಷಯಗಳಿಗೆ ಸಂಬಂಧಿಸಿದ ನ್ಯಾಯಶಾಸ್ತ್ರದ ಕೆಲವು ಅಂಶಗಳು ಮಾತ್ರ. ಹೀಗಾಗಿ ಇಸ್ಲಾಮಿನ ದಂಡಸಂಹಿತೆಯ ಅಥವಾ ಹುದೂದ್ ನಿಯಮಗಳು ಚರ್ಚೆಗೆ ಗುರಿಯಾಗಿವೆ. ಥಳಿಸುವುದು, ಕೈ ಕತ್ತರಿಸುವುದು ಇತ್ಯಾದಿ ಶಿಕ್ಷೆಗಳಿಗೆ ಭರ್ಜರಿ ಪ್ರಚಾರ ನೀಡಲಾಗುತ್ತದೆ. ಇವು ನಿಜವಾಗಿ ಕೊನೆಯ ಆಯ್ಕೆಯಾಗಿ ಜಾರಿಗೊಳಿಸಬೇಕಾದ ಕಾನೂನುಗಳಾಗಿವೆ. ಇವುಗಳನ್ನು ಜಾರಿಗೊಳಿಸುವುದಕ್ಕೆ ಮುಂಚೆ ಸಮಾಜದಲ್ಲಿ ಸಮಾನತೆ, ಸಂಪತ್ತಿನ ವಿತರಣೆ, ಪ್ರಜೆಗಳಿಗೆ ಸಂಬಂಧಿಸಿ ಸರಕಾರದ ಕರ್ತವ್ಯ, ಕರುಣೆ,

ಔದಾರ್ಯ ಮೊದಲಾದ ಹತ್ತು ಹಲವು ವಿಚಾರಗಳಲ್ಲಿ ಆ ಯಾವ ಮಟ್ಟದ ಪರಿಪೂರ್ಣತೆಯನ್ನು ಆ ರಾಷ್ಟ್ರ ಸಾಧಿಸಿದೆ ಎಂಬುದನ್ನು ನೋಡಬೇಕು. ಹೀಗಾಗಿ, ನಾವು ಇಂದು ಅತ್ಯಂತ ಪ್ರತಿಗಾಮಿ ಮತ್ತು ತೀವ್ರವಾದಿ ಕಾನೂನನ್ನು ಅನುಸರಿಸುವ, ಕುರ್‌ಆನ್ ಮತ್ತು ಇಸ್ಲಾಮಿನ ಸ್ಫೂರ್ತಿಗೆ ತದ್ವಿರುದ್ಧವಾಗಿ ಕಾರ್ಯಾಚರಿಸುವ, ಅದೇ ವೇಳೆ ತನ್ನ ಅತಿಕ್ರಮಗಳನ್ನು ಇಸ್ಲಾಮಿನ ಹೆಸರಲ್ಲಿ ಸಮರ್ಥಿಸಿಕೊಳ್ಳುವ ಸರಕಾರಗಳನ್ನೇ ನಮ್ಮ ಸುತ್ತಮುತ್ತ ನೋಡುತ್ತಿದ್ದೇವೆ. ನಿರ್ದಿಷ್ಟ ವರ್ಗ, ಕುಟುಂಬ ಅಥವಾ ಮಿಲಿಟರಿಯ ಆಡಳಿತವನ್ನು ಸಮರ್ಥಿಸಲಿಕ್ಕಾಗಿ ಸ್ವಘೋಷಿತ ಇಸ್ಲಾಮೀ ಸರಕಾರಗಳು ವಿವಿಧ ದೇಶಗಳಲ್ಲಿ ತಲೆಯೆತ್ತಿವೆ.

ಈ ಪೈಕಿ ಹೆಚ್ಚಿನ 'ಮುಸ್ಲಿಮ್' ರಾಷ್ಟ್ರಗಳು ನಿರಂಕುಶವಾದಿ ಮತ್ತು ದಮನಕಾರಿ ಸರ್ವಾಧಿಕಾರಿಗಳ ಕೈಯಲ್ಲಿದ್ದು ಹೆಚ್ಚಿನ ಸರಕಾರಗಳು ಜನರನ್ನು ಇರಾಕ್‌ನಲ್ಲಿ ಸದ್ದಾಮ್ ಹುಸೇನ್ ನಡೆಸಿಕೊಂಡದ್ದಕ್ಕಿಂತಲೂ ಕಡೆಯಾಗಿ ನೋಡಿಕೊಳ್ಳುತ್ತಿವೆ. ಅಲ್ಜೀರಿಯಾ, ಸಿರಿಯಾ, ಜೋರ್ಡಾನ್ ಮತ್ತು ಪಾಕಿಸ್ತಾನದ ನೀತಿ ಮತ್ತು ಕಾರ್ಯಕ್ರಮಗಳನ್ನು ಹತ್ತಿರದಿಂದ ನೋಡಿದಾಗ ಈ ಎಲ್ಲ ರಾಷ್ಟ್ರಗಳೂ ಮಾನವಹಕ್ಕು ಉಲ್ಲಂಘನೆ ನಡೆಸುತ್ತಿದ್ದು ನಾಗರಿಕ ಸ್ವಾತಂತ್ರ್ಯವನ್ನು ದಮನಿಸುತ್ತಲೇ ಬಂದಿವೆ. ಈ ರಾಷ್ಟ್ರಗಳ ಸರ್ವಾಧಿಕಾರಿಗಳು ಸತತವಾಗಿ ಚುನಾವಣೆ ಅಕ್ರಮಗಳನ್ನು ಎಸಗುತ್ತಲೇ ಬಂದಿದ್ದಾರೆ. ಅಷ್ಟೇ ಅಲ್ಲ, ಪ್ರತಿಪಕ್ಷಗಳ ನಾಯಕರನ್ನು ಮತ್ತು ಅವರ ಅನುಯಾಯಿಗಳನ್ನು ಜೈಲಿಗಟ್ಟುವುದು ಅಥವಾ ಹತ್ಯೆ ಮಾಡುವುದು, ಯಾವುದೇ ವಿಚಾರಣೆಯಿಲ್ಲದೆ ಅವರನ್ನು ಅನಿರ್ದಿಷ್ಟಾವಧಿಯವರೆಗೆ ಜೈಲಿನಲ್ಲಿರಿಸುವುದು, ಕೈದಿಗಳನ್ನು ದೈಹಿಕ ಮತ್ತು ಮಾನಸಿಕ ಯಾತನೆಗೆ ಗುರಿಪಡಿಸುವುದು ಹೀಗೆ ಮಾನವ ಹಕ್ಕು ಉಲ್ಲಂಘನೆ ಮತ್ತು ಅನ್ಯಾಯದ ಎಲ್ಲ ಕೃತ್ಯಗಳನ್ನೂ ಇವರು ನಡೆಸುತ್ತಾರೆ.

ಆದರೆ ಈ ಅಕ್ರಮ, ದೌರ್ಜನ್ಯಗಳಿಗೂ ಇಸ್ಲಾಮಿಗೂ ಸಂಬಂಧ ಕಲ್ಪಿಸುವ ತಪ್ಪು ಮಾಡಕೂಡದು. ಇಸ್ಲಾಮೀ ಕಾನೂನನ್ನು ಮೇಲಿಂದ ಮೇಲೆ ಅಭ್ಯಾಸ ನಡೆಸಿದರೂ, ಈ ದೇಶಗಳಲ್ಲಿ ಆಚರಣೆಯಲ್ಲಿರುವ ಕಟ್ಟಳೆಗಳಿಗೂ ಇಸ್ಲಾಮಿಗೂ ಸಂಬಂಧವಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

# ಮುಸ್ಲಿಮರೋ ? ಮಹಮದೀಯರೋ ?

ಮುಸ್ಲಿಮರು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರನ್ನು ಯಾವ ರೀತಿಯಲ್ಲಿಯೂ ಪೂಜಿಸುವುದಿಲ್ಲ. ಮುಹಮ್ಮದ್, ಸರ್ವಶಕ್ತನಾದ ದೇವರು ಕಳುಹಿಸಿದ ಕೊನೆಯ ಸಂದೇಶವಾಹಕರು ಮಾತ್ರ. ಇತರ ಎಲ್ಲ ಪ್ರವಾದಿಗಳಂತೆ ಇವರೂ ಒಬ್ಬ ಮನುಷ್ಯ. ಆದರೆ, ಮುಸ್ಲಿಮರು ಮುಹಮ್ಮದ್ ಅವರನ್ನು ಪೂಜಿಸುತ್ತಾರೆ ಎಂಬ ತಪ್ಪು ತಿಳುವಳಿಕೆ ಕೆಲವರಲ್ಲಿದೆ. ಆದ್ದರಿಂದ ಅವರು ಮುಸ್ಲಿಮರನ್ನು ಮಹಮದೀಯರು (ಮಹಮ್ಮಡನ್) ಎಂದು ಸಂಬೋಧಿಸುತ್ತಾರೆ.

ಪ್ರವಾದಿ ಮಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಏಸು ಕ್ರಿಸ್ತರಂತೆ ಯಾವತ್ತೂ ತಮಗೆ ದೈವತ್ವವಿದೆ ಎಂದು ವಾದಿಸಲಿಲ್ಲ. ಏಕದೇವನಾದ ಅಲ್ಲಾಹನನ್ನು ಮಾತ್ರ ಆರಾಧಿಸಬೇಕೆಂದು ಅವರು ಜನರಿಗೆ ಕರೆ ನೀಡಿದರು. ತಾನೊಬ್ಬ ಮನುಷ್ಯ ಮಾತ್ರ ಎಂಬುದನ್ನು ಅವರು ಪದೇ ಪದೇ ಸಾರಿ ಹೇಳಿದರು. ಜನರು ತಮ್ಮನ್ನು ಪೂಜಿಸುವುದನ್ನು ತಡೆಯಲಿಕ್ಕಾಗಿ ಪ್ರವಾದಿ ಮಹಮ್ಮದ್ ಅವರು ತಮ್ಮನ್ನು ಅಲ್ಲಾಹನ ದಾಸ ಮತ್ತು ಸಂದೇಶವಾಹಕ ಎಂದೇ ಸಂಬೋಧಿಸುವಂತೆ ಜನರಿಗೆ ತಾಕೀತು ಮಾಡುತ್ತಿದ್ದರು. "ಕ್ರೈಸ್ತರು ಮರ್ಯಮರ ಪುತ್ರ ಏಸು ಕ್ರಿಸ್ತನನ್ನು ಪ್ರಶಂಸಿಸಿದಂತೆ ನನ್ನನ್ನು ಪ್ರಶಂಸಿಸಬೇಡಿ. ನಾನು ಅಲ್ಲಾಹನ ಗುಲಾಮ ಮತ್ತು ಸಂದೇಶವಾಹಕ ಮಾತ್ರ" ಎಂದು ಅವರು ತಮ್ಮ ಶಿಷ್ಯಂದಿರಿಗೆ ಜ್ಞಾಪಿಸುತ್ತಿದ್ದರು.

ಅಲ್ಲಾಹನು ಮುಹಮ್ಮದ್ ಅವರನ್ನು ತನ್ನ ಅಂತಿಮ ಸಂದೇಶವಾಹಕನಾಗಿ ನೇಮಿಸಿದ್ದು ಮಾತು ಕೃತಿಗಳ ಮೂಲಕ ದೈವಿಕ ಸಂದೇಶವನ್ನು ಮನುಕುಲಕ್ಕೆ ತಲುಪಿಸುವ ದೌತ್ಯವನ್ನು ಅವರಿಗೆ ವಹಿಸಿಕೊಟ್ಟಿದ್ದಾನೆ. ಅಲ್ಲಾಹನ ಕಡೆಯಿಂದ ದೈವಿಕ ಸತ್ಯವನ್ನು ಜನರಿಗೆ ತಲುಪಿಸಿದರು ಎಂಬ ಕಾರಣಕ್ಕಾಗಿ ಹಾಗೂ ತಾವು ಮೈಗೂಡಿಸಿಕೊಂಡ ಉನ್ನತ ಚಾರಿತ್ರ್ಯಕ್ಕಾಗಿ ಮುಸ್ಲಿಮರು ಪ್ರವಾದಿ ಮುಹಮ್ಮದ್ ಅವರನ್ನು ಗೌರವಿಸುತ್ತಾರೆ ಮತ್ತು ಪ್ರೀತಿಸುತ್ತಾರೆ.

ಪ್ರವಾದಿ ಮುಹಮ್ಮದ್ ಅವರ ಶ್ರೇಷ್ಠ ಮಾದರಿಯನ್ನು ಅನುಸರಿಸಲು ಮುಸ್ಲಿಮರು ಪ್ರಯತ್ನಿಸುತ್ತಾರೆ. ಆದರೆ ಎಂದಿಗೂ ಅವರನ್ನು ಪೂಜಿಸುವುದಿಲ್ಲ. ಎಲ್ಲ ದೇವಸಂದೇಶವಾಹಕರನ್ನೂ ಗೌರವಿಸಬೇಕೆಂದು ಇಸ್ಲಾಮ್ ಮುಸ್ಲಿಮರಿಗೆ ಬೋಧಿಸಿದೆ. ಆದರೆ, ಗೌರವಿಸುವುದು, ಪ್ರೀತಿಸುವುದು ಎಂದರೆ ಅವರನ್ನು ಪೂಜಿಸುವುದು ಎಂದು ಅರ್ಥವಲ್ಲ. ಎಲ್ಲ ವಿಧದ ಪೂಜೆ ಮತ್ತು ಆರಾಧನೆ ಅಲ್ಲಾಹನಿಗೆ ಮಾತ್ರ ಸಲ್ಲಬೇಕೆಂಬುದು

ಮುಸ್ಲಿಮರ ದೃಢ ನಂಬಿಕೆ.

ಸರ್ವಶಕ್ತನಾದ ದೇವರನ್ನು ಬಿಟ್ಟು ಅಥವಾ ದೇವರ ಜತೆಗೆ ಪ್ರವಾದಿ ಮಹಮ್ಮದ್‌ರನ್ನಾಗಲಿ ಅಥವಾ ಇತರ ಯಾರನ್ನೇ ಆಗಲಿ ಪೂಜಿಸುವುದು ಇಸ್ಲಾಮಿನ ಪ್ರಕಾರ ಅಕ್ಷಮ್ಯ ಅಪರಾಧ. ದೇವರನ್ನು ಹೊರತುಪಡಿಸಿ ಯಾರನ್ನೇ ಆದರೂ ಪೂಜಾರ್ಹವೆಂದು ಭಾವಿಸಿದರೆ ಆ ವ್ಯಕ್ತಿ ಇಸ್ಲಾಮಿನ ಪರಿಧಿಯಿಂದ ಹೊರ ಹೋಗುತ್ತಾನೆ. ಮುಸ್ಲಿಮರು ಅಲ್ಲಾಹನನ್ನು ಮಾತ್ರ ಆರಾಧಿಸಬೇಕೆಂಬುದು ಅವರ ವಿಶ್ವಾಸದ ಭಾಗವಾಗಿದೆ.

ಕುರ್‌ಆನ್‌ನಲ್ಲಿ ಇಸ್ಲಾಮ್ ಮತ್ತು ಮುಸ್ಲಿಮ್ ಎಂಬ ಪದಗಳು ವ್ಯಾಪಕವಾಗಿ ಬಳಕೆಯಾಗಿವೆ.

> **"ಖಂಡಿತವಾಗಿಯೂ ಅಲ್ಲಾಹನ ದೃಷ್ಟಿಯಲ್ಲಿ ಇಸ್ಲಾಮ್ (ಶರಣಾಗತಿ) ನೈಜ ಧರ್ಮವಾಗಿದೆ. (ಕುರ್‌ಆನ್ 3:19)**

> **"ಅವನು (ಅಲ್ಲಾಹನು) ನಿಮ್ಮನ್ನು ಮುಸ್ಲಿಮರು ಎಂದು ಹೆಸರಿಸಿರುವನು. ಹಿಂದೆಯೂ, ಇದರಲ್ಲೂ (ಈ ಗ್ರಂಥದಲ್ಲೂ ಇದೇ ನಿಮ್ಮ ಹೆಸರು)." (ಕುರ್‌ಆನ್ 22:78)**

ಆದಮರಿಂದ ಮುಹಮ್ಮದ್‌ರವರೆಗೆ ಎಲ್ಲ ಸಂದೇಶವಾಹಕರು ಸಾರಿದ ಸಂದೇಶ ಒಂದೇ: ಅಲ್ಲಾಹನನ್ನು ಅನುಸರಿಸಿರಿ, ಇನ್ನಾರನ್ನೂ ಅನುಸರಿಸಬೇಡಿರಿ. ತನ್ನ ಸಂದೇಶವಾಹಕರ ಮೂಲಕ ಕಳುಹಿಸಲಾದ ಈ ಸಂದೇಶವು ಪ್ರವಾದಿಗಳ ಶೃಂಖಲೆಯಲ್ಲಿ ಕೊನೆಯವರಾಗಿದ್ದ ಮುಹಮ್ಮದ್‌ರೊಂದಿಗೆ ಕೊನೆಯಾಗುತ್ತದೆ.

ಇದನ್ನು ಕುರ್‌ಆನ್ ಈ ರೀತಿ ಪ್ರಸ್ತಾಪಿಸುತ್ತದೆ:

> **"ಇಂದು ನಾನು ನಿಮಗಾಗಿ ನಿಮ್ಮ ಧರ್ಮವನ್ನು ಪೂರ್ಣಗೊಳಿಸಿದ್ದೇನೆ ಮತ್ತು ನಿಮ್ಮ ಪಾಲಿಗೆ ನನ್ನ ಕೊಡುಗೆಯನ್ನು ಪೂರ್ತಿಗೊಳಿಸಿದ್ದೇನೆ. ಹಾಗೆಯೇ ನಿಮಗಾಗಿ ನಾನು, ಇಸ್ಲಾಮ್ ಧರ್ಮವನ್ನು ನಿಮ್ಮ ಧರ್ಮವೆಂಬ ನೆಲೆಯಲ್ಲಿ ಅಂಗೀಕರಿಸಿದ್ದೇನೆ." (ಕುರ್‌ಆನ್ 5:3)**

ಆದ್ದರಿಂದ ಇಸ್ಲಾಮನ್ನು ಮಹಮ್ಮದೀಯ ಧರ್ಮ ಎಂದಾಗಲೀ ಮುಸ್ಲಿಮರನ್ನು ಮಹಮ್ಮದೀಯರೆಂದು ಕರೆಯುವುದಾಗಲೀ ಮುಹಮ್ಮದ್‌ರನ್ನು ಇಸ್ಲಾಮಿನ ಸ್ಥಾಪಕರೆಂದು ಕರೆಯುವುದಾಗಲಿ ತಪ್ಪು. ವಾಸ್ತವವೆಂದರೆ ಮುಹಮ್ಮದರು ಇಸ್ಲಾಮಿನ ಅಂತಿಮ ಪ್ರವಾದಿ ಮಾತ್ರ.

# ಷಿಯಾ ಮತ್ತು ಸುನ್ನಿ ಮುಸ್ಲಿಮರು ?

ಮುಸ್ಲಿಮರಲ್ಲಿರುವ ಷಿಯಾ ಮತ್ತು ಸುನ್ನಿ ಎಂಬ ಗುಂಪುಗಳು ಸಾಮಾನ್ಯವಾಗಿ ಮುಸ್ಲಿಮೇತರರ ಮನದಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಅನೇಕ ಮುಸ್ಲಿಮರಿಗೆ ಇತಿಹಾಸದ ಸರಿಯಾದ ಜ್ಞಾನ ಇಲ್ಲದಿರುವ ಕಾರಣ ಅಥವಾ ಈ ವಿಷಯದ ಚಾರಿತ್ರಿಕ ಹಿನ್ನೆಲೆಯನ್ನು ವಿಷದೀಕರಿಸಲು ಬೇಕಾದ ಕೌಶಲ ಇಲ್ಲದ ಕಾರಣ ಇವು ಇನ್ನೂ ಪ್ರಶ್ನೆಗಳಾಗಿಯೇ ಉಳಿದಿವೆ.

## ಷಿಯಾ ಮತ್ತು ಸುನ್ನಿ ಮುಸ್ಲಿಮರ ನಡುವೆ ಏನು ವ್ಯತ್ಯಾಸ ?

ಷಿಯಾ ಮತ್ತು ಸುನ್ನಿ ಮುಸ್ಲಿಮರ ಮಟ್ಟಿಗೆ ಇಸ್ಲಾಮಿನ ಮೂಲಭೂತ ನಂಬಿಕೆಗಳು, ಪ್ರಾರ್ಥನೆ, ಉಪವಾಸ, ದಾನ, ತೀರ್ಥ ಯಾತ್ರೆ ಇತ್ಯಾದಿಗಳು ಸಮಾನವಾಗಿವೆ. ಈ ಎರಡು ಗುಂಪುಗಳ ನಡುವಿನ ಭಿನ್ನತೆಯು ಮೂಲಭೂತವಾಗಿ ರಾಜಕೀಯ ಸ್ವರೂಪದ್ದಾಗಿದ್ದು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ನಿಧನದ ಎರಡು ದಶಕಗಳ ನಂತರ ಈ ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡವು. ನಂತರದ ಶತಮಾನಗಳಲ್ಲಿ ಈ ಭಿನ್ನಾಭಿಪ್ರಾಯಗಳು ಹಲವಾರು ಭಿನ್ನ ಆಚರಣೆ ಮತ್ತು ಪದ್ಧತಿಗಳಿಗೆ ನಾಂದಿ ಹಾಡಿದ್ದು, ಉಭಯ ಗುಂಪುಗಳ ಮಟ್ಟಿಗೆ ಇವು ಅಧ್ಯಾತ್ಮಿಕ ಮಹತ್ವವನ್ನೂ ಪಡೆದುಕೊಂಡಿವೆ.

## ಮೂಲ – ನಾಯಕತ್ವದ ಪ್ರಶ್ನೆ :

ಷಿಯಾ ಮತ್ತು ಸುನ್ನಿಗಳ ಒಡಕಿನ ಮೂಲ ಇರುವುದು ಪ್ರವಾದಿ ಮಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರ ಉತ್ತರಾಧಿಕಾರಿ ಯಾರಾಗಬೇಕು ಎಂಬ ಪ್ರಶ್ನೆಯಲ್ಲಿ. ಯಾರು ಸಮರ್ಥರಿದ್ದಾರೋ ಅವರನ್ನು ಚುನಾವಣೆಯ ಮೂಲಕ

ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಬೇಕು ಎಂಬುದು ಪ್ರವಾದಿವರ್ಯರ ಹೆಚ್ಚಿನ ಸಂಗಾತಿಗಳ ನಿಲುವಾಗಿತ್ತು. ಸುನ್ನಿ ಮುಸ್ಲಿಮರು ಈ ನಿಲುವನ್ನು ಸಮರ್ಥಿಸುತ್ತಾರೆ. ಉತ್ತರಾಧಿಕಾರಿಯ ಆಯ್ಕೆಯು ಈ ಸೂತ್ರದ ಪ್ರಕಾರವೇ ನಡೆದಿದ್ದು ಪ್ರವಾದಿ ಮಹಮ್ಮದ್ ಅವರ ಆಪ್ತಸಂಗಾತಿ ಮತ್ತು ಸಲಹೆಗಾರ ಅಬೂಬಕರ್ ಇಸ್ಲಾಮೀ ರಾಷ್ಟ್ರದ ಮೊದಲ ಅಧ್ಯಕ್ಷ ಅಥವಾ ಖಲೀಫರಾಗಿ ಆಯ್ಕೆಯಾದರು. ಸುನ್ನಿ ಎಂಬುದು ಅರಬಿ ಮೂಲದ ಪದವಾಗಿದ್ದು, "ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ರ ಮಾದರಿಯನ್ನು ಅನುಸರಿಸುವವರು" ಎಂಬುದು ಅದರ ಅರ್ಥ.

ಇನ್ನೊಂದೆಡೆ, ಕೆಲವು ಮುಸ್ಲಿಮರು ನಾಯಕತ್ವವು ಕುಟುಂಬದದಲ್ಲಿಯೇ ಇರಬೇಕು, ಅಥವಾ ಪ್ರವಾದಿವರ್ಯರು ಸೂಚಿಸಿದವರೇ ನಾಯಕರಾಗಬೇಕು ಇಲ್ಲವೇ ದೇವರೇ ಆಯ್ಕೆ ಮಾಡಿದ ಇಮಾಮರು ನಾಯಕರಾಗಬೇಕು ಎಂದು ವಾದಿಸಿದರು.

ಪ್ರವಾದಿ ಮಹಮ್ಮದ್‌ರ ನಿಧನಾನಂತರ ನಾಯಕತ್ವವು ನೇರವಾಗಿ ಅವರ ದಾಯಾದಿ / ಅಳಿಯ, ಅಲಿ ಅವರ ಕೈಗೆ ಹೋಗಬೇಕಾಗಿತ್ತು ಎಂಬುದು ಷಿಯಾ ಮುಸ್ಲಿಮರ ವಾದ. ಇತಿಹಾಸದುದ್ದಕ್ಕೂ ಚುನಾಯಿತ ಮುಸ್ಲಿಮ್ ನಾಯಕತ್ವವನ್ನು ಷಿಯಾ ಮುಸ್ಲಿಮರು ತಿರಸ್ಕರಿಸುತ್ತಲೇ ಬಂದಿದ್ದಾರೆ. ಪ್ರವಾದಿ ಮಹಮ್ಮದ್ ಅಥವಾ ದೇವರಿಂದಲೇ ನೇಮಕಗೊಂಡವರೆಂದು ತಾವು ಭಾವಿಸುವ ಇಮಾಮ್‌ಗಳ ಶೃಂಖಲೆಯನ್ನು ನೈಜ ಉತ್ತರಾಧಿಕಾರಿಗಳೆಂದು ಷಿಯಾ ಮುಸ್ಲಿಮರು ಅಂಗೀಕರಿಸುತ್ತಾರೆ. ಷಿಯಾ ಎಂಬುದು ಅರಬಿ ಮೂಲದ ಪದವಾಗಿದ್ದು ಒಂದು ಸಮೂಹ ಅಥವಾ ಬೆಂಬಲಿಗರ ಗುಂಪು ಎಂದರ್ಥ. ಇದೀಗ ಸಾರ್ವತ್ರಿಕವಾಗಿ ಬಳಕೆಯಾಗುತ್ತಿರುವ ಷಿಯಾ ಎಂಬ ಪದವು 'ಷಿಯಾತೆ ಅಲಿ' ಅಥವಾ ಅಲಿಯ ಪಕ್ಷ ಎಂಬುದರ ಸಂಕ್ಷಿಪ್ತ ರೂಪ. ಅವರನ್ನು ಅಹ್ಲ್-ಅಲ್-ಬೈತ್ ಅಥವಾ (ಪ್ರವಾದಿ ಮಹಮ್ಮದ್ ಅವರ) ಮನೆತನದ ಜನರು ಎಂದು ಗುರುತಿಸಲಾಗುತ್ತದೆ.

**ಹಂಚಿಕೆ :**

ಮುಸ್ಲಿಮ್ ಜನಸಂಖ್ಯೆಯಲ್ಲಿ ಸುನ್ನಿಗಳ ಪ್ರಮಾಣ ಶೇ.85ರಷ್ಟಿದೆ. ಮುಸ್ಲಿಮ್ ಬಾಹುಳ್ಯವಿರುವ 56 ರಾಷ್ಟ್ರಗಳ ಪೈಕಿ ಇರಾನ್, ಇರಾಕ್, ಬಹರೈನ್ ಮತ್ತು ಆಜರ್‌ಬೈಜಾನ್ ಹೊರತು ಪಡಿಸಿ ಇತರೆಲ್ಲ ಕಡೆ ಸುನ್ನಿಗಳೇ ಬಹುಸಂಖ್ಯಾತರಾಗಿದ್ದಾರೆ. ಆದರೆ ಭಾರತ, ಪಾಕಿಸ್ತಾನ, ಅಫ್ಘಾನಿಸ್ತಾನ, ಯಮನ್, ಸಿರಿಯಾ ಮತ್ತು ಲೆಬನಾನ್‌ಗಳಲ್ಲಿ ಷಿಯಾಗಳು ಗಮನಾರ್ಹ ಸಂಖ್ಯೆಯಲ್ಲಿದ್ದಾರೆ.

## ಧಾರ್ಮಿಕ ಆಚರಣೆಗಳಲ್ಲಿ ಭಿನ್ನತೆ

ರಾಜಕೀಯ ನಾಯಕತ್ವ ಕುರಿತ ಪ್ರಶ್ನೆಯು ಕೆಲವು ಅಧ್ಯಾತ್ಮಿಕ ಆಚರಣೆಗಳ ಮೇಲೂ ಪ್ರಭಾವ ಬೀರಿದೆ. ಇದರಿಂದಾಗಿ ಮುಸ್ಲಿಮರ ಎರಡು ಪಂಗಡಗಳಲ್ಲಿ ವಿಭಿನ್ನ ಆಚರಣೆ, ಹಕ್ಕು ಮತ್ತು ಸಂಪ್ರದಾಯಗಳು ಬೆಳೆದು ಬಂದಿವೆ.

ಈ ಭಿನ್ನಾಭಿಪ್ರಾಯ ಮತ್ತು ಭಿನ್ನ ಆಚರಣೆಗಳ ಹೊರತಾಗಿಯೂ ಷಿಯಾ ಮತ್ತು ಸುನ್ನಿ ಮುಸ್ಲಿಮರು ಸಮಾನವಾದ ಇಸ್ಲಾಮೀ ನಂಬಿಕೆಗಳನ್ನು ಹೊಂದಿದ್ದು ಧಾರ್ಮಿಕವಾಗಿ ಸೋದರರು ಎಂದೇ ಗುರುತಿಸಲ್ಪಡುತ್ತಾರೆ. ವಾಸ್ತವದಲ್ಲಿ ಬಹುತೇಕ ಮುಸ್ಲಿಮರು ತಮ್ಮನ್ನು ಷಿಯಾಗಳೆಂದೊ ಸುನ್ನಿಗಳೆಂದೋ ಗುರುತಿಸಲು ಇಷ್ಟಪಡದೆ 'ಮುಸ್ಲಿಮರು' ಎಂದಷ್ಟೆ ಕರೆಯಲು ಇಷ್ಟಪಡುತ್ತಾರೆ.

## ಧಾರ್ಮಿಕ ನಾಯಕತ್ವ :

ಇಮಾಮ್‌ಗಳು ನೈಸರ್ಗಿಕವಾಗಿ ಪಾಪಮುಕ್ತರಾಗಿದ್ದು ಅವರ ಅಧಿಕಾರವು ದೈವದತ್ತವಾಗಿರುವುದರಿಂದ ಅವರು ತಪ್ಪು ಎಸಗುವ ಪ್ರಮೇಯವೇ ಇಲ್ಲ ಎಂಬುದು ಷಿಯಾ ಮುಸ್ಲಿಮರ ನಂಬಿಕೆ. ಆದ್ದರಿಂದ ಷಿಯಾ ಮುಸ್ಲಿಮರು ಸಾಮಾನ್ಯವಾಗಿ ಇಮಾಮ್‌ಗಳನ್ನು ಸಂತರೆಂದು ಗೌರವಿಸುತ್ತಾರೆ ಮತ್ತು ಅವರ ಸಮಾಧಿಗೆ ತೀರ್ಥಯಾತ್ರೆ ಕೈಗೊಳ್ಳುತ್ತಾರೆ.

ಆದರೆ ಸುನ್ನಿ ಮುಸ್ಲಿಮರ ಪ್ರಕಾರ ಇಸ್ಲಾಮಿನಲ್ಲಿ ವಂಶಪಾರಂಪರ್ಯದ ಲಾಭ ಪಡೆದು ಧಾರ್ಮಿಕ ನಾಯಕರ ವರ್ಗ ಅಥವಾ ಪುರೋಹಿತಶಾಹಿ ಅಸ್ತಿತ್ವಕ್ಕೆ ಬರಲು ಅವಕಾಶವಿಲ್ಲ. ಅಷ್ಟೇ ಅಲ್ಲ ಸಂತರನ್ನು ಆರಾಧನಾ ಭಾವದಿಂದ ಗೌರವಿಸುವುದಕ್ಕೂ ಇಸ್ಲಾಮಿನಲ್ಲಿ ಅವಕಾಶವಿಲ್ಲ ಎಂಬುದು ಅವರ ವಾದ. ಸಮುದಾಯದ ನಾಯಕತ್ವವು ಯಾರದೇ ಜನ್ಮಸಿದ್ಧ ಹಕ್ಕು ಅಲ್ಲ, ಅದು ಜನರು ವಹಿಸಿದ ಹೊಣೆಗಾರಿಕೆಯಾಗಿದ್ದು (ಟ್ರಸ್ಟ್) ಜನರಿಗೆ ಅದನ್ನು ವಾಪಸ್ ಪಡೆಯುವ ಅಧಿಕಾರವೂ ಇದೆ ಎಂಬುದು ಸುನ್ನಿ ಮುಸ್ಲಿಮರ ವಾದ.

## ಘರ್ಷಣೆ ಮತ್ತು ತಿಕ್ಕಾಟಗಳು :

ಪಾಕಿಸ್ತಾನ, ಭಾರತ ಮತ್ತು ಸೌದಿ ಅರೇಬಿಯಾ ಸಹಿತ ಹಲವು ರಾಷ್ಟ್ರಗಳಲ್ಲಿ ಈ ಎರಡು ಗುಂಪುಗಳ ನಡುವಿನ ಜನಾಂಗೀಯ ಒಡಕು ಕೆಲವೊಮ್ಮೆ ಸಾಮಾಜಿಕ ಮತ್ತು

ರಾಜಕೀಯ ರಂಗಗಳಿಗೂ ವಿಸ್ತರಣೆಗೊಳ್ಳುತ್ತದೆ. ಈ ಪೈಕಿ ಪ್ರಜಾಪ್ರಭುತ್ವದ ಆಳ್ವಿಕೆಯಿರುವ ರಾಷ್ಟ್ರಗಳಲ್ಲಿ – ಅಂದರೆ ಲೆಬನಾನ್, ಭಾರತ, ಪಾಕಿಸ್ತಾನ ಇತ್ಯಾದಿ – ವಿಭಿನ್ನ ರಾಜಕೀಯ ನಿಲುವುಗಳ ಅಥವಾ ಗುಂಪುಗಳ ಮೂಲಕ ಈ ಭಿನ್ನಾಭಿಪ್ರಾಯಗಳು ಪ್ರತಿಬಿಂಬಿಸಲ್ಪಡುತ್ತವೆ. ಸೌದಿ ಅರೇಬಿಯಾ ಮತ್ತು ಸಿರಿಯಾಗಳಲ್ಲಿ ಈ ಎರಡು ಪಂಗಡಗಳ ನಡುವಣ ಒಡಕು ಸದಾ ಹಬೆಯಾಡುತ್ತಲೇ ಇದೆ. ಇರಾಕ್ ಮತ್ತು ಅಫ್ಘಾನಿಸ್ತಾನಗಳಲ್ಲಿ ಎರಡು ಗುಂಪುಗಳ ನಡುವೆ ಸಶಸ್ತ್ರ ಸಂಘರ್ಷಗಳೂ ನಡೆದಿದ್ದು ಕಳೆದ ಹತ್ತು ವರ್ಷಗಳಲ್ಲಿ ಯುದ್ಧಗಳೂ ನಡೆದಿವೆ. ಭಾರತದ ಲಖನೌನಂತಹ ನಗರಗಳಲ್ಲೂ ಮೊಹರ್ರಮ್ ಮೆರವಣಿಗೆಗೆ ಸಂಬಂಧಿಸಿದಂತೆ ಎರಡು ಪಂಗಡಗಳಿಗೆ ಸೇರಿದವರು ಹೊಡೆದಾಡಿಕೊಂಡದ್ದಿದೆ. ಸ್ವಾರ್ಥ ಹಿತಾಸಕ್ತಿಗಳು ಈ ಕ್ಷುಲ್ಲಕ ತಿಕ್ಕಾಟಗಳನ್ನು ದುರುಪಯೋಗಪಡಿಸಿಕೊಳ್ಳುತ್ತವೆ.

ಇಷ್ಟೊಂದು ಅಗಾಧ ಪ್ರಮಾಣದ ಅನುಯಾಯಿಗಳಿರುವ ಧರ್ಮದಲ್ಲಿ ಭಿನ್ನತೆಗಳು ಸಹಜ ಎಂಬ ವಿಚಾರವನ್ನು ಮೇಲಿನ ಅಂಶಗಳು ದೃಢಪಡಿಸುತ್ತವೆ. ಇಸ್ಲಾಮ್ ಒಂದು ಏಕಾಕಾರದ ಸರಳೀಕೃತ ಸಮುದಾಯವಲ್ಲ ಮತ್ತು ಇತರ ಧರ್ಮಗಳ ಮೇಲೆ ಪ್ರಾಬಲ್ಯ ಸಾಧಿಸುವುದೇ ಅದರ ಉದ್ದೇಶವಲ್ಲ. ಇಸ್ಲಾಮ್, ವಿಭಿನ್ನ ಜನಾಂಗೀಯ, ಭಾಷೀಯ, ಸಾಮಾಜಿಕ ಮತ್ತು ರಾಜಕೀಯ ಗುಂಪುಗಳೊಂದಿಗೆ ಸೃಜನಾತ್ಮಕವಾಗಿ ತನ್ನನ್ನು ಮುಖಾಮುಖಿಯಾಗಿಸಿಕೊಂಡಿದ್ದು ವಿಭಿನ್ನ ಸಂಸ್ಕೃತಿಗಳ ಸಂಕರವಾಗಿ ಹೊರಹೊಮ್ಮಿದೆ. ಇದು ಆಶ್ಚರ್ಯದ ಸಂಗತಿಯೇನೂ ಅಲ್ಲ. ಮೆಡಿಟೆರೆನಿಯನ್‌ನ ಕಾಸಾಬ್ಲಾಂಕಾದಿಂದ ಪ್ಯಾಸಿಫಿಕ್‌ನ ಬ್ರೂನೈ ತನಕ ವ್ಯಾಪಿಸಿರುವ ಯಾವುದೇ ಧರ್ಮ ಇಷ್ಟೊಂದು ಅಗಾಧ ಭೂಭಾಗದಲ್ಲಿ ತನ್ನ ಸಾಂಸ್ಕೃತಿಕ ಮತ್ತು ಸಾಮಾಜಿಕ ಏಕಸ್ವಾಮ್ಯವನ್ನು ಉಳಿಸಿಕೊಂಡ ಉದಾಹರಣೆ ಇಲ್ಲ. ಅಥವಾ ಇಸ್ಲಾಮ್ ಹಾಗೆ ಪ್ರತಿಪಾದಿಸುವುದೂ ಇಲ್ಲ. ಇಸ್ಲಾಮಿನ ಮೂಲಭೂತ ತತ್ವಗಳು ಇಷ್ಟೊಂದು ಅಗಾಧವಾಗಿರುವ ಸಮುದಾಯವನ್ನು ಪೋಣಿಸಿವೆ ಎಂಬುದು ಗಮನಾರ್ಹ. ಷಿಯಾ ಮತ್ತು ಸುನ್ನಿಗಳ ನಡುವಿನ ಭಿನ್ನಾಭಿಪ್ರಾಯಗಳನ್ನೂ ನಾವು ಇದೇ ನೆಲೆಗಟ್ಟಿನಲ್ಲಿ ನೋಡಬೇಕು.

## ಉರ್ದು ವಿದೇಶಿ ಭಾಷೆಯೇ ?

ಉರ್ದು ಭಾಷೆಯನ್ನು ಬೆಳೆಸುವ ಬಗ್ಗೆ ಆಗಿಂದಾಗ್ಗೆ ಕೇಳಿಬರುತ್ತಿರುವ ಘೋಷಣೆಗಳು ಯಾವುದೋ ವಿದೇಶಿ ಭಾಷೆಗೆ ಪ್ರೋತ್ಸಾಹ ನೀಡಲಾಗುತ್ತಿದೆಯೇನೋ ಎಂಬ ಭಾವನೆ ಮೂಡಿಸುತ್ತಿದೆ. ಇದು ಕೂಡಾ ಒಂದು ತಪ್ಪುತಿಳುವಳಿಕೆ. ಭಾರತೀಯ ಉಪಖಂಡದ ಮುಸ್ಲಿಮರಿಗೆ ಉರ್ದು ಅನನ್ಯತೆಯ ಭಾಗವಾಗಿರಬಹುದು. ಆದರೆ, ಇದು ಸಂಪೂರ್ಣವಾಗಿ ಒಂದು ಇಂಡೋ–ಆರ್ಯನ್ ಭಾಷೆಯಾಗಿದ್ದು, ವ್ಯಾಕರಣವು ಸಂಸ್ಕೃತ ಮೂಲದ್ದಾಗಿದೆ. ಭಾರತದಲ್ಲಿ ಮೊಘಲರ ಆಡಳಿತ ಕಾಲದಲ್ಲಿ ಮಿಲಿಟರಿ ದಂಡು ಪ್ರದೇಶದಲ್ಲಿ ಬೆಳವಣಿಗೆ ಕಂಡ ಉರ್ದು ಭಾಷೆಯು ಹಿಂದಿ, ಸಂಸ್ಕೃತ, ಬ್ರಜ್ ಭಾಷಾ, ಪ್ರಾಕೃತ ಮತ್ತು ಪಾಲಿ ಭಾಷೆಗಳನ್ನಾಡುವ ಹಲವು ಜನಾಂಗೀಯ ಗುಂಪುಗಳ ಸಂಪರ್ಕದಿಂದ ಮತ್ತಷ್ಟು ಬಲಿಷ್ಠವಾಯಿತು.

ಭಾರತದಲ್ಲಿ ಇರುವ ಎಲ್ಲ ಮುಸ್ಲಿಮರೂ ಉರ್ದು ಮಾತನಾಡುವವರಲ್ಲ ಅಥವಾ ಆ ಭಾಷೆಯನ್ನು ಬಳಸುವ (ಅಥವಾ ಭಾಷೆಯ ಬೆಳವಣಿಗೆಗೆ ಕೊಡುಗೆ ನೀಡಿದ) ಎಲ್ಲರೂ ಮುಸ್ಲಿಮರಲ್ಲ. ಉರ್ದುವಿನ ಸಾಹಿತ್ಯಕ ಪರಂಪರೆಯು ಜಾತ್ಯತೀತ ನೆಲೆಗಟ್ಟಿನ ಮೇಲೆ ನಿಂತಿದ್ದು, ಹಿಂದೂ ಕವಿಗಳು, ಬರಹಗಾರರು, ನಾಟಕಕಾರರು, ಪ್ರಬಂಧಕಾರರು ಈ ಭಾಷೆಯ ಬೆಳವಣಿಗೆಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಭಗವದ್ಗೀತೆಯು ಉರ್ದು ಭಾಷೆಯಲ್ಲಿ ಅನುವಾದಗೊಂಡಷ್ಟು ಬೇರಾವ ಭಾಷೆಯಲ್ಲೂ ತರ್ಜುಮೆಗೊಂಡಿಲ್ಲ. ಉರ್ದು ಭಾಷೆಯ ಪ್ರಮುಖ ಲೇಖಕರಾದ ಆನಂದ್ ನಾರಾಯಣ ಮುಲ್ಲಾ, ಮಾಲಿಕ್ ರಾಮ್, ಕ್ರಿಷನ್ ಚಂದರ್, ಬಿಶೇಷರ್ ಪ್ರದೀಪ್, ಮನೋರಮಾ ದಿವಾನ್, ಪ್ರೇಮ್‌ಚಂದ್, ರಘುಪತಿ, ಫಿರಾಕ್ ಗೋರಖ್‌ಪುರಿ, ಬ್ರಿಜ್ ನಾರಾಯಣ್ ಚಕ್‌ಬಸ್ತ್, ಗೋಪಿಚಂದ್ ನಾರಂಗ್ ಇವರೆಲ್ಲರೂ ಹಿಂದೂ ಸಮುದಾಯಕ್ಕೆ ಸೇರಿದವರು. ಉರ್ದು ಭಾಷೆಗೆ ಮಧ್ಯ ಏಷಿಯಾದೊಂದಿಗಾಗಲೀ ಅಥವಾ ಅರಬರೊಂದಿಗಾಗಲೀ ಯಾವುದೇ ಸಂಬಂಧವಿಲ್ಲ. ಪಾಕಿಸ್ತಾನವು ಉರ್ದುವನ್ನು ರಾಷ್ಟ್ರೀಯ ಮಟ್ಟದಲ್ಲಿ ಅಧಿಕೃತ ಭಾಷೆಯಾಗಿ ಅಂಗೀಕರಿಸಿದೆ ಎಂಬುದೇನೋ ನಿಜ. ಆದರೆ, ಪಾಕಿಸ್ತಾನದ ಎಲ್ಲ ನಾಲ್ಕು ಪ್ರಾಂತ್ಯಗಳ ಜನರು ತಮ್ಮದೇ ಪ್ರಾಂತೀಯ ಭಾಷೆಗಳನ್ನು – ಸಿಂಧಿ, ಬಲೂಚಿ, ಪಂಜಾಬಿ ಮತ್ತು ಪರ್ಷಿಯನ್ ಭಾಷೆಗಳನ್ನು – ಆಡುತ್ತಾರೆ. ಅದೇ ರೀತಿ ಭಾರತದ ರಾಷ್ಟ್ರೀಯ ಭಾಷೆಗಳ ಪಟ್ಟಿಯಲ್ಲಿರುವ ಸಿಂಧಿ ಪಾಕಿಸ್ತಾನದ ನಾಲ್ಕು ಪ್ರಾದೇಶಿಕ ಭಾಷೆಗಳ ಪೈಕಿ ಒಂದು. ಇದು, ಪರಸ್ಪರರನ್ನು ಸಂದೇಹದಿಂದ ನೋಡುವ ಬದಲಿಗೆ ನಮ್ಮ ನಡುವಿನ ಸಮಾನ ಅಂಶಗಳನ್ನು ಗುರುತಿಸುವ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಭಾರತದ ಇತರ ಮೂರು ಭಾಷೆಗಳಾದ ಸಿಂಧಿ, ಪಂಜಾಬಿ, ಕಾಶ್ಮೀರಿ ಭಾಷೆಯನ್ನೂ ಪರ್ಷಿಯನ್ ಲಿಪಿಯಲ್ಲಿ ಬರೆಯಲಾಗುತ್ತದೆ. ಇದಕ್ಕೆ ಯಾವುದೇ ಸಾಕ್ಷ್ಯ ಬೇಕಿದ್ದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿರುವ 100 ರೂಪಾಯಿ ನೋಟಿನ ಹಿಂಭಾಗದಲ್ಲಿ ನಮೂದಿಸಲಾಗಿರುವ

ವಿವಿಧ ಭಾರತೀಯ ಭಾಷೆಯ ಲಿಪಿಗಳನ್ನು ಗಮನಿಸಬಹುದು.

ಶತಮಾನಕ್ಕೂ ಹಳೆಯದಾದ ಮತ್ತು ಪ್ರಾಯಶಃ ಇಂದು ಬದುಕುಳಿದಿರುವ ಅತ್ಯಂತ ಹಳೆಯ ಉರ್ದು ಮಾಸಿಕವಾದ 'ಮಾಸಂತಾ ಜೋಗಿ'ಯ ಮಾಲಿಕತ್ವ ಹಿಂದೂಗಳ ಕೈಯಲ್ಲಿದೆ. ಇಂದು ಅತ್ಯಂತ ಹೆಚ್ಚು ಪ್ರಸಾರ ಸಂಖ್ಯೆ ಹೊಂದಿರುವ ಉರ್ದು ದೈನಿಕ 'ರಾಷ್ಟ್ರೀಯ ಸಹಾರಾ' ಆಗಿದ್ದು ಇದರ ಒಡೆತನ ಸಹಾರಾ ಗ್ರೂಪ್ ಎಂಬ ಮುಸ್ಲಿಮೇತರ ಸಂಸ್ಥೆಯ ಕೈಯಲ್ಲಿದೆ.

## ಇಸ್ಲಾಮಿನಲ್ಲಿ ಪೌರೋಹಿತ್ಯವಿಲ್ಲ

ಸಾಮಾನ್ಯವಾಗಿ ಇಮಾಮ್, ಮುಫ್ತಿ, ಖಾಝಿ ಅಥವಾ ಮೌಲ್ವಿಯ ಸ್ಥಾನಮಾನವನ್ನು ಪೌರೋಹಿತ್ಯದ ಕಲ್ಪನೆಯೊಂದಿಗೆ ತಳುಕು ಹಾಕಲಾಗುತ್ತದೆ. ಆದರೆ ವಾಸ್ತವವು ಇದಕ್ಕಿಂತ ಭಿನ್ನವಾಗಿದೆ. ಇಮಾಮ್ ಎಂದರೆ ಪ್ರಾರ್ಥನೆಯ ಸಂದರ್ಭದಲ್ಲಿ ನೇತೃತ್ವ ವಹಿಸುವ ವ್ಯಕ್ತಿ, ಮುಫ್ತಿ ಎಂದರೆ ಧಾರ್ಮಿಕ ವಿಚಾರಗಳಲ್ಲಿ ತನ್ನ ಪಾಂಡಿತ್ಯದ ಆಧಾರದಲ್ಲಿ ಸಲಹೆ, ಅಭಿಪ್ರಾಯ ನೀಡುವವರು; ವಿವಾದಗಳನ್ನು ಇತ್ಯರ್ಥ ಪಡಿಸುವ ನ್ಯಾಯಾಲಯದ ಮುಖ್ಯಸ್ಥರನ್ನು ಖಾಝಿ ಎನ್ನಲಾಗುತ್ತದೆ ಮತ್ತು ಮೌಲ್ವಿ ಎಂದರೆ ಕುರ್‌ಆನನ್ನು ಬೋಧಿಸುವ ಅಥವಾ ಪಠಣ ಮಾಡುವ ಧಾರ್ಮಿಕ ವಿದ್ವಾಂಸ. ಈ ಪೈಕಿ ಯಾರಿಗೂ ಅತಿಮಾನವ ಸ್ಥಾನವಿಲ್ಲ. ಅವರನ್ನು ದೇವರು ಮತ್ತು ಮನುಷ್ಯರ ನಡುವಿನ ಸೇತು ಎಂದು ಭಾವಿಸಲಾಗುವುದಿಲ್ಲ. ಇಮಾಮ್ ಎದುರು ತಪ್ಪೊಪ್ಪಿಕೊಳ್ಳಬೇಕಾದ ಅಗತ್ಯವಿಲ್ಲ. ಪ್ರತಿಯೊಬ್ಬರೂ ನೇರವಾಗಿ ದೇವರಿಗೆ ಪ್ರಾರ್ಥನೆ ಸಲ್ಲಿಸಬಹುದು ಮತ್ತು ದೇವರ ಎದುರು ತಪ್ಪೊಪ್ಪಿಕೊಂಡು ಕ್ಷಮೆ ಕೋರಬಹುದು. ಕುರ್‌ಆನ್‌ನ ಸೂಕ್ತಗಳನ್ನು ಕಂಠಪಾಠ ಮಾಡಿಕೊಂಡ ಮತ್ತು ಇಸ್ಲಾಮನ್ನು ಜೀವನದಲ್ಲಿ ಪಾಲಿಸುವ ಯಾವನೇ ವ್ಯಕ್ತಿ ಮಸೀದಿಯಲ್ಲಿ ಪ್ರಾರ್ಥನೆಯ ನೇತೃತ್ವ ವಹಿಸಬಹುದು. ಸುನ್ನತ್, ಅಕ್ಷರಾಭ್ಯಾಸ, ಗೃಹ ಪ್ರವೇಶ ಅಥವಾ ವಾಣಿಜ್ಯ ಚಟುವಟಿಕೆಯ ಉದ್ಘಾಟನೆಗೆ ನಿರ್ದಿಷ್ಟ ವ್ಯಕ್ತಿಗಳನ್ನು ಕರೆಯಲೇಬೇಕೆಂಬ ನಿಯಮವಿಲ್ಲ. ಮಸೀದಿಯಲ್ಲಿ ಯಾರಿಗೂ ಸ್ಥಾನವನ್ನು ಕಾದಿರಿಸುವ ಕ್ರಮವಿಲ್ಲ. ಮೊದಲು ಬಂದವರಿಗೆ ಮೊದಲ ಆದ್ಯತೆ ಆಧಾರದಲ್ಲಿ ಮಸೀದಿಯಲ್ಲಿ ಸ್ಥಾನ ಸಿಗುತ್ತದೆ. ಇಸ್ಲಾಮಿನಲ್ಲಿ ಪಾವಿತ್ರ್ಯದ ಕಲ್ಪನೆಯಿಲ್ಲ. ಪ್ರಾರ್ಥನೆಗಾಗಿ ಎಲ್ಲರೂ ಒಟ್ಟಿಗೆ ನಿಲ್ಲುತ್ತಾರೆ ಮತ್ತು ಒಟ್ಟಿಗೇ ಊಟ ಮಾಡುತ್ತಾರೆ. ಕುರ್‌ಆನ್‌ನಲ್ಲಿ ಮಾನವ ಸಮಾನತೆಯ ಬಗ್ಗೆ ಹೀಗೆನ್ನಲಾಗಿದೆ:

> **"ಅಲ್ಲಾಹನ ದೃಷ್ಟಿಯಲ್ಲಿ ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನಾಗಿರುವವನೇ ನಿಮ್ಮ ಪೈಕಿ ಅತ್ಯುತ್ತಮನು'. (ಕುರ್‌ಆನ್, 49:13)**

# ಮದ್ರಸಾ ಶಿಕ್ಷಣ

ಭಾರತದಲ್ಲಿ ರಾಜಕೀಯ ಉದ್ದೇಶಗಳನ್ನಿಟ್ಟುಕೊಂಡ ಜನರು ಮತ್ತು ಪೂರ್ವಗ್ರಹಪೀಡಿತ ಮಾಧ್ಯಮದ ನಿರ್ದಿಷ್ಟ ವಿಭಾಗವು ಮದ್ರಸಾಗಳ ಮೇಲೆ ಟೀಕಾಪ್ರಹಾರ ನಡೆಸುತ್ತಲೇ ಬಂದಿದ್ದಾರೆ. ಮದ್ರಸಾದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ ಹೆಚ್ಚಿನವರು ಮದ್ರಸಾ ಶಿಕ್ಷಣ ವ್ಯವಸ್ಥೆಯ ಬಗ್ಗೆ ಅರಿವಿಲ್ಲದವರು ಎಂಬುದು ವಿಪರ್ಯಾಸ. ಇವು ಇಸ್ಲಾಮೀ ಸಂಸ್ಥೆಗಳಾಗಿರುವುದರಿಂದ ಇಲ್ಲಿ ಜಿಹಾದ್ ಅಥವಾ ಯುದ್ಧದ ಬಗ್ಗೆ ಬೋಧನೆ ನೀಡಲಾಗುತ್ತದೆ ಎಂಬ ಸರಳ ತೀರ್ಮಾನಕ್ಕೆ ಈ ಪೈಕಿ ಹೆಚ್ಚಿನವರು ಬಂದು ಬಿಟ್ಟಿದ್ದಾರೆ.

ಇಸ್ಲಾಮ್ ಭಾರತಕ್ಕೆ ಬಹಳ ಹಿಂದೆಯೇ ಪ್ರವೇಶಿಸಿದೆ. ಕೆಲವರು ಪ್ರವಾದಿವರ್ಯರ ಕಾಲದಲ್ಲೇ ಕೇರಳದ ಮೂಲಕ ಇಸ್ಲಾಮಿನ ಪ್ರವೇಶವಾಯಿತು ಎಂದರೆ ಇನ್ನು ಕೆಲವು ಇತಿಹಾಸಕಾರರು ಇಸ್ಲಾಮಿನ ಉಗಮದ ಒಂದು ಶತಮಾನದ ನಂತರ ಉತ್ತರದ ಸಿಂಧ್‌ನ ಮೂಲಕ ಇಸ್ಲಾಮ್ ಭಾರತಕ್ಕೆ ಕಾಲಿಟ್ಟಿತು ಎನ್ನುತ್ತಾರೆ. ಆರಂಭ ಘಟ್ಟದಲ್ಲೇ ಉತ್ತರ ಮತ್ತು ದಕ್ಷಿಣ ಭಾರತದ ನೂರಾರು ಮಂದಿ ಇಸ್ಲಾಮ್ ಸ್ವೀಕರಿಸಿದ ಕಾರಣ ಇವರಿಗೆ ಧರ್ಮದ ಬೋಧನೆ ನೀಡಲು ಮದ್ರಸಾ ಶಿಕ್ಷಣಗಳ ಅಗತ್ಯ ತಲೆದೋರಿತ್ತು. ಜತೆಗೆ ಇತರರಿಗೆ ಧರ್ಮದ ಪರಿಚಯ ಮಾಡಿಸಲು ವಿದ್ವಾಂಸರನ್ನು ಸೃಷ್ಟಿಸುವ ಅಗತ್ಯವಿತ್ತು. ಪ್ರಾರ್ಥನೆ ಮತ್ತಿತರ ಧಾರ್ಮಿಕ ವಿಧಿ ವಿಧಾನಗಳನ್ನು ಕಲಿಯಲಿಕ್ಕೂ ಶಿಕ್ಷಣ ಅನಿವಾರ್ಯವಾಗಿತ್ತು.

ಮದ್ರಸಾ ಎಂದರೆ "ಕಲಿಕೆ ಮತ್ತು ಅಧ್ಯಯನದ ಸ್ಥಳ" ಎಂದರ್ಥ. ಬ್ರಿಟಿಷ್ ಮತ್ತು ಅಮೆರಿಕನ್ ಇಂಗ್ಲಿಷ್‌ನಲ್ಲಿ ಸ್ಕೂಲ್ ಎಂಬ ಪದ ಬಳಕೆಯಾಗುವಂತೆ ಅರಬಿಯಲ್ಲಿ ಮದ್ರಸಾ ಎಂಬ ಶಬ್ದ ಬಳಕೆಯಾಗುತ್ತದೆ. ಮದ್ರಸಾದಲ್ಲೂ ಪ್ರಾಥಮಿಕ ಮಟ್ಟದಿಂದ ವಿಶ್ವ ವಿದ್ಯಾಲಯದ ಮಟ್ಟದ ಅಥವಾ ಸ್ನಾತಕೋತ್ತರ ಹಂತದ ತರಗತಿಗಳಿವೆ. ಮುಸ್ಲಿಮ್ ರಾಷ್ಟ್ರಗಳಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಕೂಡಾ ಮದ್ರಸಾ ಎಂದು ಕರೆಯಲಾಗುತ್ತದೆ. ಕೋಲ್ಕತ್ತಾದಲ್ಲಿ ಮದ್ರಸಾ ಅಲಿಯಾ ಎಂಬ ಹೆಸರಿನ ಮದ್ರಸಾ ಇದ್ದು, ಪಶ್ಚಿಮ ಬಂಗಾಳ ಸರ್ಕಾರ ಅದಕ್ಕೆ ಈಗ ವಿಶ್ವವಿದ್ಯಾಲಯದ ಮಾನ್ಯತೆ ನೀಡಿದೆ. ಮದ್ರಸಾಗಳು ಇತರ

ಸಮುದಾಯದ ವಿದ್ಯಾರ್ಥಿಗಳಿಗೆ ಕೂಡಾ ಪ್ರವೇಶ ಒದಗಿಸುತ್ತಿದ್ದವು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ರಾಜಾ ರಾಮ್ ಮೋಹನ್‌ರಾಯ್ ಮದ್ರಸಾ ಅಲಿಯಾದಲ್ಲಿ ಕಲಿತಿದ್ದರು. ಅವರು ಸಂಸ್ಕೃತ ಮತ್ತು ಹಿಂದೂ ಧರ್ಮದ ವಿದ್ವಾಂಸರಾಗಿದ್ದರಲ್ಲದೆ ಪರ್ಷಿಯನ್ ಮತ್ತು ಅರಬಿ ಭಾಷೆಯ ಪಂಡಿತರೂ ಆಗಿದ್ದರು.

ಹೀಗೆ ಹೆಚ್ಚಿನ ಸಂದರ್ಭಗಳಲ್ಲಿ ಮದ್ರಸಾಗಳು ಧಾರ್ಮಿಕ ಮತ್ತು ಲೌಕಿಕ ಅಗತ್ಯಗಳನ್ನು ಪೂರೈಸುವ ಕೇಂದ್ರಗಳಾಗಿ ಕಾರ್ಯಾಚರಿಸುತ್ತಿದ್ದವು ಎಂಬುದು ಅಧ್ಯಯನಗಳಿಂದ ಸ್ಪಷ್ಟವಾಗುತ್ತದೆ.

ಇಂದು ಭಾರತದಲ್ಲಿ ಸುಮಾರು 20,000 ಮದ್ರಸಾಗಳಿವೆ ಮತ್ತು ಪ್ರತಿ ವರ್ಷ 1.5 ದಶಲಕ್ಷ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಸಾಚಾರ್ ಸಮಿತಿ (2006)ಯ ವರದಿ ಪ್ರಕಾರ ಭಾರತದಲ್ಲಿ ಮದ್ರಸಾ ಶಿಕ್ಷಣವನ್ನು ನೆಚ್ಚಿಕೊಂಡಿರುವ ಮುಸ್ಲಿಮ್ ಮಕ್ಕಳ ಪ್ರಮಾಣ ಶೇ. 3. ಹೆಚ್ಚಾಗಿ ಗ್ರಾಮೀಣ ಮತ್ತು ಬಡ ಮುಸ್ಲಿಮ್ ಮಕ್ಕಳಿಗೆ ಮತ್ತು ಸ್ವಲ್ಪ ಮಟ್ಟಿಗೆ ನಗರ ಪ್ರದೇಶದ ಮುಸ್ಲಿಮ್ ಮಕ್ಕಳಿಗೆ ಮದ್ರಸಾಗಳು ಶಿಕ್ಷಣದ ಮಾಧ್ಯಮಗಳಾಗಿವೆ. ಭಾರತದಲ್ಲಿ ದೊಡ್ಡ ಸಂಖ್ಯೆಯ ಮುಸ್ಲಿಮರು ಬಡವರು ಮತ್ತು ನಿರಕ್ಷರಿಗಳಾಗಿದ್ದು ಇವರು ಸ್ವತಃ ಬಯಸಿದರೂ ತಮ್ಮ ಮಕ್ಕಳನ್ನು ಲೌಕಿಕ ವಿದ್ಯಾಭ್ಯಾಸ ಕೇಂದ್ರಗಳಿಗೆ ಕಳುಹಿಸಲು ಶಕ್ತರಲ್ಲ.

ಜತೆಗೆ ಮುಸ್ಲಿಮರಿಗೆ ತಮ್ಮದೇ ಆದ ಧಾರ್ಮಿಕ ಅಗತ್ಯಗಳಿದ್ದು, ಮದ್ರಸಾಗಳು ಈ ಅಗತ್ಯಗಳನ್ನು ಪೂರೈಸುತ್ತವೆ. ಜತೆಗೆ ಉಚಿತ ಶಿಕ್ಷಣ ನೀಡುವುದರೊಂದಿಗೆ ಊಟ, ವಸತಿ ವ್ಯವಸ್ಥೆಯನ್ನು ಕಲ್ಪಿಸುತ್ತವೆ. ಸಾಮಾನ್ಯವಾಗಿ ಈ ಮದ್ರಸಾಗಳು ತಮಗೆ ಅನುಕೂಲಕರವಾದ ಪ್ರದೇಶದಲ್ಲಿ ಇರುತ್ತವೆ. ಅದೇ ವೇಳೆ ನಾವು ಎಲ್ಲ ಮದ್ರಸಾಗಳನ್ನೂ ಒಂದೇ ದೃಷ್ಟಿಯಿಂದ ನೋಡಲು ಸಾಧ್ಯವಿಲ್ಲ. ಅವುಗಳಲ್ಲಿ ಕೆಲವು ಪ್ರಾಥಮಿಕ ಮಟ್ಟದ ಧಾರ್ಮಿಕ ವಿದ್ಯಾಭ್ಯಾಸವನ್ನು ಮಾತ್ರ ನೀಡುವ ಮಕ್ತಬ್‌ಗಳಾಗಿರುತ್ತವೆ. ನಂತರದ ಸ್ಥಾನದಲ್ಲಿ ಅರಬಿ ಭಾಷೆಯನ್ನು, ಕುರ್‌ಆನ್, ಅದರ ವ್ಯಾಖ್ಯಾನ, ಹದೀಸ್ (ಪ್ರವಾದಿ ವಚನಗಳು) ಇತ್ಯಾದಿ ಕಲಿಸುವ ಮದ್ರಸಾಗಳಿವೆ. ಇವಲ್ಲದೆ ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತದ ಶಿಕ್ಷಣ ನೀಡುವ ಮದ್ರಸಾಗಳೂ ಇಂದು ಅಸ್ತಿತ್ವದಲ್ಲಿವೆ. ಇಲ್ಲಿ ಅರೆಬಿಕ್ ಸಾಹಿತ್ಯ, ಇಸ್ಲಾಮಿಕ್ ಧರ್ಮಶಾಸ್ತ್ರ, ಸಿದ್ಧಾಂತ, ವಿಜ್ಞಾನವನ್ನು ಬೋಧಿಸಲಾಗುತ್ತದೆ. ಮದ್ರಸಾಗಳನ್ನು ಆಧುನೀಕರಣಗೊಳಿಸಬೇಕೆಂಬ ಬೇಡಿಕೆ ಇತ್ತೀಚೆಗೆ ಹೆಚ್ಚಿದ್ದು ಇದೊಂದು ಆಂದೋಲನದ ಸ್ವರೂಪ ಪಡೆದಿದೆ. ಇಂದು ಅನೇಕ ಮದ್ರಸಾಗಳು ಆಧುನಿಕ ಶಿಕ್ಷಣಕ್ರಮ, ಪಠ್ಯಗಳನ್ನು ಅಳವಡಿಸಿಕೊಂಡಿವೆ.

ಈಚೆಗೆ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ

(ಎನ್‌ಸಿಇಆರ್‌ಟಿ) ನಡೆಸಿದ ಸಮೀಕ್ಷೆಯ ಪ್ರಕಾರ, ಅನೇಕ ರಾಜ್ಯಗಳಲ್ಲಿ, ಅದರಲ್ಲೂ ಮುಖ್ಯವಾಗಿ ಕೇರಳ, ಮತ್ತು ಪಶ್ಚಿಮ ಬಂಗಾಳದಲ್ಲಿ, ಮದ್ರಸಾಗಳು ಆಧುನೀಕರಣಗೊಳ್ಳುತ್ತಿವೆ.

ಮುಸ್ಲಿಮರು ಮದ್ರಸಾ ಶಿಕ್ಷಣಕ್ಕೆ ಆದ್ಯತೆ ನೀಡಲು ಇರುವ ಮುಖ್ಯ ಕಾರಣಗಳೆಂದರೆ:

1. ಮುಸ್ಲಿಮ್ ಬಾಹುಳ್ಯದ ಪ್ರದೇಶಗಳಲ್ಲಿ ಆಧುನಿಕ ಶಾಲೆಗಳ ಕೊರತೆ.
2. ಬಾಲಕಿಯರಿಗೆಂದೇ ಮೀಸಲಾದ ಶಾಲೆಗಳ ಕೊರತೆ ಮತ್ತು ಸಾಮಾನ್ಯ ಶಾಲೆಗಳಲ್ಲಿ ಮಹಿಳಾ ಶಿಕ್ಷಕರ ಅಭಾವ.
3. ಆಧುನಿಕ ಶಿಕ್ಷಣದ ವೆಚ್ಚ ಮತ್ತು ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಕೊರತೆ.
4. ಸರ್ಕಾರಿ ಶಾಲೆಗಳ ಕಳಪೆ ಗುಣಮಟ್ಟದ ಶಿಕ್ಷಣ.
5. ಶಾಲಾ ಪಠ್ಯಕ್ರಮಗಳು ಹಿಂದೂ ಪಕ್ಷಪಾತಿ ಎಂಬ ಭಾವನೆ ಹಲವು ಸಂಪ್ರದಾಯವಾದಿ ಮುಸ್ಲಿಮರಲ್ಲಿದೆ.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರ ಕಾಲದಿಂದಲೇ ಮದ್ರಸಾದ ಕಲ್ಪನೆ ಅಸ್ತಿತ್ವದಲ್ಲಿದೆ. ಅವರು ಮಸ್ಜಿದುನ್ನಬವಿಯಲ್ಲಿ ಇಂತಹ ಮೊಟ್ಟ ಮೊದಲ ಮದ್ರಸಾ ಸ್ಥಾಪಿಸಿದರು ಮತ್ತು ಅಲ್ಲಿ ಇಸ್ಲಾಮಿನ ಬೋಧನೆಗಳನ್ನು ಜನರಿಗೆ ತಲುಪಿಸಲಾರಂಭಿಸಿದರು. ಆದರೆ ಅಧಿಕೃತವಾಗಿ ಮದ್ರಸಾ ಆರಂಭಗೊಂಡದ್ದು ಹನ್ನೊಂದನೇ ಶತಮಾನದ ವೇಳೆಗೆ ಇರಾನ್‌ನ ನಿಶಾಪುರದಲ್ಲಿ. ಬಾಗ್ದಾದ್ (ಇರಾಕ್)ನ ನಿಜಾಮಿಯಾ ಎರಡನೇ ಮದರಸಾ ಆಗಿದ್ದು, ಇವೆರಡೂ 11ನೇ ಶತಮಾನಕ್ಕೆ ಸೇರಿದ್ದು. ಈಗ ಜಗತ್ಪ್ರಸಿದ್ಧ ಇಸ್ಲಾಮೀ ವಿಶ್ವವಿದ್ಯಾಲಯವೆಂದು ಹೆಸರಾಗಿರುವ ಅಲ್-ಅಝ್ಹರ್ ಈಜಿಪ್ಟ್‌ನಲ್ಲಿ ಫಾತಿಮೀಯರ ಆಡಳಿತ ಕಾಲದಲ್ಲಿ ಅಸ್ತಿತ್ವಕ್ಕೆ ಬಂತು.

## ಮದ್ರಸಾ ಮತ್ತು ಮಕ್ತಬಾ

ಹೆಚ್ಚಿನ ಮುಸ್ಲಿಮ್ ಮಕ್ಕಳು ಮದ್ರಸಾಗಳಿಗೆ ದಾಖಲಾಗುತ್ತಾರೆ ಎಂಬ ತಪ್ಪುಕಲ್ಪನೆಗೆ ಮುಖ್ಯ ಕಾರಣ ಮದ್ರಸಾ ಮತ್ತು ಮಕ್ತಬಾ ನಡುವಿನ ವ್ಯತ್ಯಾಸ ಗೊತ್ತಿಲ್ಲದೇ ಇರುವುದು. ಮದ್ರಸಾಗಳು ಧಾರ್ಮಿಕ ಮತ್ತು / ಅಥವಾ ಸಾಮಾನ್ಯ ಶಿಕ್ಷಣ ನೀಡುವ ಕೇಂದ್ರಗಳಾದರೆ ಮಕ್ತಬಾಗಳು ಸ್ಥಳೀಯ ಶಾಲೆಗಳಾಗಿದ್ದು ಇವು ಮಸೀದಿಗೆ ಅಂಟಿಕೊಂಡಿರುತ್ತವೆ ಮತ್ತು ಮುಖ್ಯಧಾರೆಯ ಶಿಕ್ಷಣಕ್ಕಾಗಿ ಬೇರೆ ಶಾಲೆಗಳನ್ನು ನೆಚ್ಚಿಕೊಂಡಿರುವ ಮಕ್ಕಳಿಗೆ ಈ ಕೇಂದ್ರಗಳು ಧಾರ್ಮಿಕ ಶಿಕ್ಷಣವನ್ನು ಒದಗಿಸುತ್ತವೆ. ಹೀಗೆ ಮಕ್ತಬಾಗಳು ಸಾಮಾನ್ಯ ಶಿಕ್ಷಣ ಕೇಂದ್ರಗಳಿಗೆ ಪೂರಕವಾಗಿ ಮಕ್ಕಳಿಗೆ ಅರೆಕಾಲಿಕ ಧಾರ್ಮಿಕ ಶಿಕ್ಷಣ ನೀಡುತ್ತದೆ.

# ಮಸೀದಿ ಅಥವಾ ಮಸ್ಜಿದ್

1. ಮಸೀದಿ ಎಂಬುದು ಇಸ್ಲಾಮಿನ ಅನುಯಾಯಿಗಳು ಪ್ರಾರ್ಥನೆ ಸಲ್ಲಿಸುವ ಒಂದು ಸ್ಥಳ. ಇದು ಸಾಷ್ಟಾಂಗವೆರಗುವ ಸ್ಥಳ.

2. ಅನೇಕ ಮಸೀದಿಗಳು, ಗುಂಬಜ, ಮಿನಾರ ಮತ್ತು ಪ್ರಾರ್ಥನಾ ಹಾಲ್ ಹೊಂದಿರುತ್ತವೆ.

3. ಪ್ರಾರ್ಥನೆಯ ಸಂದರ್ಭದಲ್ಲಿ ಯಾವುದೇ ಮೂರ್ತಿ, ಚಿತ್ರ, ಪಳಿಯುಳಿಕೆ ಅಥವಾ ಪವಿತ್ರ ಗ್ರಂಥವನ್ನು ಮುಂಭಾಗದಲ್ಲಿ ಇಡುವ ಕ್ರಮ ಇಲ್ಲ.

4. ನಮಾಜ್‌ಗಾಗಿ ಮಸೀದಿಯನ್ನು ಪ್ರವೇಶಿಸುವಾಗ ಯಾವುದೇ ಪ್ರವೇಶ ಶುಲ್ಕ ನೀಡಬೇಕಾಗಿಲ್ಲ. ತೆಂಗಿನಕಾಯಿ, ಸಿಹಿತಿಂಡಿ, ಊದುಗಡ್ಡಿ, ಚದ್ದರ ಇತ್ಯಾದಿಗಳನ್ನು ಅರ್ಪಿಸಬೇಕಾಗಿಲ್ಲ.

5. ಮಸೀದಿಯು ಮುಸ್ಲಿಮರು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸುವ ಸ್ಥಳ. ಜತೆಗೆ ಇದು ಮಾಹಿತಿ, ಶಿಕ್ಷಣದ ಕೇಂದ್ರವಾಗಿಯೂ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವ ಸ್ಥಳವಾಗಿಯೂ ಕಾರ್ಯನಿರ್ವಹಿಸುತ್ತದೆ.

6. ಎಲ್ಲ ಮುಸ್ಲಿಮರೂ ಸಾಲಾಗಿ ನಿಂತು ನಮಾಜ್ ನಿರ್ವಹಿಸುತ್ತಾರೆ. ಆ ಸಂದರ್ಭದಲ್ಲಿ ಯಾರಿಗಾದರೂ ವಿಶೇಷ ಮರ್ಯಾದೆ ನೀಡುವುದು ಅಥವಾ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಂತಸ್ತಿನ ಆಧಾರದಲ್ಲಿ ಮುಂದಿನ ಸಾಲಿನಲ್ಲಿ ಸ್ಥಳ ಕಾದಿರಿಸುವುದಕ್ಕೆ ಅವಕಾಶ ಇಲ್ಲ.

7. ಸೂರ್ಯನ ಚಲನೆಗೆ ಅನುಗುಣವಾಗಿ ನಮಾಜ್‌ನ ಸಮಯ ನಿಗದಿಯಾಗುತ್ತದೆ. ಬೆಳಗಿನ ಪ್ರಾರ್ಥನೆ (ಫಜ್ರ್) ಸೂರ್ಯೋದಯಕ್ಕೆ ಮುನ್ನ ನಡೆಯಲಿದೆ. ಮಧ್ಯಾಹ್ನದ ಪ್ರಾರ್ಥನೆ (ಝುಹ್ರ್) ಸೂರ್ಯ ಕಕ್ಷೆ ಬದಲಿಸುವ ಹಂತದಲ್ಲಿ ನಡೆಯಲಿದ್ದು, ಮೂರನೇ ಪ್ರಾರ್ಥನೆ (ಅಸ್ರ್)ಯ ಸಮಯವು ಯಾವುದೇ ವಸ್ತುವಿನ ನೆರಳು ಅದರ ಎರಡರಷ್ಟಾಗುವ ವೇಳೆಯಿಂದ

ಆರಂಭಗೊಳ್ಳುತ್ತದೆ. ಮುಸ್ಸಂಜೆಯ ಪ್ರಾರ್ಥನೆ(ಮಗ್‌ರಿಬ್)ಯ ಸಮಯವು ಸೂರ್ಯಾಸ್ತದೊಂದಿಗೆ ಆರಂಭಗೊಳ್ಳುತ್ತದೆ. ಐದನೇ ಪ್ರಾರ್ಥನೆಯನ್ನು ಇಶಾ ಎಂದು ಕರೆಯಲಾಗುತ್ತದೆ. ಇದರ ಸಮಯ ಸೂರ್ಯಾಸ್ತದ ಒಂದೂವರೆ ಗಂಟೆಯ ಬಳಿಕ ಆರಂಭಗೊಳ್ಳುತ್ತದೆ. ಸಮಯವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ ಮತ್ತು ಯಾವುದೇ ಗಣ್ಯ ವ್ಯಕ್ತಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸಮಯವನ್ನು ಬದಲಿಸಲಾಗುವುದಿಲ್ಲ.

8. ಮಸೀದಿಯಲ್ಲಿ ಯಾವುದೇ ರೀತಿಯ ಪೌರೋಹಿತ್ಯ ನಡೆಯುವುದಿಲ್ಲ. ವಿದ್ವತ್ತು ಉಳ್ಳ ಯಾವನೇ ವ್ಯಕ್ತಿ ಅಥವಾ ಸಮಾಜದಲ್ಲಿ ವಿಶ್ವಾಸಾರ್ಹ ಚಾರಿತ್ರ್ಯ ಹೊಂದಿದ ಯಾವನೇ ವ್ಯಕ್ತಿ ನಮಾಝ್‌ನ ನೇತೃತ್ವ ವಹಿಸಬಹುದು.

9. ಮಸೀದಿಯ ಒಳಗಡೆಗೆ ಮುಸ್ಲಿಮೇತರರಿಗೂ ಪ್ರವೇಶವಿದೆ.

10. ಮಸೀದಿಯಲ್ಲಿ ಪ್ರಾರ್ಥನೆಯ ಭಾಗವಾಗಿ ಪ್ರಾಣಿಗಳ ಬಲಿ ನೀಡುವ ಕ್ರಮವಿಲ್ಲ.

11. ಮದ್ಯ ಸೇವಿಸಿ ಮಸೀದಿ ಪ್ರವೇಶಿಸುವಂತಿಲ್ಲ. ಈರುಳ್ಳಿ ಅಥವಾ ಬೆಳ್ಳುಳ್ಳಿ ತಿಂದರೂ ಸರಿಯಾಗಿ ಬಾಯಿ ಮುಕ್ಕಳಿಸಿಯೇ ಮಸೀದಿಯೊಳಗೆ ಪ್ರವೇಶಿಸತಕ್ಕದ್ದು.

12. ಪ್ರಾರ್ಥನೆಗೂ ಮೊದಲು ವುಝು ಎಂದು ಕರೆಯಲಾಗುವ ಅಂಗ ಸ್ನಾನದ ಮೂಲಕ ಮುಸ್ಲಿಮರು ತಮ್ಮನ್ನು ಶುಚಿಗೊಳಿಸಿಕೊಳ್ಳಬೇಕು.

## ಮಸೀದಿಯ ಒಳಗೆ ಪ್ರವೇಶಿಸಿದಾಗ...

**ಪ್ರಾರ್ಥನಾ ಹಾಲ್:**

ಮಸೀದಿಯೊಳಗೆ ಪ್ರಾರ್ಥನೆ ಸಲ್ಲಿಸಲು ನಿಗದಿಪಡಿಸಿದ ಹಾಲ್‌ಗೆ ಮುಸಲ್ಲಾ ಅಥವಾ ನೆಲಹಾಸು ಹಾಕಿರುವ ಸ್ಥಳ ಎಂದೂ ಕರೆಯಲಾಗುತ್ತದೆ. ಇಲ್ಲಿ ಸಾಷ್ಟಾಂಗವೆರಗುವುದು ಸೇರಿದಂತೆ ನಮಾಜ್‌ನ ವಿವಿಧ ವಿಧಿಗಳನ್ನು ನಿರ್ವಹಿಸುತ್ತಾರೆ.

**ಮಿಹ್ರಾಬ್:**

ಮಿಹ್ರಾಬ್ ಎಂದರೆ ಮಸೀದಿಯ ಗೋಡೆಯೊಳಗೆ ಕೊರೆಯಲಾದ ಕಮಾನಿನ ಆಕೃತಿಯ ಸ್ಥಳ. ಇದು ಕಿಬ್ಲಾ ಅಥವಾ ನಮಾಜ್‌ನ ವೇಳೆ ಯಾವ ದಿಕ್ಕಿಗೆ ಮುಖ ಮಾಡಬೇಕೆಂಬುದನ್ನು ಸೂಚಿಸುತ್ತದೆ. ಮಿಹ್‌ರಾಬ್ ಒಳಗೊಂಡಿರುವ ಗೋಡೆಗೆ **'**ಕಿಬ್ಲಾ ಗೋಡೆ' ಎಂದು ಹೆಸರು.

**ಮಿಂಬರ್:**

ಇದು ಇಮಾಮ್ ಅಥವಾ ಪ್ರಾರ್ಥನೆಯ ನೇತೃತ್ವ ವಹಿಸುವ ವ್ಯಕ್ತಿ ಖುತ್ಬಾ (ಪ್ರವಚನ) ನೀಡುವ ಎತ್ತರದ ವೇದಿಕೆ. ಸಾಮಾನ್ಯವಾಗಿ ಶುಕ್ರವಾರ ಮಧ್ಯಾಹ್ನ ಇದೇ ವೇದಿಕೆಯನ್ನೇರಿ ಇಮಾಮ್ ಪ್ರವಚನ ನೀಡುತ್ತಾರೆ.

**ವುಜೂ ಅಥವಾ ಅಂಗಸ್ನಾನ ಮಾಡುವ ಸೌಕರ್ಯ:**

ಮಸೀದಿಗಳಲ್ಲಿ ಸಾಮಾನ್ಯವಾಗಿ ವುಜೂ ಅಥವಾ ಅಂಗಸ್ನಾನಕ್ಕಾಗಿ ಕಾರಂಜಿ, ಟ್ಯಾಂಕ್ ಅಥವಾ ನಲ್ಲಿ ನೀರಿನ ವ್ಯವಸ್ಥೆ ಮಾಡಲಾಗಿರುತ್ತದೆ. ನಮಾಜ್ ನಿರ್ವಹಿಸುವುದಕ್ಕೆ ಮುಂಚೆ ಪ್ರತಿಯೊಬ್ಬರೂ ತಮ್ಮನ್ನು ಶುಚಿಗೊಳಿಸುವುದು ಅಗತ್ಯ. ಈ ಪ್ರಕ್ರಿಯೆಗೆ ವುಜೂ ಎನ್ನುತ್ತಾರೆ. ನೆಲಹಾಸು ಇರುವ ಪ್ರಾರ್ಥನಾ ಸ್ಥಳದಲ್ಲಿ ಪಾದರಕ್ಷೆಗಳನ್ನು ಧರಿಸಬಾರದು. ನಮಾಜ್‌ಗೆ ಬರುವವರು ಮತ್ತು ಸಂದರ್ಶಕರು ತಮ್ಮನ್ನು ಶುಚಿಯಾಗಿಟ್ಟುಕೊಳ್ಳುವುದು ಅತ್ಯಗತ್ಯ.

## 'ಇಡೀ ಜಗತ್ತೇ ಒಂದು ಮಸೀದಿಯಾಗಿದೆ...'

ಪ್ರವಾದಿವರ್ಯರು ಹೇಳಿದ್ದರು: 'ಇಡೀ ಜಗತ್ತೇ ಮಸೀದಿಯಾಗಿದೆ.' ಈ ಹೇಳಿಕೆಯು (ಅಲ್ಲಾಹನು) ಪ್ರವಾದಿವರ್ಯರಿಗೆ ಜಗತ್ತಿನ ಯಾವುದೇ ಭಾಗದಲ್ಲಾದರೂ ಪ್ರಾರ್ಥನೆ ಸಲ್ಲಿಸುವ ಅನುಮತಿಯನ್ನು ನೀಡಿದ್ದನೆಂಬುದನ್ನು ಸೂಚಿಸುತ್ತದೆ. ಜಗತ್ತಿನ ಯಾವ ಭಾಗವೂ ಅಶುದ್ಧವಲ್ಲ ಎಂಬುದು ಇದರ ತಾತ್ಪರ್ಯ. ಅದೇ ರೀತಿ ಪ್ರವಾದಿವರ್ಯರನ್ನು ಅನುಸರಿಸುವ ಮುಸ್ಲಿಮರು ಇಸ್ಲಾಮೀ ಕಾನೂನು ಪ್ರಕಾರ ಎಲ್ಲಿ ಬೇಕಾದರೂ ನಮಾಜ್ ನಿರ್ವಹಿಸಬಹುದು. ಹಾಗಾಗಿ ಮುಸ್ಲಿಮರು ಪಾರ್ಕ್, ರಸ್ತೆ ಬದಿ, ರೈಲ್ವೆ ಪ್ಲಾಟ್‌ಫಾರ್ಮ್, ವಿಮಾನ ನಿಲ್ದಾಣ ಹೀಗೆ ತರಹೇವಾರಿ ಜಾಗಗಳಲ್ಲಿ ನಮಾಜ್ ನಿರ್ವಹಿಸುವುದನ್ನು ನೀವು ನೋಡಬಹುದು. ಇಡೀ ಜಗತ್ತೇ ಮುಸ್ಲಿಮರ ಮಟ್ಟಿಗೆ ಪ್ರಾರ್ಥನಾ ಸ್ಥಳವಾಗಿದ್ದು ಅವರು, ತಾವೆಲ್ಲೇ ಇದ್ದರೂ, ನಿಗದಿತ ಸಮಯದಲ್ಲಿ ಅಲ್ಲಾಹನ ಸ್ಮರಣೆ ಮಾಡುತ್ತಾರೆ ಮತ್ತು ನಮಾಜ್ ನಿರ್ವಹಿಸುತ್ತಾರೆ.

ಈ ಪ್ರವಾದಿವಚನಕ್ಕೆ ಇನ್ನೊಂದು ವಿಶಾಲ ಅರ್ಥವೂ ಇದೆ. ಅದು ಒಬ್ಬ ಮುಸ್ಲಿಮನ ಮಟ್ಟಿಗೆ ಶಾಂತಿಯ ಸ್ಥಳ. ಅಲ್ಲಿ ಸತ್ಯವಿಶ್ವಾಸಿಗಳು ಅತ್ಯಂತ ಪಾವನ ಮನಸ್ಥಿತಿಯೊಂದಿಗೆ ಪ್ರವೇಶಿಸುತ್ತಾರೆ. ಅವರ ದೇಹ ಮತ್ತು ಬಟ್ಟೆಬರೆಗಳೆಲ್ಲವೂ ಶುಭ್ರವಾಗಿರುತ್ತವೆ. ಅವರ ಮನ ಮಸ್ತಿಷ್ಕಗಳೂ ಶುಚಿಯಾಗಿರುತ್ತವೆ. ಅವರು ದೇವರ ವಿನೀತ ದಾಸರಾಗಿ ಮಸೀದಿಯೊಳಗೆ ಪ್ರವೇಶಿಸುತ್ತಾರೆ. ಮಸೀದಿಯೊಳಗೆ ಪ್ರವೇಶಿಸುವಾಗ ಅವರು ಅದಾಗಲೇ ಒಳಗೆ ಕುಳಿತವರಿಗೆ ಅಸ್ಸಲಾಮು ಅಲೈಕುಮ್ (ನಿಮ್ಮ ಮೇಲೆ ಅಲ್ಲಾಹನ ಶಾಂತಿ ಇರಲಿ) ಎಂದು ಶುಭಾಶಯ ಕೋರುತ್ತಾರೆ. ಇದು ಹೊಸದಾಗಿ ಬರುವವರು ತೆಗೆದುಕೊಳ್ಳುವ ಶಾಂತಿಯ ಪ್ರತಿಜ್ಞೆ. ಮಸೀದಿಯು ಅಕ್ಷರಶಃ ಶಾಂತಿ ಮತ್ತು ಸೌಹಾರ್ದದ ಪ್ರತೀಕವಾಗಿದೆ. ಜತೆಗೆ ಏಕದೇವತ್ವ ಮತ್ತು ಮಾನವ ಭ್ರಾತೃತ್ವದ ಅವಳಿ ಸಂದೇಶವನ್ನೂ ಸಾರುತ್ತದೆ.

ಆದ್ದರಿಂದ ಪ್ರವಾದಿವರ್ಯರು ಭೂಮಿಯನ್ನು ಮಸೀದಿಗೆ ಹೋಲಿಸಿದಾಗ ಈ ಭುವಿಯನ್ನು ಶಾಂತಿಯ ಸ್ಥಳವಾಗಿ ಪರಿವರ್ತಿಸುವ ಅಗತ್ಯವನ್ನು ಎತ್ತಿ ತೋರಿಸಿದ್ದಾರೆ ಎಂಬುದು ಸ್ಪಷ್ಟ. ಜಗತ್ತಿನ ಯಾವುದೇ ಮೂಲೆಯಲ್ಲಿರುವ ವ್ಯಕ್ತಿಯಾದರೂ ಆತನಿಗೆ ಶಾಂತಿಯುತ ಬಾಳ್ವೆ ನಡೆಸಲು ಸಾಧ್ಯವಾಗಬೇಕೆಂಬುದು ಪ್ರವಾದಿಯ ಆಶಯವಾಗಿತ್ತು. ಶಾಂತಿಯ ಈ ಆದರ್ಶ ಸಾಕ್ಷಾತ್ಕಾರವಾಗಬೇಕಾದರೆ ಈ ಜಗತ್ತು ಒಂದು ಮಸೀದಿಯಾಗಿ ಮಾರ್ಪಡಬೇಕು. ಮಸೀದಿಯಂತೆಯೇ ಜಗತ್ತು ಕೂಡಾ ಸೌಹಾರ್ದ ಮತ್ತು ಭ್ರಾತೃತ್ವದ ಸಂದೇಶವನ್ನು ಪ್ರತಿಧ್ವನಿಸುತ್ತಿರಬೇಕು.

# ಅದಾನ್ – ಪ್ರಾರ್ಥನೆಯ ಕರೆ

ಜಗತ್ತಿನ ಪ್ರತಿಯೊಂದು ಮಸೀದಿಯಲ್ಲೂ ದಿನಕ್ಕೆ ಐದು ಬಾರಿ ನಮಾಜ್ ಅಥವಾ ಇಸ್ಲಾಮೀ ಪ್ರಾರ್ಥನೆ ನಡೆಯುತ್ತದೆ. ಪ್ರತಿಯೊಬ್ಬ ಮುಸ್ಲಿಮನೂ ಇದನ್ನು ಮಸೀದಿಯಲ್ಲೇ ನಿರ್ವಹಿಸಬೇಕು. ಈ ಮೂಲಕ ಇಸ್ಲಾಮ್ ಜನರ ಮಧ್ಯೆ ನಿಕಟ ಸಾಮಾಜಿಕ ಸಂಬಂಧವನ್ನು ಬೆಳೆಸಲು ಪ್ರಯತ್ನಿಸುತ್ತದೆ. ತನ್ಮೂಲಕ ಪರಸ್ಪರ ಪರಿಚಯವುಳ್ಳ ಸುಖ ದುಃಖವನ್ನೂ ಕಾಳಜಿ ಕರಾರುಗಳನ್ನೂ ಹಂಚಿಕೊಳ್ಳುವ ಒಂದು ಸಮಾಜವನ್ನು ಬೆಳೆಸಲು ಶ್ರಮಿಸುತ್ತದೆ.

ಪ್ರಾರ್ಥನೆಗೆ ಮುಂಚೆ ಜನರನ್ನು ಸೇರಿಸಲು ಮಸೀದಿಯ ಮಿನಾರಗಳಿಂದ ನೀಡಲಾಗುವ ಕರೆಗೆ ಅದಾನ್ ಎನ್ನುತ್ತಾರೆ. ಹೆಚ್ಚಿನ ಮುಸ್ಲಿಮೇತರ ಸಹೋದರ ಸಹೋದರಿಯರಿಗೆ ಈ ಅದಾನ್ ಕರೆಯೇ ಮುಸ್ಲಿಮರ ಪ್ರಾರ್ಥನೆ ಎಂಬ ತಪ್ಪುಕಲ್ಪನೆಯಿದೆ. ಇನ್ನು ಕೆಲವರು ಮುಸ್ಲಿಮರ ಪ್ರಾರ್ಥನೆಯು ಯಾವಾಗಲೂ ಧ್ವನಿವರ್ಧಕದ ಮೂಲಕವೇ ನಡೆಯುತ್ತದೆ ಎಂದು ಭಾವಿಸುತ್ತಾರೆ. ಇನ್ನು ಕೆಲವರ ಮನದಲ್ಲಿ ಯಾಕೆ ಅದಾನ್ ಸಂದರ್ಭದಲ್ಲಿ ಅಕ್ಬರ್ ಸಾಮ್ರಾಟನ ಹೆಸರು ಪ್ರಸ್ತಾಪವಾಗುತ್ತದೆ ಎಂಬ ಕುತೂಹಲವೂ ಇರುತ್ತದೆ.

ಅದಾನ್‌ಗೆ ಹೆಚ್ಚೆಂದರೆ ಎರಡು ಮೂರು ನಿಮಿಷ ಸಾಕು. ಇದರಲ್ಲಿ ಏನು ಹೇಳಬೇಕೆಂಬುದನ್ನು ಪ್ರವಾದಿವರ್ಯರು ನಿಗದಿಪಡಿಸಿದ್ದಾರೆ. ಜಕಾರ್ತಾದಿಂದ ಕಸಬ್ಲಾಂಕಾವರೆಗಿನ ಎಲ್ಲ ಮಸೀದಿಗಳ ಮಿನಾರದಿಂದ ಮೊಳಗುವ ಅದಾನ್‌ನ ಭಾಷೆ ಮತ್ತು ವಸ್ತು ಒಂದೇ. ಚರ್ಚ್‌ಗಳಲ್ಲಿ ಗಂಟೆ ಬಾರಿಸುವ ಅಥವಾ ಮಂದಿರಗಳಲ್ಲಿ ಶಂಖ ಊದುವ ಸಂಪ್ರದಾಯವಿರುವಂತೆಯೇ ಮಸೀದಿಗಳ ಮಿನಾರದಿಂದ ಹೊರಡುವ ಅದಾನ್ ಜನರಿಗೆ ಪ್ರಾರ್ಥನೆಯ ಸಮಯವನ್ನು ನೆನಪಿಸುವ ಕರೆ. ನಾವು ನಿತ್ಯ ಕೇಳುವ ಈ ಅದಾನ್‌ನ ಅರ್ಥ ಏನೆಂಬುದನ್ನು ಈಗ ತಿಳಿದುಕೊಳ್ಳೋಣ:

**ಅಲ್ಲಾಹು ಅಕ್ಬರ್** : ದೇವರು ಮಹಾನನು
(ಇದನ್ನು ನಾಲ್ಕು ಬಾರಿ ಪುನರಾವರ್ತಿಸಲಾಗುತ್ತದೆ)

**ಅಶ್ಹದು ಅಲ್ಲಾ ಇಲಾಹ ಇಲ್ಲಲ್ಲಾಹ್:** ಏಕದೇವನಲ್ಲದೆ ಬೇರಾವ ದೇವರೂ ಇಲ್ಲ ಎಂದು ನಾನು ಸಾಕ್ಷ್ಯ ವಹಿಸುತ್ತೇನೆ.
(ಇದನ್ನು ಎರಡು ಬಾರಿ ಹೇಳಲಾಗುತ್ತದೆ)

| | | |
|---|---|---|
| **ಅಶ್ಹದು ಅನ್ನ ಮುಹಮ್ಮದುರ್ರಸೂಲುಲ್ಲಾಹ್:** | | ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂದು ನಾನು ಸಾಕ್ಷ್ಯ ನುಡಿಯುತ್ತೇನೆ (ಇದನ್ನು ಎರಡು ಬಾರಿ ಹೇಳಲಾಗುತ್ತದೆ) |
| **ಹಯ್ಯ ಅಲಸ್ಸಲಾಹ್** | : | ನಮಾಜ್‌ನ ಕಡೆಗೆ ಬನ್ನಿರಿ. (ಇದನ್ನು ಎರಡು ಬಾರಿ ಹೇಳಲಾಗುತ್ತದೆ) |
| **ಹಯ್ಯ ಅಲಲ್ ಫಲಾಹ್** | : | ವಿಜಯದ ಕಡೆಗೆ ಬನ್ನಿರಿ (ಇದನ್ನು ಎರಡು ಬಾರಿ ಹೇಳಲಾಗುತ್ತದೆ) |
| **ಅಲ್ಲಾಹು ಅಕ್ಬರ್** | : | ಅಲ್ಲಾಹನು ಮಹಾನನು (ಇದನ್ನು ಎರಡು ಬಾರಿ ಹೇಳಲಾಗುತ್ತದೆ) |
| **ಲಾ ಇಲಾಹ ಇಲ್ಲಲ್ಲಾಹ್** | : | ಏಕದೇವನ ಹೊರತು ಬೇರೆ ಆರಾಧ್ಯರಿಲ್ಲ. |

ಬೆಳಗ್ಗಿನ ಪ್ರಾರ್ಥನೆಗೆ ನೀಡಲಾಗುವ ಅದಾನ್‌ನಲ್ಲಿ **'ಹಯ್ಯ ಅಲಲ್ ಫಲಾಹ್'**ಗೆ ನಂತರ ಎರಡು ಸಲ **'ಅಸ್ಸಲಾತು ಖೈರುಮ್ಮಿನನ್ನೌಮ್'** ಎನ್ನಲಾಗುತ್ತದೆ – ಪ್ರಾರ್ಥನೆಯು ನಿದ್ದೆಗಿಂತ ಶ್ರೇಷ್ಠವಾದುದು ಎಂಬುದು ಇದರ ಅರ್ಥ.

ಮುಸ್ಲಿಮರು ವಾಸವಾಗಿರುವ ಎಲ್ಲ ಕಡೆಗಳಲ್ಲೂ ಕಳೆದ ಸಾವಿರದ ಐನೂರು ವರ್ಷಗಳಿಂದ ಯಾವುದೇ ಬದಲಾವಣೆಗೊಳಗಾಗದೆ ಈ ಕರೆ ಮಾರ್ದನಿಸುತ್ತಲೇ ಇದೆ. ಇದು ದೇವನ ಮಹಾನತೆಯನ್ನು ಎತ್ತಿ ಹೇಳುವುದರ ಜತೆಗೆ ಏಕದೇವನ ಮೇಲಿನ ವಿಶ್ವಾಸವನ್ನೂ ಮತ್ತು ಮುಹಮ್ಮದ್ ದೇವರ ಅಂತಿಮ ಪ್ರವಾದಿ ಎಂಬ ನಂಬಿಕೆಯನ್ನೂ ಪುನರುಚ್ಚರಿಸುವ ಒಂದು ಕರೆಯಾಗಿದೆ. ಜತೆಗೆ ಜನರನ್ನು ಪ್ರಾರ್ಥನೆಗೆ ಕರೆಯುವ ಮತ್ತು ಇಹಪರಗಳ ವಿಜಯದ ಕಡೆಗೆ ಕರೆಯುವ ಕೆಲಸವನ್ನೂ ಅದಾನ್ ಮಾಡುತ್ತದೆ. ತನ್ನ ವೈವಿಧ್ಯಮಯ ಉಚ್ಛಾರ, ಶೈಲಿ ಮತ್ತ ಧ್ವನಿಯ ಮೂಲಕ ಈ ಕರೆಯು ದೇವರ ಮಹಾನತೆಯನ್ನು ಘೋಷಿಸುವುದರ ಜತೆಗೆ ಜನರನ್ನು ಅಧ್ಯಾತ್ಮಿಕತೆಯ ಕಡೆಗೆ ಕರೆಯುತ್ತಲೇ ಬಂದಿದೆ. ಮುಂಜಾವಿನಲ್ಲಿ ಅದಾನ್ ಒಂದು ಎಚ್ಚರಿಕೆಯ ಗಂಟೆಯಾದರೆ ಸಂಜೆಯ ಬಿಡುವಿಲ್ಲದ ಅವಧಿಯಲ್ಲಿ ನೆನಪಿನ ಕರೆಯಾಗಿ ಮಾರ್ಪಡುತ್ತದೆ. ರಾತ್ರಿಯ ಕತ್ತಲೆ ಆವರಿಸಿದ ಬಳಿಕ ದಿನದ ಕೊನೆಯನ್ನು ಘೋಷಿಸುವ ಕರೆಯಾಗಿ ಅದಾನ್ ಮಿನಾರಗಳಿಂದ ಹೊರಹೊಮ್ಮುತ್ತದೆ.

ಜನರಿಗೆ ತಮ್ಮ ನಿಬಿಡತೆಗಳ ನಡುವೆ ಅಲ್ಲಾಹನ ನೆನಪನ್ನು ಮಾಡಿಕೊಡುವುದರ ಜತೆಗೆ ಅಧ್ಯಾತ್ಮಿಕ ಪುನಶ್ಚೇತನಕ್ಕೆ ಧಾವಿಸಿ ಬರುವಂತೆ ಅದಾನ್ ಕರೆ ನೀಡುತ್ತದೆ. ಮುಸ್ಲಿಮರು ಅಲ್ಲಾಹನೊಂದಿಗಿನ ತಮ್ಮ ಕರಾರನ್ನು ಪೂರ್ತಿಗೊಳಿಸಿದ ನಂತರ ದೇವಭಯವನ್ನು ಸಜೀವಗೊಳಿಸಿ ಮತ್ತೆ ತಮ್ಮ ಕರ್ತವ್ಯದ ಕಡೆಗೆ ವಾಪಸಾಗುತ್ತಾರೆ.

# ಮುಸ್ಲಿಮರು ಕಾಬಾವನ್ನು ಪೂಜಿಸುವರೇ ?

ಮಕ್ಕಾದಲ್ಲಿರುವ ಮಸ್ಜಿದುಲ್ ಹರಮ್ ವಿಶ್ವದ ಕೇಂದ್ರ ಮಸೀದಿ. ಕಾಬಾ ಎಂಬುದು ಈ ಮಸೀದಿಯ ಒಳಗೆ ಇರುವ ಚೌಕಾಕೃತಿಯ ಭವನ.

ಕಾಬಾ ಒಂದು ಅಭಯಧಾಮವಾಗಿದ್ದು ಇಲ್ಲಿ ಯಾವ ಜೀವಿಯೂ ಮತ್ತೊಂದನ್ನು ಕೊಲ್ಲಕೂಡದು. ಇಲ್ಲಿ ನೊಣ ಅಥವಾ ಸೊಳ್ಳೆಯನ್ನೂ ಹೊಡೆಯುವಂತಿಲ್ಲ. ತಂದೆಯ ಕೊಲೆಗಾರನನ್ನು ಕಂಡರೂ ಅವರನ್ನು ಕೊಲ್ಲುವಂತಿಲ್ಲ. ಹರಮ್‌ನೊಳಗೆ ಪ್ರವೇಶ ಮಾಡಿದ ನಂತರ ಚರ್ಚೆ, ವಾದ ಮಾಡುವಂತಿಲ್ಲ.

ಮುಸ್ಲಿಮರು ಪ್ರಾರ್ಥನೆಯ ಸಂದರ್ಭದಲ್ಲಿ ಕಾಬಾದ ಎದುರು ಯಾಕೆ ಶಿರಬಾಗುತ್ತಾರೆ ಎಂಬುದು ಮುಸ್ಲಿಮೇತರರು ಸಾಮಾನ್ಯವಾಗಿ ಕೇಳುವ ಪ್ರಶ್ನೆ. ಉತ್ತರ ಸರಳ. ಮಕ್ಕಾ ನಗರದ ಕಾಬಾ ಮುಸ್ಲಿಮರ ಮಟ್ಟಿಗೆ ಕಿಬ್ಲಾ (ಅಭಿಮುಖ ಕೇಂದ್ರ) ಆಗಿದ್ದು ಪ್ರಾರ್ಥನೆ ಮಾಡುವ ಸಂದರ್ಭದಲ್ಲಿ ಮುಸ್ಲಿಮರು ಇದೇ ದಿಕ್ಕಿಗೆ ಮುಖ ಮಾಡಿ ನಿಲ್ಲುತ್ತಾರೆ. ಮುಸ್ಲಿಮರು ಕಾಬಾದೆಡೆಗೆ ತಿರುಗಿ ನಿಂತರೂ ಅವರು ಅದನ್ನು ಪೂಜಿಸುವುದಿಲ್ಲ ಎಂಬುದು ನಾವು ಗಮನಿಸಬೇಕಾದ ಅಂಶ. ಅಲ್ಲಾಹನನ್ನು ಹೊರತುಪಡಿಸಿ ಯಾರ ಮುಂದೆಯೂ ಅವರು ತಲೆ ಬಾಗುವುದಿಲ್ಲ ಮತ್ತು ಪ್ರಾರ್ಥಿಸುವುದಿಲ್ಲ.

ಕುರ್‌ಆನ್‌ನಲ್ಲಿ ಈ ಬಗ್ಗೆ ಇರುವ ಉಲ್ಲೇಖವನ್ನು ಗಮನಿಸಿ:

> **"(ದೂತರೇ) ನಿಮ್ಮ ಮುಖವು ಪದೇ ಪದೇ ಬಾನಿನೆಡೆಗೆ ಹೊರಳುತ್ತಿರುವುದನ್ನು ನಾವು ನೋಡಿರುವೆವು ಮತ್ತು ಖಂಡಿತ ನಾವು ನಿಮ್ಮನ್ನು ನೀವಿಚ್ಛಿಸುವ ದಿಕ್ಕಿನೆಡೆಗೆ ತಿರುಗಿಸುವೆವು. ಸರಿ, ನೀವಿನ್ನು ನಿಮ್ಮ ಮುಖವನ್ನು 'ಮಸ್ಜಿದುಲ್ ಹರಾಮ್'ನೆಡೆಗೆ ತಿರುಗಿಸಿಕೊಳ್ಳಿರಿ. ನೀವೆಲ್ಲ ಎಲ್ಲಿದ್ದರೂ (ನಮಾಝಿನ ವೇಳೆ) ನಿಮ್ಮ ಮುಖಗಳನ್ನು ಅದರೆಡೆಗೆ ತಿರುಗಿಸಿಕೊಳ್ಳಿರಿ." (ಕುರ್‌ಆನ್ 2:144).**

**1. ಇಸ್ಲಾಮ್ ಏಕತೆಗೆ ಒತ್ತು ನೀಡುತ್ತದೆ :**

ಒಂದು ವೇಳೆ ಮುಸ್ಲಿಮರಿಗೆ ನಿರ್ದಿಷ್ಟ ದಿಕ್ಕಿಗೆ ಮುಖ ಮಾಡಿ ಪ್ರಾರ್ಥನೆ ಸಲ್ಲಿಸಬೇಕೆಂಬ ಆದೇಶ ಇಲ್ಲದೇ ಇರುತ್ತಿದ್ದರೆ ಅವರು ತಮಗಿಷ್ಟ ಬಂದ ದಿಕ್ಕಿಗೆ ಮುಖ ಮಾಡ ನಮಾಜ್ ನಿರ್ವಹಿಸುತ್ತಿದ್ದರು. ಏಕದೇವನ ಆರಾಧನೆಯ ಮೂಲಕ ಅವರ ಮಧ್ಯೆ ಏಕತೆಯ ಭಾವನೆಯನ್ನು ಬೆಳೆಸುವುದಕ್ಕಾಗಿ ಪ್ರಾರ್ಥನೆಯ ಸಂದರ್ಭದಲ್ಲಿ ತಾವು ಎಲ್ಲೇ ಇದ್ದರೂ ಕಾಬಾದ ಕಡೆಗೆ ಮುಖ ಮಾಡಲೇ ಬೇಕೆಂದು ಅವರಿಗೆ ನಿರ್ದೇಶಿಸಲಾಗಿದೆ. ಒಂದು ವೇಳೆ ಅವರು ಕಾಬಾದ ಪಶ್ಚಿಮ ದಿಕ್ಕಿಗಿದ್ದರೆ ಅವರು ಪೂರ್ವದತ್ತ ಮುಖ ಮಾಡಿ ನಮಾಜ್ ಮಾಡಬೇಕಾಗುತ್ತದೆ ಮತ್ತು ಒಂದು ವೇಳೆ ಅವರು ಕಾಬಾದ ಪೂರ್ವ ದಿಕ್ಕಿನಲ್ಲಿ ವಾಸವಾಗಿದ್ದರೆ ಅವರು ಪ್ರಾರ್ಥನೆಯ ವೇಳೆ ಪಶ್ಚಿಮ ದಿಕ್ಕಿಗೆ ಮುಖ ಮಾಡಬೇಕಾಗುತ್ತದೆ. ಒಂದು ವೇಳೆ ಬಾಹ್ಯಾಕಾಶದಿಂದ ಮುಸ್ಲಿಮರು ನಮಾಜ್ ಮಾಡುವ ದೃಶ್ಯವನ್ನು ಸೆರೆಹಿಡಿದರೆ, ಇಡೀ ಪ್ರಪಂಚದ ಜನರು ಕಾಬಾದ ದಿಕ್ಕಿಗೆ ಸಾಷ್ಟಾಂಗವೆರಗುವ ಅಮೋಘ ದೃಶ್ಯ ಕಾಣಲು ಸಾಧ್ಯವಿದೆ.

**2. ಕಾಬಾದ ಸುತ್ತ ಪ್ರದಕ್ಷಿಣೆ:**

ಮುಸ್ಲಿಮರು ಮಕ್ಕಾದಲ್ಲಿರುವ ಕಾಬಾ ಭವನಕ್ಕೆ ಹೋದಾಗ ಅವರು ಆ ಚೌಕಾಕಾರದ ಭವನದ ಸುತ್ತ ಪ್ರದಕ್ಷಿಣೆ ಬರುತ್ತಾರೆ. ಇದಕ್ಕೆ ತವಾಫ್ ಎಂದು ಹೆಸರು. ಇದು ಏಕದೇವನ ಆರಾಧನೆಯನ್ನು ಎತ್ತಿ ಹಿಡಿಯುವ ಒಂದು ಆರಾಧನೆ. ಯಾವ ರೀತಿ ಒಂದು ವರ್ತುಲಕ್ಕೆ ಏಕೈಕ ಕೇಂದ್ರ ಬಿಂದು ಇರಲು ಸಾಧ್ಯವೋ ಅದೇ ರೀತಿ ಆರಾಧನೆಗೆ ಅರ್ಹನಾದವನು ಏಕೈಕನಾದ ಅಲ್ಲಾಹನು ಮಾತ್ರ ಎಂಬುದನ್ನು ಇದು ಸಾರಿ ಹೇಳುತ್ತದೆ.

**3. ಕಾಬಾದ ಮೇಲೇರಿ ನಮಾಜ್ ನಿರ್ವಹಿಸಿದ್ದು:**

ಪ್ರವಾದಿವರ್ಯರ ಕಾಲದಲ್ಲಿ ಜನರು ಕಾಬಾದ ಚೌಕಾಕಾರದ ಭವನವನ್ನು ಏರಿ ಅದಾನ್ ಕರೆ ನೀಡುತ್ತಿದ್ದರು. ಇದು ಪ್ರವಾದಿವರ್ಯರು ಕಾಬಾವನ್ನು ಪೂಜಿಸುತ್ತಿರಲಿಲ್ಲ, ಬದಲಿಗೆ ಅದರ ಕಡೆಗೆ ಮುಖ ಮಾಡಿ ನಮಾಜ್ ನಿರ್ವಹಿಸುತ್ತಿದ್ದರು ಎಂಬುದನ್ನು ಸ್ಪಷ್ಟಪಡಿಸುತ್ತದೆ.

# ಕಪ್ಪು ಶಿಲೆ
# ( ಹಜರುಲ್ ಅಸ್ವದ್ )

## ಕಪ್ಪು ಶಿಲೆಯ ಮಹತ್ವವೇನು ? ಮುಸ್ಲಿಮರು ಅದನ್ನು ಯಾಕೆ ಚುಂಬಿಸುತ್ತಾರೆ ?

ಕಪ್ಪು ಶಿಲೆಯು ಕಾಬಾದ ಪೂರ್ವ ದಿಕ್ಕಿನ ಕೊನೆಯಲ್ಲಿರುವ ಕಲ್ಲು. ಇದನ್ನು ಒಂದು ಇಸ್ಲಾಮೀ ಪ್ರತಿಮೆ ಎಂಬ ನೆಲೆಯಲ್ಲಿ ಮುಸ್ಲಿಮರು ಗೌರವಿಸುತ್ತಾರೆ. ಮುಸ್ಲಿಮರ ನಂಬಿಕೆಯ ಪ್ರಕಾರ ಈ ಶಿಲೆಯು ಆದಮ್ ಮತ್ತು ಹವ್ವಾ ಅವರ ಕಾಲಕ್ಕೆ ಸೇರಿದ್ದು. ಇಸ್ಲಾಮೀ ನಂಬಿಕೆಯ ಪ್ರಕಾರ ಈ ಶಿಲೆಯನ್ನು, ಕಾಬಾ ಅಥವಾ ದೇವಮಂದಿರವನ್ನು ಎಲ್ಲಿ ನಿರ್ಮಿಸಬೇಕೆಂದು ಆದಮ್ ಮತ್ತು ಹವ್ವಾರಿಗೆ ತೋರಿಸುವುದಕ್ಕಾಗಿ ದೇವನು ಸ್ವರ್ಗದಿಂದ ಉರುಳಿಸಿದ್ದಾನೆ.

ಇನ್ನೊಂದು ವರದಿಯ ಪ್ರಕಾರ ಇದು ಕಾಬಾದ ಒಂದು ಶಿಲೆಯಾಗಿದ್ದು ಇಬ್ರಾಹಿಮ್ ಮತ್ತು ಇಸ್ಮಾಯಿಲ್ (ಅವರ ಮೇಲೆ ಶಾಂತಿ ಇರಲಿ) ಜತೆಯಾಗಿ ನಿರ್ಮಿಸಿದ ಮೂಲ ಕಟ್ಟಡದ ಪಳಿಯುಳಿಕೆಯಾಗಿದೆ. ಪ್ರವಾದಿ ಮುಹಮ್ಮದ್‌ರ ಕಾಲಕ್ಕಿಂತ ಮುಂಚೆ ಕಾಬಾ ಭವನವನ್ನು ಹಲವು ಬಾರಿ ಕೆಡವಿ ಮರುನಿರ್ಮಿಸಲಾಗಿದೆ. ಇಬ್ರಾಹಿಮ್ ಮತ್ತು ಇಸ್ಮಾಯಿಲ್‌ರ ಕಾಲಾನಂತರ ನಡೆದ ಹಲವು ಅವಘಡಗಳ ನಂತರವೂ ಈ ಶಿಲೆಯು ಯಥಾರೀತಿ ಉಳಿದುಕೊಂಡಿದೆ.

ಪ್ರವಾದಿ ಮುಹಮ್ಮದರು ತಮ್ಮ ಮದೀನಾ ವಲಸೆಯ ನಂತರ ಮಕ್ಕಾಕ್ಕೆ ವಾಪಸಾದಾಗ ಕಾಬಾ ಭವನದ ಪ್ರದಕ್ಷಿಣೆ ಆರಂಭಿಸಿದ್ದು ಈ ಶಿಲೆಯನ್ನು ಚುಂಬಿಸುವ ಮೂಲಕ. ಪ್ರವಾದಿವರ್ಯರ ಮಟ್ಟಿಗೆ ಅದೊಂದು ಭಾವನಾತ್ಮಕ ವಾಪಸಾತಿಯಾಗಿತ್ತು. ವರ್ಷಗಟ್ಟಲೆ ವಲಸೆ ಜೀವನ ಸಾಗಿಸಿದ ನಂತರ ಅವರು ತಮ್ಮ ತಾಯ್ನಾಡಿಗೆ ವಾಪಸಾಗಿದ್ದರು.

ಈ ಅಂಶವನ್ನು ಖಲೀಫಾ ಉಮರ್ ತಾವು ತೀರ್ಥಯಾತ್ರೆ ಹೊರಟ ಸಂದರ್ಭದಲ್ಲಿ ಜನರಿಗೆ ಸ್ಪಷ್ಟಪಡಿಸಿದ್ದರು. ಹಜರುಲ್ ಅಸ್ವದ್‌ನ ಚುಂಬನದ ಬಳಿಕ ಅವರು ಜನರನ್ನುದ್ದೇಶಿಸಿ ಹೇಳಿದ ಮಾತುಗಳು ಗಮನಾರ್ಹ: "ಎಲೈ ಹಜರುಲ್ ಅಸ್ವದ್, ನೀನೊಂದು ಕಲ್ಲು ಮಾತ್ರ. ನೀನು ಯಾರಿಗಾದರೂ ಉಪಕಾರ ಅಥವಾ ಹಾನಿ ಮಾಡಲಾರೆ. ಪ್ರವಾದಿ ಮುಹಮ್ಮದ್ ನಿನ್ನನ್ನು ಚುಂಬಿಸುವುದನ್ನು ನಾನು ನೋಡದೇ ಇರುತ್ತಿದ್ದರೆ ನಾನು ಕೂಡಾ ನಿನ್ನನ್ನು ಚುಂಬಿಸುತ್ತಿರಲಿಲ್ಲ."

# ಮುಸ್ಲಿಮರು ಕಪ್ಪು ಶಿಲೆಯನ್ನು ಪೂಜಿಸುತ್ತಾರೆಯೇ ?

ಈ ಕಪ್ಪು ಶಿಲೆ ಅನೇಕರಲ್ಲಿ ತಪ್ಪುಕಲ್ಪನೆಗೆ ಕಾರಣವಾಗಿರುವ ಹಿನ್ನೆಲೆಯಲ್ಲಿ ಈ ಬಗ್ಗೆಯೂ ಬೆಳಕು ಚೆಲ್ಲುವ ಅಗತ್ಯವಿದೆ. ಕೆಲವರಲ್ಲಿ ಇದು ಒಂದು ಉಲ್ಕಾ ಶಿಲೆ ಎಂಬ ಭಾವನೆಯಿದೆ. ಆದರೆ ಇದು ತಪ್ಪು. ಕಾಬಾದ ಪ್ರದಕ್ಷಿಣೆ ಈ ಬಿಂದುವಿನಿಂದ ಆರಂಭವಾಗುತ್ತದೆ ಎಂಬುದೇ ಇದಕ್ಕೆ ಇರುವ ಮಹತ್ವ. ಅಲ್ಲದೆ ಇದರ ಬಣ್ಣದಿಂದಾಗಿ ಇದು ಎದ್ದು ಕಾಣುತ್ತದೆ. ಎರಡನೆಯದಾಗಿ, ಮುಸ್ಲಿಮರು ಶಿಲೆಯನ್ನು ಪೂಜಿಸುವುದಿಲ್ಲ ಅಥವಾ ಅದರ ದಿಕ್ಕಿಗೆ ಮುಖ ಮಾಡಿ ಸಾಷ್ಟಾಂಗವೆರಗುವುದಿಲ್ಲ. ಚೌಕಾಕಾರದ ಕಾಬಾದ ಯಾವುದೇ ದಿಕ್ಕಿಗೆ ಮುಖ ಮಾಡಿ ಬೇಕಾದರೂ ಪ್ರಾರ್ಥನೆ ಸಲ್ಲಿಸಬಹುದು. ಅಲ್ಲದೆ, ಈ ಕಪ್ಪು ಶಿಲೆ (ಅಲ್ ಹಜರುಲ್ ಅಸ್ವದ್) ಇರುವ ದಿಕ್ಕನ್ನು ಬಿಟ್ಟು ಕಾಬಾದ ಇತರ ದಿಕ್ಕಿಗೆ ತಲೆ ಬಾಗುವ ಸಾಧ್ಯತೆ ಹೆಚ್ಚು. ಕಾರಾಮಿತಾ ಮನೆತನದವರು ಮಕ್ಕಾದ ಮೇಲೆ ದಾಳಿ ಮಾಡಿದಾಗ ಈ ಕಪ್ಪು ಶಿಲೆಯನ್ನು ಸ್ಮರಣಿಕೆಯಾಗಿ ತಮ್ಮೊಂದಿಗೆ ಒಯ್ದಿದ್ದರು. ಅದು ಬಹಳ ವರ್ಷಗಳ ಕಾಲ ಅವರ ಬಳಿಯಿತ್ತು. ಕಾಬಾ ಭವನದಲ್ಲಿ ಈ ಶಿಲೆ ಇಲ್ಲದ ಸಂದರ್ಭದಲ್ಲಿ ಮುಸ್ಲಿಮರು ಉಮ್ಮಾನ್‌ನತ್ತ ಮುಖ ಮಾಡಿ ನಮಾಜ್ ಮಾಡಲಿಲ್ಲ. ಅವರ ದೃಷ್ಟಿ ಕಾಬಾದತ್ತಲೇ ನೆಟ್ಟಿತ್ತು. ಹಾಗೆ ನೋಡಿದರೆ ಕಾಬಾ ಭವನದ ಚೌಕಾಕಾರದ ಕಟ್ಟಡ ಮುಸ್ಲಿಮರ ಅಭಿಮುಖ ಕೇಂದ್ರವಾಗುವುದಕ್ಕೆ ಅನಿವಾರ್ಯವೇನಲ್ಲ. ಒಂದು ವೇಳೆ, ಯಾವುದೋ ಕಾರಣಕ್ಕಾಗಿ ಅಥವಾ ದುರಸ್ತಿಗಾಗಿ ಅದನ್ನು ಕೆಡವಿದರೂ, ಮುಸ್ಲಿಮರು ಅದರತ್ತಲೇ ಮುಖಮಾಡುತ್ತಾರೆ. ಕಾಬಾ ಮತ್ತು ಅದರಂಚಿನ ಕಪ್ಪು ಶಿಲೆ ಆಗ ಮಹತ್ವದ್ದೆನಿಸುವುದಿಲ್ಲ. ಈಗಾಗಲೇ ಹೇಳಿರುವಂತೆ, ಕಪ್ಪು ಶಿಲೆಯ ಮಹತ್ವ ಇರುವುದು, ಅದು ಪ್ರದಕ್ಷಿಣೆ (ತವಾಫ್)ಯ ಆರಂಭವನ್ನು ಸಂಕೇತಿಸುತ್ತದೆ ಎಂಬುದು ಮಾತ್ರ.

# ಮುಸ್ಲಿಮೇತರರಿಗೆ ಮಕ್ಕಾ ಪ್ರವೇಶಿಸಲು ಯಾಕೆ ಅನುಮತಿ ಇಲ್ಲ ?

ಇಸ್ಲಾಮಿನ ಪುಣ್ಯಕ್ಷೇತ್ರಗಳಾದ ಮಕ್ಕಾ ಮತ್ತು ಮದೀನಾ ಸಂದರ್ಶಿಸಲು ಮುಸ್ಲಿಮರಲ್ಲದವರಿಗೆ ನಿರ್ಬಂಧ ಇರುವುದನ್ನು ಕೆಲವು ಮುಸ್ಲಿಮೇತರರು ಟೀಕಿಸುತ್ತಾರೆ. ಪವಿತ್ರ ನಗರಗಳಾದ ಮಕ್ಕಾ ಮತ್ತು ಮದೀನಾಕ್ಕೆ ಮುಸ್ಲಿಮೇತರರಿಗೆ ಪ್ರವೇಶವಿಲ್ಲ ಎಂಬ ಕಾನೂನು ಇರುವುದೇನೋ ನಿಜ. ಈ ನಿರ್ಬಂಧದ ಹಿಂದಿನ ಕಾರಣಗಳನ್ನು ಪ್ರಾಯಶಃ ಈ ಕೆಳಗಿನಂತೆ ಸಂಕ್ಷೇಪಿಸಬಹುದು.

ಮಕ್ಕಾ ಮತ್ತು ಮದೀನಾ ಇಸ್ಲಾಮಿನ ಪವಿತ್ರ ನಗರಗಳು. ಮುಸಲ್ಮಾನರು ಅಲ್ಲಿಗೆ ತೀರ್ಥಯಾತ್ರೆಗಾಗಿ ಹೋಗುತ್ತಾರೆಯೇ ಹೊರತು ಮೋಜಿಗಾಗಿ ಅಥವಾ ಮನರಂಜನೆಗಾಗಿ ಅಲ್ಲ. ಆದ್ದರಿಂದ ಅವು ಪ್ರತಿನಿಧಿಸುವ ಧರ್ಮದ ಮೇಲೆ ವಿಶ್ವಾಸವುಳ್ಳವರಿಗೆ ಮಾತ್ರ ಅಲ್ಲಿಗೆ ಪ್ರವೇಶ ನೀಡಲಾಗುತ್ತದೆ. ಇಂತಹ ನಿರ್ಬಂಧಗಳು ಇತರ ಧರ್ಮಗಳ ತೀರ್ಥಕ್ಷೇತ್ರಗಳಲ್ಲೂ ಇವೆ. ಒಂದು ವೇಳೆ ಯಾರಾದರೂ ತಿರುಪತಿ ತಿರುಮಲ ದೇವಸ್ಥಾನದ ಗರ್ಭಗುಡಿಯೊಳಗೆ ಪ್ರವೇಶಿಸಬೇಕಿದ್ದರೆ ತನಗೆ ಹಿಂದೂ ಧರ್ಮದಲ್ಲಿ ನಂಬಿಕೆ ಇದೆ ಎಂಬುದನ್ನು ಘೋಷಿಸಬೇಕಾಗುತ್ತದೆ. ಹಿಂದೂಯೇತರರಿಗೆ ಇಲ್ಲಿಗೆ ಭೇಟಿ ನೀಡಲು ಇಲ್ಲಿ ಅವಕಾಶವಿಲ್ಲ. ಯಾಕೆಂದರೆ ಇದು ಸಂದರ್ಶನದ ಅಥವಾ ಮನರಂಜನೆಯ ಕೇಂದ್ರವಲ್ಲ.

ಅದೇ ರೀತಿ ದಲಿತರಿಗೆ ಪ್ರವೇಶ ಸಿಗದ, ಮಹಿಳೆಯರಿಗೆ ಪ್ರವೇಶಿಸಲು ನಿರ್ಬಂಧವಿರುವ, ಮಾಂಸಾಹಾರಿಗಳು ಭೇಟಿ ನೀಡಲು ಅವಕಾಶವಿಲ್ಲದ ಅನೇಕ ಸ್ಥಳಗಳು ಇವೆ.

ತಮ್ಮದೇ ದೇಶದಲ್ಲಿ ಜನಸಾಮಾನ್ಯರಿಗೆ ಪ್ರವೇಶ ನಿರ್ಬಂಧಿಸಲಾದ ಹಲವು ಸ್ಥಳಗಳು ಇವೆ. ದಂಡು (ಸೇನಾ ನೆಲೆ) ಪ್ರದೇಶಗಳಿಗೆ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಸಿಬ್ಬಂದಿ ಹೊರತುಪಡಿಸಿ ಇತರರಿಗೆ ಪ್ರವೇಶವಿಲ್ಲ. ಅಣು ಸ್ಥಾವರಗಳು, ಸೂಕ್ಷ್ಮ ಪ್ರದೇಶಗಳಲ್ಲಿ

ಇರುವ ಪ್ರಯೋಗಾಲಯಗಳು, ಗುಪ್ತದಳದ ಮುಖ್ಯ ಕಚೇರಿಗಳಿಗೆ ಜನಸಾಮಾನ್ಯರಿಗೆ ಪ್ರವೇಶ ಇರುವುದಿಲ್ಲ. ಯಾರಿಗಾದರೂ ಏನಾದರೂ ಕೆಲಸವಿದ್ದರೆ ಅಧಿಕೃತ ಅನುಮತಿ ಪಡೆದು ಹೋಗಬೇಕು. ಸಾಧ್ಯವಿದೆ. ಕಂಟೋನ್ಮೆಂಟ್ ಪ್ರದೇಶಕ್ಕೆ ಪ್ರವೇಶ ನೀಡದಿರುವುದಕ್ಕೆ ಜನಸಾಮಾನ್ಯರು ಆಕ್ಷೇಪಿಸುವುದು ತರ್ಕಹೀನ. ಅಂತೆಯೇ, ಮುಸ್ಲಿಮೇತರರು ಮಕ್ಕಾ ಮತ್ತು ಮದೀನಾಕ್ಕೆ ಪ್ರವೇಶ ನೀಡದಿರುವುದನ್ನು ಅಕ್ಷೇಪಿಸುವುದು ಸೂಕ್ತವಲ್ಲ.

ಎಲ್ಲ ರಾಷ್ಟ್ರಗಳೂ ವಿದೇಶಿಯರಿಗೆ ಪ್ರವೇಶ ನೀಡಲು ಕೆಲವೊಂದು ನಿಯಮಗಳನ್ನು ವಿಧಿಸಿವೆ. ಈ ನಿಯಮಗಳಿಗೆ ಬದ್ಧರಾದವರಿಗೆ ಮಾತ್ರವೇ ವೀಸಾ ನೀಡಲಾಗುತ್ತದೆ. ಅಂತೆಯೇ, ಸೌದಿ ಅರೇಬಿಯಾ ಕೂಡಾ ಈ ಧಾರ್ಮಿಕ ಕೇಂದ್ರಗಳಿಗೆ ಭೇಟಿ ನೀಡುವವರ ಧರ್ಮವನ್ನು ಪರಿಗಣಿಸಿದ ನಂತರವೇ ಅನುಮತಿ ನೀಡುತ್ತದೆ. ಇತರ ಧರ್ಮದ ಜನರನ್ನು ಈ ಪವಿತ್ರ ಸ್ಥಳಗಳನ್ನು ಸಂದರ್ಶಿಸದಂತೆ ನಿರ್ಬಂಧಿಸಲಾಗಿದೆ. ಆದರೆ ಇವರು ಇತರ ನಗರಗಳಿಗೆ, ವ್ಯಾಪಾರ, ಉದ್ಯೋಗಾವಕಾಶ ಮತ್ತು ಪ್ರವಾಸಿ ಉದ್ದೇಶಗಳಿಗಾಗಿ ಭೇಟಿ ನೀಡಲು ಅನುಮತಿಯಿದೆ.

# ದರ್ಗಾಗಳಿಗೆ ಭೇಟಿ

ದರ್ಗಾ ಮತ್ತು ಸಮಾಧಿಗಳಿಗೆ ಭೇಟಿ ನೀಡುವ ಮೂಲಕ ಕೆಲವು ಮುಸ್ಲಿಮರು ಏಕದೇವತ್ವವನ್ನು ಪ್ರತಿಪಾದಿಸುವ ಇಸ್ಲಾಮ್ ಧರ್ಮದ ಬಗ್ಗೆ ತಪ್ಪುತಿಳಿವಳಿಕೆ ಮೂಡಲು ಕಾರಣವಾಗುತ್ತಿದ್ದಾರೆ. ಸೂಫಿ, ಸಂತರು ಹಾಗೂ ದರ್ವೇಷಿಗಳ ಗೋರಿಗಳನ್ನು ಎತ್ತಿ ಕಟ್ಟಲಾಗಿರುವ ದಕ್ಷಿಣ ಏಷ್ಯಾದ ಕೆಲವು ರಾಷ್ಟ್ರಗಳಲ್ಲಿ ಇಸ್ಲಾಮಿನ ಮೂಲಭೂತ ವಿಶ್ವಾಸವನ್ನೇ ಕುಲಗೆಡಿಸುವ ಇಂತಹ ಆಚರಣೆಗಳು ಕಂಡು ಬರುತ್ತವೆ. ವಸ್ತುತಃ ಈ ಸಂತರು ತಮ್ಮ ಜೀವಿತಾವಧಿಯಲ್ಲಿ ಮಾನವ ಸೇವೆಯ ಮೂಲಕ ಅಸಂಖ್ಯ ಜನರ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಅವರು ಬೋಧಿಸಿದ್ದು ಪ್ರೀತಿ ಮತ್ತು ಸೌಹಾರ್ದತೆಯನ್ನು; ನಿಸ್ವಾರ್ಥತೆ ಅವರ ಉಸಿರಾಗಿತ್ತು. ಆದರೆ ಅವರ ಮೇಲಿನ ಪ್ರೀತಿಯು ಕಾಲಾನುಕ್ರಮದಲ್ಲಿ ಭಕ್ತಿಯಾಗಿಯೂ ಪೂಜೆಯಾಗಿಯೂ ಬದಲಾವಣೆಗೊಂಡಿತು.

ತಮ್ಮ ಸಾವಿನ ಬಳಿಕ ಈ ವ್ಯಕ್ತಿಗಳು ಸಂತರಾಗಿ ಬಿಟ್ಟರು. ಅವರ ಸುತ್ತ ಕಥೆ, ದಂತಕಥೆಗಳು ಹುಟ್ಟಿಕೊಂಡವು. ಅತಿಮಾನುಷ ಶಕ್ತಿಯನ್ನು ಅವರಿಗೆ ಆರೋಪಿಸಲಾಯಿತು. ಸ್ವಾರ್ಥಹಿತಾಸಕ್ತ ಜನರು ಅವರನ್ನು ದೇವಾಂಶ ಸಂಭೂತರನ್ನಾಗಿ ಮಾಡಿ ಅವರ ಹೆಸರನ್ನು ದುರುಪಯೋಗ ಪಡಿಸಿಕೊಳ್ಳಲಾರಂಭಿಸಿದರು. ಇಸ್ಲಾಮಿನಂತಹ ಸರಳ ತತ್ವ ಸಿದ್ಧಾಂತಗಳನ್ನು ಹೊಂದಿದ ಧರ್ಮವೇ ಹೀಗೆ ಕಲುಷಿತವಾಗಿ ಬಿಡಬೇಕಾದರೆ ಯಾವ ಧರ್ಮವೂ ತಮ್ಮ ಸ್ಥಾಪಕರ ಕಾಲಾನಂತರ ಮೂಲ ರೂಪದಲ್ಲಿ ಉಳಿಯುವುದಿಲ್ಲ ಎಂಬುದು ಬಹು ಮಟ್ಟಿಗೆ ನಿಜವೇ ಅನ್ನಿಸುತ್ತದೆ. ಹೀಗೆ ಆರಂಭಗೊಂಡ ಗೋರಿಪೂಜೆ ಭಾರತೀಯ ಉಪಖಂಡದಲ್ಲಿ ಇಸ್ಲಾಮ್ ಸಂಸ್ಕೃತಿಯ ಭಾಗವೇ ಆಗಿಬಿಟ್ಟಿದೆ. ಆದರೆ, ಧರ್ಮದ ಮೂಲಭೂತ ಸಿದ್ಧಾಂತದಲ್ಲಿ ಇದಕ್ಕೆ ಯಾವುದೇ ಮಹತ್ವ ಇಲ್ಲ.

ಯಾವುದೇ ಪ್ರವಾದಿಯೂ, ಗೋರಿಯನ್ನು ಎತ್ತರಿಸಿ ಕಟ್ಟಬೇಕು, ದೀಪಾಲಂಕಾರ ಮಾಡಬೇಕು; ಊದುಬತ್ತಿ ಹಚ್ಚಿ ಚಾದರ್‌ಗಳನ್ನು ಹರಕೆ ನೀಡಿ ಉರುಸ್ (ಪುಣ್ಯತಿಥಿ) ಆಚರಿಸಬೇಕು ಮತ್ತು ಮರಸಿಯಾ ಅಥವಾ ಖವ್ವಾಲಿಯಂಥ ಮನರಂಜನಾ ಕಾರ್ಯಕ್ರಮ ಆಯೋಜಿಸಬೇಕು ಎಂದು ಜನರಿಗೆ ಬೋಧಿಸಿದ ಉದಾಹರಣೆ ಇಲ್ಲ. ಇಸ್ಲಾಮ್ ಸಂಪೂರ್ಣವಾಗಿ ಇಂಥ ಆಚರಣೆಗಳನ್ನು ತಿರಸ್ಕರಿಸಿದೆ ಮತ್ತು ಇವನ್ನು ನವೀನವಾದ ಎಂದು ಘಂಟಾಘೋಷವಾಗಿ ಸಾರಿದೆ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಹೇಳಿದ ಮಾತು ಇಲ್ಲಿ ಗಮನಾರ್ಹ: "ತಮ್ಮ ಪ್ರವಾದಿಗಳ ಗೋರಿಯನ್ನು ಪೂಜಾಸ್ಥಳವಾಗಿ ಪರಿವರ್ತಿಸಿದವರ ಮೇಲೆ ಶಾಪವಿರಲಿ. ನನ್ನ ಗೋರಿಯನ್ನು ಪೂಜಾಸ್ಥಳವಾಗಿ ಪರಿವರ್ತಿಸಬೇಡಿ."

# ದರ್ಗಾ ಮತ್ತು ಮಸೀದಿ ನಡುವಣ ವ್ಯತ್ಯಾಸ

ಮಸೀದಿಯು ಇಸ್ಲಾಮಿನ ಆರಾಧನಾ ಸ್ಥಳ. ಮುಸ್ಲಿಮರು ನಮಾಜ್ ನಿರ್ವಹಿಸಲು ನಿತ್ಯ ಐದು ಬಾರಿ ಸೇರುತ್ತಾರೆ. ದರ್ಗಾ ಎಂದರೆ ಮೂಲಭೂತವಾಗಿ ಮುಸ್ಲಿಮ್ ಸಂತರ ಸಮಾಧಿ ಸ್ಥಳ. ತಮ್ಮ ಜೀವಿತಾವಧಿಯಲ್ಲಿ ಜನರ ಪ್ರೀತಿ ವಿಶ್ವಾಸ ಗಳಿಸಿದ ಈ ಸಂತರು ನಿಧನ ಹೊಂದಿದಾಗ ಇವರ ಗೋರಿಗಳನ್ನು ಎತ್ತರಿಸಿ ಕಟ್ಟಿ ತಮ್ಮ ಗೌರವವನ್ನು ಆರಾಧನೆಯಾಗಿ ಪರಿವರ್ತಿಸುತ್ತಾರೆ. ಈ ಸಂತರಿಗೆ ಸತ್ತ ನಂತರವೂ ರೋಗ ಗುಣಪಡಿಸುವ, ಸಮಸ್ಯೆ ಪರಿಹರಿಸುವ ಸಾಮರ್ಥ್ಯ ಇದೆ ಎಂದು ಪಾಮರ ಜನರನ್ನು ನಂಬಿಸಲಾಗುತ್ತದೆ.

ಈ ಎಲ್ಲ ಕಾರಣಗಳಿಂದ ಗೋರಿಗಳು ಇಂದು ಪುಣ್ಯಕ್ಷೇತ್ರಗಳಾಗಿ ಬಿಟ್ಟಿವೆ. ಅಜ್ಮೀರ್‌ನಲ್ಲಿರುವ ಖ್ವಾಜಾ ಮೊಯಿನುದ್ದೀನ್ ಚಿಶ್ತಿ (ಕ್ರಿ.ಶ. 1141–1230)ಯವರ ಸಮಾಧಿಯು ಭಾರತದಲ್ಲಿ ಇಂಥ ಪ್ರಮುಖ ಯಾತ್ರಾಸ್ಥಳ. ದೆಹಲಿಯ ಖ್ವಾಜಾ ಭಕ್ತಿಯಾರ್ ಕಾಕಿ, ಪಂಜಾಬ್‌ನ ಬಾಬಾ ಫರೀದುದ್ದೀನ್ ಗಂಜ್‌ಶಕರ್, ದೆಹಲಿಯ ನಿಜಾಮುದ್ದೀನ್ ಔಲಿಯಾ, ಗುಲ್ಬರ್ಗದ ಕ್ವಾಜಾ ಬಂದೆ ನವಾಜ್, ಹೈದರಾಬಾದ್‌ನ ಯೂಸುಫೈನ್ ಭಾರತದಲ್ಲಿ ಶಾಂತಿ ಮತ್ತು ಪ್ರೀತಿಯನ್ನು ಸಾರಿದ ಕೆಲವು ಪ್ರಮುಖ ಸಂತರಾಗಿದ್ದು ಇವರ ಗೋರಿಗಳನ್ನು ಇಲ್ಲಿ ದರ್ಗಾಗಳಾಗಿ ಪರಿವರ್ತಿಸಲಾಗಿದ್ದು, ಅಸಂಖ್ಯ ಭಕ್ತರನ್ನು ಅವು ಆಕರ್ಷಿಸುತ್ತಿವೆ. ಕೆಲವು ಕಡೆ ಮುಸ್ಲಿಮರಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಹಿಂದೂಗಳೇ ಇಂತಹ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ಮುಖ್ಯವಾಹಿನಿಯ ಇಸ್ಲಾಮಿನಲ್ಲಿ ಇವುಗಳಿಗೆ ಮಾನ್ಯತೆ ಇಲ್ಲದಿದ್ದರೂ ಉಪಖಂಡದ ಇಸ್ಲಾಮಿನ ಸಾಂಸ್ಕೃತಿಕ ಶಾಖೆಗಳೆಂಬ ಮನ್ನಣೆಯನ್ನು ಅವು ಪಡೆದುಕೊಂಡಿವೆ. ಇಲ್ಲಿ ಇಸ್ಲಾಮೀ ವಾಸ್ತುಶಿಲ್ಪವು (ಗುಂಬಜ ಮತ್ತು ಮಿನಾರ) ಕಂಡು ಬರುತ್ತದೆ. ಜತೆಗೆ ಸಂತರನ್ನು ಪ್ರಶಂಸಿಸಿ ಹಿನ್ನೆಲೆ ಸಂಗೀತದೊಂದಿಗೆ ಹಾಡಲಾಗುವ ಖವ್ವಾಲಿಗಳು ಕೂಡಾ ಸಾಕಷ್ಟು ಜನಪ್ರಿಯತೆ ಗಳಿಸಿವೆ.

ಗೋರಿಪೂಜೆಯನ್ನು ಇಸ್ಲಾಮ್ ನಿರುತ್ತೇಜಿಸುತ್ತದೆ. ಇಂತಹ ವಿಶ್ವಾಸವು ದೇವರಿಗೆ ಭಾಗೀದಾರರನ್ನು ಸೃಷ್ಟಿಸುವುದಕ್ಕೆ ಸಮವಾಗಿದೆ. ಆದ್ದರಿಂದಲೇ ಇದೊಂದು

ಬಹುದೇವಾರಾಧಕ ಆಚರಣೆ. ಇಸ್ಲಾಮ್ ಅತ್ಯಂತ ಸ್ಪಷ್ಟವಾಗಿ ಏಕದೇವತ್ವವನ್ನು ಪ್ರತಿಪಾದಿಸುತ್ತದೆ ಮತ್ತು ನಂಬಿಕೆಗಳ ವಿಚಾರದಲ್ಲಿ ಯಾವುದೇ ರೀತಿಯ ವಕ್ರತೆಯನ್ನು ಸಹಿಸುವುದಿಲ್ಲ. ಇಸ್ಲಾಮಿನ ಪ್ರಕಾರ ದೈವಿಕತೆ ಮತ್ತು ಸಂತತ್ವದ ಮಧ್ಯೆ ಸ್ಪಷ್ಟ ಗಡಿಗಳಿವೆ. ಇವೆರಡೂ ಪರಸ್ಪರ ಸಂಗಮಿಸುವುದಿಲ್ಲ. ಪ್ರವಾದಿಗಳು ಕೂಡಾ ಪೂಜಾರ್ಹರಲ್ಲ. ಪ್ರವಾದಿಗಳೇ ಸ್ವತಃ ತಾವು ಇತರ ಮಾನವರಿಗಿಂತ ಅತೀತರಲ್ಲ ಎಂದು ಘೋಷಿಸಿದ್ದಾರೆ. ಕುರ್‌ಆನ್‌ನ ಮೊದಲ ಅಧ್ಯಾಯವಾದ ಸೂರಃ ಫಾತಿಹಾದ ಮೊದಲ ಅಧ್ಯಾಯದಲ್ಲಿಯೇ ಇಸ್ಲಾಮ್‌ನ ಅನುಯಾಯಿಗಳು ಯಾವ ರೀತಿ ಪ್ರಾರ್ಥನೆ ಸಲ್ಲಿಸಬೇಕೆಂಬುದನ್ನು ಕಲಿಸಲಾಗಿದೆ:

**"(ಓ ಅಲ್ಲಾಹ್) ನಾವು ನಿಮ್ಮನ್ನು ಪೂಜಿಸುತ್ತೇವೆ ಮತ್ತು ನಿಮ್ಮಿಂದ ಮಾತ್ರ ನೆರವು ಬೇಡುತ್ತೇವೆ." (ಕುರ್‌ಆನ್, 1:4)**

ಎರಡನೆಯದಾಗಿ, ಇಸ್ಲಾಮ್ ಧರ್ಮವು ಮನುಷ್ಯರಿಗೆ ದೇವರೊಂದಿಗೆ ನೇರವಾಗಿ ಸಂಪರ್ಕ ಬೆಳೆಸುವಂತೆ ಕಲಿಸುತ್ತದೆ. ವ್ಯಕ್ತಿಯು ನೇರವಾಗಿ ದೇವರೊಂದಿಗೆ ಪ್ರಾರ್ಥಿಸಬೇಕು ಮತ್ತು ಯಾವುದೇ ಮಧ್ಯವರ್ತಿಯನ್ನು ಹುಡುಕಬಾರದು ಎಂದು ಅದು ಕರೆ ನೀಡುತ್ತದೆ. ದೇವರು ಮತ್ತು ವ್ಯಕ್ತಿಯ ನಡುವೆ ದಳ್ಳಾಲಿಯ ಅಗತ್ಯವಿಲ್ಲ ಎಂದು ಅದು ಹೇಳುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಗೋರಿಪೂಜೆಯು ದೇವರು ಮತ್ತು ವ್ಯಕ್ತಿಯ ನಡುವೆ ಮೃತ ಸಂತರನ್ನು ತಂದು ನಿಲ್ಲಿಸುತ್ತದೆ. ಇದನ್ನು ಇಸ್ಲಾಮ್ ಒಪ್ಪುವುದಿಲ್ಲ. ಜೀವಂತ ಇರುವ ಪ್ರವಾದಿ ಮತ್ತು ಸಂತರಿಗೆ ದೇವರ ಜತೆ ಯಾರ ಪರವಾದರೂ ವಕಾಲತ್ತು ನಡೆಸಲು ಸಾಧ್ಯವಿಲ್ಲ ಎಂದಾದ ಮೇಲೆ, ಮೃತ ಪುಣ್ಯಪುರುಷರಿಗೆ ಅಂತಹ ಸಾಮರ್ಥ್ಯ ದಕ್ಕುವುದಾದರೂ ಹೇಗೆ?

ಕುರ್‌ಆನ್ ಹೇಳುತ್ತದೆ:

**"ಗೋರಿಗಳಲ್ಲಿ ಇರುವವರಿಗೆ ಕೇಳಿಸಲು ನಿಮಗೆ ಸಾಧ್ಯವಾಗದು." (ಕುರ್‌ಆನ್, 35:22)**

ದರ್ಗಾಗಳು ಯಾಕೆ ಆರಾಧನಾಲಯಗಳಲ್ಲ ಎಂಬುದಕ್ಕೆ ಇದೂ ಒಂದು ಕಾರಣ. ಕೆಲವು ವರ್ಗದ ಜನರು ಗೋರಿಗಳಿಗೆ ಪಾವಿತ್ರ್ಯ ಕಲ್ಪಿಸುತ್ತಾರೆ ಎಂಬ ಕಾರಣಕ್ಕೆ ಇಸ್ಲಾಮಿನ ಮೂಲಭೂತ ವಿಶ್ವಾಸಗಳು ಪಲ್ಲಟಗೊಳ್ಳಲು ಸಾಧ್ಯವಿಲ್ಲ.

## ದೇವರ ಮತ್ತು ಪ್ರವಾದಿಯ ಚಿತ್ರಗಳು ಏಕಿಲ್ಲ ?

ವಿವಿಧ ಧರ್ಮಗಳ ಅನುಯಾಯಿಗಳು ತಮ್ಮ ದೇವರ ಮತ್ತು ಪೂಜ್ಯ ವ್ಯಕ್ತಿಗಳ ಚಿತ್ರ ಅಥವಾ ಮೂರ್ತಿಗಳನ್ನು ಆರಾಧನಾಲಯಗಳಲ್ಲಿ ಅಥವಾ ಮನೆಯಲ್ಲಿ ಇಡುತ್ತಾರೆ. ಆದರೆ ಮಸೀದಿ ಅಥವಾ ಮುಸ್ಲಿಮರ ಮನೆಗಳಲ್ಲಿ ದೇವರ ಅಥವಾ ಪ್ರವಾದಿಯ ಚಿತ್ರ ಇಲ್ಲ. ಇಸ್ಲಾಮ್ ಭಾವಚಿತ್ರ ಅಥವಾ ಮೂರ್ತಿಗಳಿಗೆ ಏಕೆ ಅವಕಾಶ ನೀಡುವುದಿಲ್ಲ ಎಂಬ ಪ್ರಶ್ನೆಯನ್ನು ಇದು ಹುಟ್ಟುಹಾಕುತ್ತದೆ.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅಲ್ಲಾಹನು ಮನುಕುಲಕ್ಕೆ ಕಳುಹಿಸಿದ ಕೊನೆಯ ಸಂದೇಶವಾಹಕರಾಗಿದ್ದು ಇಸ್ಲಾಮ್ ಧರ್ಮವನ್ನು ಅವರು ಮೂರು ತತ್ವಗಳ ಮೂಲಕ ವಿವರಿಸಿದ್ದಾರೆ.

1. ಪರಮೋಚ್ಛ ದೇವರಲ್ಲಿ ನಂಬಿಕೆ.

2. ಪ್ರವಾದಿತ್ವ (ಆದಮರಿಂದ ಮುಹಮ್ಮದ್‌ರವರೆಗೆ ಅಲ್ಲಾಹನು ಕಳುಹಿಸಿದ ಎಲ್ಲ ಸಂದೇಶವಾಹಕರ ಮೇಲೆ ನಂಬಿಕೆ) ಮತ್ತು.

3. ಅಂತಿಮ ದಿನದ ವಿಚಾರಣೆಯ ಮೇಲೆ ನಂಬಿಕೆ.

ತಾನು ಇತರರಂತೆಯೇ ಒಬ್ಬ ಮನುಷ್ಯನಾಗಿದ್ದು ತನಗೆ ದೈವತ್ವವನ್ನು ಕಲ್ಪಿಸಕೂಡದೆಂದು ಪ್ರವಾದಿ ಮುಹಮ್ಮದ್ ಜನರಿಗೆ ಎಚ್ಚರಿಕೆ ನೀಡಿದ್ದರು. ಆದ್ದರಿಂದ ಇಸ್ಲಾಮ್ ಧರ್ಮವು ದೇವರು ಮತ್ತು ಸಂದೇಶವಾಹಕರ ಮಧ್ಯೆ ಸ್ಪಷ್ಟ ಅಂತರವನ್ನು ಕಾಯ್ದುಕೊಂಡಿದೆ. ಇತರ ಧರ್ಮಗಳಂತೆ ಪ್ರವಾದಿಗಳನ್ನು ದೇವರ ಅವತಾರ ಎಂದು ಇಸ್ಲಾಮ್ ಕರೆಯುವುದಿಲ್ಲ. ದೇವರು ಚಿರಂಜೀವಿಯಾಗಿದ್ದು ಪ್ರವಾದಿಗಳು ಇತರ ಮಾನವರಂತೆ ನಶ್ವರರಾಗಿದ್ದಾರೆ. ಆದರೆ ಮನುಷ್ಯರ ಮಾರ್ಗದರ್ಶನಕ್ಕೆ ಬೇಕಾದ ದೈವಿಕ ಸಂದೇಶವನ್ನು ಈ ಪ್ರವಾದಿಗಳು ಹೊತ್ತು ತರುತ್ತಾರೆ. ಇದೇ ಕಾರಣದಿಂದ ಪ್ರವಾದಿ ಮುಹಮ್ಮದ್ ತಮ್ಮನ್ನು ದೇವರ ಸ್ಥಾನಕ್ಕೆ ಏರಿಸುವುದನ್ನು ನಿಷೇಧಿಸಿದ್ದರು. ಸ್ವತಃ ಕುರ್‌ಆನ್‌ನಲ್ಲೇ ಪ್ರವಾದಿಗಳು ನಶ್ವರರಾಗಿದ್ದು ದೇವರು ಮಾತ್ರ ಚಿರಂತನ ಎಂದು ಸಾರಲಾಗಿದೆ. ದೇವರು ನಿದ್ರಿಸುವುದಿಲ್ಲ ಮತ್ತು ತೂಕಡಿಸುವುದಿಲ್ಲ ಎಂದು ಕುರ್‌ಆನ್ ಘೋಷಿಸಿದೆ.

ಆದ್ದರಿಂದ ಇಸ್ಲಾಮ್ ಪೂಜೆ ಮತ್ತು ಆರಾಧನೆ ಕೇವಲ ದೇವರಿಗೆ ಮಾತ್ರ ಸಲ್ಲಬೇಕೆಂದು ತಾಕೀತು ಮಾಡಿದೆ. ಈ ಕಲ್ಪನೆಯನ್ನು ದುರ್ಬಲಗೊಳಿಸುವ ಯಾವುದನ್ನೂ ಅದು ಅಂಗೀಕರಿಸುವುದಿಲ್ಲ ಮತ್ತು ಅನುಮತಿಸುವುದಿಲ್ಲ. ದೇವರ ಮೂರ್ತಿ ಮಾಡುವುದು ಅಥವಾ ಪ್ರವಾದಿಯ ಚಿತ್ರ ಬಿಡಿಸುವುದನ್ನು ನಿಷೇಧಿಸಿರುವುದಕ್ಕೂ ಇದುವೇ ಕಾರಣ. ಮೂರ್ತಿ ರಚನೆಗೆ ಅನುಮತಿ ನೀಡಿದರೆ ಅದು ಮೂರ್ತಿಪೂಜೆಗೆ ಕಾರಣವಾಗಿ ನೈಜ ದೇವರು ಮರೆಗೆ ಸರಿಯುವ ಅಪಾಯವಿದೆ. ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ಪ್ರವಾದಿ ಇಬ್ರಾಹಿಮ್ (ಅಬ್ರಹಾಂ) ದೇವಾರಾಧನೆಗಾಗಿ ನಿರ್ಮಿಸಿದ ಕಾಬಾ ಭವನವು ಪತನಗೊಳ್ಳಲು ಇದುವೇ ಕಾರಣ. ಅದು ಸರ್ವದೇವ ಮಂದಿರವಾಗಿ ಪರಿವರ್ತನೆಗೊಂಡಿತ್ತು. ಪ್ರತಿಯೊಂದು ದೇವರಿಗೂ ನಿರ್ದಿಷ್ಟ ಜವಾಬ್ದಾರಿಯನ್ನು ವಹಿಸಿಕೊಡಲಾಗಿತ್ತು. ಆದರೆ ಇಸ್ಲಾಮ್ ದೇವರ ದೈವತ್ವವನ್ನು ಕಾಪಾಡುವುದರ ಜತೆಗೆ ಮೂರ್ತಿಪೂಜೆಯನ್ನು ಸಂಪೂರ್ಣವಾಗಿ ನಿಷೇಧಿಸಿತು.

ಇದೇ ರೀತಿ ಪ್ರವಾದಿಯ ಚಿತ್ರ ಮತ್ತು ಮೂರ್ತಿ ರಚನೆಯನ್ನೂ ಕೂಡಾ ನಿಷೇಧಿಸಲಾಗಿದೆ. ಮಹಾಪುರುಷರನ್ನು ದೇವರ ಸ್ಥಾನಕ್ಕೆ ಏರಿಸುವ ಮನುಷ್ಯನ ಪ್ರವೃತ್ತಿಯಿಂದಾಗಿ ಪ್ರವಾದಿಯೊಂದಿಗೆ ಸಂವಾದ ಮತ್ತು ಒಡನಾಟ ಹೊಂದಿದ್ದ ಜನರು ಪ್ರವಾದಿಯ ಚಿತ್ರ ಅಥವಾ ಮೂರ್ತಿಯನ್ನು ರಚಿಸಿ ಅದನ್ನು ಪೂಜಿಸಲಾರಂಭಿಸಬಹುದು ಮತ್ತು ದೇವರನ್ನೇ ಮರೆತು ಬಿಡಬಹುದು ಎಂಬ ಭಯವಿತ್ತು.

ಜಗತ್ತಿನ ಯಾವ ಮಸೀದಿಯಲ್ಲೂ ಯಾವುದೇ ದೇವರ ಚಿತ್ರ, ಮೂರ್ತಿ ಇಲ್ಲ. ಅಲ್ಲಿರುವುದು ಏಕೈಕ ಜಗದೊಡೆಯನಿಗೆ ಪ್ರಾರ್ಥನೆ ಸಲ್ಲಿಸಲು, ಆತನ ಮುಂದೆ ಶಿರಬಾಗಲು, ಬಯಕೆ ಬೇಡಿಕೆಗಳನ್ನು ನಿವೇದಿಸಲು ಒಂದು ಖಾಲಿ ಸ್ಥಳ ಮಾತ್ರ. ವ್ಯಕ್ತಿ ದೇವರನ್ನು ಪೂಜಿಸುವಾಗ ಆತನ ಮುಂದೆ ಪ್ರವಾದಿ ಮುಹಮ್ಮದ್ ಅವರ ಚಿತ್ರಣವೂ ಇರುವುದಿಲ್ಲ. ಯಾಕೆಂದರೆ ಅವರು ದೇವರಲ್ಲ. ಅವರ ಸ್ಥಾನ ಮಾರ್ಗದರ್ಶನ ನೀಡುವುದು. ಅವರೊಬ್ಬ ಅಧ್ಯಾತ್ಮಿಕ ನಾಯಕ, ಒಬ್ಬ ಆದರ್ಶ ಮಾನವ, ಸುಧಾರಕ, ಸುವಾರ್ತೆ ಮತ್ತು ಮುನ್ನೆಚ್ಚರಿಕೆ ಕೊಡುವ ವ್ಯಕ್ತಿ ಮಾತ್ರ. ಅವರು ದೇವರ ಪಾಲುದಾರರಾಗಲೀ ಅವತಾರವಾಗಲೀ ಅಲ್ಲ. ಅವರ ಯಾವುದೇ ಮೂರ್ತಿಯನ್ನು ಮಾಡುವಂತಿಲ್ಲ. ಪ್ರತಿಮೆ, ಚಿತ್ರ, ಶಿಲ್ಪ, ಮೂರ್ತಿಗಳಲ್ಲಿ ಅವರನ್ನು ಸೆರೆಹಿಡಿಯುವಂತಿಲ್ಲ. ವಸ್ತುಸ್ಥಿತಿ ಹೀಗಿರುವಾಗ, ದೇವರನ್ನಾಗಲೀ ಪ್ರವಾದಿಗಳನ್ನಾಗಲೀ ಕಾರ್ಟೂನ್‌ಗಳಲ್ಲಿ ಚಿತ್ರಿಸುವುದು ಮತ್ತು ರೇಖೆಗಳಲ್ಲಿ ಅಭಿವ್ಯಕ್ತಿಸುವುದು ನಿಂದನೆ ಮತ್ತು ಅಗೌರವವಾಗುತ್ತದೆ.

ಆಗಾಗ್ಗೆ ಪ್ರವಾದಿ ಮುಹಮ್ಮದರ ರೇಖಾ ಚಿತ್ರಗಳು ಭಾರೀ ಪ್ರತಿಭಟನೆಗೆ

ಕಾರಣವಾಗುತ್ತವೆ. ಇತ್ತೀಚಿನ ವರ್ಷಗಳಲ್ಲಿ ಪ್ರವಾದಿ ಮುಹಮ್ಮದ್‌ರ (ಅವರ ಮೇಲೆ ಶಾಂತಿ ಇರಲಿ) ವ್ಯಂಗ್ಯಚಿತ್ರವನ್ನು ಡಚ್ ವ್ಯಂಗ್ಯಚಿತ್ರಕಾರ ರೂಪಿಸಿದ್ದು ಅದು ಅಲ್ಲಿನ ದೈನಿಕ 'ಜಿಲ್ಲಾಂದ್ ಪಾಸ್ಟನ್'ನಲ್ಲಿ ಪ್ರಕಟಗೊಂಡಿತ್ತು. ಮುಸ್ಲಿಮರು ಇಂಥ ಕೃತ್ಯಗಳನ್ನು ತಮ್ಮನ್ನು ಉದ್ರೇಕಗೊಳಿಸಲಿಕ್ಕಾಗಿ ಉದ್ದೇಶಪೂರ್ವಕವಾಗಿಯೇ ರಚಿಸಲಾಗಿದೆ ಎಂದು ಭಾವಿಸುತ್ತಾರೆ. ಇಂಥ ಕೃತ್ಯಗಳ ಮೂಲಕ ಪವಿತ್ರ ವ್ಯಕ್ತಿಗಳಿಗೆ ಅಗೌರವ ತೋರಿಸುವವರನ್ನು ದೇವನಿಂದನೆ ಕಾನೂನಿನ ವ್ಯಾಪ್ತಿಗೆ ಒಳಪಡಿಸಬೇಕೆಂದು ಮುಸ್ಲಿಮರು ಅಪೇಕ್ಷಿಸುತ್ತಾರೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಏಸು ಕ್ರಿಸ್ತರನ್ನು ಅವಹೇಳನ ಮಾಡುವುದನ್ನು ನಿಷೇಧಿಸಲಾಗಿದೆ. ನಿಜವಾಗಿ ಇಂಥ ವಿಷಯಗಳಲ್ಲಿ ಪಾಶ್ಚಿಮಾತ್ಯ ದೇಶಗಳು ದ್ವಿಮುಖ ನೀತಿಯನ್ನು ಹೊಂದಿವೆ. ಅಲ್ಲಿ ಏಸುಕ್ರಿಸ್ತರನ್ನು ಅಣಕಿಸುವ ಹಲವು ನಾಟಕಗಳ ಮೇಲೆ ನಿಷೇಧ ಹೇರಲಾಗಿದೆ. ಹೀಗೆ ಮಾಡುವುದು ಅಭಿವ್ಯಕ್ತಿ ಸ್ವಾತಂತ್ರದ ಮೇಲೆ ನಿಯಂತ್ರಣ ಹೇರಿದಂತಾಗುವುದಿಲ್ಲ. ಮಹಾಪುರುಷರು ಮತ್ತು ಧಾರ್ಮಿಕ ಸಂಕೇತಗಳಿಗೆ ಸದಾ ಗೌರವ ಸಲ್ಲಬೇಕು.

ಅಭಿವ್ಯಕ್ತಿ ಸ್ವಾತಂತ್ರ್ಯವು ದೇವದೂಷಣೆಗೆ ಇರುವ ಅನುಮತಿಯಲ್ಲ. ನಿಜವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ನಿರ್ಬಂಧಗಳನ್ನು ಸಮಾಜ ಒಪ್ಪಿಕೊಂಡಿದೆ. ಆದ್ದರಿಂದ ಇದರ ಹೆಸರಲ್ಲಿ ಅಶ್ಲೀಲತೆ, ಅನೈತಿಕತೆ, ದೇಶದ್ರೋಹದಲ್ಲಿ ತೊಡಗಿಕೊಳ್ಳಲು ಮತ್ತು ನಿಂದನಾತ್ಮಕ ಬರಹಗಳನ್ನು ಪ್ರಕಟಿಸಲು ಯಾರಿಗೂ ಅವಕಾಶವಿಲ್ಲ. ಎಲ್ಲ ರಾಷ್ಟ್ರಗಳು ವ್ಯಕ್ತಿಯ ಘನತೆ ಮತ್ತು, ಖಾಸಗಿತನವನ್ನು ಗೌರವಿಸಲು ಕಾಯ್ದೆ ರೂಪಿಸಿವೆ. ಇಂಥ ಸಂದರ್ಭದಲ್ಲಿ ಡಚ್ ವ್ಯಂಗ್ಯಚಿತ್ರಕಾರ ಪ್ರವಾದಿ ಮುಹಮ್ಮದ್ ಅವರ ವ್ಯಂಗ್ಯಚಿತ್ರ ರೂಪಿಸುವುದು ಹೇಗೆ ಸಾಧ್ಯ?

ಮುಸ್ಲಿಮ್ ಜಗತ್ತಿನಲ್ಲಿ ಯಾವುದೇ ಪ್ರವಾದಿಯ ಚಿತ್ರವನ್ನು ಬಿಡಿಸಲು ಅನುಮತಿಯಿಲ್ಲ. ಇನ್ನು, ಅವಹೇಳನ ಮಾಡುವುದು ದೂರದ ಮಾತು. ಇಸ್ಲಾಮ್, ಏಸುಕ್ರಿಸ್ತರ ತಾಯಿ ಮೇರಿಗೆ ಹೆಚ್ಚಿನ ಗೌರವ ನೀಡುತ್ತದೆ. ಏಸುಕ್ರಿಸ್ತರು ತಂದೆಯಿಲ್ಲದೆ ಹುಟ್ಟಿದ್ದರು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಜನರು ನಂಬುವ ದೇವರು, ಅವರ ಪೂಜಾಕ್ರಮ ಇತ್ಯಾದಿಗಳನ್ನು ಅಪಹಾಸ್ಯ ಮತ್ತು ದೂಷಣೆಗೆ ಗುರಿಪಡಿಸುವುದನ್ನು ಹಾಗೂ ಅವುಗಳಿಗೆ ಅಗೌರವ ತೋರುವುದನ್ನು ಪವಿತ್ರ ಕುರ್‌ಆನ್ ನಿಷೇಧಿಸಿದೆ. ಹೀಗೆ ಮಾಡಿದರೆ ಅವರೂ ಪ್ರತಿನಿಂದನೆ ಮಾಡಬಹುದು ಮತ್ತು ಅದರಿಂದ ಪರಿಸ್ಥಿತಿ ಇನ್ನಷ್ಟು ಕೆಡಬಹುದು ಎಂದು ಕುರ್‌ಆನ್ ಎಚ್ಚರಿಸಿದೆ.

# ಪ್ರವಾದಿ ಮುಹಮ್ಮದ್ ಖಡ್ಗದ ಮೂಲಕ ಇಸ್ಲಾಮ್ ಪ್ರಚಾರ ಮಾಡಿದರೆ ?

ಪ್ರತಿ ಪ್ರವಾದಿಗೂ ತನ್ನದೇ ಆದ ಕಾರ್ಯಶೈಲಿಯಿದೆ. ಪ್ರತಿಯೊಬ್ಬರೂ ಬೇರೆ ಬೇರೆ ಕಾಲದಲ್ಲಿ ಮತ್ತು ಬೇರೆ ಬೇರೆ ಸಮುದಾಯಗಳ ಮಧ್ಯೆ ಕೆಲಸ ಮಾಡಿದ್ದಾರೆ. ಆದ್ದರಿಂದ ಒಬ್ಬ ಪ್ರವಾದಿಯನ್ನು ಇನ್ನೊಬ್ಬರ ಜತೆ ಸಮೀಕರಿಸುವುದು ಸರಿಯಲ್ಲ. ಕುರ್‌ಆನ್ ಇದಕ್ಕೆ ಅವಕಾಶ ನೀಡುವುದಿಲ್ಲ. ನಿಜ, ಪ್ರವಾದಿ ಏಸು ಕ್ರಿಸ್ತರು ಯಾವುದೇ ಯುದ್ಧ ಮಾಡಲಿಲ್ಲ. ಯಾಕೆಂದರೆ ಅವರಿಗೆ ಅದರ ಅಗತ್ಯ ಇರಲಿಲ್ಲ. ಆದರೆ, ಪ್ರವಾದಿ ಮುಹಮ್ಮದ್ ಸತ್ಯದ ಸಮರ್ಥನೆಗಾಗಿ ಹೋರಾಟ ನಡೆಸಲೇ ಬೇಕಾಗಿತ್ತು.

ಪ್ರವಾದಿತ್ವ ದೊರೆತ ನಂತರ ಪ್ರವಾದಿ ಮುಹಮ್ಮದ್ ಅವರು ಜನರನ್ನು ಶಾಂತಿಯ ಮಾರ್ಗಕ್ಕೆ ಆಹ್ವಾನಿಸಿದರು. ಆದರೆ ಇಸ್ಲಾಮಿನ ವೈರಿಗಳಾಗಿದ್ದ ಕುರೈಷ್ ಮುಖಂಡರು ಅವರನ್ನು ವಿರೋಧಿಸಿದರು ಮತ್ತು ನಿಂದಿಸಿದರು. ವರ್ಷಗಳ ಕಾಲ ಅವರನ್ನು, ಅವರ ಸಹವರ್ತಿಗಳನ್ನು ಮರ್ದಿಸಿದರು. ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿ, ಮಕ್ಕಾ ತೊರೆಯುವಂತೆ ನಿರ್ಬಂಧಿಸಿದರು. ಮುಸ್ಲಿಮರು ಮದೀನಾಕ್ಕೆ ಹೋದ ಬಳಿಕವೂ ಅವರನ್ನು ಬೆಂಬತ್ತಿದ ಕುರೈಷರು ಅಲ್ಲಿನ ಜನರಿಗೆ ಅವರನ್ನು ಗಡೀಪಾರು ಮಾಡುವಂತೆ ಅಥವಾ ನಿರ್ಮೂಲನೆ ಮಾಡಿಬಿಡುವಂತೆ ತಾಕೀತು ಮಾಡಿದರು. ಈ ಬೇಡಿಕೆಗೆ ಮದೀನಾದ ಜನರು ಮಣಿಯದಿದ್ದಾಗ, ಅವರಿಗೆ ದುಷ್ಪರಿಣಾಮಗಳ ಎಚ್ಚರಿಕೆ ನೀಡಲಾಯಿತು. ನೀವು ನಮ್ಮ ವೈರಿಗಳಿಗೆ ಆಶ್ರಯ ನೀಡಿದ್ದೀರಿ. ಅವರನ್ನು ಒಂದೋ ನೀವು ಕೊಲ್ಲಬೇಕು, ಇಲ್ಲದಿದ್ದರೆ ಮದೀನಾದ ಮೇಲೆ ಆಕ್ರಮಣ ಮಾಡಿ ಪ್ರವಾದಿ ಮುಹಮ್ಮದ್‌ರೊಂದಿಗೆ ನಿಮ್ಮನ್ನೂ ನಾಶಗೊಳಿಸಿ ಬಿಡುತ್ತೇವೆ ಎಂದು ಮಕ್ಕಾದ ಕುರೈಷರು ಮದೀನಾದ ನಾಯಕರು ಮತ್ತು ಕಪಟಿಗಳಿಗೆ ಎಚ್ಚರಿಕೆ ನೀಡಿದ್ದರು. ಸಾವಿಗೆ ಸಿದ್ಧವಾಗುವುದು ಇಲ್ಲವೇ ಪ್ರತಿರೋಧ ಒಡ್ಡುವುದು ಬಿಟ್ಟು ಮೂರನೇ ಮಾರ್ಗ ಇಲ್ಲದಿದ್ದಾಗ ಪ್ರವಾದಿವರ್ಯರು ಇಸ್ಲಾಮ್ ಧರ್ಮವನ್ನು ರಕ್ಷಿಸಲಿಕ್ಕಾಗಿ ಪ್ರತಿರೋಧದ ದಾರಿಯನ್ನು ಆಯ್ದುಕೊಂಡರು.

ಸತ್ಯವನ್ನು ಪ್ರಚುರಪಡಿಸುವ ಧ್ಯೇಯವನ್ನು ವಿರೋಧಿಸುತ್ತಿದ್ದ ಶತ್ರುಗಳು ಪ್ರವಾದಿವರ್ಯರ ಮೇಲೆ ಯುದ್ಧಗಳನ್ನು ಬಲವಂತವಾಗಿ ಹೇರಿದರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಅವರು ನಡೆಸಿದ ಯುದ್ಧಗಳನ್ನು ಈ ವಿಶಾಲ ಐತಿಹಾಸಿಕ ಹಿನ್ನೆಲೆಯೊಳಗೆ ನೋಡಬೇಕಾಗುತ್ತದೆ.

ಸೈನಿಕ ಆಕ್ರಮಣದ ಬೆದರಿಕೆಯನ್ನು ಯಾವುದೇ ಜವಾಬ್ದಾರಿಯುತ ನಾಯಕ ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಅದರಲ್ಲೂ, ಜನರಿಗೆ ಮತ್ತು ಮುಂದೆ ಬರುವ ಆಡಳಿತಗಾರರು ಹಾಗೂ ಸೇನಾ ನಾಯಕರಿಗೆ ಮಾದರಿಯಾಗಬೇಕಾದ ಪ್ರವಾದಿಯವರ ಮಟ್ಟಿಗಂತೂ ಇದು ಅಸಾಧ್ಯದ ಮಾತು. ದೇವರ ನಿರ್ದೇಶನದಂತೆ ಪ್ರವಾದಿವರ್ಯರು ಯುದ್ಧವನ್ನು ಹೆಚ್ಚು ಮಾನವೀಯಗೊಳಿಸಲು ಸಾಧ್ಯವಾಗುವಂತೆ ಸೂಕ್ತ ನಿಯಮಗಳನ್ನು ರೂಪಿಸಿದ್ದರು. ತನ್ಮೂಲಕ ಶಾಂತಿಯನ್ನು ಪ್ರೋತ್ಸಾಹಿಸಲು ಮತ್ತು ಮಾನವ ಪ್ರಾಣಗಳ ಹತ್ಯೆಯನ್ನು ಕಡಿಮೆಗೊಳಿಸಲು ಅವರು ಪ್ರಯತ್ನಿಸಿದ್ದರು.

ಪ್ರವಾದಿ ಮುಹಮ್ಮದ್ ಖಡ್ಗದ ಮೂಲಕ ಇಸ್ಲಾಮನ್ನು ಪ್ರಚಾರ ಮಾಡಿದರು ಎಂದು ಬಿಂಬಿಸಲು ಕೆಲವು ವೈರಿಗಳು ಮತ್ತು ಪೂರ್ವಗ್ರಹಪೀಡಿತ ಜನರು ಪ್ರಯತ್ನಿಸಿದ್ದಾರೆ. ಇವರ ಮಾತನ್ನು ಕೇಳಿದಾಗ, ಯುದ್ಧ ಮಾಡುವುದೇ ಪ್ರವಾದಿ ಮುಹಮ್ಮದರ ಮುಖ್ಯ ಕಸುಬಾಗಿತ್ತೇನೋ ಎಂಬ ಭಾವನೆ ಮೂಡುತ್ತದೆ. ವಾಸ್ತವದಲ್ಲಿ ಪ್ರವಾದಿವರ್ಯರು ಮದೀನಾದಲ್ಲಿ ತಾವು ವಾಸವಾಗಿದ್ದ 10 ವರ್ಷಗಳ ಅವಧಿಯಲ್ಲಿ ಕೇವಲ 95 ದಿನಗಳನ್ನಷ್ಟೆ ಯುದ್ಧ ಮತ್ತು ದಂಡಯಾತ್ರೆಯಲ್ಲಿ ಕಳೆದಿದ್ದರು. ಪ್ರವಾದಿ ಮುಹಮ್ಮದ್ ಬಹುತೇಕ ಯುದ್ಧಗಳನ್ನು ಕೇವಲ ಒಂದು ದಿನದ ಒಳಗಡೆ ಜಯಿಸಿದ್ದಾರೆ. ಉಳಿದ 10 ವರ್ಷಗಳನ್ನು, ಅಂದರೆ ಸುಮಾರು 3,555 ದಿನಗಳನ್ನು, ಅವರು ಜನರ ಬದುಕಿನಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರಲು ಮತ್ತು ಒಂದು ವಿಗ್ರಹಾರಾಧಕ ಸಮುದಾಯವನ್ನು ಆಮೂಲಾಗ್ರ ಸುಧಾರಿಸಲು ವಿನಿಯೋಗಿಸಿದ್ದರು. ತನ್ಮೂಲಕ ಇಡೀ ಅರಬ್ ಭೂಪ್ರದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಸ್ಥಾಪಿಸಿದರು. ಕೆಡುಕು ಮತ್ತು ಮರ್ದನದ ಆಳ್ವಿಕೆ ಕೊನೆಗೊಂಡು, ಒಳಿತು, ಸಚ್ಚಾರಿತ್ರ್ಯ, ಶಾಂತಿ ಮತ್ತು ನ್ಯಾಯದ ಆಡಳಿತ ಸ್ಥಾಪನೆಗೊಂಡಿತು.

ಪ್ರವಾದಿ ಮುಹಮ್ಮದ್ ಪಾಲ್ಗೊಂಡಿದ್ದ ಯುದ್ಧಗಳಲ್ಲಿ ಎರಡೂ ಕಡೆಯಿಂದ ಬಲಿಯಾದ ಜನರ ಸಂಖ್ಯೆ 1,014 ಆಗಿದ್ದು, ಇದರಲ್ಲಿ ಪ್ರವಾದಿವರ್ಯರ ಕಡೆಯಿಂದ 255 ಜನರು ಮತ್ತು ಶತ್ರುಪಾಳಯದಿಂದ 759 ಜನರು ಹತರಾಗಿದ್ದರು. ಇದು ಹೋರಾಟದಲ್ಲಿ ಭಾಗಿಯಾಗಿದ್ದ ಜನರ ಪ್ರಮಾಣಕ್ಕೆ ಹೋಲಿಸಿದರೆ ಶೇ. 1.5 ಮಾತ್ರ. ಯುದ್ಧದ ಮೂಲಕವೇ ಸಂಭವಿಸಿದ ಇತರ ಪ್ರಮುಖ ಕ್ರಾಂತಿಗಳೊಂದಿಗೆ ಇದನ್ನು

ಹೋಲಿಸಿ ನೋಡಿ. ವರ್ಷಗಟ್ಟಲೆ ಮುಂದುವರಿದ ಮಹಾಯುದ್ಧಗಳಲ್ಲಿ ಮಿಲಿಯಗಟ್ಟಲೆ ನಿರಪರಾಧಿಗಳು ಸಾವಿಗೀಡಾಗಿದ್ದಾರೆ. ಉದಾಹರಣೆಗೆ, ಎರಡನೇ ಮಹಾಯುದ್ಧದಲ್ಲಿ ಭಾಗಿಯಾದ ಸೈನಿಕರಿಗೆ ಹೋಲಿಸಿದರೆ ಅದರಲ್ಲಿ ಬಲಿಯಾದ ನಾಗರಿಕರ ಪ್ರಮಾಣ ಶೇ. 517ರಷ್ಟು. ಅಂದರೆ, ಯುದ್ಧದಲ್ಲಿ ಸೈನಿಕರಾಗಿ ಪಾಲ್ಗೊಂಡದ್ದು 1.6 ಕೋಟಿಯಾದರೆ, ಮೃತರಾದವರ ಸಂಖ್ಯೆ 5.48 ಕೋಟಿ.

ಯುದ್ಧ ಮತ್ತು ಹಿಂಸೆಗೆ ಸಂಬಂಧಿಸಿದಂತೆ ಕ್ರಿಶ್ಚಿಯಾನಿಟಿ ಮತ್ತು ಪಶ್ಚಿಮದ ದಾಖಲೆಯನ್ನು ಗಮನಿಸಿದರೆ ಅವರಿಗೆ ಪ್ರವಾದಿ ಮುಹಮ್ಮದ್‌ರನ್ನು ಟೀಕಿಸಲು ಯಾವುದೇ ನೈತಿಕ ಹಕ್ಕಿಲ್ಲ. ಆದರೆ ಇಲ್ಲಿ ನಾವು ಇನ್ನೊಂದು ಪ್ರಶ್ನೆಯನ್ನೂ ಕೇಳಬಹುದು. ಏಳನೇ ಶತಮಾನದ ಅರೇಬಿಯಾದ ಪರಿಸ್ಥಿತಿಯನ್ನು ಗಮನಿಸಿದರೆ ಪ್ರವಾದಿ ಮುಹಮ್ಮದರಿಗೆ ಯುದ್ಧಗಳನ್ನು ಹೂಡದೆ ತಮ್ಮ ಗುರಿ ಸಾಧಿಸಲು ಸಾಧ್ಯವಿತ್ತೇ? ಎಂಬುದು ತಮ್ಮ ಹೋರಾಟದ ಮೊದಲ ಭಾಗದಲ್ಲಿ ಪ್ರವಾದಿವರ್ಯರು ಸಾಧ್ಯವಿರುವಷ್ಟು ಮಟ್ಟಿಗೆ ಸಂಘರ್ಷವನ್ನು ತಪ್ಪಿಸಲು ಪ್ರಯತ್ನಿಸಿದರು. ಅವರೊಂದಿಗಿದ್ದ ಸಮುದಾಯದ ಬಳಿ ಅದಕ್ಕೆ ಬೇಕಾದ ಶಕ್ತಿಯಾಗಲಿ ಸಂಪನ್ಮೂಲವಾಗಲೀ ಇರಲಿಲ್ಲ. ಆದರೆ ಹಿಜ್ರತ್ ಅಥವಾ ಮದೀನಾಕ್ಕೆ ವಲಸೆ ಹೋದ ಬಳಿಕ ಪ್ರವಾದಿವರ್ಯರಿಗೆ ಮಿಲಿಟರಿ ಕಾರ್ಯಾಚರಣೆಯ ಆಯ್ಕೆ ತೆರೆದುಕೊಂಡಿತು.

ಯುದ್ಧವು ಇಸ್ಲಾಮ್ ಪೂರ್ವದ ಅರೇಬಿಯಾದ ಸಮಾಜ ಮತ್ತು ಸಂಸ್ಕೃತಿಯ ಒಂದು ಭಾಗವೇ ಆಗಿತ್ತು. ದಾಳಿ ಮಾಡುವುದು, ಲೂಟಿ ಮಾಡುವುದು ಮತ್ತು ಕೊಳ್ಳೆ ಹೊಡೆಯುವುದು ಮಾಮೂಲಿಯಾಗಿತ್ತು. ತಮ್ಮ ಅಸ್ತಿತ್ವಕ್ಕಾಗಿ ಮುಸ್ಲಿಮರೂ ಪ್ರತಿರೋಧ ಮತ್ತು ಯುದ್ಧಕ್ಕೆ ಸಜ್ಜಾಗಲೇ ಬೇಕಾಗಿತ್ತು. ಆದರೆ ಕುರ್‌ಆನ್ ಯುದ್ಧಕ್ಕೆ ಸಂಬಂಧಿಸಿದಂತೆ ಈಗ ಅಸ್ತಿತ್ವದಲ್ಲಿರುವ ಜಿನೇವಾ ಒಪ್ಪಂದವನ್ನು ಹೋಲುವಂತಹ ನೀತಿ ಸಂಹಿತೆಯನ್ನು ಅಳವಡಿಸಿಕೊಂಡಿತ್ತು. ಇದರ ಪ್ರಕಾರ ಯುದ್ಧವನ್ನು ಪ್ರತಿರೋಧಾತ್ಮಕ ಉದ್ದೇಶಕ್ಕಾಗಿ ಮಾತ್ರ ಹೂಡಬಹುದು. ನಾಗರಿಕರು, ಮಹಿಳೆಯರು, ಮಕ್ಕಳು ಮತ್ತು ವೃದ್ಧರ ಮೇಲೆ ಆಕ್ರಮಣ ನಡೆಸಬಾರದು. ಯಾವುದೇ ವಿಧದ ಆರಾಧನಾಲಯಗಳನ್ನು – ಚರ್ಚ್, ಸೆನೆಗಾಗ್ ಅಥವಾ ಮಸೀದಿ – ಧ್ವಂಸಗೊಳಿಸಬಾರದು. ಒಂದು ವೇಳೆ ಶತ್ರುಗಳಿಂದ ಶಾಂತಿಯ ಪ್ರಸ್ತಾಪ ಬಂದರೆ ಅದನ್ನು ಕೂಡಲೇ ಸ್ವೀಕರಿಸಬೇಕು. ಶಾಂತಿ, ಸಹಿಷ್ಣುತೆ ಮತ್ತು ಇತರ ಧರ್ಮ ಹಾಗು ಸಂಸ್ಕೃತಿಯ ಜನರ ಜತೆ ಸಹಬಾಳ್ವೆ ನಡೆಸುವ ವಿಚಾರದಲ್ಲಿ ಮುಸ್ಲಿಮರು ಒಳ್ಳೆಯ ದಾಖಲೆ ಹೊಂದಿದ್ದಾರೆ.

## ಇಸ್ಲಾಮ್ ಬಲಪ್ರಯೋಗದಿಂದ ಹಬ್ಬಿತೇ ?

**ಇಲ್ಲ, ಎಂಬುದೇ ಇದಕ್ಕೆ ನೀಡಬಹುದಾದ ಸ್ಪಷ್ಟ ಉತ್ತರ.**

ಕುರ್‌ಆನ್ ಹೀಗೆ ಹೇಳುತ್ತದೆ:

> **"ಧರ್ಮದಲ್ಲಿ ಬಲವಂತವಿಲ್ಲ. ಸರಿ ದಾರಿಯು ತಪ್ಪು ದಾರಿಗಳಿಂದ ಪ್ರತ್ಯೇಕವಾಗಿದೆ." (ಕುರ್‌ಆನ್ 2:256)**

ಇಸ್ಲಾಮ್ ಖಡ್ಗದ ಬಲದಿಂದ ಪ್ರಸಾರಗೊಂಡಿದೆ ಎಂಬುದು ಇಂದು ಜಗತ್ತಿನಾದ್ಯಂತ ಹಬ್ಬಿರುವ ಒಂದು ಜನಪ್ರಿಯ ಮಿಥ್ಯೆ. ಇತಿಹಾಸ ಪುಸ್ತಕಗಳು ಮತ್ತು ಕೆಲವು ಪೂರ್ವಗ್ರಹಪೀಡಿತ ಮಾಧ್ಯಮಗಳು ರಾಜಕೀಯ ಪ್ರೇರಿತವಾದ ಈ ಅಪಪ್ರಚಾರಕ್ಕೆ ವಿಶ್ವಾಸಾರ್ಹತೆಯನ್ನು ಒದಗಿಸಿಕೊಟ್ಟಿವೆ. ಮತೀಯ ಆಧಾರದಲ್ಲಿ ತಮ್ಮ ವೋಟ್‌ಬ್ಯಾಂಕ್‌ಗಳನ್ನು ಧ್ರುವೀಕರಿಸಲು ಕೆಲವು ತೀವ್ರವಾದಿ ಮತ್ತು ರಾಜಕೀಯ ಶಕ್ತಿಗಳಿಗೆ ಈ ಅಪಪ್ರಚಾರ ಅನಿವಾರ್ಯವಾಗಿತ್ತು. ದ್ವೇಷದ ಉತ್ಪಾದನೆಗೆ ಅಗತ್ಯವಿದ್ದ ಸಿಡಿಮದ್ದನ್ನು ಈ ಶಕ್ತಿಗಳು ಇತಿಹಾಸದಿಂದ ಪಡೆದುಕೊಂಡವು.

ಭಾರತದಂತಹ ವೈವಿಧ್ಯತೆಯುಳ್ಳ ಸಮಾಜದಲ್ಲಿ ಬ್ರಿಟಿಷ್ ವಸಾಹತುಶಾಹಿ ಇತಿಹಾಸಕಾರರು ಅನುಸರಿಸಿದ ಒಡೆದು ಆಳುವ ನೀತಿಯನ್ನೇ ಇವರು ಮುಂದುವರಿಸಿಕೊಂಡು ಹೋದರು. ಮುಸ್ಲಿಮರು ಭಾರತವನ್ನು 650 ವರ್ಷ ಆಳಿದ್ದು ಇಲ್ಲಿನ ಪ್ರತಿಯೊಬ್ಬ ಮುಸ್ಲಿಮೇತರನನ್ನು ಮತಾಂತರ ಮಾಡುವ ಶಕ್ತಿಯನ್ನು ಅವರು ಹೊಂದಿದ್ದರು. ಆದರೂ ಭಾರತದ ಜನಸಂಖ್ಯೆಯ ಶೇ. 80ಕ್ಕೂ ಹೆಚ್ಚು ಜನರು ಇಂದಿಗೂ ಹಿಂದೂಗಳಾಗಿ ಉಳಿದಿದ್ದಾರೆ. ಬಲಪ್ರಯೋಗದ ಮೂಲಕ ಇಸ್ಲಾಮ್ ಪ್ರಚಾರವಾಗುತ್ತಿದೆ ಎಂಬ ತಪ್ಪುಕಲ್ಪನೆಯನ್ನು ಅಳಿಸಲು ಇದುವೇ ಸಾಕು.

ಜಗತ್ತಿನ ಏಳು ಶತಕೋಟಿ ಜನರ ಪೈಕಿ ಸುಮಾರು 1.7 ಶತಕೋಟಿ ಜನರು ಇಸ್ಲಾಮನ್ನು ಅನುಸರಿಸುತ್ತಿದ್ದಾರೆ. ಈ ಪೈಕಿ ಅರಬರ ಸಂಖ್ಯೆ ಶೇ. 22ರಷ್ಟು. ಜಗತ್ತಿನ ಅತಿ ಹೆಚ್ಚು ಮುಸ್ಲಿಮ್ ಜನಸಂಖ್ಯೆ ಇಂಡೋನೇಷ್ಯಾದಲ್ಲಿದ್ದು, ಇದು ಇಸ್ಲಾಮಿನ ಕೇಂದ್ರ ಬಿಂದುವಾಗಿರುವ ಅರೇಬಿಯಾದಿಂದ ಅರ್ಧ ಗೋಳದಷ್ಟು ದೂರದಲ್ಲಿದೆ. ದಕ್ಷಿಣ

ಏಷಿಯಾ ರಾಷ್ಟ್ರಗಳಲ್ಲಿ ಸುಮಾರು 40 ಕೋಟಿ ಮುಸ್ಲಿಮರಿದ್ದು, ಭಾರತದಲ್ಲೇ, ಇವರ ಸಂಖ್ಯೆ 15 ಕೋಟಿಯಿದೆ. ಹಿಂದೂ ಮತ್ತು ಸಂಸ್ಕೃತ ಪರಂಪರೆಯಿರುವ ಬಾಂಗ್ಲಾದೇಶದಂತಹ ರಾಷ್ಟ್ರವೂ ಸುಮಾರು 12 ಕೋಟಿ ಮುಸ್ಲಿಮರನ್ನು ಹೊಂದಿದೆ.

ಜಗತ್ತಿನ ಮುಸ್ಲಿಮ್ ಜನಸಂಖ್ಯೆಯ ಶೇ 30ರಷ್ಟು ವಿಶ್ವದ ಪ್ರಮುಖ ಪ್ರಜಾಪ್ರಭುತ್ವ ರಾಷ್ಟ್ರಗಳಾದ ಭಾರತ, ಅಮೆರಿಕ, ಬ್ರಿಟನ್, ಯುರೋಪ್ ಮತ್ತು ರಷ್ಯಾದಲ್ಲಿ ನೆಲೆಸಿದ್ದಾರೆ. ಅನೇಕ ಆಫ್ರಿಕನ್ ರಾಷ್ಟ್ರಗಳಲ್ಲೂ ಗಮನಾರ್ಹ ಸಂಖ್ಯೆಯ ಮುಸ್ಲಿಮರಿದ್ದು, ಈ ಪೈಕಿ ಹೆಚ್ಚಿನವು ಮುಸ್ಲಿಮ್ ಆಡಳಿತಕ್ಕೆ ಒಳಪಟ್ಟಿರಲಿಲ್ಲ. ಅಂತೆಯೇ, ಒಂದು ಕಾಲದಲ್ಲಿ ಮುಸ್ಲಿಮ್ ಆಡಳಿತಕ್ಕೊಳಪಟ್ಟಿದ್ದ ಸ್ಪೇನ್ ಮತ್ತು ಫಿಲಿಪೈನ್ಸ್‌ನಂತ ರಾಷ್ಟ್ರಗಳಲ್ಲಿ ಇಂದು ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರು ಕಾಣಸಿಗುವುದಿಲ್ಲ. ಅಮೆರಿಕ, ಬ್ರಿಟನ್, ಫ್ರಾನ್ಸ್, ಜರ್ಮನಿ, ಫಿನ್ಲೆಂಡ್, ಸ್ವೀಡನ್ ಮತ್ತು ನಾರ್ವೆಯಂತಹ ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಇಂದು ಇಸ್ಲಾಮ್ ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಧರ್ಮವಾಗಿದೆ ಎಂಬುದು ಕುತೂಹಲದ ಅಂಶ.

ಇಂಡೊನೇಷಿಯಾ ಮತ್ತು ಮಲೇಷಿಯಾದಂತಹ ಪ್ರದೇಶಗಳಿಗೆ ಇಸ್ಲಾಮೀ ಪಡೆಗಳು ಪ್ರವೇಶಿಸಿಲ್ಲ ಎಂಬುದು ಇತಿಹಾಸದಿಂದ ವ್ಯಕ್ತವಾಗುತ್ತದೆ. ಇಸ್ಲಾಮ್ ಅಲ್ಲಿಗೆ ಸಾಗರಮಾರ್ಗವಾಗಿ ತಲುಪಿದ್ದು ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಯೊಂದಿಗೆ ಬೆಸೆಯುವ ಮೂಲಕ ಜನರ ಹೃದಯವನ್ನು ಗೆದ್ದಿತು. ಅದು ಅಲ್ಲಿನ ಸಾಂಸ್ಕೃತಿಕ ವೈಶಿಷ್ಟ್ಯಗಳು, ಆಹಾರ, ಉಡುಗೆತೊಡುಗೆ ಮತ್ತು ಭಾಷೆಗಳನ್ನು ಪಲ್ಲಟಗೊಳಿಸಲಿಲ್ಲ.

ದಿಗ್ವಿಜಯದ ಮೂಲಕ ಇಸ್ಲಾಮ್ ಪ್ರವೇಶಪಡೆದ ಪ್ರದೇಶಗಳ ಪೈಕಿ ಹೆಚ್ಚಿನವು ಇಂದಿಗೂ ಹಾಗೆಯೇ ಉಳಿದಿದ್ದು ಇಸ್ಲಾಮೀ ಇತಿಹಾಸ ಇದಕ್ಕೆ ಪುರಾವೆಯಾಗಿದೆ. ಇಸ್ಲಾಮ್ ಕೇವಲ ಭೂಮಿಯನ್ನು ಗೆದ್ದುದಲ್ಲ, ಜನರ ಹೃದಯವನ್ನೂ ಗೆದ್ದುಕೊಂಡಿತು. ತಮ್ಮ ನಂಬಿಕೆಯನ್ನು ಉಳಿಸಿಕೊಳ್ಳಲು ಬಯಸಿದ ಜನರಿಗೆ ಇಸ್ಲಾಮ್ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿತು. ಉದಾ: ಈಜಿಪ್ಟ್‌ನಲ್ಲಿರುವ ಕಾಪ್ಟಿಕ್ ಕ್ರೈಸ್ತರು ಮತ್ತು ಲೆಬನಾನ್‌ನಲ್ಲಿ ಇರುವ ಮರೋನಿಟ್‌ಗಳು. ಅದು ತಲೆತಲಾಂತರದಿಂದ ಬಂದ ಸಾಂಸ್ಕೃತಿಕ ಸಂಪತ್ತನ್ನು ಮತ್ತು ಪಾರಂಪರಿಕ ಮೌಲ್ಯ ಅಥವಾ ಆಸಕ್ತಿಯನ್ನು ಧ್ವಂಸಗೊಳಿಸಲಿಲ್ಲ. ಅಬು ಸಿಂಬೆಲ್‌ನ ಸ್ಫಿಂಕ್ಸ್ ಮತ್ತು ಫರೋವನ ದೇಗುಲಗಳು, ಈಜಿಪ್ಟ್‌ನ ಪಿರಮಿಡ್‌ಗಳು ಈಗಲೂ ತಮ್ಮ ಅಸ್ತಿತ್ವ ಉಳಿಸಿಕೊಂಡಿವೆ. ಇರಾನ್‌ನ ಪೆರ್ಸೆಪೊಲಿಸನ್ನು ಇಂದಿಗೂ ಸಂರಕ್ಷಿಸಿಡಲಾಗಿದೆ. ಇಂಡೋನೇಷಿಯಾದ ಬೊರ್‌ಬುದರ್ ಮತ್ತು ಬಾಲಿಯಲ್ಲಿ ಇರುವ ಹಿಂದೂ ದೇಗುಲಗಳು ಇಂದಿಗೂ ಪ್ರವಾಸಿಗಳನ್ನು ಆಕರ್ಷಿಸುತ್ತಿವೆ. ಈ ರಾಷ್ಟ್ರಗಳ ಜನರು ಮರ್ದಕ ಆಡಳಿತಗಾರರ ಕೈಯಲ್ಲಿ

ಸಿಕ್ಕಿ ನರಳುತ್ತಿದ್ದಾಗ ಇಸ್ಲಾಮ್ ಒಂದು ವಿಮೋಚನೆಯ ತಂಗಾಳಿಯಾಗಿ ಒದಗಿ ಬಂತು ಎಂಬುದೇ ಇದಕ್ಕೆ ಕಾರಣ.

ಈಗ ಭಾರತೀಯ ಉಪಖಂಡದ ಉದಾಹರರಣೆಯನ್ನು ತೆಗೆದುಕೊಳ್ಳೋಣ. ಇದರ ವಾಯವ್ಯ ಭಾಗವು ಅರಬ್ ಪ್ರಾಬಲ್ಯದ ಪಶ್ಚಿಮ ಏಷ್ಯಾ ರಾಷ್ಟ್ರಗಳಿಗೆ ಹೊಂದಿಕೊಂಡಿದೆ. ಸಿಂಧ್ ಪ್ರಾಂತ್ಯಕ್ಕೆ ಇಸ್ಲಾಮೀ ಸೇನೆಯು ಪ್ರವೇಶಿಸುವುದರೊಂದಿಗೆ ಅಲ್ಲಿ ಧರ್ಮದ ಪ್ರವೇಶವಾಯಿತು ಎಂಬುದು ನಿಜ. ಆದರೆ, ಕೇರಳವನ್ನು ನೋಡಿ, ಅಲ್ಲಿಗೆ ಪ್ರವಾದಿ ಮುಹಮ್ಮದ್ ಅವರ ಅವಧಿಯಲ್ಲಿಯೇ ಇಸ್ಲಾಮ್ ಪ್ರವೇಶಿಸಿತ್ತು. 11ರಿಂದ 13ನೇ ಶತಮಾನದಲ್ಲಿ ಭಾರತದ ಬಂಗಾಳ ತೀರದ ಭಾಗಕ್ಕೆ ಇಬ್ನ್ ಬತೂತಾ ಭೇಟಿ ನೀಡಿದ ಸಂದರ್ಭದಲ್ಲಿ ಈ ತೀರದ ಉದ್ದಕ್ಕೂ ಮುಸ್ಲಿಮರ ಉಪಸ್ಥಿತಿ ಇತ್ತು. ದೆಹಲಿಯಲ್ಲಿ ಆಡಳಿತ ನಡೆಸಿದ ಮೊಘಲರಿಗೆ ಕೂಡಾ ಈ ಮುಸ್ಲಿಮರ ಇರುವಿಕೆಯ ಬಗ್ಗೆ ಯಾವುದೇ ಸುಳಿವು ಇರಲಿಲ್ಲ. ಆದ್ದರಿಂದ ಈ ವಲಸಿಗರ (ಮುಸ್ಲಿಮರ) ವಿರುದ್ಧ ತಮ್ಮದೇ ಆದ ರೀತಿಯಲ್ಲಿ ಕ್ರಮ ಕೈಗೊಳ್ಳಲು ಅವರು ಪೋರ್ಚುಗೀಸರಿಗೆ ಅನುಮತಿ ನೀಡಿದ್ದರು. ಇಸ್ಲಾಮ್ ಅರಬ್ ವರ್ತಕರ ಮೂಲಕ ಕೇರಳ ಪ್ರವೇಶಿಸಿತು. ಸಾಗರ ವ್ಯಾಪಾರವು ಸಾಂಪ್ರದಾಯಿಕ ನಂಬಿಕೆಗಳ ಪ್ರಕಾರ ನಿಷಿದ್ಧವಾಗಿದ್ದ ಕಾರಣ ತಿರುವಾಂಕೂರಿನ ರಾಜನು ಈ ಬಗೆಯ ವಹಿವಾಟಿನಲ್ಲಿ ಪರಿಣತರಾಗಿದ್ದ ಮುಸ್ಲಿಮರಿಗೆ ಪ್ರೋತ್ಸಾಹ ಒದಗಿಸಿದನು. ಸಾಮ್ರಾಜ್ಯದ ಸಮೃದ್ಧಿಯು ಸಮುದ್ರದ ವಹಿವಾಟನ್ನು ಆಧರಿಸಿದ್ದ ಹಿನ್ನೆಲೆಯಲ್ಲಿ ಸ್ಥಳೀಯರಲ್ಲಿಯೇ ಪರಿಣಿತ ನಾವಿಕರನ್ನು ಸೃಷ್ಟಿಸುವ ಉದ್ದೇಶದಿಂದ ಮೀನುಗಾರರನ್ನು ಇಸ್ಲಾಮ್ ಸ್ವೀಕರಿಸಲು ಪ್ರೇರೇಪಿಸಲಾಯಿತು. ಅಷ್ಟೇ ಅಲ್ಲ ಪ್ರತಿ ಮೀನುಗಾರ ಕುಟುಂಬವೂ ಒಬ್ಬ ಮಗನನ್ನು ಮುಸಲ್ಮಾನನಾಗಿ ಬೆಳೆಸಬೇಕೆಂಬ ರಾಜಾಜ್ಞೆಯಿತ್ತು. ಕ್ರಿ.ಶ. ಎಂಟನೇ ಶತಮಾನದಲ್ಲಿ ಭಾರತಕ್ಕೆ ಬಂದು ಮಾಲ್ದೀವ್ಸ್‌ಗೆ ತೆರಳಿದ್ದ ಇಬ್ನೆ ಬತೂತಾ ಮಲಬಾರ್ ತೀರದಲ್ಲಿ ಸಾಕಷ್ಟು ಸಂಖ್ಯೆಯ ಮುಸ್ಲಿಮ್ ಕಾಲನಿಗಳು ಇತ್ತೆಂದು ವರದಿ ಮಾಡಿದ್ದಾನೆ.

ಬಖಾರಿ ಸಂಖ್ಯೆಯ ಜನರು ಇಸ್ಲಾಮ್ ಧರ್ಮ ಸ್ವೀಕರಿಸಿದ ಉತ್ತರ ಭಾರತದಲ್ಲೂ ಬಲಾತ್ಕಾರದ ಮತಾಂತರ ನಡೆಯಲಿಲ್ಲ. ಸಿಂಧ್ ಪ್ರಾಂತ್ಯದ ಮೇಲೆ ವಿಜಯ ಸಾಧಿಸಿದ್ದ ಮುಹಮ್ಮದ್ ಬಿನ್ ಕಾಸಿಮ್‌ನನ್ನು ಅಲ್ಲಿನ ಜನ ಇಷ್ಟಪಟ್ಟಿದ್ದರು. ರಾಜಾ ದಾಹಿರ್‌ನ ದಬ್ಬಾಳಿಕೆಯಡಿಯಲ್ಲಿ ನರಳುತ್ತಿದ್ದ ಜನರು ಮುಹಮ್ಮದ್ ಬಿನ್ ಕಾಸಿಮ್‌ನನ್ನು ಸ್ವಾಗತಿಸಿದರು. ಖಲೀಫಾ ಸುಲೇಮಾನ್ ಇಬ್ನೆ ಮರ್ವಾನ್‌ರ ಆದೇಶದ ಮೇರೆಗೆ ಮುಹಮ್ಮದ್ ಬಿನ್ ಕಾಸಿಮ್‌ನನ್ನು ಮುಆವಿಯಾ ಇಬ್ನೆ ಮುಹಲ್ಲಬ್‌ನೊಂದಿಗೆ ಖೈದಿಯಾಗಿ ಡಮಾಸ್ಕಸ್‌ಗೆ ಕಳುಹಿಸಿದಾಗ ಸಿಂಧ್‌ನ ಜನರು ಮುಹಮ್ಮದ್ ಬಿನ್

ಕಾಸಿಮ್‌ಗಾಗಿ ಕಣ್ಣೀರು ಸುರಿಸಿದ್ದರು. ಕಿರಾಜ್‌ನಲ್ಲಿ ಆತನ ಪ್ರತಿಮೆಯನ್ನು ಸ್ಥಾಪಿಸಿ ಪ್ರೀತಿ ಮೆರೆದಿದ್ದರು. (ಉಲ್ಲೇಖ: ವಿಲಿಯಮ್ ಜಾಕ್ಸನ್, ಎ.ವಿ., ಹಿಸ್ಟರಿ ಆಫ್ ಇಂಡಿಯಾ, ಸಂಪುಟ 5, ದ ಗ್ರಾಲಿಯರ್ ಸೊಸೈಟಿ, ಲಂಡನ್, ಬರೋಡಾ ಆವೃತ್ತಿ, 1907, ಪುಟ 14). ಮುಹಮ್ಮದ್ ಬಿನ್ ಕಾಸಿಮ್ ತನ್ನ ಸೇನೆಗೆ ಜಾಟರು ಮತ್ತು ಮೇದಿ ಜಾತಿಯವರನ್ನು ನೇಮಕ ಮಾಡಿಕೊಂಡಿದ್ದನು. ದಾಹಿರ್‌ನ ಆಡಳಿತದ ಬಗೆಗೆ ಜಿಗುಪ್ಸೆಗೊಂಡಿದ್ದ ಅವರು ಅಪರಿಚಿತ ಸೇನೆಗೆ ಸೇರ್ಪಡೆಗೊಳ್ಳಲು ಹಿಂದೆ ಮುಂದೆ ನೋಡಲಿಲ್ಲ. ಯಾಕೆಂದರೆ ದಾಹಿರ್ ಆಡಳಿತದಲ್ಲಿ ಅವರು ಅಪಮಾನ ಮತ್ತು ಶೋಷಣೆಗೆ ಒಳಗಾಗಿದ್ದರು. ಕುದುರೆ ಸವಾರಿ ಮಾಡದಂತೆ, ರುಮಾಲು, ನಿಲುವಂಗಿ ಧರಿಸದಂತೆ ಅವರ ಮೇಲೆ ನಿರ್ಬಂಧ ಹೇರಲಾಗಿತ್ತು. ಅವರನ್ನು ಸೌದೆ ಕಡಿಯುವವರಾಗಿಯೂ ನೀರು ಸೇದುವವರಾಗಿಯೂ ನೇಮಿಸಲಾಗಿತ್ತು. (ಉಲ್ಲೇಖ: ಪ್ರೊ. ಈಶ್ವರಿ ಪ್ರಸಾದ್, ಹಿಸ್ಟರಿ ಆಫ್ ಮಿಡೀವಲ್ ಇಂಡಿಯಾ, ಪುಟ 55–56).

ಭೌದ್ಧ ಧರ್ಮ ತನ್ನ ದುರ್ಬಲ ಸ್ಥಿತಿಯಲ್ಲಿ ಇದ್ದ ಪ್ರದೇಶಗಳಲ್ಲಿ ಇಸ್ಲಾಮ್ ತ್ವರಿತಗತಿಯಲ್ಲಿ ವ್ಯಾಪಿಸಿತು. ಸಿಂಧ್‌ನಲ್ಲಿ ಹೆಚ್ಚಿನವರು ಬೌದ್ಧ ಧರ್ಮೀಯರಾಗಿದ್ದರು ಮತ್ತು ಬ್ರಾಹ್ಮಣ ರಾಜನ ಆಡಳಿತದಿಂದ ರೋಸಿ ಹೋಗಿದ್ದರು. ಬೌದ್ಧರ ಪ್ರಾಬಲ್ಯ ಹೊಂದಿದ್ದ ಬಂಗಾಳ, ವಾಯವ್ಯ ಗಡಿ ಪ್ರಾಂತ್ಯ ಮತ್ತು ಪಂಜಾಬ್ ಕೂಡಾ ಬ್ರಾಹ್ಮಣ ಧರ್ಮದ ದೌರ್ಜನ್ಯಕ್ಕೆ ತುತ್ತಾಗಿತ್ತು. ಭಾರತದಿಂದ ಬೌದ್ಧಧರ್ಮ ದಿಢೀರನೇ ಕಾಣೆಯಾಗಲಿಲ್ಲ. ಕಿರುಕುಳದಿಂದಾಗಿ ಅವರು ಒಂದೋ ದೇಶವನ್ನು ಬಿಟ್ಟು ಹೋದರು ಇಲ್ಲವೇ ಅವಕಾಶ ಸಿಕ್ಕಾಗ ಇಸ್ಲಾಮ್‌ನ ಆಶ್ರಯ ಪಡೆದರು. ಉಮರ್ ಬಿನ್ ಅಬ್ದುಲ್ ಅಜೀಜ್ ಅವರು ಉಮಯ್ಯ ಆಡಳಿತದ ಖಲೀಫರಾದ ಬಳಿಕ ಸಿಂಧ್‌ನ ರಾಜಕುಮಾರ ಮತ್ತು ರಾಜಕುಮಾರಿಯರಿಗೆ ಪತ್ರ ಬರೆದು ಇಸ್ಲಾಮ್ ಸ್ವೀಕರಿಸುವಂತೆ ಕೋರಿದ್ದರು. ಇಸ್ಲಾಮಿನ ತತ್ವ ಮತ್ತು ನಂಬಿಕೆಗಳ ಬಗ್ಗೆ ತಿಳಿದುಕೊಂಡಿದ್ದ ರಾಜ ದಾಹಿರ್‌ನ ಪುತ್ರ ಜೈಷಿಯಾ ಆಹ್ವಾನವನ್ನು ಮನ್ನಿಸಿ ಇಸ್ಲಾಮ್‌ಗೆ ಮತಾಂತರಗೊಂಡನು. (ಉಲ್ಲೇಖ: ವಿಲಿಯಂ ಜಾಕ್ಸನ್ ಎ.ವಿ., (ಇಡಿ) ಹಿಸ್ಟರಿ ಆಫ್ ಇಂಡಿಯಾ, ಸಂಪುಟ 5, ದ ಗ್ರಾಲಿಯರ್ ಸೊಸೈಟಿ, ಬರೋಡಾ ಆವೃತ್ತಿ 1907, ಪುಟ 15).

ದೆಹಲಿಯ ಮುಸ್ಲಿಮ್ ಸುಲ್ತಾನರು ಹಿಂದೂಗಳನ್ನು ಬಲವಂತದಿಂದ ಇಸ್ಲಾಮ್‌ಗೆ ಮತಾಂತರಿಸಿದ್ದಾರೆ ಎಂಬ ಆರೋಪಗಳಿಗೆ ತದ್ವಿರುದ್ಧವಾಗಿ ಅಲ್ಲಾವುದ್ದೀನ್ ಖಿಲ್ಜಿ ಇಸ್ಲಾಮ್‌ಗೆ ಮತಾಂತರಗೊಳ್ಳುವುದರ ವಿರುದ್ಧ ನಿರ್ಬಂಧ ಹೇರಿದ್ದ. ಇದಕ್ಕೆ ಕಾರಣ ಆತ ಒಬ್ಬ ದೊಡ್ಡ ಜಾತ್ಯತೀತ ವ್ಯಕ್ತಿಯಾಗಿದ್ದ ಎಂಬುದಲ್ಲ. ಬನಿಯಾಗಳು ಹೆಚ್ಚಿನ ಸಂಖ್ಯೆಯಲ್ಲಿ ಇಸ್ಲಾಮ್‌ಗೆ ಮತಾಂತರ ಗೊಂಡರೆ ರಾಜ್ಯ ಬೊಕ್ಕಸಕ್ಕೆ ಬರುವ ಜಿಜ್ಯಿಯಾ

(ಸಾಮಾಜಿಕ ತೆರಿಗೆ) ಕಡಿಮೆ ಆಗುತ್ತದೆ ಎಂಬುದನ್ನು ಆತ ಕಂಡುಕೊಂಡಿದ್ದ.

ಅಕ್ಬರನಂತಹ ಅರಸರು ಜನರನ್ನು ಇಸ್ಲಾಮ್‌ಗೆ ಮತಾಂತರಗೊಳಿಸುವ ಬದಲಿಗೆ, ಹಿಂದೂಗಳಲ್ಲಿಯೇ ಇರುವ ಕೆಲವು ದಮನಕಾರಿ ಕಾನೂನುಗಳನ್ನು ಬದಲಾಯಿಸಿ ಸುಧಾರಣೆ ತರಲು ಮುಂದಾದರು. ಹಿಂದೂ ಸಂಪ್ರದಾಯದಲ್ಲಿ ಹಸ್ತಕ್ಷೇಪ ಎಂದು ಹೇಳಬಹುದಾದ ಅನೇಕ ಸುಧಾರಣಾ ಕ್ರಮಗಳನ್ನು ಆತ ಜಾರಿಗೊಳಿಸಿದ. ಮನುಷ್ಯನ ಸಂವೇದನೆಗಳಿಗೆ ಧಕ್ಕೆಯುಂಟು ಮಾಡುವಂತಹದ್ದೆಂದು ತಾನು ಭಾವಿಸಿದ ಪ್ರತಿಯೊಂದನ್ನೂ ಆತ ಬದಲಾಯಿಸಿದ. ಉದಾ: ಬಾಲ್ಯ ವಿವಾಹ, ಬೆಂಕಿಯ ಮೇಲೆ ನಡೆಯುವುದು, ಪ್ರಾಣಿ ಬಲಿ ಇತ್ಯಾದಿಗಳನ್ನು ನಿಷೇಧಿಸಿದ. ವಿಧವೆಯರಿಗೆ ಮರು ಮದುವೆಯಾಗಲು ಅನುಮತಿ ನೀಡಿದ. ವ್ಯಾಪಕ ಅಸಮಾಧಾನಕ್ಕೆ ಕಾರಣವಾಗಬಹುದೆಂಬ ಹಿನ್ನೆಲೆಯಲ್ಲಿ ಸತಿಯ ಮೇಲೆ ನಿರ್ಬಂಧ ಹೇರುವುದನ್ನು ಕೈಬಿಟ್ಟ. ಮದುವೆಯ ಸಂದರ್ಭದಲ್ಲಿ ಗಂಡು–ಹೆಣ್ಣಿನ ಒಪ್ಪಿಗೆ ಕಡ್ಡಾಯವಾಗಿ ಪಡೆಯಬೇಕೆಂದು ಆದೇಶಿಸಿದ. (ಉಲ್ಲೇಖ: ಎ.ವಿ.ವಿಲಿಯಂ ಜಾಕ್ಸನ್, (ಇಡಿ), ಹಿಸ್ಟರಿ ಆಫ್ ಇಂಡಿಯಾ, ಸಂಪುಟ 4, ಪುಟ 15, 18).

ಸಾಮಾನ್ಯವಾಗಿ ಆಡಳಿತ ನಡೆಸುವ ಕ್ರಿಯೆಯು ರಾಜರು ಮತ್ತು ಆಡಳಿತಗಾರರನ್ನು ಪ್ರಜೆಗಳ ಮಧ್ಯೆ ಜನಪ್ರಿಯರನ್ನಾಗಿಸುವುದಿಲ್ಲ. ಯಾವುದೇ ಮುಸ್ಲಿಮ್ ಆಡಳಿತಗಾರ ಜನರನ್ನು ಇಸ್ಲಾಮಿನೆಡೆಗೆ ಆಕರ್ಷಿಸಲು ಸಾಧ್ಯವಾಗಿಲ್ಲ. ಹೆಚ್ಚಿನವರು ಇಸ್ಲಾಮಿನ ಕಡೆಗೆ ಆಕರ್ಷಿತರಾದದ್ದು ಸೂಫಿಗಳು ಮತ್ತು ಸಂತರ ಪ್ರಭಾವದಿಂದ. ಇವರು ಕಟ್ಟಿದ ಆರೋಗ್ಯಧಾಮ ಮತ್ತು ವಿಶ್ರಾಂತಿಧಾಮಗಳು ರೋಗಿಗಳಿಗೆ, ನಿರ್ಗತಿಕರಿಗೆ ಮತ್ತು ಅಶಕ್ತರಿಗೆ ಆಶ್ರಯವನ್ನೊದಗಿಸಿದವು. ಅಜ್ಮೀರ್, ಮೆಹ್‌ರೌಲಿ ಮತ್ತು ಬಸ್ತಿ ನಿಜಾಮುದ್ದೀನ್‌ನಲ್ಲಿ ಇರುವ ದರ್ಗಾಗಳು ಸಾಕಷ್ಟು ಭಕ್ತರ ಹೃದಯವನ್ನು ಗೆದ್ದುಕೊಂಡವು. ಈ ಸಂತರು ಸಾಮಾನ್ಯರಂತೆ ಬದುಕಿದರು. ಬಡವರಿಗೆ ಉಣಬಡಿಸುತ್ತಾ ನಾಳೆಯ ಬಗ್ಗೆ ಚಿಂತಿಸದೆ ಬದುಕಿದರು. ರೋಗಿಗಳಿಗೆ ಉಚಿತ ಚಿಕಿತ್ಸಾ ವ್ಯವಸ್ಥೆಯನ್ನು ಒದಗಿಸಿದರು. ಚಾರಿತ್ರಿಕ ದಾಖಲೆಗಳ ಪ್ರಕಾರ, ಸುಲ್ತಾನರ ಆಡಳಿತಾವಧಿಯಲ್ಲಿ ಮತ್ತು ಹಝ್ರತ್ ನಿಜಾಮುದ್ದೀನ್ ಔಲಿಯಾರ ಕಾಲದಲ್ಲಿ ದೆಹಲಿಯ ಮೇಲೆ ಅನೇಕ ಬಾರಿ ಆಕ್ರಮಣ ನಡೆದರೂ ಔಲಿಯಾರ ವಿಶ್ರಾಂತಿಗೃಹವನ್ನು ಯಾರೂ ಮುಟ್ಟಿರಲಿಲ್ಲ.

ಜಮ್ಮು ಮತ್ತು ಕಾಶ್ಮೀರವು ಭಾರತೀಯ ಒಕ್ಕೂಟದಲ್ಲೇ ಮುಸ್ಲಿಮ್ ಬಾಹುಳ್ಯವಿರುವ ರಾಜ್ಯವಾಗಿದ್ದು, ಮಧ್ಯ ಏಷ್ಯಾದ ಸೂಫಿಗಳ ಕಾಲದಲ್ಲಿ ಇಲ್ಲಿನ ಜನರು ಇಸ್ಲಾಮಿಗೆ ಮತಾಂತರಗೊಂಡರು. ಈ ಪ್ರದೇಶವನ್ನು ಶತಮಾನಗಳ ಕಾಲ ಹಿಂದೂ ರಾಜರು ಆಳಿದ್ದರೆಂಬುದು ಇಲ್ಲಿ ಗಮನಾರ್ಹ.

1948ರಲ್ಲಿ ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಭಾರತೀಯ ಒಕ್ಕೂಟಕ್ಕೆ ಸೇರ್ಪಡೆಯಾದಾಗ ಮುಸ್ಲಿಮರ ಸಂಖ್ಯೆ ಕೇವಲ ಶೇ. 12ರಷ್ಟಿತ್ತು. ಆದರೆ, ನಾಲ್ಕು ಶತಮಾನಗಳ ಕಾಲ ಹೈದರಾಬಾದ್ ಪ್ರಾಂತ್ಯವನ್ನು ಮುಸಲ್ಮಾನರು ಆಳಿದ್ದರೆಂಬುದು ಗಮನಾರ್ಹ.

ಜಲಂಧರ್‌ನಲ್ಲಿ ಹಿಂದೂ ಧರ್ಮಕ್ಕೆ ಸೇರಿದ ಜಾಟ್ ಸಮುದಾಯವಿದ್ದು ಅವರನ್ನು ಸುಲ್ತಾನೀ ಜಾಟರು ಎನ್ನಲಾಗುತ್ತದೆ. ಇವರು ಸುಲ್ತಾನ್ ಸಾಖೀ ಸರ್ವರ್‌ರ ಭಕ್ತರಾಗಿದ್ದು ಇಂದಿಗೂ ಹಲಾಲ್ ಮಾಂಸವನ್ನು ಮಾತ್ರ ಸೇವಿಸುತ್ತಾರೆ. ಸರ್ವರ್‌ರ ಸಮಾಧಿಯು ಇಂದು ಪಾಕಿಸ್ತಾನದ ಭಾಗವಾಗಿರುವ ಷಾಃಕೋಟ್ ಎಂಬಲ್ಲಿದೆ. ಕೃಷಿಕರಿಂದಲೇ ತುಂಬಿರುವ ಈ ಸಮುದಾಯದವರು ಹೆಚ್ಚಾಗಿ ಹುಕ್ಕಾ ಸೇವಿಸುತ್ತಾರೆ. ತಮ್ಮ ಗ್ರಾಮಗಳ ಹೊರವಲಯದಲ್ಲಿ ಸುಲ್ತಾನ್ ಜಿಯಾರತ್ ಅನ್ನು ಸ್ಥಾಪಿಸಿ, ಪ್ರತಿ ಗುರುವಾರ ಅದನ್ನು ಸ್ವಚ್ಛಗೊಳಿಸಿ ದೀಪ ಬೆಳಗಿಸುತ್ತಾರೆ. ಪಾಃಕೋಟ್‌ನಲ್ಲಿರುವ ಸುಲ್ತಾನ್ ಸಾಖೀ ಸರ್ವರ್‌ರ ಸಮಾಧಿಗೆ ಇವರು ಜಾಥಾ ಒಯ್ಯುತ್ತಿದ್ದರು.

ಸಿಖ್ ಆಡಳಿತ ಕಾಲದಲ್ಲಿ ಮುಲ್ತಾನ್‌ನ ರಾಜ್ಯಪಾಲ ಈ ಜಾತ್ರೆಯ ಮೇಲೆ ನಿರ್ಬಂಧ ಹೇರಲು ಯತ್ನಿಸಿದ್ದ. ಜಾತ್ರೆಗೆ ತೆರಳಿದ ಎಲ್ಲ ಹಿಂದೂಗಳ ಮೇಲೆ ರೂ. 100 ದಂಡ ಹಾಕಲಾಗುತ್ತಿತ್ತು. ಆದರೆ, ಇದು 19ನೇ ಶತಮಾನದವರೆಗೂ ಮುಂದುವರಿದಿತ್ತು ಮತ್ತು ಲೂಧಿಯಾನ ಮತ್ತು ಜಲಂಧರ್‌ನ ಗಜೆಟಿಯರ್‌ನಲ್ಲೂ ಇದರ ಉಲ್ಲೇಖವಿದೆ.

ಇದು ಭಾರತದ ಕತೆಯಾಯಿತು. ಇನ್ನು ಕಿನ್ಯಾ, ತಾಂಜಾನಿಯ ಮತ್ತು ಮಡ್ಗಾಸ್ಕರ್‌ನಂಥ ರಾಷ್ಟ್ರಗಳು ಎಂದಿಗೂ ಮಸ್ಲಿಮ್ ಪಡೆಗಳ ಆಕ್ರಮಣಕ್ಕೆ ತುತ್ತಾಗಲಿಲ್ಲ. ಆದರೂ ಇಲ್ಲಿ ಗಣನೀಯ ಸಂಖ್ಯೆಯಲ್ಲಿ ಮುಸಲ್ಮಾನರಿದ್ದಾರೆ.

1. ತಾಂಜಾನಿಯದ ಜನಸಂಖ್ಯೆಯ ಶೇ. 70ರಷ್ಟು ಮಂದಿ ಮುಸ್ಲಿಮರು. ಆದರೆ ಈ ರಾಷ್ಟ್ರದಲ್ಲಿ ಇಂದಿಗೂ ಕ್ರೈಸ್ತರ ಆಳ್ವಿಕೆಯಿದೆ.

2. ಯುರೋಪ್‌ನ ಹೃದಯ ಭಾಗಕ್ಕೂ ಇಸ್ಲಾಮ್ ಪ್ರವೇಶ ಪಡೆದಿದೆ. ಪೂರ್ವ ಯುರೋಪ್‌ನ ಬಾಲ್ಕನ್ ರಾಷ್ಟ್ರಗಳನ್ನು ಟರ್ಕಿಯ ಉಸ್ಮಾನಿಯಾ ಅರಸರು ಐದು ಶತಮಾನಗಳವರೆಗೆ ಆಳಿದ್ದಾರೆ. ಆದರೆ ಅಲ್ಬೇನಿಯಾ ಮತ್ತು ಬೋಸ್ನಿಯಾ–ಹೆರ್ಜೆಗೊವಿನಾ ಹೊರತು ಪಡಿಸಿ ಪೂರ್ವ ಯುರೋಪ್ ಇಸ್ಲಾಮಿನ ತೆಕ್ಕೆಗೆ ಬರಲಿಲ್ಲ. ಇತ್ತೀಚೆಗೆ ಯುಗೋಸ್ಲಾವಿಯಾ ಒಕ್ಕೂಟವು ಛಿದ್ರಗೊಳ್ಳುವವರೆಗೂ ಅಲ್ಬೇನಿಯಾ ಮತ್ತು ಬೊಸ್ನಿಯಾ–ಹೆರ್ಜೆಗೊವಿನಾ ಅದರ ಭಾಗವಾಗಿತ್ತು. ಅಲ್ಬೇನಿಯಾದಲ್ಲಿ ಶೇ. 90ರಷ್ಟು ಮುಸ್ಲಿಮರಿದ್ದರೆ

ಬೋಸ್ನಿಯಾ–ಹರ್ಜೆಗೋವಿನಾ ಮುಸ್ಲಿಮ್ ಬಾಹುಳ್ಯದ ರಾಷ್ಟ್ರವಾಗಿದೆ.

3. ವಿಪರ್ಯಾಸವೆಂದರೆ, ಸ್ಪೇನ್ ಸುಮಾರು ಎಂಟು ಶತಮಾನಗಳ ಕಾಲ (712 ರಿಂದ 1972 ಅಂದಾಜು) ಮುಸ್ಲಿಮರ ಆಡಳಿತಕ್ಕೆ ಒಳಪಟ್ಟಿದ್ದರೂ ಅದು ಮುಸ್ಲಿಮ್ ಬಾಹುಳ್ಯದ ರಾಷ್ಟ್ರವಾಗಿ ಮಾರ್ಪಡಲಿಲ್ಲ. ಈ ಅವಧಿಯಲ್ಲಿ ಕ್ರೈಸ್ತರು ಮತ್ತು ಯಹೂದಿಯರಿಗೆ ತಮ್ಮ ಧರ್ಮವನ್ನು ಅನುಸರಿಸುವ ಮುಕ್ತ ಸ್ವಾತಂತ್ರ್ಯವನ್ನು ನೀಡಲಾಗಿತ್ತು ಎಂಬುದು ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಅಲ್ಲಿ ಕ್ರೈಸ್ತರ ಆಳ್ವಿಕೆ ಸ್ಥಾಪನೆಗೊಂಡ ನಂತರ ಅಲ್ಲಿನ ಮುಸ್ಲಿಮರನ್ನೂ ಯಹೂದಿಯರನ್ನೂ ಬಲವಂತದಿಂದ ಕ್ರೈಸ್ತ ಧರ್ಮಕ್ಕೆ ಮತಾಂತರಿಸಲಾಯಿತು. ಮತಾಂತರಗೊಳ್ಳಲು ಇಚ್ಛಿಸದವರನ್ನು ದೇಶ ಬಿಟ್ಟು ಹೋಗುವಂತೆ ಸೂಚಿಸಲಾಯಿತು; ಇಲ್ಲವೇ ಉಚ್ಚಾಟಿಸಲಾಯಿತು. ಇದೇ ರೀತಿ ಅರಬ್ ಭೂಪ್ರದೇಶದಲ್ಲಿ ಇಂದಿಗೂ ಇರುವ ಬಹುದೊಡ್ಡ ಕ್ರೈಸ್ತ ಜನಸಂಖ್ಯೆಯು ಇಸ್ಲಾಮನ್ನು ಬಲವಂತದಿಂದ ಯಾರ ಮೇಲೂ ಹೇರಲಾಗಿಲ್ಲ ಎಂಬುದಕ್ಕೆ ಪುರಾವೆಯಾಗಿದೆ.

4. ಈಜಿಪ್ಟ್‌ನಲ್ಲಿ ಇಂದಿಗೂ ಶೇ. 10ರಷ್ಟು ಕಾಪ್ಟಿಕ್ ಕ್ರೈಸ್ತರಿದ್ದಾರೆ.

5. ಇಂಡೊನೇಷಿಯಾ ವಿಶ್ವದಲ್ಲಿಯೇ ಅತಿ ಹೆಚ್ಚು ಮುಸ್ಲಿಮರನ್ನು ಹೊಂದಿರುವ ರಾಷ್ಟ್ರ. ಇಂಡೊನೇಷಿಯಾದಲ್ಲಿ ಬಾಲಿ ಎಂಬ ಹೆಸರಿನ ದ್ವೀಪವಿದ್ದು, ಇಲ್ಲಿ ಹಿಂದೂಗಳ ಪ್ರಾಬಲ್ಯವಿದೆ. ಪ್ರಾಚೀನ ಹಿಂದೂ ದೇವಾಲಯಗಳು ಇಂಡೋನೇಷಿಯಾದಾದ್ಯಂತ ಕಾಣಸಿಗುತ್ತವೆ.

6. ಮಲೇಷಿಯಾದಲ್ಲಿ ಮುಸ್ಲಿಮರು ಬಹುಸಂಖ್ಯಾತರಾಗಿದ್ದರೂ ಇಲ್ಲಿ ಯಾವುದೇ ಮುಸ್ಲಿಮ್ ಸೇನೆ ಪ್ರವೇಶ ಮಾಡಿಲ್ಲ. ಇಲ್ಲಿ ಇಸ್ಲಾಮ್ ಯುದ್ಧದ ಮೂಲಕ ಪ್ರಸಾರಗೊಂಡಿಲ್ಲ. ತನ್ನ ನೈತಿಕ ಸಂದೇಶದಿಂದಾಗಿ ಅದು ಇಲ್ಲಿ ಜನಪ್ರಿಯತೆ ಗಳಿಸಿದೆ. ಮಲೇಷಿಯಾದ ಶೇ 45ರಷ್ಟು ಜನರು ಮಲಯ್‌ಗಳಲ್ಲದವರು. ಇವರು ವ್ಯಾಪಾರ, ಶಿಕ್ಷಣ ಮತ್ತು ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅದೇ ವೇಳೆ ಮೂಲನಿವಾಸಿಗಳಾದ ಭೂಮಿಪುತ್ರರಿಗೆ ಈ ಎಲ್ಲ ಕ್ಷೇತ್ರಗಳಲ್ಲಿ ಮೀಸಲಾತಿಯಿದೆ.

7. ಲೆಬನಾನ್‌ನಲ್ಲಿಯೂ ಮುಸ್ಲಿಮರು ಬಹುಸಂಖ್ಯಾತರಾಗಿದ್ದಾರೆ. ಆದರೆ ಇಲ್ಲಿ ಅಧ್ಯಕ್ಷ ಸ್ಥಾನವು ಮರೊನೈಟ್ ಕ್ರೈಸ್ತರಿಗೆ ಮೀಸಲಾಗಿದ್ದು ಇದಕ್ಕೆ ಕಾಯ್ದೆಯನ್ನೂ ರೂಪಿಸಲಾಗಿದೆ. ಇಲ್ಲಿ ಪ್ರಧಾನಮಂತ್ರಿ ಸ್ಥಾನ

ಮುಸ್ಲಿಮರಿಗೂ ಸ್ಪೀಕರ್ ಸ್ಥಾನ ಷಿಯಾ ಜನಾಂಗದವರಿಗೂ ಮೀಸಲಾಗಿದೆ. ಹೀಗೆ ಎಲ್ಲ ಪ್ರಮುಖ ಸ್ಥಾನಗಳನ್ನೂ ದೇಶದ ಸಮ್ಮಿಶ್ರ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡೇ ಹಂಚಲಾಗಿದೆ.

8. ಇಂದಿಗೂ ಸಿರಿಯಾ, ಜೋರ್ಡಾನ್ ಮತ್ತು ಇರಾಕ್‌ನಲ್ಲಿ ಕ್ರೈಸ್ತರ ಹಲವು ಪ್ರಾಚೀನ ಸಮುದಾಯಗಳು ಅಸ್ತಿತ್ವದಲ್ಲಿವೆ.

9. ಟ್ಯುನಿಷಿಯಾ ಮತ್ತು ಇರಾನ್‌ನಲ್ಲಿ ಯಹೂದಿಯರು ಗಮನಾರ್ಹ ಸಂಖ್ಯೆಯಲ್ಲಿದ್ದಾರೆ. ಟ್ಯುನಿಷಿಯಾದ ವಹಿವಾಟು ಮತ್ತು ಕೈಗಾರಿಕಾ ರಂಗದಲ್ಲಿ ಅವರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

10. ಬಾಂಗ್ಲಾದೇಶದ ಜನಸಂಖ್ಯೆಯಲ್ಲಿ ಶೇ. 12ರಷ್ಟು ಹಿಂದೂ ಧರ್ಮೀಯರಿದ್ದಾರೆ. ಕಲೆ, ಸಾಹಿತ್ಯ, ಮಾಧ್ಯಮ ಮತ್ತು ಬಂಗಾಳಿ ಸಿನಿಮಾಗಳ ಮೇಲೆ ಇವರ ಹಿಡಿತವಿದೆ. ಇಸ್ಲಾಮಿನ ಮೂಲ ನಂಬಿಕೆಗಳಿಗೆ ತದ್ವಿರುದ್ಧವಲ್ಲದ ಹಲವು ಹಿಂದೂ ಸಂಪ್ರದಾಯಗಳನ್ನು ಬಾಂಗ್ಲಾದೇಶೀಯರು ಈಗಲೂ ಪಾಲಿಸುತ್ತಾರೆ. ಮಹಿಳೆಯರ ಹಣೆಯಲ್ಲಿ ಬಿಂದಿ ಮತ್ತು ಸಿಂಧೂರ ಕಾಣಿಸುತ್ತದೆ. ಸೀರೆಯು ಮಹಿಳೆಯರ ಮುಖ್ಯ ಪೋಷಾಕಾಗಿದೆ. ಬಾಂಗ್ಲಾ ಅತಿ ಹೆಚ್ಚು ಸಂಸ್ಕೃತೀಕರಣಗೊಂಡ ಭಾಷೆಯಾಗಿದೆ. ಇಸ್ಲಾಮ್ ಜನರ ಮೇಲೆ ಏಕರೂಪದ ನೀತಿ ಸಂಹಿತೆಯನ್ನು ಹೇರುವುದಿಲ್ಲ; ಬಹುಸಂಸ್ಕೃತಿಯನ್ನು ಗೌರವಿಸುತ್ತದೆ.

11. ಮಂಗೋಲಿಯನ್ನರು ಇಸ್ಲಾಮೀ ಸಾಮ್ರಾಜ್ಯದ ಮೇಲೆ ದಾಳಿ ಮಾಡಿದಾಗ ಅಲ್ಲಿನ ಧರ್ಮವನ್ನು ನಾಶ ಪಡಿಸುವ ಬದಲಿಗೆ ಅದನ್ನು ತಾವೇ ಅಳವಡಿಸಿಕೊಂಡರು. ಇದು ಇತಿಹಾಸದಲ್ಲೇ ಒಂದು ಅನುಪಮ ವಿದ್ಯಮಾನ. ಮಂಗೋಲಿಯನ್ನರು ದಿಗ್ವಿಜಯ ಸಾಧಿಸಿದವರಾದ್ದರಿಂದ ಮುಸ್ಲಿಮರು ಅವರ ಮೇಲೆ ಬಲಪ್ರಯೋಗಿಸಿ ಇಸ್ಲಾಮ್ ಸ್ವೀಕರಿಸುವಂತೆ ಮಾಡಲು ಸಾಧ್ಯವಿಲ್ಲ ತಾನೆ? ವಿಶ್ವದಲ್ಲಿರುವ 1.7 ಶತಕೋಟಿ ಮುಸ್ಲಿಮರೊಡನೆ ನಿಮ್ಮನ್ನು ಬಲವಂತದಿಂದ ಮತಾಂತರಿಸಲಾಗಿದೆಯೇ ಎಂದು ಕೇಳಿ ನೋಡಿ. ಇಂದು ವಿಶ್ವದಲ್ಲಿ ಅತ್ಯಧಿಕ ಮುಸ್ಲಿಮರು ಇರುವ ದೇಶ ಇಂಡೋನೇಷಿಯಾ. ಆದರೆ ಅಲ್ಲಿ ಎಂದಿಗೂ ಯಾವುದೇ ರೀತಿಯ ಯುದ್ಧ ನಡೆದಿಲ್ಲ. ಹಾಗಿದ್ದ ಮೇಲೆ ಖಡ್ಗದ ಪ್ರಶ್ನೆ ಎಲ್ಲಿ ಬಂತು? ಅಧ್ಯಾತ್ಮಿಕವಾಗಿ ಪ್ರತಿಫಲ ಕೊಡುವ ಮತ್ತು ಅಧ್ಯಾತ್ಮಿಕತೆಯನ್ನು ಬೇಡುವ ಇಸ್ಲಾಮ್ ಧರ್ಮವನ್ನು ಯಾರ ಮೇಲಾದರೂ ಒತ್ತಾಯದಿಂದ ಹೇರಲು ಸಾಧ್ಯವೇ?

ಸರ್ ಥಾಮಸ್ ಅರ್ನಾಲ್ಡ್ ಚರಿತ್ರೆಯ ಈ ಮಿಶ್ರ ಧಾರೆಯ ಬಗ್ಗೆ ಹೀಗೆ ಬರೆಯುತ್ತಾರೆ: "ಒಂದು ಕೈಯಲ್ಲಿ ಖಡ್ಗ ಮತ್ತು ಇನ್ನೊಂದು ಕೈಯಲ್ಲಿ ಕುರ್‌ಆನ್ ಹಿಡಿದು ಕೊಂಡ ಕಾಲ್ಪನಿಕ ಮುಸ್ಲಿಮ್ ಯೋಧನಿಂದ ಇಸ್ಲಾಮ್ ಪ್ರಚಾರಗೊಂಡದ್ದಲ್ಲ. ಕುರ್‌ಆನ್‌ನ ಬೋಧನೆ ಮತ್ತು ಪ್ರವಾದಿಯ ಚಾರಿತ್ರ್ಯದ ಬಲದಿಂದಲೇ ಅದು ಪ್ರಸಾರಗೊಂಡಿದೆ." (ಉಲ್ಲೇಖ: ಪ್ರೀಚಿಂಗ್ ಆಫ್ ಇಸ್ಲಾಮ್)

ಪಶ್ಚಿಮದಲ್ಲಿ ಜನರ ಮೇಲೆ ಇಸ್ಲಾಮಿನ ಪ್ರಭಾವ ಇತ್ತೀಚೆಗೆ ತೀವ್ರವಾಗಿ ಹೆಚ್ಚುತ್ತಿದೆ. ಸೆಪ್ಟಂಬರ್ 11ರ ಘಟನೆಯ ನಂತರ ನೇರವಾಗಿ ಧರ್ಮವನ್ನು ಅಧ್ಯಯನ ಮಾಡಿ ಸಾವಿರಾರು ಸಂಖ್ಯೆಯಲ್ಲಿ ಜನರು ಇಸ್ಲಾಮ್‌ಗೆ ಸೇರ್ಪಡೆಗೊಂಡಿದ್ದಾರೆ. ಸಮೀಕ್ಷೆಯ ಪ್ರಕಾರ ಹೊಸದಾಗಿ ಇಸ್ಲಾಮ್ ಸ್ವೀಕರಿಸುತ್ತಿರುವವರಲ್ಲಿ ಶೇ. 70ರಷ್ಟು ಮಹಿಳೆಯರಿದ್ದಾರೆ. ಈ ಅಂಶಗಳು ಇಸ್ಲಾಮ್ ಬಲಪ್ರಯೋಗದಿಂದ ಪಸರಿಸುತ್ತಿದೆ ಎಂಬ ಮಿಥ್ಯೆಯನ್ನು ಧ್ವಂಸಗೊಳಿಸುತ್ತದೆ. ಒಂದು ವೇಳೆ ಇದು ನಿಜವೇ ಆಗಿದ್ದರೆ ಇಸ್ಲಾಮ್ ಮಹಿಳಾ ವಿರೋಧಿ ಮತ್ತು ಹಿಂಸೆಯನ್ನು ಪ್ರಚೋದಿಸುವ ಧರ್ಮ ಎಂಬ ಅಪಪ್ರಚಾರ ವ್ಯಾಪಕವಾಗಿರುವ ಈ ಸಂದರ್ಭದಲ್ಲಿ, ಮಹಿಳೆಯರ ಮಧ್ಯೆ ಇಸ್ಲಾಮ್ ಇಷ್ಟೊಂದು ಜನಪ್ರಿಯವಾಗುತ್ತಿರಲಿಲ್ಲ. ಇಸ್ಲಾಮ್ ವಿರೋಧಿಗಳು ಧರ್ಮವನ್ನು ತಪ್ಪಾಗಿ ಬಿಂಬಿಸುವ ಮೂಲಕ ತಾವು ಎಂತಹ ತಪ್ಪು ಮಾಡುತ್ತಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಮತ್ತು ಇಸ್ಲಾಮಿನ ಬಗ್ಗೆ ಸಂಶಯ ಹೊಂದಿರುವವರು ಇಸ್ಲಾಮ್ ವಿರೋಧಿ ಶಕ್ತಿಗಳು ತಮ್ಮನ್ನು ದಾರಿಗೆಡಹದಿರುವಂತೆ ಜಾಗರೂಕರಾಗಲು ಇದು ಸಕಾಲ.

## ವೈಯಕ್ತಿಕ ಕಾನೂನು

ಭಾರತದಲ್ಲಿ ಚಾಲ್ತಿಯಲ್ಲಿರುವ ಮುಸ್ಲಿಮ್ ವೈಯಕ್ತಿಕ ಕಾನೂನು ಕೂಡಾ ಆ ಸಮುದಾಯದ ಜನರಿಗೆ ಇರುವ ಒಂದು 'ಸೌಲಭ್ಯ' ಎಂದು ಕೆಲವು ವಿಭಾಗಗಳು ವಾದಿಸುತ್ತವೆ. ಆದರೆ ಈ 'ಸೌಲಭ್ಯ' ಎಲ್ಲ ಸಮುದಾಯಗಳಿಗೂ ಇವೆ ಎಂಬ ಅಂಶವನ್ನು ಮಾತ್ರ ಅವರು ಮರೆಮಾಚುತ್ತಾರೆ. ಹಿಂದೂಗಳಿಗೆ ಮತ್ತು ಹಿಂದೂ ಎಂಬ ಗುಂಪಿನಡಿ ಬರುವ ಎಲ್ಲ ಸಮುದಾಯಗಳಿಗೆ ತಮ್ಮದೇ ಆದ ವಿಶಿಷ್ಟ ಕಾಯ್ದೆಗಳು ಜಾರಿಯಲ್ಲಿವೆ. ಈ ಕಾಯ್ದೆಗಳಿಗೆ ಕಾನೂನಾತ್ಮಕ ಸಿಂಧುತ್ವವೂ ಇದೆ. ಹಿಂದೂ ಅವಿಭಕ್ತ ಕುಟುಂಬವು ತೆರಿಗೆ ಮತ್ತು ಆಸ್ತಿಯ ವರ್ಗೀಕರಣದಲ್ಲಿ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಈಶಾನ್ಯದ ರಾಜ್ಯಗಳಲ್ಲಿರುವ ಹಲವು ಬುಡಕಟ್ಟುಗಳಿಗೆ ತಮ್ಮದೇ ಸಾಂಪ್ರದಾಯಿಕ ಕಾನೂನುಗಳ ಪ್ರಕಾರ ಕೌಟುಂಬಿಕ ವ್ಯವಹಾರಗಳನ್ನು ನಿರ್ವಹಿಸುವ ಅವಕಾಶವನ್ನು ಒದಗಿಸಲಾಗಿದೆ. ಗೋವಾದಲ್ಲಿ ಕೌಟುಂಬಿಕ ವ್ಯವಹಾರಗಳಿಗೆ ಸಂಬಂಧಿಸಿ ಪೋರ್ಚುಗೀಸ್ ಕಾಯ್ದೆ ಬಳಕೆಯಲ್ಲಿದೆ. ಅದೇ ರೀತಿ ದಕ್ಷಿಣ ರಾಜ್ಯಗಳಲ್ಲಿ ಹಿಂದೂಗಳು ಅನುಸರಿಸುವ ಕೌಟುಂಬಿಕ ಕಾನೂನುಗಳು ಉತ್ತರ ಭಾರತದಲ್ಲಿ ಜಾರಿಯಲ್ಲಿರುವ ಕಾಯ್ದೆಗಳಿಗಿಂತ ಭಿನ್ನ. ಈ ಕಾಯ್ದೆಗಳಲ್ಲಿ ನಿರಂತರವಾದ ಸುಧಾರಣೆ ನಡೆಯುವ ಅಗತ್ಯವನ್ನು ಯಾರೂ ನಿರಾಕರಿಸಲಾರರು. ಆದರೆ ಈ ವೈವಿಧ್ಯತೆಗಳನ್ನು ಕಡೆಗಣಿಸಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವ ದುಡುಕಿನ ಕ್ರಮವು ಹೆಚ್ಚು ಅನನುಕೂಲವನ್ನು ಸೃಷ್ಟಿಸಲಿದ್ದು ಮುಸ್ಲಿಮರಿಗಿಂತಲೂ ಹಿಂದೂಗಳೇ ಅದನ್ನು ವಿರೋಧಿಸುವ ಸಾಧ್ಯತೆ ಇದೆ.

## ಹಜ್ಜ್ ಸಬ್ಸಿಡಿ

ಮುಸ್ಲಿಮ್ ಯಾತ್ರಾರ್ಥಿಗಳಿಗೆ ನೀಡಲಾಗುವ ಹಜ್ಜ್ ಸಬ್ಸಿಡಿ ಕೂಡಾ ಸದಾ ವಿವಾದಕ್ಕೆ ಗುರಿಯಾಗುತ್ತಿದೆ. ಇದೀಗ ಹತ್ತು ವರ್ಷದೊಳಗೆ ಹಂತ ಹಂತವಾಗಿ ಈ ಸಬ್ಸಿಡಿಯನ್ನು ತೆಗೆದು ಹಾಕುವಂತೆ ಸುಪ್ರೀಮ್ ಕೋರ್ಟ್ ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಿರುವುದರಿಂದ ಕನಿಷ್ಠ ಸದ್ಯೋಭವಿಷ್ಯದಲ್ಲಾದರೂ ಈ 'ವಿವಾದ'ಕ್ಕೆ ಒಂದು ಕೊನೆ ಸಿಗುವ ಸಾಧ್ಯತೆ ಇದೆ. ಆದರೆ ನಿಜವಾಗಿಯೂ ಹಜ್ಜ್ ಸಬ್ಸಿಡಿ ಹೆಸರಲ್ಲಿ

ನಡೆಯುತ್ತಿರುವುದು ಏನು? ಕೇಂದ್ರೀಯ ಹಜ್ ಸಮಿತಿಗೆ ಹಜ್ ಯಾತ್ರಾರ್ಥಿಗಳನ್ನು ಸಾಗಿಸಲು ಚಾರ್ಟರ್ಡ್ ವಿಮಾನಗಳನ್ನು ಬಳಸುವಂತೆ ಹೇಳಿದ್ದಾದರೂ ಯಾರು? ಹಲವು ಪ್ರಜ್ಞಾವಂತ ಮುಸ್ಲಿಮರು ಕೂಡಾ ಈ ಕ್ರಮವನ್ನು ವಿರೋಧಿಸಿದ್ದರು ಎಂಬುದನ್ನು ನಾವು ಗಮನಿಸಬೇಕು. ಸಬ್ಸಿಡಿಯ ಈ ಕ್ರಮವೇ ದೇಶದ ಜಾತ್ಯತೀತ ಸ್ವರೂಪಕ್ಕೆ ವಿರುದ್ಧವಾದುದು ಮತ್ತು ಇಸ್ಲಾಮಿನಲ್ಲೂ ಈ ಬಗೆಯ ಸಹಾಯವನ್ನು ಪಡೆದು ಹಜ್ಜ್‌ಗೆ ತೆರಳಲು ಅನುಮತಿ ಇಲ್ಲ. ಹಜ್ಜ್ ಸಬ್ಸಿಡಿಯ ವಿವಾದವನ್ನು ನೆಪ ಮಾಡಿಕೊಂಡು ಹಲವು ರಾಜ್ಯಗಳು ಇತರ ಹಲವು ಸಮುದಾಯಗಳ ತೀರ್ಥಯಾತ್ರೆಗೂ ಸಹಾಯಧನ ನೀಡುವ ಕ್ರಮವನ್ನು ಇತ್ತೀಚಿಗೆ ಆರಂಭಿಸಿವೆ ಎಂಬುದು ಇಲ್ಲಿ ಉಲ್ಲೇಖಾರ್ಹ.

# ಜನಸಂಖ್ಯೆಯ ಭೂತ

### ಮುಸ್ಲಿಮ್ ಜನಸಂಖ್ಯೆಯ ಹೆಚ್ಚಳ ನಿಜಕ್ಕೂ ಅಪಾಯದ ಗಂಟೆಯೇ ?

ಮುಸ್ಲಿಮರ ಜನಸಂಖ್ಯೆಯು ಇತರರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಏರುತ್ತಿದೆ, ಅವರು ನಾಲ್ಕು ಬಾರಿ ಮದುವೆಯಾಗುತ್ತಾರೆ, ಶೀಘ್ರದಲ್ಲಿಯೇ ಅವರ ಜನಸಂಖ್ಯೆ ಹಿಂದೂಗಳಿಗಿಂತಲೂ ಹೆಚ್ಚಾಗಲಿದೆ ಮತ್ತು ಈ ದೇಶ ಮುಸ್ಲಿಮ್ ರಾಷ್ಟ್ರವಾಗಲಿದೆ ಎಂಬ ತಪ್ಪುಕಲ್ಪನೆಗಳು ನಮ್ಮ ಸಮಾಜದಲ್ಲಿ ವ್ಯಾಪಕವಾಗಿ ಚಾಲ್ತಿಯಲ್ಲಿವೆ. ಮುಸ್ಲಿಮರು ಕುಟುಂಬ ಯೋಜನೆ ಪಾಲಿಸುವುದಿಲ್ಲ ಮತ್ತು ಜನಸಂಖ್ಯೆಯನ್ನು ಹೆಚ್ಚಿಸಲಿಕ್ಕಾಗಿಯೇ ಬಹುಪತ್ನಿತ್ವದಲ್ಲಿ ತೊಡಗುತ್ತಾರೆ ಎಂಬ ವಾದವೂ ಇದೆ.

ವಾಸ್ತವವೆಂದರೆ ಈ ಮಿಥ್ಯೆಯನ್ನು ಕೆಲವು ತೀವ್ರವಾದಿ ಗುಂಪುಗಳು ವರ್ಷಾನುಗಟ್ಟಲೆ ಯಶಸ್ವಿಯಾಗಿ ಹರಡುತ್ತಾ ಬಂದಿವೆ. ಈ ಶಕ್ತಿಗಳು ತಮ್ಮ ವೋಟ್‌ಬ್ಯಾಂಕ್ ಅನ್ನು ಭದ್ರ ಮಾಡಿಕೊಳ್ಳಲು ಮುಸ್ಲಿಮ್ ಜನಸಂಖ್ಯೆಯ ಭೀತಿಯನ್ನು ಮೂಡಿಸುತ್ತವೆ. ಈ ಕಾರ್ಯತಂತ್ರದ ಭಾಗವಾಗಿ ಅರ್ಧ ಸತ್ಯ, ಸೈದ್ಧಾಂತಿಕ ಕಟ್ಟುಕತೆಗಳು ಮತ್ತು ವದಂತಿಗಳನ್ನು ಹಬ್ಬಿಸುತ್ತಿರುವ ಈ ಶಕ್ತಿಗಳು ತನ್ಮೂಲಕ ಈ ಮಿಥ್ಯೆಗಳು ಜನಮಾನಸದಲ್ಲಿ ಬೇರೂರುವಂತೆ ಮಾಡಿವೆ.

ಆದರೆ ಧರ್ಮಾಧಾರಿತ ಜನಗಣತಿಯ ಅಂಕಿಅಂಶಗಳು ಈ ಜನಪ್ರಿಯ ನಂಬಿಕೆಗಳನ್ನು ಸಾರಾಸಗಟಾಗಿ ತಳ್ಳಿಹಾಕಿವೆ. 1971ರ ಜನಗಣತಿ ಅಂಕಿ ಅಂಶಗಳ ಅನುಸಾರ ದೇಶದಲ್ಲಿ ಹಿಂದೂಗಳ ಪ್ರಮಾಣ ಶೇ. 82.6 ಮತ್ತು ಮುಸ್ಲಿಮರ ಸಂಖ್ಯೆ ಶೇ 11.4. (ಮಲಯಾಳ ಮನೋರಮಾ 1992). 2001ರ ಜನಗಣತಿಯ ಅನುಸಾರ

ಹಿಂದೂಗಳ ಜನಸಂಖ್ಯೆ ಶೇ. 2.3ರಷ್ಟು ಏರಿಕೆಯಾಗಿದ್ದರೆ ಮುಸ್ಲಿಮರ ಪ್ರಮಾಣ ಶೇ. 2.7.ರಷ್ಟು ಏರಿಕೆಯಾಗಿದೆ. ಆದರೆ, ಮುಸ್ಲಿಮರ ಜನಸಂಖ್ಯೆಯಲ್ಲಿ ಆಗಿರುವ ಕಿಂಚಿತ್ ಹೆಚ್ಚುವರಿ ಏರಿಕೆಗೆ ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಹಾಗೂ ಸಾಕ್ಷರತೆಯ ಕೊರತೆಯೇ ಕಾರಣ. ಅದರಲ್ಲೂ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಮಟ್ಟ ಸಮಾನವಾಗಿರುವ ಕಡೆಗಳಲ್ಲಿ ಜನಸಂಖ್ಯೆ ಏರಿಕೆ ಪ್ರಮಾಣವೂ ಸಮಾನವಾಗಿರುವುದು ಗಮನಿಸಬೇಕಾದ ಅಂಶ. ಇಲ್ಲಿ ನಾವು ಕೇರಳವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಇಲ್ಲಿ ಹಿಂದೂ, ಮುಸ್ಲಿಮ್ ಮತ್ತು ಕ್ರೈಸ್ತರ ಏರಿಕೆಯ ಪ್ರಮಾಣ ಶೇ. 1.8ರಷ್ಟು ಇದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಹಿಂದೂಗಳ ಏರಿಕೆಯ ಪ್ರಮಾಣ ಮುಸ್ಲಿಮರಿಗಿಂತಲೂ ಅಧಿಕವಿದೆ. ಅಲ್ಲಿ ಹಿಂದೂಗಳ ಜನಸಂಖ್ಯೆ ಶೇ. 3.7 ಹೆಚ್ಚಳ ಕಂಡಿದ್ದರೆ ಮುಸ್ಲಿಮರ ಜನಸಂಖ್ಯಾ ಹೆಚ್ಚಳ ದರ ಶೇ. 2.6 ಮಾತ್ರ.

ಈ ಎಲ್ಲ ಅಂಕಿ ಅಂಶಗಳು ಜನಸಂಖ್ಯೆಯ ಹೆಚ್ಚಳ ದರವು ವಿವಿಧ ಸಮುದಾಯಗಳ ವಿಚಾರದಲ್ಲಿ ಬಹುತೇಕ 'ಸ್ಥಿರ'ವಾಗಿದೆ ಎಂಬುದನ್ನು ತೋರಿಸುತ್ತದೆ. ಒಂದು ವೇಳೆ, ಈಗಿನ ವಿವಿಧ ಜನಸಮುದಾಯಗಳ ಸದ್ಯದ 'ವಿಭಿನ್ನ' ಏರಿಕೆ ಪ್ರಮಾಣ ಹೀಗೆಯೇ ಮುಂದುವರಿದರೂ ಮುಂದಿನ ಒಂದು ಶತಮಾನ ಕಳೆದರೂ ಹಿಂದೂಗಳ ಜನಸಂಖ್ಯೆಯನ್ನು ಮೀರಿಸುವುದು ಮುಸ್ಲಿಮರಿಗೆ ಸಾಧ್ಯವಿಲ್ಲ. ಇದಕ್ಕೆ ತದ್ವಿರುದ್ಧವಾಗಿ, ಸದ್ಯದ ಬೆಳವಣಿಗೆಯ ಪ್ರಮಾಣಕ್ಕೆ ಹೋಲಿಸಿದರೆ 1961–71 ಮತ್ತು 1971–81ರ ನಡುವೆ ಹಿಂದೂಗಳ ಜನಸಂಖ್ಯೆಯು ಶೇ. 23.71 ರಿಂದ ಶೇ. 24.42ಕ್ಕೆ ಏರಿಕೆಯಾಗಿದೆ. ಅದೇ ಅವಧಿಯಲ್ಲಿ ಮುಸ್ಲಿಮರ ಜನಸಂಖ್ಯೆ ಪ್ರಮಾಣ ಶೇ. 30.85 ರಿಂದ ಶೇ. 30.20ಕ್ಕೆ ಇಳಿದಿದೆ. ಕ್ರಿ.ಶ. 1981ರಿಂದ ನೂರು ವರ್ಷಗಳ ಕಾಲ ಜನಸಂಖ್ಯೆ ಏರಿಕೆ ಪ್ರಮಾಣ ಇದೇ ಮಟ್ಟದಲ್ಲಿ ಮುಂದುವರಿಯುತ್ತದೆ ಎಂದು ಇಟ್ಟುಕೊಂಡರೂ ಹಿಂದೂ ಮತ್ತು ಮುಸ್ಲಿಮರ ಪ್ರಮಾಣ ಕ್ರಮವಾಗಿ ಶೇ. 30.71 ಮತ್ತು ಶೇ. 30.55 ರಷ್ಟಿರುತ್ತದೆ.

# ಮುಸ್ಲಿಮರ ಓಲೈಕೆ

ಕೆಲವು ರಾಜಕೀಯ ಪಕ್ಷಗಳು ಮುಸ್ಲಿಮರನ್ನು ಓಲೈಸುತ್ತಿದ್ದು, ರಾಷ್ಟ್ರೀಯ ಸಂಪನ್ಮೂಲ ಮತ್ತು ಆರ್ಥಿಕತೆಯಲ್ಲಿ ಅವರಿಗೆ ಹೆಚ್ಚಿನ ಪಾಲು ನೀಡುತ್ತಿವೆ ಎಂದು ಕೆಲವು ತೀವ್ರವಾದಿ ಗುಂಪುಗಳು ಮತ್ತು ರಾಜಕೀಯ ಪಕ್ಷಗಳು ಸಾಮಾನ್ಯವಾಗಿ ವಾದಿಸುತ್ತವೆ. ಇದು ತಪ್ಪು ಎಂಬುದು ಭಾರತೀಯ ಮುಸ್ಲಿಮ್ ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯ ಕುರಿತು ಸಮೀಕ್ಷೆ ನಡೆಸಲು ಕೇಂದ್ರ ಸರ್ಕಾರ 2005ರಲ್ಲಿ ನೇಮಿಸಿದ ರಾಜಿಂದರ್ ಸಾಚಾರ್ ಸಮಿತಿ ಸಾಬೀತುಪಡಿಸಿದೆ.

ಭಾರತೀಯ ಮುಸ್ಲಿಮರ ಸ್ಥಿತಿಗತಿಯು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗಿಂತಲೂ ಶೋಚನೀಯವಾಗಿದೆ ಎಂದು ಸಮಿತಿಯು ತಾನು 2006ರಲ್ಲಿ ಸಲ್ಲಿಸಿದ ವರದಿಯಲ್ಲಿ ಹೇಳಿದೆ. ಸಮಿತಿಯು ಅತ್ಯಂತ ಆಶ್ಚರ್ಯಕರವಾದ ಕೆಲವು ಅಂಕಿ ಅಂಶಗಳನ್ನು ಹೊರತಂದಿದೆ. ಉದ್ಯೋಗ ಮತ್ತು ಇತರೆ ಸಾಮಾಜಿಕ, ಆರ್ಥಿಕ ಮಾನದಂಡಗಳನ್ನು ಮುಸ್ಲಿಮರ ಸ್ಥಿತಿಗತಿಯನ್ನು ಅರಿಯಲು ಹಾಗೂ 'ತುಷ್ಟೀಕರಣ'ದ ಪ್ರಮಾಣವನ್ನು ಅಂದಾಜಿಸಲು ಬಳಸಲಾಗಿದೆ. ಈ ಮಾನದಂಡಗಳ ಆಧಾರದಲ್ಲಿ ಜನಸಂಖ್ಯೆಯಲ್ಲಿ ಶೇ. 15ರಷ್ಟಿರುವ ಮುಸಲ್ಮಾನರ ಸ್ಥಿತಿಗತಿ ಏನು ಎಂಬುದನ್ನು ಪರಿಶೀಲಿಸೋಣ.

**1**. ಮುಸ್ಲಿಮರ ಸಾಕ್ಷರತೆಯ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. 6–14 ವಯೋಮಿತಿಯ ಮುಸ್ಲಿಮ್ ಮಕ್ಕಳ ಪೈಕಿ ಶೇ. 25ರಷ್ಟು ಮಕ್ಕಳು ಒಂದೋ ಶಾಲೆಗೆ ಹಾಜರಾಗಿಯೇ ಇಲ್ಲ ಅಥವಾ ಶಾಲೆಯಿಂದ ಹೊರಬಿದ್ದಿದ್ದಾರೆ. ಸ್ವಾತಂತ್ರ್ಯಾನಂತರ ಶಿಕ್ಷಣದ ಅವಕಾಶಗಳು ವಿಸ್ತಾರಗೊಂಡರೂ ಅದರ ಲಾಭ ಭಾರತೀಯ ಮುಸ್ಲಿಮರಿಗೆ ತಲುಪಿಯೇ ಇಲ್ಲ. ಪ್ರಮುಖ ಕಾಲೇಜುಗಳಲ್ಲಿ 25 ಪದವೀಧರ ವಿದ್ಯಾರ್ಥಿಗಳ ಪೈಕಿ ಮುಸ್ಲಿಮರ ಸಂಖ್ಯೆ ಒಂದಕ್ಕೆ ಸೀಮಿತ. ಹಾಗೆಯೇ ಪ್ರತಿ 50 ಸ್ನಾತಕೋತ್ತರ ವಿದ್ಯಾರ್ಥಿಗಳ ಪೈಕಿ ಒಬ್ಬ ಮಾತ್ರ ಮುಸ್ಲಿಮನಾಗಿರುತ್ತಾನೆ. ಮುಸ್ಲಿಮ್ ಪದವೀಧರರ ಪೈಕಿ ನಿರುದ್ಯೋಗದ ಪ್ರಮಾಣ ಇತರ ಎಲ್ಲ ಸಾಮಾಜಿಕ, ಧಾರ್ಮಿಕ ಗುಂಪುಗಳಿಗಿಂತಲೂ ಹೆಚ್ಚು. ಶಾಲೆಗೆ

ಹೋಗುವ ವಯಸ್ಸಿನ ಮಕ್ಕಳಲ್ಲಿ ಕೇವಲ ಶೇ. 3ರಷ್ಟು ಮುಸ್ಲಿಮ್ ಮಕ್ಕಳು ಮಾತ್ರ ಮದ್ರಸಾಗಳಿಗೆ ಹೋಗುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಕೇಂದ್ರ ಸರಕಾರ ಕೈಗೊಂಡ ಕೆಲವು ಉಪಕ್ರಮಗಳು ಸ್ವಲ್ಪ ಮಟ್ಟಿಗಾದರೂ ಫಲ ನೀಡಿವೆ ಎಂದು ಅಭಿಪ್ರಾಯಪಟ್ಟಿರುವ ಸಮಿತಿಯು ಇಂತಹ ಉಪಕ್ರಮಗಳು ಮುಸ್ಲಿಮ್ ಸಮುದಾಯಕ್ಕೂ ಅಗತ್ಯವಿದೆ ಎಂದು ಪ್ರತಿಪಾದಿಸಿದೆ.

**2.** ಸರ್ಕಾರಿ ಸೇವಾ ವಲಯದ ಉನ್ನತ ಹುದ್ದೆಗಳಲ್ಲಿ ಅವರ ಪ್ರಮಾಣ ತೀರಾ ಕಡಿಮೆ. ಮೊದಲ ದರ್ಜೆಯ ಹುದ್ದೆಗಳಲ್ಲಿ ಅವರ ಪ್ರಮಾಣ ಶೇ. 3.19ರಷ್ಟಿದ್ದರೆ, ದ್ವಿತೀಯ ಮತ್ತು ನಾಲ್ಕನೇ ದರ್ಜೆಯ ಹುದ್ದೆಗಳಲ್ಲಿ ಶೇ. 4.30 ಮತ್ತು ಶೇ. 8.16ರಷ್ಟಿದೆ. ಖಾಸಗಿ ವಲಯದಲ್ಲಿ ಅವರ ಪ್ರಾತಿನಿಧ್ಯ ಇದಕ್ಕಿಂತಲೂ ಕಡಿಮೆ.

**3.** ಭಾರತದ ನೌಕರಶಾಹಿಯಲ್ಲಿ ಮುಸ್ಲಿಮರ ಶೇಕಡಾವಾರು ಪ್ರಮಾಣ ಶೇ. 2.5 ಮಾತ್ರ. ಭಾರತದಲ್ಲಿ ಮುಸ್ಲಿಮರ ಜನಸಂಖ್ಯೆಯ ಪ್ರಮಾಣ ಶೇ 14ರಷ್ಟಿದೆ ಎಂಬುದನ್ನು ನಾವು ಇಲ್ಲಿ ಗಮನಿಸಬೇಕು.

**4.** ಭಾರತೀಯ ಆಡಳಿತ ಸೇವೆ (ಐಎಎಸ್)ಯಲ್ಲಿ ಮುಸ್ಲಿಮರ ಪ್ರಮಾಣ ಶೇ. 3; ಭಾರತೀಯ ವಿದೇಶ ಸೇವೆ (ಐಎಫ್ಎಸ್)ಯಲ್ಲಿ ಶೇ. 1.8 ಮತ್ತು ಭಾರತೀಯ ಪೊಲೀಸ್ ಸೇವೆ (ಐಪಿಎಸ್)ಯಲ್ಲಿ ಶೇ. 4ರಷ್ಟು ಮಾತ್ರ. ಭಾರತೀಯ ರೈಲ್ವೆಯ ನೌಕರಿಯಲ್ಲಿ ಶೇ. 4.5ರಷ್ಟಿರುವ ಮುಸ್ಲಿಮರ ಈ ಪೈಕಿ ಶೇ. 98.7 ಜನರು ಅತ್ಯಂತ ಸಣ್ಣ ನೌಕರಿಗಳಲ್ಲಿದ್ದಾರೆ. ವಿಶ್ವವಿದ್ಯಾಲಯಗಳು ಮತ್ತು ಬ್ಯಾಂಕ್‌ಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯ ತೀರಾ ಕಡಿಮೆ. ಯಾವುದೇ ರಾಜ್ಯದಲ್ಲೂ ಸರಕಾರಿ ಸೇವೆಯಲ್ಲಿ ಅವರ ಸಂಖ್ಯೆಯು ಅವರ ಜನಸಂಖ್ಯೆಗೆ ಅನುಗುಣವಾಗಿ ಇಲ್ಲ. ಪೊಲೀಸ್ ನೌಕರಿಯಲ್ಲಿ ಅವರ ಪ್ರಮಾಣ ಶೇ. 6 ರಷ್ಟಿದ್ದರೆ ಆರೋಗ್ಯ ಕ್ಷೇತ್ರದಲ್ಲಿ ಶೇ. 4.4 ಮತ್ತು ಸಾರಿಗೆ ಕ್ಷೇತ್ರದಲ್ಲಿ ಶೇ. 6.5 ಪ್ರಾತಿನಿಧ್ಯವನ್ನು ಮಾತ್ರ ಅವರು ಹೊಂದಿದ್ದಾರೆ.

**5.** ಭಾರತದ ವಿವಿಧ ಹೈಕೋರ್ಟ್‌ಗಳ ಒಟ್ಟಾರೆ 310 ನ್ಯಾಯಮೂರ್ತಿಗಳ ಪೈಕಿ (ಏಪ್ರಿಲ್ 1, 1980ರಲ್ಲಿ ಇದ್ದಂತೆ) ಮುಸ್ಲಿಮರ ಸಂಖ್ಯೆ ಕೇವಲ 14 ಮಾತ್ರ.

**6.** ಮುಸ್ಲಿಮರಲ್ಲಿ ಹಣಕಾಸು ನೆರವು ಪಡೆದವರ ಪ್ರಮಾಣ ಶೇ 4.3ರಷ್ಟು; ಇವರಿಗೆ ನೀಡಿರುವ ಸಾಲದ ಪ್ರಮಾಣ ಶೇ. 2.02ರಷ್ಟು; ಒಟ್ಟಾರೆ ಹಣಕಾಸು ವಲಯದಿಂದ ಹಂಚಿಕೆಯಾದ ಕಡಿಮೆ ಬಡ್ಡಿಯ ಸಾಲದ ಪೈಕಿ ಮುಸ್ಲಿಮರಿಗೆ ಸಿಕ್ಕಿದ್ದು ಶೇ. 3.76ರಷ್ಟು ಮಾತ್ರ.

**7.** ದೇಶದ ಉನ್ನತ ಕೈಗಾರಿಕಾ ಸಂಸ್ಥೆಗಳ ಪೈಕಿ ಹೆಚ್ಚಿನವು ಮುಸ್ಲಿಮರ

ಮಾಲಿಕತ್ವದಲ್ಲಾಗಲೀ ನಿಯಂತ್ರಣದಲ್ಲಾಗಲಿ ಇಲ್ಲ. ಕೈಗಾರಿಕಾ ಪರವಾನಿಗೆಗಳ ಪೈಕಿ ಮುಸ್ಲಿಮರಿಗೆ ದೊರೆತಿರುವುದು ಶೇ. 2ಕ್ಕೂ ಕಡಿಮೆ. ಮುಸ್ಲಿಮರು ಹೆಚ್ಚಾಗಿ ಕರಕುಶಲ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದು ಇಲ್ಲಿ ಇವರ ಪ್ರಾತಿನಿಧ್ಯ ಶೇ. 52ರಷ್ಟು. ಆದರೆ ಮಾಲಿಕತ್ವಕ್ಕೆ ಬಂದಾಗ ಇವರ ಪ್ರಾತಿನಿಧ್ಯ ಶೇ. 4.4 ಮಾತ್ರ.

ಭಾರತೀಯ ಮುಸ್ಲಿಮರಿಗೆ ರಾಜಕೀಯ ಭಾಗೀದಾರಿಕೆಯನ್ನು ನಿರಾಕರಿಸುವ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ ಎಂಬ ಆರೋಪದಲ್ಲೂ ಸ್ವಲ್ಪ ಮಟ್ಟಿಗಿನ ತಥ್ಯ ಇದೆ ಎಂಬುದನ್ನು ಸಮಿತಿ ತನ್ನ ಸಮೀಕ್ಷೆಯ ವೇಳೆ ಕಂಡುಕೊಂಡಿದೆ. ಉದಾಹರಣೆಗೆ ಬಿಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಹೆಚ್ಚಿನೆಲ್ಲ ಭಾರತೀಯ ರಾಜ್ಯಗಳಲ್ಲಿ ಮುಸ್ಲಿಮ್ ಬಾಹುಳ್ಯವಿರುವ ಪ್ರದೇಶಗಳನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಾದ ಕ್ಷೇತ್ರವೆಂದು ಘೋಷಿಸಲಾಗಿದೆ ಎಂಬ ಅಂಶವನ್ನು ವರದಿ ಎತ್ತಿ ಹೇಳಿದೆ.

## ತುಷ್ಟೀಕರಣ ?

ಭಾರತೀಯ ಮುಸ್ಲಿಮರ ಬಗ್ಗೆ ನಡೆಸಿದ ಸಮೀಕ್ಷೆಯಿಂದ ಕಂಡುಕೊಳ್ಳಲಾದ ಇನ್ನೊಂದು ಅಂಶವೂ ಇಲ್ಲಿ ಉಲ್ಲೇಖನೀಯ. ವರದಿಯ ಪ್ರಕಾರ ಹೆಚ್ಚಿನೆಲ್ಲ ಸರಕಾರಗಳು ವಿವಿಧ ಆಯೋಗಗಳು ಮಾಡಿದ ಶಿಫಾರಸುಗಳಿಗೆ ಯಾವುದೇ ಮನ್ನಣೆಯನ್ನು ನೀಡದೆ ಆಯೋಗಗಳನ್ನೇ ವೋಟು ಪಡೆಯುವ ಗಿಮ್ಮಿಕ್ ಆಗಿ ಬಳಸುತ್ತಿದ್ದು ಮುಸ್ಲಿಮರ ಹಿಂದುಳಿಕೆಯ ಬಗ್ಗೆ ತಮಗೆ ಕಾಳಜಿ ಇದೆ ಎಂದು ತೋರ್ಪಡಿಸಲು ಪ್ರಯತ್ನಿಸುತ್ತವೆಯೇ ಹೊರತು ಅವರನ್ನು ಮೇಲೆತ್ತುವ ಯಾವುದೇ ಪ್ರಯತ್ನವನ್ನು ಮಾಡುತ್ತಿಲ್ಲ.

ಭಾರತೀಯ ಮುಸ್ಲಿಮರ ಆರ್ಥಿಕ ಪರಿಸ್ಥಿತಿಯು ಅತ್ಯಂತ ಶೋಚನೀಯವಾಗಿದೆ ಎಂಬುದನ್ನು ಸಮೀಕ್ಷೆಯು ಸ್ಪಷ್ಟಪಡಿಸಿದೆ. "ಮುಸ್ಲಿಮರ ಪೈಕಿ ಶೇ. 30.4 ಜನರು 10,000 ರೂಪಾಯಿಗಿಂತಲೂ ಕಡಿಮೆ ವಾರ್ಷಿಕ ಆದಾಯದೊಂದಿಗೆ ಜೀವಿಸುತ್ತಿದ್ದಾರೆ. ಶೇ. 24.4 ಮಂದಿಯ ವಾರ್ಷಿಕ ಆದಾಯವು 10,000 ರೂಪಾಯಿಯಿಂದ 20,000 ರೂಪಾಯಿ ನಡುವೆ ಇದೆ. ಶೇ. 7.5 ಮುಸ್ಲಿಮರ ವಾರ್ಷಿಕ ಆದಾಯವು ಇಪ್ಪತ್ತರಿಂದ ಮೂವತ್ತು ಸಾವಿರ ರೂಪಾಯಿ ನಡುವೆ ಇದೆ. ಶೇ. 3.8 ಮಂದಿ ಮೂವತ್ತರಿಂದ ನಲ್ವತ್ತು ಸಾವಿರ ರೂಪಾಯಿ ವಾರ್ಷಿಕ ವೇತನ ಪಡೆಯುತ್ತಿದ್ದು ನಲ್ವತ್ತರಿಂದ ಐವತ್ತು ಸಾವಿರದ ನಡುವಿನ ವೇತನ ಪಡೆಯುವ ವರ್ಗದ ಪ್ರಮಾಣ ಶೇ. 1 ಮಾತ್ರ. 50,000 ರೂಪಾಯಿಗೂ ಹೆಚ್ಚು ವಾರ್ಷಿಕ ವೇತನ ಪಡೆಯುವ ಮುಸ್ಲಿಮರ ಪ್ರಮಾಣ ಶೇ. 5.6. ಮುಸ್ಲಿಮರ ಪೈಕಿ ಶೇ. 27.6 ಮಂದಿ ಕೊಳೆಗೇರಿಗಳ ಜೋಪಡಿಯಲ್ಲಿ

ಬದುಕು ಸಾಗಿಸುತ್ತಿದ್ದಾರೆ. ಶೇ. 46.1ರಷ್ಟು ಮುಸ್ಲಿಮರ ಮನೆಗಳಲ್ಲಿ ಒಂದು ಕೊಠಡಿ ಮಾತ್ರ ಇದೆ."

ಒಂದು ವೇಳೆ ಭಾರತೀಯ ಮುಸ್ಲಿಮರನ್ನು ಸ್ವಾತಂತ್ರ್ಯಾನಂತರದ ಸರಕಾರಗಳು ಓಲೈಸುತ್ತಾ ಬಂದಿವೆ ಎಂಬ ಆರೋಪ ನಿಜವೇ ಆಗಿದ್ದರೆ ಅವರ ಪರಿಸ್ಥಿತಿ ಇಷ್ಟೊಂದು ಶೋಚನೀಯವಾಗಿರುತ್ತಿತ್ತೇ? ವಾಸ್ತವವೆಂದರೆ ಮುಸ್ಲಿಮರನ್ನು ಯಾವ ಸರಕಾರವೂ ತುಷ್ಟೀಕರಿಸಿಲ್ಲ. ಬದಲಿಗೆ ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಮುಸ್ಲಿಮರನ್ನು ಓಲೈಕೆ ಮಾಡುವ ನಾಟಕವಾಡುತ್ತಾ ಬಂದಿವೆ.

ಭಾರತೀಯ ರಾಜಕಾರಣದಲ್ಲಿ ವೋಟ್ ಬ್ಯಾಂಕ್ ಎಂಬುದು ಅತ್ಯಂತ ದೊಡ್ಡ ಖಳನಾಯಕ. ಮಂಡಲ ಆಯೋಗವನ್ನು ಅನುಷ್ಠಾನಗೊಳಿಸಿದ್ದು ಹಿಂದೂಗಳಲ್ಲಿರುವ ಹಿಂದುಳಿದ ವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಅವಕಾಶ ಕಲ್ಪಿಸುವುದಕ್ಕಾಗಿ. ಅದರಿಂದ ಮುಸ್ಲಿಮರಿಗೆ ಯಾವುದೇ ಲಾಭವಾಗಲಿಲ್ಲ. ನಿಜವಾಗಿ 'ಓಲೈಕೆ'ಯ ಲಾಭ ಸಿಕ್ಕಿದ್ದು ಹಿಂದೂ ಸಮುದಾಯದ ಹಿಂದುಳಿದ ವರ್ಗಗಳಿಗೆ. ಉತ್ತರ ಭಾರತದಲ್ಲಿರುವ ಶೇ. 20 ಹಿಂದೂಗಳು ಮೇಲ್ವರ್ಗಕ್ಕೆ ಸೇರಿದವರು. ಅವರ ಹಿತಾಸಕ್ತಿಗಳಿಗೆ ಮಂಡಲ್ ಧಕ್ಕೆಯುಂಟು ಮಾಡಿತು. ಮಂಡಲ್ ವರದಿಯ ಶಿಫಾರಸುಗಳ ವಿರುದ್ಧ ಬೀದಿಗಿಳಿದು ಹಿಂಸಾತ್ಮಕ ಪ್ರತಿಭಟನೆ ನಡೆಸಿದ್ದು ಇದೇ ವರ್ಗ. ಇದು ತಮ್ಮದೇ ಸಮುದಾಯಕ್ಕೆ ಸೇರಿದ ಅವಕಾಶವಂಚಿತರ ವಿರುದ್ಧ ಮೇಲ್ವರ್ಗದವರು ನಡೆಸಿದ ಹೋರಾಟವಾಗಿತ್ತು.

ಭಾರತದಲ್ಲಿ ಮುಸ್ಲಿಮರ ಸ್ಥಿತಿಗತಿಗೆ ಸಂಬಂಧಿಸಿದ ರಾಜೇಂದ್ರ ಸಾಚಾರ್ ಸಿದ್ಧಪಡಿಸಿದ ವರದಿಯು ದಿಗ್ಭ್ರಮೆಗೊಳಿಸುವಂತಿದೆ. ಮಾನವ ಅಭಿವೃದ್ಧಿ ಸೂಚಿಯ ಎಲ್ಲ ಮಾನಕಗಳಲ್ಲೂ ಮುಸ್ಲಿಮ್ ಅಲ್ಪಸಂಖ್ಯಾತರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವು ಕುಸಿಯುತ್ತಾ ಸಾಗಿದೆ. ನೌಕರಿಯಲ್ಲಿ ಅವರ ಪ್ರಾತಿನಿಧ್ಯವೂ ಶೋಚನೀಯವಾಗಿದ್ದು ಬಹುಸಂಖ್ಯಾತ ಮುಸ್ಲಿಮರು ಬಡತನದ ರೇಖೆಗಿಂತ ಕೆಳಗಿದ್ದಾರೆ ಮತ್ತು ಸಾಕ್ಷರತೆಯಿಂದ ವಂಚಿತರಾಗಿದ್ದಾರೆ. ಯಾವುದೇ ಸಕಾರಾತ್ಮಕ ಉಪಕ್ರಮಗಳಿಲ್ಲದೇ ಇದ್ದರೆ ಈ ಸಮುದಾಯವು ಮತ್ತಷ್ಟು ದೊಡ್ಡ ಪ್ರಪಾತಕ್ಕೆ ಕುಸಿಯುವ ಸಾಧ್ಯತೆಯಿದೆ. ಅವರ ರಾಜಕೀಯ ಪ್ರಾತಿನಿಧ್ಯ ಗಣನೀಯವಾಗಿ ಕುಸಿಯಲಾರಂಭಿಸಿದ್ದು ಸುರಕ್ಷತೆ ಮತ್ತು ಸಮಾನತೆ ಇಲ್ಲದ ಕಾರಣ ಅವರು ಅಭದ್ರತೆಯ ಸುಳಿಗೆ ಸಿಲುಕಿ ತಮ್ಮ ಅಲ್ಪಸಂಖ್ಯಾತ ಅನನ್ಯತೆಗೆ ಹೆಚ್ಚು ಹೆಚ್ಚು ಜೋತುಬೀಳತೊಡಗಿದ್ದಾರೆ. ಕೋಮುಗಲಭೆ ಮತ್ತು ತದನಂತರದ ಧ್ರುವೀಕರಣವು ಗಾಯಕ್ಕೆ ಉಪ್ಪು ಸುರಿಯುವ ಕೆಲಸವನ್ನಷ್ಟೆ ಮಾಡುತ್ತಿದೆ. ಹೀಗೆ ಮೂಲೆಗೊತ್ತಲ್ಪಟ್ಟಾಗ ಒಂದು ಸಮಾಜದ ಜೀವನಮಟ್ಟ ಮತ್ತಷ್ಟು ಕುಸಿಯುತ್ತದೆ ಮತ್ತು ಅವರ ಮನೋಭಾವವನ್ನೇ ಬದಲಾಯಿಸಿಬಿಡುತ್ತದೆ. ಇದು ಪ್ರತಿಗಾಮಿ

ಚಿಂತನೆಗಳಿಗೆ ದಾರಿ ಮಾಡಿಕೊಡುವ ಮೂಲಕ ಸಮುದಾಯಗಳ ನಡುವಣ ಭಾವನಾತ್ಮಕ ಸಂಬಂಧದ ಮಧ್ಯೆ ಗೋಡೆ ಕಟ್ಟಿ ಬಿಡುತ್ತದೆ.

ಅಲ್ಪಸಂಖ್ಯಾತರ ಬಗ್ಗೆ ಸಮಾಜದ ಅಧಿಕಾರಿ ವರ್ಗವೂ ತಿರಸ್ಕಾರದ ಧೋರಣೆ ಹೊಂದಿದ್ದು ಅವರನ್ನು ಎರಡನೇ ದರ್ಜೆ ನಾಗರಿಕರ ಸ್ಥಾನಕ್ಕೆ ತಳ್ಳಿಬಿಟ್ಟಿದೆ. ಕ್ರಮೇಣ ಎರಡು ರೀತಿಯ ಧೋರಣೆ ಮತ್ತು ನೀತಿಗಳು ಬೆಳೆಯುತ್ತಿದ್ದು ಸ್ಥಿತಿವಂತ ಮತ್ತು ಶಕ್ತಿಶಾಲಿಯಾಗಿರುವ ಬಹುಸಂಖ್ಯಾತರಿಗೊಂದು ನಿಯಮ ಮತ್ತು ಅಲ್ಪಸಂಖ್ಯಾತರಿಗೊಂದು ನಿಯಮ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಪಸಂಖ್ಯಾತರನ್ನು ಎರಡನೇ ದರ್ಜೆಯ ನಾಗರಿಕರ ಸ್ಥಾನಕ್ಕೆ ತಳ್ಳುವ ಕೆಲವು ತೀವ್ರಗಾಮಿ ಸಂಘಟನೆಗಳು ಮತ್ತು ರಾಜಕೀಯ ಶಕ್ತಿಗಳ ಅಜೆಂಡಾ ಈಗಾಗಲೇ ಕಾರ್ಯಗತವಾಗತೊಡಗಿದೆ.

"ಮುಸ್ಲಿಮರನ್ನು ತುಷ್ಟೀಕರಿಸಲಾಗುತ್ತಿದೆ" ಎಂಬ ಹೊಣೆಗೇಡಿ ಹೇಳಿಕೆಗಳಿಗೆ ಕಡಿವಾಣ ಹಾಕಿ ಮುಸ್ಲಿಮ್ ಸಮುದಾಯವನ್ನು ಅಭಿವೃದ್ಧಿಯ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವ ಮತ್ತು ತನ್ಮೂಲಕ ಅವರನ್ನು ಮುಖ್ಯವಾಹಿನಿಯಲ್ಲಿ ಸೇರ್ಪಡೆಗೊಳಿಸಿ ಇತರ ಸಮುದಾಯಗಳ ಜತೆಗೆ ಶಾಂತಿ ಮತ್ತು ಸೌಹಾರ್ದದಿಂದ ಬದುಕಲು ಸಾಧ್ಯವಾಗುವ ಪ್ರಯತ್ನಗಳು ಇಂದು ತುರ್ತಾಗಿ ನಡೆಯಬೇಕು.

# ಟಿಪ್ಪು ಸುಲ್ತಾನ್: ದೂಷಣೆಗೀಡಾದ ದೇಶಪ್ರೇಮಿ

ಹದಿನೆಂಟನೇ ಶತಮಾನದ ಮೈಸೂರಿನ ಆಡಳಿತಗಾರ ಟಿಪ್ಪು ಸುಲ್ತಾನನ ವ್ಯಕ್ತಿತ್ವಕ್ಕೆ ಮಸಿಬಳಿಯಲು ಕೆಲವು ಪೂರ್ವಗ್ರಹಪೀಡಿತ ಇತಿಹಾಸಕಾರರು ನಿರಂತರ ಪ್ರಯತ್ನ ನಡೆಸಿದ್ದಾರೆ. ಇವರನ್ನು ಒಬ್ಬ ನಿರಂಕುಶಾಧಿಕಾರಿಯಂತೆಯೂ ಕೆಲವು ಸಂದರ್ಭಗಳಲ್ಲಿ ಮತಾಂಧ ಮುಸ್ಲಿಮ್ ಆಡಳಿತಗಾರನಂತೆಯೂ ಚಿತ್ರಿಸಲಾಗಿದೆ. ಬ್ರಿಟಿಷ್ ವಸಾಹತುಶಾಹಿ ಆಡಳಿತಗಾರರ ಜತೆ ಷಾಮೀಲಾದ ಜನರ ಮೇಲೆ ಇವರು ವಿಧಿಸುತ್ತಿದ್ದ ದಂಡವೂ ಸೇರಿದಂತೆ ಕೆಲವು ಉದಾಹರಣೆಗಳನ್ನು ಈ ನಿಟ್ಟಿನಲ್ಲಿ ಎತ್ತಿ ತೋರಿಸಲಾಗುತ್ತದೆ.

ಭಾರತದಲ್ಲಿ ಮುಸ್ಲಿಮ್ ಆಡಳಿತದ ಯುಗವನ್ನು ಕರಾಳವಾಗಿ ಚಿತ್ರಿಸಬಯಸುವ ಇತಿಹಾಸಕಾರರು ಸಾಮಾನ್ಯವಾಗಿ ಇಂತಹ ಪ್ರಯತ್ನಗಳಿಗೆ ಕೈಹಾಕುತ್ತಾರೆ. ಮುಸ್ಲಿಮ್ ಆಡಳಿತಗಾರರು ತಮ್ಮ ರಾಜಕೀಯ ವಿರೋಧಿಗಳ ವಿರುದ್ಧ ಎಸಗಿದ ಕೃತ್ಯಗಳನ್ನು ಎತ್ತಿ ತೋರಿಸಿ ನಿರ್ದಿಷ್ಟ ಅವಧಿಯ ಇತಿಹಾಸವನ್ನು ಕೋಮುಮಯಗೊಳಿಸಲಾಗುತ್ತಿದೆ. ತನ್ಮೂಲಕ ಮುಸ್ಲಿಮೇತರ ಪ್ರಜೆಗಳನ್ನೂ ಆಡಳಿತಗಾರರನ್ನೂ ಈ ದಬ್ಬಾಳಿಕೆಗಳಿಂದ ಸಂತ್ರಸ್ತರಾದವರೆಂಬಂತೆ ಬಿಂಬಿಸಲಾಗುತ್ತದೆ. ಇತಿಹಾಸವನ್ನು ದಾಖಲೀಕರಿಸುವಲ್ಲಿ ನಡೆದಿರುವ ಈ ಎಡವಟ್ಟಿಗೆ ಹೆಚ್ಚಾಗಿ ಬ್ರಿಟಿಷ್ ವಸಾಹತುಶಾಹಿ ಆಡಳಿತಗಾರರ ಆಶೀರ್ವಾದವೂ ಇತ್ತು. ಭಾರತದಲ್ಲಿ ತಮ್ಮ ಆಡಳಿತವನ್ನು ಸುಭದ್ರಗೊಳಿಸಲಿಕ್ಕಾಗಿ ಒಡೆದು ಆಳುವ ನೀತಿಯನ್ನು ಅನುಸರಿಸುವುದು ಅವರಿಗೆ ಅನಿವಾರ್ಯವಾಗಿತ್ತು.

ಇಂತಹ ವಿಕೃತ ಚಿತ್ರೀಕರಣದ ಬಹುದೊಡ್ಡ ಬಲಿಪಶುಗಳೆಂದರೆ ಟಿಪ್ಪು ಸುಲ್ತಾನ್ ಮತ್ತು ಆತನ ತಂದೆ ಹೈದರ್ ಆಲಿ. ತಮ್ಮ ಪ್ರಮುಖ ಎದುರಾಳಿಗಳಾಗಿದ್ದ ಈ ಇಬ್ಬರು ಆಡಳಿತಗಾರರ ಬಗ್ಗೆ ಬ್ರಿಟಿಷರಿಗೆ ಪೂರ್ವಗ್ರಹವಿತ್ತೆಂಬುದು ಸ್ಪಷ್ಟ. ಯಾಕೆಂದರೆ ಕ್ರಿ.ಶ. 1767ರ ಮೊದಲ ಮೈಸೂರು ಯುದ್ಧದಲ್ಲಿ (1767) ಇವರು ಬ್ರಿಟಿಷರನ್ನು ಮದ್ರಾಸ್‌ನ ಸೈಂಟ್ ಜಾರ್ಜ್ ಕೋಟೆಯವರೆಗೆ ಅಟ್ಟಿಸಿಕೊಂಡು ಹೋಗಿದ್ದರು. ಒಂದು ವಂಚಕ ಒಪ್ಪಂದ ನಡೆಯದೇ ಹೋಗಿದ್ದರೆ ದಕ್ಷಿಣ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಅಂದೇ

ಕೊನೆಯಾಗುತ್ತಿತ್ತು. ಈ ಹಿನ್ನಡೆಗಳು ಬ್ರಿಟಿಷರಿಗೆ ತಮ್ಮ ದ್ವೇಷೋನ್ಮಾದದ ಎಜೆಂಡಾವನ್ನು ಮತ್ತಷ್ಟು ತೀವ್ರವಾಗಿ ಮುಂದುವರಿಸಿಕೊಂಡು ಹೋಗಲು ಪ್ರೇರಣೆ ನೀಡಿತು. ಮುಸ್ಲಿಮೇತರ ಪ್ರಜೆಗಳೇ ದೊಡ್ಡ ಸಂಖ್ಯೆಯಲ್ಲಿರುವ ರಾಷ್ಟ್ರದಲ್ಲಿ ಮುಸ್ಲಿಮನೊಬ್ಬ ಆಡಳಿತಗಾರನಾಗಿ ಮುಂದುವರಿಯುವುದಕ್ಕೆ ವಿರೋಧಗಳನ್ನು ಅವರು ಸೃಷ್ಟಿಸತೊಡಗಿದರು. ಈ ಪ್ರಯತ್ನದಲ್ಲಿ ಅವರಿಗೆ ಹದಿನೆಂಟನೇ ಶತಮಾನದಲ್ಲೇ ಯಶಸ್ಸು ಸಿಗಲಿಲ್ಲ. ಆದರೆ ಕೋಮು ವಿಷಲಿಪ್ತ ಇತಿಹಾಸವು ತದನಂತರದ ಶತಮಾನಗಳ ಮೇಲೆ ತನ್ನ ಛಾಪನ್ನು ಬೀರುತ್ತಲೇ ಹೋಯಿತು. 1980ರ ದಶಕದ ನಂತರ ಪ್ರತ್ಯಕ್ಷಗೊಂಡ ಕಾವಿ ಇತಿಹಾಸಕಾರರ ಒಂದು ಸಣ್ಣ ಗುಂಪು ಇಂತಹ ಪಕ್ಷಪಾತಿ ವ್ಯಾಖ್ಯಾನಗಳ ಮೂಲಕ ಕೆಲವು ನಿರ್ದಿಷ್ಟ ಆಡಳಿತಗಾರರ ಬಗ್ಗೆ ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ಮತ್ತು ಪಠ್ಯಪುಸ್ತಕಗಳಲ್ಲಿ ತಪ್ಪು ಚಿತ್ರಣ ಮೂಡಿಸಲು ಪ್ರಯತ್ನಿಸಿತು. ಟಿಪ್ಪು ಸುಲ್ತಾನರ ವಿಚಾರದಲ್ಲಿ ಈ ಪ್ರಯತ್ನಗಳು ಕಳೆದ ಎರಡು ದಶಕಗಳಲ್ಲಿ ಬಹುತೇಕ ಯಶಸ್ವಿಯಾಗಿವೆ ಎಂಬುದು ಆಶ್ಚರ್ಯಕರವಾದರೂ ಸತ್ಯ.

ದೇಶದ ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿಯಲ್ಲಿ ಟಿಪ್ಪುವಿನ ಹೆಸರು ಸೇರ್ಪಡೆಗೊಳ್ಳುವುದನ್ನು ವಿರೋಧಿಸಲಾಗುತ್ತಿದೆ ಎಂಬುದು ವಿಚಿತ್ರವೇ. ನಿಜವಾಗಿ ಈ ಹೀರೋಗಳ ಪಟ್ಟಿಯಲ್ಲಿ ಟಿಪ್ಪುವಿನ ಹೆಸರು ಮುಂಚೂಣಿಯಲ್ಲಿರಬೇಕಾಗಿತ್ತು. ಯಾಕೆಂದರೆ ಇವರು ಬ್ರಿಟಿಷರನ್ನು ಉಪಖಂಡದಿಂದ ತೊಲಗಿಸಲು ಹೋರಾಟ ಮಾಡಿದ್ದೇ ಅಲ್ಲ, ಇದಕ್ಕಾಗಿ ತನ್ನ ಪ್ರಾಣವನ್ನೂ ಅರ್ಪಿಸಿದರು. ಅಷ್ಟೇ ಅಲ್ಲ, ಮೂರನೇ ಮೈಸೂರು ಯುದ್ಧದಲ್ಲಿ ಮೇಲುಗೈ ಸಾಧಿಸಿದ ಬ್ರಿಟಿಷರಿಗೆ ನಷ್ಟ ತುಂಬಿಸಿಕೊಡಲು ಒಪ್ಪಿಕೊಂಡ ಷರತ್ತಿನ ಮೇರೆಗೆ 2.3 ಕೋಟಿ ರೂಪಾಯಿಯ ಬದಲಿಗೆ ತನ್ನ ಇಬ್ಬರು ಪುತ್ರರನ್ನು ಒತ್ತೆ ಇಡುವುದಕ್ಕೂ ಟಿಪ್ಪು ಹಿಂಜರಿಯಲಿಲ್ಲ.

ಟಿಪ್ಪುವಿಗೆ ಇಸ್ಲಾಮೀ ಸಂಪ್ರದಾಯಗಳು ಮುಖ್ಯವಾಗಿದ್ದವು ಎಂಬುದೇನೋ ನಿಜ ಆದ್ದರಿಂದಲೇ ಇವರು ತನ್ನ ಸಾಮ್ರಾಜ್ಯವನ್ನು 'ಸಲ್ತನತೆ ಖುದಾದಾದ್' ಅರ್ಥಾತ್ 'ದೇವರಿಂದ ಸಿಕ್ಕಿದ ಸರಕಾರ' ಎಂದು ಹೆಸರಿಸಿದ್ದರು. ಆದರೆ ಇವರು ಧಾರ್ಮಿಕ ಸಹಬಾಳ್ವೆಯಲ್ಲಿ ಅತಿಯಾದ ನಂಬಿಕೆ ಇಟ್ಟಿದ್ದರು ಮತ್ತು ತನ್ನ ಪ್ರಜೆಗಳ ಕಲ್ಯಾಣಕ್ಕಾಗಿ – ಹಿಂದೂ ಮುಸ್ಲಿಮ್ ಎಂಬ ಭೇದವಿಲ್ಲದೆ, ಮಂದಿರ–ಮಸೀದಿ ಎಂಬ ಭೇದವಿಲ್ಲದೆ – ಪ್ರಯತ್ನಿಸಿದ್ದ. ಇವರು ಹಿಂದೂಗಳನ್ನು ತನ್ನ ಆಡಳಿತದಲ್ಲಿ ಸೇರಿಸಿಕೊಂಡಿದ್ದು ಮಾತ್ರವಲ್ಲ, ತನ್ನ ಆಸ್ಥಾನದಲ್ಲೇ ಕೆಲವು ಉನ್ನತ ಸ್ಥಾನಗಳಿಗೆ ಅವರನ್ನು ನೇಮಕ ಮಾಡಿದ್ದರು. ಇವರು ಪೂರ್ಣಯ್ಯನನ್ನು 'ಮೀರ್ ಅಸಫ್' ಅಥವಾ ದಿವಾನನನ್ನಾಗಿಯೂ ಕೃಷ್ಣ ರಾವ್‌ನನ್ನು ಹಣಕಾಸು ಮಂತ್ರಿಯಾಗಿಯೂ ನೇಮಿಸಿದ್ದರು. ಶಾಮ ರಾವ್‌ಗೆ ಅಂಚೆ ಮತ್ತು ಪೊಲೀಸ್

ಇಲಾಖೆಯ ಹೊಣೆಯನ್ನೂ, ಶ್ರೀನಿವಾಸ್ ರಾವ್, ಅಪ್ಪಾಜಿ ರಾವ್ ಮತ್ತು ಮೂಲ್ ಚಂದ್‌ರನ್ನು ಕ್ರಮವಾಗಿ ಮದ್ರಾಸ್, ಪೂನಾ ಮತ್ತು ದಿಲ್ಲಿಯ ರಾಯಭಾರಿಗಳನ್ನಾಗಿಯೂ ನೇಮಿಸಿಕೊಂಡಿದ್ದ. ಸುಬ್ಬಾ ರಾವ್ ಆತನ ಆಪ್ತ ಸಹಾಯಕನಾಗಿದ್ದ. ನಾಯಕ್ ರಾವ್ ಮತ್ತು ನಾಯಕ್ ಸಂಗಣ್ಣ ಇವರ ಸಹಾಯಕರಾಗಿದ್ದರು. ನಾಣಯ್ಯ ಇವರ ಲೆಕ್ಕಾಧಿಕಾರಿಯಾಗಿದ್ದ. ನಾಗಪ್ಪಯ್ಯ ಕೊಡಗಿನಲ್ಲಿ ಆತನ ದಂಡನಾಯಕನಾಗಿದ್ದ. ಹರಿಸಿಂಗ್ ಸೇನೆಯ ಒಂದು ವಿಭಾಗದ ಮುಖ್ಯಸ್ಥನಾಗಿದ್ದ. ಮೂರು ಸಾವಿರ ಕುದುರೆಗಳನ್ನೊಳಗೊಂಡ ಅಶ್ವದಳದ ಮುಖ್ಯಸ್ಥ ಶಿವಾಜಿಯಾಗಿದ್ದ. ಇತರ ಸಮುದಾಯಗಳ ಜನರನ್ನು ದಮನಿಸುತ್ತಿದ್ದ ಯಾವುದೇ ಆಡಳಿತಗಾರ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಮತ್ತು ಮುಖ್ಯ ಸ್ಥಾನಗಳಲ್ಲಿ ಅವರನ್ನು ನೇಮಿಸಿಕೊಳ್ಳಲು ಸಾಧ್ಯವಿರಲಿಲ್ಲ ಎಂಬುದು ಸ್ಪಷ್ಟ.

ದೇವಸ್ಥಾನಗಳಿಗೆ ಟಿಪ್ಪು ಕೊಟ್ಟ ಉಡುಗೊರೆಗಳ ಬಗ್ಗೆ ಹೇಳಲು ಈ ಪುಟ್ಟ ಲೇಖನದಲ್ಲಿ ಸಾಧ್ಯವಾಗದು. ಆದರೆ ಒಂದು ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಬೇಕು. ಟಿಪ್ಪು ತನ್ನ ಜಾತ್ಯತೀತತೆಯನ್ನು ತೋರ್ಪಡಿಸಲಿಕ್ಕಾಗಿ ಇದನ್ನು ಮಾಡಲಿಲ್ಲ. ಯಾಕೆಂದರೆ ಒಂದೋ ಅಂತಹ ಕಲ್ಪನೆಗಳೇ ಅಂದಿನ ಕಾಲದಲ್ಲಿ ಜಾರಿಯಲ್ಲಿರಲಿಲ್ಲ ಇಲ್ಲವೇ ಅದನ್ನು ತೋರ್ಪಡಿಸುವ ಅಗತ್ಯವೂ ಇರಲಿಲ್ಲ. ತನ್ನ ಪ್ರಜೆಗಳನ್ನು ಖುಷಿ ಪಡಿಸುವುದು ಮತ್ತು ಪರಂಪರಾಗತವಾಗಿ ತನ್ನ ಪ್ರಜೆಗಳಿಗೆ ಸಲ್ಲಬೇಕಾದ ಸವಲತ್ತುಗಳನ್ನು ನೀಡುವುದಷ್ಟೆ ಆಡಳಿತಗಾರನ ಮುಖ್ಯ ಗುರಿಯಾಗಿತ್ತು.

ಆದರೆ ಕಣ್ಣಿಗೆ ಪಟ್ಟಿ ಹಚ್ಚಿಕೊಂಡಿರುವ ಈ ಇತಿಹಾಸಕಾರರು ಅಂದು ಪ್ರಚಲಿತದಲ್ಲಿದ್ದ ರಾಜಕೀಯ ಹಗ್ಗಜಗ್ಗಾಟವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಅಂದು ಮಿತ್ರರು ಯಾರು ಮತ್ತು ಶತ್ರುಗಳು ಯಾರು ಎಂಬುದು ಬ್ರಿಟಿಷರಿಗೆ ಯಾರು ನಿಷ್ಠರಾಗಿದ್ದಾರೆ ಮತ್ತು ಯಾರು ಅವರ ಹಿಡಿತದಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂಬುದರ ಆಧಾರದಲ್ಲಿ ನಿರ್ಧಾರವಾಗುತ್ತಿತ್ತು. ಕೊಡಗಿನ ಜನರನ್ನು ಮತ್ತು ಕೇರಳದ ನಾಯರ್‌ಗಳನ್ನು ಹದ್ದುಬಸ್ತಿನಲ್ಲಿಡಲು ಟಿಪ್ಪುವಿಗೆ ಯುದ್ಧ ಮಾಡಲೇಬೇಕಾಗಿ ಬಂತು. ಆದರೆ ಮುಸ್ಲಿಮರೆಂಬ ಕಾರಣಕ್ಕೆ ಕರ್ನಾಟಕದ ನವಾಬರ ಮೇಲೆ ಟಿಪ್ಪು ಕರುಣೆ ತೋರಲಿಲ್ಲ. ಬ್ರಿಟಿಷ್ ಏಜೆಂಟರಾಗಿ ಮಾರ್ಪಟ್ಟಿದ್ದ ನವಾಬರ ವಿಚಾರದಲ್ಲಿ ಟಿಪ್ಪು ನಿರ್ದಯಿಯಾಗಿದ್ದ. **'ಔರಂಗಜೇಬ್ ಅಂಡ್ ಟಿಪ್ಪು ಸುಲ್ತಾನ್: ಎವೊಲೂಷನ್ ಆಫ್ ದೆಯರ್ ರಿಲಿಜಿಯಸ್ ಪಾಲಿಸೀಸ್'** ಎಂಬ ಕೃತಿಯಲ್ಲಿ ಡಾ. ಬಿ.ಎನ್. ಪಾಂಡೆ ಹೀಗೆ ಬರೆಯುತ್ತಾರೆ:

> "ಟಿಪ್ಪು ಕೊಡಗಿನ ಹಿಂದೂಗಳನ್ನು ಮಂಗಳೂರಿನ ಕ್ರೈಸ್ತರನ್ನು ಮತ್ತು ಮಲಬಾರ್‌ನ ನಾಯರ್‌ಗಳನ್ನು ಸದೆಬಡಿದಿದ್ದರೆ ಅದಕ್ಕೆ ಕಾರಣ

> ಅವರೆಲ್ಲರೂ ಬ್ರಿಟಿಷರೊಂದಿಗೆ ಸೇರಿ ಆತನ ಅಧಿಕಾರವನ್ನು ಪ್ರಶ್ನಿಸಲಾರಂಭಿಸಿದ್ದರು. ಇಂತಹ ಪ್ರವೃತ್ತಿಗಳು ಕಾಣಿಸಿಕೊಂಡಾಗ ಮಲಬಾರ್‌ನ ಮಾಪಿಳ್ಳೆಗಳನ್ನಾಗಲೀ ಮಹಾದೇವಿ ಮುಸ್ಲಿಮರನ್ನಾಗಲೀ, ಸವಣೂರ್‌ನ ನವಾಬರನ್ನಾಗಲೀ ನಿಜಾಮರನ್ನಾಗಲೀ ಆತ ಶಿಕ್ಷಿಸದೆ ಬಿಡಲಿಲ್ಲ."

ಆದ್ದರಿಂದ ಟಿಪ್ಪುರನ್ನು ಒಬ್ಬ ತೀವ್ರವಾದಿ ಎಂದು ಕರೆಯುವುದು ತಪ್ಪು. ತನ್ನ ಆಡಳಿತವನ್ನು ಕಿತ್ತೊಗೆಯಲಿಕ್ಕಾಗಿ ಬ್ರಿಟಿಷರ ಜತೆಗೆ ಕೈಜೋಡಿಸಿದ್ದವರ ವಿರುದ್ಧ ಆತ ನಿಷ್ಕರುಣಿಯಾಗಿದ್ದ. ಆದ್ದರಿಂದ ಟಿಪ್ಪುರ ಈ ಗುಣ ರಾಜಕೀಯ ಪ್ರೇರಿತವೇ ಹೊರತು ಅದಕ್ಕೂ ಧರ್ಮಕ್ಕೂ ಯಾವುದೇ ಸಂಬಂಧ ಇಲ್ಲ. ಹಾಗಲ್ಲದಿರುತ್ತಿದ್ದರೆ ಮಹಾತ್ಮಾ ಗಾಂಧಿ ಟಿಪ್ಪುವನ್ನು **"ಹಿಂದೂ–ಮುಸ್ಲಿಮ್ ಏಕತೆಯ ಪ್ರತೀಕ"** ಎಂದು ಕರೆಯುತ್ತಿರಲಿಲ್ಲ. ಚರಿತ್ರೆಯನ್ನು ಹೇಗೆ ತಿರುಚಲಾಗಿದೆ ಎಂಬುದಕ್ಕೆ ಬಿ.ಎನ್. ಪಾಂಡೆ – ಇವರು ನಂತರ ಒರಿಸ್ಸಾದ ರಾಜ್ಯಪಾಲರಾದರು – ಒಂದು ಒಳ್ಳೆಯ ಉದಾಹರಣೆ ನೀಡುತ್ತಾರೆ. ಟಿಪ್ಪು ಕೊಡಗಿನಲ್ಲಿ ಜನರನ್ನು ಹತ್ಯೆ ಮಾಡಿದರ ಬಗ್ಗೆ ಪುಸ್ತಕವೊಂದರಲ್ಲಿ ಇರುವ ಉಲ್ಲೇಖದ ಬಗ್ಗೆ ಸಂಶೋಧನೆ ನಡೆಸಲಿಕ್ಕಾಗಿ ಪಾಂಡೆ ಮೈಸೂರ್ ಗಜೆಟಿಯರ್‌ನ್ನು ಪಡೆಯಲು ಪ್ರಯತ್ನಿಸಿದ ಕತೆಯಿದು.

ಅಲಹಾಬಾದ್‌ನ ಆಂಗ್ಲೋ–ಬೆಂಗಾಳಿ ಕಾಲೇಜಿನಲ್ಲಿ ಕಲಿಸಲಾಗುತ್ತಿದ್ದ ಇತಿಹಾಸದ ಪಠ್ಯಪುಸ್ತಕವೊಂದರಲ್ಲಿ 'ಟಿಪ್ಪು ತಮ್ಮನ್ನು ಬಲವಂತದಿಂದ ಇಸ್ಲಾಮಿಗೆ ಮತಾಂತರ ಮಾಡಬಹುದೆಂಬ ಹೆದರಿಕೆಯಿಂದ 3,000 ಬ್ರಾಹ್ಮಣರು ಆತ್ಮಹತ್ಯೆ ಮಾಡಿಕೊಂಡರು' ಎಂಬ ಉಲ್ಲೇಖವಿತ್ತು. ಕೋಲ್ಕತ್ತಾ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಹರಿಪ್ರಸಾದ್ ಶಾಸ್ತ್ರಿ ಇದನ್ನು ಬರೆದಿದ್ದರು. ಲೇಖಕರಿಗೆ ಪತ್ರ ಬರೆದ ಡಾ. ಪಾಂಡೆ, ಈ ಉಲ್ಲೇಖಕ್ಕೆ ಆಧಾರವೇನು ಎಂದು ಪ್ರಶ್ನಿಸಿದರು. ಹಲವು ಬಾರಿ ನೆನಪಿಸಿದ ಬಳಿಕ ಶಾಸ್ತ್ರಿ ತಾವು ಈ ಸಂಗತಿಯನ್ನು ಮೈಸೂರ್ ಗಜೆಟಿಯರ್‌ನಿಂದ ಪಡೆದಿರುವುದಾಗಿ ಉತ್ತರಿಸಿದರು. ಅನಂತರ ಮೈಸೂರು ವಿಶ್ವವಿದ್ಯಾಲಯದ ಆಗಿನ ಉಪಕುಲಪತಿ ಸರ್ ಬ್ರಜೇಂದ್ರನಾಥ ಸೀಲ್ ಅವರಿಗೆ ಪತ್ರ ಬರೆದ ಡಾ. ಪಾಂಡೆ, ಶಾಸ್ತ್ರಿಯವರು ತಮ್ಮ ಲೇಖನದಲ್ಲಿ ಹೇಳಿರುವ ಸಂಗತಿಗಳ ಬಗ್ಗೆ ಗಜೆಟಿಯರನ್ನು ಪರಿಶೀಲಿಸಿ ತಮಗೆ ತಿಳಿಸುವಂತೆ ವಿನಂತಿಸಿದರು. ಸರ್ ಬ್ರಜೇಂದ್ರ ಆ ಪತ್ರವನ್ನು ಪ್ರೊ. ಶ್ರೀಕಾಂತ್ ಅವರಿಗೆ ಕಳುಹಿಸಿ ಅಭಿಪ್ರಾಯ ಕೇಳಿದರು. ಪ್ರೊ. ಶ್ರೀಕಾಂತ್ ಆಗ ಗಜೆಟಿಯರ್‌ನ ಹೊಸ ಆವೃತ್ತಿಯ ಸಂಪಾದನೆಯ ಕಾರ್ಯದಲ್ಲಿ ತೊಡಗಿದ್ದರು. ಪ್ರೊ. ಶ್ರೀಕಾಂತ್ ಕೆಲವು ದಿನಗಳ ಬಳಿಕ ಡಾ. ಪಾಂಡೆಯವರಿಗೆ ಪತ್ರ ಬರೆದು, ಗಜೆಟಿಯರ್‌ನಲ್ಲಿ

ಅಂತಹ ಯಾವುದೇ ಘಟನೆಯ ಪ್ರಸ್ತಾಪ ಇಲ್ಲ ಎಂದು ತಿಳಿಸಿದರು. ಸ್ವತಃ ಇತಿಹಾಸಕಾರರಾಗಿದ್ದ ಪ್ರೊ. ಶ್ರೀಕಾಂತ್, ಟಿಪ್ಪು ಅವಧಿಯಲ್ಲಿ ಅಂತಹ ಯಾವುದೇ ಘಟನೆ ನಡೆದಿಲ್ಲ ಎಂಬುದು ತಮ್ಮ ವೈಯಕ್ತಿಕ ಅಭಿಪ್ರಾಯವೂ ಹೌದು ಎಂದು ತಿಳಿಸಿದರು. ಟಿಪ್ಪುವಿನ ಪ್ರಧಾನಿ ಮತ್ತು ಕಮಾಂಡರ್ ಇನ್ ಚೀಫ್ ಇಬ್ಬರೂ ಬ್ರಾಹ್ಮಣರಾಗಿದ್ದರೆಂದು ನೆನಪಿಸಿದ ಶ್ರೀಕಾಂತ್, ಸುಲ್ತಾನನ ಬೊಕ್ಕಸದಿಂದ ವಾರ್ಷಿಕ ಉಂಬಳಿಯನ್ನು ಪಡೆಯುತ್ತಿದ್ದ 156 ದೇವಸ್ಥಾನಗಳ ಪಟ್ಟಿಯನ್ನೂ ಕಳುಹಿಸಿಕೊಟ್ಟರು. ಟಿಪ್ಪು ಉಡುಗೊರೆಯಾಗಿ ನೀಡಿದ್ದ ಲಿಂಗವನ್ನು ನಂಜನಗೂಡಿನ ದೇವಸ್ಥಾನದಲ್ಲಿ ಇಂದು ಕೂಡಾ ಪೂಜಿಸಲಾಗುತ್ತಿದೆ. ಶ್ರೀರಂಗಪಟ್ಟಣದಲ್ಲಿರುವ ರಂಗನಾಥ ಮಂದಿರವು ಸುಲ್ತಾನನ ಅರಮನೆಯಿಂದ ಕೂಗಳತೆಯ ದೂರದಲ್ಲಿದ್ದು, ಆತನಿಗೆ ಮಂದಿರದ ಗಂಟೆ ಮತ್ತು ಮಸೀದಿಯ ಆದಾನ್‌ನ ಸದ್ದು ಏಕಪ್ರಕಾರ ಕೇಳಿಸುತ್ತಿತ್ತು ಮತ್ತು ಆತ ಎರಡಕ್ಕೂ ಗೌರವ ಸಲ್ಲಿಸುತ್ತಿದ್ದರು. (ಇಂಪ್ಯಾಕ್ಟ್ ಇಂಟರ್‌ನ್ಯಾಷನಲ್, ಲಂಡನ್, ಆವೃತ್ತಿ 28, ಜುಲೈ 1998).

ಡಾ. ಶಾಸ್ತ್ರಿಯವರು 'ಬ್ರಾಹ್ಮಣರ ಆತ್ಮಹತ್ಯೆ'ಗೆ ಸಂಬಂಧಿಸಿದ ಈ ಉಲ್ಲೇಖವನ್ನು ಕರ್ನಲ್ ಮೈಲ್ಸ್‌ನ ಹಿಸ್ಟರಿ ಆಫ್ ಮೈಸೂರ್‌ನಿಂದ ಪಡೆದುಕೊಂಡಿದ್ದರೆಂಬುದು ಅನಂತರ ಬಹಿರಂಗವಾಯಿತು. ಮೈಲ್ಸ್, ತಾನು ಈ ಉಲ್ಲೇಖವನ್ನು ವಿಕ್ಟೋರಿಯಾ ರಾಣಿಯ ಖಾಸಗಿ ಲೈಬ್ರರಿಯ ಪರ್ಷಿಯನ್ ಹಸ್ತಪ್ರತಿಯಿಂದ ಪಡೆದುಕೊಂಡಿರುವುದಾಗಿ ಹೇಳಿಕೊಂಡಿದ್ದರು. ಡಾ. ಪಾಂಡೆ ಇದನ್ನು ಬೆನ್ನಟ್ಟುತ್ತಾ ಹೋದಾಗ, ಅಂತಹ ಯಾವುದೇ ಹಸ್ತಪ್ರತಿ ರಾಣಿ ವಿಕ್ಟೋರಿಯಾ ಅವರ ಲೈಬ್ರರಿಯಲ್ಲಿ ಇಲ್ಲ ಎಂಬುದು ಮನದಟ್ಟಾಯಿತು. ಇಷ್ಟಾಗಿಯೂ ಡಾ.ಶಾಸ್ತ್ರಿಯವರ ಪುಸ್ತಕ ಅಸ್ಸಾಮ್, ಬಂಗಾಳ, ಬಿಹಾರ, ಒರಿಸ್ಸಾ, ಉತ್ತರ ಪ್ರದೇಶ, ರಾಜಸ್ತಾನ ಮತ್ತು ಮಧ್ಯಪ್ರದೇಶದಲ್ಲಿ ಹೈಸ್ಕೂಲ್ ಮಕ್ಕಳಿಗೆ ಚರಿತ್ರೆ ಪುಸ್ತಕವಾಗಿ ಬೋಧಿಸಲಾಗುತ್ತಿತ್ತು. ಹೀಗಾಗಿ, ಡಾ. ಪಾಂಡೆ ಈ ಪುಸ್ತಕಕ್ಕೆ ಸಂಬಂಧಿಸಿದಂತೆ ತಾವು ನಡೆಸಿದ ಪತ್ರ ವ್ಯವಹಾರದ ಸಂಪೂರ್ಣ ದಾಖಲೆಯನ್ನು ಕೋಲ್ಕತ್ತಾ ವಿಶ್ವವಿದ್ಯಾಲಯದ ಕುಲಪತಿ ಸರ್ ಅಶುತೋಷ್ ಚೌಧರಿಯವರಿಗೆ ಕಳುಹಿಸಿಕೊಟ್ಟರು. ಸರ್ ಅಶುತೋಷ್, ಆ ಪುಸ್ತಕವನ್ನು ಪಠ್ಯಕ್ರಮದಿಂದ ತೆಗೆದು ಹಾಕುವಂತೆ ಆದೇಶ ಜಾರಿಗೊಳಿಸಿದರು. ಆದರೂ 1972ರ ವೇಳೆಗೆ ಈ ಆತ್ಮಹತ್ಯೆಯ ಕಟ್ಟುಕತೆಯನ್ನು ಉತ್ತರ ಪ್ರದೇಶದ ಜೂನಿಯರ್ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ ಎಂಬುದನ್ನು ಕಂಡು ತಾವು ಬೆಚ್ಚಿಬಿದ್ದ ಬಗ್ಗೆ ಡಾ.ಪಾಂಡೆ ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಯಾವ ರೀತಿ ಸುಳ್ಳು ಸಂಗತಿಗಳು ಐತಿಹಾಸಿಕ ಸತ್ಯವಾಗಿ ಬದಲಾಗುತ್ತವೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ದೇವಸ್ಥಾನಗಳಿಗೆ ಟಿಪ್ಪು ನೀಡುತ್ತಿದ್ದ ಜಾಗೀರು (ಭೂಮಿ) ಮತ್ತು ಉಂಬಳಿಗಳ ಬಗ್ಗೆ ಬರೆಯಹೊರಟರೆ ಅದೇ ಕೆಲವು ಸಂಪುಟಗಳಾಗಬಹುದು. ಪೇಶ್ವೆ ಪಡೆಗಳು ಶೃಂಗೇರಿ ದೇವಸ್ಥಾನವನ್ನು ಹಾಳುಗೆಡವಿದಾಗ ಟಿಪ್ಪು ಭಾರಿ ನೊಂದಿದ್ದರು ಎಂಬುದು ಆ ದೇವಸ್ಥಾನದಲ್ಲಿ ಇತ್ತೀಚಿನ ದಶಕಗಳಲ್ಲಿ ಪತ್ತೆಯಾದ ದಾಖಲೆಗಳಿಂದ ಸ್ಪಷ್ಟವಾಗಿದೆ. ಅಷ್ಟೇ ಅಲ್ಲ, ಸರಕಾರದ ಹಣದಿಂದಲೇ ಇವರ ಮೂರ್ತಿಯನ್ನು ಮೂಲ ಸ್ಥಾನದಲ್ಲಿ ಪ್ರತಿಷ್ಠಾಪಿಸಿದ್ದರು ಎಂದೂ ಅದರಲ್ಲಿ ಉಲ್ಲೇಖಿಸಲಾಗಿದೆ. ತಮಿಳುನಾಡಿನ ಕಾಂಜೀವರಂ ದೇಗುಲದ ನಿರ್ಮಾಣವನ್ನು ಪೂರ್ಣಗೊಳಿಸಲು ಇವರು ಹತ್ತು ಸಾವಿರ ಹುನ್ (ಹಣ)ವನ್ನು ನೀಡಿದ್ದರು ಮತ್ತು ಮಂದಿರದ ನಿರ್ಮಾಣ ಪೂರ್ಣಗೊಂಡಾಗ ರಥೋತ್ಸವದಲ್ಲೂ ಪಾಲ್ಗೊಂಡಿದ್ದ. ಮೇಲ್ಕೋಟೆ ದೇಗುಲದ ಎರಡು ವಿಭಾಗಗಳ ನಡುವಿನ ವಿವಾದವನ್ನು ಟಿಪ್ಪು ಬಗೆಹರಿಸಿದ್ದರು. ಎರಡೂ ಗುಂಪುಗಳು ಇವರ ತೀರ್ಮಾನವೇ ಅಂತಿಮ ಎಂದು ಒಪ್ಪಿಕೊಂಡಿದ್ದವು. ದಿಂಡಿಗಲ್‌ನ ದಂಡಯಾತ್ರೆಯ ಸಂದರ್ಭದಲ್ಲಿ ತನ್ನ ಸೇನಾನಿಗಳಿಗೆ ದಕ್ಷಿಣದಿಂದ ಗುಂಡು ಹಾರಿಸ ಕೂಡದೆಂದೂ ಆ ದಿಕ್ಕಿನಲ್ಲಿ ರಾಜನ ಅರಮನೆ ಇದೆ ಎಂದೂ ಸೂಚಿಸಿದ್ದ ಟಿಪ್ಪು, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸುಲ್ತಾನಇವರನ್ನು ಹೊಗಳುವ ನೂರಾರು ಪದ್ಯಗಳಿವೆ. ಕರ್ನಾಟಕದ ತುಮಕೂರು ಜಿಲ್ಲೆಯ ಸೀಬಿಯಲ್ಲಿರುವ ಪ್ರಮುಖ ದೇವಸ್ಥಾನದ ಛಾವಣಿಯಲ್ಲಿರುವ ಕಲಾಕೃತಿಗಳಲ್ಲೂ ಇದು ಬಿಂಬಿತವಾಗಿದೆ. ಹಳೆ ಮೈಸೂರು ಪ್ರಾಂತ್ಯದ ಗ್ರಾಮೀಣ ಭಾಗಗಳಲ್ಲಿ ಸುಲ್ತಾನನ್ನು ಹೊಗಳುವ ಜನಪದ ಹಾಡುಗಳು ಪ್ರಚಲಿತದಲ್ಲಿವೆ. ಟಿಪ್ಪುವಿನ ಮರಣದ ಸುಮಾರು 50 ವರ್ಷಗಳ ನಂತರ ಛಾವಣಿಗಳ ಮೇಲೆ ಬಿಡಿಸಿದ ಚಿತ್ತಾರಗಳಲ್ಲಿ ಆತನ ಉಲ್ಲೇಖವಿದೆ ಎಂಬುದು ಮೈಸೂರಿನ ದೊರೆಯು ಮರಣ ನಂತರವೂ ಎಷ್ಟೊಂದು ಜನಪ್ರಿಯನಾಗಿದ್ದರು ಎಂಬುದನ್ನು ಸಾರಿ ಹೇಳುತ್ತದೆ.

ಟಿಪ್ಪು ತನ್ನ ಸಾಮ್ರಾಜ್ಯದ ಹಿಂದೂ ಪ್ರಜೆಗಳ ದ್ವೇಷ ಕಟ್ಟಿಕೊಂಡಿದ್ದರು ಎಂಬ ಆರೋಪ ನಿಜವಾಗಿದ್ದಲ್ಲಿ ಟಿಪ್ಪು ಯುದ್ಧಭೂಮಿಯಲ್ಲಿ ಶವವಾಗಿ ಮಲಗಿದಾಗ ಅಷ್ಟೊಂದು ಸಂಖ್ಯೆಯ ಜನರು ಬಂದು ಇವರಿಗೆ ನಮಸ್ಕರಿಸುತ್ತಿರಲಿಲ್ಲ. ಬ್ರಿಟಿಷ್ ಪಡೆಗಳು ಶ್ರೀರಂಗಪಟ್ಟಣದ ಮನೆಗಳನ್ನು ಕೊಳ್ಳೆ ಹೊಡೆಯುತ್ತಿದ್ದಾಗಲೇ ಭಾರಿ ಸಂಖ್ಯೆಯ ಹಿಂದೂ ಪ್ರಜೆಗಳು ಇವರ ಅರಮನೆಯ ಮುಂದೆ ಸೇರಿ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದರು. ಶೋಕ ಮತ್ತು ಸಂತಾಪವನ್ನು ಬಹಿರಂಗವಾಗಿ ತೋರ್ಪಡಿಸುತ್ತಿದ್ದರು. (ಮೊಹಮ್ಮದ್ ಮೊಯಿನುದ್ದೀನ್ ತನ್ನ ಸನ್‌ಸೆಟ್ ಎಟ್ ಶ್ರೀರಂಗಪಟ್ಟಣಮ್ ಕೃತಿಯಲ್ಲಿ ಬೀಟ್ಸನ್‌ರನ್ನು ಉದ್ಧರಿಸಿ ಬರೆದಿರುವ ಮಾತುಗಳಿವು. ಈ ಪುಸ್ತಕವನ್ನು ಓರಿಯೆಂಟ್ ಲಾಂಗ್‌ಮನ್ 2000ರಲ್ಲಿ ಪ್ರಕಟಿಸಿದೆ.) ಇಂತಹ ವಿದಾಯವನ್ನು ಪ್ರಾಯಶಃ ಒಬ್ಬ ಮತಾಂಧ ಸರ್ವಾಧಿಕಾರಿ ಪಡೆಯಲು ಸಾಧ್ಯವಿರಲಿಲ್ಲ.

## ಮಾನವಕುಲಕ್ಕೆ ಟಿಪ್ಪುವಿನ ಕೊಡುಗೆ:

ಮಂಗಳೂರು ಮತ್ತು ಗೋವಾ ವಿಶ್ವವಿದ್ಯಾಲಯಗಳ ವಿಶ್ರಾಂತ ಉಪಕುಲಪತಿ ಪ್ರೊ.ಬಿ.ಶೇಕ್ ಆಲಿ, ತಮ್ಮ 'ಟಿಪ್ಪು ಸುಲ್ತಾನ್ – ಎ ಸೆಕ್ಯುಲರ್ ರೂಲರ್' ಎಂಬ ಲೇಖನದಲ್ಲಿ ಹೀಗೆ ಬರೆಯುತ್ತಾರೆ:

> "ಟಿಪ್ಪುವಿನ ಆಂತರಿಕ ನೀತಿಯು ಆತನ 17 ವರ್ಷಗಳ ಆಡಳಿತಾವಧಿಯ ಹೆಗ್ಗುರುತು. ಆತ ವ್ಯಾಪಾರ, ವಾಣಿಜ್ಯ, ಕುಶಲಕಲೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದ್ದರು ಮತ್ತು ಅತ್ಯಂತ ದಕ್ಷವಾದ ಆಡಳಿತ ವ್ಯವಸ್ಥೆಯನ್ನು ನಿರ್ಮಿಸಿದ. ನೌಕಾಪಡೆ, ರಾಕೆಟ್ ವ್ಯವಸ್ಥೆ, ವ್ಯಾಪಾರ ಮತ್ತು ಕೈಗಾರಿಕೆಗಳ ಮೇಲೆ ಸರಕಾರದ ನಿಯಂತ್ರಣ, ಬಂದೂಕು, ತುಪಾಕಿ, ಗಾಜು, ಕತ್ತಿ, ಕಾಗದ ಮತ್ತು ಸಕ್ಕರೆ ತಯಾರಿಸುವ ಕಾರ್ಖಾನೆಗಳು ಟಿಪ್ಪುವಿನ ಕಲ್ಪನೆಯ ಕೂಸುಗಳು. ಶಹರ್ ಗಂಜಮ್ ಎಂಬುದು ಜವಳಿ ಮತ್ತು ಕಾಗದ ತಯಾರಿಕೆಗೆ ಹೆಸರಾಗಿದ್ದ ಒಂದು ಕೈಗಾರಿಕಾ ಉಪನಗರವಾಗಿತ್ತು. ಇವರು ದೇಶದೊಳಗೂ ಹೊರಗೂ ವಾಣಿಜ್ಯ ಕೇಂದ್ರಗಳನ್ನು ಸ್ಥಾಪಿಸಿದರು. ಉದಾ: ಮಸ್ಕತ್, ಜಿದ್ದಾ, ಬಸ್ರಾ ಮತ್ತು ಪೆಗು. ಶ್ರೀಗಂಧದ ಎಣ್ಣೆ, ರೇಷ್ಮೆ, ಮೆಣಸು, ನೆಲಹಾಸುಗಳು, ದಂತದ ವಸ್ತುಗಳನ್ನು ನೆಲ ಮತ್ತು ಜಲ ಮಾರ್ಗಗಳ ಮೂಲಕ ರಫ್ತು ಮಾಡಲಾಗುತ್ತಿತ್ತು. ಭಟ್ಕಳ, ಮಂಗಳೂರು ಮತ್ತು ಹೊನ್ನಾವರ ಪ್ರಮುಖ ಬಂದರುಗಳಾಗಿದ್ದವು. ಇವರು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿದ. ತನ್ನ ರಾಷ್ಟ್ರದೊಳಗಡೆ ಸಹಕಾರಿ ಬ್ಯಾಂಕ್ ಮತ್ತು ಅಂಚೆ ಸೇವೆಯನ್ನು ಆರಂಭಿಸಿದರು. ಕಾವೇರಿ ನದಿಗೆ ಅಡ್ಡವಾಗಿ ಅಣೆಕಟ್ಟೆ ಕಟ್ಟುವ ಬಗ್ಗೆ ಮೊದಲು ಯೋಚಿಸಿದವರು ಟಿಪ್ಪು. 'ಸದ್ದೆ ಮೋಹಿ' ಎಂಬ ಹೆಸರಿನಲ್ಲಿ ಕಾವೇರಿ ನದಿಗೆ ಅಡ್ಡವಾಗಿ ನೀರಾವರಿ ಯೋಜನೆಯೊಂದನ್ನು ಆರಂಭಿಸಲು ಇವರು ಶಿಲಾನ್ಯಾಸವನ್ನೂ ನೆರವೇರಿಸಿದ್ದರು. ಸರ್ ಎಂ. ವಿಶ್ವೇಶ್ವರಯ್ಯ ಈ ಸ್ಥಳದಲ್ಲೇ ನಂತರ ಅಣೆಕಟ್ಟೆ ಕಟ್ಟಿದರೆಂಬುದು ಗಮನಿಸಬೇಕಾದ ಅಂಶ. ಅಣೆಕಟ್ಟೆಯ ಮುಖ್ಯ ದ್ವಾರದ ಬಳಿ ಇರುವ ಫಲಕದಲ್ಲಿ ಪರ್ಷಿಯನ್ ಮತ್ತು ಇಂಗ್ಲಿಷ್‌ನಲ್ಲಿ ಹೀಗೆ ಬರೆಯಲಾಗಿದೆ: "ಆರಂಭ ನನ್ನಿಂದ. ಆದರೆ ಮುಕ್ತಾಯವು ದೇವರನ್ನು ಅವಲಂಬಿಸಿದೆ". ಇವರು ಬೇರೆ ಬೇರೆ ಕಡೆಗಳಿಂದ ಕುಶಲಕರ್ಮಿಗಳನ್ನು ಕರೆಸಿಕೊಂಡಿದ್ದರು. ಕೃಷಿಗೆ ಪ್ರೋತ್ಸಾಹ ನೀಡಿದ, ಅರ್ಹ ಕೃಷಿಕರಿಗೆ ಸಾಲದ

ವ್ಯವಸ್ಥೆ ಮಾಡಿದ ಮತ್ತು ಖಾಲಿ ಭೂಮಿಯಲ್ಲಿ ಕೃಷಿ ಮಾಡಲು ಉತ್ತೇಜನ ಕೊಟ್ಟರು. ಜಮೀನ್ದಾರಿ ಪದ್ಧತಿಯನ್ನು ಕೊನೆಗಾಣಿಸಿದರು. ಕೃಷಿಕರ ಮೇಲೆ ಅವರ ವಾರ್ಷಿಕ ಇಳುವರಿಯ ನಾಲ್ಕನೇ ಒಂದು ಭಾಗ ತೆರಿಗೆ ವಿಧಿಸಿದರು. ಒಂದು ವೇಳೆ ಬೆಳೆ ವಿಫಲವಾದರೆ ತೆರಿಗೆ ವಿನಾಯಿತಿ ದೊರೆಯುತ್ತಿತ್ತು. ರೇಶ್ಮೆ ಕೈಗಾರಿಕೆಯನ್ನು ಪರಿಚಯಿಸಿದರು. ಇವರ ಸಾಮ್ರಾಜ್ಯದಲ್ಲಿ 21 ರೇಶ್ಮೆ ತೋಟಗಳಿದ್ದವು. ಕೈದಿಗಳಿಗೆ ದಂಡ ವಿಧಿಸುವ ಬದಲಿಗೆ ಹಣ್ಣು ತರಕಾರಿಗಳನ್ನು ಬೆಳೆಸುವ ಕಾರ್ಯಗಳಲ್ಲಿ ಅವರನ್ನು ತೊಡಗಿಸುವ ವಿನೂತನ ಶಿಕ್ಷಾ ಕ್ರಮ ಜಾರಿಗೊಳಿಸಿದರು. ಭ್ರಷ್ಟ ಅಧಿಕಾರಿಗಳನ್ನು ಮತ್ತು ಸಮಾಜ ವಿರೋಧಿ ಶಕ್ತಿಗಳನ್ನು ಉಕ್ಕಿನ ಹಸ್ತದಿಂದ ಮಟ್ಟ ಹಾಕಲಾಯಿತು. ಮದ್ಯ ನಿಷೇಧ, ಗುಲಾಮತನದ ನಿರ್ಮೂಲನ, ನಿರ್ಗತಿಕ ಮಕ್ಕಳ ಮಾರಾಟಕ್ಕೆ ನಿಷೇಧ, ದುಂದುವ್ಯಯದ ಮೇಲೆ ಕಡಿವಾಣ, ಜೂಜಾಟ ಮತ್ತು ತಂಬಾಕಿನ ಮೇಲೆ ನಿಷೇಧ ಟಿಪ್ಪು ಜಾರಿಗೆ ತಂದ ಪ್ರಮುಖ ಸಮಾಜ ಸುಧಾರಣಾ ಕ್ರಮಗಳು. ಇವರ ಸುಧಾರಣಾ ಕ್ರಮಗಳು ಬದುಕಿನ ಎಲ್ಲ ರಂಗಗಳಿಗೂ ವ್ಯಾಪಿಸಿದ್ದವು ಕ್ಯಾಲೆಂಡರ್, ತೂಕ ಮತ್ತು ಅಳತೆ, ಬ್ಯಾಂಕಿಂಗ್ ಮತ್ತು ಫೈನಾನ್ಸ್, ಕಂದಾಯ ಮತ್ತು ನ್ಯಾಯಾಂಗ, ಸೇನೆ ಮತ್ತು ನೌಕಾದಳ, ನೈತಿಕತೆ ಮತ್ತು ಶಿಷ್ಟಾಚಾರಗಳು. 'ರಹಾತಿ' ಎಂಬ ಹೆಸರಿನಲ್ಲಿ ಇನಾಮು ನಾಣ್ಯಗಳನ್ನೂ ಇವರು ಬಿಡುಗಡೆಗೊಳಿಸಿದ್ದರು. ಇವುಗಳ ಮೇಲೆ ಶಿವ, ಪಾರ್ವತಿ, ಶೃಂಗೇರಿಯ ಶಾರದೆ, ಉಡುಪಿಯ ಕೃಷ್ಣ, ಕನ್ನಡ ಮತ್ತು ಅರಬಿ ಸಂಖ್ಯೆಗಳನ್ನು ಕೆತ್ತಲಾಗಿತ್ತು."

"ಕೆಲವು ಸಮುದಾಯಗಳಲ್ಲಿ ಹಬ್ಬಗಳ ಸಂದರ್ಭದಲ್ಲಿ ನರಬಲಿ ನೀಡಲಾಗುತ್ತಿತ್ತು, ಬಹುಪತಿತ್ವ ಆಚರಣೆಯಲ್ಲಿತ್ತು ಮತ್ತು ಮಹಿಳೆಯರಿಗೆ ವಸ್ತ್ರಧಾರಣೆ ನಿಷೇಧಿಸಲಾಗಿತ್ತು. ಇಂತಹ ಎಲ್ಲ ಪುರಾತನ ಸಂಪ್ರದಾಯಗಳನ್ನು ನಿಷೇಧಿಸಿ ಇವರು ಫರ್ಮಾನ್ ಹೊರಡಿಸಿದ್ದರು. ಇಂತಹ ಹಲವು ಕಲ್ಯಾಣ ಯೋಜನೆಗಳ ಮೂಲಕ ಇವರು ತನ್ನ ಪ್ರಜೆಗಳ ಮನಗೆದ್ದಿದ್ದ. ಆದರೆ ಕೆಲವು ಟೀಕಾಕಾರರು ಈ ಸುಧಾರಣಾ ಕ್ರಮಗಳನ್ನು ಧಾರ್ಮಿಕ ನಂಬಿಕೆಗಳಲ್ಲಿ ನಡೆಸಿದ ಹಸ್ತಕ್ಷೇಪ ಎಂದು ವ್ಯಾಖ್ಯಾನಿಸುತ್ತಾರೆ. ಭಾರತದ ಇತಿಹಾಸದಲ್ಲಿ ಆಗಿ ಹೋಗಿರುವ ಅಸಂಖ್ಯ ರಾಜರುಗಳ ಮಧ್ಯೆ ಟಿಪ್ಪು ಧ್ರುವತಾರೆಯಂತೆ ಕಂಗೊಳಿಸುತ್ತಿರುವುದು ಆಶ್ಚರ್ಯವೇನೂ ಅಲ್ಲ."

ಪ್ರಮುಖ ಬಂಗಾಳಿ ಇತಿಹಾಸಕಾರ ಸರ್ ಜಾದುನಾತ್ ಸರ್ಕಾರ್ ಕೂಡಾ ಟಿಪ್ಪುವಿನ ಬಗ್ಗೆ ಇಂತಹದೇ ಮಾತುಗಳನ್ನು ಹೇಳಿದ್ದಾರೆ:

> "ಟಿಪ್ಪು ಒಬ್ಬ ಶ್ರೇಷ್ಠ ಸ್ವಾತಂತ್ರ್ಯ ಸೇನಾನಿ, ಒಬ್ಬ ಸಮರ್ಥ ಆಡಳಿತಗಾರ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದ ಪರಿವರ್ತಕ."

ಟಿಪ್ಪುವಿನ ವಿರೋಧಿಯ ಪ್ರತ್ಯಕ್ಷದರ್ಶಿ ವಿವರಣೆಯನ್ನು ನೀಡಿದರೆ, ಆತನ ಆಡಳಿತವನ್ನು ವಸ್ತುನಿಷ್ಠವಾಗಿ ತಿಳಿಯಲು ಹೆಚ್ಚು ಸಹಕಾರಿಯಾಗಬಹುದೇನೋ. ಮೂರನೇ ಮೈಸೂರು ಯುದ್ಧದಲ್ಲಿ ಬಾಂಬೆ ತುಕಡಿಯ ಜತೆಗಿದ್ದ ಎಡ್ವರ್ಡ್ ಮೂರ್ ಹೀಗೆ ಬರೆಯುತ್ತಾನೆ:

> "ಒಬ್ಬ ವ್ಯಕ್ತಿ ಹೊಸದಾಗಿ ತಾನು ಪ್ರವೇಶಿಸುವ ಅಪರಿಚಿತ ದೇಶದಲ್ಲಿ ಸಮೃದ್ಧವಾದ ಕೃಷಿಭೂಮಿಗಳು, ಶ್ರಮಜೀವಿ ಪ್ರಜೆಗಳು, ಹೊಸದಾಗಿ ನಿರ್ಮಿಸಿದ ನಗರಗಳು, ವಿಸ್ತಾರಗೊಳ್ಳುತ್ತಿರುವ ಕೈಗಾರಿಕೆ, ಹೆಚ್ಚುತ್ತಿರುವ ಪಟ್ಟಣಗಳು ಮತ್ತು ಸುಖ ಸಂತೋಷದ ಪ್ರತೀಕವಾಗಿ ಎಲ್ಲೆಡೆ ಪ್ರಗತಿಯ ದೃಶ್ಯಗಳನ್ನು ಕಂಡರೆ ಆತ ಸಹಜವಾಗಿಯೇ ತಾನು ಜನರ ಮನಸ್ಸಿಗೆ ಹಿಡಿಸುವಂತಹ ಒಂದು ಸರಕಾರದ ಅಡಿಯಲ್ಲಿದ್ದೇನೆ ಎಂದು ಭಾಸವಾಗದಿರದು. ಇದು ಟಿಪ್ಪುವಿನ ದೇಶದ ಚಿತ್ರಣ. ಇವರ ಸರಕಾರದ ಬಗ್ಗೆ ನಮ್ಮ ನಿಲುವು ಇದು."

# ಪ್ರಾಚೀನ ವೈರತ್ವ, ಆಧುನಿಕ ದ್ವೇಷ

ಪಶ್ಚಿಮವು ಇಸ್ಲಾಮನ್ನು ಕರಾಳವಾಗಿ ಚಿತ್ರಿಸುತ್ತಿರುವುದಕ್ಕೆ ಸುದೀರ್ಘ ಇತಿಹಾಸವಿದೆ. ಇದು ಸಹಸ್ರಮಾನಕ್ಕೂ ಹಳೆಯದಾದ ಕ್ರೈಸ್ತ ಯುರೋಪ್ ಮತ್ತು ಇಸ್ಲಾಮಿನ ನಡುವಣ ಸಂಘರ್ಷದಷ್ಟೇ ಪುರಾತನವಾದದ್ದು. ಅರಬ್ ಉಪಖಂಡದಲ್ಲಿ ಇಸ್ಲಾಮಿನ ಉದಯವಾಗಿ ಒಂದು ನೂರು ವರ್ಷ ಕಳೆಯುವುದರೊಳಗೆ ಇಸ್ಲಾಮ್ ಯುರೋಪಿನ ಬಾಗಿಲುಗಳನ್ನುಬಡಿಯಲಾರಂಭಿಸಿತ್ತು. ಕ್ರಿ.ಶ. 712ರ ವೇಳೆಗೆ ಉಮಯ್ಯದ್ ವಂಶದ ದಂಡನಾಯಕ ತಾರಿಖ್ ಬಿನ್ ಝಿಯಾದ್ ಸ್ಪೈನನ್ನು ವಶಪಡಿಸಿಕೊಂಡಿದ್ದ. ಇದು ಐಬೀರಿಯನ್ ಪರ್ಯಾಯ ದ್ವೀಪ (ಇದನ್ನು ಉಂದ್ಲುಸ್ ಎನ್ನಲಾಗುತ್ತಿತ್ತು) ಎಂಟುನೂರು ವರ್ಷಗಳ ಕಾಲ ಇಸ್ಲಾಮಿಗೆ ಅಧೀನಗೊಳಿಸಿಬಿಟ್ಟಿತು. ಇಸ್ಲಾಮ್, ತನ್ನ ತತ್ವಶಾಸ್ತ್ರೀಯ ಮತ್ತು ವಸಾಹತುಶಾಹಿ ಸೀಮೆಗಳನ್ನು ಮೀರಿ ಬೆಳೆದಿದ್ದು ಇದೇ ಅವಧಿಯಲ್ಲಿ. ಒಂದು ನಾಗರಿಕತೆಯಾಗಿ ಬೆಳವಣಿಗೆ ಹೊಂದಿದ ಇಸ್ಲಾಮ್, ಅಂದಿನ ಜಗತ್ತಿನಲ್ಲೇ ಅಪೂರ್ವವೆನ್ನಬಹುದಾದ ಸೌಮ್ಯವಾದಿ ಶಕ್ತಿಯಾಗಿಯೂ ಹೊರಹೊಮ್ಮಿತು. ಕಾರ್ಡೋವಾ, ಗ್ರನಾಡಾದಲ್ಲಿದ್ದ ಇಸ್ಲಾಮೀ ವಿಶ್ವವಿದ್ಯಾಲಯಗಳು, ಪ್ರಯೋಗಶಾಲೆಗಳು ಮಧ್ಯ ಏಷ್ಯಾ, ಆಫ್ರಿಕಾ ಮತ್ತು ಯುರೋಪಿನ ವಿದ್ವಾಂಸರು, ಖಗೋಳಶಾಸ್ತ್ರಜ್ಞರು, ವೈದ್ಯರು, ವಿಜ್ಞಾನಿಗಳು ಮತ್ತು ತತ್ವಶಾಸ್ತ್ರಜ್ಞರನ್ನು ಆಕರ್ಷಿಸುವಲ್ಲಿ ಯಶಸ್ವಿಯಾದವು.

ಇಸ್ಲಾಮಿನ ಏಕದೇವತ್ವದ ಕಲ್ಪನೆಯು ತ್ರಿಏಕತ್ವ ಸಿದ್ಧಾಂತದಲ್ಲಿದ್ದ ಸಂಕೀರ್ಣತೆಗಳನ್ನು ಹೋಲಿಸಿದರೆ ಹೆಚ್ಚು ಪರಿಪಕ್ವವಾದದ್ದೆಂದು ಭಾಸವಾಗತೊಡಗಿತು. ತನ್ನ ಮೂಲ ರೂಪವನ್ನು ಉಳಿಸಿಕೊಂಡಿದ್ದ ಕುರ್‌ಆನ್ ಕೂಡಾ ಒಂದು ದೊಡ್ಡ ಸವಾಲಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಪುರೋಹಿತಶಾಹಿತ್ವದ ಕೈಯಿಂದ ಮುಕ್ತಿ ದೊರಕಿಸಿದ್ದು ಇಸ್ಲಾಮಿನ ಕಡೆಗೆ ಜನರ ಒಲವನ್ನು ಹೆಚ್ಚಿಸಿತ್ತು. ಸ್ಪೈನ್‌ನ ಮುಸ್ಲಿಮರು ಜ್ಞಾನ ಮತ್ತು ವಿಜ್ಞಾನದ ರಂಗಗಳಲ್ಲಿ ಬೆಳವಣಿಗೆಗೂ ಈ ಸ್ವಾತಂತ್ರ್ಯ ಹಾದಿ ಮಾಡಿಕೊಟ್ಟಿತು. ಕ್ರೈಸ್ತ ಯುರೋಪ್ ತನ್ನ ಅಸ್ತಿತ್ವ ಗಂಡಾಂತರದಲ್ಲಿದೆ ಎಂದು ಭಾವಿಸತೊಡಗಿತು. ಇಸ್ಲಾಮಿನ ಹೆದ್ದೆರೆಗಳನ್ನು ತಡೆಯುವುದು ಹೇಗೆಂಬ ಚಿಂತೆ ಅದನ್ನು

ಕಾಡತೊಡಗಿತು. ಇಸ್ಲಾಮಿನ ವಿರುದ್ಧ ತಾತ್ವಿಕ ಮತ್ತು ಸೈದ್ಧಾಂತಿಕ ಹೋರಾಟಗಳನ್ನು ಅದು ಆರಂಭಿಸಿತು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ವ್ಯಕ್ತಿತ್ವವೇ ಈ ದಾಳಿಯ ಮುಖ್ಯ ಗುರಿಯಾಯಿತು. ಅವರ ವಿವಾಹಗಳು ಮತ್ತು ಯುದ್ಧಗಳು ಅಪವಾದಕ್ಕೆ ಗುರಿಯಾದವು. ಕ್ರುಸೇಡ್‌ನಿಂದಾದ ನಾಶನಷ್ಟಗಳು, ಸಲಾಹುದ್ದೀನ್ ಅಯ್ಯೂಬಿ ಪವಿತ್ರ ನೆಲಗಳನ್ನು ಮರಳಿ ವಶಪಡಿಸಿಕೊಂಡದ್ದು, ಬೈಜಂಟೈನ್ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಕಾನ್‌ಸ್ಟಾಂಟಿನೋಪಲ್‌ನ ಪತನ ಹಾಗೂ ಪೂರ್ವಯುರೋಪಿಗೆ ಉಸ್ಮಾನಿಯಾ ಸಾಮ್ರಾಜ್ಯದ ಪ್ರವೇಶವು ಯುರೋಪಿನ ಗಾಯದ ಮೇಲೆ ಬರೆ ಎಳೆಯಿತು.

ಇಸ್ಲಾಮ್ ತನ್ನ ಗತ ವೈಭವದ ಪಳಿಯುಳಿಕೆಯಷ್ಟೇ ಆಗಿರುವ, ಮುಸ್ಲಿಮರು ಪರಸ್ಪರ ಕಚ್ಚಾಡುತ್ತಿರುವ, ಪಶ್ಚಿಮದ ತೈಲ ದಾಹವು ಮಧ್ಯ ಏಷ್ಯಾದಲ್ಲಿ ಯುದ್ಧಗಳನ್ನು ಹುಟ್ಟುಹಾಕುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಗುಪ್ತಗಾಮಿನಿಯಾಗಿರುವ ದ್ವೇಷದ ಅಲೆಗಳನ್ನು ಬಿರುಗಾಳಿಯಾಗಿಸುವ ಅಗತ್ಯವನ್ನು ಯುರೋಪ್ ಮನಗಂಡಿದೆ. ಈ ಕುತಂತ್ರಗಳಿಗೆ ಪಾಶ್ಚಾತ್ಯ ಮಾಧ್ಯಮಗಳು ಮತ್ತು ರಾಜಕೀಯ ವ್ಯವಸ್ಥೆಗಳು ಯಾಕೆ ಬಲಿಯಾಗುತ್ತವೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈಗ ಆಗಬೇಕಾಗಿರುವುದು ಆಕ್ರೋಶವನ್ನು ದ್ವೇಷಾಗ್ನಿಯಾಗಿ ಪರಿವರ್ತಿಸುವ ಕೆಲಸ ಮಾತ್ರ. ಬಾಸ್ಕ್ ಮತ್ತು ಐರಿಷ್ ಜನತೆ ಪ್ರತ್ಯೇಕತೆಗಾಗಿ ಹೋರಾಡುತ್ತಿದ್ದರಾದರೂ ಯುರೋಪಿಗೆ ಹೆಚ್ಚು ಸ್ಪಷ್ಟವಾದ ಮತ್ತು ಭಿನ್ನ ಮೈಬಣ್ಣದ 'ಹೊಸ ಶತ್ರು'ಗಳ ಅಗತ್ಯವಿತ್ತು. ಮತ್ತೊಂದೆಡೆ ಪ್ಯಾಲೆಸ್ತೀನ್ ನಿರಾಶ್ರಿತರು, ಬಾಂಬ್ ದಾಳಿಗೀಡಾದ ಇರಾಕ್ ಮತ್ತು ಅಫ್ಘಾನಿಸ್ತಾನದ ನೆಲಗಳು "ಪಶ್ಚಿಮಕ್ಕೆ ಪಾಠ ಕಲಿಸಲೇಬೇಕು" ಎಂದು ಹಠ ತೊಟ್ಟಿದ್ದವರಿಗೆ ಯೋಧರನ್ನು ಒದಗಿಸುವ ಫಲವತ್ತಾದ ಭೂಮಿಗಳಾಗಿ ಮಾರ್ಪಟ್ಟವು.

ಇಸ್ಲಾಮ್ ಮತ್ತು ಪಶ್ಚಿಮದ ನಡುವಣ ಸಂಬಂಧಗಳನ್ನು ನಿರೂಪಿಸಿರುವ ಇತಿಹಾಸದುದ್ದಕ್ಕೂ ನಡೆದು ಬಂದಿರುವ ದ್ವೇಷದ ಪರಂಪರೆಯ ಮೇಲೆ ಒಮ್ಮೆ ಕಣ್ಣೋಡಿಸುವುದು ಇಲ್ಲಿ ಹೆಚ್ಚು ಉಪಯುಕ್ತವೆನಿಸಬಹುದು. ಈ ನಿಟ್ಟಿನಲ್ಲಿ ಝಿಯಾವುದ್ದೀನ್ ಸರ್ದಾರ್ ಅವರ ಈ ಕೆಳಗಿನ ಲೇಖನ ಒಂದು ಮಾರ್ಗದರ್ಶಿ:

ಇಸ್ಲಾಮಿನ ಉಗಮದಿಂದಲೇ ಮುಸ್ಲಿಮರು ಪಶ್ಚಿಮಕ್ಕೆ ಒಂದು 'ಸಮಸ್ಯೆ'ಯಾಗಿ ಮಾರ್ಪಟ್ಟರು. ಮೊದಲನೆಯದಾಗಿ ಇಸ್ಲಾಮ್ ಒಂದು 'ಧಾರ್ಮಿಕ' ಸಮಸ್ಯೆಯಾಗಿತ್ತು. ದೇವ ಪುತ್ರನನ್ನು ಶಿಲುಬೆಗೇರಿಸಿದ ಮತ್ತು ಮತ್ತೆ ಭೂಮಿಗೆ ಕರೆತಂದ 600 ವರ್ಷಗಳ ನಂತರ ಮತ್ತೊಬ್ಬ ಪ್ರವಾದಿಯನ್ನು ಕಳುಹಿಸುವ ಅಗತ್ಯವೇನಿತ್ತು? ಎರಡನೆಯದಾಗಿ ಇಸ್ಲಾಮ್ ಆಗಮಿಸಿ ದಶಕಗಳಾಗುವುದರೊಳಗೆ ಯುರೋಪ್‌ನ ಗಡಿಗಳಲ್ಲಿ ಅದೊಂದು ರಾಜಕೀಯ ಸಮಸ್ಯೆಯಾಗಿ ಮಾರ್ಪಟ್ಟಿತ್ತು. ಮೂರನೆಯದಾಗಿ, ಮುಸ್ಲಿಮ್

ನಾಗರಿಕತೆಯು ಜ್ಞಾನದ ರಂಗದಲ್ಲಿ ಮಾಡಿದ ಸಾಧನೆಗಳು ಇಸ್ಲಾಮನ್ನು ಒಂದು ವೈಚಾರಿಕ ಸಮಸ್ಯೆಯಾಗಿ ಮಾರ್ಪಡಿಸಿತ್ತು. ಈ ಸಮಸ್ಯೆಗಳ ಪೈಕಿ ಪ್ರತಿಯೊಂದನ್ನೂ ನಿರ್ದಿಷ್ಟ ಕಾರ್ಯತಂತ್ರದ ಮೂಲಕ ಎದುರಿಸುವ ಪ್ರಯತ್ನವನ್ನು ಪಶ್ಚಿಮ ನಡೆಸಿತು.

ಧಾರ್ಮಿಕ ನೆಲೆಯಲ್ಲಿ ನೋಡಿದರೆ ಕ್ರೈಸ್ತ ಯುರೋಪಿಗೆ ಇಸ್ಲಾಮನ್ನು, ಅದರ ಪ್ರವಾದಿಯನ್ನು ಮತ್ತು ಅನುಯಾಯಿಗಳನ್ನು ತೆಗಳುವುದರ ವಿನಾ ಬೇರೆ ಆಯ್ಕೆ ಇರಲಿಲ್ಲ. ರಾಜಕೀಯವಾಗಿ, ಯುರೋಪ್ ಇಸ್ಲಾಮಿನ ವಿರುದ್ಧ 'ಶಿಲುಬೆ ಯುದ್ಧ'ಗಳ ಸರಣಿಯನ್ನೇ ಆರಂಭಿಸಿತು. ಇದೂ ವಿಫಲವಾದಾಗ ಯುರೋಪ್ ಮುಸ್ಲಿಮ್ ಜಗತ್ತನ್ನು ವಸಾಹತೀಕರಿಸುವ ಪೂರ್ಣಪ್ರಮಾಣದ ಪ್ರಯತ್ನ ಆರಂಭಿಸಿತು. ವೈಚಾರಿಕ ರಂಗದಲ್ಲಿ ಮುಸ್ಲಿಮ್ ಚಿಂತನೆ ಮತ್ತು ಇತಿಹಾಸವನ್ನು ಹತ್ತಿಕ್ಕಲು ಒಂದರ ಹಿಂದೊಂದರಂತೆ ಹಲವು ಪಠ್ಯಗಳನ್ನು ಸೃಷ್ಟಿಸಿತು.

### 1. ತೆಗಳಿಕೆ

ಇಸ್ಲಾಮನ್ನು ಮತ್ತು ಪ್ರವಾದಿಯನ್ನು ಹಳಿಯುವ ಪ್ರಯತ್ನಗಳು ಬಹಳ ಹಿಂದೆಯೇ ಆರಂಭಗೊಂಡವು. ಪಾಲ್ ಅಲ್ವಾರಿಸ್ (ಕ್ರಿ.ಶ. 859) ಎಂಬಾತನು, ಪ್ರವಾದಿವರ್ಯರಿಗೆ ಕ್ರೈಸ್ತ ವಿರೋಧಿ ಎಂಬ ಬಿರುದು ಎಷ್ಟು ಸೂಕ್ತವಾಗಿ ಒಪ್ಪುತ್ತದೆ ಎಂಬುದನ್ನು 'ಸಂಶೋಧಿಸಿದ'. 'ಬೀಸ್ಟ್ 666' ಎಂದು ಹೆಸರಿಟ್ಟು ಆತ ಪ್ರವಾದಿಯ ತಥಾಕಥಿತ ಮರಣದ ವರ್ಷವನ್ನೇ ತನ್ನ ತೆಗಳಿಕೆಗೆ ಬಳಸಿಕೊಂಡ. ಈ ಆಕ್ಷೇಪಾರ್ಹ ಚಿತ್ರೀಕರಣ ಸಾಹಿತ್ಯದ ಮೂಲಕವೂ ಮುಂದುವರಿಯಿತು. ಪ್ರವಾದಿ ಮುಹಮ್ಮದರಿಗೆ ಭೂತದ ಪರ್ಯಾಯ ಪದವಾದ 'ಮಹೋಂದ್' ಎಂಬ ಹೆಸರಿಟ್ಟು ಶೃಂಗಾರ ಕಾವ್ಯ ರಚಿಸಲಾಯಿತು. ಮಧ್ಯ ಯುಗದುದ್ದಕ್ಕೂ ಇವು ಇಟಲಿ, ಜರ್ಮನಿ, ಸ್ಪೈನ್, ಫ್ರಾನ್ಸ್ ಮತ್ತು ಇಂಗ್ಲಿಷ್ ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಇದು ಒಂದಿಲ್ಲೊಂದು ರೀತಿಯಲ್ಲಿ ಹದಿನೇಳನೇ ಶತಮಾನದ ತನಕವೂ ಮುಂದುವರಿಯಿತು. ಈ ಸಾಹಿತ್ಯ ಪ್ರಕಾರವು 19 ಮತ್ತು 20ನೇ ಶತಮಾನದಲ್ಲಿ ಮತ್ತೆ ಪ್ರತ್ಯಕ್ಷಗೊಂಡಿತು. ಸಲ್ಮಾನ್ ರಶ್ದಿಯ 'ಸೆಟಾನಿಕ್ ವರ್ಸಸ್' ಈ ಬಗೆಯ ಸಾಹಿತ್ಯದ ಇತ್ತೀಚಿನ ಉದಾಹರಣೆ.

### 2. ಶಿಲುಬೆ ಯುದ್ಧಗಳು ಅಥವಾ ಕ್ರುಸೇಡ್ಸ್

ಒಮ್ಮೆ ಇಸ್ಲಾಮನ್ನು ಅವಿಶ್ವಾಸಿ ಪಿಶಾಚಿಯ ರೂಪದಲ್ಲಿ ಚಿತ್ರೀಕರಿಸಿದ ಬಳಿಕ ಅದರ ವಿರುದ್ಧ ಯುದ್ಧ ಆರಂಭಿಸುವುದಕ್ಕೆ ಸಬೂಬು ಹುಡುಕುವುದು ಕಷ್ಟವಾಗಲಿಲ್ಲ. ಕ್ರಿ.ಶ.

1095ರ ನವೆಂಬರ್‌ನಲ್ಲಿ ನಡೆದ ಪೀಸ್ ಆಫ್ ಗಾಡ್ ಕೌನ್ಸಿಲ್ ಆಫ್ ಕ್ಲೆರ್ಮಂಡ್ ಸಮಾವೇಶದಲ್ಲಿ ಎರಡನೇ ಪೋಪ್ ಉರ್ಬನ್ ಶಿಲುಬೆ ಯುದ್ಧಗಳನ್ನು ಆರಂಭಿಸಿದರು. ಇಸ್ಲಾಮಿನ ವಿರುದ್ಧ 'ದೇವರ ಯುದ್ಧ'ಕ್ಕೆ ಮತ್ತು ಜೆರುಸಲೇಮ್‌ನ ವಿಮೋಚನೆಗೆ ಕೌನ್ಸಿಲ್ ಕರೆ ನೀಡಿತು.

ಯುರೋಪ್‌ನಲ್ಲಿ ಯಹೂದಿಯರ ಮಾರಣಹೋಮದೊಂದಿಗೆ ಕ್ರಿಶ್ಚಿಯನ್ ಶಿಲುಬೆ ಯುದ್ಧಗಳು ಆರಂಭಗೊಂಡವು. ಕ್ರಿ.ಶ. 1099ರ ಜುಲೈ 15ರಂದು ನಲ್ವತ್ತು ದಿನಗಳ ಮುತ್ತಿಗೆಯ ಬಳಿಕ ಕ್ರಿಶ್ಚಿಯನರು ಜೆರುಸಲೇಮ್ ಪ್ರವೇಶಿಸಿದರು. ಮುಸ್ಲಿಮ್ ಇತಿಹಾಸಕಾರ ಇಬ್ನ್ ಅಲ್ ಆಸಿರ್ ದಾಖಲಿಸಿರುವಂತೆ, ಅವರು ಸುಮಾರು 70,000 ಗಂಡಸರನ್ನು, ಮಹಿಳೆಯರು ಮತ್ತು ಮಕ್ಕಳನ್ನು ಸಂಹರಿಸಿದರು.

ರೇಮಂಡ್ ಅಗ್ವಿಲಿಸ್ ಎಂಬ ಪ್ರತ್ಯಕ್ಷದರ್ಶಿ ಹೇಳಿರುವ ಮಾತುಗಳನ್ನು ಗಮನಿಸಿ: "ಅದ್ಭುತವಾದ ದೃಶ್ಯಗಳನ್ನು ನಾವು ನೋಡಿದೆವು. ನಮ್ಮ ಕೆಲವು ಪುರುಷರು ಶತ್ರುಗಳ ತಲೆಯನ್ನು ಕೊಚ್ಚಿ ಹಾಕಿದರು. ಇತರರು ಬಾಣಗಳಿಂದ ತಲೆಗಳನ್ನು ಉರುಳಿಸಿದರು. ಇನ್ನು ಕೆಲವರು ಆ ರುಂಡಗಳನ್ನು ಬೆಂಕಿಗೆ ಹಾಕುವ ಮೂಲಕ ಮತ್ತಷ್ಟು ದೀರ್ಘ ಕಾಲ ಹಿಂಸಿಸಿದರು. ನಗರದಾದ್ಯಂತ ರುಂಡಗಳು, ಕೈ ಕಾಲುಗಳು ರಾಶಿ ರಾಶಿ ಬಿದ್ದಿದ್ದವು. ಈ ರುಂಡ ಮತ್ತು ಮುಂಡಗಳ ನಡುವೆಯೇ ಜನರು ದಾರಿ ಮಾಡಿಕೊಂಡು ಹೋಗಬೇಕಾಗಿತ್ತು. ಆದರೆ ಟೆಂಪಲ್ ಆಫ್ ಸೊಲೊಮನ್‌ನಲ್ಲಿ ನಡೆದ ಘಟನೆಗೆ ಹೋಲಿಸಿದರೆ ಇವೆಲ್ಲವೂ ನಗಣ್ಯ. ಅಲ್ಲಿ ಏನು ನಡೆಯಿತು? ನಾನು ಸತ್ಯ ಹೇಳಿದರೆ ಅದನ್ನು ನಂಬಲು ಶಕ್ತಿ ಸಾಲದು. ಆದರೆ ಇಷ್ಟು ಹೇಳಿದರೆ ಸಾಕೆನಿಸುತ್ತದೆ, ಟೆಂಪಲ್ ಆಫ್ ಸೊಲೊಮನ್ ಮತ್ತದರ ಅಂಗಳದಲ್ಲಿ ಜನರು ತಮ್ಮ ಮೊಣಕಾಲನ್ನೂ ಕುದರೆಯ ಲಗಾಮನ್ನೂ ಒದ್ದೆಯಾಗಿಸುತ್ತಿದ್ದ ರಕ್ತದ ಕಾಲುವೆಗಳ ಮೂಲಕ ನಡೆಯಬೇಕಾಗಿತ್ತು. ಸತ್ಯಧಿಕ್ಕಾರಿಗಳ ದೇವನಿಂದಕ ಕೃತ್ಯಗಳಿಂದ ತೊಂದರೆಗೀಡಾಗಿದ್ದ ಈ ನೆಲವು ಅವರ ರಕ್ತದಿಂದ ತುಂಬಿ ತುಳುಕುವಂತಾದದ್ದು ದೇವರ ನ್ಯಾಯೋಚಿತ ಮತ್ತು ಅದ್ಭುತ ತೀರ್ಪು ಎನ್ನದೆ ವಿಧಿಯಿಲ್ಲ."

ಪವಿತ್ರ ಭೂಮಿಯ ಇತರ ಭಾಗಗಳಲ್ಲಿ ಶಿಲುಬೆ ಯುದ್ಧಕೋರರು ಮುಸ್ಲಿಮರನ್ನು ಕುಲುಮೆಗಳಲ್ಲಿ ಬೇಯಿಸಿದರು, ಮಕ್ಕಳನ್ನು ಸಲಾಕೆಯ ಮೇಲೆ ಹಾಕಿ ಸುಟ್ಟರು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ದಿಕ್ಕಾಪಾಲಾದ ಅರಬರನ್ನು ಹುಡುಕುತ್ತಾ ಅಲೆದರು.

ಇದಕ್ಕೆ ವ್ಯತಿರಿಕ್ತವಾಗಿ ಕ್ರಿ.ಶ. 638ರಲ್ಲಿ ಜೆರುಸಲೇಮನ್ನು ದ್ವಿತೀಯ ಖಲೀಫ

ಉಮರ್ ವಶಪಡಿಸಿಕೊಂಡಾಗ ಕ್ರೈಸ್ತರನ್ನೂ ಯಹೂದ್ಯರನ್ನೂ ಅತ್ಯಂತ ಗೌರವದಿಂದ ನಡೆಸಿಕೊಳ್ಳಲಾಗಿತ್ತು. ಯಾರಿಗೂ ತೊಂದರೆಯಾಗಲಿಲ್ಲ. ಕ್ರೈಸ್ತ ಮುಖಂಡನನ್ನು ಭೇಟಿಯಾದ ಉಮರ್, ನಗರದ ಜನರ ಪ್ರಾಣ ಮತ್ತು ಆಸ್ತಿ ಪಾಸ್ತಿಗಳ ಸುರಕ್ಷೆಯ ಖಾತ್ರಿ ನೀಡಿದರು. ಜತೆಗೆ ತಮ್ಮನ್ನು ಕ್ರೈಸ್ತರ ಪವಿತ್ರ ಸ್ಥಳಗಳಿಗೆ ಕರೆದುಕೊಂಡು ಹೋಗುವಂತೆ ವಿನಂತಿಸಿದರು. ಈ ಭೇಟಿಯ ಸಂದರ್ಭದಲ್ಲಿ ಚರ್ಚ್‌ನೊಳಗೆ ಇದ್ದಾಗಲೇ ನಮಾಝ್‌ನ ಸಮಯ ಸಮೀಪಿಸಿತು. ಉಮರ್, ಕ್ರೈಸ್ತ ಮುಖಂಡನೊಡನೆ ತಮಗೆ ನಮಾಝ್ ನೆರವೇರಿಸಲು ಅನುಮತಿ ನೀಡಬೇಕೆಂದು ವಿನಂತಿಸಿದರು. ಆಗ ಆ ವ್ಯಕ್ತಿ ತಾವಿದ್ದ ಸ್ಥಳದಲ್ಲೇ ಪ್ರಾರ್ಥನೆ ಸಲ್ಲಿಸುವಂತೆ ಉಮರ್‌ಗೆ ಸೂಚಿಸಿದರು. ಆದರೆ ಈ ಪ್ರಸ್ತಾವವನ್ನು ನಯವಾಗಿ ತಿರಸ್ಕರಿಸಿದ ಉಮರ್, ಒಂದು ವೇಳೆ ತಾವು ಇಲ್ಲಿ ಪ್ರಾರ್ಥನೆ ಸಲ್ಲಿಸಿದರೆ ಮುಸ್ಲಿಮರು ಈ ಸ್ಥಳದ ಮೇಲೆ ಹಕ್ಕು ಸ್ಥಾಪಿಸುವ ಸಾಧ್ಯತೆ ಇದೆ ಎಂದರು. ನಂತರ ತಮ್ಮ ಪ್ರಾರ್ಥನೆಯ ಹಾಸನ್ನು ಕೈಯಲ್ಲಿ ಹಿಡಿದು ಚರ್ಚ್‌ನ ಹೊರಾಂಗಣಕ್ಕೆ ಬಂದು ಅಲ್ಲಿ ನಮಾಝ್ ನಿರ್ವಹಿಸಿದರು.

ಕ್ರಿ.ಶ. 1187ರ ಅಕ್ಟೋಬರ್ 2ರಂದು ಮುಸ್ಲಿಮರು ಜೆರುಸಲೇಮನ್ನು ಮರಳಿ ಪಡೆದರು. ದಿಗ್ವಿಜಯದ ನಂತರ ನಗರ ಪ್ರವೇಶಿಸಿದ ಅಯ್ಯೂಬಿ ದೊರೆ ಸಲಾಹುದ್ದೀನ್ ತಮ್ಮ ಸೇನೆಯನ್ನುದ್ದೇಶಿಸಿ, ಯಾವುದೇ ಕ್ರೈಸ್ತನ ಮೇಲೆ ಕೈ ಮಾಡಬಾರದೆಂದು ನಿರ್ದೇಶಿಸಿದರು. ಕ್ರೈಸ್ತರ ಪವಿತ್ರ ಸ್ಥಳಗಳನ್ನು ರಕ್ಷಿಸಬೇಕೆಂದೂ ಯಾರಾದರೂ ಇಲ್ಲೇ ಉಳಿಯಬಯಸಿದರೆ ಅವರಿಗೆ ಅವಕಾಶ ನೀಡಬೇಕೆಂದೂ, ನಿರ್ಗಮಿಸಬಯಸಿದರೆ ಅದಕ್ಕೂ ಅವಕಾಶ ಕಲ್ಪಿಸಬೇಕೆಂದೂ ಸೂಚಿಸಿದರು. ಅನೇಕರು ತಮ್ಮ ಲೂಟಿ ಮಾಡಿದ ಸಂಪತ್ತಿನೊಂದಿಗೆ ನಗರವನ್ನು ತೊರೆದರು. ಜೆರುಸಲೇಮ್‌ನ ಮುಖಂಡನೇ ಚರ್ಚ್‌ನೊಳಗೆ ನುಗ್ಗಿ, ಚಿನ್ನ, ರತ್ನಗಂಬಳಿ ಮತ್ತಿತರ ಬೆಲೆಬಾಳುವ ವಸ್ತುಗಳನ್ನು ಒಯ್ದನು.

ಸಲಾಹುದ್ದೀನ್‌ರ ಸಂಗಾತಿಗಳು ಇದನ್ನು ಕಂಡು ಬೆಚ್ಚಿ ಬಿದ್ದರು. ಸಲಾಹುದ್ದೀನ್‌ರ ಖಜಾಂಚಿ ಇಮಾಮುದ್ದೀನ್ ಅಸ್ಫಹಾನಿ ಕೋಪದಿಂದ ಕೆಂಪಾಗಿದ್ದರು. ಸಲಾಹುದ್ದೀನ್‌ರ ಜತೆ ನಡೆದ ಸಂಭಾಷಣೆಯನ್ನು ಅವರು ಹೀಗೆ ದಾಖಲಿಸುತ್ತಾರೆ:

"ನಾನು ಸುಲ್ತಾನರಿಗೆ ಹೇಳಿದೆ; (ಕ್ರೈಸ್ತ) ನಾಯಕನು ಕಡಿಮೆಯೆಂದರೂ ಎರಡು ನೂರು ಸಾವಿರ ದೀನಾರ್‌ಗಳಷ್ಟು ಮೌಲ್ಯದ ಆಸ್ತಿಪಾಸ್ತಿ ತೆಗೆದುಕೊಂಡು ಹೋಗುತ್ತಿದ್ದಾನೆ. ನಾವು ಕೇವಲ ಖಾಸಗಿ ಆಸ್ತಿ ತೆಗೆದುಕೊಂಡು ಹೋಗುವಂತೆ ಹೇಳಿದ್ದೆವು. ಚರ್ಚ್‌ನ ಸಂಪತ್ತನ್ನೂ ಕಾನ್ವೆಂಟ್‌ಗಳನ್ನಲ್ಲ."

ಇದಕ್ಕೆ ಪ್ರತಿಯಾಗಿ ಸಲಾಹುದ್ದೀನ್ ಹೇಳಿದರು:

"ನಾವು ಅವರೊಂದಿಗೆ ಸಹಿ ಹಾಕಿರುವ ಕರಾರನ್ನು ಪಾಲಿಸಲೇಬೇಕು. ನಾಳೆ ಯಾರಾದರೂ ನಾವು ಒಪ್ಪಂದ ಮುರಿದಿದ್ದೇವೆ ಎಂದು ಹೇಳಲು ಅವಕಾಶ ಕೊಡಬಾರದು. ಅಷ್ಟೇ ಅಲ್ಲ, ಎಲ್ಲೆಡೆ ಇರುವ ಕ್ರೈಸ್ತರು ನಾವು ಅವರೊಂದಿಗೆ ತೋರಿದ ಔದಾರ್ಯವನ್ನು ನೆನಪಿನಲ್ಲಿಟ್ಟುಕೊಳ್ಳುವರು."

ಆದರೆ ಅನಂತರ ಸಂಭವಿಸಿದ್ದೇ ಬೇರೆ. ಜಗತ್ತಿನಾದ್ಯಂತದ ಕ್ರೈಸ್ತರು ಸಲಾಹುದ್ದೀನ್‌ರನ್ನು ಹಸುಗೂಸುಗಳನ್ನು ತಿಂದ, ಕ್ರಿಶ್ಚಿಯನ್ ಯೋಧರನ್ನು ಕೊಂದ ಮತ್ತು ಅವರ ಆರಾಧನಾಲಯಗಳನ್ನು ಧ್ವಂಸಗೊಳಿಸಿದ ಒಬ್ಬ ಕ್ರೂರ ದೇವ ಧಿಕ್ಕಾರಿಯಂತೆ ಚಿತ್ರಿಸಿದರು.

ಇಸ್ಲಾಮಿನ ಬಗ್ಗೆ ಯುರೋಪಿನ ಗ್ರಹಿಕೆಯನ್ನು ನಿರೂಪಿಸುವುದರಲ್ಲಿ ಶಿಲುಬೆ ಯುದ್ಧಕೋರರು ನಿರ್ಣಾಯಕ ಪಾತ್ರವಹಿಸಿದ್ದಾರೆ. ಶಿಲುಬೆ ಯುದ್ಧವು ಇಸ್ಲಾಮನ್ನು ಯುರೋಪಿನ ದುಷ್ಟ ಮತ್ತು ಕರಾಳ ಮುಖವೆಂಬಂತೆ ಚಿತ್ರಿಸಿತು. ಮುಸ್ಲಿಮರು ಅನಾಗರಿಕರು ಸ್ವೇಚ್ಛಾಚಾರಿಗಳು, ದುಷ್ಟರು, ಕರ್ಮಠರು, ಅಜ್ಞಾನಿಗಳು, ಮೂರ್ಖರು, ಕೊಳಕು ಜನರು ಮತ್ತು ನೀಚರು ಎಂಬ ಈ ಸಿದ್ಧ ಮಾದರಿಗಳೇ ಐರೋಪ್ಯ ಚಿಂತನೆ, ಸಾಹಿತ್ಯ ಮತ್ತು ದರ್ಶನದ ಭಾಗವಾಗಿ ಮಾರ್ಪಟ್ಟಿತು. ವಸಾಹತುಶಾಹಿತ್ವದ ಮೂಲಕ ಇದನ್ನು ಹಾಲೆರೆದು ಪೋಷಿಸಲಾಯಿತು ಮತ್ತು ಇಂದಿಗೂ ಈ ರೀತಿಯ ಕಲ್ಪನೆ ಆಗಿಂದಾಗ್ಗೆ ಪ್ರತ್ಯಕ್ಷಗೊಳ್ಳುವುದಿದೆ.

### 3. ಓರಿಯೆಂಟಲಿಸಮ್ ಅಥವಾ ಪೌರಾತ್ಯವಾದ

ಇಸ್ಲಾಮಿನ ಈ ತಪ್ಪು ಚಿತ್ರಣಕ್ಕೆ ಅಕಾಡಮಿಕ್ ಸಮರ್ಥನೆ ಒದಗಿಸಲು ಹಲವು ಅಧ್ಯಯನ ಶಾಖೆಗಳೇ ಹುಟ್ಟಿಕೊಂಡವು. ಆಂತ್ರೊಪಾಲಜಿ ಅಥವಾ ಮನುಷ್ಯಶಾಸ್ತ್ರದ ಉಗಮವಾಗಿದ್ದೇ ಎಲ್ಲ ಪೌರಾತ್ಯ ಸಂಸ್ಕೃತಿಗಳು ಪಾಶ್ಚಾತ್ಯ ಸಂಸ್ಕೃತಿಯ ಅಪರಿಪೂರ್ಣ ಅಥವಾ ಪ್ರಾಚೀನ ರೂಪ ಎಂಬುದನ್ನು "ಸಂಶೋಧಿಸಲಿಕ್ಕಾಗಿ". ನಿರೀಕ್ಷೆಯಂತೆಯೇ ಅನೇಕ ವಸಾಹತುಶಾಹಿ ಆಂತ್ರೊಪಾಲಜಿಸ್ಟ್‌ಗಳ ಕೈಯಲ್ಲಿ ಇಸ್ಲಾಮ್ ವರ್ಣ ತಾರತಮ್ಯವನ್ನು ಎದುರಿಸಬೇಕಾಯಿತು. ಇಸ್ಲಾಮಿನ ಭಯ ಮತ್ತು ದ್ವೇಷವನ್ನು ಎಲ್ಲರೂ ಒಪ್ಪುವಂತಹ ವಸ್ತುನಿಷ್ಠ ಅಧ್ಯಯನದ ಚೌಕಟ್ಟಿನೊಳಗೆ ತರಲಿಕ್ಕಾಗಿಯೇ ಓರಿಯೆಂಟಲಿಸಮ್ ಎಂಬ ಶಾಖೆಯನ್ನು ಹುಟ್ಟುಹಾಕಲಾಯಿತು.

ಓರಿಯೆಂಟಲಿಸ್ಟ್ ಬರಹಗಾರರು  ಈ ಪೈಕಿ ಹೆಚ್ಚಿನವರು ಪುರೋಹಿತರು –

ಹದಿನೈದನೇ ಶತಮಾನದಿಂದಲೂ ಇಸ್ಲಾಮಿನ ಇತಿಹಾಸವನ್ನು ಪುನರ್ರಚಿಸುವ ಕ್ರಿಯೆಯಲ್ಲಿ ತೊಡಗಿದ್ದು, ಇಸ್ಲಾಮಿನ ಆಕರಗಳ ಬಗ್ಗೆ ವಿಕಾರ ಚಿತ್ರಣ ಕೊಡುತ್ತಾ ಬಂದಿದ್ದಾರೆ. ಜತೆಗೆ ಮುಸ್ಲಿಮರು ಸ್ವಭಾವತಃ ದುಷ್ಟರೆಂದೂ ಅವರು ಚಿತ್ರಿಸುತ್ತಾರೆ. ಕುರ್‌ಆನ್ ಒಂದು ಅಸಂಗತವೂ, ಹೇಳಿದ್ದನ್ನೇ ಹೇಳುವ ನಿಷ್ಪ್ರಯೋಜಕ ಮತ್ತು ಹಿಂಸಾತ್ಮಕ ಪುಸ್ತಕವೆಂಬುದು ಇವರ ವಾದ. ಪ್ರವಾದಿ ಮುಹಮ್ಮದ್‌ರನ್ನು ಚಾರಿತ್ರ್ಯಹೀನ ಮತ್ತು ಲಂಪಟ ವ್ಯಕ್ತಿಯಂತೆ ಸತತವಾಗಿ ಬಿಂಬಿಸಲಾಗಿದೆ. ಜ್ಞಾನದ ಕ್ಷೇತ್ರಕ್ಕೆ ಮುಸ್ಲಿಮರ ಕೊಡುಗೆಯನ್ನು ಸಂಪೂರ್ಣ ಕಡೆಗಣಿಸಲಾಗಿದ್ದು ವಿಜ್ಞಾನದ ಇತಿಹಾಸದಿಂದಲೇ ಅದನ್ನು ಕಿತ್ತು ಹಾಕಲಾಗಿದೆ.

ಓರಿಯೆಂಟಲಿಸಮ್ ಕೇವಲ ಒಂದು ಅಕಾಡಮಿಕ್ ಅಧ್ಯಯನವಲ್ಲ. ಅದು ನಿಜವಾಗಿ ಇಸ್ಲಾಮಿನ ಬಗ್ಗೆ ಇರುವ ದೃಷ್ಟಿಕೋನ. ಐರೋಪ್ಯ ಪ್ರವಾಸಿಗರು, ಕಾದಂಬರಿಕಾರರು ಮತ್ತು ಕಲಾವಿದರು, ಇಸ್ಲಾಮನ್ನು ಹಿಂಸೆ ಮತ್ತು ಸೆಕ್ಸ್‌ನ ಒಂದು ಮಿಶ್ರಣವೆಂಬಂತೆಯೂ ಜಾದೂ, ಮೂಢನಂಬಿಕೆ, ಡ್ರಗ್ಸ್ ಮತ್ತು ನ್ಯೂನತೆಗಳ ಭಂಡಾರವೆಂಬಂತೆಯೂ ಚಿತ್ರಿಸುವ ಸಾಹಿತ್ಯ ಮತ್ತು ಕಲೆಯ ದೊಡ್ಡ ಕಣಜವನ್ನೇ ಕಲೆಹಾಕಿದ್ದಾರೆ. ಈ ಪೈಕಿ ಅನೇಕ ಬರಹಗಾರರು ಉದಾ: ರಿಚರ್ಡ್ ಬರ್ಟನ್ (1890), ಇಸಾಬೆಲ್ ಎಬರ್‌ಹಾರ್ಟ್ (1904), ಟಿ.ಇ. ಲಾರೆನ್ಸ್ (1935) ಒಂದೋ ಗೂಢಚಾರಿಕೆಗಾಗಿ ಇಲ್ಲವೇ ಲೈಂಗಿಕ ಕಾಮನೆಗಳ ಈಡೇರಿಕೆಗಾಗಿ ಮುಸ್ಲಿಮ್ ಜಗತ್ತಿಗೆ ಹೋಗಿದ್ದರೆಂಬುದು ಇಲ್ಲಿ ಗಮನಾರ್ಹ.

### 4. ಯುರೋಪಿಗೆ ಮುಸ್ಲಿಮ್ ಜ್ಞಾನದ ಹರಿವು:

15ನೇ ಶತಮಾನದವರೆಗೆ ಜ್ಞಾನವು ಇಸ್ಲಾಮಿನಿಂದ ಪಶ್ಚಿಮದ ಕಡೆಗೆ ಹರಿಯುತ್ತಿತ್ತು. ಮುಸ್ಲಿಮ್ ವಿದ್ವಾಂಸರ ಪುಸ್ತಕಗಳನ್ನು ನಿರಂತರ ಲ್ಯಾಟಿನ್ ಹಾಗೂ ಇತರ ಐರೋಪ್ಯ ಭಾಷೆಗಳಿಗೆ ಅನುವಾದ ಮಾಡಲಾಗುತ್ತಿತ್ತು. ಇವು ಪಠ್ಯಪುಸ್ತಕಗಳಾಗಿಯೂ ಪ್ರಾಯೋಗಿಕ ಕೈಪಿಡಿಗಳಾಗಿಯೂ ಬಳಕೆಯಾಗುತ್ತಿದ್ದವು. ಐರೋಪ್ಯ ಚಿಂತಕರು ಮತ್ತು ವಿದ್ವಾಂಸರು ಮುಸ್ಲಿಮ್ ಜ್ಞಾನ ಕೇಂದ್ರಗಳಿಗೆ ಸತತವಾಗಿ ಭೇಟಿ ಕೊಡುತ್ತಿದ್ದರು. ಐರೋಪ್ಯ ವಿದ್ಯಾರ್ಥಿಗಳು, ಕಾರ್ಡೋವಾ, ಫೆಝ್, ಕೈರೋ, ಬಾಗ್ದಾದ್, ಸಮರ್ಖಂಡ್ ಮೊದಲಾದ ನಗರಗಳಿಗೆ ತೆರಳುತ್ತಿದ್ದರು. ಮುಸ್ಲಿಮ್ ವಿದ್ಯಾರ್ಥಿಗಳು ಇಂದು ಉನ್ನತ ವ್ಯಾಸಂಗಕ್ಕಾಗಿ ಯುರೋಪ್ ಮತ್ತು ಉತ್ತರ ಅಮೆರಿಕಾದ ನಗರಗಳಿಗೆ ತೆರಳುವಂತೆ ಅಂದು ಐರೋಪ್ಯ ವಿದ್ಯಾರ್ಥಿಗಳು ಶ್ರೇಷ್ಠ ಅಧ್ಯಾಪಕರನ್ನು ಅರಸಿಕೊಂಡು ಮುಸ್ಲಿಮ್ ಜಗತ್ತಿನ ಕಡೆಗೆ ಬರುತ್ತಿದ್ದರು. ಅರಬಿ ಭಾಷೆಯು ವಿಜ್ಞಾನ ಮತ್ತು ಸಂಸ್ಕೃತಿಯ ಭಾಷೆಯಾಗಿ

ಮಾರ್ಪಟ್ಟಿತ್ತು. ಜ್ಞಾನ ಮತ್ತು ಬೌದ್ಧಿಕತೆಯ ಬಗ್ಗೆ ಒಲವು ಹೊಂದಿದವರೆಲ್ಲರೂ ಮುಸ್ಲಿಮ್ ವಿದ್ವಾಂಸರ ಪೋಷಾಕು ತೊಡುತ್ತಿದ್ದರು. ಮುಸ್ಲಿಮ್ ವಿದ್ವಾಂಸರು ಮತ್ತು ಚಿಂತಕರ ಹೆಗಲ ಮೇಲೆ ನಿಂತುಕೊಂಡೇ ಜ್ಞಾನ ಪುನರುಜ್ಜೀವನದ ಐರೋಪ್ಯ ಯುಗ ಆರಂಭಗೊಂಡಿತೆಂಬುದು ಇಲ್ಲಿ ಗಮನಾರ್ಹ. ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ಮಾನವಿಕ ಶಾಸ್ತ್ರಗಳು ಸೇರಿದಂತೆ ಜ್ಞಾನದ ನಾನಾ ಶಾಖೆಗಳಲ್ಲಿ ಆದ ಅಗಾಧ ಬೆಳವಣಿಗೆಗೆ ಬೀಜ ಬಿತ್ತಿದ್ದು ಮುಸ್ಲಿಮ್ ಜಗತ್ತು ಎಂಬುದನ್ನು ಮರೆಯುವಂತಿಲ್ಲ.

ಮುಸ್ಲಿಮ್ ನಾಗರಿಕತೆಯ ಕೊಡುಗೆಯನ್ನು ಗಣನೆಗೆ ತೆಗೆದುಕೊಳ್ಳದೆ ಐರೋಪ್ಯ ನವೋದಯವನ್ನು ಕಲ್ಪಿಸಲಿಕ್ಕೂ ಸಾಧ್ಯವಿಲ್ಲ. ಆದರೆ ಈ ವಾಸ್ತವಿಕತೆಯನ್ನು ಗುರುತಿಸುವವರು ಕಡಿಮೆ. ಅಷ್ಟೇ ಅಲ್ಲ, ಮುಸ್ಲಿಮ್ ವಿದ್ವಾಂಸರು ಮತ್ತು ವಿಜ್ಞಾನಿಗಳ ಕೊಡುಗೆಗಳನ್ನು ಮತ್ತು ಸಾಧನೆಗಳನ್ನು ಕೃತಿಚೌರ್ಯ ಮಾಡಲಾಗಿದೆ. ಜತೆಗೆ ಅವುಗಳನ್ನು ನಿರ್ಲಕ್ಷಿಸುವ ಮತ್ತು ತಳ್ಳಿ ಹಾಕುವ ಪ್ರವೃತ್ತಿಯೂ ವ್ಯಾಪಕವಾಗಿ ಕಂಡು ಬರುತ್ತದೆ.

**ಯುರೋಪಿಗೆ ಇಸ್ಲಾಮಿನ ಭಯ**

'ಮುಹಮ್ಮದ್ ಇನ್ ಯುರೋಪ್' ಎಂಬ ಕೃತಿಯಲ್ಲಿ ಮಿನೂ ರೀವ್ಸ್ ಇದನ್ನು ಸರಿಯಾಗಿಯೇ ವಿಶ್ಲೇಷಿಸಿದ್ದಾರೆ:

ಯುರೋಪಿನ ಮಟ್ಟಿಗೆ ಇಸ್ಲಾಮ್ ಕೇವಲ ಸೈನಿಕ ಬೆದರಿಕೆ ಮಾತ್ರವಾಗಿರಲಿಲ್ಲ. ಅದು ಒಂದು ಪರ್ಯಾಯ ಆದರ್ಶವನ್ನು ಪ್ರಸ್ತುತಪಡಿಸುತ್ತಿದ್ದುದರಿಂದ ಸೈದ್ಧಾಂತಿಕ ಮತ್ತು ನೈತಿಕ ಬೆದರಿಕೆಯೂ ಆಗಿತ್ತು. ವೈಚಾರಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಅರಬ್ ಜಗತ್ತು ಯುರೋಪನ್ನು ನೋಡಿ ಗೇಲಿ ಮಾಡಬಹುದಿತ್ತು. ವೈದ್ಯಕೀಯ, ಗಣಿತ, ಭೌತಶಾಸ್ತ್ರದ ಕೆಲವು ವಿಭಾಗಗಳು, ಖಗೋಳಶಾಸ್ತ್ರ, ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ ಮತ್ತಿತರ ನೈಸರ್ಗಿಕ ಶಾಸ್ತ್ರಗಳಲ್ಲಿ ಇಸ್ಲಾಮೀ ಜಗತ್ತು ಪಾಶ್ಚಾತ್ಯ ಕ್ರೈಸ್ತ ಜಗತ್ತಿಗಿಂತ ಭಾರಿ ಮುಂದಿತ್ತು. ಭಾರತದ 'ಶೂನ್ಯ'ವನ್ನು ಅಳವಡಿಸಿಕೊಳ್ಳುವ ಮೂಲಕ ಅರಬರು ಅಂಕಗಣಿತದ ಅಭ್ಯಾಸಗಳನ್ನು ಬಹಳ ಮಟ್ಟಿಗೆ ಸರಳಗೊಳಿಸಿದ್ದರು. ಬೀಜಗಣಿತ, ವಿಶ್ಲೇಷಣಾತ್ಮಕ ರೇಖಾಗಣಿತ ಮತ್ತು ಸ್ಫೆರಿಕಲ್ ಟ್ರಿಗೊನಾಮೆಟ್ರಿಯಂತಹ ಹೊಸ ಗಣಿತ ಶಾಸ್ತ್ರಗಳನ್ನು ಅಭಿವೃದ್ಧಿ ಪಡಿಸಿದರು. 'ಕ್ಯಾನನ್ ಆಫ್ ಮೆಡಿಸಿನ್ ಆಫ್ ಅವಿಸ್ಸಿನ್ನಾ' ಎಂಬ ಹನ್ನೊಂದನೇ ಶತಮಾನದ ಪರ್ಷಿಯನ್ ವಿಜ್ಞಾನಿ ಮತ್ತು ತತ್ವಜ್ಞಾನಿಯ ಕೃತಿಯು ಕ್ರಿ.ಶ. 1600ರ ತನಕ ಯುರೋಪಿನಲ್ಲಿ ಪ್ರಮುಖ ವೈದ್ಯಕೀಯ ಪಠ್ಯಪುಸ್ತಕವಾಗಿತ್ತು. ಅರಬರು ಸ್ಪೈನ್ ಮತ್ತು ಸಿಸಿಲಿಯಲ್ಲಿ ಭಾಷಾಂತರದ ಕಾಲೇಜುಗಳನ್ನು ತೆರೆದರು. ತನ್ಮೂಲಕ ಗ್ರೀಕ್, ಸಿರಿಯಾಕ್,

ಪರ್ಷಿಯನ್ ಮತ್ತು ಸಂಸ್ಕೃತದಲ್ಲಿದ್ದ ಜ್ಞಾನವನ್ನು ಅರಬಿಗೆ ವರ್ಗಾಯಿಸಿದರು. ತದನಂತರ ಈ ಜ್ಞಾನಭಂಡಾರ ಲ್ಯಾಟಿನ್‌ಗೆ ಭಾಷಾಂತರಗೊಂಡಿತು. ಸಂಶೋಧನೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಭಾಷಾಂತರದ ಕಾಲೇಜುಗಳ ಒಳಗಡೆ ಲೈಬ್ರರಿಗಳನ್ನೂ ಖಗೋಳ ವಿಜ್ಞಾನದ ಪ್ರಯೋಗಾಲಯಗಳನ್ನೂ ತೆರೆಯಲಾಯಿತು. ಪೂರ್ವ ಮತ್ತು ಪಶ್ಚಿಮದ ನಡುವಿನ ವೈಚಾರಿಕ ಮತ್ತು ವೈಜ್ಞಾನಿಕ ಕೊಡುಕೊಳ್ಳುವಿಕೆಗೆ ಸ್ಪೈನ್ ಮತ್ತು ಸಿಸಿಲಿ ಎರಡು ಪ್ರಮುಖ ಕೇಂದ್ರಗಳಾದವು. ತನ್ಮೂಲಕ ಯುರೋಪಿನಲ್ಲಿ ಮಾನವತಾವಾದ ಮತ್ತು ನವೋದಯದ ಉಗಮಕ್ಕೆ ಕಾಲ ಪ್ರಶಸ್ತವಾಯಿತು."

ಆದರೆ ಮರುಭೂಮಿಯ ಈ ಬದಾಯೂನ್ ಜನರು, ಬುಡಕಟ್ಟುಗಳ ನಡುವೆ ಆವಿರ್ಭವಿಸಿದ ಒಂದು ನಾಗರಿಕತೆ ಅತ್ಯಂತ ಸಣ್ಣ ಅವಧಿಯಲ್ಲಿ ಈ ರೀತಿಯ ನಾಜೂಕುತನ ಮತ್ತು ಜ್ಞಾನವನ್ನು ಸಂಪಾದಿಸಲು ಸಾಧ್ಯವಾಗಿದ್ದಾದರೂ ಹೇಗೆ? ಇದಕ್ಕೆ ಉತ್ತರ ಸರಳವಾದುದು. ಹೊಸ ಧರ್ಮದ ಹೊಸತನವು ಅರಬರನ್ನು ಅರಬ್ ಉಪಖಂಡದಿಂದಾಚೆಗಿನ ಅತ್ಯಂತ ನಾಗರಿಕವೆನ್ನಬಹುದಾದ ಪರ್ಷಿಯನ್, ಗ್ರೀಕ್ ಮತ್ತು ಬೈಜಂಟೈನ್‌ನ ಜನರ ಮಧ್ಯೆ ತಮ್ಮ ಧರ್ಮವನ್ನು ಹಬ್ಬಿಸಲು ಉತ್ತೇಜಿಸಿತು. ಪರ್ಷಿಯಾ ಮತ್ತು ಗ್ರೀಕ್ ತತ್ವಶಾಸ್ತ್ರದ ಶ್ರೀಮಂತಿಕೆಯನ್ನು ಬಳವಳಿಯಾಗಿ ಪಡೆದುಕೊಂಡ ಇವರು ಪರ್ಷಿಯಾದ ಕುಲೀನ ವರ್ಗದ ಸ್ವಭಾವ, ಹವ್ಯಾಸ ಮತ್ತು ಗುಣ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡಿದ್ದರು. ಇದನ್ನೇ ಅವರು ಅನಂತರ ದಕ್ಷಿಣ ಯುರೋಪಿಗೆ ವರ್ಗಾಯಿಸಿದರು. ಹೀಗೆ ಯುರೋಪಿಯನರಿಗೆ ಮುಸ್ಲಿಮ್ ಸಂಸ್ಕೃತಿಯ ಶ್ರೇಷ್ಠತೆಯನ್ನು ಮನದಟ್ಟಾಗಿಸಿತು. ಕ್ರಮೇಣ ಅವರು ಅಸೂಯೆ ಮತ್ತು ಅಸಮಾಧಾನವನ್ನು ಬೆಳೆಸಿಕೊಳ್ಳತೊಡಗಿದರು. ಪರಿಣಾಮವಾಗಿ, ಈ ಯಶೋಗಾಥೆಯ ಪ್ರಮುಖ ರೂವಾರಿ ಮತ್ತು ಪ್ರೇರಣೆಯಾಗಿದ್ದ ಪ್ರವಾದಿ ಮುಹಮ್ಮದ್ ಅವರ ಕೆಂಗಣ್ಣಿಗೆ ಗುರಿಯಾದರು. ಇಸ್ಲಾಮಿನ ಬಗ್ಗೆ ಮಧ್ಯಕಾಲೀನ ಯುರೋಪಿಗಿದ್ದ ಭಯವು (ಐರೋಪ್ಯ ಚರಿತ್ರೆಯಲ್ಲಿ ಮಧ್ಯ ಯುಗವು ಐದನೇ ಶತಮಾನದಿಂದ ಹದಿನೈದನೇ ಶತಮಾನದವರೆಗೆ ಮುಂದುವರಿದಿತ್ತು. ಪಶ್ಚಿಮ ಯುರೋಪ್ ಸಾಮ್ರಾಜ್ಯದ ಪತನದೊಂದಿಗೆ ಅದು ಆರಂಭಗೊಂಡಿತ್ತು) ಪ್ರವಾದಿ ಮುಹಮ್ಮದ್‌ರನ್ನು ವಿಕಾರವಾಗಿ ಚಿತ್ರಿಸಲು ನಿರ್ಬಂಧಿಸಿತು.

ತಮ್ಮಿಂದ ಇಷ್ಟೊಂದನ್ನು ಪಡೆದುಕೊಂಡ ಯುರೋಪ್ ಯಾಕೆ ಇಂದು ಅಗಾಧವಾಗಿ ಮುಂದುವರಿದಿದೆ. ಮುಸ್ಲಿಮ್ ರಾಷ್ಟ್ರಗಳು ಯಾಕೆ ನಿಂತ ನೀರಾಗಿವೆ ಎಂಬ ಬಗ್ಗೆ ಮುಸ್ಲಿಮರು ಇಂದು ಆತ್ಮವಿಮರ್ಶೆ ನಡೆಸಬೇಕಾಗಿದೆ. ಚಾರಿತ್ರಿಕವಾಗಿ ನೋಡಿದರೆ, ಬೌದ್ಧಿಕ ನಿಷ್ಕ್ರಿಯತೆಯ ನಂತರ (ಮುಸ್ಲಿವ್ ಜಗತ್ತು) ಪಾಶ್ಚಾತ್ಯ ವಸಾಹತುಶಾಹಿತ್ವಕ್ಕೊಳಪಟ್ಟಿತು ಮತ್ತು ಪ್ರತಿರೋಧವನ್ನು ಕ್ಲಿಷ್ಟಕರಗೊಳಿಸಿತು. ಮುಸ್ಲಿಮ್

ಜಗತ್ತು ಇನ್ನೂ ಉಚ್ಛ್ರಾಯದಲ್ಲಿದ್ದಾಗಲೇ ಪಶ್ಚಿಮದಲ್ಲಿ ಇಸ್ಲಾಮ್ ಮತ್ತು ಪ್ರವಾದಿ ಮುಹಮ್ಮದ್ ವಿರುದ್ಧ ಆರಂಭಗೊಂಡ ಮಿಥ್ಯ ಪ್ರಚಾರವು ಯುರೋಪ್ ಉಚ್ಛ್ರಾಯಕ್ಕೆ ಬಂದರೂ ಕೊನೆಗೊಳ್ಳಲಿಲ್ಲ. ಅಷ್ಟೇ ಅಲ್ಲ, ಹೆಚ್ಚಿನ ತೀವ್ರತೆ ಮತ್ತು ಶಕ್ತಿಯನ್ನೂ ಅದು ಗಳಿಸಿತು. ಇದು ಮುಸ್ಲಿಮರಲ್ಲಿ ಆಕ್ರೋಶ ಹೆಚ್ಚಲು ಕಾರಣವಾಯಿತು.

(ಮಿನೂ ರೀವ್ಸ್, ಮುಹಮ್ಮದ್ ಇನ್ ಯುರೋಪ್: ಎ ತೌಸೆಂಡ್ ಇಯರ್ಸ್ ಆಫ್ ವೆಸ್ಟರ್ನ್ ಮಿಥ್–ಮೇಕಿಂಗ್, ಎನ್‌ವೈಯು ಪ್ರೆಸ್, 2001)

**5. ವಸಾಹತುಶಾಹಿತ್ವ**

ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಹೊರತುಪಡಿಸಿದರೆ ಮುಸ್ಲಿಮ್ ಜಗತ್ತನ್ನು ವಸಾಹತೀಕರಿಸಿದ ಐರೋಪ್ಯ ಶಕ್ತಿಗಳ – ಬ್ರಿಟನ್, ಫ್ರಾನ್ಸ್, ಹಾಲೆಂಡ್ ವರ್ತನೆ ಹೆಚ್ಚು ಕಡಿಮೆ ಒಂದೇ ರೀತಿಯಿತ್ತು. 'ಒಡೆದು ಆಳುವುದು' ಆಕ್ರಮಣಕಾರರ ನೀತಿಯಾಗಿತ್ತು. ಒಬ್ಬ ರಾಜನ ವಿರುದ್ಧ ಇನ್ನೊಬ್ಬ ರಾಜನನ್ನು ಎತ್ತಿ ಕಟ್ಟುವ ಮೂಲಕ ಬ್ರಿಟಿಷರು ಭಾರತದಲ್ಲಿ ಮೊಘಲ್ ಆಳ್ವಿಕೆ ಕೊನೆಗೊಳಿಸಿದರು. ಕ್ರಿ.ಶ. 1857ರ ಸ್ವಾತಂತ್ರ್ಯ ಹೋರಾಟವು ಬ್ರಿಟಿಷರನ್ನು ಹೊರದಬ್ಬಲು ಭಾರತೀಯ ಜನತೆ ನಡೆಸಿದ ಕೊನೆಯ ಹೋರಾಟವಾಗಿತ್ತು. ಆದರೆ ಅದು ಸಂಪೂರ್ಣ ವಿಫಲವಾಯಿತು. ಮಾತ್ರವಲ್ಲ, ಭಾರತದಲ್ಲಿ ಕೊನೆಯ ಮೊಘಲ್ ಚಕ್ರಾಧಿಪತಿಯಾಗಿದ್ದ ಬಹದ್ದೂರ್ ಷಾ ಝಫರ್ 'ಮುಕ್ತ ವ್ಯಾಪಾರ'ದ ಬಗ್ಗೆ ಒಲವು ಹೊಂದಿರಲಿಲ್ಲ. ಆತನಿಗೆ ಬ್ರಿಟಿಷರ ಉದ್ದೇಶಗಳ ಬಗ್ಗೆ ಸಂಶಯವಿದ್ದುದರಿಂದಲೇ ಅವರಿಗೆ ವ್ಯಾಪಾರದಲ್ಲಿ ವಿನಾಯಿತಿ ನೀಡಲು ಆತ ಹಿಂದೇಟು ಹಾಕಿದ. ಕೊನೆಗೆ ಆತನ ಅನುಮಾನಗಳೇ ನಿಜವೆಂದು ಸಾಬೀತಾಯಿತು.

ಸ್ಥಳೀಯರನ್ನು 'ನಾಗರಿಕ'ಗೊಳಿಸುವ ತಮ್ಮ ಉದ್ದೇಶವನ್ನು ಜನರಿಗೆ ಮನವರಿಕೆ ಮಾಡಲಿಕ್ಕಾಗಿ ಬ್ರಿಟಿಷರು ಝಫರ್‌ಗೆ ಆತನ ಎಲ್ಲ ಕುಟುಂಬಿಕರ ಶಿರವನ್ನು ಬೆಳ್ಳಿ ತಟ್ಟೆಯಲ್ಲಿಟ್ಟು ನೀಡಲಾಯಿತು. ಕೊನೆಗೆ ಆತನನ್ನು ರಂಗೂನ್‌ಗೆ ಗಡೀಪಾರು ಮಾಡಲಾಯಿತು. ಅಲ್ಲಿ ಆತ ದಟ್ಟದರಿದ್ರನಾಗಿ ಮೃತಪಟ್ಟ. ಈ ಹಂತದಲ್ಲಿ ಆತ ಉರ್ದು ಭಾಷೆಯ ಕೆಲವು ಅತ್ಯಂತ ಶ್ರೇಷ್ಠ ಕಾವ್ಯಗಳನ್ನು ರಚಿಸಿದ.

ಭಾರತವನ್ನು ವಶಪಡಿಸಿಕೊಂಡ ನಂತರ ಬ್ರಿಟಿಷರು ಮುಸ್ಲಿಮ್ ಸಮಾಜದ ಬಳಿಯಿದ್ದ ಜ್ಞಾನ ಮತ್ತು ನೈಪುಣ್ಯವನ್ನು ವ್ಯವಸ್ಥಿತವಾಗಿ ಕಿತ್ತುಕೊಂಡರು. ಎಲ್ಲ ರೀತಿಯ ವೈಚಾರಿಕ, ಜ್ಞಾನಾಧರಿತ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಿಷೇಧಿಸಲಾಯಿತು. ಉದಾಹರಣೆಗೆ, ಕ್ರಿ.ಶ. 1595ರಲ್ಲಿ ಡಚ್ಚರು ಇಂಡೋನೇಷ್ಯಾವನ್ನು ವಶಪಡಿಸಿಕೊಂಡಾಗ

ಅವರು ಅಲ್ಲಿನ ಎಲ್ಲ ಮದ್ರಸಾಗಳನ್ನು, ಕಾಲೇಜು ಮತ್ತು ಲೈಬ್ರರಿಗಳನ್ನು ಮುಚ್ಚಿದರು ಮತ್ತು ಶಿಕ್ಷಣವನ್ನು ನಿಷೇಧಿಸಿದರು. ಡಚ್ಚರು ತಮ್ಮದೇ ಅಗತ್ಯಕ್ಕಾಗಿ ನಿರ್ಮಿಸಿದ್ದ ಕೆಲವೇ ಕೆಲವು ಲೈಬ್ರರಿಗಳಿಗೆ ಸ್ಥಳೀಯರಿಗೆ ಪ್ರವೇಶ ನಿಷೇಧಿಸಲಾಯಿತು. ಕ್ರಿ.ಶ. 1850ರಲ್ಲಿ ಅವರು ಸ್ಥಳೀಯರಿಗೆ ಪ್ರಾಥಮಿಕ ಶಿಕ್ಷಣದ ಅವಕಾಶ ಕಲ್ಪಿಸಿದರು. ಆದರೆ ಪ್ರೌಢ ಶಿಕ್ಷಣದಿಂದ ತಡೆದರು. ತದನಂತರ ಇಸ್ಲಾಮೀ ವೈದ್ಯಕೀಯವನ್ನು ನಾಶಪಡಿಸಿದರು. 19ನೇ ಶತಮಾನದ ಆರಂಭದಲ್ಲಿ ಒಬ್ಬ ಫ್ರೆಂಚ್ ಡಾಕ್ಟರ್ ಟುನೀಷ್ಯಾದಲ್ಲಿ ವೈದ್ಯಕೀಯ ವೃತ್ತಿ ನಡೆಸಬೇಕಾದರೆ ಆತ ವೈದ್ಯರ ಸಂಘದ ಮುಖ್ಯಸ್ಥನ  ಈತ ಮುಸ್ಲಿಮನಾಗಿದ್ದ – ಅನುಮತಿ ಪಡೆಯಬೇಕಾಗಿತ್ತು. ಆದರೆ ಶತಮಾನದ ಕೊನೆಯ ವೇಳೆಗೆ ಫ್ರಾನ್ಸ್‌ನ ವಸಾಹತುಶಾಹಿ ಆಡಳಿತಗಾರರು ಇಸ್ಲಾಮಿಕ್ ವೈದ್ಯಕೀಯವನ್ನು ಕಳಪೆ ದರ್ಜೆಯದ್ದೆಂದು ತೀರ್ಪು ನೀಡಿ ಅದನ್ನು ಹತ್ತಿಕ್ಕಲು ಪ್ರಯತ್ನಿಸಿದರು. ಕ್ರಮೇಣ ಇಸ್ಲಾಮಿಕ್ ವೈದ್ಯಶಾಸ್ತ್ರವನ್ನೇ ಮುಸ್ಲಿಮ್ ಜಗತ್ತಿನಲ್ಲಿ ನಿಷೇಧಿಸಲಾಯಿತು.

**ವಸಾಹತುಶಾಹಿತ್ವದ ಉತ್ಪಾದನೆ:**

ತಾವು ವಸಾಹತಿಗೊಳಪಡಿಸಿದ ಮುಸ್ಲಿಮ್ ಸಮಾಜಗಳಲ್ಲಿ ಅವರು ತಮ್ಮ ಕೈಗೆ ಸಿಕ್ಕ ಎಲ್ಲವನ್ನೂ ಲೂಟಿ ಮಾಡಿದರು. ಅಷ್ಟೇ ಅಲ್ಲ, ತಮ್ಮ ಮಾತೃದೇಶಕ್ಕೆ ಕಚ್ಚಾ ಸಾಮಗ್ರಿಗಳನ್ನು ಒಯ್ಯುವ ವ್ಯವಸ್ಥೆಯನ್ನು ಮಾಡಿಕೊಂಡರು.

ಭಾರತದ ಜವಳಿ ಉದ್ಯಮದ ಪಳಿಯುಳಿಕೆಗಳ ಮೇಲೆ ಉತ್ತರ ಇಂಗ್ಲೆಂಡ್‌ನ ಜವಳಿ ಉದ್ಯಮ ಮೈದಳೆಯಿತು. ವಸಾಹತುಶಾಹಿತ್ವ ಮತ್ತು ಕೈಗಾರಿಕಾ ಕ್ರಾಂತಿ ಒಂದಕ್ಕೊಂದು ತಳುಕು ಹಾಕಿಕೊಂಡಿರುವುದು ಇಲ್ಲೇ.

ಐರೋಪ್ಯ ಆಡಳಿತಗಾರರು ಸ್ಥಳೀಯ ಮಟ್ಟದಲ್ಲಿ ತಮ್ಮ ಪ್ರತಿನಿಧಿಗಳಾಗಿ ಕೆಲಸ ಮಾಡಲು ಅಧಿಕಾರಿಗಳ ಒಂದು ವರ್ಗವನ್ನು ಸೃಷ್ಟಿಸಿದರು. 1835ರಲ್ಲಿ ಮೆಕಾಲೆ, ಮಿನಿಟ್ಸ್ ಆಫ್ ಇಂಡಿಯನ್ ಎಜುಕೇಶನ್‌ನಲ್ಲಿ ಈ ಕೆಳಗಿನಂತೆ ಬರೆದ: "ನಮ್ಮ ಮತ್ತು ನಾವು ಆಳುತ್ತಿರುವ ಮಿಲಿಯಗಟ್ಟಲೆ ಜನರ ಮಧ್ಯೆ ಸಂಪರ್ಕ ಕಲ್ಪಿಸಲು ಒಂದು ವರ್ಗವನ್ನು ಸೃಷ್ಟಿಸಬೇಕಾದ ಅಗತ್ಯವಿದೆ. ಇವರು ರಕ್ತ ಮತ್ತು ಬಣ್ಣದಲ್ಲಿ ಭಾರತೀಯರಂತಿದ್ದರೂ ಇವರ ರುಚಿ, ಅಭಿಪ್ರಾಯ, ನೈತಿಕತೆ ಮತ್ತು ಬೌದ್ಧಿಕತೆಯು ಸಂಪೂರ್ಣವಾಗಿ ಇಂಗ್ಲಿಷರದ್ದಾಗಿರಬೇಕು." ಮೆಕಾಲೆಯ ಅಭಿಪ್ರಾಯ ಇತರ ಆಡಳಿತಗಾರರ ಭಾವನೆಗಳನ್ನೂ ಪ್ರತಿಬಿಂಬಿಸುತ್ತಿತ್ತು.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಡಚ್ ಈಸ್ಟ್ ಇಂಡೀಸ್

ಕಂಪನಿಗಳು ಮುಸ್ಲಿಮ್ ಜಗತ್ತಿನೊಳಗೆ ಒಂದು ಮುಕ್ತ ಮಾರುಕಟ್ಟೆಯ ಪ್ರಯತ್ನಗಳಾಗಿದ್ದವು. ಇವರಿಗೆ ವಿವಿಧ ಮುಸ್ಲಿಮ್ ಆಡಳಿತಗಾರರಿಂದ ಮುಕ್ತವಾಗಿ ವ್ಯಾಪಾರ ನಡೆಸಲು ರಿಯಾಯಿತಿ ದೊರೆತಿತ್ತು. ಆದರೆ ಅವರ ವ್ಯಾಪಾರವು ದಂಡಯಾತ್ರೆ ಮತ್ತು ಸಾಮ್ರಾಜ್ಯ ವಿಸ್ತರಣೆಯನ್ನೂ ಒಳಗೊಂಡಿತ್ತೆಂಬುದು ಗಮನಾರ್ಹ.

ಎಲ್ಲ ದಿಟ್ಟ ಆಧುನಿಕವಾದಿಗಳಿಗೆ, ಜನರನ್ನು 'ನಾಗರಿಕ'ರನ್ನಾಗಿಸಲು ಉತ್ಸುಕವಾಗಿದ್ದ ಮಿಷನರಿ ಗುಂಪುಗಳಿಗೆ, ವಿಜ್ಞಾನ, ಅಭಿವೃದ್ಧಿ ಮತ್ತು 'ಬಿಳಿ ವ್ಯಕ್ತಿಯ ಹೊಣೆ'ಯಲ್ಲಿ ನಂಬಿಕೆ ಹೊಂದಿದ್ದ ಎಲ್ಲರಿಗೂ ಮುಸ್ಲಿಮ್ ಸಮಾಜಗಳು ಒಂದು ಪ್ರಯೋಗ ಶಾಲೆಯಾಗಿ ಮಾರ್ಪಟ್ಟವು. ಅವರು ಶಿಕ್ಷಣ, ಸಮಾಜ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ತಮ್ಮ ಹೊಸ ಮತ್ತು ಮಹತ್ವಾಕಾಂಕ್ಷಿ ನೀತಿಗಳನ್ನು ಇಲ್ಲೇ ಪರೀಕ್ಷೆಗೊಡ್ಡಿದರು.

ವಸಾಹತುಶಾಹಿತ್ವವು ಮುಸ್ಲಿಮ್ ನಾಗರಿಕತೆಯನ್ನು ಇಂಚಿಂಚಾಗಿ ಕಳಚಿಹಾಕಿತು. ಅದು ಮುಸ್ಲಿಮರ ದೇಹವನ್ನಷ್ಟೇ ಅಲ್ಲ, ಮನಸ್ಸನ್ನೂ ಆವರಿಸಿಬಿಟ್ಟಿತು. ಇಸ್ಲಾಮ್‌ನ ಜತೆ ಸಂಬಂಧವುಳ್ಳ ಪ್ರತಿಯೊಂದರ ಬಗ್ಗೆಯೂ ಅವರಲ್ಲಿ ಕೀಳರಿಮೆ ಮೂಡಿಸಲಾಯಿತು. ಮುಸ್ಲಿಮ್ ಸಮಾಜಗಳ ಸಾಂಸ್ಕೃತಿಕ ಆದ್ಯತೆಗಳು ಬದಲಾದವು. ಅದು ಮುಸ್ಲಿಮ್ ರಾಷ್ಟ್ರಗಳ ಸಂಪತ್ತಿನ ಮೂಲಗಳನ್ನೇ ಕಿತ್ತು ಹಾಕಿಬಿಟ್ಟಿತು ಮತ್ತು ಮುಸ್ಲಿಮ್ ಜನಸಾಮಾನ್ಯರನ್ನು ದಾರಿದ್ರ್ಯಕ್ಕೆ ತಳ್ಳಿತು.

ಇಸ್ಲಾಮಿನ 'ಸಮಸ್ಯೆ'ಯನ್ನು ಬಗೆಹರಿಸುವ ಪ್ರಯತ್ನದ ಭಾಗವಾಗಿ ಪಾಶ್ಚಾತ್ಯ ಜಗತ್ತು ಮುಸ್ಲಿಮರ ವಿರುದ್ಧ ಅವರ್ಣನೀಯ ಅಪರಾಧ ಮತ್ತು ಅನ್ಯಾಯಗಳನ್ನು ಎಸಗಿತು. ಐರೋಪ್ಯ ಚಿಂತನೆ ಮತ್ತು ಚರಿತ್ರೆಯಲ್ಲಿ ಇಸ್ಲಾಮ್ ಮತ್ತು ಮುಸ್ಲಿಮರು 'ಅನ್ಯ' ಎಂಬ ಭಾವನೆ ಈ ಮೂಲಕ ಸಾಂಸ್ಥೀಕರಣಗೊಂಡಿತು.

(ಝಿಯಾವುದ್ದೀನ್ ಸರ್ದಾರ್, ಇಂಟ್ರೊಡ್ಯೂಸಿಂಗ್ ಇಸ್ಲಾಮ್, 2009, ನ್ಯಾಷನಲ್ ಬುಕ್ ನೆಟ್‌ವರ್ಕ್, ಐಕನ್ ಬುಕ್ಸ್ ಲಿ. ಲಂಡನ್)

## ಆಧುನಿಕ ದ್ವೇಷ

ಪಾಶ್ಚಾತ್ಯ ಮನಸ್ಸಿನಿಂದ ದ್ವೇಷವನ್ನು ಅಳಿಸಿ ಹಾಕಲು ಕಾಲನಿಗೆ ಏನೂ ಮಾಡಲಾಗಲಿಲ್ಲ. ಕಾಲ ಕಳೆದಂತೆ ಅದು ಹಲವು ಹೊಸ ಅವತಾರಗಳನ್ನು ಪಡೆಯಿತು. ಇಂದು ಪಶ್ಚಿಮವು ಮುಸ್ಲಿಮ್ ಜಗತ್ತು ಮತ್ತು ಪೂರ್ವ ಜಗತ್ತನ್ನು ಬಲಾತ್ಕಾರದಿಂದ ಮಣಿಸುತ್ತಿದೆ. ಆಫ್ಘಾನಿಸ್ತಾನ ಮತ್ತು ಇರಾಕ್‌ನ ಮೇಲೆ ಸೈನಿಕ ಕಾರ್ಯಾಚರಣೆ ನಡೆಸಲು ಸೆಪ್ಟಂಬರ್ 11 ದೇವರೇ ಒದಗಿಸಿಕೊಟ್ಟ ಒಂದು ಅವಕಾಶವಾಗಿ ಮಾರ್ಪಟ್ಟಿತು. ಎರಡು ರಾಷ್ಟ್ರಗಳ ಅಮಾಯಕ ನಾಗರಿಕರನ್ನು ಬಲಿಪಶುಗಳನ್ನಾಗಿಸಿದ್ದೇ ಅಲ್ಲದೆ ಮೂಲ ಸೌಕರ್ಯಗಳನ್ನು ನಾಶಪಡಿಸಲಾಯಿತು. ಇಸ್ಲಾಮ್ ಮತ್ತು ಮುಸ್ಲಿಮರನ್ನು ಕರಾಳವಾಗಿ ಚಿತ್ರಿಸುವ ಒಂದು ಹೊಸ ಅಭಿಯಾನಕ್ಕೆ ಇದು ನಾಂದಿ ಹಾಡಿತು. ಆದರೆ ಪಶ್ಚಿಮದ ಹಿಂಸಾಚಾರದಿಂದ ನೊಂದ ಮುಸ್ಲಿಮ್ ಸಮುದಾಯದ ಹೊಸ ತಲೆಮಾರು ತೀವ್ರವಾದಿ ಒಲವು ಬೆಳೆಸಿಕೊಳ್ಳಲು ಇದು ಪ್ರೇರಣೆಯಾಯಿತು. ಇದು ಇಸ್ಲಾಮಿಗಾಗಲೀ ಪಶ್ಚಿಮಕ್ಕಾಗಲೀ ಶುಭಲಕ್ಷಣವಲ್ಲ. ದ್ವೇಷವನ್ನು ಮೂಲಭೂತವಾದದ ಮೂಲಕ ಎದುರಿಸುವುದರಲ್ಲಿ ಯಾವುದೇ ಲಾಭವಿಲ್ಲ. ಭಾರತ, ಮ್ಯಾನ್ಮರ್‌ನಂತಹ ದೇಶಗಳಲ್ಲಿ  ಇಲ್ಲಿ ಮುಸ್ಲಿಮ್ ಆಡಳಿತದ ಅವಧಿಯಲ್ಲೂ ಇಸ್ಲಾಮ್ ಆಳವಾಗಿ ಬೇರು ಬಿಟ್ಟಿರಲಿಲ್ಲ  ಇಂದು ಪಶ್ಚಿಮದ ಹದಿಮೂರು ಶತಮಾನಗಳಷ್ಟು ಹಳೆಯದಾದ ಪೂರ್ವಗ್ರಹಗಳಿಗೆ ರಿಟೇಲ್ ಮಾರುಕಟ್ಟೆ ಸಿಗುತ್ತಿದೆ.

ಇಸ್ಲಾಮನ್ನು ಸೈದ್ಧಾಂತಿಕವಾಗಿ ಮತ್ತು ವೈಚಾರಿಕವಾಗಿ ಎದುರಿಸುವ ವಿಚಾರದಲ್ಲಿ ಪಾಶ್ಚಾತ್ಯ ಜಗತ್ತು ಸದಾ ಹಿಂದೇಟು ಹಾಕಿದೆ. ಪಾಶ್ಚಾತ್ಯ ಶ್ರೋತೃಗಳ ಮಟ್ಟಿಗೆ ಇಸ್ಲಾಮ್ ಎಷ್ಟೊಂದು ಸರಳ ಮತ್ತು ಆಕರ್ಷಕವಾಗಿ ಬಿಟ್ಟಿದೆಯೆಂದರೆ ಅದರ ಮೇಲೆ ನಡೆಸುವ ಸೈದ್ಧಾಂತಿಕ ದಾಳಿ ಚರ್ವಿತಚರ್ವಣವಾಗಿ ಬಿಟ್ಟಿರುವ ಕ್ರಿಶ್ಚಿಯನ್ ತರ್ಕಗಳನ್ನು ಮತ್ತೆ ಪ್ರಸ್ತಾಪಿಸುವುದಕ್ಕೆ ಸಮ. ಆದ್ದರಿಂದ ಅದು ವೈಯಕ್ತಿಕವಾಗಿ ಪ್ರವಾದಿ ಮುಹಮ್ಮದ್‌ರ ಮೇಲೆ ದಾಳಿ ನಡೆಸುವ ಮತ್ತು ಸಲಾಹುದ್ದೀನ್ ಅಯ್ಯೂಬಿಯಂತವರನ್ನು ಕ್ರೂರಿಗಳನ್ನಾಗಿ ಚಿತ್ರಿಸುವ ಅಥವಾ ಇಸ್ಲಾಮನ್ನು ದೋಷಪೂರಿತ ಸಿದ್ಧಾಂತವೆಂಬಂತೆ ಬಿಂಬಿಸುವುದಕ್ಕೆ ಮುಂದಾಯಿತು. ಇಂದು ಶಾಂತಿ ಮತ್ತು ಸಂಧಾನಕ್ಕೆ ನಮ್ಮ ಮುಂದಿರುವ ಮಾರ್ಗ ಪರಸ್ಪರ ಅರ್ಥಮಾಡಿಕೊಳ್ಳುವುದು ಮತ್ತು ಹಂಚಿಕೊಳ್ಳುವುದು ಮಾತ್ರ. ಪೂರ್ವಗ್ರಹಗಳು ಮತ್ತು ಸಿದ್ಧ ಮಾದರಿಗಳ ಬಿಕರಿಯಿಂದ ಇದು ಸಾಧ್ಯವಿಲ್ಲ.

# ಕೋಮು ವಿಷದಿಂದ ನಮ್ಮ ರಾಜಕೀಯ ವ್ಯವಸ್ಥೆಯನ್ನು ಮುಕ್ತಗೊಳಿಸುವುದು

(ಮಾರ್ಕಾಂಡೇಯ ಕಾಟ್ಜು, ಸುಪ್ರೀಮ್ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರು ಮತ್ತು ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷರು)

ಧಾರ್ಮಿಕ ವಿದ್ವೇಷವನ್ನು ಬೆಳೆಸುವ ಮತ್ತು ಅದನ್ನೇ ತಮ್ಮ ಅಸ್ತಿತ್ವಕ್ಕಾಗಿ ಬಳಸಿಕೊಳ್ಳುವ ಪ್ರತಿಯೊಂದನ್ನೂ ಭಾರತೀಯರು ಸೋಲಿಸಬೇಕು. ಇಂದು ಭಾರತದಲ್ಲಿ ಅನೇಕ ಹಿಂದೂ ಮತ್ತು ಮುಸ್ಲಿಮರು ಕೋಮುವಾದದ ಸೋಂಕಿಗೆ ತುತ್ತಾಗಿದ್ದರೂ, ಕ್ರಿ.ಶ. 1857ಕ್ಕಿಂತ ಮುಂಚೆ ಹೆಚ್ಚಿನ ಭಾರತೀಯರಲ್ಲಿ ಮತೀಯ ಭಾವನೆ ಇರಲಿಲ್ಲ. ಹಿಂದೂಗಳು ಮತ್ತು ಮುಸ್ಲಿಮರಲ್ಲಿ ಖಂಡಿತವಾಗಿಯೂ ಕೆಲವು ಭಿನ್ನಾಭಿಪ್ರಾಯಗಳಿದ್ದವು, ಆದರೆ ದ್ವೇಷ ಇರಲಿಲ್ಲ. ಈದ್‌ನ ಸಂದರ್ಭದಲ್ಲಿ ಹಿಂದೂಗಳು ಮುಸ್ಲಿಮರ ಜತೆಗೂಡಿದರೆ, ಹೋಳಿ ಮತ್ತು ದೀಪಾವಳಿಯ ಸಂದರ್ಭದಲ್ಲಿ ಮುಸ್ಲಿಮರು ಹಿಂದೂಗಳೊಂದಿಗೆ ಸೇರಿ ಹಬ್ಬ ಆಚರಿಸುತ್ತಿದ್ದರು ಮತ್ತು ಅಣ್ಣತಮ್ಮಂದಿರಂತೆ ಜೀವಿಸುತ್ತಿದ್ದರು.

ಆದರೆ ಉಪಭೂಖಂಡದ ಎರಡು ಪ್ರಮುಖ ಧಾರ್ಮಿಕ ಸಮುದಾಯಗಳ ಮಧ್ಯೆ 150 ವರ್ಷಗಳ ನಂತರ ಸಂಶಯ ಮತ್ತು ವೈರದ ಭಾವನೆ ಮೊಳಕೆಯೊಡೆಯಿತು ಎಂಬುದೇ ಆಶ್ಚರ್ಯದ ಸಂಗತಿ. ಭಾರತದಲ್ಲಿ ಇಂದು ಮುಸ್ಲಿಮರು ಹಿಂದೂಗಳ ಬಳಿ ಬಾಡಿಗೆ ಮನೆ ಪಡೆಯಲಿಕ್ಕೂ ಸಾಧ್ಯವಾಗದ ಪರಿಸ್ಥಿತಿ ಇದೆ. ದೇಶದ ಯಾವುದೇ ಭಾಗದಲ್ಲಿ ಬಾಂಬ್ ಸ್ಫೋಟದ ಘಟನೆ ನಡೆದಾಗ, ವೈಜ್ಞಾನಿಕ ತನಿಖಾ ಕ್ರಮಗಳಲ್ಲಿ ಸೂಕ್ತ ತರಬೇತಿ ಹೊಂದಿರದ ಪೊಲೀಸರು ನೈಜ ಅಪರಾಧಿಗಳನ್ನು ಹಿಡಿಯಲಾಗದೆ ಅರ್ಧ ಡಜನ್ ಮುಸ್ಲಿಮರನ್ನು ಹಿಡಿದು ಬಿಟ್ಟು ಪ್ರಕರಣವನ್ನು ಮುಗಿಸಲು ಪ್ರಯತ್ನಿಸುತ್ತಾರೆ. ಈ ಪೈಕಿ ಹೆಚ್ಚಿನವರು ಕ್ರಮೇಣ ನ್ಯಾಯಾಲಯದಿಂದ ನಿರ್ದೋಷಿಗಳಾಗಿ ಹೊರ ಬಂದರೂ ಆಗಲೇ ಹಲವು ವರ್ಷಗಳನ್ನು ಅವರು ಜೈಲಲ್ಲಿ ಕಳೆದಿರುತ್ತಾರೆ. ಇದು ಭಾರತದ ಮುಸ್ಲಿಮರಲ್ಲಿ ತೀವ್ರವಾದ ಪ್ರತ್ಯೇಕತೆಯ ಭಾವನೆಯನ್ನು ಮೂಡಿಸಿದೆ. ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಪರಿಸ್ಥಿತಿ ಇನ್ನಷ್ಟು ಚಿಂತಾಜನಕವಾಗಿದ್ದು ಅವರು ತೀವ್ರವಾದಿಗಳು ಮತ್ತು ಧಾರ್ಮಿಕ ಕರ್ಮಠರ ಭಯದಿಂದ ದಿನದೂಡುತ್ತಿದ್ದಾರೆ.

## ಹೊಸ ತಿರುವು:

ಭಾರತದ ಕೋಮು ಸಂಬಂಧಗಳ ಇತಿಹಾಸದಲ್ಲಿ 1857 ಅತ್ಯಂತ ನಿರ್ಣಾಯಕ ವರ್ಷ. ಅಲ್ಲಿಯವರೆಗೂ ದೇಶದಲ್ಲಿ ಯಾವುದೇ ಕೋಮು ಸಮಸ್ಯೆ ಅಥವಾ ದೊಂಬಿ ಇರಲಿಲ್ಲ. ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಭಿನ್ನಾಭಿಪ್ರಾಯಗಳಿದ್ದವು ಎಂಬುದು ನಿಜ. ಆದರೆ ಭಿನ್ನಾಭಿಪ್ರಾಯಗಳು ಒಂದೇ ಅಪ್ಪನಿಗೆ ಹುಟ್ಟಿದ ಇಬ್ಬರು ಸೋದರರು ಅಥವಾ ಸೋದರಿಯರ ಮಧ್ಯೆಯೂ ಇರುತ್ತದೆ. ಹಿಂದೂಗಳು ಮತ್ತು ಮುಸ್ಲಿಮರು ಶಾಂತಿಯುತ ಸಹಬಾಳ್ವೆ ನಡೆಸಿದ್ದರು ಮತ್ತು ಕಷ್ಟ ಬಂದಾಗ ಪರಸ್ಪರ ನೆರವಾಗುತ್ತಿದ್ದರು.

ಭಾರತದ ಮೇಲೆ ಆಕ್ರಮಣ ನಡೆಸಿದ ಮುಸ್ಲಿಮರು ಹಲವು ಮಂದಿರಗಳನ್ನು ನಾಶಪಡಿಸಿದರು ಎಂಬುದೇನೋ ನಿಜ. ಆದರೆ ಸ್ಥಳೀಯ ಆಡಳಿತಗಾರರಾಗಿ ಮಾರ್ಪಟ್ಟ ಈ ಆಕ್ರಮಣಕೋರರ ವಂಶಜರು ಹೆಚ್ಚು ಕಡಿಮೆ ಕೋಮು ಸೌಹಾರ್ದಕ್ಕೆ ಒತ್ತು ನೀಡಿದರು. ಅವರು ತಮ್ಮ ಸ್ವಾರ್ಥಕ್ಕೋಸ್ಕರವೇ ಈ ನೀತಿಯನ್ನು ಅಳವಡಿಸಿದ್ದರು. ಯಾಕೆಂದರೆ ಪ್ರಜೆಗಳ ದೊಡ್ಡ ಸಂಖ್ಯೆ ಹಿಂದೂಗಳದ್ದಾಗಿತ್ತು. ಹಿಂದೂ ದೇಗುಲಗಳನ್ನು ಮುರಿದರೆ ದೊಂಬಿ ಮತ್ತು ಸಂಘರ್ಷ ಏಳಬಹುದು ಎಂಬುದು ಅವರಿಗೆ ಚೆನ್ನಾಗಿ ತಿಳಿದಿತ್ತು ಮತ್ತು ದೊಂಬಿ ಮತ್ತು ಸಂಘರ್ಷ ಯಾವುದೇ ಆಡಳಿತಗಾರನಿಗೆ ಬೇಕಿರುವುದಿಲ್ಲ. ಆದ್ದರಿಂದ ಹೆಚ್ಚಿನ ಎಲ್ಲ ಮುಸ್ಲಿಮರ ರಾಜರು ಕೋಮು ಸೌಹಾರ್ದವನ್ನು ಬೆಳೆಸಿದರು. ಅದು ಮೊಘಲರಾಗಿರಬಹುದು, ಅವಧ್, ಆರ್ಕಾಟ್ ಮತ್ತು ಮುರ್ಷಿದಾಬಾದ್‌ನ ನವಾಬರಾಗಿರಬಹುದು ಅಥವಾ ಹೈದರಾಬಾದ್‌ನ ನಿಝಾಮರಾಗಿರಬಹುದುದ ಇಲ್ಲವೇ ಟಿಪ್ಪು ಸುಲ್ತಾನ್ ಆಗಿರಬಹುದು.

ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಜತೆಜತೆಯಾಗಿ ಬ್ರಿಟಿಷರ ವಿರುದ್ಧ ಯುದ್ಧ ಮಾಡಿದರು. ದಂಗೆಯನ್ನು ಕೊನೆಗಾಣಿಸಿದ ನಂತರ ಬ್ರಿಟಿಷರಿಗೆ ಒಂದು ವಿಷಯ ಮನದಟ್ಟಾಗಿತ್ತು. ಭಾರತವನ್ನು ಆಳಬೇಕಾದರೆ ಹಿಂದೂ ಮತ್ತು ಮುಸ್ಲಿಮರನ್ನು ಒಡೆಯಲೇಬೇಕೆಂಬುದನ್ನು ಅವರು ಕಂಡುಕೊಂಡಿದ್ದರು. ಕ್ರಿ.ಶ. 1862ರಲ್ಲಿ ವೈಸ್‌ರಾಯ್ ಲಾರ್ಡ್ ಎಲ್ಗಿನ್‌ಗೆ ಬರೆದ ಪತ್ರದಲ್ಲಿ ಭಾರತದ ವಿದೇಶ ಕಾರ್ಯದರ್ಶಿಯಾಗಿದ್ದ ಸರ್ ಚಾರ್ಲ್ಸ್ ಬರೆದಿರುವ ಪತ್ರದ ಒಕ್ಕಣೆಯನ್ನು ಗಮನಿಸಿ:

"ಒಂದು ಸಮುದಾಯವನ್ನು ಇನ್ನೊಂದು ಸಮುದಾಯದ ವಿರುದ್ಧ ಎತ್ತಿಕಟ್ಟುವ ಮೂಲಕ ನಾವು ಭಾರತದಲ್ಲಿ ನಮ್ಮ ಅಧಿಕಾರವನ್ನು ಉಳಿಸಿಕೊಂಡಿದ್ದೇವೆ. ನಾವು ಇದನ್ನು ಮುಂದುವರಿಸಿಕೊಂಡು ಹೋಗಬೇಕು. ಆದ್ದರಿಂದ ಎಲ್ಲರಲ್ಲೂ ಸಮಾನವಾದ ಒಂದು ಭಾವನೆ ಮೂಡದಂತೆ ಮಾಡಲು ಏನೆಲ್ಲ ಮಾಡಬೇಕೋ ಅದನ್ನು ಮಾಡಿ."

## ಒಡೆದು ಆಳುವ ನೀತಿ:

1887ರ ಜನವರಿ 14ರಂದು ವಿದೇಶಾಂಗ ಕಾರ್ಯದರ್ಶಿ ವಿಸ್ಕೌಂಟ್ ಕ್ರಾಸ್ ಗವರ್ನರ್ ಜನರಲ್ ಡುಫ್ಫೆರಿನ್‌ಗೆ ಹೀಗೆ ಬರೆಯುತ್ತಾರೆ: "ಪಾಶ್ಚಾತ್ಯ ಚಿಂತನೆಗಳು ವ್ಯಾಪಕಗೊಂಡು ಬೇರು ಬಿಡತೊಡಗಿದರೆ ಅದುವೇ ಭಾರತದಲ್ಲಿ ನಮ್ಮ ಆಳ್ವಿಕೆಗಿರುವ ದೊಡ್ಡ ಅಪಾಯ. ಸುಶಿಕ್ಷಿತ ಭಾರತೀಯರನ್ನು (ಹಿಂದೂಗಳು ಮತ್ತು ಮುಸ್ಲಿಮರು) ಎಂಬ ಎರಡು ಗುಂಪುಗಳಲ್ಲಿ ವಿಂಗಡಿಸಿದರೆ ನಮ್ಮ ಆಡಳಿತ ವ್ಯವಸ್ಥೆಯ ಮೇಲೆ ಶಿಕ್ಷಣದ ಪ್ರಸಾರದಿಂದ ಆಗಬಹುದಾದ ಸೂಕ್ಷ್ಮ ಮತ್ತು ಸತತ ಆಕ್ರಮಣವನ್ನು ನಾವು ಹಿಮ್ಮೆಟ್ಟಿಸಬಹುದು. ಈ ಎರಡು ಸಮುದಾಯಗಳ ನಡುವೆ ಭಿನ್ನಾಭಿಪ್ರಾಯಗಳು ಮತ್ತಷ್ಟು ತೀವ್ರಗೊಳ್ಳುವುದಕ್ಕೆ ಪೂರಕವಾದ ಪಠ್ಯಪುಸ್ತಕಗಳನ್ನು ನಾವು ರಚಿಸಬೇಕು." ಹೀಗೆ ಕ್ರಿ.ಶ. 1857ರ ಬಳಿಕ ಹಿಂದೂ ಮತ್ತು ಮುಸ್ಲಿಮರ ಮಧ್ಯೆ ದ್ವೇಷ ಹುಟ್ಟಿಸುವಂತಹ ಒಂದು ಉದ್ದೇಶಪೂರ್ವಕ ನೀತಿಯನ್ನು ಅಳವಡಿಸಿಕೊಳ್ಳಲಾಯಿತು. ಇದನ್ನು ಹಲವು ಬಗೆಯಲ್ಲಿ ಅನುಷ್ಠಾನಗೊಳಿಸಲಾಯಿತು.

ಅನ್ಯ ಸಮುದಾಯದ ವಿರುದ್ಧ ಮಾತನಾಡಲು ಧಾರ್ಮಿಕ ನಾಯಕರಿಗೆ ಲಂಚ ಕೊಡುವುದು: ಇಂಗ್ಲಿಷ್ ಕಲೆಕ್ಟರ್ ಪಂಡಿತರನ್ನು ಕರೆದು ಮುಸ್ಲಿಮರ ವಿರುದ್ಧ ಮಾತನಾಡಲು ಹಣ ನೀಡುತ್ತಿದ್ದರು. ಜತೆಗೆ ಮೌಲ್ವಿಗಳನ್ನು ರಹಸ್ಯವಾಗಿ ತಮ್ಮಲ್ಲಿಗೆ ಕರೆಸಿಕೊಂಡು ಹಿಂದೂಗಳ ವಿರುದ್ಧ ಮಾತನಾಡುವಂತೆ ಹಣದ ಆಮಿಷ ಒಡ್ಡುತ್ತಿದ್ದರು.

ಕೋಮು ವಿದ್ವೇಷವನ್ನು ಸೃಷ್ಟಿಸಲು ಚರಿತ್ರೆಯ ಪುಸ್ತಕವನ್ನು ತಿರುಚಲಾಯಿತು: ಈಗಾಗಲೇ ಹೇಳಿದಂತೆ ಆರಂಭ ಕಾಲದ ಮುಸ್ಲಿಮ್ ಆಕ್ರಮಣಕಾರರು ಸಾಕಷ್ಟು ಹಿಂದೂ ಮಂದಿರಗಳನ್ನು ಒಡೆದರು. ಆದರೆ ತದನಂತರ ಆಡಳಿತ ನಡೆಸಿದ ಸ್ಥಳೀಯ ಮುಸ್ಲಿಮ್ ಅರಸರು (ಅಂದರೆ ಆಕ್ರಮಣಕಾರ ಬಾಬರನ ಸಂತತಿಯವನಾಗಿದ್ದ ಅಕ್ಬರ್ ಮೊದಲಾದವರು) ಮಂದಿರಗಳನ್ನು ಧ್ವಂಸಗೊಳಿಸಲು ಹೋಗಲಿಲ್ಲ. ಬದಲಿಗೆ ಹಿಂದೂ ದೇವಾಲಯಗಳಿಗೆ ಅನುದಾನ ಕೊಟ್ಟರು ರಾಮಲೀಲಾಗಳನ್ನು ಏರ್ಪಡಿಸಿದರು. ಜತೆಗೆ ಅವಧ್, ಮುರ್ಶಿದಾಬಾದ್ ಮತ್ತು ಆರ್ಕಾಟ್‌ನ ನವಾಬರು ಹೋಳಿ ಮತ್ತು ದೀಪಾವಳಿಯನ್ನೂ ಆಚರಿಸಿದರು. ಆಕ್ರಮಣಕಾರರ ಸಂತಾನವಾಗಿದ್ದ ಭಾರತೀಯ ಮುಸ್ಲಿಮ್ ದೊರೆಗಳ ಪೈಕಿ ಹೆಚ್ಚಿನವರು ಕೋಮು ಸೌಹಾರ್ದವನ್ನು ಪೋಷಿಸಿದರು ಎಂಬ ಅಂಶವನ್ನು ನಮ್ಮ ಇತಿಹಾಸದ ಪುಸ್ತಕಗಳಿಂದ ಮರೆಮಾಡಲಾಗಿದೆ. ನಮ್ಮ ಮಕ್ಕಳಿಗೆ ಮಹಮೂದ್ ಘಝ್ನಿ ಸೋಮನಾಥ ದೇವಾಲಯವನ್ನು ಧ್ವಂಸಗೊಳಿಸಿದ ಎಂಬುದನ್ನು ಕಲಿಸಲಾಗುತ್ತದೆಯೇ ಹೊರತು ಹಿಂದೂ ದೇವಾಲಯಗಳಿಗೆ ಮೊಘಲ್ ದೊರೆಗಳು, ಟಿಪ್ಪು ಸುಲಾನ್‌ನಂತಹ ಇತರ ಮುಸ್ಲಿಮ್ ಅರಸರು ದೇಣಿಗೆ ನೀಡುತ್ತಿದ್ದು

ಮತ್ತು ಹಿಂದೂ ಹಬ್ಬಗಳನ್ನು ಅವರು ವಿಜ್ರಂಭಣೆಯಿಂದ ಆಚರಿಸುತ್ತಿದ್ದರು ಎಂಬ ಅಂಶಗಳನ್ನು ಅವರಿಗೆ ಕಲಿಸುವುದಿಲ್ಲ. (ಇಂಟರ್‌ನೆಟ್‌ನಲ್ಲಿ ಹಿಸ್ಟರಿ ಇನ್ ದ ಸರ್ವಿಸ್ ಆಫ್ ಇಂಪೀರಿಯಲಿಸಮ್ ಎಂಬ ಬಿ.ಎನ್. ಪಾಂಡೆಯವರ ಲೇಖನ ಓದಿ)

ಉದ್ದೇಶಪೂರ್ವಕವಾಗಿ ಕೋಮು ಗಲಭೆಗಳನ್ನು ಹುಟ್ಟಿಸುವುದು: ಎಲ್ಲ ಕೋಮು ಸಂಘರ್ಷಗಳು ಆರಂಭಗೊಂಡದ್ದು ಕ್ರಿ.ಶ. 1857ರ ನಂತರ. ಅಲ್ಲಿಯವರೆಗೆ ಒಂದು ಗಲಭೆಯೂ ನಡೆದಿರಲಿಲ್ಲ. ಉದ್ರೇಕಕಾರಿ ಶಕ್ತಿಗಳು ಹಲವು ಬಗೆಯಲ್ಲಿ ಧಾರ್ಮಿಕ ವಿದ್ವೇಷವನ್ನು ಸೃಷ್ಟಿಸಿದರು. ಕೆಲವು ಗಲಭೆಗಳು ಮಸೀದಿಯ ಮುಂದೆ ಜೋರಾಗಿ ಸಂಗೀತ ನುಡಿಸಿದ ಕಾರಣಕ್ಕೆ ಆರಂಭಗೊಂಡರೆ ಇನ್ನು ಹಲವು ಗಲಭೆಗಳು ಹಿಂದೂ ಮೂರ್ತಿಗಳನ್ನು ಒಡೆಯಲಾಗಿದೆ ಎಂಬ ಕಾರಣಕ್ಕಾಗಿ ಸಂಭವಿಸಿದವು.

ಬ್ರಿಟಿಷರು ಈ ವಿಷವನ್ನು ನಮ್ಮ ರಾಜಕೀಯ ವ್ಯವಸ್ಥೆಯೊಳಗೆ ಸತತವಾಗಿ ಚುಚ್ಚುತ್ತಾ ಬಂದರು. ವರ್ಷಗಳ ಕಾಲ, ದಶಕಗಳ ಕಾಲ ಇದು ಮುಂದುವರಿಯಿತು. ಕೊನೆಗೆ ಇದರ ಪರಿಣಾಮವಾಗಿ ಕ್ರಿ.ಶ. 1947ರಲ್ಲಿ ದೇಶವ ಇಬ್ಭಾಗವಾಯಿತು. ಆದರೆ ಇಂದಿಗೂ ಧಾರ್ಮಿಕ ವಿದ್ವೇಷವನ್ನು ಪೋಷಿಸುವ ಮತ್ತು ಅದನ್ನೇ ದಾಳವಾಗಿಸಿಕೊಂಡ ಕುತ್ಸಿತ ಹಿತಾಸಕ್ತಿಗಳು ಇಂದಿಗೂ ನಮ್ಮ ಮಧ್ಯೆ ಇದ್ದಾರೆ.

ಎಲ್ಲಾದರೂ ಬಾಂಬ್ ಸ್ಫೋಟಿಸಿದರೆ, ಕೆಲವೇ ನಿಮಿಷದೊಳಗಡೆ ಇಂಡಿಯನ್ ಮುಜಾಹಿದೀನ್, ಜೈಷೆ ಮೊಹಮ್ಮದ್ ಅಥವಾ ಹರ್ಕತುಲ್ ಜಿಹಾದೆ ಇಸ್ಲಾಮಿಯಾ ಅದರ ಹೊಣೆ ಹೊತ್ತಿದೆ ಎಂಬ ಇಮೇಲ್ ಅಥವಾ ಎಸ್‌ಎಮ್‌ಎಸ್ ತಮಗೆ ಬಂದಿದೆ ಎಂದು ಟೆಲಿವಿಷನ್ ನ್ಯೂಸ್ ಚಾನಲ್‌ಗಳು ಬೊಬ್ಬೆ ಹೊಡೆಯಲಾರಂಭಿಸುತ್ತವೆ. ಯಾವನೇ ಒಬ್ಬ ಕಿಡಿಗೇಡಿ ಇಂತಹ ಎಸ್‌ಎಂಎಸ್ ಅಥವಾ ಇಮೇಲ್ ಕಳಿಸಲು ಸಾಧ್ಯವಿದೆ. ಆದರೆ ಅದನ್ನು ಟೆಲಿವಿಷನ್‌ನಲ್ಲಿ ತೋರಿಸುವ ಮೂಲಕ ಮತ್ತು ಮಾರನೆ ದಿನದ ಪತ್ರಿಕೆಗಳಲ್ಲಿ ಅದನ್ನು ಪ್ರಕಟಿಸುವ ಮೂಲಕ ಮುಸ್ಲಿಮರೆಲ್ಲರೂ ಬಾಂಬ್ ಸ್ಫೋಟಿಸುವವರು ಮತ್ತು ಭಯೋತ್ಪಾದಕರು ಎಂಬ ಭಾವನೆಯನ್ನು ಹಿಂದೂಗಳ ಮನದಲ್ಲಿ ಬಿತ್ತಲು ಪ್ರಯತ್ನಿಸಲಾಗುತ್ತದೆ. (ವಾಸ್ತವವೆಂದರೆ ಎಲ್ಲ ಸಮುದಾಯಗಳ ಶೇ. 99ರಷ್ಟು ಜನರು ಶಾಂತಿ ಬಯಸುವ ಸಜ್ಜನರಾಗಿರುತ್ತಾರೆ). ಬಾಬರಿ ಮಸೀದಿ–ರಾಮಜನ್ಮಭೂಮಿ ವಿವಾದದ ಸಂದರ್ಭದಲ್ಲಿ ಸಮೂಹ ಮಾಧ್ಯಮಗಳ ಒಂದು ವಿಭಾಗ (ಅದರಲ್ಲೂ ಹಿಂದಿ ಭಾಷೆಯ ಮುದ್ರಣ ಮಾಧ್ಯಮ)ವು ಕರಸೇವಕರಾಗಿ ಮಾರ್ಪಟ್ಟಿದ್ದನ್ನು ಇಲ್ಲಿ ನೆನಪಿಸಬಹುದು.

## ಬೆಂಗಳೂರಿನಲ್ಲಿ ಗಾಬರಿ:

2012ನೇ ಇಸವಿಯ ಮಧ್ಯ ಭಾಗದಲ್ಲಿ ಬೆಂಗಳೂರಿನಲ್ಲಿ ನೆಲೆಸಿರುವ ಈಶಾನ್ಯ ಭಾರತದ ಜನರ ಮೊಬೈಲ್‌ಗಳಿಗೆ, 'ನೀವು ಅಸ್ಸಾಮ್‌ನಲ್ಲಿ ಮುಸ್ಲಿಮರನ್ನು ಕೊಂದಿದ್ದೀರಿ, ಆದ್ದರಿಂದ ಆದಷ್ಟು ಬೇಗ ಬೆಂಗಳೂರನ್ನು ತೊರೆಯಿರಿ, ಇಲ್ಲದಿದ್ದರೆ ಹತ್ಯಾಕಾಂಡ ಎದುರಿಸಿ' ಎಂಬ ಬೆದರಿಕೆ ಎಸ್‌ಎಂಎಸ್‌ಗಳು ಬಂದವು. ಇದು ಸಹಜವಾಗಿಯೇ ಗಾಬರಿಗೆ ಕಾರಣವಾಯಿತು. ಈ ಕಿಡಿಗೇಡಿ ಕೃತ್ಯ ತಮ್ಮ ಅರಿವಿಗೆ ಬಂದಾಗ ಬೆಂಗಳೂರಿನ ಮುಸ್ಲಿಮರು ಈಶಾನ್ಯ ಭಾರತದವರಿಗಾಗಿ ಭೋಜನ ಕೂಟವನ್ನು ಏರ್ಪಡಿಸಿದರು. ಯಾರೋ ಕಿಡಿಗೇಡಿತನ ಮಾಡುತ್ತಿದ್ದಾರೆ, ಮುಸ್ಲಿಮರು ಈಶಾನ್ಯ ಭಾರತದವರ ವಿರುದ್ಧ ದ್ವೇಷ ಹೊಂದಿಲ್ಲ ಎಂಬುದನ್ನು ಆ ಕೂಟದ ಮೂಲಕ ಮನದಟ್ಟು ಮಾಡಲಾಯಿತು.

ಭಾರತೀಯರು ಕೆಲವು ಸ್ವಾರ್ಥ ಹಿತಾಸಕ್ತ ಗುಂಪುಗಳ ದುಷ್ಟ ಆಟಗಳನ್ನು ಅರ್ಥ ಮಾಡಿಕೊಳ್ಳುವ ತುರ್ತು ಅಗತ್ಯವಿದೆ. ಭಾರತವು ಶ್ರೇಷ್ಠ ವೈವಿಧ್ಯತೆಯನ್ನು ಹೊಂದಿರುವ ದೇಶ. ಎಲ್ಲ ಸಮುದಾಯಗಳ ಜನರಿಗೆ ಸಮಾನ ಗೌರವ ಕೊಡುವುದೇ ಏಕತೆ ಮತ್ತು ಸಮೃದ್ಧಿಗೆ ಇರುವ ಏಕೈಕ ಮಾರ್ಗ ಎಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು.

# ಜಿಹಾದ್

## ಜಿಹಾದ್‌ನ ನಾನಾ ಮುಖಗಳು

ಜಿಹಾದನ್ನು ಸಾಮಾನ್ಯವಾಗಿ 'ಪವಿತ್ರ ಯುದ್ಧ' ಎಂದು ತಪ್ಪಾಗಿ ಭಾಷಾಂತರಿಸಲಾಗುತ್ತದೆ. ಇಸ್ಲಾಮಿನ ವಿರೋಧಿಗಳು ಜಿಹಾದ್ ಎಂಬ ಅರಬಿ ಪದವನ್ನು ಹಿಂಸೆ ಮತ್ತು ಶೋಷಣೆಯೊಂದಿಗೆ ಥಳುಕು ಹಾಕುತ್ತಾರೆ. ಬಹುಶಃ ಅರಬಿ ಭಾಷೆಯಲ್ಲಿ ಜಿಹಾದ್ ಎಂಬ ಶಬ್ಧ ಹುಟ್ಟುಹಾಕುವಷ್ಟು ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ಬೇರಾವ ಪದವೂ ಉತ್ಪಾದಿಸಲಾರದು.

ಕುರ್‌ಆನ್ ಮತ್ತು ಪ್ರವಾದಿವಚನಗಳಲ್ಲಿ ಜಿಹಾದ್ ಎಂಬ ಪದಕ್ಕೆ ಹಲವು ಅರ್ಥಗಳಿವೆ. ಈ ಪಾರಿಭಾಷಿಕದ ಮೂಲಾರ್ಥ 'ಪರಿಶ್ರಮ' ಎಂದಾಗಿದೆ. ಅರ್ಥಾತ್ ವ್ಯಕ್ತಿಯೊಬ್ಬ ಯಾವುದಾದರೊಂದು ಕೆಲಸಕ್ಕೆ ತನ್ನಿಂದಾಗುವ ಗರಿಷ್ಠ ಶ್ರಮವನ್ನು ವ್ಯಯಿಸುವುದು. ಸರಳವಾಗಿ ಹೇಳಬೇಕೆಂದರೆ ಜಿಹಾದ್ ಎಂದರೆ ವ್ಯಕ್ತಿಯೊಬ್ಬ ಒಳ್ಳೆಯ ಮತ್ತು ಪಾವನ ಉದ್ದೇಶವಿಟ್ಟುಕೊಂಡು ನಡೆಸುವ ಪರಿಶ್ರಮ. ಶೋಷಣೆ, ಅನ್ಯಾಯ ಮತ್ತು ಕೆಡುಕನ್ನು ತನ್ನ ಸ್ವಂತ ಮನಸ್ಸಿನಿಂದಲೂ ಸಮಾಜದಿಂದಲೂ ಅಳಿಸಿ ಹಾಕುವ ನಿಟ್ಟಿನಲ್ಲಿ ನಡೆಸುವ ಹೋರಾಟ. ಎಲ್ಲ ಬಗೆಯ ಆಕ್ರಮಣ, ಅತಿರೇಕ ಮತ್ತು ಅನ್ಯಾಯಗಳನ್ನು ಸದೆಬಡಿದು ಸಮಾಜದಲ್ಲಿ ಒಳಿತು, ಶಾಂತಿ ಮತ್ತು ನ್ಯಾಯವನ್ನು ಸಂಸ್ಥಾಪಿಸುವುದು ಜಿಹಾದ್‌ನ ಉದ್ದೇಶ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರ ದೃಷ್ಟಿಯಲ್ಲಿ ಇದುವೇ ಅತ್ಯಂತ ದೊಡ್ಡ ಅಥವಾ ವೈಯಕ್ತಿಕವಾದ ಜಿಹಾದ್. ಈ ಹೋರಾಟವು ಬೌದ್ಧಿಕವಾಗಿರಬಹುದು, ಅಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ ಅಥವಾ ರಾಜಕೀಯ ಸ್ವರೂಪದ್ದಾಗಿರಬಹುದು. ಇದು ದೈಹಿಕವಾಗಿ ನಡೆಸುವ ಪರಿಶ್ರಮಕ್ಕೂ ಅನ್ವಯವಾಗುತ್ತದೆ. ಇಸ್ಲಾಮ್ ಅಂದರೆ ಶಾಂತಿ. ಜಿಹಾದ್ ಅದನ್ನು ಪಡೆಯಲಿಕ್ಕಿರುವ ಮಾರ್ಗ.

## ಅತ್ಯಂತ ದೊಡ್ಡ ಜಿಹಾದ್

ಹುನೈನ್ ಯುದ್ಧದಿಂದ ಹಿಂದಿರುಗುವ ಸಂದರ್ಭದಲ್ಲಿ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಅನುಯಾಯಿಗಳನ್ನುದ್ದೇಶಿಸಿ ಹೀಗೆಂದರು: "ನಾವು ಒಂದು ಸಣ್ಣ ಜಿಹಾದ್‌ನಿಂದ ದೊಡ್ಡ ಜಿಹಾದ್‌ನ ಕಡೆಗೆ ಹೊರಟಿದ್ದೇವೆ." ಸಂಗಾತಿಗಳು ಆಶ್ಚರ್ಯದಿಂದ, "ಏನದು ದೊಡ್ಡ ಜಿಹಾದ್?" ಎಂದು ಪ್ರಶ್ನಿಸಿದರು. 'ವ್ಯಕ್ತಿ ತನ್ನೊಳಗಿನ ಅಹಂ ಜತೆಗೆ ನಡೆಸುವ ಹೋರಾಟ,' ಎಂದು ಪ್ರವಾದಿವರ್ಯರು ಉತ್ತರಿಸಿದರು. ಯಾವುದೇ ವ್ಯಕ್ತಿಯ ಮಟ್ಟಿಗೆ, ಆತ ಮುಸ್ಲಿಮ್ ಆಗಿರಬಹುದು ಅಥವಾ ಮುಸ್ಲಿಮೇತರನಾಗಿರಬಹುದು, ಸ್ವಂತ ಮನಸ್ಸಿನೊಂದಿಗೆ ನಡೆಸುವ ಹೋರಾಟವು ಅತ್ಯಂತ ಕಠಿಣ ಮತ್ತು ಪಾವನವಾದದ್ದು. ಈ ಹೋರಾಟಕ್ಕೆ ಹೆಚ್ಚಿನ ಸಂಯಮ, ಪ್ರಾಮಾಣಿಕತೆ ಮತ್ತು ಅರಿವು ಬೇಕು.

## ಶ್ರೇಷ್ಠ ಜಿಹಾದ್

ಸರ್ವಾಧಿಕಾರಿಯ ವಿರುದ್ಧ ಎದ್ದು ನಿಂತು ಸತ್ಯ ನುಡಿಯುವುದು ಅತ್ಯಂತ ಶ್ರೇಷ್ಠ ಜಿಹಾದ್ ಆಗಿದೆ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಅನುಯಾಯಿಗಳನ್ನುದ್ದೇಶಿಸಿ, ನೀವು ಮರ್ದನದ ವಿರುದ್ಧ ಮತ್ತು ಮರ್ದನಕ್ಕೊಳಗಾಗುತ್ತಿರುವವರ ಪರವಾಗಿ ಧ್ವನಿಯೆತ್ತಬೇಕೆಂದು ಹೇಳಿದ್ದರು. "ಮರ್ದಿತರ ಸ್ನೇಹಿತರಾಗಿರಿ" ಮತ್ತು ದಮನಕಾರಿ ಆಡಳಿತಗಾರರ ಮರ್ದನವನ್ನು ಮತ್ತು ಅವರ ಭ್ರಷ್ಟ ವಿಧಾನಗಳನ್ನು ಕಾನೂನುಸಮ್ಮತ ರೀತಿಯಲ್ಲಿ ಪ್ರತಿಭಟಿಸಿರಿ ಎಂದು ಕುರ್‌ಆನ್ ಹೇಳುತ್ತದೆ. ಕುರ್‌ಆನ್ ಮುಂದುವರಿಯುತ್ತಾ ಹೀಗೆ ಹೇಳುತ್ತದೆ:

> **"ನಿಮಗೇನಾಗಿದೆ? ಅಲ್ಲಾಹನ ಮಾರ್ಗದಲ್ಲಿ ಮತ್ತು – "ನಮ್ಮೊಡೆಯಾ, ಅಕ್ರಮಿಗಳ ಈ ನಾಡಿನಿಂದ ನಮ್ಮನ್ನು ವಿಮೋಚಿಸು ಹಾಗೂ ನಿನ್ನ ಕಡೆಯಿಂದ ನಮಗಾಗಿ ಒಬ್ಬ ರಕ್ಷಕನನ್ನು ಕಳಿಸು ಮತ್ತು ನಿನ್ನ ಕಡೆಯಿಂದ ನಮಗಾಗಿ ಒಬ್ಬ ಸಹಾಯಕನನ್ನು ಕಳಿಸು"– ಎಂದು ಮೊರೆಯಿಡುತ್ತಿರುವ ಮರ್ದಿತ ಪುರುಷರು, ಸ್ತ್ರೀಯರು ಮತ್ತು ಮಕ್ಕಳ ಪರವಾಗಿ ನೀವೇಕೆ ಹೋರಾಡುವುದಿಲ್ಲ." (ಕುರ್‌ಆನ್, 4:75)**

## ಸಣ್ಣ ಜಿಹಾದ್

ಪ್ರವಾದಿವರ್ಯರು ವ್ಯಾಖ್ಯಾನಿಸಿರುವಂತೆ ಸೈನಿಕ ಹೋರಾಟದ ಸಂದರ್ಭದಲ್ಲಿ ಆತ್ಮರಕ್ಷಣೆಗಾಗಿ ಹಾಗೂ ಇಸ್ಲಾಮ್ ಮತ್ತು ನ್ಯಾಯದ ರಕ್ಷಣೆಗಾಗಿ ನಡೆಸುವ ಸಂಘರ್ಷವೇ ಸಣ್ಣ ಜಿಹಾದ್ ಆಗಿದೆ.

ಯಾವುದೇ ರಾಷ್ಟ್ರಕ್ಕೆ ತನ್ನ ಮೇಲೆ ಯಾರಾದರೂ ಆಕ್ರಮಣ ಮಾಡಿದರೆ ಅದನ್ನು ಸೈನಿಕ ಬಲದ ಮೂಲಕ ಎದುರಿಸಿ ಹಿಮ್ಮೆಟ್ಟಿಸುವ ಶಾಸನಬದ್ಧ ಹಕ್ಕು ಇದ್ದೇ ಇದೆ. ಒಂದು ರಾಷ್ಟ್ರವನ್ನು ರಕ್ಷಿಸುವ ಹೋರಾಟವನ್ನು ಬರವಣಿಗೆಯ ಮೂಲಕ, ಮಾಧ್ಯಮ, ಸಂವಾದ, ಒಪ್ಪಂದ, ಶಾಂತಿ ಪ್ರಕ್ರಿಯೆ ಇತ್ಯಾದಿ ವಿಧಾನಗಳ ಮೂಲಕವೂ ಮಾಡಬಹುದು. ಈ ಎಲ್ಲ ಮಾರ್ಗಗಳು ವಿಫಲವಾದರೆ ಮತ್ತು ಶತ್ರು ಸೇನೆಯಿಂದ ಗಂಡಾಂತರ ಹಾಗೆಯೇ ಮುಂದುವರಿದರೆ ಆಡಳಿತಗಾರರು ಜಿಹಾದ್ ಅಥವಾ ತಮ್ಮ ದೇಶದ ಸಾರ್ವಭೌಮತೆಯ ರಕ್ಷಣೆಗಾಗಿ ಸಶಸ್ತ್ರ ಹೋರಾಟಕ್ಕೆ ಕರೆ ನೀಡಬಹುದು. ದಾಳಿಕೋರ ಸೇನಾ ಪಡೆಗಳ ಅಥವಾ ಬಾಹ್ಯ ಮಿಲಿಟರಿ ಪಡೆಗಳ ವಿರುದ್ಧ ದಾಳಿಗೊಳಗಾದ ದೇಶದ ಜನರು ಸಶಸ್ತ್ರ ಪ್ರತಿರೋಧ ಹೂಡುವುದನ್ನು ಅಂತಾರಾಷ್ಟ್ರೀಯ ಕಾನೂನು ಕೂಡಾ ಮಾನ್ಯ ಮಾಡುತ್ತದೆ.

ಜಿಹಾದ್ ಎಂಬುದು ಅತಿಕ್ರಮವಾಗಿ ನಡೆಸುವ ಯುದ್ಧವಲ್ಲ. ಅದೇ ರೀತಿ ಸಾಮ್ರಾಜ್ಯ ವಿಸ್ತರಣೆಗೆ ನಡೆಯುವ ಯುದ್ಧವನ್ನೂ ಜಿಹಾದ್ ಎನ್ನಲಾಗದು. ಇದೊಂದು ಪ್ರತಿರೋಧಾತ್ಮಕ ಯುದ್ಧವಾಗಿದ್ದು ಅದನ್ನು ಹೂಡುವವರ ಮೇಲೂ ಕೆಲವು ಹೊಣೆಗಾರಿಕೆಗಳಿರುತ್ತವೆ. ನೈತಿಕವಾಗಿ, ಜಿಹಾದ್ ಎಂಬುದು ಇಸ್ಲಾಮಿನ ಸಂಧಾನ ನಿಯಮಗಳ ಅಡಿಯಲ್ಲೇ ನಡೆಯಬೇಕು. ಅರ್ಥಾತ್, ಅಮಾಯಕ ನಾಗರಿಕರು, ಮಹಿಳೆಯರು, ಮಕ್ಕಳು ಮತ್ತು ನಿರಾಯುಧ ಪ್ರಜೆಗಳನ್ನು ಉಪದ್ರವಿಸಕೂಡದು. ಸಂಪತ್ತು ಮತ್ತು ಪರಿಸರವನ್ನು ಹಾಳುಗೆಡವಬಾರದು, ಇತರ ಧರ್ಮೀಯರ ಆರಾಧನಾಲಯಗಳನ್ನು ನಾಶಪಡಿಸಬಾರದು. ಹೀಗಾಗಿ, ಅಪಹರಣ, ಜನರನ್ನು ಒತ್ತೆಯಾಳಾಗಿಸುವುದು, ಜನಜಂಗುಳಿಯ ಮೇಲೆ ಯದ್ವಾ ತದ್ವಾ ಗುಂಡು ಹಾರಿಸುವುದು, ಜನರು ಕೆಲಸ ಮಾಡುವ ಸ್ಥಳಗಳಲ್ಲಿ ಬಾಂಬ್ ಇರಿಸುವುದು ಇತ್ಯಾದಿಗಳೆಲ್ಲವೂ ದುಷ್ಟ ಕೃತ್ಯಗಳಾಗಿದ್ದು ಇಸ್ಲಾಮ್ ಇವುಗಳನ್ನು ತೀವ್ರವಾಗಿ ಖಂಡಿಸುತ್ತದೆ. ಇಂತಹ ಕೃತ್ಯಗಳು ಭಯೋತ್ಪಾದನೆಯ ವ್ಯಾಪ್ತಿಗೆ ಸೇರುತ್ತವೆ.

ಅಂತೆಯೇ ಜಿಹಾದನ್ನು ಯಾರ್ಯಾರೋ ತಮಗಿಷ್ಟ ಬಂದಂತೆ ಘೋಷಿಸುವಂತಿಲ್ಲ. ಹಾಗೆಯೇ ಒಂದು ಮುಸ್ಲಿಮ್ ರಾಷ್ಟ್ರ ಮತ್ತೊಂದು ಮುಸ್ಲಿಮ್

ರಾಷ್ಟ್ರದ ಮೇಲೆ ಜಿಹಾದ್ ಹೂಡುವಂತಿಲ್ಲ. ಅಥವಾ ಒಬ್ಬ ಮರ್ದಕ ಸರ್ವಾಧಿಕಾರಿ ತನ್ನ ವಿರುದ್ಧ ಪಂಕ್ತಿ ಕಟ್ಟಿರುವ ದೇಶಗಳ ವಿರುದ್ಧ ಸಮರ ಹೂಡುವುದಕ್ಕೆ ಜಿಹಾದ್ ಎನ್ನಲು ಸಾಧ್ಯವಿಲ್ಲ. ಜಿಹಾದ್‌ಗೆ ಮುಸ್ಲಿಮ್ ಸಮುದಾಯದ ಒಮ್ಮತ ಬೇಕು. ಜತೆಗೆ ತಮ್ಮ ವೈರಿಗಳಾರೆಂಬುದು ಹಾಗೂ ಆ ವೈರಿಯು ಮರ್ದನ, ದೌರ್ಜನ್ಯಗಳಲ್ಲಿ ತೊಡಗಿದ್ದಾನೆಂಬುದು ಖಚಿತವಾಗಬೇಕು.

ಯಾರೋ ಕೆಲವು ಹಾದಿತಪ್ಪಿದ ಅಥವಾ ಅಜ್ಞಾನಿ ಮುಸ್ಲಿಮರ ಅಕೃತ್ಯಗಳ ಆಧಾರದಲ್ಲಿ ಅಥವಾ ಮುಸ್ಲಿಮರ ಪತನ ಮತ್ತು ಒಟ್ಟಾರೆ ಜಗತ್ತಿನಲ್ಲಿ ಕಂಡು ಬರುತ್ತಿರುವ ಕೆಡುಕನ್ನು ನೋಡಿ ಇಸ್ಲಾಮ್‌ನ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದು ಖಂಡಿತ ಸರಿಯಲ್ಲ.

ಯೂಸುಫ್ ಇಸ್ಲಾಮ್ ಆಗಿ ಬದಲಾಗಿರುವ ಮಾಜಿ ಪಾಪ್ ಗಾಯಕ ಕ್ಯಾಟ್ ಸ್ಟೀವನ್ಸ್ ಹೇಳಿದ ಮಾತುಗಳನ್ನು ಗಮನಿಸಿ:

> **"**ಮಾಧ್ಯಮಗಳಲ್ಲಿ ಹೆಚ್ಚು ಪ್ರಸಾರ ಗಿಟ್ಟಿಸುವ ಕೆಲವು ದಾರಿತಪ್ಪಿದ ಮುಸ್ಲಿಮರ ನಡತೆಯ ಆಧಾರದಲ್ಲಿ ಇಸ್ಲಾಮಿನ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದು ತಪ್ಪು. ಒಬ್ಬ ಕುಡುಕ ಡ್ರೈವರ್ ಅಪಘಾತ ಮಾಡಿಬಿಟ್ಟರೆ ನಾವು ಕಾರಿನ ಗುಣಮಟ್ಟದ ಬಗ್ಗೆ ಚರ್ಚೆ ಮಾಡುವುದಿಲ್ಲ ತಾನೆ?**"**

## ಬೌದ್ಧಿಕ ಜಿಹಾದ್:

ಸಮಾಜದಲ್ಲಿ ಸುಧಾರಣೆ ತರಲು ಆಧುನಿಕ ಜಗತ್ತು ಹಲವು ಆಯ್ಕೆಗಳನ್ನು ನೀಡುತ್ತದೆ. ಸಮಾಜವನ್ನು ಕೆಡುಕಿನಿಂದ ಮುಕ್ತಗೊಳಿಸಲು ಆಕ್ರಮಣಕಾರಿ ಕ್ರಮಗಳೇ ಬೇಕೆಂದೇನಿಲ್ಲ. ಶಿಕ್ಷಣಕ್ಕಾಗಿ ಹೋರಾಡುವ ಮೂಲಕ ಜನರು ಅನಕ್ಷರತೆಯ ವಿರುದ್ಧ ಜಿಹಾದ್ ಹೂಡಬಹುದು. ಶಿಕ್ಷಣವು ಎಲ್ಲ ಬಗೆಯ ಅಭಿವೃದ್ಧಿ ಮತ್ತು ಕಲ್ಯಾಣಕ್ಕೆ ಮೂಲ. ಸಂಪೂರ್ಣವಾಗಿ ಅಕ್ಷರಸ್ಥರನ್ನೇ ಹೊಂದಿರುವ ಯಾವುದೇ ಸಮಾಜದಲ್ಲಿ ಗಮನಾರ್ಹ ಸಂಖ್ಯೆಯ ಸುಶಿಕ್ಷಿತರಿರುತ್ತಾರೆ. ಈ ಪೈಕಿ ಒಂದು ದೊಡ್ಡ ಸಂಖ್ಯೆಯ ಪ್ರಜ್ಞಾವಂತ ಜನರು ಪ್ರಗತಿಯ ಮತ್ತು ಸಮೃದ್ಧಿಯ ಕಡೆಗೆ ಮುನ್ನುಗ್ಗುತ್ತಾರೆ. ಈ ವರ್ಗವು ಕತ್ತಲೆಯಲ್ಲಿ ಅಲೆದಾಡಬೇಕಾದ ಅಥವಾ ಶತ್ರುಗಳ ಷಡ್ಯಂತ್ರಗಳಿಗೆ ಬಲಿಯಾಗಬೇಕಾದ ಅಗತ್ಯವಿಲ್ಲ. ಈ ಸಮೂಹವು ಸ್ಪಷ್ಟ ಲೋಕದೃಷ್ಟಿಯನ್ನು ಹೊಂದಿರುತ್ತದೆ ಮತ್ತು ಈ ಜಗತ್ತಿನಲ್ಲಿ ತನ್ನ

ಪಾತ್ರವೇನು ಎಂಬುದರ ಅರಿವು ಹೊಂದಿರುತ್ತದೆ. ತನ್ನ ಮುಂದೆ ಸ್ಪಷ್ಟ ಗುರಿಗಳನ್ನು ಇಟ್ಟುಕೊಂಡು ತನ್ನ ಆದ್ಯತೆಗಳನ್ನು ನಿರ್ಧರಿಸುವ ಮತ್ತು ತನ್ನ ಪಾತ್ರಗಳನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ಈ ಸಮಾಜ ಹೊಂದಿರುತ್ತದೆ. ಜತೆಗೆ ತನ್ನ ಉದ್ದೇಶ ಈಡೇರಿಸಲು ಪ್ರಯತ್ನಿಸುತ್ತಲೂ ತನ್ನ ಸಾಮರ್ಥ್ಯಕ್ಕನುಗುಣವಾಗಿ ಯೋಜನೆಗಳನ್ನು ಮತ್ತು ಗುರಿಗಳನ್ನು ರೂಪಿಸುತ್ತಲೂ ಇರುತ್ತದೆ.

ಈ ಸಮೂಹ ಅತಿಯಾದ ಮಹತ್ವಾಕಾಂಕ್ಷೆಯ ಭಾರವನ್ನು ತನ್ನ ಮೈಮೇಲೆ ಎಳೆದುಕೊಳ್ಳುವುದಿಲ್ಲ ಮತ್ತು ಇತರರನ್ನು ಕೀಳಾಗಿಸುವುದಿಲ್ಲ. ಸತತ ಪ್ರಯತ್ನಗಳ ಮೂಲಕ ಅದು ಜ್ಞಾನದ ಹೊಸ ಎಲ್ಲೆಗಳನ್ನು ಸಂಶೋಧಿಸುತ್ತಲೂ ತನ್ನ ಜ್ಞಾನ ಮತ್ತು ಕೌಶಲದ ಮೂಲಕ ಇಡೀ ಮಾನವಕುಲಕ್ಕೆ ಲಾಭವನ್ನುಂಟು ಮಾಡುತ್ತದೆ. ಅದರ ಮೃದುವಾದ ಶಕ್ತಿಯು ಇತರರಿಗಿಂತ ಹೆಚ್ಚಿನ ಅನುಕೂಲವನ್ನು ಅದಕ್ಕೆ ಒದಗಿಸುತ್ತದೆ. ಇತರರು ಈ ಸಮೂಹವನ್ನು ಹತ್ತಿಕ್ಕಲು ಪ್ರಯತ್ನಿಸುವ ಬದಲು ಮಿತ್ರರನ್ನಾಗಿಸಲು ಯತ್ನಿಸುತ್ತಾರೆ. ಅದು ತನ್ನ ನೆರೆಯವರ ಮನದಲ್ಲಿ ಅಸೂಯೆಯನ್ನು ಸೃಷ್ಟಿಸಬಹುದೇ ಹೊರತು ದ್ವೇಷವನ್ನಲ್ಲ. ಅದು ಇತರರ ಮೇಲೆ ತನ್ನ ಸಿದ್ಧಾಂತವನ್ನು ಹೇರಲಾರದು. ಬದಲಾಗಿ ಇತರರ ಮನಸ್ಸು ಮತ್ತು ಹೃದಯವನ್ನು ಗೆಲ್ಲಲು ಪ್ರಯತ್ನಿಸುತ್ತದೆ.

## ಸಾಮಾಜಿಕ ಜಿಹಾದ್

ಸಾಮಾಜಿಕ ಹೋರಾಟ (activism) ಕ್ರಿಯಾಶೀಲತೆಯು ಆಧುನಿಕ ಸಂದರ್ಭಕ್ಕೆ ಹೆಚ್ಚು ಸೂಕ್ತವಾದ ಇನ್ನೊಂದು ಬಗೆಯ ಸಂಘರ್ಷ (ಜಿಹಾದ್) ಆಗಿದೆ. ಯಾರಾದರೂ ಸಮಾಜದಲ್ಲಿ ಬದಲಾವಣೆ ತರಬೇಕೆಂದು ಇಚ್ಛಿಸಿದ್ದರೆ ಅವರು ಈ ಮಾರ್ಗವನ್ನು ಆಯ್ದುಕೊಳ್ಳಬಹುದು. ಇಂದಿನ ಜಗತ್ತಿನಲ್ಲಿ ನಾಗರಿಕ ಸಮಾಜದ ಹಲವು ಗುಂಪುಗಳು ಈ ಪಾತ್ರವನ್ನು ನಿರ್ವಹಿಸುತ್ತಿವೆ. ಜನರ ಮನೋಭಾವವನ್ನು ಬದಲಿಸಲು ಇದು ಒಂದು ಸದ್ದಿಲ್ಲದ ಮತ್ತು ನಿರಂತರ ಹೋರಾಟವಾಗಿದೆ. ಈ ಬಗೆಯ ಹೋರಾಟಕ್ಕೆ ಬೇಕಾದ ಸಾಮಗ್ರಿಗಳೆಂದರೆ ಶಿಕ್ಷಣ, ಜಾಗೃತಿ, ಮನೋಭಾವವನ್ನು ಬದಲಿಸುವುದು, ಮನವೊಲಿಕೆ ಮತ್ತು ಪ್ರೇರಣೆ. ಸಾಮಾಜಿಕ ಜಿಹಾದ್‌ನ ಅಡಿಯಲ್ಲಿ ಅನೇಕ ಹೋರಾಟ ಮತ್ತು ಧ್ಯೇಯಗಳನ್ನು ನಿರೂಪಿಸಬಹುದು. ಈ ಪೈಕಿ ಕೆಲವು ಹೀಗಿವೆ: ಮಕ್ಕಳ ಹಕ್ಕುಗಳ ರಕ್ಷಣೆ ಅಥವಾ ಮಹಿಳೆಯರ ಸಬಲೀಕರಣ, ಬಾಲ ಕಾರ್ಮಿಕ ಪದ್ಧತಿಯ ನಿರ್ಮೂಲನ ಅಥವಾ ಭ್ರೂಣಹತ್ಯೆ ತಡೆಗಟ್ಟುವುದು, ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆ, ಅರ್ಧದಲ್ಲೇ

ಶಾಲೆ ತೊರೆಯುವ ಮಕ್ಕಳ ಮೇಲೆ ನಿಗಾ, ಮದ್ರಸಾಗಳ ನವೀಕರಣ, ಮಹಿಳೆಯರ ಮತ್ತು ವ್ಯಸನಿಗಳ ಪುನರ್‌ವಸತಿ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ, ನೌಕರಿಯಿಲ್ಲದವರಿಗೆ ಕೆಲಸ ಒದಗಿಸುವುದು, ಪುಸ್ತಕಗಳನ್ನು ಜನಪ್ರಿಯಗೊಳಿಸುವುದು, ಜನರಿಗೆ ವೃತ್ತಿ ಕೌಶಲ ಕಲಿಸುವುದು, ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ ಶಿಶುವಿಹಾರಗಳನ್ನು ನಿರ್ಮಿಸುವುದು, ಗಣಿ ಕೆಲಸಗಾರರಿಗೆ ಸುರಕ್ಷಾ ಸಾಮಗ್ರಿಗಳನ್ನು ಒದಗಿಸುವುದು, ಕೈದಿಗಳಿಗೆ ಸಮಾಲೋಚನೆಯ ಸೌಲಭ್ಯ ಒದಗಿಸುವುದು ಮತ್ತು ಅವರ ಕುಟುಂಬಿಕರ ಆರೈಕೆ, ವಕ್ಫ್ ಆಸ್ತಿಗಳ ರಕ್ಷಣೆ, ಧರ್ಮ ಛತ್ರ ಮತ್ತು ವೃದ್ಧಾಶ್ರಮಗಳನ್ನು ನೋಡಿಕೊಳ್ಳುವುದು, ಜೈಲು ಶಿಕ್ಷೆ ಮುಗಿಸಿದ ಅಪರಾಧಿಗಳ ಮತ್ತು ಬಾಲಾಪರಾಧಿಗಳ ಸುಧಾರಣೆ, ಮನೆಯಿಲ್ಲದವರಿಗೆ ಕಡಿಮೆ ಬೆಲೆಯಲ್ಲಿ ನಿವಾಸ ಒದಗಿಸುವುದು, ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು ಇತ್ಯಾದಿ.

ವಿಶ್ವದಾದ್ಯಂತ ಸಹಸ್ರಾರು ನಾಗರಿಕ ಸಮಾಜದ ಸಂಘಟನೆಗಳು ಜಗತ್ತನ್ನು ಹೆಚ್ಚು ಸುರಕ್ಷಿತ, ಉತ್ತಮ ಮತ್ತು ಹೆಚ್ಚು ಆನಂದದಾಯಕ ಸ್ಥಳವನ್ನಾಗಿಸಲು ದಿನರಾತ್ರಿ ಪ್ರಯತ್ನಿಸುತ್ತಿವೆ. ಒಂದಲ್ಲೊಂದು ರೀತಿಯಲ್ಲಿ ಇವರೆಲ್ಲರೂ ಸಾಮಾಜಿಕ ಕೆಡುಕುಗಳ ವಿರುದ್ಧ ಹೋರಾಡಿ ಸಮಾನತೆ, ಸಮೃದ್ಧಿ ಮತ್ತು ಕಷ್ಟ ಕಾರ್ಪಣ್ಯಗಳಿಂದ ಮುಕ್ತವಾದ ವಿಶ್ವವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಕುರ್‌ಆನ್ ತನ್ನ ಓದುಗರೊಡನೆ ದೇವರು ನಿಮಗೆ ಒಳಿತು ಮಾಡಿದಂತೆ ನೀವೂ ಇತರರಿಗೆ ಒಳಿತು ಮಾಡಿ ಎಂದು ಕರೆನೀಡಿದ್ದಾನೆ. ದುರದೃಷ್ಟವಶಾತ್, ಈ ವಿಶೇಷಣಗಳು ಪಾಶ್ಚಾತ್ಯರಲ್ಲಿ ಹೆಚ್ಚಾಗಿ ಕಂಡುಬರುತ್ತಿವೆಯೇ ಹೊರತು ಕುರ್‌ಆನನ್ನು ತಮ್ಮ ಪವಿತ್ರ ಗ್ರಂಥವೆಂದು ವಾದಿಸುವ ಜನರಲ್ಲಿ ಅಲ್ಲ. ಮುಸ್ಲಿಮ್ ಜಗತ್ತು ಹೆಸರಿಸಬಹುದಾದ ಒಂದೇ ಒಂದು ನಾಗರಿಕ ಸಮಾಜದ ಗುಂಪನ್ನು ಹೊಂದಿಲ್ಲ. ಹೆಚ್ಚಿನ ಧಾರ್ಮಿಕ ಪಂಡಿತರು ಫತ್ವಾಗಳನ್ನು ಜಾರಿಗೊಳಿಸುವುದರಲ್ಲಿ ಆಸಕ್ತಿ ಹೊಂದಿದ್ದಾರೆಯೇ ಹೊರತು ಸುಧಾರಣೆ (ಇಸ್ಲಾಹ್)ಯ ಕಡೆಗೆ ಗಮನಹರಿಸುತ್ತಿಲ್ಲ. ಸಾಮಾಜಿಕ ಚಟುವಟಿಕೆಯ ಮೌಲ್ಯವನ್ನು ಅರ್ಥ ಮಾಡಿಕೊಂಡು ಜಗತ್ತನ್ನು ಬಡತನ, ಅನಕ್ಷರತೆ, ರೋಗರುಜಿನಗಳು, ಮಾದಕವ್ಯಸನ, ಅವಲಂಬನೆ ಮತ್ತು ಗುಲಾಮಗಿರಿಯಿಂದ ಮುಕ್ತಗೊಳಿಸಲು ಜಿಹಾದ್ ಆರಂಭಿಸಬೇಕಾದ ಅಗತ್ಯವನ್ನು ಮುಸ್ಲಿಮರು ಮನಗಾಣಬೇಕಾಗಿದೆ.

ಇಸ್ಲಾಮಿನ ಮೂಲ ತತ್ವಗಳಿಗೆ ಸಂಬಂಧಿಸಿದ ಈ ಸ್ಪಷ್ಟೀಕರಣವು ಸಾಮಾಜಿಕ ಕ್ರಿಯಾಶೀಲತೆಯ ಬಗ್ಗೆ ಬೆಳಕು ಚೆಲ್ಲಲು ಅವಕಾಶ ಮಾಡಿಕೊಡುತ್ತದೆ. ಇಸ್ಲಾಮನ್ನು ಆಚರಿಸುವುದೆಂದರೆ ಕೇವಲ ನಮಾಜ್, ಉಪವಾಸ, ಝಕಾತ್ ಮತ್ತು ಹಜ್ಜ್ ಮಾತ್ರವಲ್ಲ ಎಂಬುದು ಪ್ರತಿಯೊಬ್ಬ ಮುಸ್ಲಿಮನಿಗೂ ಗೊತ್ತು. ದೇವರ ಸ್ಮರಣೆಯಿಂದ ಕೂಡಿದ ದೈನಂದಿನ ಜೀವನದ ಪ್ರತಿಯೊಂದು ಚಟುವಟಿಕೆಯೂ ಒಂದು ಆರಾಧನೆಯಾಗಿದ್ದು ಈ ಮೂಲಕ ದಾಸನು ದೇವರಿಗೆ

ಕೃತಜ್ಞತೆ ಸಲ್ಲಿಸುತ್ತಾನೆ. ನಂಬಿಕೆ ಮತ್ತು ಕ್ರಿಯೆಗಳ ನಡುವಿನ ನಿಕಟ ಸಂಬಂಧದ ಬಗ್ಗೆ ಪವಿತ್ರ ಕುರ್‌ಆನ್‌ನಲ್ಲಿರುವ ಉಲ್ಲೇಖಗಳನ್ನು ನಾವು 'ವಿಶ್ವಾಸವಿಟ್ಟವರು ಮತ್ತು ಸತ್ಕರ್ಮ ಕೈಗೊಂಡವರು' ಎಂಬ ಪುನರಾವರ್ತಿತ ಒಕ್ಕಣೆಯ ಮೂಲಕ ತಿಳಿದುಕೊಂಡಿದ್ದೇವೆ. ಹೀಗಾಗಿ ಒಬ್ಬ ವ್ಯಕ್ತಿ ವಿಶ್ವಾಸ ಹೊಂದಿದ್ದಾನೆ ಎಂದರೆ ಆತ ಸತ್ಕರ್ಮ ಮಾಡುತ್ತಾನೆ ಎಂದೇ ಅರ್ಥ. ಮತ್ತು ಈ ಸತ್ಕರ್ಮಕ್ಕೆ ಹಲವಾರು ಆಯಾಮಗಳಿವೆ. ಇದು ಒಬ್ಬ ವ್ಯಕ್ತಿ ತನ್ನ ಬದುಕಿನಲ್ಲಿ ಪಾಲಿಸುವ ಪ್ರಾಮಾಣಿಕತೆಯಾಗಿರಬಹುದು, ಸಾಮಾಜಿಕ ಸುಧಾರಣೆಯ ಬಗ್ಗೆ ಇರುವ ಶ್ರದ್ಧೆಯಾಗಿರಬಹುದು ಅಥವಾ ಅನ್ಯಾಯದ ವಿರುದ್ಧ ಜನರನ್ನು ಸಂಘಟಿಸುವ ಕೆಲಸವಾಗಿರಬಹುದು. ಈ ಎಲ್ಲ ಚಟುವಟಿಕೆಗಳೂ ಜಿಹಾದ್‌ನ ಭಾಗವಾಗಿವೆ. ಯಾಕೆಂದರೆ ಇವು ದೇವರಿಂದ ಅವತೀರ್ಣಗೊಂಡ ತತ್ವಗಳು ಯಾವುದನ್ನು ಅತ್ಯಂತ ಗೌರವಾರ್ಹ ಎಂದು ಹೇಳುತ್ತವೋ ಅವುಗಳ ಕಡೆಗೆ ಕೇಂದ್ರಿತವಾಗಿವೆ. ಈ ಕೆಳಗಿನ ಕುರ್‌ಆನ್ ಸೂಕ್ತವು ಅದನ್ನೇ ಸ್ಪಷ್ಟಪಡಿಸುತ್ತದೆ.

> "ನಿಮ್ಮ ಸಂಪತ್ತುಗಳನ್ನೂ ಜೀವಗಳನ್ನೂ ತೊಡಗಿಸಿ ಅಲ್ಲಾಹನ ಮಾರ್ಗದಲ್ಲಿ ಹೋರಾಡಿರಿ. ನೀವು ಅರಿಯುವವರಾಗಿದ್ದರೆ ಅದುವೇ ನಿಮಗೆ ಉತ್ತಮ." (6:11)

ಒಬ್ಬ ಮುಸ್ಲಿಮನು ತನ್ನ ಸಂಪತ್ತು ಮತ್ತು ಪ್ರಾಣವನ್ನು ಎಲ್ಲ ಒಳ್ಳೆಯ ಉದ್ದೇಶಗಳಿಗಾಗಿ ಮತ್ತು ಯೋಜನೆಗಳಿಗಾಗಿ ವಿನಿಯೋಗಿಸಬೇಕೆಂದು ಇಸ್ಲಾಮ್ ಕರೆ ನೀಡುತ್ತದೆ. ವಿಶಾಲ ಅರ್ಥದಲ್ಲಿ ಹೇಳಬೇಕಾದರೆ, ಮತ್ತು ಪವಿತ್ರ ಕುರ್‌ಆನ್ ಮತ್ತು ಪ್ರವಾದಿಯ ವಚನಗಳ ಹಿನ್ನೆಲೆಯಲ್ಲಿ ಹೇಳಬೇಕಾದರೆ, ದೇವಮಾರ್ಗದಲ್ಲಿ ಹೋರಾಡುವುದು ಎಂದರೆ ಅನ್ಯಾಯ, ಶೋಷಣೆ, ಹಸಿವು, ದಾರಿದ್ರ್ಯ, ನಿರುದ್ಯೋಗ, ಅನಕ್ಷರತೆ, ಕ್ರಿಮಿನಲ್ ವರ್ತನೆ ಮತ್ತು ಮಾದಕ ವ್ಯಸನ, ಜೂಜು ಇತ್ಯಾದಿಗಳನ್ನು ನೀಗಿಸಲು ತಮ್ಮೆಲ್ಲ ಶಕ್ತಿ ಮತ್ತು ಸಂಪನ್ಮೂಲವನ್ನು ಬಳಸುವುದು ಎಂದರ್ಥ. ಇದಕ್ಕೆ ಕಠಿಣ ಪರಿಶ್ರಮದ ಅಗತ್ಯವಿದೆ. ಮತ್ತು ಇಲ್ಲಿ ಪ್ರತಿಯೊಬ್ಬರ ಪಾಲ್ಗೊಳ್ಳುವಿಕೆಯೂ ಮುಖ್ಯ.

ಇಸ್ಲಾಮಿಗಾಗಿ ಜೀವ ಅರ್ಪಿಸಲು ಸಿದ್ಧರಿರುವ ಅನೇಕರನ್ನು ನಾವು ಕಾಣುತ್ತೇವೆ. ಆದರೆ 'ಇಸ್ಲಾಮಿಗಾಗಿ ಜೀವ ಅರ್ಪಿಸುವ' ಅವರ ಸ್ಫೂರ್ತಿಯು ತಮ್ಮದೇ ನೆರೆಕರೆಯಲ್ಲಿ, ನಗರಗಳಲ್ಲಿ ಮತ್ತು ದೇಶಗಳಲ್ಲಿ ತಾವು ಮಾಡಬೇಕಾಗಿರುವ ಹತ್ತು ಹಲವು ಹೋರಾಟಗಳ ಬಗ್ಗೆ ಕಣ್ಣೆತ್ತುವಂತೆ ಮಾಡುತ್ತಿಲ್ಲ ಎಂಬುದು ವಿಪರ್ಯಾಸ. ಈಜಿಪ್ಟ್‌ನ ವಿದ್ವಾಂಸ ಹಸನುಲ್ ಬನ್ನಾ ಇದನ್ನೇ ಹೇಳಿದ್ದರು: "ದೇವಮಾರ್ಗದಲ್ಲಿ ಸಾಯುವುದು ಕಷ್ಟ. ಆದರೆ ದೇವಮಾರ್ಗದಲ್ಲಿ ಬದುಕುವುದು ಇನ್ನೂ ಕಷ್ಟ." ಪ್ರತಿಯೊಬ್ಬ ವ್ಯಕ್ತಿಗೂ ಆತನ ಹಕ್ಕುಗಳನ್ನೂ ಖಾತ್ರಿಪಡಿಸುವ ಈ ಜಿಹಾದ್ ನಿಜವಾಗಿ ನಾವು ಜೀವನಪರ್ಯಂತ ಕೈಗೊಳ್ಳಬೇಕಾದ ಜಿಹಾದ್ ಆಗಿದೆ. ಇದು ಇಸ್ಲಾಮಿನ ಸಂದೇಶದ ಅಪೇಕ್ಷೆಯೂ ಹೌದು, ಸಾಧನೆಯೂ ಹೌದು.

# ಯುದ್ಧ:
# ಪ್ರವಾದಿ ಮುಹಮ್ಮದ್ ಹೇಳಿದ್ದೇನು ?

ಕುರ್‌ಆನ್‌ನ ಸಂದೇಶ ಅತ್ಯಂತ ವಾಸ್ತವಿಕವಾಗಿದ್ದು ಯುದ್ಧದ ಅನಿವಾರ್ಯತೆಯನ್ನು ಅದು ಒಪ್ಪುತ್ತದೆ. ಆದರೆ ಅನ್ಯಾಯವನ್ನು ಕೊನೆಗಾಣಿಸುವ ಉದ್ದೇಶದಿಂದ ಮಾತ್ರ ಯುದ್ಧಕ್ಕೆ ಅನುಮತಿ ನೀಡಲಾಗಿದೆ. ಆದ್ದರಿಂದ ಯುದ್ಧವು ಇಸ್ಲಾಮಿನ ದೃಷ್ಟಿಯಲ್ಲಿ ಆತ್ಮರಕ್ಷಣೆ ಮತ್ತು ಸಮ್ಮತಾರ್ಹ ಪ್ರತಿರೋಧದ ಒಂದು ಮಾರ್ಗ. ಅತಿಕ್ರಮಣ ನಡೆಸುವುದು ಮತ್ತು ಸಕಾರಣವಿಲ್ಲದೆ ಸಂಘರ್ಷವನ್ನು ಆರಂಭಿಸುವುದನ್ನು ಇಸ್ಲಾಮ್ ನಿಷೇಧಿಸುತ್ತದೆ.

> **"ನಿಮ್ಮ ವಿರುದ್ಧ ಯುದ್ಧ ಮಾಡುವವರ ವಿರುದ್ಧ ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಿರಿ. ಆದರೆ ಅತಿರೇಕವೆಸಗಬೇಡಿ. ಖಂಡಿತವಾಗಿಯೂ ಅಲ್ಲಾಹನು ಅತಿರೇಕವೆಸಗುವವರನ್ನು ಮೆಚ್ಚುವುದಿಲ್ಲ." (ಕುರ್‌ಆನ್ 2:190)**

ಸಮುದಾಯದ ರಕ್ಷಣೆಯ ಜತೆಗೆ ಅನ್ಯಾಯ ಮತ್ತು ಮರ್ದನಗಳು ಕೂಡಾ ಯುದ್ಧಕ್ಕೆ ಸಕಾರಣವೆನಿಸುತ್ತವೆ. "ಯಾರ ವಿರುದ್ಧ ಯುದ್ಧ ಹೂಡಲಾಗಿತ್ತೋ ಅವರಿಗೆ (ಯುದ್ಧ ಹೂಡುವ) ಅನುಮತಿ ನೀಡಲಾಗಿದೆ. ಯಾಕೆಂದರೆ ಅವರ ಮೇಲೆ ಅಕ್ರಮ ನಡೆದಿದೆ. ಅವರಿಗೆ ನೆರವಾಗಲು ಅಲ್ಲಾಹನು ಖಂಡಿತ ಶಕ್ತನಾಗಿದ್ದಾನೆ. ಅವರು, "ಅಲ್ಲಾಹನೇ ನಮ್ಮೊಡೆಯ" ಎಂದಷ್ಟೇ ಹೇಳಿದ ಕಾರಣಕ್ಕಾಗಿ, ಅನ್ಯಾಯವಾಗಿ ಅವರನ್ನು ಅವರ ಮನೆಗಳಿಂದ ಹೊರದಬ್ಬಲಾಯಿತು." (ಕುರ್‌ಆನ್ 22:39–40) ಆದರೆ, ಹಿಂಸೆಯ ಬಗ್ಗೆ ಮನುಷ್ಯನ ಮನದಲ್ಲಿರುವ ಸ್ವಾಭಾವಿಕ ಒಲವು, ಇತರರ ಮೇಲೆ ಪ್ರಾಬಲ್ಯ ಸಾಧಿಸುವ ಬಗ್ಗೆ ಇರುವ ಆಸೆ, ಪ್ರತೀಕಾರದ ಬಯಕೆ, ಲೂಟಿ ಮಾಡುವ ಅಪೇಕ್ಷೆ ಇವೆಲ್ಲವನ್ನೂ ಪಾಪ ಕೃತ್ಯವೆಂದು ಘೋಷಿಸಲಾಗಿದ್ದು ಇವು ಕೆಡುಕು ಮತ್ತು ಅನೈತಿಕ ಉದ್ದೇಶಗಳಾಗಿವೆ ಎಂದು ಸ್ಪಷ್ಟಪಡಿಸಲಾಗಿದೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ ಅತಿರೇಕವೆಸಗುವುದನ್ನು ನಿಷೇಧಿಸಲಾಗಿದೆ.

## ಯುದ್ಧದ ನೀತಿಗಳು:

ಜಿಹಾದ್ ಫೀಸಬೀಲಿಲ್ಲಾಹ್ (ಅಲ್ಲಾಹನ ಮಾರ್ಗದಲ್ಲಿ ಹೋರಾಟ) ಎಂಬ ಹೊಸ ಪಾರಿಭಾಷಿಕವನ್ನು ಪರಿಚಯಿಸುವ ಮೂಲಕ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಯುದ್ಧಕ್ಕೆ ಅದರ ಭೌತಿಕ ಹಿತಾಸಕ್ತಿ ಮತ್ತು ಸ್ವಾರ್ಥ ಉದ್ದೇಶಗಳಿಗಿಂತಲೂ ಮಿಗಿಲಾದ ಗುರಿ ಇದೆ ಎಂಬುದನ್ನು ಸ್ಪಷ್ಟಪಡಿಸಿದರು. 'ಅಲ್ಲಾಹನ ಮಾರ್ಗದಲ್ಲಿ' ಎಂಬ ಪದಗಳ ಮೂಲಕ ಯುದ್ಧವನ್ನು ಕೇವಲ ಸ್ವಾರ್ಥ ಉದ್ದೇಶಗಳಿಗಾಗಿಯಾಗಲಿ, ಸಮರಾರ್ಜಿತ ಸೊತ್ತು ಪಡೆಯುವುದಕ್ಕಾಗಿಯಾಗಲಿ ಅಥವಾ ಪ್ರತಿಷ್ಠೆ, ಅಭಿಮಾನ ಅಥವಾ ಇತರರನ್ನು ಮಣಿಸುವುದು ಅಡಿಯಾಳಾಗಿಸುವುದಕ್ಕಾಗಿಯಾಗಲಿ ಹೂಡಬಾರದು ಎಂದು ಅವರು ಸ್ಪಷ್ಟವಾಗಿ ಸಾರಿದರು. ಈ ತತ್ವಗಳೇ ಯುದ್ಧಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳಿಗೆ ಬುನಾದಿ ಹಾಕಿ ಕೊಟ್ಟಿತು.

ಯುದ್ಧದ ಈ ಹೊಸ ಕಲ್ಪನೆಯ ಮೂಲಕ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಯುದ್ಧಕ್ಕೆ ಸಂಬಂಧಿಸಿದಂತೆ ಸಮಗ್ರವಾದ ಕಾಯ್ದೆಗಳನ್ನು ಜಾರಿಗೊಳಿಸಿದರು. ಯುದ್ಧವನ್ನು ಯಾವ ರೀತಿ ನಡೆಸಬೇಕು, ಅದರ ನೈತಿಕ ಮೇರೆಗಳೇನು, ಅದರ ಘಟಕಗಳು ಯಾವುವು, ಹಕ್ಕು ಮತ್ತು ಭಾದ್ಯತೆಗಳೇನು, ಯೋಧರು ಮತ್ತು ನಾಗರಿಕರ ನಡುವಣ ವ್ಯತ್ಯಾಸ ಮತ್ತು ಅವರ ಹಕ್ಕುಗಳು, ರಾಜತಾಂತ್ರಿಕರ ಹಕ್ಕುಗಳು, ಯುದ್ಧ ಕೈದಿಗಳು ಮತ್ತು ತಮ್ಮ ಕೈವಶವಾದ ಭೂಭಾಗಗಳಲ್ಲಿ ವಾಸವಾಗಿರುವ ಜನತೆಯ ಹಕ್ಕುಗಳೇನು ಎಂಬಿತ್ಯಾದಿ ಎಲ್ಲ ನೀತಿಗಳನ್ನೂ ಪ್ರವಾದಿ ಮುಹಮ್ಮದ್ ಸ್ಪಷ್ಟವಾಗಿ ಸಾರಿದ್ದಾರೆ.

## ಹತ್ತು ನಿರ್ದೇಶನಗಳು

ಅರಬ್ ಮತ್ತು ಮುಸ್ಲಿಮ್ ದಿಗ್ವಿಜಯಗಳ ಆರಂಭದಿಂದಲೂ ಇಸ್ಲಾಮಿನ ಯೋಧರು ಮುಸ್ಲಿಮೇತರರ ಬಗ್ಗೆ ಮತ್ತು ತಮ್ಮ ಅಧೀನಕ್ಕೆ ಬಂದ ಜನತೆಯ ಬಗ್ಗೆ ಸಹಿಷ್ಣುತೆಯ ಧೋರಣೆಯನ್ನು ಅನುಸರಿಸುತ್ತಾ ಬಂದಿದ್ದಾರೆ. ಹಿಂಸೆಗೆ ಕಾನೂನು ಅಥವಾ ಭಾವನೆಗಳ ಚೌಕಟ್ಟೇ ಇಲ್ಲದ ಸಮಾಜದಲ್ಲಿ ಇಸ್ಲಾಮಿನ ಮೊದಲ ಖಲೀಫ (ಆಡಳಿತಗಾರ) ಅಬೂಬಕರ್, ಪ್ರವಾದಿವರ್ಯರಿಂದ ತಾವು ಪಡೆದುಕೊಂಡ ಯುದ್ಧ ನಿರ್ದೇಶನಗಳನ್ನು

ತಮ್ಮ ಯೋಧರಿಗೂ ನೀಡಿದ್ದರು. ಪೂರ್ವ ಅರೇಬಿಯಾದ ಕಡೆಗೆ ಸೇನೆಯನ್ನು ಕಳುಹಿಸುವ ಸಂದರ್ಭದಲ್ಲಿ ಅವರು ತಮ್ಮ ದಂಡನಾಯಕನಿಗೆ ಈ ನಿರ್ದೇಶನವನ್ನು ನೀಡಿದರು. ಯುದ್ಧ ನೀತಿಗೆ ಸಂಬಂಧಿಸಿದಂತೆ ಇದು ಪ್ರಾಯಶಃ ಜಗತ್ತಿನ ಮೊಟ್ಟ ಮೊದಲ ದಾಖಲೆಯಾಗಿದ್ದು, ಇಸ್ಲಾಮೀ ಕಾನೂನಿನ ನೈತಿಕ ಸ್ಫೂರ್ತಿಯನ್ನು ಎತ್ತಿ ತೋರಿಸತ್ತದೆ.

"ಮಹಿಳೆಯನ್ನು, ಮಕ್ಕಳನ್ನು ಅಥವಾ ಒಬ್ಬ ದುರ್ಬಲನಾದ ವೃದ್ಧನನ್ನು ಕೊಲ್ಲದಿರಿ. ಫಲ ನೀಡುವ ಮರವನ್ನು ಕಡಿಯದಿರಿ. ಮನೆಯನ್ನು ಧ್ವಂಸಗೊಳಿಸಬೇಡಿ, ಆಹಾರಕ್ಕಾಗಿಯಲ್ಲದೆ ಕುರಿಯನ್ನಾಗಲಿ ಒಂಟೆಯನ್ನಾಗಲಿ ಕೊಲ್ಲಬೇಡಿ, ಜೇನುಗೂಡಿಗೆ ಬೆಂಕಿ ಹಾಕಬೇಡಿ ಅಥವಾ ಅವುಗಳನ್ನು ನೀರಿಗೆ ಹಾಕಬೇಡಿ, ಸಮರಾರ್ಜಿತ ಸೊತ್ತನ್ನು ನುಂಗಿಬಿಡಬೇಡಿ ಮತ್ತು ಹೇಡಿಗಳಂತೆ ವರ್ತಿಸಬೇಡಿ."

ಹತ್ತು ನಿರ್ದೇಶನಗಳನ್ನು ಒಳಗೊಂಡ ಈ ಒಂದು ಮಾರ್ಗಸೂಚಿಯು ಮುಸ್ಲಿಮರು ಯುದ್ಧದ ಸಂದರ್ಭದಲ್ಲಿ ಅಮಾಯಕರು ಮತ್ತು ಶಸ್ತ್ರರಹಿತ ನಾಗರಿಕರ ಜತೆ ಕರುಣೆಯಿಂದ ವರ್ತಿಸಬೇಕೆಂದು ಹೇಳಿರುವುದು ಮಾತ್ರವಲ್ಲ, ಪರಿಸರ ಮತ್ತು ಪ್ರಾಣಿಗಳ ಬಗೆಗೂ ಉದಾರಿಯಾಗಿರಬೇಕೆಂದು ಸೂಚಿಸುತ್ತದೆ. ಒಂದು ವೇಳೆ ಆದುನಿಕ ಸಮಾಜವು ಈ ನಿರ್ದೇಶನಗಳನ್ನು ಪಾಲಿಸಿದ್ದೇ ಆದಲ್ಲಿ ಜಗತ್ತು ಹೆಚ್ಚು ಮಾನವೀಯವೂ ಆತ್ಮಸಾಕ್ಷಿಯುಳ್ಳ ಸ್ಥಳವೂ ಆಗಿ ಮಾರ್ಪಡುತ್ತಿತ್ತು. ಆದರೆ ಪರಿಸ್ಥಿತಿ ಹಾಗಿಲ್ಲ. ಇಂದು ಯುದ್ಧವನ್ನು ನಡೆಸುವವರು ಯಾರೇ ಆಗಿದ್ದರೂ ಅದು ತಂದೊಡ್ಡುತ್ತಿರುವ ವಿನಾಶ ಅಗಾಧವಾದುದು. ಪ್ರವಾದಿ ಮುಹಮ್ಮದ್ ಹೇಳಿದರು, "ದೇವರಾಣೆಗೂ ಎಲ್ಲ ಮನುಷ್ಯರೂ ಸೋದರ ಸೋದರಿಯರಾಗಿದ್ದಾರೆ."

ಇಸ್ಲಾಮ್ ಮಾನವ ಜೀವಕ್ಕೆ ಎಷ್ಟು ಬೆಲೆ ನೀಡುತ್ತದೆ ಎಂಬುದು ಈ ಕೆಳಗಿನ ಸೂಕ್ತದಿಂದ ಸ್ಪಷ್ಟವಾಗುತ್ತದೆ:

> **"ಒಬ್ಬನೇ ವ್ಯಕ್ತಿಯನ್ನು ಅನ್ಯಾಯವಾಗಿ ಕೊಲ್ಲುವುದು ಇಡೀ ಮಾನವ ಕುಲದ ಹತ್ಯೆಗೆ ಸಮಾನ. ಅಂತೆಯೇ ಒಬ್ಬ ವ್ಯಕ್ತಿಯನ್ನು ರಕ್ಷಿಸುವುದು ಇಡೀ ಮಾನವ ಕುಲಕ್ಕೆ ರಕ್ಷಣೆ ಒದಗಿಸಿದಂತೆ.." (ಕುರ್ಆನ್ 5:27–32)**

ಈ ದೈವಿಕ ನಿರ್ದೇಶನದ ಮೂಲಕ ಪ್ರವಾದಿ ಮುಹಮ್ಮದ್ ಅವರು ಮನುಷ್ಯ ಜೀವದ, ಅದು ಮುಸ್ಲಿಮನದ್ದಾಗಿರಬಹುದು, ಮುಸ್ಲಿಮೇತರನದ್ದಾಗಿರಬಹುದು, ಪಾವಿತ್ರ್ಯ ಮತ್ತು ಅಖಂಡತೆಯನ್ನು ಎತ್ತಿ ಹಿಡಿದಿದ್ದಾರೆ.

# ಜಿಹಾದ್: ಬಳಕೆ ಮತ್ತು ದುರ್ಬಳಕೆ

ಜಿಹಾದ್ ಅರಬಿ ಶಬ್ದವಾಗಿದ್ದು, 'ಜಹದ' ಅಥವಾ 'ಪರಿಶ್ರಮ' ಎಂಬ ಮೂಲ ಪದದಿಂದ ಅದು ಬಂದಿದೆ. ಜಿಹಾದ್‌ನ ಅರ್ಥ ಹೋರಾಟ. ಉದ್ದೇಶ ಈಡೇರಿಕೆಗಾಗಿ ನಡೆಯುವ ಪರಮೋಚ್ಚ ಹೋರಾಟ ಎಂದು ಜಿಹಾದ್‌ನ್ನು ವ್ಯಾಖ್ಯಾನಿಸಲಾಗಿದೆ. ಈ ಪದವನ್ನು ವಿಭಿನ್ನ ಸಂದರ್ಭ ಮತ್ತು ವಿಧಾನಗಳಲ್ಲಿ ಬಳಸಲಾಗುತ್ತದೆ. ಸಾಮಾನ್ಯವಾಗಿ ಉರ್ದುವಿನಲ್ಲಿ 'ಜದ್ದೊ ಜಹದ್' ಎಂಬ ಪದಬಳಕೆ ಇದೆ. ಪರಿಶ್ರಮ ಎಂಬುದು ಅದರ ಅರ್ಥ. ಅರೇಬಿಕ್‌ನ ನಾಣ್ಣುಡಿಯೊಂದು ಹೀಗಿದೆ: ಯಾಮಿಲ್ ಬಿ ಝುಕಾ, ವಲಾ ಯಾಮಿಲ್ ಬಿ ಜಹದ ಕಸೀರಾ' (ಬುದ್ಧಿವಂತಿಕೆಯಿಂದ ಕೆಲಸ ಮಾಡು; ಅನಗತ್ಯವಾಗಿ ಶ್ರಮ ಪಡಬೇಡ).

ಜಿಹಾದ್ ಎಂಬುದು ಆಧುನಿಕ ಬಾಷೆಯಲ್ಲಿ ಹಲವು ಲೌಕಿಕ ಕಾರ್ಯಗಳಿಗೂ ಅನ್ವಯವಾಗುತ್ತದೆ. ಭ್ರಷ್ಟಾಚಾರ, ಪರಿಸರ ಮಾಲಿನ್ಯ, ಭ್ರೂಣಹತ್ಯೆಯ ವಿರುದ್ಧ ಜಿಹಾದ್, ಮಹಿಳಾ ಹಕ್ಕುಗಳಿಗಾಗಿ ಜಿಹಾದ್ ಎಂಬಿತ್ಯಾದಿ ಬಳಕೆಗಳು ಇಂದು ಮಾಮೂಲಾಗಿವೆ.

ಮಹಾತ್ಮಾ ಗಾಂಧಿ ಅವರು ಅಹಿಂಸಾ ಮಾರ್ಗದಲ್ಲಿ ನಡೆಸಿದ ಸ್ವಾತಂತ್ರ್ಯ ಹೋರಾಟವನ್ನು ಅರಬಿ ಭಾಷೆಯಲ್ಲಿ ಜಿಹಾದ್ ಎಂದು ಬಣ್ಣಿಸಲಾಗುತ್ತದೆ. ಟುನೀಷ್ಯಾ ಅಧ್ಯಕ್ಷ ಹಬೀಬ್ ಬೊರ್‌ಗೈಬಾ ಅವರು ರಾಷ್ಟ್ರದ ಆರ್ಥಿಕ ಅಭಿವೃದ್ಧಿಗಾಗಿ ನಡೆಸಿದ ಆಂದೋಲನವನ್ನು ಜಿಹಾದ್ ಎಂದು ಕರೆಯಲಾಗಿತ್ತು. ಬೋರ್‌ಗೈಬಾ ಅವರು ಬದ್ಧ ಜಾತ್ಯತೀತವಾದಿ. ಕೆಲ ಸ್ತ್ರೀವಾದಿಗಳು ಈಚಿನ ದಿನಗಳಲ್ಲಿ ಮಹಿಳಾ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಹೋರಾಟಕ್ಕೂ ಜಿಹಾದ್ ಎನ್ನುತ್ತಾರೆ. ನ್ಯಾಯಾಧಾರಿತ ನೈತಿಕ ಮತ್ತು ಸಾಮಾಜಿಕ ವ್ಯವಸ್ಥೆಗಾಗಿ ನಡೆಯುವ ಹೋರಾಟಕ್ಕೂ ಜಿಹಾದ್ ಎನ್ನಲಾಗುತ್ತದೆ.

ಆದರೆ ಕಾಲ ಕ್ರಮೇಣ ಪ್ರತಿರೋಧ ಮತ್ತು ಆಕ್ರಮಣದ ನಡುವಿನ ಗೆರೆ ತೆಳುವಾಗುತ್ತಾ ಹೋಗಿದ್ದು ಜಿಹಾದ್ ಎಂಬ ಪದವನ್ನು ಮುಸ್ಲಿಮರ ಮಿಲಿಟರಿ ಕಾರ್ಯಾಚರಣೆಗಳನ್ನು ಬಣ್ಣಿಸಲು ವ್ಯಾಪಕವಾಗಿ ಬಳಸಲಾಗಿದೆ. ಮುಸ್ಲಿಮ್ ರಾಷ್ಟ್ರಗಳು ಹಲವೊಮ್ಮೆ ತಂತಮ್ಮಲೇ ಜಗಳ ಯುದ್ಧಗಳನ್ನು ಮಾಡಿವೆ. ಖಂಡಿತವಾಗಿಯೂ ಇಂತಹ ಯುದ್ಧಗಳಲ್ಲಿ ಇಸ್ಲಾಮಿಗೆ ಯಾವುದೇ ಪಾತ್ರ ಇಲ್ಲ. ವಾಸ್ತವದಲ್ಲಿ, 19ನೇ ಶತಮಾನದ ಸುಡಾನ್‌ನ ಬಂಡಾಯ ನಾಯಕ ಮೆಹ್‌ದೀ ಉಸ್ಮಾನಿಯಾ ಸಾಮ್ರಾಜ್ಯದ ವಿರುದ್ಧ ತಾನು ನಡೆಸಿದ ಬಂಡಾಯವನ್ನು ಜಿಹಾದ್ ಎಂದು ಘೋಷಿಸಿದ್ದರು ಮತ್ತು ಎಲ್ಲ ತುರ್ಕರನ್ನೂ ಹತ್ಯೆಗೈಯುವಂತೆ ಕರೆ ನೀಡಿದ್ದರು. ಸೌದಿ ಅರೇಬಿಯಾದ ಉಗ್ರವಾದಿ ಗುಂಪೊಂದು ಇತರ ಎಲ್ಲ ಮುಸ್ಲಿಮರ ವಿರುದ್ಧ ಜಿಹಾದ್ ಘೋಷಿಸುತ್ತಲೇ ಇರುತ್ತದೆ. ಸ್ವಾರಸ್ಯವೆಂದರೆ,

ಇಸ್ಲಾಮಿನೊಳಗಿನ ವರ್ಗಗಳು ತಮ್ಮ ನಡುವಿನ ಸಂಘರ್ಷಕ್ಕೂ ಜಿಹಾದ್ ಎಂಬ ಹಣೆಪಟ್ಟಿ ನೀಡುತ್ತಾ ಬಂದಿವೆ. ಇಸ್ಲಾಮಿನ ಬಗೆಗಿನ ಪರಸ್ಪರರ ನಿಲುವುಗಳನ್ನು ಟೀಕಿಸುವುದಕ್ಕೂ ಈ ಪದವನ್ನು ಬಳಸಲಾಗುತ್ತದೆ.

ಮುಸ್ಲಿಮ್ ಜಗತ್ತಿನಲ್ಲಿ ಕೆಲವು ತೀವ್ರಗಾಮಿ ಗುಂಪುಗಳು ತಮ್ಮದೇ ದೇಶದ ರಾಜಕೀಯ ವಿರೋಧಿಗಳ ವಿರುದ್ಧ ನಡೆಸುವ ಯುದ್ಧಕ್ಕೂ ಈಗ ಜಿಹಾದ್ ಎಂಬ ಪದ ಬಳಕೆಯಾಗುತ್ತಿದೆ. ಇತ್ತೀಚೆಗೆ ಕೆಲ ಉಗ್ರವಾದಿ ಗುಂಪುಗಳು ತಮ್ಮ ಚಟುವಟಿಕೆಗಳನ್ನು ಜಿಹಾದ್ ಎಂದು ಬಿಂಬಿಸಲು ಮುಂದಾಗಿವೆ. ನೈಜಿರಿಯಾ, ನೈಗರ್, ಸೋಮಾಲಿಯಾ, ಮಾಲಿ, ಆಫ್ಘಾನಿಸ್ತಾನ, ಮತ್ತು ಲೆಬನಾನ್‌ನಲ್ಲಿ ಇದನ್ನು ವ್ಯಾಪಕವಾಗಿ ಕಾಣಬಹುದು. ಅಪಹರಣ, ಒತ್ತೆಸೆರೆ, ಅಪಹರಣ ಮಾಡುವುದು ಮುಂತಾದ ಭಯೋತ್ಪಾದನಾ ಕೃತ್ಯಗಳನ್ನೂ ಸರ್ಕಾರದ ವಿರುದ್ದ ನಡೆಯುತ್ತಿರುವ ಜಿಹಾದ್‌ನ ಭಾಗ ಎಂದು ಈ ಗುಂಪುಗಳು ಸಮರ್ಥನೆ ಮಾಡಿಕೊಳ್ಳುತ್ತವೆ.

ಅಂದರೆ, ಜಿಹಾದ್ ಎಂಬ ಪದವನ್ನು ಶತಮಾನಗಳಿಂದಲೂ ವ್ಯಾಪಕವಾಗಿ ದುರ್ಬಳಕೆ ಮಾಡಲಾಗುತ್ತಿದೆ. ಇಂದು ಮುಸ್ಲಿಮ್ ಜಗತ್ತಿನ ಮೇಲೆ ಪಾಶ್ಚಿಮಾತ್ಯ ಸೇನೆ ನಡೆಸುವ ಆಕ್ರಮಣಕ್ಕೆ ಪ್ರತಿರೋಧವೊಡ್ಡುವುದನ್ನು ಕೂಡಾ ಜಿಹಾದ್ ಎನ್ನಲಾಗುತ್ತಿದೆ. ಹೆಸರು ಏನೇ ಇದ್ದರೂ, ಆಕ್ರಮಣಕಾರಿ ವಿದೇಶಿ ಪಡೆಗಳ ವಿರುದ್ಧ ಜನರು ಶಸ್ತ್ರಸಜ್ಜಿತರಾಗಿ ಹೋರಾಟ ನಡೆಸುವುದಕ್ಕೆ ಅಂತರರಾಷ್ಟ್ರೀಯ ಕಾನೂನಿನಲ್ಲೂ ಮಾನ್ಯತೆ ಇದೆ ಎಂಬುದು ಇಲ್ಲಿ ಗಮನಾರ್ಹ.

ಪಾಶ್ಚಿಮಾತ್ಯ ಶಕ್ತಿಗಳು ಕೂಡಾ ತಮ್ಮ ಅನುಕೂಲಕ್ಕೆ ತಕ್ಕಂತೆ ಜಿಹಾದ್ ಎಂಬ ಪದವನ್ನು ತಿರುಚಿವೆ. ಸೋವಿಯತ್ ರಷ್ಯಾದ ವಿಸ್ತರಣೆ ವಿರುದ್ಧ ಆಫ್ಘನ್ನರು ನಡೆಸಿದ ಪ್ರತಿರೋಧದ ಸಂದರ್ಭದಲ್ಲಿ ಈ ಪದವನ್ನು ವ್ಯಾಪಕವಾಗಿ ಬಳಕೆ ಮಾಡಲಾಗಿತ್ತು. ಅಮೆರಿಕದ ಗುಪ್ತಚರ ಸಂಸ್ಥೆಯಾದ ಸಿಐಎ ಸಾವಿರಾರು ಅಫ್ಘನ್ ಉಗ್ರಗಾಮಿಗಳನ್ನು ನೇಮಕ ಮಾಡಿಕೊಂಡು, ಅವರಿಗೆ ಶಸ್ತ್ರಾಸ್ತ್ರ ಮತ್ತು ತರಬೇತಿಯನ್ನು ಒದಗಿಸಿದ್ದೇ ಅಲ್ಲದೆ, ಹಣಕಾಸು ಮತ್ತು ರಾಜತಾಂತ್ರಿಕ ನೆರವನ್ನು ನೀಡಿದ್ದು ಈಗ ಇತಿಹಾಸ. ಅಮೆರಿಕವು ಮುಸ್ಲಿಮ್ ರಾಷ್ಟ್ರಗಳ ಬೆಂಬಲವನ್ನೂ ಈ ಯೋಧರಿಗೆ ಒದಗಿಸಿಕೊಟ್ಟಿತ್ತೆಂಬುದು ಇಲ್ಲಿ ಗಮನಿಸಬೇಕಾದ ಅಂಶ. ಸಿಐಎ ಲೆಕ್ಕವಿಲ್ಲದಷ್ಟು ತೀವ್ರವಾದಿಗಳನ್ನು ಅಲ್ಜೀರಿಯಾ, ಯಮನ್, ಚೆಚನ್ಯಾ ಮತ್ತು ಮಧ್ಯ ಏಷ್ಯಾದ ರಾಷ್ಟ್ರಗಳಿಂದ ಈ ಹೋರಾಟಕ್ಕೆ ನೇಮಕ ಮಾಡಿತ್ತು. ಮುಜಾಹಿದೀನ್, ಜಿಹಾದ್, ಶಹೀದ್ (ಹುತಾತ್ಮ) ಮುಂತಾದ ಪದಪುಂಜಗಳನ್ನು ಮಾಧ್ಯಮಗಳಿಗೆ ಪರಿಚಿತವಾದದ್ದು ಈ ಸಂದರ್ಭದಲ್ಲೇ.

ಕಿಸ್ಸಿಂಗರ್ ತತ್ವದ ಅಡಿಯಲ್ಲಿ ಏಷ್ಯನ್ನರನ್ನು ಏಷ್ಯನ್ನರ ವಿರುದ್ಧ ಎತ್ತಿ ಕಟ್ಟಲಾಯಿತು ಮತ್ತು ಹೋರಾಟಗಾರರಿಗೆ ಉತ್ತೇಜನ ನೀಡಲು ಇಸ್ಲಾಮೀ ಸಂಪ್ರದಾಯಗಳನ್ನು ಬಳಕೆಗೆ ತರಲಾಯಿತು. ಆಫ್ಘಾನಿಸ್ತಾನಕ್ಕೆ ಹೊಂದಿಕೊಂಡಂತೆ ಪಾಕಿಸ್ತಾನದ ಗಡಿಯುದ್ಧಕ್ಕೂ ವಿಶೇಷ ಮದ್ರಸಾಗಳನ್ನು ಸ್ಥಾಪಿಸಲಾಯಿತು. ಅಮೆರಿಕದಿಂದ ಪರೋಕ್ಷ ಆರ್ಥಿಕ ನೆರವು ಪಡೆದು ಸ್ಥಾಪನೆಗೊಂಡ ಈ ಮದ್ರಸಾಗಳು, ಕಮ್ಯುನಿಸ್ಟರು ದೇವರನ್ನು ನಂಬುವುದಿಲ್ಲ; ಆದ್ದರಿಂದ ಅವರು ಕಾಫಿರ್‌ಗಳು; ಅವರನ್ನು ಕೊಲ್ಲುವುದು ಜಿಹಾದ್ ಎಂಬಿತ್ಯಾದಿ ನಂಬಿಕೆಗಳನ್ನು ಯೋಧರ ತಲೆಯೊಳಗೆ ತುರುಕಿದ್ದವು. ಈ ಯುದ್ಧದಲ್ಲಿ ಸತ್ತವರು ನೇರವಾಗಿ ಜನ್ನತ್ (ಸ್ವರ್ಗ) ಪ್ರವೇಶಿಸುತ್ತಾರೆ, ಅಲ್ಲಿ ಅವರಿಗಾಗಿ 72 ಮಂದಿ ಕನ್ಯೆಯರು ಕಾಯುತ್ತಿರುತ್ತಾರೆ ಎಂದು ಹೇಳಲಾಯಿತು. ಈ ಸೈದ್ಧಾಂತಿಕ ಮಿಶ್ರಣವು ಹುತಾತ್ಮತೆಯನ್ನು ಅರಸುತ್ತಾ ಈ ಮದ್ರಸಾಗಳಿಗೆ ಪ್ರವೇಶ ಪಡೆದ ಮುಸ್ಲಿಮ್ ಯುವಜನರ ಮೇಲೆ ವಿಶೇಷ ಸ್ವರೂಪದ ಪರಿಣಾಮ ಬೀರಿತು.

ಅಫ್ಘಾನ್ ಯುವಜನತೆಯ ಎರಡು ಪೀಳಿಗೆಯು ಕಮ್ಯುನಿಸ್ಟ್ ಸೋವಿಯತ್ ಯೂನಿಯನ್ ವಿರುದ್ಧದ ಅಮೆರಿಕದ ಹೋರಾಟವನ್ನು ನಡೆಸಲು ಅಗತ್ಯವಿರುವ ಮಸ್ತಿಷ್ಕ ಪ್ರಕ್ಷಾಳನ ಮತ್ತು ಶಸ್ತ್ರ ತರಬೇತಿ ಪಡೆದಿವೆ. ತೀವ್ರವಾದಿ ವಿಚಾರಧಾರೆಯನ್ನು ಪ್ರತಿಪಾದಿಸುವ ಏಳು ಪ್ರಮುಖ ರಾಜಕೀಯ ಬಣಗಳನ್ನು ಅಫ್ಘಾನಿಸ್ತಾನದಲ್ಲಿ ತನ್ನ ಆಟಕ್ಕಾಗಿ ಅಮೆರಿಕ ಬಳಸಿಕೊಂಡಿತು. ಮತ್ತು ಸೋವಿಯತ್ ವಿರುದ್ಧ ಹೋರಾಡುವಂತೆ ಮಾಡಿತು. ರಾಷ್ಟ್ರೀಯ ಭದ್ರತಾ ಸಲಹೆಗಾರ ಬಿಗ್ನ್ಯೂ ಜೆಜಿನ್‌ಸ್ಕಿ ಈ ವಿಚಾರವನ್ನು ಬಹಿರಂಗಪಡಿಸಿದ್ದು ಹೀಗೆ: "ಸಿಐಎ ಮುಜಾಹಿದೀನ್‌ಗೆ ಶಸ್ತ್ರಾಸ್ತ್ರಗಳನ್ನು ಪೂರೈಸಿತು. ಈ ಶಸ್ತ್ರಗಳನ್ನು ಮತ್ತು ಭಯೋತ್ಪಾದನೆಯ ಸೂಕ್ಷ್ಮ ತರಬೇತಿ ಪಡೆದ ಸೋವಿಯತ್‌ನ್ನು ಆಫ್ಘನಿಸ್ತಾನದಿಂದ ಹೊರಗಟ್ಟುವಲ್ಲಿ ಯಶಸ್ವಿಯಾದರು. ಅಷ್ಟೇ ಅಲ್ಲದೆ ತಮ್ಮ ತಮ್ಮೊಳಗೆ ಯುದ್ಧ ಹೂಡಿದರು. ಕಾಬೂಲ್‌ನಲ್ಲಿಯೇ ಸುಮಾರು 45,000 ಹೆಣಗಳು ಬಿದ್ದವು." (ನಿನಾನ್ ಕೋಶಿ, ಡಬ್ಲ್ಯೂಒಟಿ, ಪಿಪಿ, 62–63).

ಈ ಗುಂಪುಗಳು ಸೋವಿಯತ್‌ನ್ನು ಆಫ್ಘಾನಿಸ್ತಾನದಿಂದ ಓಡಿಸಿದ್ದು ಮಾತ್ರವಲ್ಲ, ಅದೇ ಶಸ್ತ್ರಾಸ್ತ್ರಗಳನ್ನು ಮತ್ತು ಸಿದ್ಧಾಂತವನ್ನು ಪರಸ್ಪರರ ವಿರುದ್ಧ ಪ್ರಯೋಗಿಸಿ ಆರು ವರ್ಷಗಳ ಕಾಲ ತಮ್ಮವರನ್ನೇ ಹತ್ಯೆಗೈದರು. ಆಫ್ಘಾನಿಸ್ತಾನದಿಂದ ಕೊನೆಯ ಸೋವಿಯತ್ ಪಡೆ ಕಾಲ್ಕೀಳುವವರೆಗೂ ಈ ಅಂತಃಕಲಹ ಮುಂದುವರಿದಿತ್ತು. ಸುಮಾರು 1995ರ ವೇಳೆ ಈ ಗುಂಪುಗಳ ಪೈಕಿ ಪ್ರಬಲವಾಗಿದ್ದ ತಾಲಿಬಾನ್ ಕಾಬೂಲ್‌ನಲ್ಲಿ ಅಧಿಕಾರವನ್ನು ಹಿಡಿಯಿತು. ತನ್ನ ಆಡಳಿತಾವಧಿಯಲ್ಲಿ ಹೆಣ್ಮಕ್ಕಳ ಶಾಲಾ ಕಟ್ಟಡಗಳನ್ನು ಧ್ವಂಸಗೊಳಿಸುವುದು, ಬಾಮಿಯಾನ್‌ನಲ್ಲಿ ಪ್ರಾಚೀನ ಬುದ್ಧನ

ಪ್ರತಿಮೆಯನ್ನು ಸ್ಫೋಟಗೊಳಿಸುವುದು, ಕಂದಹಾರ್‌ಗೆ ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು ಅಪಹರಣ ಮಾಡಿ ಒಯ್ದು, ಪ್ರಯಾಣಿಕರನ್ನು ಒತ್ತೆಯಾಳಾಗಿ ಇಟ್ಟದ್ದು ಇವರ ಪ್ರಮುಖ ಸಾಧನೆ. ವಿಮಾನ ಪ್ರಯಾಣಿಕರ ಬಿಡುಗಡೆಗೆ ಉಗ್ರಗಾಮಿ ಮಸೂದ್ ಅಜರ್‌ನನ್ನು ಬಿಡುಗಡೆ ಮಾಡಬೇಕೆಂಬ ಷರತ್ತು ಇಟ್ಟು ಅದರಲ್ಲಿ ಯಶಸ್ವಿಯಾದರು. ಅಲ್‌ಖೈದಾ, ಒಸಾಮಾ ಬಿನ್ ಲಾದನ್ ಕೂಡಾ ಅಫ್ಘನ್ ಸಂಘರ್ಷದ ಕೂಸುಗಳೇ. ಅಫ್ಘಾನಿಸ್ತಾನದ ಶಸ್ತ್ರಗಳು ಅಮೆರಿಕದ ವಿರುದ್ಧವೇ ತಿರುಗಲು ಆರಂಭಿಸಿದ ಬಳಿಕ ತಾಲಿಬಾನ್ ವಿರುದ್ಧದ ಹೋರಾಟ ಆರಂಭಗೊಂಡಿತು ಮತ್ತು "ಜಿಹಾದಿ ಭಯೋತ್ಪಾದನೆ" ಎಂಬ ಪದಪ್ರಯೋಗ ಜಾರಿಗೆ ಬಂತು. ಸೆಪ್ಟಂಬರ್ 9, 2001ರ ವರ್ಲ್ಡ್ ಟ್ರೇಡ್ ಸೆಂಟರ್‌ನ ಅವಳಿ ಗೋಪುರದ ಮೇಲಿನ ದಾಳಿಯೊಂದಿಗೆ ಘಟನಾವಳಿಗಳು ತಾರಕಕ್ಕೆ ತಲುಪಿದವು. ಅಮೆರಿಕ ಅಧ್ಯಕ್ಷ ಜಾರ್ಜ್ ಬುಷ್ "ಭಯೋತ್ಪಾದನೆ ವಿರುದ್ಧ ಯುದ್ಧ" ಘೋಷಿಸಲು ಈ ಘಟನೆ ಕಾರಣವಾಯಿತು. ಅನಂತರದ್ದು ಇತಿಹಾಸ.

ಹಿಂಸೆಯು ಹಿಂಸೆಗೆ ಹುಟ್ಟು ಕೊಡುತ್ತದೆ. ಅಫ್ಘಾನಿಸ್ತಾನ ಮತ್ತು ಇರಾಕ್ ವಿರುದ್ಧದ ಅಮೆರಿಕ ನೇತೃತ್ವದ ಎರಡು ಯುದ್ಧಗಳು ಪಶ್ಚಿಮ ಏಷ್ಯಾದಾದ್ಯಂತ ಪ್ರತೀಕಾರ, ಪ್ರತ್ಯಾಕ್ರಮಣ ಮತ್ತು ಆತ್ಮಹತ್ಯಾ ದಾಳಿಗಳ ಹುಟ್ಟಿಗೆ ಕಾರಣವಾದವು. ಅಮೆರಿಕದ ಮಧ್ಯಸ್ಥಿಕೆಯು ಇಡೀ ಪ್ರದೇಶವನ್ನು ಸಾಮಾಜಿಕ ಮತ್ತು ರಾಜಕೀಯವಾಗಿ ಪ್ರಕ್ಷುಬ್ಧಗೊಳಿಸಿ ಬಿಟ್ಟಿತು. ಒಂದು ದಶಲಕ್ಷಕ್ಕೂ ಹೆಚ್ಚು ಇರಾಕಿಗಳು ಭಯೋತ್ಪಾದನೆ ವಿರುದ್ಧದ ಯುದ್ಧಕ್ಕೆ ಬಲಿಯಾದರು. ಇಂದಿಗೂ ಅಫ್ಘಾನಿಸ್ತಾನದ ಭವಿಷ್ಯ ಅನಿಶ್ಚಿತವಾಗಿಯೇ ಇದೆ. ಆತ್ಮಹತ್ಯಾ ಬಾಂಬರ್‌ಗಳು ಪ್ರತಿ ನಿತ್ಯ ವಿಧ್ವಂಸಕ ಕೃತ್ಯ ನಡೆಸುತ್ತಿದ್ದಾರೆ. ಪಾಕಿಸ್ತಾನವೂ ಇದರ ಬಿಸಿ ಅನುಭವಿಸುತ್ತಿದೆ.

ಇವಾವುದೂ ಜಿಹಾದ್ ಎಂಬ ತಲೆಬರಹದಡಿ ಬರುವುದಿಲ್ಲ. ಹಿಂಸೆ ಮತ್ತು ಭಯೋತ್ಪಾದನೆ ಜಿಹಾದ್‌ನ ಭಾಗವಲ್ಲ. ಜಿಹಾದ್ ಎಂಬುದು ವ್ಯಕ್ತಿಯನ್ನೂ ಸಮಾಜವನ್ನೂ ಅನಪೇಕ್ಷಿತ ಗುಣಗಳಿಂದ ಶುದ್ಧಗೊಳಿಸುತ್ತದೆ. ತನ್ನ ಭೂಭಾಗವನ್ನು ವಿಸ್ತರಿಸುವುದು, ಸಂಪನ್ಮೂಲಗಳ ಕಬಳಿಕೆ, ವಿವೇಚನೆಯಿಲ್ಲದೆ ಹಿಂಸಾಚಾರ ನಡೆಸುವುದು, ಜನರ ಮನಸ್ಸಿನಲ್ಲಿ ಭೀತಿ ಹುಟ್ಟಿಸುವುದು ಇವಾವುದೂ ಜಿಹಾದ್‌ನಲ್ಲಿ ಸೇರಿಲ್ಲ. ಶಾಂತಿ, ಸುವ್ಯವಸ್ಥೆ ಮತ್ತು ನ್ಯಾಯದ ಸ್ಥಾಪನೆಗಾಗಿ ಹೋರಾಡುವುದೇ ಜಿಹಾದ್. ಯುದ್ಧ ಎಂಬುದು ಜಿಹಾದ್‌ನ ಅಂತಿಮ ಹಂತ ಮಾತ್ರ. ವ್ಯಕ್ತಿ ತನ್ನ ಅಂತರಂಗವನ್ನು ಶುಚಿಗೊಳಿಸುವುದರೊಂದಿಗೆ ಇದು ಆರಂಭಗೊಳ್ಳುತ್ತದೆ. ಜಿಹಾದನ್ನು ಹಲವಾರು ಶಕ್ತಿಗಳು ಬಳಕೆ ಮತ್ತು ದುರ್ಬಳಕೆ ಮಾಡಿದ್ದು ಅದು ಇಸ್ಲಾಮಿನ ನೈಜ ಸ್ಫೂರ್ತಿಯನ್ನು ಪ್ರತಿಬಿಂಬಿಸುವುದಿಲ್ಲ.

## ಧರ್ಮದ ದುರ್ಬಳಕೆ

ತೀವ್ರವಾದಿ ಮುಸ್ಲಿಮ್ ಗುಂಪುಗಳು ನಡೆಸುವ ಹಿಂಸಾಕೃತ್ಯಗಳ ಬಗ್ಗೆ ಪ್ರತಿಕ್ರಿಯಿಸುವ ಸಂದರ್ಭದಲ್ಲಿ ಈ ಗುಂಪುಗಳು ಧರ್ಮವನ್ನು ದುರ್ಬಳಕೆ ಮಾಡುತ್ತಿವೆ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. "ಧರ್ಮದ ಹೆಸರನ್ನು ಪದೇ ಪದೇ ಉಲ್ಲೇಖಿಸುವ ಕಾರಣ ಹಿಂಸೆ ಮತ್ತು ಭಯೋತ್ಪಾದನೆಯೊಂದಿಗೆ ಧರ್ಮದ ಹೆಸರು ಜೋಡಿಸಲ್ಪಡುತ್ತದೆ" ಎಂಬುದು ಈ ಬಗ್ಗೆ ನೀಡಲಾಗುವ ವಿವರಣೆ.

ಆದರೆ ಇದು ಕೇವಲ ಮುಸ್ಲಿಮ್ ಗುಂಪುಗಳಿಗೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಇದೊಂದು ವಿಸ್ತೃತವಾದ ವಿದ್ಯಮಾನ. ಸ್ವಾತಂತ್ರ್ಯಕ್ಕಾಗಿ ನಡೆದಿರುವ ರಾಷ್ಟ್ರೀಯ ಚಳವಳಿ ಮತ್ತು ಹೋರಾಟಗಳ ಸಂದರ್ಭದಲ್ಲೂ ಕೆಲವು ನಿರ್ದಿಷ್ಟ ಧಾರ್ಮಿಕ ಘೋಷಣೆಗಳು ಅಥವಾ ಸಂಕೇತಗಳು ಬಳಕೆಯಾಗಿರುವುದನ್ನು ನಾವು ಗಮನಿಸುತ್ತೇವೆ. ಸಹಸ್ರಮಾನಗಳಿಂದಲೂ ಧರ್ಮವು ಜನರ ಮನಸ್ಸಿಗೆ ನೇರವಾಗಿ ತಟ್ಟುವಂತಹ ವಿಷಯವಾಗಿದ್ದು, ರಾಷ್ಟ್ರಗಳ ಕಲ್ಪನೆ ಎರಡು ಶತಮಾನಗಳ ಹಿಂದಷ್ಟೆ ಚಾಲ್ತಿಗೆ ಬಂದಿದೆ. ಪ್ರಾದೇಶಿಕ ಸಂಸ್ಕೃತಿಯಲ್ಲಿ ಆಳವಾದ ಬೇರುಗಳನ್ನು ಹೊಂದಿರುವ ಮತ್ತು ಪ್ರಾದೇಶಿಕತೆಯ ಹೆಸರಲ್ಲಿ ಜನಬೆಂಬಲವನ್ನು ಗಳಿಸುವ ಸಾಮರ್ಥ್ಯದಿಂದಾಗಿ ಇಸ್ಲಾಮಿಸಮ್ ಒಂದು ನೂತನ ಮತ್ತು ಸಮರ್ಥ ಸೈದ್ಧಾಂತಿಕ ಅಸ್ತ್ರವಾಗಿ ಮಾರ್ಪಟ್ಟಿದೆ.

ಮೊದಲೇ ಹೇಳಿದಂತೆ, ಇಂಥ ಬೆಳವಣಿಗೆಗಳು ಕೇವಲ ಇಸ್ಲಾಮೀ ಗುಂಪುಗಳಿಗಷ್ಟೆ ಸೀಮಿತವಾಗಿಲ್ಲ.

ಆಗಸ್ಟ್ ಸಿ ಕ್ರೇ ಅವರ 'ದ ಫಸ್ಟ್ ಕ್ರುಸೇಡ್: ದ ಅಕೌಂಟ್ಸ್ ಆಫ್ ಐ ವಿಟ್‌ನೆಸೆಸ್ ಅಂಡ್ ಪಾರ್ಟಿಸಿಪೆಂಟ್ಸ್' ಕೃತಿಯ ಈ ವಾಕ್ಯಗಳನ್ನು ಗಮನಿಸಿ: ಕ್ರಿ.ಶ. 1095ರ ನವೆಂಬರ್ ತಿಂಗಳಲ್ಲಿ, ದ್ವಿತೀಯ ಪೋಪ್ ಅರ್ಬನ್ ಮುಸ್ಲಿಮ್ ಜಗತ್ತನ್ನು ವಸಾಹತೀಕರಿಸುವ ಮೊದಲ ಐರೋಪ್ಯ ಯತ್ನಕ್ಕೆ ಚಾಲನೆ ನೀಡಿದರು. ಇದನ್ನು ಪಶ್ಚಿಮದಲ್ಲಿ ಕ್ರುಸೇಡ್ಸ್ ಅಥವಾ ಧರ್ಮಯುದ್ಧಗಳು ಎನ್ನಲಾಗುತ್ತದೆ. ಮುಸ್ಲಿಮರನ್ನು ಅನಾಗರಿಕರು ಮತ್ತು ಧರ್ಮಭ್ರಷ್ಟರು ಎಂದು ಸಾರಿದ ಪೋಪ್, ಅವರ ನೆಲವನ್ನು ಖಾಲಿ ಮಾಡಿ ಕ್ರಿಸ್ತನ ಹೆಸರಿನಲ್ಲಿ ಎಲ್ಲರನ್ನು ಮುಗಿಸಿಬಿಡಿ ಎಂದು ಐರೋಪ್ಯ ಕ್ರೈಸ್ತರಿಗೆ ಆದೇಶಿಸುತ್ತಾರೆ. ಈ ಕೃತಿಯು ಘಟನೆಯನ್ನು ಹೀಗೆ ವಿವರಿಸುತ್ತದೆ: ಕ್ರಿ.ಶ. 1099ರಲ್ಲಿ ಈ ಧರ್ಮಯೋಧರು (ಕ್ರುಸೇಡರ್ಸ್, ಇವರನ್ನು ಕ್ರಿಶ್ಚಿಯನ್ ನೈಟ್ಸ್ ಎಂದೂ ಕರೆಯಲಾಗುತ್ತದೆ) ಜೆರುಸಲೇಮನ್ನು ವಶಪಡಿಸಿಕೊಂಡು 60,000ಕ್ಕೂ ಹೆಚ್ಚು ಮುಸ್ಲಿಮರು ಮತ್ತು ಯಹೂದಿಯರನ್ನು ಕೊಂದು ಹಾಕಿದರು.

ಈ ಮಾರಣಹೋಮದಲ್ಲಿ ಮುಸ್ಲಿಮ್ ಮತ್ತು ಯಹೂದಿ ಪಾಳಯದಲ್ಲಿ ಒಬ್ಬರೂ ಬದುಕುಳಿಯಲಿಲ್ಲ ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಹಸುಗೂಸುಗಳು, ಮಕ್ಕಳು, ಮಹಿಳೆಯರು ಮತ್ತು ವಯಸ್ಕರು ಕ್ರಿಶ್ಚಿಯನ್ ಯೋಧರ ಖಡ್ಗದಡಿಗೆ ಸಿಲುಕಿ ಮೃತಪಟ್ಟರು. ಈ ಯೋಧರು ಮಾರಣಹೋಮದ ನಂತರ ಏಸು ಕ್ರಿಸ್ತನ ಗೋರಿಯ ಬಳಿ ತೆರಳಿದ ಈ ಯೋಧರು ಧನ್ಯವಾದ ಸಲ್ಲಿಸಿದರು. ನಾವು ಕ್ರೈಸ್ತ ಧರ್ಮವನ್ನು ಈ ಘಟನೆಗಳ ಆಧಾರದಲ್ಲಿ ತೀರ್ಮಾನಿಸಲು ಸಾಧ್ಯವೇ? ಖಂಡಿತವಾಗಿಯೂ ಯಾವುದೇ ಕ್ರೈಸ್ತ ಧರ್ಮಾನುಯಾಯಿಯಾಗಲೀ ಕ್ರೈಸ್ತರಲ್ಲದವರಾಗಲಿ ಇದನ್ನು ಒಪ್ಪಲು ಸಾಧ್ಯವಿಲ್ಲ. ಆದ್ದರಿಂದ ಒಂದು ಸಣ್ಣ ವಿಭಾಗದ ಮುಸ್ಲಿಮ್ ತೀವ್ರವಾದಿಗಳು ದೇವರ ಹೆಸರಲ್ಲಿ ಅಮಾಯಕ ಜನರನ್ನು ಕೊಲೆ ಮಾಡಿದಾಗ ಅದರ ಆಧಾರದಲ್ಲಿ ಇಸ್ಲಾಮಿನ ಬಗ್ಗೆ ತೀರ್ಮಾನಕ್ಕೆ ಬರುವುದು ಕೂಡಾ ಸರಿಯಲ್ಲ.

ಕ್ರೈಸ್ತ ಧರ್ಮದ ಹೆಸರಿನಲ್ಲಿ ನಡೆದ ಹೆಚ್ಚಿನ ಕೊಲೆ, ಲೂಟಿಗಳಿಗೆ ಚರ್ಚ್ ಅಥವಾ ಸರ್ಕಾರಗಳ ಕುಮ್ಮಕ್ಕು ಮತ್ತು ಬೆಂಬಲ ಇತ್ತು ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಆದ್ದರಿಂದ ಇವು 'ಸಾಂಸ್ಥಿಕ ಭಯೋತ್ಪಾದನೆ' ಎಂದು ಬೇಕಾದರೂ ಕರೆಯಬಹುದು. ಆದರೆ ಇಸ್ಲಾಮಿನ ಹೆಸರಿನಲ್ಲಿ ಕೆಲವು ವ್ಯಕ್ತಿಗಳು ಹಿಂಸಾಕೃತ್ಯಗಳನ್ನು ನಡೆಸಿದ್ದಾರೆಯೇ ಹೊರತು ಯಾವುದೇ ಅಧಿಕೃತ ಸರ್ಕಾರಗಳ ಅಥವಾ ಮುಸ್ಲಿಮ್ ನಾಯಕತ್ವದ ಬೆಂಬಲವಾಗಲೀ ಅವುಗಳಿಗೆ ಇರಲಿಲ್ಲ.

- ಬ್ಯಾಪ್ಟಿಸ್ಟ್ ಕ್ರೈಸ್ತರ ಗುಂಪಿಗೆ ಸೇರಿದ ಕೆಲವರು ತಮ್ಮ ಧರ್ಮಗ್ರಂಥವನ್ನು ತಿರುಚಿ ಅಸಂಖ್ಯ ಗರ್ಭಪಾತ ಕ್ಲಿನಿಕ್‌ಗಳನ್ನು ತೆರೆದು ಅನೇಕ ಅಮಾಯಕ ಜನರ ಸಾವಿಗೆ ಕಾರಣರಾದರು.

- ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ನಾಝಿ ಜರ್ಮನಿಯ ದಾಳಿಗೆ ತುತ್ತಾದ ಸ್ಟಾಲಿನ್‌ಗೆ ಸಮತಾವಾದ ಮತ್ತು ಲೆನಿನಿಸಂ ಜನರನ್ನು ಪ್ರತಿರೋಧ ಒಡ್ಡಲು ಉದ್ರೇಕಿಸುವಷ್ಟು ಶಕ್ತವಲ್ಲ ಎಂಬುದು ಕೂಡಲೇ ಅರಿವಿಗೆ ಬರುತ್ತದೆ. ಆದ್ದರಿಂದ ಕೂಡಲೇ ಆತ ರಷಿಯನ್ ರಾಷ್ಟ್ರೀಯವಾದವನ್ನು ಬಡಿದೆಬ್ಬಿಸಲು ಪ್ರಯತ್ನಿಸುತ್ತಾನೆ. ಕೊನೆಗೆ ವಿವಶನಾಗಿ ಆರ್ಥಡಾಕ್ಸ್ ಚರ್ಚ್‌ನ್ನು ಪ್ರತಿರೋಧದ ನೆಲೆಯಾಗಿ ಅಂಗೀಕರಿಸಿ ಅದನ್ನೇ 'ಹೋಲಿ ಮದರ್ ರಷ್ಯಾ' ಚಿಹ್ನೆಯಾಗಿ ಅಳವಡಿಸಿಕೊಳ್ಳುತ್ತಾನೆ.

- ಎರಡನೇ ವಿಶ್ವಯುದ್ಧಕ್ಕೆ ಮುಂಚೆ ಜಪಾನ್, ಏಷ್ಯಾದಲ್ಲಿ ತನ್ನ ವಿಸ್ತರಣಶೀಲ ಮತ್ತು ಸಾಮ್ರಾಜ್ಯಶಾಹಿ ಧೋರಣೆಗಳಿಗೆ ಜಪಾನೀಯರ

ಬೆಂಬಲ ಪಡೆಯಲಿಕ್ಕಾಗಿ ಆಯ್ದುಕೊಂಡ ಮಾರ್ಗ ಯಾವುದೆಂಬುದನ್ನೂ ನಾವು ಇಲ್ಲಿ ನೆನಪಿಸಬೇಕು. ಜಪಾನಿಯರನ್ನು ಬಡಿದೆಬ್ಬಿಸಲು ಷಿಂಟೋ ಧರ್ಮ ಮತ್ತು ಬೌದ್ಧ ಧರ್ಮದ ಸಂಕೇತಗಳನ್ನೂ ಆಗ ಬಳಸಲಾಗಿತ್ತು.

- ಶ್ರೀಲಂಕಾದಲ್ಲಿ ಬಹುಸಂಖ್ಯಾತ ಸಿಂಹಳೀಯ ಬೌದ್ಧರು ಹಿಂದೂ ತಮಿಳು ಪ್ರತ್ಯೇಕತಾವಾದಿಗಳ ವಿರುದ್ಧದ ಹೋರಾಟಕ್ಕೆ ಜನಬೆಂಬಲ ಕ್ರೋಢೀಕರಿಸಲು ಬೌದ್ಧ ಸನ್ಯಾಸಿಗಳನ್ನು ಬಳಸುತ್ತಿರುವುದನ್ನು ನಾವಿಲ್ಲಿ ಗಮನಿಸಬಹುದು.

- ನಾಝಿ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಕೂಡಾ ಒಬ್ಬ ನಿಷ್ಠಾವಂತ ಕ್ರೈಸ್ತನಾಗಿದ್ದ. ತಾನು ದೇವರ ಯೋಜನೆಯಂತೆ ಕಾರ್ಯಾಚರಿಸುತ್ತಿದ್ದೇನೆ ಎಂದು ಭಾವಿಸಿಕೊಂಡಿದ್ದ. ಆರು ಮಿಲಿಯ ಯಹೂದಿಯರನ್ನು ನರಮೇಧದಲ್ಲಿ ಮುಗಿಸಿ ಬಿಟ್ಟ ಈತ ತನ್ನ ಆಕ್ರಮಣಗಳಿಗೆ ಚರ್ಚ್‌ನ ಬೆಂಬಲ ಪಡೆಯಲು ಪ್ರಯತ್ನಿಸಿದ್ದ.

- ಅಮೆರಿಕದಲ್ಲಿಯೂ ಯುದ್ಧದ ಸಂದರ್ಭಗಳಲ್ಲಿ ರಾಷ್ಟ್ರೀಯ ಹೋರಾಟಕ್ಕೆ ಸಿಂಧುತ್ವ ಒದಗಿಸಲು ಮುಖ್ಯ ವಾಹಿನಿಯ ಅನೇಕ ಚರ್ಚ್‌ಗಳ ಪ್ರಾಟೆಸ್ಟಂಟ್, ಕ್ಯಾಥೋಲಿಕ್ ಮತ್ತು ಯಹೂದಿ ಮತ್ತು ಧರ್ಮಗುರುಗಳ ಸೇವೆಯನ್ನು ಪಡೆಯಲಾಗಿತ್ತು.

- ಭಾರತದಲ್ಲಿಯೂ ತೀವ್ರವಾದಿ ಬಲಪಂಥೀಯ ಗುಂಪುಗಳು ಚುನಾವಣೆಯ ಸಂದರ್ಭದಲ್ಲಿ ರಾಷ್ಟೀಯ ಹೋರಾಟ ಮತ್ತು ಧಾರ್ಮಿಕ ಹೋರಾಟಗಳನ್ನು ಥಳುಕು ಹಾಕಲು ಹಿಂದೂ ಸಂಕೇತಗಳನ್ನು ನೆಚ್ಚಿಕೊಂಡಿದ್ದವು. ಬಹುಸಂಖ್ಯಾತ ಸಮುದಾಯವನ್ನು ಒಂದುಗೂಡಿಸಲಿಕ್ಕಾಗಿ ಮುಸ್ಲಿಮ್ ತುಷ್ಟೀಕರಣದಂತಹ ಸುಳ್ಳುಗಳನ್ನೂ ವಿವಾದಗಳನ್ನೂ ಈ ಗುಂಪುಗಳು ಹುಟ್ಟುಹಾಕುತ್ತವೆ.

ಯಾವುದೇ ಚಳವಳಿ, ಸಮರ ಮತ್ತು ಯುದ್ಧವನ್ನು ಸಮರ್ಥಿಸಿಕೊಳ್ಳಲು ಮತ್ತು ಅದಕ್ಕಾಗಿ ಸಾರ್ವಜನಿಕರ ಬೆಂಬಲ ಪಡೆಯಲು ಧರ್ಮವನ್ನು ಬಳಸುವುದು ಸರ್ವೇಸಾಮಾನ್ಯ. ಆದರೆ, ಎಲ್ಲ ಧ್ಯೇಯ, ಚಳವಳಿ, ಹೋರಾಟ, ಯುದ್ಧಗಳೂ ಧರ್ಮಪ್ರೇರಿತವಾಗಿರುವುದಿಲ್ಲ. ಧರ್ಮವನ್ನು ಪಕ್ಕಕ್ಕಿಟ್ಟರೂ, ಜಗತ್ತಿನಲ್ಲಿ ಹತ್ತು ಹಲವು ಚಳವಳಿಗಳೂ, ಆಂದೋಲನಗಳು, ಹೋರಾಟಗಳು ನಡೆಯುತ್ತಿರುತ್ತವೆ.

# ಮರ್ದನ ಮತ್ತು ಭಯೋತ್ಪಾದನೆ: ವ್ಯತ್ಯಾಸ ಇದೆಯೇ ?

ಭಯೋತ್ಪಾದನೆ ಒಂದು ಧಾರ್ಮಿಕ ಸಂಗತಿಯಲ್ಲ. ಅದಕ್ಕೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿವೆ. ಲಿಬರೇಷನ್ ಟೈಗರ್ಸ್ ಆಫ್ ತಮಿಳ್ ಈಳಂ, ಐರಿಷ್ ರಿಬಪ್ಲಿಕನ್ ಆರ್ಮಿ, ಉಲ್ಫಾ, ಅಭಿನವ್ ಭಾರತ್‌ನಂತಹ ತೀವ್ರವಾದಿ ಸಿದ್ಧಾಂತಕ್ಕೆ ನಿಷ್ಠವಾಗಿರುವ ಸಂಘಟನೆಗಳು ಇಂದು ಹೆಚ್ಚು ಪ್ರಚಲಿತದಲ್ಲಿರುವ ಹೆಸರುಗಳು. ಧಾರ್ಮಿಕ ತೀವ್ರವಾದ ಮತ್ತು ಭಯೋತ್ಪಾದನೆಯ ನಡುವಿನ ಸಂಬಂಧವನ್ನು ಈ ಸಂಘಟನೆಗಳು ಎತ್ತಿ ಹಿಡಿಯುತ್ತವೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಮಾಧ್ಯಮದ ಒಂದು ವಿಭಾಗವು ತೀವ್ರವಾದವನ್ನು ಕೇವಲ ಇಸ್ಲಾಮ್ ಜೊತೆಗೆ ಥಳುಕು ಹಾಕಲು ಯತ್ನಿಸುತ್ತಿವೆ. ಸ್ಥಳೀಯ ಮತ್ತು ಜಾಗತಿಕ ಮಟ್ಟದಲ್ಲಿ ಹಿತಾಸಕ್ತಿಗಳು ಪೂರಕವಾಗಿರುವುದರಿಂದ ಮಾಧ್ಯಮಗಳು 'ಇಸ್ಲಾಮೀ ಭಯೋತ್ಪಾದನೆ'ಯಂತಹ ಪಾರಿಭಾಷಿಕಗಳನ್ನು ಯಾವುದೇ ಅಳುಕಿಲ್ಲದೆ ಪ್ರಯೋಗಿಸುತ್ತಿವೆ.

ಅನ್ಯಾಯ ಮತ್ತು ಸ್ವಾತಂತ್ರ್ಯದ ಹರಣವು ಸಾಮಾನ್ಯವಾಗಿ ಹಿಂಸೆಗೆ ಹಾದಿ ಮಾಡುತ್ತದೆ ಮತ್ತು ಇದು ಕ್ರಮೇಣ ಭಯೋತ್ಪಾದನೆಯ ರೂಪ ತಾಳುತ್ತದೆ. ಮರ್ದಿತರು ಯಾವುದಾದರೊಂದು ನಿರ್ದಿಷ್ಟ ಧರ್ಮಕ್ಕೆ ಸೇರಿದವರಾಗಿದ್ದರೆ ಈ ಪ್ರತಿರೋಧದ ಹಿಂದಿನ ಪ್ರೇರಣೆ ಧರ್ಮದ ಬಣ್ಣವನ್ನು ಹೊಂದಿರುತ್ತದೆ. ಲಿಬರೇಷನ್ ಟೈಗರ್ಸ್ ಅಫ್ ತಮಿಳ್ ಈಳಂನ (ಎಲ್‌ಟಿಟಿಇ) ಯೋಧರು ಮತ್ತು ಕಾರ್ಯಕರ್ತರು ಹಿಂದೂಗಳಾಗಿದ್ದಾರೆ. ಆದರೆ, ಮಾಧ್ಯಮದ ಒಂದು ವರ್ಗ ಎಲ್‌ಟಿಟಿಇಯ ಹೋರಾಟಕ್ಕೆ ಧರ್ಮದ ಲೇಪ ಹಚ್ಚುವುದಿಲ್ಲ. ಉತ್ತರ ಐರ್ಲೆಂಡ್‌ನ ಜನರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಐರಿಷ್ ರಿಪಬ್ಲಿಕನ್ ಆರ್ಮಿ ಕ್ಯಾಥೋಲಿಕ್ ಧರ್ಮದಲ್ಲಿ ನಂಬಿಕೆ ಹೊಂದಿದೆ. ಆದರೆ, ಪಾಶ್ಚಿಮಾತ್ಯ ಮಾಧ್ಯಮವು ಅದನ್ನು ಆ ರೀತಿಯಲ್ಲಿ ಬಿಂಬಿಸಲು ಹಿಂದೇಟು ಹಾಕುತ್ತದೆ.

'ಸ್ವಾತಂತ್ರ್ಯ ಹೋರಾಟಗಾರರು' ಎಂದು ಹೇಳಿಕೊಳ್ಳುವವರು ಕೂಡಾ ತಾವು

ಯಾರಿಂದ ಬಿಡುಗಡೆಗಾಗಿ ಪ್ರಯತ್ನಿಸುತ್ತಿರುತ್ತಾರೋ ಆ ಶಕ್ತಿಗಳ ಮಟ್ಟಿಗೆ 'ಭಯೋತ್ಪಾದಕರು' ಎಂದು ಕರೆಸಿಕೊಳ್ಳುವ ಸಾಧ್ಯತೆ ಇರುತ್ತದೆ. ಸರ್ದಾರ್ ಭಗತ್ ಸಿಂಗ್ ಅವರ ಉದಾಹರಣೆಯನ್ನು ತೆಗೆದುಕೊಳ್ಳೋಣ. ಎಲ್ಲ ಕಾಲದ ಯುವಕರು ಮತ್ತು ಕ್ರಾಂತಿಕಾರಿಗಳ ಮಟ್ಟಿಗೆ ಹೀರೋ ಆಗಿದ್ದ ಸಿಂಗ್ ಬ್ರಿಟಿಷ್ ಪೊಲೀಸ್ ಅಧಿಕಾರಿ ಜಾನ್ ಸಾಂಡರ್ಸ್‌ನ ಹತ್ಯೆಗೆ ಕಾರಣವಾದ ಗುಂಪಿನಲ್ಲಿದ್ದರು. ಸ್ವತಃ ಭಗತ್ ಸಿಂಗ್ ಅಸೆಂಬ್ಲಿ ಮೇಲೆ ಬಾಂಬ್ ಎಸೆದ ಆರೋಪ ಎದುರಿಸಿದ್ದರು. ಆದರೆ ಈ ದಾಳಿಯಲ್ಲಿ ಯಾರೂ ಮೃತಪಟ್ಟಿರಲಿಲ್ಲ. ಸಾಮಾನ್ಯವಾಗಿ ಸಿಂಗ್‌ರನ್ನು ಒಬ್ಬ ಶ್ರೇಷ್ಠ ಕ್ರಾಂತಿಕಾರಿಯೆಂದೂ ಸ್ವಾತಂತ್ರ್ಯ ಯೋಧನೆಂದೂ ಕರೆಯಲಾಗುತ್ತದೆ. ಆದರೆ ಬ್ರಿಟಿಷರು ಅವರಿಗೆ ಭಯೋತ್ಪಾದಕ ಎಂಬ ಹಣೆಪಟ್ಟಿ ಹಚ್ಚಿದ್ದರೆಂಬುದನ್ನು ನಾವು ಮರೆಯುವಂತಿಲ್ಲ.

ಹಲವೊಮ್ಮೆ ಇಂತಹ ಗುಂಪುಗಳು ಭಾರಿ ನಾಶ ನಷ್ಟಕ್ಕೆ ಕಾರಣವಾಗುತ್ತದೆಂಬುದೇನೋ ನಿಜ. ಆದರೆ ಪಾಶ್ಚಾತ್ಯ ಜಗತ್ತಿನ ರಾಷ್ಟ್ರಗಳು ಕೂಡಾ ಇಂತಹ ಹಿಂಸಾಕೃತ್ಯಗಳನ್ನ ಎಸಗಿದ ಉದಾಹರಣೆಗಳಿವೆ. ಬ್ರಿಟಿಷ್ ಭಯೋತ್ಪಾದಕ ಪೀಟರ್ ಬ್ಲೀಚ್, ಪಶ್ಚಿಮ ಬಂಗಾಳದ ಪುರುಲಿಯಾದಲ್ಲಿ ಶಸ್ತ್ರಾಸ್ತ್ರ ಇಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ವರ್ಷದ ಸಜೆಗೆ ಗುರಿಯಾಗಿದ್ದ. ಆದರೆ ಬ್ರಿಟಿಷ್ ಪ್ರಧಾನಿ ಟೋನಿ ಬ್ಲೇರ್‌ರ ವಿನಂತಿಯ ಮೇರೆಗೆ ರಾಷ್ಟ್ರಪತಿಯ ದಯಾಭಿಕ್ಷೆಯ ಮೂಲಕ ಆತನ ಶಿಕ್ಷೆಯನ್ನು ಅರ್ಧದಲ್ಲೇ ಮೊಟಕುಗೊಳಿಸಲಾಯಿತು. ಬ್ಲೇರ್ ಸ್ವತಃ ತಥಾಕಥಿತ ಭಯೋತ್ಪಾದನೆ ವಿರೋಧಿ ಹೋರಾಟದ ಮುಂಚೂಣಿಯಲ್ಲಿದ್ದರೆಂಬುದು ಗಮನಾರ್ಹ. ಈ ಪ್ರಕರಣಕ್ಕೆ ಸಂಬಂಧಿಸಿ ಶಿಕ್ಷೆಗೊಳಗಾಗಿ ಕೋಲ್ಕತ್ತಾ ಜೈಲಿನಲ್ಲಿದ್ದ ಐವರು ರಷ್ಯನ್ನರನ್ನೂ ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರದ ಅವಧಿಯಲ್ಲಿ ಕ್ಷಮಿಸಲಾಗಿತ್ತು. (ಇಂಡಿಯಾ ಪಾರ್ಡನ್ಸ್ ಪೈಲಟ್ಸ್ ಇನ್ ಪುರುಲಿಯಾ ಆರ್ಮ್ಸ್ ಕೇಸ್, ದ ಟೈಮ್ಸ್ ಆಫ್ ಇಂಡಿಯಾ, ಜುಲೈ 22, 2000) ಲಾಹೋರ್‌ನಲ್ಲಿ ತಾಲಿಬಾನ್‌ಗೆ ಯೋಧರನ್ನು ನೇಮಕಗೊಳಿಸುತ್ತಿದ್ದ ರೇಮಂಡ್ ಡೇವಿಸ್ ಪ್ರಕರಣವೂ ಹೆಚ್ಚು ಕಡಿಮೆ ಹೀಗೆಯೇ ಇದೆ. ಆತನನ್ನು ಬಿಡುಗಡೆಗೊಳಿಸಲು ಅಮೆರಿಕನರು ವಿಶೇಷ ಮುತುವರ್ಜಿ ವಹಿಸಿದರು. ಲಾಹೋರ್ ಸ್ಕ್ವೇರ್‌ನಲ್ಲಿ ಆತನಿಂದ ಹತರಾದ ಇಬ್ಬರು ವ್ಯಕ್ತಿಗಳ ಕುಟುಂಬಿಕರಿಗೆ ದಿಯಾತ್ (ರಕ್ತ ಧನ) ವನ್ನೂ ನೀಡಲಾಯಿತು.

ಕ್ರಿ.ಶ. 1976ರಲ್ಲಿ ಕ್ಯೂಬಾ ವಿಮಾನದ ಮೇಲೆ ಬಾಂಬ್ ಹಾಕಿದ ಪ್ರಕರಣದಲ್ಲಿ ಅಮೆರಿಕದ ಪಾತ್ರವು 2005ರ ವೇಳೆಗೆ ಬಹಿರಂಗವಾಯಿತು. ಇದು ಕೂಡಾ ಅಮೆರಿಕದ ದ್ವಿಮುಖ ಧೋರಣೆಯನ್ನು ಎತ್ತಿ ತೋರಿಸುತ್ತದೆ. 73 ಕ್ಯೂಬನ್ನರ ಸಾವಿಗೆ ಕಾರಣವಾದ ಈ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿ ಪೊಸಾದಾ ಸಿಐಎ ಏಜೆಂಟ್ ಎಂಬುದು

ಅನಂತರ ಸಾಬೀತಾಯಿತು. ಆತ ಫ್ಲೋರಿಡಾದಲ್ಲಿ ಆಶ್ರಯ ಪಡೆದುಕೊಂಡ. ಆತನ ಗಡೀಪಾರಿಗೆ ಸಂಬಂಧಿಸಿ ಕ್ಯೂಬಾದ ಮನವಿ ತಿರಸ್ಕೃತವಾಗುವುದರಲ್ಲಿ ಅಮೆರಿಕದ ಪಾತ್ರದ ಬಗ್ಗೆ ವಿಶ್ಲೇಷಿಸುತ್ತಾ ದಿ ಗಾರ್ಡಿಯನ್ ಹೀಗೆ ಬರೆದಿತ್ತು: "ನೈತಿಕತೆಗೆ ಸಂಬಂಧಿಸಿದಂತೆ ತನ್ನ ಮಿತ್ರರ ವಿಚಾರದಲ್ಲಿ ಮತ್ತು ಶತ್ರುಗಳ ವಿಷಯದಲ್ಲಿ ಅಮೆರಿಕ ತದ್ವಿರುದ್ಧ ನಿಲುವು ಹೊಂದಿದೆ ಎಂಬುದು ಈ ಪ್ರಕರಣದಲ್ಲಿ ಸಾಬೀತಾಯಿತು. (ಡಂಕನ್ ಕ್ಯಾಂಬೆಲ್ 'ಹೌ ದ ಯುಎಸ್ ಡೀಲ್ ವಿಥ್ ಫ್ರೆಂಡ್ಸ್ ಅಚಿಡ್ ಫೋಸ್', ಗಾರ್ಡಿಯನ್ ನ್ಯೂಸ್‌ಪೇಪರ್ ಲಿಮಿಟೆಡ್, 2005. ಇದು ದಿ ಹಿಂದೂ ಪತ್ರಿಕೆಯ ಜೂನ್ 30, 2005ರ ಸಂಚಿಕೆಯಲ್ಲಿ ಮರುಮುದ್ರಣಗೊಂಡಿತು)

ಇರಾನ್‌ನಂತಹ ದೇಶಗಳಲ್ಲಿ ಭಯೋತ್ಪಾದಕ ಗುಂಪುಗಳಿಗೆ ಅಮೆರಿಕ ಹಣಕಾಸು ನೆರವು ಒದಗಿಸುತ್ತಿರುವ ಬಗ್ಗೆಯೂ ವರದಿಗಳಿವೆ. ಸೇಮೂರ್ ಹೆರ್ಷ್ ಎಂಬಾತ 'ನ್ಯೂಯಾರ್ಕರ್' ಪತ್ರಿಕೆಯ ಲೇಖನದ ಪ್ರಕಾರ ಅಮೆರಿಕದ ಸರಕಾರವು ಜಾರ್ಜ್ ಡಬ್ಲ್ಯೂ ಬುಷ್ ಆಡಳಿತ ಕಾಲದಲ್ಲಿ ಇರಾನ್‌ನ ಸರಕಾರವನ್ನು ಬುಡಮೇಲುಗೊಳಿಸಲೆತ್ನಿಸಿದ್ದ ಮುಜಾಹಿದೀನೆ ಕಲ್ಕ್ ಎಂಬ ಭಿನ್ನಮತೀಯ ಗುಂಪಿಗೆ ಹಣಕಾಸು, ಶಸ್ತ್ರಾಸ್ತ್ರ ಮತ್ತು ತರಬೇತಿಯನ್ನು ಒದಗಿಸಿತ್ತು. ಈ ಗುಂಪು, ಇಸ್ರೇಲ್ ಜತೆಗೂಡಿ ಇರಾನ್‌ನ ಹಲವು ನ್ಯೂಕ್ಲಿಯರ್ ವಿಜ್ಞಾನಿಗಳ ಹತ್ಯೆಯಲ್ಲಿ ಪಾತ್ರ ವಹಿಸಿತ್ತು ಎನ್ನಲಾಗಿದೆ. 1997ರಿಂದ ಎಮ್‌ಇಕೆಯನ್ನು ಅಮೆರಿಕದ ವಿದೇಶಾಂಗ ಸಚಿವಾಲಯವು ಭಯೋತ್ಪಾದಕ ಸಂಘಟನೆ ಎಂದು ಘೋಷಿಸಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ತಾನೇ ಭಯೋತ್ಪಾದಕನೆಂದು ಘೋಷಿಸಿದ ಗುಂಪಿನ ಸದಸ್ಯರಿಗೆ ಶಸ್ತ್ರಾಸ್ತ್ರ ಪೂರೈಸಿದ್ದು, ಇದನ್ನು ಸ್ವಯಂ ಒಪ್ಪಿಕೊಂಡಿದೆ. ಗ್ಲೆನ್ ಗ್ರೀನ್‌ವಾಲ್ಡ್ ಅವರ ಪ್ರಕಾರ ಇದು ಅಮೆರಿಕದ ಕಾನೂನು ಪ್ರಕಾರ ಅಪರಾಧ.

*(Http://www.policymic.com/articles/6587/u-s-funded-iran-terrorist-group-says-shocking-report)*

ಪಾಶ್ಚಾತ್ಯ ಜಗತ್ತು ಭಯೋತ್ಪಾದನೆಗೆ ಸಂಬಂಧಿಸಿದಂತೆ ನಡೆಸುತ್ತಿರುವ ಪ್ರೊಪಗಂಡಾದ ರಾಜಕೀಯ ಆಯಾಮಗಳನ್ನು ಈ ಕಪಟ ಧೋರಣೆಯು ಬಹಿರಂಗಪಡಿಸುತ್ತದೆ. ಸಣ್ಣ ಮತ್ತು ದುರ್ಬಲ ದೇಶಗಳನ್ನು ಹೆದರಿಸುವ ಒಂದು ಅಸ್ತ್ರವಾಗಿ ಭಯೋತ್ಪಾದನೆ ಬಳಕೆಯಾಗುತ್ತಿದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಪಾಶ್ಚಾತ್ಯ ಜಗತ್ತು ದೌರ್ಜನ್ಯ ಮತ್ತು ಮರ್ದನಗಳನ್ನು ಕಡೆಗಣಿಸಿ ಅದಕ್ಕೆ ಪ್ರತಿಯಾಗಿ ವ್ಯಕ್ತವಾಗುವ ಪ್ರತಿರೋಧವನ್ನಷ್ಟೆ ಗಣನೆಗೆ ತೆಗೆದುಕೊಳ್ಳುತ್ತದೆ. ಆರ್ಗನೈಝೇಷನ್ ಆಫ್ ಇಸ್ಲಾಮಿಕ್ ಕಾನ್ಫರೆನ್ಸ್ ಎಂಬ ಸಂಘಟನೆಯು ಈ ಹಿನ್ನೆಲೆಯಲ್ಲಿ ಕ್ರಿ.ಶ. 2003ರಲ್ಲಿ ಈ ವಿದ್ಯಮಾನವನ್ನು ಗಣನೆಗೆ ತೆಗೆದುಕೊಂಡು

ವಿಶ್ವಸಂಸ್ಥೆಯು ಎಲ್ಲ ವಿಧದ ಭಯೋತ್ಪಾದನೆಗೆ ಸಮಾನವಾಗಿ ಪ್ರತಿಕ್ರಿಯಿಸಲು ಮಾರ್ಗಸೂಚಿ ರೂಪಿಸಲು ಸಭೆ ನಡೆಸಬೇಕೆಂದು ಆ ಸಂಘಟನೆ ಕರೆ ನೀಡಿತ್ತು. ಅದರ ನಿರ್ಣಯವನ್ನು ಸ್ವಲ್ಪ ಗಮನಿಸಿ: "ಅಂತಾರಾಷ್ಟ್ರೀಯ ಭಯೋತ್ಪಾದನೆಯ ಮೂಲ ಕಾರಣಗಳಿಗೆ ಪರಿಹಾರ ಕಂಡುಹುಡುಕುವ ಅಗತ್ಯವನ್ನು ನಾವು ಒತ್ತಿ ಹೇಳುತ್ತಿದ್ದೇವೆ. ಭಯೋತ್ಪಾದನೆಗೆ ಹುಟ್ಟು ನೀಡುವ ಸನ್ನಿವೇಶಗಳು ವಿದೇಶಿ ಆಕ್ರಮಣ, ಅನ್ಯಾಯ ಮತ್ತು ಪ್ರತ್ಯೇಕತೆ ಯಥಾರೀತಿ ಮುಂದುವರಿದರೆ ಭಯೋತ್ಪಾದನೆ ವಿರೋಧಿ ಯುದ್ಧ ಯಶಸ್ವಿಯಾಗುವುದಿಲ್ಲ ಎಂಬುದು ನಮಗೆ ಮನದಟ್ಟಾಗಿದೆ. (ದ ಹಿಂದೂ, ಪ್ಯಾಲೆಸ್ತೀನಿಯನ್ಸ್ ನಾಟ್ ಟೆರರಿಸ್ಟ್ಸ್: ಓಐಸಿ, ಮಾರ್ಚ್ 4, 2002)

ಆದರೆ ಕೆಲವು ಹಾದಿತಪ್ಪಿದ ವ್ಯಕ್ತಿಗಳು ನಡೆಸುವ ಹಿಂಸೆಯ ಬಿಡಿ ಘಟನೆಗಳನ್ನು ಜಿಹಾದ್ ಎಂದು ಬಿಂಬಿಸಲಾಗುತ್ತದೆ. ಜಿಹಾದ್‌ನ ಹೆಸರಲ್ಲಿ ನಡೆಯುವ ಈ ಕೃತ್ಯಗಳೇ ವಾಸ್ತವದಲ್ಲಿ ಮುಸ್ಲಿಮರ ನೈಜ ಶತ್ರುಗಳಾಗಿವೆ. ಈ ಮತಿಗೇಡಿ ಶಕ್ತಿಗಳು ಸಮುದಾಯದ ವಿರುದ್ಧ ದ್ವೇಷವನ್ನು ಬಿತ್ತುತ್ತವೆ ಮತ್ತು ಮುಸ್ಲಿಮರು ಹಾಗೂ ಇಸ್ಲಾಮನ್ನು ಕರಾಳವಾಗಿ ಚಿತ್ರಿಸುವ ಪ್ರಕ್ರಿಯೆಗೆ ಇದು ಹೆಚ್ಚಿನ ಬಲ ಒದಗಿಸುತ್ತದೆ.

ಇಸ್ಲಾಮ್ ಪ್ರತಿಪಾದಿಸುವ ಜಿಹಾದ್ ಎಲ್ಲ ರೀತಿಯ ಹೋರಾಟಕ್ಕೆ – ಬರಹ, ಮಾತು ಮತ್ತು ಕ್ರಿಯೆ – ಅನ್ವಯವಾಗುತ್ತದೆ. ಆದರೆ, ಕೆಲ ಪೂರ್ವಗ್ರಹಪೀಡಿತ ಮಾಧ್ಯಮಗಳು ಇದಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಮುಸ್ಲಿಮರ ವಿಷಯಕ್ಕೆ ಬಂದಾಗ, ಕೆಲ ದಾರಿತಪ್ಪಿದ ಶಕ್ತಿಗಳು ಎಸಗುವ ಕೃತ್ಯಗಳು ಜಿಹಾದ್ ಎಂದು ಬಿಂಬಿತವಾಗುತ್ತದೆ.

ಕೆಲವು ಮುಸ್ಲಿಮ್ ರಾಷ್ಟ್ರಗಳಲ್ಲಿ ಸರಕಾರೇತರ ಪಾತ್ರಧಾರಿಗಳು ಮರ್ದನದ ವಿರುದ್ಧ ಬಂಡೆದ್ದಿವೆ ಎಂಬುದನ್ನು ನಾವು ಇತ್ತೀಚೆಗೆ ಗಮನಿಸಿದ್ದೇವೆ. ಪಶ್ಚಿಮ ಏಷ್ಯಾದ ರಾಷ್ಟ್ರಗಳು ಹಲವಾರು ವಿಷಯಗಳಲ್ಲಿ ಹಿಂದುಳಿದಿವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಶಿಕ್ಷಣ, ಜೀವನ ಮಟ್ಟ, ಉದ್ಯೋಗಾವಕಾಶಗಳು ಗಲ್ಫ್ ರಾಷ್ಟ್ರಗಳಲ್ಲಿ ಕೆಳ ಮಟ್ಟದಲ್ಲಿವೆ. ಕೆಲವು ತೈಲ ಸಂಪತ್ತಿನಿಂದ ಕೂಡಿದ ಸಣ್ಣ ರಾಷ್ಟ್ರಗಳು ಇದಕ್ಕೆ ಅಪವಾದ. ಅಷ್ಟೇ ಅಲ್ಲ, ಭವಿಷ್ಯದ ಚಿತ್ರಣವೂ ಅತ್ಯಂತ ನಿರಾಶಾದಾಯಕವಾಗಿದೆ.

ಬಹುತೇಕ ಮುಸ್ಲಿಮ್ ರಾಷ್ಟ್ರಗಳು ಏಕಚಕ್ರಾಧಿಪತಿಗಳು, ಸರ್ವಾಧಿಕಾರಿಗಳು ಮತ್ತು ನಿರಂಕುಶ ಆಡಳಿತಗಾರರ ಅಧೀನದಲ್ಲಿವೆ. ಪ್ರಜಾಪ್ರಭುತ್ವ ಚಳವಳಿಗಳನ್ನು ಉಕ್ಕಿನ ಹಸ್ತದಿಂದ ದಮನಿಸಲಾಗುತ್ತದೆ. ಮೂಲಭೂತ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯದ ನಿರಾಕರಣೆ, ಆಡಳಿತದಲ್ಲಿ ಪಾರದರ್ಶಕತೆ ಇಲ್ಲದಿರುವುದು, ವ್ಯಾಪಕ ಭ್ರಷ್ಟಾಚಾರ ನಾಗರಿಕರ ಜೀವನವನ್ನು ನರಕಸದೃಶಗೊಳಿಸಿದೆ. ಈ ಸರ್ವಾಧಿಕಾರಿಗಳು ಪಶ್ಚಿಮದ

ರಾಷ್ಟ್ರಗಳಿಗೆ ತೈಲ ಮತ್ತು ಅನಿಲದಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಪಡೆಯುವ ಮುಕ್ತ ಅವಕಾಶವನ್ನು ಕಲ್ಪಿಸಿ ಅದಕ್ಕೆ ಪ್ರತಿಯಾಗಿ ತಮ್ಮ ಆಡಳಿತಕ್ಕೆ ಮನ್ನಣೆಯನ್ನು ದಕ್ಕಿಸಿಕೊಳ್ಳುತ್ತಿವೆ. ಇಲ್ಲಿ ಹುಟ್ಟಿಕೊಂಡ ಕೆಲವು ಪ್ರತಿರೋಧ ಚಳವಳಿಗಳು ಯಾಕೆ ಪರಿಸ್ಥಿತಿಯ ಕೂಸಾಗಿವೆ ಎಂಬುದು ಇದರಿಂದ ವೇದ್ಯವಾಗುತ್ತದೆ. ಈ ಪೈಕಿ ಹೆಚ್ಚಿನವು ತಮ್ಮದೇ ರಾಷ್ಟ್ರಗಳ ಆಡಳಿತಕ್ಕೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡ ಚಳವಳಿಗಳಾಗಿವೆ. ಈ ಚಳವಳಿಯಲ್ಲಿ ತೊಡಗಿರುವ ವ್ಯಕ್ತಿಗಳು ಶಸ್ತ್ರಗಳನ್ನು ಎತ್ತಿಕೊಂಡಿರಬಹುದು. ಆದರೆ ಪಶ್ಚಿಮದ ದ್ವಿಮುಖ ಧೋರಣೆಯೂ ಇವರ ಮೂಲಕ ಜಗಜ್ಜಾಹೀರಾಗುತ್ತಿದೆ.

ಅಮೆರಿಕದ ಪ್ರಮುಖ ರಾಜಕೀಯ ತತ್ವಜ್ಞಾನಿ ಮತ್ತು ಬುದ್ಧಿಜೀವಿ ಮೈಕಲ್ ವಾಲ್ಜರ್ ಈ ಸಮಸ್ಯೆಯನ್ನು ಹೀಗೆ ಬಣ್ಣಿಸುತ್ತಾರೆ:

> ‘ಮೊದಲು ಭಯೋತ್ಪಾದನೆಗೆ ದಬ್ಬಾಳಿಕೆಯನ್ನು ನೆಪವಾಗಿಸಲಾಗುತ್ತದೆ. ನಂತರ ದಬ್ಬಾಳಿಕೆಗೆ ಭಯೋತ್ಪಾದನೆಯನ್ನು ನೆಪವಾಗಿಸಲಾಗುತ್ತದೆ. ಮೊದಲನೆಯದು ಎಡಪಂಥೀಯರ ನೆಪವಾದರೆ ಎರಡನೆಯದು ಬಲಪಂಥೀಯರು ಕೊಡುವ ಸಬೂಬು’’.

ರಾಜಕೀಯ ಹಿಂಸಾಚಾರ ಯಾವುದೇ ಸಮಾಜದ ಮಟ್ಟಿಗೆ ಅರೋಚಕವಾದುದು. ಭಯೋತ್ಪಾದನೆಯೂ ಒಂದು ರೀತಿಯ ರಾಜಕೀಯ ಹಿಂಸಾಚಾರ. ಆದರೆ, ಜಗತ್ತಿನಲ್ಲಿ ದಮನಕಾರಿ ಸರಕಾರಗಳು ತಮ್ಮ ಜನತೆಯ ವಿರುದ್ಧವೇ ಈ ಬಗೆಯ ಹಿಂಸಾಚಾರವನ್ನು ಎಸಗುತ್ತಾ ಬಂದಿವೆ. ಕಾನೂನು ಬಾಹಿರವಾದ ಸರಕಾರಗಳು ಸಹಜವಾಗಿಯೇ ಈ ಬಗೆಯ ರಾಜಕೀಯ ಹಿಂಸಾಚಾರಗಳನ್ನು ನೋಡಬೇಕಾಗುತ್ತದೆ.

ಪ್ಯಾಲಸ್ತೇನಿಯರು ಇಸ್ರೇಲಿ ರಾಕೆಟ್ ಮತ್ತು ಕ್ಷಿಪಣಿಗಳಿಗೆ ಬಹಳ ವರ್ಷಗಳವರೆಗೆ ಕೇವಲ ಕಲ್ಲುಗಳ ಮೂಲಕ ಪ್ರತಿರೋಧ ಒಡ್ಡಿದ್ದರು. ಆದರೆ ಈಗ ಹಾಗಿಲ್ಲ. ಸತತವಾಗಿ ಮುಂದುವರಿದ ಇಸ್ರೇಲಿ ಸರಕಾರದ ಮರ್ದನಕ್ಕೆ ಪ್ರತಿಯಾಗಿ ಹಮಾಸ್ ಮತ್ತು ಹಿಜ್‌ಬುಲ್ಲಾ ಕೂಡಾ ವ್ಯವಸ್ಥಿತ ಮತ್ತು ಶಕ್ತಿಯುತ ಪ್ರತಿಕ್ರಿಯೆಯನ್ನು ತೋರಲಾರಂಭಿಸಿದೆ. ಇರಾಕ್ ಮತ್ತು ಅಫ್ಘಾನಿಸ್ತಾನದದಲ್ಲಿ ದಶಕಗಳಿಂದ ನಡೆಯುತ್ತಿರುವ ಯುದ್ಧವು ಪಶ್ಚಿಮವು ಫೆಲೆಸ್ತೀನ್ ಸಮಸ್ಯೆ ಬಗೆಹರಿಸುವುದಕ್ಕಿಂತಲೂ ಹೆಚ್ಚಾಗಿ ಸಂಘರ್ಷವನ್ನು ಮತ್ತಷ್ಟು ಪ್ರದೇಶಗಳಿಗೆ ವ್ಯಾಪಿಸಲು ಮತ್ತು ತನ್ಮೂಲಕ ತನ್ನ ಬಳಿಯಿರುವ ಹೊಸ ಶಸ್ತ್ರಾಸ್ತ್ರಗಳ ಪ್ರಯೋಗಕ್ಕೆ ಮೈದಾನ ಹುಡುಕುತ್ತಿದೆಯೇನೋ ಎಂಬ ಅನುಮಾನವನ್ನು ಮೂಡಿಸುತ್ತಿದೆ. ಸಮೂಹನಾಶಕ ಶಸ್ತ್ರಾಸ್ತ್ರಗಳನ್ನು ಬಚ್ಚಿಟ್ಟಿದ್ದಾನೆ ಎಂಬ

ಸುಳ್ಳಿನ ಬೆನ್ನೇರಿ ಇರಾಕ್‌ನ ಮೇಲೆ ಪಶ್ಚಿಮ ನಡೆಸಿದ ದಾಳಿಯು ಪಾಶ್ಚಾತ್ಯ ರಾಷ್ಟ್ರಗಳ ಯುದ್ಧದಾಹ, ಹಿಂಸೆ, ರಕ್ತಪಾತ ಮತ್ತು ಉನ್ಮಾದಕ್ಕೆ ಗಡಿಗಳ ಭೇದವಿಲ್ಲ ಎಂಬುದನ್ನು ಸಾಬೀತು ಪಡಿಸಿದೆ. ಹತಾಶೆ ಮತ್ತು ನಿರಾಶೆಯ ಈ ಪರಿಸ್ಥಿತಿಯೇ ಪಶ್ಚಿಮದ ವಿರುದ್ಧ ಕೆಲವರು ಸಂಘಟಿತ ಪ್ರತಿರೋಧ ತೋರಲು ಹಾದಿ ಮಾಡಿಕೊಟ್ಟಿತು. ಕೊನೆಗೆ, ತಾನು ಭಯೋತ್ಪಾದನೆಯ ಆರೋಪ ಹೊರಿಸಿದ್ಧ ತಾಲಿಬಾನ್ ಎದುರೇ ಪಶ್ಚಿಮವು ಮಂಡಿಯೂರುವಂತಹ ಪರಿಸ್ಥಿತಿಯೂ ನಿರ್ಮಾಣವಾಯಿತು.

ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ ಇಸ್ಲಾಮ್ ಧರ್ಮವನ್ನು ಭಯೋತ್ಪಾದನೆಯ ಜತೆ ಥಳುಕು ಹಾಕುವುದರ ಹಿಂದಿರುವ ಉದ್ದೇಶ ಬಹಿರಂಗಗೊಳ್ಳುತ್ತದೆ. ಇಂದು ಜಗತ್ತಿನಲ್ಲಿ ಸಂಭವಿಸುತ್ತಿರುವ ಘಟನೆಗಳ ಆಧಾರದಲ್ಲಿ ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದು ಉಚಿತವಲ್ಲ. ಇಲ್ಲಿ ಮರ್ದಿತರು ಮುಸ್ಲಿಮರು ಎಂಬುದು ನಿರ್ವಿವಾದ. ಅವರ ಪ್ರತಿರೋಧವೂ ಶ್ರೀಲಂಕಾ, ಉತ್ತರ ಐರ್ಲೆಂಡ್ ಮತ್ತು ಕಾಂಗೋದಲ್ಲಿ ಮರ್ದನದ ವಿರುದ್ಧ ನಡೆಯುತ್ತಿರುವ ಪ್ರತಿರೋಧಕ್ಕಿಂತ ಭಿನ್ನವಲ್ಲ. ಇಸ್ಲಾಮ್ ಜಗತ್ತಿನಲ್ಲಿ ಶಾಂತಿ ಮತ್ತು ಸಹಬಾಳ್ವೆಯನ್ನು ಬಯಸುತ್ತದೆ. ಪ್ರಾಣ, ಸ್ವಾತಂತ್ರ್ಯ ಮತ್ತು ಹಕ್ಕುಗಳ ರಕ್ಷಣೆ ಮತ್ತು ಮಾನವ ಘನತೆಯನ್ನು ಅದು ಎತ್ತಿಹಿಡಿಯುತ್ತದೆ. ಕುರ್‌ಆನ್ ಹೀಗೆ ಹೇಳುತ್ತದೆ

> **"ಕೊಲೆ, ಅಥವಾ ಭೂಮಿಯಲ್ಲಿ ಭ್ರಷ್ಟಾಚಾರ ಪಸರಿಸಿದ್ದಕ್ಕಾಗಿ ಶಿಕ್ಷಿಸಿದ್ದನ್ನು ಹೊರತುಪಡಿಸಿ ಯಾರಾದರೂ ಮನುಕುಲವನ್ನು ಕೊಂದರೆ; ಆತ ಮನುಕುಲದ ಕೊಲೆಗಡುಕ. ಯಾರಾದರೊಬ್ಬರೂ ಜೀವವನ್ನು ಉಳಿಸಿದರೆ, ಆತ ಎಲ್ಲ ಮನುಕುಲವನ್ನೂ ಉಳಿಸಿದಂತೆಯೇ" (ಕುರ್‌ಆನ್ 5:32).**

ಈ ಹಿನ್ನೆಲೆಯಲ್ಲಿ ಭಯೋತ್ಪಾದನೆ ಎಂಬುದು ಇಸ್ಲಾಮೀ ಫೆನಾಮಿನನ್ ಎಂದು ಹೇಳುವುದು ಸತ್ಯಕ್ಕೆ ಬಗೆಯುವ ಅಪಚಾರ. ಯಾವುದೋ ನಿರ್ದಿಷ್ಟ ಧರ್ಮಗಳ ತೇಜೋವಧೆ ಮಾಡುವುದು ಸಮಸ್ಯೆಗೆ ಪರಿಹಾರವಲ್ಲ. ಮರ್ದನ ಮತ್ತು ಅನ್ಯಾಯವನ್ನು ತೊಡೆದು ಹಾಕುವುದೇ ಇದಕ್ಕೆ ಪರಿಹಾರ.

## ಇಸ್ಲಾಮೊಫೋಬಿಯಾ (ಇಸ್ಲಾಮಿನ ಭೀತಿ)ಯ ಉತ್ಪಾದನೆ

ಸೋವಿಯತ್ ಯೂನಿಯನ್ ಛಿದ್ರಗೊಂಡು ಶೀತಲ ಸಮರ ಕೊನೆಗೊಂಡ ನಂತರ ಪಾಶ್ಚಿಮಾತ್ಯ ರಾಷ್ಟ್ರಗಳು, ಅದರಲ್ಲೂ ಮುಖ್ಯವಾಗಿ ಅಮೆರಿಕಾ ಹೊಸ ಶತ್ರುಗಳ ಹುಡುಕಾಟದಲ್ಲಿತ್ತು.

ವಿಲಿಯಂ ಪಾಫ್, ಅಮೆರಿಕದ ಲೇಖಕ ಮತ್ತು ನ್ಯೂಯಾರ್ಕರ್ ಪತ್ರಿಕೆಯ ಅಂಕಣಕಾರ, ಹೇಳುವುದನ್ನು ಗಮನಿಸಿ: 'ಕಮ್ಯೂನಿಸಮ್ ಮತ್ತು ಪಶ್ಚಿಮದ ನಡುವಣ ಯುದ್ಧದ ಬಳಿಕ ಪಶ್ಚಿಮ ಮತ್ತು ಇಸ್ಲಾಮ್ ನಡುವಣ ಯುದ್ಧ ಆರಂಭಗೊಳ್ಳುತ್ತದೆ ಎಂದು ಭಾವಿಸಿದವರ ಸಂಖ್ಯೆ ಸಾಕಷ್ಟಿದೆ. ಕಮ್ಯೂನಿಸಮ್‌ನ ಪತನದ ನಂತರ ತಮ್ಮ ಶಕ್ತಿ ಮತ್ತು ಸಾಮರ್ಥ್ಯವನ್ನು ಯಾರ ಮೇಲೆ ಪ್ರಯೋಗಿಸಬೇಕೆಂಬ ಪ್ರಶ್ನೆಗೆ ಕೆಲವು ಅಮೆರಿಕನ್ನರು ಕಂಡು ಕೊಂಡ ಉತ್ತರ ಇಸ್ಲಾಮ್ ಆಗಿದೆ. ಆದರೆ, ಇಸ್ಲಾಮನ್ನು ಅಮೆರಿಕದ ಶತ್ರು ಎಂದು ಘೋಷಿಸುವುದು ಎರಡನೇ ಶೀಥಲ ಸಮರವನ್ನು ಘೋಷಿಸುವುದಕ್ಕೆ ಸಮ. ಆದರೆ ಈ ಸಮರವು ಮೊದಲಿನ ಸಮರದಂತೆ ವಿಜಯದಲ್ಲಿ ಪರ್ಯವಸಾನಗೊಳ್ಳುವ ಸಾಧ್ಯತೆ ಕಡಿಮೆ. ಹಸಿರಿನ ಭಯ (ಇಸ್ಲಾಮಿನ ಭಯ)ವು ಸೋವಿಯತ್ ಯೂನಿಯನ್‌ನ ಕೆಂಪು ಪಿಡುಗಿನ ಬಗ್ಗೆ ಇದ್ದ ಭೀತಿಯ ಸ್ಥಾನವನ್ನು ತುಂಬಬಹುದು."

ಅಫ್ಘಾನಿಸ್ತಾನದಿಂದ ಸೋವಿಯತ್ ರಷ್ಯಾದ ಸೇನೆಯನ್ನು ಹಿಮ್ಮೆಟ್ಟಿಸಲು ಸಿಐಎಯು ಮುಜಾಹಿದೀನ್ ಮತ್ತು ಅಲ್ ಖೈದಾಗಳಿಗೆ ಬೆಂಬಲ ನೀಡಿತ್ತು. ಆದರೆ ಪಶ್ಚಿಮದ ದೇಶಗಳಿಂದ ತಾವು ಪಡೆದ ಶಸ್ತ್ರಾಸ್ತ್ರಗಳನ್ನು ಆ ದೇಶಗಳ ಮತ್ತು ಅವರ ಹಿತಾಸಕ್ತಿಗಳ ವಿರುದ್ಧ ತಿರುಗಿಸಲು ಆಫ್ಘನ್ ಯುದ್ಧಕೋರರಿಗೆ ಹೆಚ್ಚು ಕಾಲ ಹಿಡಿಯಲಿಲ್ಲ. ಸಿಐಎಯ ಪ್ರಚಾರ ಸಂಸ್ಥೆಗಳು ತಮ್ಮ ತಲೆಯಲ್ಲಿ ತುಂಬಿಸಿಬಿಟ್ಟಿದ್ದ "ನಾಸ್ತಿಕರು ಮತ್ತು ಸತ್ಯನಿಷೇಧಿಗಳ ವಿರುದ್ಧದ ಜಿಹಾದ್"ನ ಪ್ರಜ್ಞೆಯನ್ನು ಅಮೆರಿಕ ಪ್ರಾಯೋಜಿತ ಮುಜಾಹಿದೀನ್‌ಗಳು ನಂತರ ಪಶ್ಚಿಮ ಏಷ್ಯಾದ ಅಮೆರಿಕನ್ ಹಿತಾಸಕ್ತಿಗಳ ಮೇಲೆ ಪ್ರಯೋಗಿಸಲಾರಂಭಿಸಿದರು.

ಈ ನಡುವೆ, ಅಮೆರಿಕನ್ ಶಸ್ತ್ರಾಸ್ತ್ರ ಉತ್ಪಾದಕರು ಹೊಸ ಮಾರುಕಟ್ಟೆಯ ಹುಡುಕಾಟಕ್ಕಾಗಿ ಒತ್ತಡ ಹೇರಲು ಆರಂಭಿಸಿದ್ದರು. ಶೀತಲ ಸಮರದ ಅಂತ್ಯವು ಶಸ್ತ್ರಾಸ್ತ್ರಗಳ ಮಾರಾಟ ಕುಸಿಯುವಂತೆ ಮಾಡಿತ್ತು. ಶಸ್ತ್ರಾಸ್ತ್ರ ಉತ್ಪಾದನಾ ಕೈಗಾರಿಕೆಯು ಸುದೀರ್ಘ ಆರ್ಥಿಕ ಹಿಂಜರಿಕೆ ಕಾಣುವಂತಾಯಿತು. ಶಸ್ತ್ರಾಸ್ತ್ರ ಉತ್ಪಾದಕ ಬಹುರಾಷ್ಟ್ರೀಯ ಕಂಪನಿಗಳ ದೇಣಿಗೆ ಪಡೆದು ಚುನಾವಣೆಯಲ್ಲಿ ಜಯಗಳಿಸಿದ್ದ ಅಮೇರಿಕದ ಕಾಂಗ್ರೆಸ್‌ನ ಸದಸ್ಯರು ಕೈ ಕೈ ಹಿಸುಕಿಕೊಳ್ಳುವಂತಾಯಿತು. ಕೊನೆಗೆ 9/11ರ ಘಟನೆ ಶಸ್ತ್ರಾಸ್ತ್ರಗಳ ವಹಿವಾಟನ್ನು ಗಮನಾರ್ಹವಾಗಿ ಹೆಚ್ಚಿಸಿತು. ನ್ಯೂಯಾರ್ಕ್‌ನ ಅವಳಿ ಕಟ್ಟಡಗಳ ಮೇಲೆ ನಡೆದ ಭಯೋತ್ಪಾದಕ ದಾಳಿಯ ನಂತರ ರೇತಿಯಾನ್, ಬೋಯಿಂಗ್, ಲಾಕ್‌ಹೀಡ್ ಮಾರ್ಟಿನ್‌ನಂತಹ ದೊಡ್ಡ ಶಸ್ತ್ರಾಸ್ತ್ರ ಉತ್ಪಾದಕ ಕಂಪನಿಗಳ ಷೇರುಗಳು ನಾಸ್ಡಕ್ ಷೇರುಪೇಟೆಯಲ್ಲಿ ಗಮನಾರ್ಹ ಏರಿಕೆ ಕಂಡವು. ಯುದ್ಧದ ಕೂಗು ಜೋರಾಗಿ ಕೇಳಿಬರತೊಡಗಿತು ಮತ್ತು ಶಸ್ತ್ರಾಸ್ತ್ರ ವ್ಯಾಪಾರಿಗಳ ತಿಜೋರಿ ತುಂಬತೊಡಗಿದವು.

ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರಚಾರ ತಂತ್ರಗಾರಿಕೆಯು ಎಷ್ಟೊಂದು ವಿಶಾಲವಾಗಿದೆ ಎಂದರೆ ಅವು ಮಿಥ್ಯವನ್ನು ಸತ್ಯವೆಂದು ಮತ್ತು ಸತ್ಯವನ್ನು ಸುಳ್ಳೆಂದು ಸಾಧಿಸಿ ತೋರಿಸುವ ಸಾಮರ್ಥ್ಯ ಹೊಂದಿವೆ. ಬಹುಸಂಖ್ಯಾತ ಜನರು ಆಡಳಿತದಲ್ಲಿ ಸಕ್ರಿಯ ಪಾಲುದಾರರನ್ನಾಗಿಸಲಾಗದಷ್ಟು ದಡ್ಡರು ಮತ್ತು ಕಿವುಡರಾಗಿದ್ದಾರೆ ಎಂಬ ತತ್ವದ ಆಧಾರದಲ್ಲಿ ಈ ಪ್ರೊಪಗಂಡಾ ಯಂತ್ರಗಳು ಕಾರ್ಯಾಚರಿಸುತ್ತವೆ. ಅವರ ಪ್ರಕಾರ ಜನರನ್ನು ಭಾವನಾತ್ಮಕ ಮತ್ತು ಭಾವೋದ್ವೇಗದ ಪ್ರಚಾರಗಳ ಮೂಲಕ ಪಳಗಿಸಬೇಕಾಗುತ್ತದೆ. ಇದಕ್ಕಾಗಿಯೇ ಸಾರ್ವಜನಿಕ ಸಂಪರ್ಕ ಸಂಸ್ಥೆಗಳನ್ನು ಹುಟ್ಟುಹಾಕಲಾಗಿದ್ದು 'ಸಾರ್ವಜನಿಕರ ಮನಸ್ಸನ್ನು ನಿಯಂತ್ರಿಸುವ' ಕಾರ್ಯದಲ್ಲಿ ಇವು ತೊಡಗಿರುತ್ತವೆ. ಯಾವುದೇ ಒಂದು ವಿಷಯದ ಬಗ್ಗೆ ಜನಸಾಮಾನ್ಯರಿಗೆ ತರ್ಕಬದ್ಧವಾಗಿ ಯೋಚಿಸಲು ಸಾಧ್ಯವಾಗದಂತೆ ನೋಡಿಕೊಳ್ಳುವುದು ಮತ್ತು ಮುಖ್ಯ ವಿಷಯದಿಂದ ಅವರನ್ನು ವಿಮುಖಗೊಳಿಸುವಂತಹ ಒಂದು ಘೋಷಣೆಯನ್ನು ಅವರಿಗೆ ನೀಡುವುದು ನಿಜವಾದ ಅರ್ಥದಲ್ಲಿ ಒಂದು ಒಳ್ಳೆಯ ಪ್ರಚಾರವಾಗಿದೆ. ಉದಾಹರಣೆಗೆ, ಅಧ್ಯಕ್ಷ ಜಾರ್ಜ್ ಡಬ್ಲ್ಯೂ. ಬುಷ್ 9/11ರ ನಂತರ ಹೊರಡಿಸಿದ ಘೋಷಣೆ; 'ಒಂದೋ ನೀವು ನಮ್ಮ ಜೊತೆಗಿದ್ದೀರಿ, ಇಲ್ಲವೇ ಭಯೋತ್ಪಾದಕರ ಜೊತೆಗಿದ್ದೀರಿ'. ಈ ಘೋಷಣೆ ಎಷ್ಟೊಂದು ಪರಿಣಾಮಕಾರಿಯಾಗಿತ್ತೆಂದರೆ ಯಾರೂ ಅದನ್ನು ವಿರೋಧಿಸಲಿಕ್ಕೆ ಸಾಧ್ಯವಾಗಲಿಲ್ಲ (ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಗೆ ನೋಮ್ ಚೋಮ್‌ಸ್ಕಿಯ ಮೀಡಿಯಾ ಕಂಟ್ರೋಲ್ ಓದಬಹುದು).

ಅನೇಕ ಐರೋಪ್ಯ ದೇಶಗಳಲ್ಲಿ ಮುಸ್ಲಿಮರು ಬೆದರಿಕೆಗಳನ್ನು ಎದುರಿಸುತ್ತಿದ್ದು ಇದು ದಿನೇ ದಿನೇ ತೀವ್ರವಾಗುತ್ತಿದೆ. ಪರಿಸ್ಥಿತಿ ಯಾವ ಹಂತ ತಲುಪಿದೆ ಎಂದರೆ ಸರ್ಕಾರಗಳು ಕೂಡಾ ತಮ್ಮ ದೈನಂದಿನ ವ್ಯವಹಾರಗಳನ್ನು ಸುಲಲಿತವಾಗಿ ನಡೆಸಿಕೊಳ್ಳಬೇಕಾದರೆ ಎಚ್ಚರದಿಂದಿರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮುಸ್ಲಿಮರನ್ನು ಅಪಹಾಸ್ಯ ಮಾಡುವ ಸಣ್ಣ ಪುಟ್ಟ ಜೋಕ್‌ಗಳಿಂದ ಆರಂಭಗೊಂಡು ಇದೀಗ ಇಸ್ಲಾಮ್ ಹಿಂಸೆಯನ್ನು ಪ್ರೋತ್ಸಾಹಿಸುವ ಧರ್ಮ ಮತ್ತು ಮುಸ್ಲಿಮರು ಅಸಹಿಷ್ಣುತರು ಎಂದು ಬಿಂಬಿಸುವ ಮಟ್ಟಿಗೆ ಪರಿಸ್ಥಿತಿ ಮುಂದುವರಿದಿದೆ. ಇಸ್ಲಾಮ್ ಹೇಗೆ ಕಾಫಿರರನ್ನು ಕೊಲ್ಲಲು ಕಲಿಸುತ್ತದೆ ಎಂಬ ಬಗ್ಗೆ ಪ್ರತಿಯೊಬ್ಬರೂ ಈಗ ಮಾತನಾಡಿಕೊಳ್ಳುತ್ತಿದ್ದಾರೆ. ಜಿಹಾದ್ ಯಾವ ರೀತಿ ಇಸ್ಲಾಮೀ ಬೋಧನೆಗಳ ಅವಿಭಾಜ್ಯ ಅಂಗವಾಗಿದೆ ಮತ್ತು ಹೇಗೆ ಜಿಹಾದಿಗಳು ಇಸ್ಲಾಮಿಕ್ ಸೈನಿಕರಾಗುತ್ತಾರೆ ಎಂಬುದು ಇಂದು ಎಲ್ಲರ ತುಟಿಯಲ್ಲಿದೆ. ಭಾರತದಲ್ಲಿ ಮುಸ್ಲಿಮರ ವಿರುದ್ಧ ಆರೋಪಗಳ ದೊಡ್ಡ ಪಟ್ಟಿಯೇ ಇದೆ. ಮುಸ್ಲಿಮ್ ರಾಜರು ದೇವಸ್ಥಾನಗಳನ್ನು ನಾಶಮಾಡಿ ಹಿಂದೂ ಧರ್ಮವನ್ನು ಅಪಮಾನಗೊಳಿಸಿದರು, ಯಾವ ರೀತಿ ಪ್ರತಿಯೊಬ್ಬ ಮುಸ್ಲಿಮನೂ ನಾಲ್ವರು ಪತ್ನಿಯರನ್ನು ಇಟ್ಟುಕೊಂಡು ಇಪ್ಪತ್ತು ಮಕ್ಕಳನ್ನು ಪಡೆಯುತ್ತಾನೆ ಮತ್ತು ಹೇಗೆ ಪ್ರತಿಯೊಬ್ಬ ಮುಸ್ಲಿಮನೂ ಭಯೋತ್ಪಾದಕನಾಗಿದ್ದಾನೆ ಇತ್ಯಾದಿ. ಈ ತಪ್ಪು ತಿಳುವಳಿಕೆಗಳಿಗೆ ಕಾರಣಗಳೇನೇ ಇರಬಹುದು. ಮುಸ್ಲಿಮರು ಹಿಂಸಾಕೃತ್ಯಗಳಲ್ಲಿ ತೊಡಗಿದ ಹತ್ತು ಹಲವು ಪ್ರಕರಣಗಳು ಇತ್ತೀಚೆಗೆ ನಡೆದಿವೆ. ಇವು ಕೆಲವು ರಾಜಕೀಯ ಶಕ್ತಿಗಳಿಗೆ ಲಾಭ ಮಾಡಿಕೊಟ್ಟಿದ್ದೇ ಅಲ್ಲದೆ ಇಡೀ ಮುಸ್ಲಿಮ್ ಸಮುದಾಯಕ್ಕೆ ಕೆಟ್ಟ ಹೆಸರು ತಂದಿವೆ.

ಭಾರತದಲ್ಲಿ ಈ ಇಸ್ಲಾಮೋಫೋಬಿಯಾ ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಯಾಕೆಂದರೆ ಇಲ್ಲಿ ಪ್ರತಿಯೊಬ್ಬರೂ ಟೆಲಿವಿಷನ್ ಮತ್ತು ಮಾಧ್ಯಮಗಳಲ್ಲಿ ಪ್ರಕಟವಾಗುವ ಸುದ್ದಿಗಳನ್ನು ವಿಮರ್ಶಾತ್ಮಕವಾಗಿ ನೋಡುವುದಿಲ್ಲ. ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಮುಸ್ಲಿಮರ ವಿರುದ್ಧದ ದ್ವೇಷ ಮತ್ತು ಇಸ್ಲಾಮಿನ ಬಗ್ಗೆ ಭೀತಿ ಉತ್ಪಾದಿಸುವ ಪ್ರಕ್ರಿಯೆಯು ಎಲ್ಲ ಮಿತಿಗಳನ್ನೂ ದಾಟಿದೆ. ಇದು ತೈಲ ನಿಕ್ಷೇಪದ ಬೆನ್ನೇರಿ ಹತ್ತು ಹಲವು ರಾಷ್ಟ್ರಗಳ ಮೇಲೆ ದಾಳಿ ನಡೆಸಲು ಅಮೆರಿಕಕ್ಕೆ ಹಾದಿ ಮಾಡಿಕೊಟ್ಟರೆ, ತೀವ್ರಗಾಮಿಗಳಿಗೆ ತಮ್ಮ ಸಮಾಜಗಳಲ್ಲಿ ಮನ್ನಣೆಯನ್ನೂ ಒದಗಿಸಿಕೊಟ್ಟಿದೆ. ಅಷ್ಟೇ ಅಲ್ಲ, ಸ್ವತಃ ಆ ಸಮುದಾಯಗಳ ಮಟ್ಟಿಗೂ ಅದು ಪ್ರತಿಕೂಲ ಪರಿಣಾಮವನ್ನುಂಟು ಮಾಡಿದೆ. ಸಮುದಾಯಗಳ ನಡುವಣ ಒಡಕು ಇಂದು ಪ್ರಜಾಪ್ರಭುತ್ವಗಳ ನಾಡಿಯ ಮೇಲೆ ಒತ್ತಡ ಹೇರುತ್ತಿದ್ದು ಸಾಮಾಜಿಕ ಅಭಿವೃದ್ಧಿಯು ಹಿನ್ನಡೆ ಅನುಭವಿಸುತ್ತಿದೆ. ಸಮಾಜದ ದುರ್ಬಲ ವರ್ಗಗಳ ಮೇಲೆ ಇದು

ಖಂಡಿತವಾಗಿಯೂ ದುಷ್ಪರಿಣಾಮ ಬೀರುತ್ತಿದ್ದು ವಿಶ್ವಾದ್ಯಂತ ಆರ್ಥಿಕ ಪರಿಸ್ಥಿತಿಯ ಮೇಲೂ ಪರಿಣಾಮವನ್ನುಂಟು ಮಾಡುತ್ತಿದೆ. ಮಾನವೀಯ ಮೌಲ್ಯಗಳು ಹಿನ್ನಡೆ ಅನುಭವಿಸುತ್ತಿದ್ದು ವಿಚ್ಛಿದ್ರತೆಯ ಈ ಯುಗದಿಂದ ಸಮಾಜ ಆದಷ್ಟು ಬೇಗ ಹೊರಬರಬೇಕಾಗಿದೆ. ಜಗತ್ತಿನ ವಿವಿಧ ಭಾಗಗಳಲ್ಲಿ ಹೆಚ್ಚುತ್ತಿರುವ ಬಲಪಂಥೀಯ ಚಳವಳಿಗಳು ನಿಜವಾಗಿ ಪ್ರಜಾಪ್ರಭುತ್ವಗಳಿಗೆ ಮತ್ತು ಉದಾರವಾದಿ ಶಕ್ತಿಗಳಿಗೆ ಬಹುದೊಡ್ಡ ಗಂಡಾಂತರವಾಗಿದೆ. ಆದ್ದರಿಂದ ಇಸ್ಲಾಮೋಫೋಬಿಯಾಕ್ಕೆ ಕಡಿವಾಣ ಹಾಕಬೇಕಾದುದು ಇಂದಿನ ತುರ್ತು ಅಗತ್ಯ. ವಾಸ್ತವ ಸ್ಥಿತಿ ಏನೇ ಇದ್ದರೂ ಭಯೋತ್ಪಾದನೆಗೆ ಇಸ್ಲಾಮ್ ಮತ್ತು ಮುಸ್ಲಿಮರಲ್ಲಿರುವ ಹಿಂಸಾತ್ಮಕ ಧೋರಣೆಯೇ ಕಾರಣ ಎಂಬ ನಂಬಿಕೆ ವ್ಯಾಪಕವಾಗಿದೆ. ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ರಾಜಕೀಯ ವಾಂಛೆಗಾಗಿ ಇಸ್ಲಾಮಿನ ಗುಮ್ಮ ತೋರಿಸುತ್ತಿದ್ದಾರೆ.

ಇಂದು ಸಮುದಾಯಗಳ ನಡುವಣ ಸಂಬಂಧಗಳನ್ನು ಗಟ್ಟಿಗೊಳಿಸಲು ನಾವು ಪ್ರಯತ್ನ ಮಾಡಬೇಕಾದ, ಶಾಂತಿ–ಸೌಹಾರ್ದದ ಮಾತುಗಳನ್ನು ಗಟ್ಟಿಗೊಳಿಸಬೇಕಾದ, ಧರ್ಮಗಳನ್ನು ಬರೇ ಸಂಪ್ರದಾಯಗಳಿಗೆ ಸೀಮಿತಗೊಳಿಸದೆ ಅದು ಪ್ರತಿಪಾದಿಸುವ ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾದ ಅತ್ಯವಿದೆ. ತಮ್ಮ ಸ್ವಹಿತಾಸಕ್ತಿಗೆ ಜಾಗತಿಕ ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಹವಣಿಕೆಗಳ ವಿರುದ್ಧ ದೃಢ ಸಂಕಲ್ಪ ಕೈಗೊಳ್ಳಬೇಕಾದ ಅಣತ್ಯವಿದೆ.

# ಭಯೋತ್ಪಾದನೆ ಕುರಿತು ಮಾಧ್ಯಮದ ದ್ವಿಮುಖ ನೀತಿ

ಪಾಶ್ಚಾತ್ಯ ಎಲೆಕ್ಟ್ರಾನಿಕ್ ಮಾಧ್ಯಮದ ವ್ಯಾಪ್ತಿ ಅಗಾಧವಾದದ್ದು. ಜಾಗತೀಕರಣವು ಸೈದ್ಧಾಂತಿಕ ರಂಗದಲ್ಲಿ ಅದರ ಬಾಹುಗಳನ್ನು ಊಹಿಸಲೂ ಆಗದಷ್ಟು ವಿಸ್ತಾರಗೊಳಿಸಿದೆ. ಉಪಗ್ರಹ ಮತ್ತು ಕೇಬಲ್ ತಂತ್ರಜ್ಞಾನದ ಮೂಲಕ ಅದು ಕ್ಷಣಾರ್ಧದಲ್ಲಿ ಜಗತ್ತನ್ನು ತಲುಪಬಲ್ಲದು. ಪಾಶ್ಚಿಮಾತ್ಯ ಮಾಧ್ಯಮ, ಅದರಲ್ಲೂ ಮುಖ್ಯವಾಗಿ ಆಂಗ್ಲೊ–ಅಮೆರಿಕನ್ ಮಾಧ್ಯಮವು, ಅಂತರ್ಜಾಲ ಸುದ್ದಿ, ರೇಡಿಯೋ ಮತ್ತು ಮುದ್ರಣ ಮಾಧ್ಯಮದ ಮೇಲೆ ಅಗಾಧ ಹಿಡಿತ ಹೊಂದಿದೆ.

ಜಗತ್ತಿನ ಹೆಚ್ಚಿನ ಸುದ್ದಿಗಳು ಪ್ರಕಟಗೊಳ್ಳುವುದು ಪಾಶ್ಚಾತ್ಯ ಮಾಧ್ಯಮ ಸಂಸ್ಥೆಗಳ ಮೂಲಕ. ರಾಯಿಟರ್ಸ್ ಟೆಲಿವಿಷನ್, ವರ್ಲ್ಡ್‌ವೈಡ್ ಟೆಲಿವಿಷನ್ ನ್ಯೂಸ್ ಮತ್ತು ಎಪಿಟಿವಿ ದೃಶ್ಯ ಸಾಮಗ್ರಿಗಳನ್ನು ಒದಗಿಸಿದರೆ, ಸಿಎನ್‌ಎನ್, ಸ್ಕೈ, ಬಿಬಿಸಿ ವರ್ಲ್ಡ್ ಸರ್ವಿಸ್‌ಗಳು ತಮ್ಮ ವಿವಿಧ ಭಾಷೆಗಳ ಸುದ್ದಿ ಸೇವೆಯ ಮೂಲಕ ವಿಶ್ವದ ತರಂಗಾಂತರಗಳ ಮೇಲೆ ಆಧಿಪತ್ಯ ಹೊಂದಿವೆ.

ವಿಶ್ವದ ನಾಲ್ಕು ದೊಡ್ಡ ಅಂತರರಾಷ್ಟ್ರೀಯ ಸುದ್ದಿ ಸಂಸ್ಥೆಗಳಾದ ಎಸೋಸಿಯೇಟೆಡ್ ಪ್ರೆಸ್, ಯುನೈಟೆಡ್ ಪ್ರೆಸ್ ಇಂಟರ್‌ನ್ಯಾಷನಲ್, ರಾಯಿಟರ್ಸ್ ಮತ್ತು ಏಜೆನ್ಸಿ ಫ್ರಾನ್ಸ್ ಪ್ರೆಸ್‌ಗಳು ಜಗತ್ತಿನ ಸುದ್ದಿ ಬಟವಾಡೆಯ ಶೇ. 80ರಷ್ಟನ್ನು ತಮ್ಮ ಹಿಡಿತದಲ್ಲಿಟ್ಟಿವೆ. ಈ ಪೈಕಿ ಮೊದಲ ಮೂರು ಸಂಸ್ಥೆಗಳೂ ಆಂಗ್ಲೋ ಅಮೆರಿಕನ್ ಆಗಿವೆ. ಜಗತ್ತಿನ ಬೇರೆ ಬೇರೆ ಭಾಗಗಳ ಜನರು ಇಲ್ಲಿ ಕೆಲಸ ಮಾಡುತ್ತಿರುವ ಹೊರತಾಗಿಯೂ ಈ ಸಂಸ್ಥೆಗಳು ಉದ್ದೇಶಪೂರ್ವಕವಾಗಿಯೋ ಅಲ್ಲದೆಯೋ ಪಶ್ಚಿಮದ, ಅದರಲ್ಲೂ ಮುಖ್ಯವಾಗಿ ಆಂಗ್ಲೋ–ಅಮೆರಿಕನ್ ಸುದ್ದಿ ಎಜೆಂಡಾ ಇಟ್ಟುಕೊಂಡು ಕಾರ್ಯಾಚರಿಸುತ್ತವೆ.

ಭಾರತದ ಹೆಚ್ಚಿನ ಎಲ್ಲ ಇಂಗ್ಲಿಷ್ ದೈನಿಕಗಳು ಮತ್ತು ನಿಯತಕಾಲಿಕಗಳು ಹೆಮ್ಮೆಯಿಂದ ಪಾಶ್ಚಿಮಾತ್ಯ ನಿಯತಕಾಲಿಕಗಳ ಲೇಖನ, ಅಂಕಣಗಳನ್ನು ಪ್ರಕಟಿಸುತ್ತವೆ. ಅಂದರೆ, ಪಾಶ್ಚಿಮಾತ್ಯ ಸುದ್ದಿ ಸಂಘಟನೆಗಳಿಗೆ ತಮ್ಮ ಶಕ್ತಿ ಸಾಮರ್ಥ್ಯದಿಂದಾಗಿ ಪಶ್ಚಿಮದ

ಹಿತಾಸಕ್ತಿಗಳಿಗೆ ಪೂರಕವಾದ ಜಾಗತಿಕ ಸುದ್ದಿ ಎಜೆಂಡಾವನ್ನು ನಿಗದಿಪಡಿಸಲು ಸಾಧ್ಯವಾಗುತ್ತದೆ. ಅಲ್ಲದೆ, ಭಾಷಾ ಪತ್ರಿಕೆಗಳು ಕೂಡಾ ಇಂಗ್ಲಿಷ್‌ನಿಂದ ತರ್ಜುಮೆಗೊಳಿಸಿದ ಸುದ್ದಿಗಳನ್ನೇ ಅವಲಂಬಿಸಿವೆ. ಇದು, ಕೇವಲ ಭಾರತಕ್ಕೆ ಸೀಮಿತವಾಗಿಲ್ಲ. ಇಡೀ ಅಭಿವೃದ್ಧಿಶೀಲ ಜಗತ್ತು ಇಂದು ಪಶ್ಚಿಮ ಯಾವ ಸುದ್ದಿಯನ್ನು ತೋರಿಸಬಯಸುತ್ತದೋ ಅದನ್ನು ಮಾತ್ರ ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅನೇಕ ಭಾರತೀಯ ನಿಯತಕಾಲಿಕೆಗಳು ಪಶ್ಚಿಮದ ನುಡಿಗಟ್ಟನ್ನು, ಭಾಷೆ, ಸುದ್ದಿ, ಮೌಲ್ಯಗಳನ್ನು ಅನುಕರಣೆ ಮಾಡುವಂತಾಗಿದೆ.

'ಇಸ್ಲಾಮಿಕ್ ಭಯೋತ್ಪಾದನೆ' ಎಂಬುದು ಪಾಶ್ಚಿಮಾತ್ಯ ಮಾಧ್ಯಮಗಳ ಸೃಷ್ಟಿ. ಭಾರತೀಯ ಮಾಧ್ಯಮದಲ್ಲಿಯೂ ಇದು ಪಾಶ್ಚಿಮಾತ್ಯ ಹಿತಾಸಕ್ತಿಗೆ ಪೂರಕವಾಗಿ ಪ್ರತಿಧ್ವನಿಸುತ್ತದೆ. ಇಸ್ಲಾಮ್ ಭಯೋತ್ಪಾದನೆಯನ್ನು ಬೋಧಿಸುವುದಿಲ್ಲ ಮತ್ತು ಬೆಂಬಲಿಸುವುದಿಲ್ಲ ಎಂದಷ್ಟೆ ಹೇಳಿದರೆ ಅದೊಂದು ದುರ್ಬಲ ಪ್ರತಿಕ್ರಿಯೆಯಾಗುತ್ತದೆ. ಖಂಡಿತವಾಗಿಯೂ ಕೆಲವು ಭಯೋತ್ಪಾದಕರು ಇಸ್ಲಾಮಿನ ಹೆಸರನ್ನು ದುರುಪಯೋಗಿಸುತ್ತಿದ್ದಾರೆ. ಇದು ಅಮೆರಿಕ ಪರವಾಗಿರುವ ಮಾಧ್ಯಮಗಳಿಗೆ ಜಿಹಾದನ್ನು ಭಯೋತ್ಪಾದನೆಯ ಜತೆ ಸಮೀಕರಿಸಲು ಅಸ್ತ್ರ ಒದಗಿಸಿದೆ.

ಪ್ಯಾಲೆಸ್ತೀನ್ ಪ್ರದೇಶಗಳ ಮೇಲೆ ಇಸ್ರೇಲ್‌ನ ಅತಿಕ್ರಮಣ ಹಾಗೂ ಅದು ವಿಶ್ವಸಂಸ್ಥೆಯ ನಿರ್ಣಯಗಳನ್ನು ನಿರಂತರ ಉಲ್ಲಂಘಿಸುತ್ತಿರುವುದು ಹಾಗೂ ಪಶ್ಚಿಮ ಏಷ್ಯಾದಲ್ಲಿ ಅಮೆರಿಕ ಸೃಷ್ಟಿಸಿರುವ ಗೊಂದಲಗಳು ಕೆಲ ಗುಂಪುಗಳನ್ನು ಶಸ್ತ್ರ ಕೈಗೆತ್ತಿಕೊಳ್ಳುವಂತೆ ಮಾಡಿವೆ. ಪಶ್ಚಿಮ ಏಷ್ಯಾದ ವಿದ್ಯಮಾನಗಳನ್ನು ವರದಿ ಮಾಡುವಾಗ ಪಾಶ್ಚಿಮಾತ್ಯ ಮಾಧ್ಯಮಗಳೂ ದ್ವಿಮುಖ ನೀತಿ ಅನುಸರಿಸುತ್ತಿವೆ. ಇಸ್ರೇಲ್ ನಡೆಸುತ್ತಿರುವ ಅತಿಕ್ರಮಣದ ಬಗ್ಗೆ ಮೃದುಧೋರಣೆ ಹೊಂದಿರುವ ಮಾಧ್ಯಮಗಳೂ, ಪ್ಯಾಲೆಸ್ತೀನಿಯರು ಅದರ ವಿರುದ್ಧ ತೋರುವ ಪ್ರತಿರೋಧವನ್ನು ಇಸ್ಲಾಮಿಕ್ ಭಯೋತ್ಪಾದನೆ ಎಂದು ಬಿಂಬಿಸುತ್ತವೆ. ಬೇರೆ ಬೇರೆ ರಾಷ್ಟ್ರಗಳ ನಾಗರಿಕರು ಎಸಗುವ ಅಪರಾಧಗಳ ಮೌಲ್ಯಮಾಪನದ ವಿಷಯ ಬಂದಾಗ ಮಾಧ್ಯಮ ಮಾಲೀಕರು ವಿಭಿನ್ನ ಮಾನದಂಡಗಳನ್ನು ಅನುಸರಿಸುತ್ತಾರೆ ಎಂಬುದನ್ನು ಇಲ್ಲಿ ಬಿಡಿಸಿ ಹೇಳಬೇಕಾಗಿಲ್ಲ.

ಇಸ್ಲಾಮ್ ಅಥವಾ ಮುಸ್ಲಿಮರ ಜೊತೆ ಭಯೋತ್ಪಾದನೆಯನ್ನು ಥಳುಕು ಹಾಕುವುದರ ಹಿಂದಿರುವ ವಿಶೇಷ ಹಿತಾಸಕ್ತಿಯನ್ನು ಇವು ಸ್ಪಷ್ಟಪಡಿಸುತ್ತವೆ. ಭಯೋತ್ಪಾದನೆ ಮತ್ತು ಭಯೋತ್ಪಾದಕರಿಗೆ ಸಂಬಂಧಿಸಿದ ವಿಷಯಗಳ ವರದಿಗಾರಿಕೆಯಲ್ಲಿ ಕಾಣಿಸುತ್ತಿರುವ ಪಕ್ಷಪಾತವನ್ನು ಗಮನಿಸಿದರೆ ಇದರ ಹಿಂದೆ ಯಾವುದೋ ದುಷ್ಟ ಸಂಚು ಇದೆ ಎಂಬುದು ವೇದ್ಯವಾಗುತ್ತದೆ. ವಿಧ್ವಂಸಕ ಕೃತ್ಯಗಳಿಗೆ

ಕೇವಲ ಇಸ್ಲಾಮ್ ಮತ್ತು ಮುಸ್ಲಿಮರನ್ನು ಮಾತ್ರವೇ ಹೊಣೆಯಾಗಿಸಲಾಗುತ್ತಿದೆ. ವ್ಯಕ್ತಿಗತವಾಗಿ ಒಬ್ಬ ಮುಸ್ಲಿಮ್ ಎಸಗುವ ಭಯೋತ್ಪಾದಕ ಕೃತ್ಯವನ್ನು ಇಸ್ಲಾಮಿನ ಜತೆ ಸಮೀಕರಿಸಲು ಸಾಧ್ಯವಿಲ್ಲ. ಯಾವುದೇ ಹಿಂದೂ ಧರ್ಮಾನುಯಾಯಿ ಎಸಗುವ ಅಪರಾಧವನ್ನು ಆತನ ಧರ್ಮದ ಜೊತೆ ಜೋಡಿಸಲಾಗದು. ಆದರೆ, ಪೂರ್ವಗ್ರಹಪೀಡಿತ ಮಾಧ್ಯಮಗಳ ಒಂದು ವರ್ಗವು ಮಾಧ್ಯಮದ ಬೆಂಬಲವಿಲ್ಲದ ಸಮುದಾಯವನ್ನು ಭಯೋತ್ಪಾದನೆಯ ಆರೋಪಕ್ಕೆ ಸುಲಭದಲ್ಲೇ ಸಿಲುಕಿಸಿಬಿಡುತ್ತದೆ.

ಪಶ್ಚಿಮದ ದ್ವಿಮುಖ ಧೋರಣೆಯು ಇನ್ನೂ ವಿಶಾಲವಾಗಿದೆ. ಸಲ್ಮಾನ್ ರಷ್ದಿ ಅವರ ಧರ್ಮನಿಂದನೆಯ ಕೃತಿಯು ಮುಸ್ಲಿಮರ ಭಾವನೆಗಳಿಗೆ ಧಕ್ಕೆಯುಂಟು ಮಾಡಿದರೂ ಪಾಶ್ಚಾತ್ಯ ಮಾಧ್ಯಮಗಳು ಅದನ್ನು 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ಹೆಸರಲ್ಲಿ ಸಮರ್ಥಿಸುತ್ತವೆ. ಅದರೆ ಡೇವಿಡ್ ಇರ್ವಿಂಗ್‌ನನ್ನು ಹೋಲೋಕಾಸ್ಟ್‌ನ್ನು ನಿರಾಕರಿಸಿದ್ದಕ್ಕಾಗಿ ಜೈಲಿಗಟ್ಟಲು ಪಶ್ಚಿಮಕ್ಕೆ ಯಾವುದೇ ಅಳುಕು ಇಲ್ಲ. ಅಮೆರಿಕದಲ್ಲಿ ಕುಳಿತು ನೀವು ಇಸ್ರೇಲ್ ಮತ್ತು ಅದರ ನೀತಿಗಳನ್ನು ಟೀಕಿಸಲು ಸಾಧ್ಯವಿಲ್ಲ. ಯಾಕೆಂದರೆ ಇಂತಹ ಯಾವುದೇ ಪ್ರಯತ್ನವನ್ನು ಸೆಮೆಟಿಸಿಸಮ್‌ನ ವಿರೋಧ ಎಂಬ ಹೆಸರಲ್ಲಿ ಕಾನೂನುಬದ್ಧವಾಗಿಯೇ ತಡೆಯಲಾಗುತ್ತದೆ. ಪಶ್ಚಿಮದ ಬಳಿಯೂ ಯಾವುದೇ ಬೆಲೆ ತೆತ್ತಾದರೂ ಸಮರ್ಥಿಸಿಕೊಳ್ಳಬೇಕಾದ ಕೆಲವು ಸಂಪ್ರದಾಯಗಳಿವೆ ಎಂಬುದು ಸ್ಪಷ್ಟ.

## ಬಖಯೋತ್ಪಾದನೆಯ ಬೇರುಗಳು

ಕಳೆದ ಕೆಲವು ದಶಕದಲ್ಲಿ ವಿಶ್ವದಾದ್ಯಂತ ಹಿಂಸಾಚಾರದ ಅನೇಕ ಘಟನೆಗಳು ಸಂಭವಿಸಿದ್ದು ಸಾಕಷ್ಟು ಜೀವಹಾನಿ ನಡೆದಿದೆ. ಭಯೋತ್ಪಾದಕ ಕೃತ್ಯ ಎನ್ನಲಾಗುವ ನ್ಯೂಯಾರ್ಕ್‌ನ ವರ್ಲ್ಡ್ ಟ್ರೇಡ್ ಸೆಂಟರ್‌ನ ಅವಳಿ ಗೋಪುರಗಳ ಧ್ವಂಸವು ಈ ನಿಟ್ಟಿನಲ್ಲಿ ತೀರಾ ಇತ್ತೀಚಿನದು. ಜಿಹಾದ್‌ನ ಪ್ರೇರಣೆಯಿಂದ ಭಯೋತ್ಪಾದಕರು ಈ ಕೃತ್ಯಗಳನ್ನೆಸಗಿದ್ದಾರೆ ಎನ್ನಲಾಗುತ್ತದೆ. ಇವರು ಪಾಕಿಸ್ತಾನದಿಂದ ಪಶ್ಚಿಮ ಏಷ್ಯಾದವರೆಗಿನ ಭೂಭಾಗದಲ್ಲಿ ಹಬ್ಬಿಕೊಂಡಿದ್ದಾರೆ ಎಂದು ಹೇಳಲಾಗುತ್ತದೆ. ಸತ್ಯನಿಷೇಧಿಗಳ ವಿರುದ್ಧದ ಪವಿತ್ರ ಯುದ್ಧ ಎಂದು ಹೇಳಲಾಗುವ ಜಿಹಾದ್‌ನ ಸಿದ್ಧಾಂತದ ಬಗ್ಗೆ ಮತ್ತು ಇಸ್ಲಾಮಿನ ಬಗ್ಗೆ ಇದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ವಿಶ್ವದ ಜನಸಂಖ್ಯೆಯಲ್ಲಿ ಶೇ. 23ರಷ್ಟು ಮುಸ್ಲಿಮರಿದ್ದು, ಇದು 170 ಕೋಟಿಯಷ್ಟಾಗುತ್ತದೆ. ಇಸ್ಲಾಮ್‌ನ ಮೂಲ ಪದ 'ಸಿಲ್ಮ್' ಅಥವಾ ಶಾಂತಿ ಎಂದಾಗಿದೆ. ಆದ್ದರಿಂದ ಇದನ್ನು ಶಾಂತಿಯ ಧರ್ಮ ಎಂದು ಹೇಳಲಾಗುತ್ತದೆ. ಇಸ್ಲಾಮ್ ಎಂದರೆ ಶಾಂತಿ ಮತ್ತು ಆ ಧರ್ಮದಲ್ಲಿ ಅನುಯಾಯಿಗಳನ್ನು ಹಿಂಸೆಗೆ ಪ್ರೇರೇಪಿಸುವ ಯಾವುದೇ ಅಂಶಗಳಿಲ್ಲ ಎಂಬುದನ್ನು ವಿರೋಧಿಗಳು ಕೂಡಾ ಒಪ್ಪುತ್ತಾರೆ. 9/11ರ ಘಟನೆಯ ನಂತರದ ದಶಕದಲ್ಲೂ ಮುಸ್ಲಿಮರು ಮತ್ತು ಇಸ್ಲಾಮೀ ಜಗತ್ತು ನ್ಯಾಟೋ ರಾಷ್ಟ್ರಗಳು ಕೈಗೊಂಡ ಸಂಘಟಿತ ಹಿಂಸೆಯ ಪ್ರಮುಖ ಬಲಪಶುಗಳಾಗಿದ್ದಾರೆ. ಜಾಗತಿಕ ಶಾಂತಿ ಮತ್ತು ಸುರಕ್ಷೆಯನ್ನು ಖಾತ್ರಿಪಡಿಸುವ ಹೆಸರಲ್ಲಿ ಅಮೆರಿಕದ ಪಡೆಗಳೂ ಆಫ್ಘಾನಿಸ್ತಾನ ಮತ್ತು ಇರಾಕ್ ಎಂಬೆರಡು ಮುಸ್ಲಿಮ್ ರಾಷ್ಟ್ರಗಳನ್ನು ಸಂಪೂರ್ಣ ನಾಶಗೊಳಿಸಿಬಿಟ್ಟಿವೆ. ಹಿಂಸೆಯ ಈ ಸರಣಿಯು ಈಗಲೂ ಮುಂದುವರಿದಿದ್ದು, ಶಾಂತಿ ಇನ್ನೂ ಮರೀಚಿಕೆಯಾಗಿದೆ. ಒಂದು ದಶಲಕ್ಷ ಜನರು ತಮ್ಮ ಜೀವ ಕಳೆದುಕೊಂಡಿದ್ದು, ಐದು ದಶಲಕ್ಷ ಜನರು ನಿರ್ವಸಿತರಾಗಿದ್ದಾರೆ.

ಅಲ್ಲಾಹನು ಅವರಂಥ ಜನರ ಬಗ್ಗೆ ಹೀಗೆ ಹೇಳುತ್ತಾನೆ:

**'ಭೂಮಿಯಲ್ಲಿ ಅಶಾಂತಿ ಹರಡಬೇಡಿ' ಎಂದು ಅವರೊಡನೆ ಹೇಳಿದಾಗ**

**ಅವರು 'ನಾವು ಕೇವಲ ಸುಧಾರಕರು' ಎನ್ನುತ್ತಾರೆ. ನಿಮಗೆ ತಿಳಿದಿರಲಿ! ಖಂಡಿತವಾಗಿಯೂ ಅವರೇ ಅಶಾಂತಿ ಹರಡುವವರು. ಆದರೆ ಅವರಿಗೆ ಅದರ ಅರಿವಿಲ್ಲ. (ಕುರ್‌ಆನ್ 2:11,12)**

ಶಾಂತಿ ಮತ್ತು ಭದ್ರತೆ ಕುರಿತು ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಚರ್ಚೆಯನ್ನು ಇಂದು ನಿಯಂತ್ರಿಸುತ್ತಿರುವವರು ಪ್ರಭಾವಶಾಲಿ ಪಾಶ್ಚಿಮಾತ್ಯ ದೇಶಗಳು ಮತ್ತು ಕೆಲ ಶಕ್ತಿಶಾಲಿ ಮಾಧ್ಯಮಗಳು. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯನ್ನು ಕೂಡಾ ಈ ಶಕ್ತಿಗಳು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿವೆ. ಶಾಂತಿ ಸ್ಥಾಪನೆಯ ಬಗ್ಗೆ ಈ ಮಾಧ್ಯಮಗಳು ಹೇಳುವ ಮಾತಿಗೆ ಜಾಗತಿಕ ಮನ್ನಣೆ ದೊರೆಯುತ್ತದೆ. ಸಣ್ಣ ರಾಷ್ಟ್ರಗಳ ವಿವೇಕದ ಧ್ವನಿಗೆ ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ಯಾವ ಬೆಲೆಯೂ ಇಲ್ಲ. ಪರಿಸ್ಥಿತಿ ಹೀಗಿರುವಾಗ ಹಿಂಸೆ ಮತ್ತು ಮಾರಣಹೋಮಗಳಿಗೆ ಮುಸ್ಲಿಮರನ್ನೇ ದೂಷಿಸುವುದು ಆಶ್ಚರ್ಯದ ಸಂಗತಿಯೇ? ಜಗತ್ತಿನಾದ್ಯಂತ ತಮ್ಮ ಜನರ ಮತ್ತು ಹಿತಾಸಕ್ತಿಗಳ ವಿರುದ್ಧ ದಾಳಿ ನಡೆಸಲು ಇಸ್ಲಾಮೀ ರಾಷ್ಟ್ರಗಳು ವೈರಿಗಳಿಗೆ ಕುಮ್ಮಕ್ಕು ನೀಡುತ್ತಿವೆ ಎಂದು ಪಾಶ್ಚಾತ್ಯ ರಾಷ್ಟ್ರಗಳು ಆರೋಪಿಸುವಾಗ ಅದನ್ನು ಅಲ್ಲಗಳೆಯುವ ತಾಕತ್ತು ಮುಸ್ಲಿಮ್ ರಾಷ್ಟ್ರಗಳಿಗೆ ಇವೆಯೇ? ಈ ಹಿಂಸಾತ್ಮಕ ದಾಳಿಗಳಿಗೆ ಭಯೋತ್ಪಾದನೆ ಎಂದು ಹೆಸರಿಟ್ಟಿರುವ ಪಾಶ್ಚಾತ್ಯ ರಾಷ್ಟ್ರಗಳು ಇದರ ವಿವರಣೆಗೆ ಹೊಸ ಹೊಸ ಪಾರಿಭಾಷಿಕಗಳನ್ನು ಬಳಕೆಗೆ ತಂದಿವೆ. ಹೆಚ್ಚಿನ ಅಭಿವೃದ್ಧಿಶೀಲ ರಾಷ್ಟ್ರಗಳು ಪಶ್ಚಿಮದ ಜತೆ ಹಿತಾಸಕ್ತಿಗಳನ್ನು ಹಂಚಿಕೊಂಡಿರುವ ಕಾರಣ ಅವು ಯಾವುದೇ ಪ್ರತಿರೋಧವಿಲ್ಲದೆ ಆದೇಶಗಳನ್ನು ಪಾಲಿಸುತ್ತವೆ. ಯಾರು ಪಶ್ಚಿಮದ ನೀತಿಯನ್ನು ವಿರೋಧಿಸುತ್ತಾರೋ ಅವರ ಮೇಲೆ ದಿಗ್ಬಂಧನಗಳನ್ನು ಹೇರಲಾಗುತ್ತದೆ. ರಾಜಕಾರಣದ ಈ ಮಗ್ಗಲುಗಳ ಹಿನ್ನೆಲೆಯಲ್ಲಿ ನಾವು ಭಯೋತ್ಪಾದನೆಯ ವಾಸ್ತವ ಏನು ಮತ್ತು ಅದರ ಮೂಲ ಎಲ್ಲಿದೆ ಎಂಬುದನ್ನು ಚರ್ಚಿಸಬೇಕಾದ ಅಗತ್ಯವಿದೆ.

ಸಮಕಾಲೀನ ಸಂದರ್ಭದಲ್ಲಿ ಭಯೋತ್ಪಾದನೆಯ ಮೂಲವನ್ನು ಕೆದಕುತ್ತಾ ಹೋದರೆ ನಾವು ಪಶ್ಚಿಮ ಏಷ್ಯಾಕ್ಕೆ ಬಂದು ನಿಲ್ಲುತ್ತೇವೆ. ಇಲ್ಲಿ ಯುರೋಪಿನ ಸೆಮೆಟಿಕ್–ವಿರೋಧಿ ನಿಲುವಿಗೆ ಪ್ರಾಯಶ್ಚಿತ್ತ ಪಡುವ ಪಶ್ಚಿಮದ ನೀತಿ ಹಾಗೂ ನಾಝಿ ಜರ್ಮನಿಯು ನಡೆಸಿದ ಯಹೂದಿಯರ ಮಾರಣಹೋಮವು ಇಸ್ರೇಲ್ ಎಂಬ ಒಂದು ಝಿಯೋನಿಸ್ಟ್ ರಾಷ್ಟ್ರದ ಹುಟ್ಟಿಗೆ ಕಾರಣವಾಗಿದೆ. ಬ್ರಿಟಿಷರು ಗರ್ಭ ಕೊಟ್ಟ ಈ ಅನೈತಿಕ ಶಿಶುವಿಗೆ ಪೋಷಣೆ ಒದಗಿಸಿದ್ದು ಡೆಮಾಕ್ರೆಸಿ ಮತ್ತು ನಾಗರಿಕ ಸ್ವಾತಂತ್ರ್ಯದ ವಕ್ತಾರನೆಂಬ ಪೋಸು ಕೊಡುತ್ತಿರುವ ಅಮೆರಿಕ.

ಮಿನೌ ರೀವ್ಸ್ ತಮ್ಮ 'ಮುಹಮ್ಮದ್ ಇನ್ ಯುರೋಪ್: ಎ ಥೌಸಂಡ್

ಇಯರ್ಸ್ ಆಫ್ ವೆಸ್ಟರ್ನ್ ಮಿಥ್ ಮೇಕಿಂಗ್' ನಲ್ಲಿ ಉಲ್ಲೇಖಿಸಿರುವಂತೆ ಇಸ್ರೇಲ್ ಹುಟ್ಟಿದಾಗ ಅಲ್ಲಿದ್ದ ಅರಬರ ಸಂಖ್ಯೆ 7.5 ಲಕ್ಷ ಮತ್ತು ಯಹೂದಿಯರ ಸಂಖ್ಯೆ ಕೇವಲ 60 ಸಾವಿರ. ಆದರೆ 1918ರಲ್ಲಿ ಬ್ರಿಟನ್‌ನ ವಿದೇಶ ಸಚಿವ ಎ.ಜೆ. ಬಾಲ್‌ಫೊರ್ ಹೀಗೆ ಬರೆಯುತ್ತಾರೆ:

> "ನಾಲ್ಕು ಬೃಹತ್ ಶಕ್ತಿಗಳು ಝಿಯೋನಿಸಮ್‌ಗೆ ಬದ್ಧವಾಗಿವೆ. ಝಿಯೋನಿಸಮ್ – ಅದು ಸರಿಯಿರಲಿ, ತಪ್ಪಿರಲಿ – ಸನಾತನ ಸಂಪ್ರದಾಯಗಳು, ಸದ್ಯದ ಅಗತ್ಯಗಳು, ಭವಿಷ್ಯದ ನಿರೀಕ್ಷೆಯ ಮೇಲೆ ನಿಂತಿದೆ. ಆ ನೆಲದಲ್ಲಿ ಈಗ ವಾಸವಾಗಿರುವ ಏಳು ಲಕ್ಷ ಅರಬರ ಅಪೇಕ್ಷೆ ಮತ್ತು ಪೂರ್ವಗ್ರಹಗಳಿಗಿಂತಲೂ ಇದು ಹೆಚ್ಚು ಮಹತ್ವಪೂರ್ಣವಾದುದು."

ಹೈಫಾ ಯುನಿವರ್ಸಿಟಿಯ ವಿದ್ವಾಂಸ ಇಲನ್ ಪೇಪೆ, ಇಸ್ರೇಲಿನ ಇತಿಹಾಸಕಾರರಲ್ಲೇ ನಿರ್ಭಿಡ ನಿಲುವುಗಳಿಗೆ ಹೆಸರಾದವರು. ಅಸೋಸಿಯೇಟೆಡ್ ಪ್ರೆಸ್‌ನ ಡ್ಯಾನ್ ಪೆರ್ರಿ ಸಂದರ್ಶನವೊಂದರಲ್ಲಿ ಪೇಪೆಯವರನ್ನು ಕೇಳುತ್ತಾರೆ: "ಇಸ್ರೇಲ್ ಪಾಪದ ಕೂಸೇ?" ಇದಕ್ಕೆ ಉತ್ತರವಾಗಿ ಪೇಪೆ, 'ಹೌದು' ಎನ್ನುತ್ತಾರೆ. ಮಾತ್ರವಲ್ಲ ತಮ್ಮ ಮಾತನ್ನು ಸಮರ್ಥಿಸುತ್ತಾ ಹೀಗೆನ್ನುತ್ತಾರೆ: "ಯಹೂದಿಯರು ಅರಬರ ನೆಲವನ್ನು ಅತಿಕ್ರಮವಾಗಿ ವಶಪಡಿಸಿಕೊಂಡರು. ನಾವು ಏಕಕಾಲದಲ್ಲಿ ವಸಾಹತುಶಾಹಿ ಆಕ್ರಮಣಕಾರರಾಗಿಯೂ ನೀತಿವಂತರಾಗಿಯೂ ವರ್ತಿಸಬೇಕಾಗಿತ್ತು. ಇಷ್ಟು ದೊಡ್ಡ ಅನ್ಯಾಯವನ್ನು ನಾವು ಸಮರ್ಥಿಸಿಕೊಳ್ಳಲು ಸಾಧ್ಯವೇ? ಪ್ಯಾಲೆಸ್ತೀನ್ ಏಳು ಶತಮಾನಗಳ ಕಾಲ ಮುಸ್ಲಿಮ್ ಆಡಳಿತಕ್ಕೊಳಪಟ್ಟಿತ್ತು ಎಂಬುದನ್ನು ನಾವಿಲ್ಲಿ ಗಮನಿಸಬೇಕು."

ಇಸ್ರೇಲಿ ಪತ್ರಕರ್ತ ಮತ್ತು ಇತಿಹಾಸಕಾರ ಟಾಮ್ ಸೆಜೆವ್, ಯಾವ ರೀತಿ ಪ್ಯಾಲೆಸ್ತೀನ್‌ನ ಬ್ರಿಟಿಷ್ ಆಡಳಿತಗಾರರು 1919ರಿಂದ 1948ರವರೆಗೆ ಝಿಯೋನಿಸ್ಟ್ ಆಡಳಿತಗಾರರೊಂದಿಗೆ ಸೇರಿ ಯಹೂದಿ ಆಡಳಿತವನ್ನು ಸ್ಥಾಪಿಸಲು ಝಿಯೋನಿಸ್ಟ್ ನಾಯಕರೊಂದಿಗೆ ಸೇರಿಕೊಂಡು ಬಲಪ್ರಯೋಗ ಮತ್ತು ಮೋಸಗಾರಿಕೆಯಲ್ಲಿ ತೊಡಗಿದರು ಎಂಬುದನ್ನು "ಜಿವ್ಸ್ ಅಂಡ್ ಅರಬ್ಸ್ ಅಂಡರ್ ದ ಬ್ರಿಟಿಷ್ ಮ್ಯಾಂಡೇಟ್" ಎಂಬ ಕೃತಿಯಲ್ಲಿ ಬರೆದಿದ್ದಾರೆ. ಲೇಖಕರು ತಮ್ಮ ಸಂಶೋಧನೆಯ ವೇಳೆ ಆದ ಅನುಭವವನ್ನು ಹೀಗೆ ವಿವರಿಸುತ್ತಾರೆ:

> "ಝಿಯೋನಿಸ್ಟ್ ಸಂಘಟನೆಗಳು ಮತ್ತು ಬ್ರಿಟಿಷ್ ಸರಕಾರ ಪ್ರಭಾವಶಾಲಿ ಅರಬರಿಗೆ ಲಂಚ ಕೊಡುವುದನ್ನು ಮುಂದುವರಿಸಿದವು. ಅಮೆರಿಕದ 32ನೇ ಅಧ್ಯಕ್ಷರಾಗಿದ್ದ ರೂಸ್‌ವೆಲ್ಟ್, ಝಿಯೋನಿಸ್ಟ್ ನಾಯಕರೂ ಇಸ್ರೇಲ್‌ನ

> ಮೊದಲ ಅಧ್ಯಕ್ಷರೂ ಆದ ಚೈಮ್ ವೈಜ್‌ಮನ್‌ರಿಗೆ "ನನ್ನ ಅಭಿಪ್ರಾಯದ ಪ್ರಕಾರ ಅರಬರನ್ನು ಖರೀದಿಸಲು ಸಾಧ್ಯವಿದೆ" ಎಂದು ಹೇಳುತ್ತಾರೆ. ಅವರ ಮಾತುಕತೆಯ ದಾಖಲೆಯಲ್ಲಿ ಕೂಡಾ ಬಕ್ಷೀಸು ಎಂಬ ಪದ ಸೇರಿಕೊಂಡಿದೆ. ಟ್ರಾನ್ಸ್-ಜೋರ್ಡಾನ್‌ನ ರಾಜಕುಮಾರ ಅಬ್ದುಲ್ಲಾ ಈ ಯಹೂದಿ ಏಜೆನ್ಸಿಯ ಅತಿದೊಡ್ಡ ಗಿರಾಕಿಯಾಗಿರುವಂತೆ ಭಾಸವಾಗುತ್ತದೆ."

ಇಂದು ಅರಬರಿಗೆ ಅಮೆರಿಕ, ಬ್ರಿಟನ್ ಮತ್ತು ಅವು ಜತೆಗೂಡಿ ಅರಬ್ ಜಗತ್ತಿನಲ್ಲಿ ಸ್ಥಾಪಿಸಿದ ಇಸ್ರೇಲ್‌ನ ಮೇಲೆ ಇರುವಷ್ಟೇ ತೀವ್ರವಾದ ಆಕ್ರೋಶ ತಮ್ಮದೇ ಭ್ರಷ್ಟ ಮತ್ತು ಅದಕ್ಷ ಸರಕಾರಗಳ ಬಗ್ಗೆ ಇದೆ. ಇಂದು ಬಾಂಬ್ ಎಸೆಯುತ್ತಿರುವ ಅನಾಗರಿಕ ಜನರು ನಿಜವಾಗಿ ಅತ್ಯಂತ ಭ್ರಷ್ಟ ಮತ್ತು ಅದಕ್ಷ ಆಡಳಿತಗಳ ಪಾಪದ ಫಲ.

ಈ ದೃಷ್ಟಿಯಿಂದ ನೋಡಿದರೆ ಪಶ್ಚಿಮ ಏಷ್ಯಾದ ಪ್ರಸಕ್ತ ಬಿಕ್ಕಟ್ಟಿನಲ್ಲಿ ಇಸ್ಲಾಮಿನ ಪಾತ್ರವೇನೂ ಇಲ್ಲ. ನಿಜವಾಗಿ ಅದರ ಮೂಲ ಇರುವುದು ಇಸ್ರೇಲ್ ಎಂಬ ಅಕ್ರಮ ರಾಷ್ಟ್ರದ ಸೃಷ್ಟಿಯಲ್ಲಿ. ಜತೆಗೆ 1950 ಮತ್ತು 1960ರಲ್ಲಿ ಅರಬ್ ಜಗತ್ತಿನಲ್ಲಿ ಪತ್ತೆಯಾದ ತೈಲ ಸಂಪನ್ಮೂಲಗಳನ್ನು ಕೈವಶಪಡಿಸಿಕೊಳ್ಳುವ ಷಡ್ಯಂತ್ರವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಇಸ್ರೇಲ್‌ನ ದೌರ್ಜನ್ಯಗಳಿಗೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡ ಅರಬ್ ರಾಷ್ಟ್ರೀಯತೆಯೂ ಕಡೆಗಣಿಸುವಂತಿಲ್ಲ. ಇಸ್ರೇಲ್ ಜತೆಗಿನ ಮೂರು ಯುದ್ಧಗಳು, ಹಿಝ್ಬುಲ್ಲಾ ಮತ್ತು ಇಸ್ರೇಲ್ ನಡುವಿನ ಯುದ್ಧದಲ್ಲಿ ಲೆಬನಾನ್ ಧ್ವಂಸಗೊಂಡದ್ದು, ಪಶ್ಚಿಮ ದಂಡೆ ಮತ್ತು ಸಿರಿಯಾದ ಕೆಲವು ಭಾಗಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಂಡದ್ದು, ದಕ್ಷಿಣ ಆಫ್ರಿಕಾದ ಜನಾಂಗಭೇದ ನೀತಿಯನ್ನು ನೆನಪಿಸುವಂತೆ ಪ್ಯಾಲೆಸ್ತೀನಿಯರನ್ನು ಒಂದು ಕಡೆ ಕೂಡಿ ಹಾಕಿ ಅವರಿಗೆ ಕೃಷಿ ಭೂಮಿ ಮತ್ತು ನೀರಿನ ಸಂಪರ್ಕವನ್ನು ನಿರಾಕರಿಸಿದ್ದು, ಅರಬರನ್ನು ಅವರ ಮನೆಗಳಿಂದ ಓಡಿಸಿದ್ದು, 375 ಕಿ.ಮೀ. ಉದ್ದದ ಗೋಡೆಯನ್ನು ನಿರ್ಮಿಸಿ ಅರಬರನ್ನೇ ಪರಸ್ಪರ ವಿಂಗಡಿಸಿದ್ದು ಇವೆಲ್ಲವೂ ಅರಬರ ಆಕ್ರೋಶಕ್ಕೆ ತುಪ್ಪ ಸುರಿಯುತ್ತಲೇ ಬಂದಿದೆ. ಯುದ್ಧಾಪರಾಧಗಳಿಗೆ ಧಾರ್ಮಿಕ ಲೇಪ ಇರುವುದನ್ನು ಸಂಪೂರ್ಣ ಅಲ್ಲಗಳೆಯಲಾಗದು. ಅಮೆರಿಕದ ಅವಳಿ ಗೋಪುರಗಗಳನ್ನು ಉರುಳಿಸಿದ ಭಯೋತ್ಪಾದನಾ ಕೃತ್ಯದ ಬೆನ್ನಲ್ಲೇ ಅಧ್ಯಕ್ಷ ಜಾರ್ಜ್ ಬುಷ್ ಧರ್ಮಯುದ್ಧ ಅಥವಾ ಕ್ರುಸೇಡ್ ಎಂಬ ಪದವನ್ನು ಬಳಸಿದ್ದರೆಂಬುದು ಇಲ್ಲಿ ಗಮನಾರ್ಹ.

ಆದರೆ ಇದಾವುದೂ ಮುಸ್ಲಿಮ್ ಜಗತ್ತಿನಲ್ಲಿ ಯುದ್ಧೋನ್ಮಾದವನ್ನು ಸೃಷ್ಟಿಸಲು ಯತ್ನಿಸುತ್ತಿರುವ ಅಮೆರಿಕ, ಬ್ರಿಟನ್ ಮತ್ತು ಇಸ್ರೇಲಿನ ಕಣ್ಣು ತೆರೆಸಲಾರವು. ಇಷ್ಟು ಮಾತ್ರವಲ್ಲ, ಸಮೂಹ ನಾಶಕ ಅಸ್ತ್ರಗಳನ್ನು ಶೇಖರಿಸುತ್ತಿದೆ ಎಂಬ ಸುಳ್ಳು ಸಿದ್ಧಾಂತದ ಆಧಾರದಲ್ಲಿ ಆ ರಾಷ್ಟ್ರದ ಮೇಲೆ ದಾಳಿ ನಡೆಯಿತು. ನ್ಯೂಯಾರ್ಕ್‌ನ ಮೇಲೆ ಸೆಪ್ಟಂಬರ್

11ರಂದು ನಡೆದ ದಾಳಿಯ ಸಂಚನ್ನು ಅಲ್‌ಖೈದಾ ರೂಪಿಸಿದ್ದು ಆಫ್ಘಾನಿಸ್ತಾನದ ನೆಲದಲ್ಲಿ ಎಂಬ ನೆಪವೊಡ್ಡಿ ಆ ರಾಷ್ಟ್ರವನ್ನು ಪುಡಿಗಟ್ಟಲಾಯಿತು. ಖ್ಯಾತ ಲೇಖಕ ನೋಮ್ ಚೋಮ್ಸ್ಕಿ ತಮ್ಮ **'ಹೆಜೆಮನಿ ಆರ್ ಸರ್‌ವೈವಲ್'** (ಪುಟ, 200) ಎಂಬ ಕೃತಿಯಲ್ಲಿ, ಸೆಪ್ಟಂಬರ್ 11ರ ದಾಳಿಯಲ್ಲಿ ಆಫ್ಘಾನಿಸ್ತಾನದ ಪಾತ್ರ ಬಹಿರಂಗಗೊಳ್ಳುವುದಕ್ಕೆ ಮತ್ತು ಸಾಬೀತಾಗುವುದಕ್ಕೆ ಬಹಳ ಮುಂಚೆಯೇ ಆ ರಾಷ್ಟ್ರದ ವಿರುದ್ಧ ಬುಷ್ ತನ್ನ ದಮನಕಾರಿ ನೀತಿಯನ್ನು ಆರಂಭಿಸಿದ್ದರು ಎಂದು ಬರೆಯುತ್ತಾರೆ.

ಕ್ರಿ.ಶ. 1958ರಿಂದಲೂ ಅಮೆರಿಕವು ಮುಸ್ಲಿಮ್ ರಾಷ್ಟ್ರಗಳ ಮೇಲೆ ದಾಳಿ, ಅತಿಕ್ರಮಣ ಮತ್ತು ನಿಯಂತ್ರಣ ಸಾಧಿಸುವ ಷಡ್ಯಂತ್ರಗಳನ್ನು ರೂಪಿಸುತ್ತಲೇ ಬಂದಿದೆ. ಅಧ್ಯಕ್ಷ ಐಸನ್‌ಹೋವರ್‌ರ ಸರಕಾರವು ಮೂರು ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡಿತ್ತು  ಉತ್ತರ ಆಫ್ರಿಕಾ, ಇಂಡೊನೇಷ್ಯಾ ಮತ್ತು ಪಶ್ಚಿಮ ಏಷ್ಯಾ. ಇವೆಲ್ಲವೂ ತೈಲ ಉತ್ಪಾದಿಸುವ ಪ್ರದೇಶಗಳೆಂಬುದು ಗಮನಾರ್ಹ. ವಿದೇಶಾಂಗ ಸಚಿವ ಜಾನ್ ಫಾಸ್ಟರ್ ಡುಲ್ಲೆಸ್ **'ಸಮಸ್ಯೆ'**ಯನ್ನು **'ರ್‍ಯಾಡಿಕಲ್ ನ್ಯಾಷನಲಿಸಮ್'** ಎಂದು ಕರೆದಿದ್ದರು. **'ರ್‍ಯಾಡಿಕಲ್ ಇಸ್ಲಾಮ್'** ಎಂಬ ಪದವನ್ನು ಅವರು ಬಳಸಿಲ್ಲ ಎಂಬುದು ಗಮನಾರ್ಹ. ಉತ್ತರ ಆಫ್ರಿಕಾದಲ್ಲಿ ಫ್ರೆಂಚ್ ವಸಾಹತುಶಾಹಿ ಆಡಳಿತದ ವಿರುದ್ಧ ರಾಷ್ಟ್ರೀಯವಾದಿ ಪಡೆಗಳ ಜಯ, ಅಧ್ಯಕ್ಷ ನಾಸೆರ್‌ರ ಅರಬ್ ರಾಷ್ಟ್ರೀಯವಾದ ಮತ್ತು ಅಲಿಪ್ತ ನೀತಿ ಹಾಗೂ ಇಂಡೊನೇಷ್ಯಾ ಅಧ್ಯಕ್ಷ ಸುಕಾರ್ನೊರ 'ತುಸು ಅತಿಯಾದ ಪ್ರಜಾಪ್ರಭುತ್ವವಾದಿ ನಡವಳಿಕೆ' ಅಮೆರಿಕದ ವಿದೇಶಾಂಗ ಸಚಿವಾಲಯದ ನಿದ್ದೆಗೆಡಿಸಿದ್ದವು (ನೋಮ್ ಚೋಮ್ಸ್ಕಿ, ಹೆಜೆಮನಿ ಆರ್ ಸರ್ವೈವಲ್). ಅರಬ್ ರಾಷ್ಟ್ರಗಳ ವಿರುದ್ಧ ಯುದ್ಧ ಹೂಡಲು ಮತ್ತು ವಿನಾಶಕಾರಿ ಅಂತರ್ಯುದ್ಧದಲ್ಲಿ ಸಿಲುಕಿಸಲು ಇಸ್ರೇಲ್‌ಗೆ ಕುಮ್ಮಕ್ಕು ದೊರೆತದ್ದು ಈ ಹಂತದಲ್ಲೇ. ಅರಬ್ ಮತ್ತು ಮುಸ್ಲಿಮ್ ಜಗತ್ತಿನಲ್ಲಿ ಇಂದು ಸ್ಫೋಟಗೊಂಡಿರುವ ಆಕ್ರೋಶದ ಹಿಂದಿರುವ ಪ್ರೇರಣೆ ಏನು ಎಂಬುದನ್ನು ಊಹಿಸುವುದು ಕಷ್ಟವಲ್ಲ.

ಭಯೋತ್ಪಾದನೆ ಮತ್ತು ಮುಸ್ಲಿಮರಿಗೆ ಸಂಬಂಧಿಸಿದಂತೆ ಪಾಶ್ಚಾತ್ಯ ಜಗತ್ತು ಮಾಡುವ ಆರೋಪಗಳನ್ನು ನಾವು ಈ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. ಇಸ್ಲಾಮಿನ ಬಗ್ಗೆ ತಿಳಿಯದ ಜನರಲ್ಲಿ ಭೀತಿ ಮೂಡಿಸಲು ಸೃಷ್ಟಿಸಲಾಗಿರುವ ಇತ್ತೀಚಿನ ಅಸ್ತ್ರವೇ ಭಯೋತ್ಪಾದನೆ.

# ಹಿಂಸೆ, ಭಯೋತ್ಪಾದನೆ ಮತ್ತು ನರಮೇಧ – ಪಾಶ್ಚಿಮಾತ್ಯ ನಾಯಕತ್ವ

ಭಯೋತ್ಪಾದಕರು ತಂತಮ್ಮ ಧರ್ಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಕ್ರೈಸ್ತರು, ಯಹೂದ್ಯರು, ಬೌದ್ಧರು, ಹಿಂದೂಗಳು ಮತ್ತು ಮುಸ್ಲಿಮರೇ ಆಗಿರಬೇಕೆಂದಿಲ್ಲ. ಆದರೆ, ಅವರ ಮನದಲ್ಲಿರುವ ದ್ವೇಷ, ಅವರು ಎಂತಹ ಸಾಂಸ್ಕೃತಿಕ ಪರಿಸರದಲ್ಲಿ ಬೆಳೆದು ಬಂದಿದ್ದಾರೆ ಎಂಬುದನ್ನು ಆಧರಿಸಿರುತ್ತದೆ. ಜತೆಗೆ ಅವರ ಜೀವನದೃಷ್ಟಿಯನ್ನು ರೂಪಿಸುವುದರಲ್ಲೂ ಅವರು ಬದುಕುವ ಸಮಾಜ ಪ್ರಮುಖ ಪಾತ್ರವಹಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಸಂಭವಿಸಿದ ಭಯೋತ್ಪಾದನೆ, ಹಿಂಸಾಚಾರ, ನರಮೇಧದ ಘಟನೆಗಳ ಬಗ್ಗೆ ಕಣ್ಣು ಹಾಯಿಸುವುದು ಸೂಕ್ತವೆನಿಸುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಈ ಪೈಕಿ ಹೆಚ್ಚಿನ ಘಟನೆಗಳಿಗೆ ಕಾರಣರಾದವರ ಧರ್ಮವನ್ನು ಅವಹೇಳನ ಮಾಡಲಾಗಿಲ್ಲ. ಇಸ್ಲಾಮ್ ಮತ್ತು ಮುಸ್ಲಿಮ್ ಎಂಬ ಲೇಬಲ್ ಅಂಟಿಸಿರುವ ಭಯೋತ್ಪಾದನಾ ಕೃತ್ಯಗಳನ್ನು ಮಾತ್ರ ಸಾರಾಸಗಟಾಗಿ ಧರ್ಮವನ್ನೇ ದೂಷಿಸಲು ಬಳಸಲಾಗುತ್ತದೆ.

ಏಳನೇ ಶತಮಾನದಲ್ಲಿ ಇಸ್ಲಾಮ್ ಕ್ರೈಸ್ತ ಜಗತ್ತಿಗೆ ಪ್ರವೇಶಿಸಿದ ನಂತರದಿಂದಲೂ ಅದನ್ನು ಹಿಂಸೆ ಮತ್ತು ಯುದ್ಧವನ್ನು ಬೆಂಬಲಿಸುವ ಧರ್ಮ ಎಂದು ತಪ್ಪಾಗಿ ಬಿಂಬಿಸಲಾಗಿದೆ. ಪಶ್ಚಿಮ ಏಷಿಯಾದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಹಿಂಸಾಚಾರಗಳು ಮತ್ತು 9/11ರ ಘಟನಾವಳಿಗಳ ಹಿನ್ನೆಲೆಯಲ್ಲಿ ಇಸ್ಲಾಮನ್ನು ಭಯೋತ್ಪಾದನೆಯನ್ನು ಬೆಂಬಲಿಸುವ ಒಂದು ಅಸಹಿಷ್ಣು ಧರ್ಮ ಎಂದು ಚಿತ್ರಿಸಲಾಗುತ್ತಿದೆ. ಇದು ಸತ್ಯವೇ? ಅಥವಾ ಇಲ್ಲಿ ಕೆಲವು ವಿಷಯಗಳನ್ನು ಮರೆಮಾಚಲಾಗಿದೆಯೇ?

ಭಯೋತ್ಪಾದನೆ ಮತ್ತು ಅದಕ್ಕೆ ಸಂಬಂಧಿಸಿದ ಕೆಲವು ಪ್ರವೃತ್ತಿಗಳ ಕುರಿತಂತೆ ಪಾಶ್ಚಿಮಾತ್ಯ ಜಗತ್ತಿನ ದ್ವಿಮುಖ ನೀತಿಗೆ ಅನೇಕ ಉದಾಹರಣೆಗಳನ್ನು ನೀಡಬಹುದು. ಮಾಧ್ಯಮದ ಕಣ್ಣಿನಿಂದಲೂ ಮರೆಯಾದ ಮತ್ತು ಜನಸಾಮಾನ್ಯರಿಗೆ ಗೊತ್ತಿಲ್ಲದ ಈ

ಕೆಳಗಿನ ಕೆಲವು ಸಂಗತಿಗಳನ್ನು ನಾವು ಗಮನಿಸೋಣ.

- ಕ್ಯಾಥೋಲಿಕ್ ಚರ್ಚ್‌ನ ಮುಖ್ಯಸ್ಥರಾಗಿದ್ದ ಪೋಪ್‌ರ ಸರ್ವಾಧಿಕಾರಿ ಧೋರಣೆಗೆ ಪ್ರತಿಕ್ರಿಯೆಯಾಗಿ ಮಾರ್ಟಿನ್ ಲೂಥರ್ ಕಿಂಗ್ ತನ್ನದೇ ಆದ ಪ್ರಾಟೆಸ್ಟಂಟ್ ಸಿದ್ಧಾಂತವನ್ನು ಸ್ಥಾಪಿಸುತ್ತಾರೆ. ಇದರ ಬೆನ್ನಲ್ಲೇ, ಕಿಂಗ್‌ನ ಬೆಂಬಲಿಗರನ್ನು ಕ್ರೂರ ಹಿಂಸೆಗೆ ಗುರಿಪಡಿಸಲಾಗುತ್ತದೆ. ಕೆಥೋಲಿಕರು ಮನೆಗಳನ್ನು ಸುಡುತ್ತಾರೆ, ಮಹಿಳೆಯರ ಮೇಲೆ ಅತ್ಯಾಚಾರ ಎಸಗುತ್ತಾರೆ. ಕೆಥೋಲಿಕರು ಭಯೋತ್ಪಾದನೆ ಎಸಗಿದರು ಎಂದು ಯಾರಾದರೂ ದೂಷಿಸಿದ್ದಾರಾ?

- ಒಬ್ಬ ಧರ್ಮಭಕ್ತ ಕ್ರಿಶ್ಚಿಯನ್ ಆಗಿದ್ದ ಜರ್ಮನಿಯ ನಾಝಿ ನಿರಂಕುಶಾಧಿಕಾರಿ ಹಿಟ್ಲರ್ ತಾನು 'ದೇವರ ಯೋಜನೆ'ಯನ್ನು ಕಾರ್ಯಗತಗೊಳಿಸುತ್ತಿರುವುದಾಗಿ ಹೇಳಿಕೊಂಡಿದ್ದ. ಆತ ನಡೆಸಿದ ಮಾರಣಹೋಮವು ಆರು ದಶಲಕ್ಷ ಯಹೂದಿಯರ ಸಾವಿಗೆ ಕಾರಣವಾಯಿತು. ಯಹೂದಿಯರ ಬಗ್ಗೆ ಕ್ರೈಸ್ತರಿಗೆ ಇದ್ದ ಪೂರ್ವಗ್ರಹ ಈ ಮೂಲಕ ಸ್ಫೋಟಗೊಂಡಿತು. ಆದರೆ, ಹಿಟ್ಲರನನ್ನು ಯಾರಾದರೂ ಕ್ರೈಸ್ತ ಭಯೋತ್ಪಾದಕ ಎಂದು ಕರೆಯುತ್ತಾರೆಯೇ? ಇಲ್ಲ.

- ಸ್ಟಾಲಿನ್, ಮುಸ್ಸೊಲಿನಿ, ಮಾವೋ ತ್ಸೆ ತುಂಗ್ ಅವರು ಅಸಂಖ್ಯ ಜನರನ್ನು ಕೊಂದರು. ಆದರೆ ಆ ಪೈಕಿ ಯಾರನ್ನೂ ಭಯೋತ್ಪಾದಕ ಎಂದು ಕರೆಯಲಾಗಿಲ್ಲ. ಯಾಕೆ?

- 20ನೇ ಶತತಮಾನದಲ್ಲಿ ಬೊಸ್ನಿಯಾದ ಮುಸ್ಲಿಮರನ್ನು ಸರ್ಬರು ಬರ್ಬರವಾಗಿ ಕೊಂದರು. ಆದರೆ ಯಾರೂ ಅವರಿಗೆ ಕ್ರೈಸ್ತ ಮೂಲಭೂತವಾದಿ ಭಯೋತ್ಪಾದಕರು ಎಂಬ ಹಣೆಪಟ್ಟಿ ಹಚ್ಚಿಲ್ಲ.

- ಬಂಗಾಳದ ಪುರುಲಿಯಾದಲ್ಲಿ ಬ್ರಿಟಿಷ್ ಗೂಂಡಾ ಪೀಟರ್ ಬ್ಲೀಚ್ ಮತ್ತು ಡೆನ್ಮಾರ್ಕ್‌ನ ಉಗ್ರಗಾಮಿ ಕಿಮ್ ಡೆವಿ ಶಸ್ತ್ರಾಸ್ತ್ರಗಳನ್ನು ಒಗೆದರು. ಭಾರತದ ಪೂರ್ವಗ್ರಹ ಪೀಡಿತ ಮಾಧ್ಯಮಗಳು ಅವರನ್ನು ಬ್ರಿಟಿಷ್ ಅಥವಾ ಪಾಶ್ಚಿಮಾತ್ಯದ ಭಯೋತ್ಪಾದಕರು ಎಂದು ಕರೆಯಲಿಲ್ಲ. ಅಷ್ಟೇ ಅಲ್ಲ, ಭಾರತ ಸರ್ಕಾರ ಏಳು ವರ್ಷ ಶಿಕ್ಷೆಗೆ ಗುರಿಯಾಗಿದ್ದ ಪೀಟರ್ ಬ್ಲೀಚ್‌ನನ್ನು ಅವಧಿಗೆ ಮುಂಚೆಯೇ ಬಿಡುಗಡೆ ಮಾಡಿತು.

- 1984ರಲ್ಲಿ ಅಮೆರಿಕದ ಬಹುರಾಷ್ಟ್ರೀಯ ಸಂಸ್ಥೆ ಯೂನಿಯನ್

ಕಾರ್ಬೈಡ್ (ಈಗ ಡೌಜೋನ್ಸ್ ಇದನ್ನು ಖರೀದಿಸಿದೆ)ನ ಸ್ಥಾವರದಿಂದ ವಿಷಾನಿಲ ಸೋರಿಕೆಯಾಗಿ ಭೋಪಾಲ್‌ನಲ್ಲಿ 2,500 ಜನರು ಮೃತಪಟ್ಟರು. ಅಮೆರಿಕನರು ಯೂನಿಯನ್ ಕಾರ್ಬೈಡ್‌ನ ಮುಖ್ಯಸ್ಥ ಆ್ಯಂಡರ್‌ಸನ್ ಅವರನ್ನು ಭಾರತಕ್ಕೆ ವಿಚಾರಣೆಗೆ ಒಪ್ಪಿಸಲು ನಿರಾಕರಿಸಿದರು. ಇದಕ್ಕೆ ತದ್ವಿರುದ್ಧವಾಗಿ ಲಾಕರ್‌ಬಿ ಬಾಂಬಿಂಗ್ ಪ್ರಕರಣದ ತನಿಖೆ ತನ್ನದೇ ನ್ಯಾಯಾಲಯದಲ್ಲಿ ನಡೆಯಬೇಕು ಎಂದು ಅಮೆರಿಕ ಪ್ರತಿಪಾದಿಸಿತು. ಯಾಕೆ ಈ ಇಬ್ಬಗೆ ನೀತಿ?

• ಶಸ್ತ್ರರಹಿತ ಪ್ಯಾಲೆಸ್ತೈನ್ ಜನತೆಯ ಮೇಲೆ ಇಸ್ರೇಲ್ ಊಹಿಸಲಾಗದ ಹಿಂಸೆ ಎಸಗುತ್ತಿದೆ. ಮೂರು ಭಾರಿ ಅವರ ನೆಲವನ್ನು ವಶಪಡಿಸಿಕೊಂಡಿದೆ. ತನ್ನದೇ ಗಡಿಯೊಳಗೆ ಪ್ಯಾಲೆಸ್ತೀನಿಯರನ್ನು ಕೂಡಿಹಾಕಲು ಗೋಡೆಯನ್ನೂ ನಿರ್ಮಾಣ ಮಾಡಿದೆ. ನೀರಿನ ಪೂರೈಕೆಯನ್ನು ತಡೆಹಿಡಿಯಲಾಗಿದೆ. ಆದರೂ, ಇಸ್ರೇಲನ್ನು ಪಶ್ಚಿಮ ಏಷ್ಯಾದ ಏಕೈಕ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಹೊಗಳಲಾಗುತ್ತಿದೆ. ಹಿಂದೊಮ್ಮೆ ಬ್ರಿಟಿಷ್ ಸರಕಾರದಿಂದ ಭಯೋತ್ಪಾದಕ ಎಂದು ಬಿಂಬಿತರಾಗಿದ್ದ ಇಸ್ರೇಲ್‌ನ ಪ್ರಧಾನಿ ಮೆನಚೆಮ್ ಬೆಗಿನ್ ಅವರಿಗೆ ನೋಬೆಲ್ ಶಾಂತಿ ಪ್ರಶಸ್ತಿಯನ್ನೂ ನೀಡಲಾಗಿದೆ. 'ಯಹೂದಿ ಭಯೋತ್ಪಾದಕರು' ಎಂಬ ಮಾತು ಮಾತ್ರ ಎಲ್ಲೂ ಕೇಳಿಸುತ್ತಿಲ್ಲ.

• ಐರಿಷ್ ರಿಪಬ್ಲಿಕನ್ ಆರ್ಮಿ (ಐಆರ್‌ಎ), ಬ್ರಿಟಿಷ್ ನಾಗರಿಕರ ಮೇಲೆ ಬಾಂಬ್ ಎಸೆದು ಅಸಂಖ್ಯ ಜನರನ್ನು ಕೊಲೆ ಮಾಡಿತು. ಆದರೆ, ಎಂದಿಗೂ ಅವರನ್ನು ಐಆರ್‌ಎ ಭಯೋತ್ಪಾದಕರು ಎಂದು ಬಣ್ಣಿಸಲಾಗಿಲ್ಲ. ಉತ್ತರ ಐರ್ಲೆಂಡ್ ಕ್ಯಾಥೋಲಿಕ್ ಧರ್ಮದ ಆಧಾರದಲ್ಲಿ ಪ್ರತ್ಯೇಕತೆ ಬಯಸುತ್ತಿದೆ ಎಂದು ಗೊತ್ತಿದ್ದೂ ಐಆರ್‌ಎಗೆ ಭಯೋತ್ಪಾದಕ ಪಟ್ಟ ಮಾತ್ರ ನೀಡಲಾಗಿಲ್ಲ. ಇದು ಯಾಕೆ ಹೀಗೆ ಎಂಬುದು ಮಾತ್ರ ಗೊತ್ತಿಲ್ಲ.

• ಮಧ್ಯ ಮತ್ತು ದಕ್ಷಿಣ ಅಮೆರಿಕದಲ್ಲಿ ಕೊಲೆ ಅಥವಾ ಅಪಹರಣಕ್ಕೆ ಒಳಗಾದ ಅಮೆರಿಕನರ ಸಂಖ್ಯೆಗೆ ಹೋಲಿಸಿದರೆ ಮುಸ್ಲಿಮ್ ರಾಷ್ಟ್ರಗಳಲ್ಲಿ ಹತರಾದ ಅಮೆರಿಕನ್ನರ ಸಂಖ್ಯ ಕಡಿಮೆ.

( www.Nationmaster.com ಅಂಕಿ ಅಂಶದ ವರದಿ).

• ಮುಸ್ಲಿಮರು ಬಹು ಸಂಖ್ಯೆಯಲ್ಲಿ ವಾಸವಾಗಿರುವ ಪ್ರದೇಶಗಳಲ್ಲಿ (1.7 ಶತಕೋಟಿ ಜನರು) ಆಗಿರುವ ಹತ್ಯೆಯ ಪ್ರಕರಣಗಳು ಅಮೆರಿಕ ಒಂದರಲ್ಲೇ

ನಡೆಯುವ ಹತ್ಯೆಗಳಿಗಿಂತ ತೀರಾ ಕಡಿಮೆ. ಅಮೆರಿಕದ ನಗರಗಳಲ್ಲಿ ಪ್ರತಿ ರಾತ್ರಿ ಕ್ಷುಲ್ಲಕ ಕಾರಣಗಳಿಗಾಗಿ ಕೊಲೆ ನಡೆಯುತ್ತದೆ. (www.nationmaster.com ಅಂಕಿ ಅಂಶದ ವರದಿ).

- ನಾಗಸಾಕಿ ಮತ್ತು ಹಿರೋಷಿಮಾದ ಮೇಲೆ ನಡೆದ ಅಣು ಬಾಂಬ್ ದಾಳಿಯಲ್ಲಿ 2,00,000 ಅಮಾಯಕ ಜನರ ಸಾವಿಗೀಡಾದುದಕ್ಕೆ ಅಮೆರಿಕನರು ಹೊಣೆ ವಹಿಸಬೇಡವೇ? ಯುದ್ಧಗಳು ಎರಡು ಸೇನೆಗಳ ನಡುವೆ ಮಾತ್ರ ನಡೆಯಬೇಕು ಮತ್ತು ಅಮಾಯಕ ನಾಗರಿಕರು ಗುರಿಯಾಗಬಾರದು ಎಂದು ಅಮೆರಿಕ ಸದಾ ಪ್ರತಿಪಾದಿಸುತ್ತಿರುತ್ತದೆ. ಆದರೆ ಜಪಾನ್‌ನ ಆತ್ಮಸ್ಥೈರ್ಯವನ್ನು ಕುಂದಿಸಲು ಮತ್ತು ಅವರನ್ನು ಮಣಿಸಲು ಇಷ್ಟು ದೊಡ್ಡ ಸಂಖ್ಯೆಯ ಜನರನ್ನು ಅಮೆರಿಕ ಕೊಂದು ಹಾಕಲಿಲ್ಲವೇ?

ತಮ್ಮದೇ ಧರ್ಮದ ಅಥವಾ ದೇಶದ ನಿರ್ದಿಷ್ಟ ಗುಂಪೊಂದು ಎಸಗುವ ಕೃತ್ಯಗಳಿಗೆ ತಮ್ಮನ್ನು ಹೊಣೆಯಾಗಿಸಬಾರದೆಂದು ಪ್ರತಿಯೊಂದು ಧರ್ಮದ ಅನುಯಾಯಿಗಳು ಮತ್ತು ದೇಶದ ನಾಗರಿಕರು ನಿರೀಕ್ಷಿಸುತ್ತಾರೆ. ಇದು ಸಹಜವೂ ನ್ಯಾಯೋಚಿತವೂ ಹೌದು. ಉದಾಹರಣೆಗೆ, ಹಿಟ್ಲರ್ ಎಸಗಿದ ಕೃತ್ಯಗಳ ಆಧಾರದಲ್ಲಿ ಜರ್ಮನರನ್ನು ಅಳೆಯಲಾಗದು. ಅದೇ ರೀತಿ ಮಿಲಿಯಗಟ್ಟಲೆ ಅಮಾಯಕರ ಮಾರಣಹೋಮಕ್ಕೆ ಕಾರಣವಾದ ಅಮೆರಿಕದ ಕೃತ್ಯಗಳಿಗೆ ಅಲ್ಲಿನ ಜನತೆಯನ್ನು ಹೊಣೆಯಾಗಿಸಲು ಸಾಧ್ಯವಿಲ್ಲ.

ಅದೇ ರೀತಿಯಲ್ಲಿ, ಬಹುತೇಕ ಕ್ರೈಸ್ತರಿಗೆ ಕ್ರುಸೇಡ್ ಯುದ್ಧಗಳ ಅಥವಾ 'ಸ್ಪೈನ್‌ನ ವಿಚಾರಣೆ' ಸಂದರ್ಭದಲ್ಲಿ ನಡೆದ ಬರ್ಬರ ಕೃತ್ಯಗಳ ಬಗ್ಗೆ ಖೇದವಿದೆ. ಪ್ರಾಯಶಃ ಮುಹಮ್ಮದ್ ಅಲಿಯೊಡನೆ, "ನೀನು ಕೂಡಾ ಉಸಾಮಾ ಬಿನ್ ಲಾದನ್ ಅನುಸರಿಸುವ ಧರ್ಮಕ್ಕೆ ಸೇರಿದವನಲ್ಲವೇ?" ಎಂದು ಪ್ರಶ್ನಿಸಿದಾಗ ಆ ಜಗದ್ವಿಖ್ಯಾತ ಬಾಕ್ಸರ್ ನೀಡಿದ ಉತ್ತರವೂ ಇದೇ ತರ್ಕವನ್ನು ಆಧರಿಸಿತ್ತು. "ನೀನು ಹಿಟ್ಲರ್‌ನ ಧರ್ಮಕ್ಕೆ ಸೇರಿದವನು ಎಂದರೆ ನಿನಗೆ ಏನನಿಸುತ್ತದೆ?" ಎಂದು ಉತ್ತರಿಸುವ ಮೂಲಕ ಅಲಿ, ತನ್ನನ್ನು ಪ್ರಶ್ನಿಸಿದ ವರದಿಗಾರನನ್ನು ತಬ್ಬಿಬ್ಬುಗೊಳಿಸಿದ್ದರು.

'ಗಾಜಿನ ಮನೆಯಲ್ಲಿ ಇರುವವವರು ಇನ್ನೊಬ್ಬರ ಮೇಲೆ ಕಲ್ಲು ಎಸೆಯಬಾರದು' ಎಂಬ ನೀತಿಯನ್ನು ಬಹುತೇಕ ಧರ್ಮಗಳು ಮತ್ತು ಸಂಸ್ಕೃತಿಗಳು ಒಪ್ಪುತ್ತವೆ. ಈಗ ನೀವೇ ಯೋಚನೆ ಮಾಡಿ. ನಿಮ್ಮದೇ ಮನೆಯಲ್ಲಿರುವ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೇ ನೀವು ಮುಸ್ಲಿಮರ ಮೇಲೆ ಕಲ್ಲು ಎಸೆಯುತ್ತಿದ್ದೀರಾ?

ಈಗ ಪಾಶ್ಚಿಮಾತ್ಯದ ಮೂಲಗಳನ್ನೇ ಆಧರಿಸಿ ವಿಶ್ವದಲ್ಲಿನ ಭಯೋತ್ಪಾದನಾ ಕೃತ್ಯಗಳ ಮೇಲೆ ಬೆಳಕು ಚೆಲ್ಲೋಣ. ಈ ಮೂಲಕ ಮುಸ್ಲಿಮರು ಅಥವಾ ಮುಸ್ಲಿಮ್ ಜಗತ್ತಿನ ಪಾತ್ರ ಏನೆಂಬುದನ್ನು ಪತ್ತೆ ಹಚ್ಚೋಣ.

ಅಮೆರಿಕದ ವಿದೇಶಾಂಗ ಇಲಾಖೆಯ ವರದಿ 'ಪ್ಯಾಟರ್ನ್ಸ್ ಆಫ್ ಗ್ಲೋಬಲ್ ಟೆರರಿಸಂ 1997' ವರದಿಯು 1992 ರಿಂದ 1997ರ ವರೆಗೆ ನಡೆದ ಭಯೋತ್ಪಾದನಾ ಕೃತ್ಯಗಳ ದಾಖಲೆಗಳನ್ನು ಒಳಗೊಂಡಿದೆ. ಈ ವರದಿಯ ಪ್ರಕಾರ ಅತ್ಯಂತ ಹೆಚ್ಚಿನ ಭಯೋತ್ಪಾದನಾ ಕೃತ್ಯಗಳು ಸಂಭವಿಸಿರುವುದು ಯುರೋಪ್‌ನಲ್ಲಿ (831). ನಂತರದ ಸ್ಥಾನದಲ್ಲಿ ಲ್ಯಾಟಿನ್ ಅಮೆರಿಕ (602), ಮತ್ತು ಪಶ್ಚಿಮ ಏಷಿಯಾ (422) ಇದೆ. ಇದೇ ಅವಧಿಯಲ್ಲಿ ಯುರೋಪ್‌ನಲ್ಲಿ ಸಂಭವಿಸಿದ ಘಟನೆಗಳಲ್ಲಿ 7,621 ಜನರು ಹತರಾದರೆ, ಪಶ್ಚಿಮ ಏಷ್ಯಾದಲ್ಲಿ ಮೃತಪಟ್ಟವರ ಸಂಖ್ಯೆ 2,692. ಇದನ್ನೇ ಆಧರಿಸಿ ವಾಷಿಂಗ್ಟನ್‌ನ ಎಡ್ಮಂಡ್ ಎ. ವಾಲ್ಷ್ ಸ್ಕೂಲ್ ಆಫ್ ಇಂಟರ್ ನ್ಯಾಷನಲ್ ಅಫೇರ್ಸ್‌ನ ರಾಲ್ಫ್ ಬ್ರೈಬಾಂತಿ ಹೀಗೆ ಬರೆದಿದ್ದಾರೆ: "ಬೌದ್ಧ ಧರ್ಮಕ್ಕೆ ಸೇರಿದ ಆಮ್ ಶಿನ್ರಿಕ್ಯೋ ಅವರು ವಿಷಾನಿಲ ಬಳಕೆ ಮಾಡಿದ್ದು; ಅಮೆರಿಕನ್ ಕ್ರೈಸ್ತ ಒಕ್ಲಾಹೋಮಾದ ಮೇಲೆ ಬಾಂಬ್ ಹಾಕಿರುವುದು, ಮುಸ್ಲಿಮರ ಮೇಲೆ ಭಾರತೀಯ ಹಿಂದೂಗಳು (ಬಾಬರಿ ಮಸೀದಿ ಮತ್ತು ನಂತರದ ಬೆಳವಣಿಗೆಗಳನ್ನು ನೆನೆಪಿಸಿಕೊಳ್ಳಬೇಕು) ಹಾಗೂ ಬೌದ್ಧರು ನಡೆಸುತ್ತಿರುವ ಹಿಂಸಾಚಾರ, ಬೋಸ್ನಿಯಾ, ಕೊಸೊವೋದಲ್ಲಿ ಕ್ರೈಸ್ತ ಮೂಲಭೂತವಾದಿಗಳಾದ ಸೆರ್ಬರು ನಡೆಸಿದ ಜನಾಂಗ ನಿರ್ಮೂಲನ ಕೃತ್ಯ, ಮಾದಕ ವಸ್ತುವಿಗಾಗಿ ಕ್ಯಾಥೋಲಿಕ್ ಗುಂಪುಗಳು ಲ್ಯಾಟಿನ್ ಅಮೆರಿಕದಲ್ಲಿ ನಡೆಸಿದ ಹಿಂಸಾ ಕೃತ್ಯ, ಹಿಂದೂ ತಮಿಳರು ಸಿಂಹಳೀಯ ಬೌದ್ಧ ಸರ್ಕಾರದ ವಿರುದ್ಧ ನಡೆಸುತ್ತಿರುವ ಭಯೋತ್ಪಾದನೆ, ಇವೆಲ್ಲವೂ ಭಯೋತ್ಪಾದನೆಯ ಜಾಗತಿಕ ಮುಖವನ್ನು ಪರಿಚಯಿಸುತ್ತಿದ್ದು, ಅದರ ಹಿಂದೆ ಎಲ್ಲ ಸಾಂಸ್ಕೃತಿಕ, ಧಾರ್ಮಿಕ ಗುಂಪುಗಳು ಒಂದಿಲ್ಲೊಂದು ಬಗೆಯಲ್ಲಿ ಸಕ್ರಿಯವಾಗಿವೆ ಎಂಬುದನ್ನೂ ತೋರಿಸುತ್ತದೆ."

ಇನ್ನು ಅಮೆರಿಕದಲ್ಲಿ ನಡೆದ ಭಯೋತ್ಪಾದನಾ ಕೃತ್ಯಗಳನ್ನು ಎಫ್‌ಬಿಐ ವರದಿಯ ಹಿನ್ನೆಲೆಯಲ್ಲಿ (fbi.gov) ಗಮನಿಸೋಣ.

1. ಎಫ್‌ಬಿಐ ದಾಖಲೆಗಳ ಅನುಸಾರ (ಇದನ್ನು fbi.gov ಪಡೆಯಬಹುದು). ಭಯೋತ್ಪಾದಕರ ಪೈಕಿ ಶೇ.6 ಮಂದಿ ಮಾತ್ರ ಮುಸ್ಲಿಮರು. ಅಮೆರಿಕದಲ್ಲಿ ಸಂಭವಿಸಿದ ಉಳಿದ ಭಯೋತ್ಪಾದಕ ಕೃತ್ಯಗಳಲ್ಲಿ ಇತರ ಗುಂಪುಗಳ ಪಾತ್ರ ಹೀಗಿದೆ: ಲ್ಯಾಟಿನೋಗಳು (ಶೇ.42), ಉಗ್ರ ಎಡಪಂಥೀಯ ಗುಂಪುಗಳು (ಶೇ.24), ಯಹೂದಿ ಉಗ್ರರು (ಶೇ.7), ಕಮ್ಯುನಿಸ್ಟರು (ಶೇ.5) ಮತ್ತು ಇತರ ಭಯೋತ್ಪನಾ ಗುಂಪುಗಳು (ಶೇ.16).

2. ಒಂದು ವೇಳೆ ಭಯೋತ್ಪಾದಕರ ಪೈಕಿ ಶೇ. 6 ಮಂದಿ ಮಾತ್ರ ಮುಸ್ಲಿಮರು ಎಂದಾದರೆ ಪೂರ್ವಗ್ರಹ ಪೀಡಿತ ಮಾಧ್ಯಮಗಳು ಇಸ್ಲಾಮೀ ತೀವ್ರವಾದಿಗಳನ್ನು ಮಾತ್ರ ಯಾಕೆ ಗುರಿಯಾಗಿಸಿವೆ? ನಿಜವಾಗಿ ಈ ರೀತಿ ಬಿಂಬಿಸುವುದರಲ್ಲಿ ಅರ್ಥವಿಲ್ಲ. ಅಷ್ಟೇ ಅಲ್ಲ, ಇದು ವಂಚನೆ ಮತ್ತು ಜನರನ್ನು ಹಾದಿ ತಪ್ಪಿಸುವ ತಂತ್ರ.

3. ಇನ್ನು, ನಾವು ಯುರೋಪ್‌ನಲ್ಲಿ ಭಯೋತ್ಪಾದನೆಗೆ ಸಂಬಂಧಿಸಿದ ಅಂಕಿ ಅಂಶಗಳತ್ತ ಕಣ್ಣಾಡಿಸಿದರೆ, ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಜುಲೈ 29, 2011ರಲ್ಲಿ ಪ್ರಕಟವಾದ 'ಯುರೋಪೋಲ್' ವರದಿಯ ಪ್ರಕಾರ 'ಯುರೋಪ್‌ನಲ್ಲಿ ನಡೆದ ಬಹುತೇಕ ಭಯೋತ್ಪಾದಕ ಕೃತ್ಯಗಳ ಹಿಂದೆ ಇರುವುದು ಪ್ರತ್ಯೇಕತಾವಾದಿಗಳೇ ವಿನಾ ಇಸ್ಲಾಮಿಸ್ಟ್‌ಗಳಲ್ಲ.'

## ಇಸ್ಲಾಮ್ ಆತ್ಮಹತ್ಯಾ ದಾಳಿಯನ್ನು ನಿಷೇಧಿಸುತ್ತದೆ

ಆತ್ಮಹತ್ಯಾ ದಾಳಿಗಳಿಗೂ ವಿದೇಶಿ ಶಕ್ತಿಗಳು ಸ್ವತಂತ್ರ ದೇಶಗಳನ್ನು ಆಕ್ರಮಿಸುವುದಕ್ಕೂ ಸಂಬಂಧವಿದೆ ಎಂದು ಸಂಶೋಧನಾ ವರದಿಗಳು ಹೇಳುತ್ತವೆ. ಮೊದಲು ಆತ್ಮಹತ್ಯಾ ದಾಳಿ ಎಂಬುದರ ವ್ಯಾಖ್ಯಾನವನ್ನು ನೋಡೋಣ.

ಆತ್ಮಹತ್ಯಾ ದಾಳಿ ಎಂದರೆ ಒಬ್ಬ ನಿರ್ದಿಷ್ಟ ಪ್ರದೇಶದಲ್ಲಿ ಉದ್ದೇಶ ಪೂರ್ವಕವಾಗಿ ಸ್ಫೋಟಕಗಳನ್ನು ಒಯ್ದು, ಅದನ್ನು ಸಿಡಿಸಿ, ಸ್ವತಃ ತಾನೂ ಸಾವಿಗೀಡಾಗುವುದು. ಈ ತಂತ್ರವನ್ನು ಪ್ರಸ್ತುತ ಅಫ್ಘಾನಿಸ್ತಾನ, ಪಾಕಿಸ್ತಾನ, ಇರಾಕ್, ಚೆಚನ್ಯಾ ಮತ್ತು ಸೋಮಾಲಿಯಾದಲ್ಲಿ ಇಸ್ಲಾಮಿನ ಹೆಸರಿನಲ್ಲಿ ಹೋರಾಟ ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುವ ವಿವಿಧ ಗುಂಪುಗಳು ಪ್ರಯೋಗಿಸುತ್ತಿವೆ.

ದುರದೃಷ್ಟವಶಾತ್, ಈ ದಾಳಿಯು ಕೇವಲ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿಲ್ಲ, ನಾಗರಿಕ ನೆಲೆಗಳನ್ನೂ ತನ್ನ ಗುರಿಯಾಗಿಸಿದೆ.

ಇದು ವಿದೇಶಿ ಆಕ್ರಮಣವನ್ನು ಎದುರಿಸಲು ಮುಸ್ಲಿಮ್ ಉಗ್ರವಾದಿಗಳು ಬಳಸುತ್ತಿರುವ ಅತ್ಯಂತ ಜನಪ್ರಿಯ ತಂತ್ರ ಎಂಬ ಭಾವನೆಯೂ ನಮ್ಮಲ್ಲಿ ಅನೇಕರಿಗಿದೆ. ಶ್ರೀಲಂಕಾದಲ್ಲಿ ತಮಿಳು ಟೈಗರ್‌ಗಳು (ಇವರು ಹಿಂದೂಗಳಾಗಿದ್ದರೂ ಇವರ ಕೃತ್ಯಗಳಿಗೆ ಧರ್ಮದ ಲೇಪ ಇಲ್ಲ) 1980ರಲ್ಲಿ ಇಂಥ ಪ್ರಯತ್ನವನ್ನು ಮೊದಲಿಗೆ ಮಾಡಿದರು. ಆ ಕಾಲದಲ್ಲಿ ಅದು ಅತ್ಯಂತ ದೊಡ್ಡ ಪ್ರಮಾಣದ ಆತ್ಮಹತ್ಯಾ ಕಾರ್ಯಾಚರಣೆ ಆಗಿತ್ತು. ತದನಂತರ, ಪಶ್ಚಿಮ ಏಷಿಯಾದಲ್ಲಿ ಆತ್ಮಹತ್ಯಾ ದಾಳಿಗಳ ಸಂಖ್ಯೆ ಹೆಚ್ಚಿದವು. ಇರಾಕ್ ಮತ್ತು ಅಫ್ಘಾನಿಸ್ತಾನದ ಮೇಲೆ ನಡೆದ ಅಮೆರಿಕ ಆಕ್ರಮಣದ ಬಳಿಕ ಈ ಸಂಖ್ಯೆಯಲ್ಲಿ ಮತ್ತಷ್ಟು ಹೆಚ್ಚಳವಾಗಿದೆ.

ಎಲ್ಲರೂ ಗೌರವಿಸುವ ಅಮೆರಿಕದ ರಾಜಕೀಯ ವಿಜ್ಞಾನಿ ರಾಬರ್ಟ್ ಪೆಪ್ ಅವರು 'ಡೈಯಿಂಗ್ ಟು ವಿನ್' ಹೆಸರಿನಲ್ಲಿ ಒಂದು ಸಮಗ್ರ ಕೃತಿ ರಚಿಸಿದ್ದಾರೆ. ಇವರು, ಆತ್ಮಹತ್ಯಾ ಭಯೋತ್ಪಾದನೆಗೆ ಸಂಬಂಧಿಸಿದ ಷಿಕಾಗೋ ಯೋಜನೆಯ ನೇತೃತ್ವ ವಹಿಸಿದ್ದರು. ಅವರು ಹೇಳುತ್ತಾರೆ: "ಆತ್ಮಹತ್ಯಾ ಭಯೋತ್ಪಾದಕತೆಯು ವಿಶ್ವಾದ್ಯಾಂತ ಹೆಚ್ಚುತ್ತಿದೆ. ಆದರೆ ಯಾಕೆ ಹೀಗಾಗಿದೆ ಎಂಬುದರ ಬಗ್ಗೆ ವ್ಯಾಪಕ ಗೊಂದಲವಿದೆ.

ಸೆಪ್ಟೆಂಬರ್ 11, 2001ರ ಘಟನೆಯನ್ನು ಮುಸ್ಲಿಮ್ ಭಯೋತ್ಪಾದಕರು ಧಾರ್ಮಿಕ ಉದ್ದೇಶಗಳನ್ನು ಇಟ್ಟುಕೊಂಡು ಮಾಡಿದರೂ, ಇಸ್ಲಾಮೀ ಮೂಲಭೂತವಾದವೇ ಇದಕ್ಕೆ ಮುಖ್ಯ ಪ್ರೇರಣೆ ಎಂಬುದು ಎದ್ದು ಕಾಣುತ್ತದೆ. ಹೀಗಾಗಿ ಮುಸ್ಲಿಮ್ ಸಮಾಜವನ್ನು ಆಮೂಲಾಗ್ರ ಪರಿವರ್ತಿಸುವ ಮೂಲಕ 9/11ರ ಘಟನೆ ಮರುಕಳಿಸುವುದನ್ನು ತಡೆಯಬಹುದು ಎಂಬ ನಂಬಿಕೆ ಬಲಗೊಂಡಿದೆ. ಇತ್ತೀಚೆಗೆ ಇರಾಕ್ ಮೇಲೆ ನಡೆದ ದಾಳಿಗೆ ಅಮೆರಿಕದಲ್ಲಿ ವ್ಯಾಪಕ ನಾಗರಿಕ ಬೆಂಬಲ ದೊರೆಯಲು ಇದೇ ಕಾರಣ."

"ಆದರೆ, ಆತ್ಮಹತ್ಯಾ ಭಯೋತ್ಪಾದಕ ದಾಳಿಗಳಿಗೂ ಇಸ್ಲಾಮೀ ಮೂಲಭೂತವಾದಕ್ಕೂ ಸಂಬಂಧ ಕಲ್ಪಿಸುವುದು ನಮ್ಮನ್ನು ದಾರಿಗೆಡಿಸಬಹುದು. ಇವು ಅಮೆರಿಕದ ಪರಿಸ್ಥಿತಿಯನ್ನು ಇನ್ನಷ್ಟು ಶೋಚನೀಯಗೊಳಿಸುವಂತಹ ಆಂತರಿಕ ಮತ್ತು ವಿದೇಶ ನೀತಿಗಳಿಗೆ ದಾರಿ ಮಾಡಿಕೊಡಬಹುದು."

ಪ್ರೊ. ಪೆಪೆ ಅವರು 1980ರಿಂದ 2003ರ ನಡುವೆ ನಡೆದ ಒಟ್ಟು 315 ಭಯೋತ್ಪಾದಕ ಬಾಂಬ್ ದಾಳಿಗಳ ಅಂಕಿ ಅಂಶಗಳನ್ನು ಸಂಗ್ರಹಿಸಿದ್ದಾರೆ. ಇದು, ಇತರರನ್ನು ಕೊಲ್ಲುವ ಪ್ರಕ್ರಿಯೆಯಲ್ಲಿ ಭಯೋತ್ಪಾದಕ ತಾನೂ ಮೃತಪಟ್ಟಂತಹ ಎಲ್ಲ ಪ್ರಕರಣಗಳ ವಿವರವನ್ನು ಒಳಗೊಂಡಿದೆ. ಆದರೆ ಈ ಅಂಕಿ ಅಂಶಗಳಲ್ಲಿ ಸರ್ಕಾರಗಳೇ ಮಾನ್ಯ ಮಾಡಿದಂತಹ ದಾಳಿಗಳನ್ನು ಉದಾಹರಣೆಗೆ ಉತ್ತರ ಕೊರಿಯಾ ದಕ್ಷಿಣ ಕೊರಿಯಾದ ಮೇಲೆ ನಡೆಸಿದ ದಾಳಿ ಸೇರಿಲ್ಲ. ಈ ಅಂಕಿ ಅಂಶಗಳು ಜಾಗತಿಕವಾಗಿ ಎಲ್ಲ ಕಡೆ ನಡೆದ ಘಟನೆಗಳನ್ನು ಒಳಗೊಂಡಿವೆ. ಇಂಗ್ಲಿಷ್ ಅಲ್ಲದೆ, ಅರಬಿ, ಹಿಬ್ರ್ಯೂ, ರಷ್ಯನ್, ತಮಿಳು ಭಾಷೆಯ ಮುದ್ರಣ ಮತ್ತು ಅಂತರ್ಜಾಲ ಮಾಧ್ಯಮಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಆಧರಿಸಿದೆ. ಈ ಅಂಕಿ ಅಂಶಗಳು ಆತ್ಮಹತ್ಯಾ ಭಯೋತ್ಪಾದಕ ದಾಳಿಗಳಿಗೂ ಇಸ್ಲಾಮಿಕ್ ಮೂಲಭೂತವಾದಕ್ಕೂ ಅಥವಾ ಇತರ ಯಾವುದೇ ಧರ್ಮಕ್ಕೂ ಇರುವ ಸಂಬಂಧ ತೀರಾ ತೆಳುವಾದದ್ದು ಎನ್ನುತ್ತವೆ. ಶ್ರೀಲಂಕಾದ ತಮಿಳು ಟೈಗರ್‌ಗಳು ಆತ್ಮಹತ್ಯಾ ಭಯೋತ್ಪಾದನೆ ನಡೆಸುವುದರಲ್ಲಿ ಮುಂಚೂಣಿಯಲ್ಲಿದ್ದಾರೆ. ಇವರು ಮಾರ್ಕ್ಸಿಸ್ಟ್–ಲೆನಿನಿಸ್ಟ್ ಗುಂಪಿಗೆ ಸೇರಿದವರಾಗಿದ್ದು, ಇವರ ಕುಟುಂಬಗಳು ಹಿಂದೂ ಹಿನ್ನೆಲೆಯನ್ನು ಹೊಂದಿವೆ. ಆದರೆ ಇವರು ಧರ್ಮವನ್ನು ನಂಬುವವರಲ್ಲ.

ಅಮೆರಿಕ ಸರ್ಕಾರದ ಅಂಕಿ ಅಂಶಗಳ ಪ್ರಕಾರ 2007ರಲ್ಲಿ ಹೆಚ್ಚಿನ ಸಂಖ್ಯೆಯ ಆತ್ಮಹತ್ಯಾ ದಾಳಿಗಳು ಸಂಭವಿಸಿವೆ. ಒಟ್ಟು 658 ದಾಳಿಗಳ ಪೈಕಿ 542 ಘಟನೆಗಳು ಅಮೆರಿಕದ ಆಕ್ರಮಣಕ್ಕೊಳಗಾದ ಅಫ್ಘಾನಿಸ್ತಾನ ಮತ್ತು ಇರಾಕ್‌ನಲ್ಲಿ ನಡೆದಿವೆ. ಇದು, ಕಳೆದ 25 ವರ್ಷಗಳ ಅವಧಿಯಲ್ಲಿ ನಡೆದ ಘಟನೆಗಳ ಸಂಖ್ಯೆಗಿಂತ ಎರಡು ಪಟ್ಟು ಹೆಚ್ಚು. ಒಟ್ಟು ದಾಳಿಗಳ ಐದನೇ ನಾಲ್ಕರಷ್ಟು ಕಳೆದ ಏಳು ವರ್ಷದ ಅವಧಿಯಲ್ಲಿ ನಡೆದಿವೆ ಮತ್ತು

ಇದೀಗ ಈ ಪ್ರವೃತ್ತಿ ವಿಶ್ವಾದ್ಯಂತ ಹಬ್ಬುತ್ತಿದೆ. ವಾಷಿಂಗ್ಟನ್ ಪೋಸ್ಟ್‌ನಲ್ಲಿ ಈ ಬಗ್ಗೆ ಬಂದಿರುವ ಉಲ್ಲೇಖ ಗಮನಿಸಿ: '1983ರ ನಂತರ ಅರ್ಜೆಂಟೀನಾದಿಂದ ಅಲ್ಜೀರಿಯಾ, ಕೋವೇಷಿಯಾದಿಂದ ಚೀನಾ, ಭಾರತದಿಂದ ಇಂಡೋನೇಷಿಯಾದವರೆಗೆ 50ಕ್ಕೂ ಹೆಚ್ಚು ಗುಂಪುಗಳು ಟ್ರಕ್ ಬಾಂಬ್, ಕಾರ್‌ಬಾಂಬ್, ಸ್ಫೋಟಕ ಬೆಲ್ಟ್, ಪ್ಯಾಂಟ್, ಆಟಿಕೆಗಳು, ಮೋಟಾರ್ ಸೈಕಲ್‌ಗಳು, ಬೈಕ್‌ಗಳು, ಬೋಟ್‌ಗಳು, ಚೀಲಗಳು, ನಕಲಿ ಗರ್ಭಿಣಿಯ ಹೊಟ್ಟೆ.. ಹೀಗೆ ವಿವಿಧ ಬಗೆಯ ಬಾಂಬ್‌ಗಳನ್ನು ಸ್ಫೋಟಿಸಿವೆ. ಕಳೆದ 25 ವರ್ಷದಲ್ಲಿ ನಡೆದ 1,840 ಘಟನೆಗಳ ಪೈಕಿ ಶೇ. 86ಕ್ಕೂ ಹೆಚ್ಚು ಘಟನೆಗಳು ಸಂಭವಿಸಿದ್ದು 2001ರ ನಂತರ. ಅದರಲ್ಲೂ ವಾರ್ಷಿಕ ಸಂಖ್ಯೆಯನ್ನು ಪರಿಗಣಿಸಿದರೆ ಕಳೆದ ನಾಲ್ಕು ವರ್ಷಗಳಲ್ಲಿ ಹೆಚ್ಚಿನವು ಸಂಭವಿಸಿವೆ."

ವಿದೇಶಿ ಆಕ್ರಮಣಕ್ಕೊಳಗಾದ ದೇಶದಲ್ಲಿರುವ ಬಹುತೇಕ ಯುವಜನರು ಪರಿಸ್ಥಿತಿಯ ಅನಿವಾರ್ಯತೆಯಿಂದಾಗಿ ತೀವ್ರವಾದಿ ಒಲವು ಬೆಳೆಸಿಕೊಳ್ಳುತ್ತಾರೆ. ಪಾಶ್ಚಾತ್ಯ ಮಿಲಿಟರಿ ಪಡೆಗಳ ಕೈಯಲ್ಲಿ ಅಸಂಖ್ಯ ನಾಗರಿಕರು ಕೊಲೆಯಾಗುವುದನ್ನು ಕಂಡು, ಅವಮಾನ ಮತ್ತು ಸೋಲಿಗೆ ಪ್ರತೀಕಾರ ತೀರಿಸುವ ತವಕ ಬೆಳೆಸಿಕೊಳ್ಳುತ್ತಾರೆ. ಕೆಲವೊಮ್ಮೆ ಇವರ ಕುಟುಂಬದ ಸದಸ್ಯರೇ ಆಕ್ರಮಣಶೀಲ ಪಡೆಗಳಿಂದ ಹತ್ಯೆಗೀಡಾಗಿರುತ್ತಾರೆ. ಇವೆಲ್ಲವೂ ಸಹಜ ಮತ್ತು ಪ್ರಾಯೋಗಿಕ ವಿಷಯಗಳಾಗಿದ್ದು, ಇಸ್ಲಾಮೀ ಧರ್ಮಶಾಸ್ತ್ರಕ್ಕೆ ಅದರೊಂದಿಗೆ ಸಂಬಂಧವಿಲ್ಲ. ಈ ನಿಟ್ಟಿನಲ್ಲಿ ಪ್ರೊ. ಪೆಪೆ ಅವರ ವಾದ ಹೆಚ್ಚಿನ ಮಾಹಿತಿ ಒದಗಿಸುತ್ತದೆ. ಅವರು ಹೇಳುತ್ತಾರೆ:

"ಎಲ್ಲ ಆತ್ಮಹತ್ಯಾತ್ಮಕ ಭಯೋತ್ಪಾದನಾ ದಾಳಿಯ ಹಿಂದೆ ಸಾಮಾನ್ಯವಾಗಿ ಇರುವಂತದ್ದು ಅತ್ಯಂತ ಲೌಕಿಕವಾದ ಮತ್ತು ನಿರ್ಣಾಯಕವಾದ ಗುರಿ. ಭಯೋತ್ಪಾದಕರು ತಮ್ಮ ತಾಯ್ನಾಡೆಂದು ಭಾವಿಸುವ ನೆಲದಿಂದ ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳು ತಮ್ಮ ಮಿಲಿಟರಿ ಪಡೆಗಳನ್ನು ವಾಪಸು ಪಡೆಯುವಂತೆ ನಿರ್ಬಂಧಿಸುವುದೇ ಅವರ ಗುರಿ. ಇದಕ್ಕೆ ಧರ್ಮ ಕಾರಣವಲ್ಲ. ಕೆಲವೊಮ್ಮೆ ಭಯೋತ್ಪಾದಕ ಸಂಘಟನೆಗಳು ಬೆಂಬಲಿಗರನ್ನು ನೇಮಿಸಿಕೊಳ್ಳಲು ಮತ್ತು ತಮ್ಮ ಕಾರ್ಯತಂತ್ರದ ಭಾಗವಾಗಿ ಧರ್ಮವನ್ನು ಒಂದು ಆಯುಧವಾಗಿ ಬಳಕೆ ಮಾಡುತ್ತಿರಬಹುದು."

ಕೆಲವೊಮ್ಮೆ ಪ್ರತ್ಯಕ್ಷವಾಗಿ ಇಂತಹ ಕರಾಳ ಅನುಭವಕ್ಕೆ ತುತ್ತಾಗದ ಜನರು ಕೂಡಾ ಟೆಲಿವಿಷನ್‌ನಲ್ಲಿ ಆ ದೃಶ್ಯಗಳನ್ನು ನೋಡಿ ಉದ್ರೇಕಗೊಳ್ಳುತ್ತಾರೆ. ಇಸ್ಲಾಮ್ ಆತ್ಮಹತ್ಯಾ ದಾಳಿಯನ್ನು ಅಥವಾ ನಾಗರಿಕರನ್ನು ಕೊಲ್ಲುವುದನ್ನು ಬೆಂಬಲಿಸುವುದಿಲ್ಲ ಎಂದು ಎಷ್ಟೇ ಉಪದೇಶ ಕೊಟ್ಟರೂ ಇಂತಹ ಜನರ ಮೇಲೆ ಅದು ಪರಿಣಾಮ ಬೀರುವುದಿಲ್ಲ. ತನ್ನ ಕುಟುಂಬ, ಸಮುದಾಯ ಅಥವಾ ಧರ್ಮದ ಮೇಲೆ ದಾಳಿ ನಡೆದಿದೆ

ಎಂದು ಭಾವಿಸುವ ಯಾವನೇ ವ್ಯಕ್ತಿ ವೈರಿಯ ರಕ್ತಕ್ಕಾಗಿ ಹಾತೊರೆಯುತ್ತಿರುತ್ತಾನೆ. ತನ್ನ ಚಿಂತನೆಗಳನ್ನು ಸಮರ್ಥಿಸುವ ಧಾರ್ಮಿಕ ಅಭಿಪ್ರಾಯಗಳಿಗಾಗಿ ಆತ ಹುಡುಕಾಟದಲ್ಲಿ ಇರುತ್ತಾನೆ. ಇಂತಹ ವ್ಯಕ್ತಿಗಳಲ್ಲಿ ಮೊದಲು ದ್ವೇಷ ಕಾಣಿಸಿಕೊಳ್ಳುತ್ತದೆ. ನಂತರ ಬೇಕಾದದ್ದು ತಾನು ಈಗಾಗಲೇ ಎಸಗಬಯಸಿರುವ ಕೃತ್ಯಕ್ಕೆ ತಾರ್ಕಿಕ ಸಮರ್ಥನೆ ಮಾತ್ರ.

ಈ ಭಯೋತ್ಪಾದಕರು ಮುಸ್ಲಿಮ್ ಎಂದು ಹೇಳಿಕೊಂಡು ಇಂಥ ಕೃತ್ಯಕ್ಕೆ ಇಳಿಯುವಾಗ ಮುಸ್ಲಿಮರಿಗೆ ಬೇರೆ ವೈರಿಗಳ ಅಗತ್ಯವೇ ಇಲ್ಲ ಎಂದು ಕೆಲವೊಮ್ಮೆ ಅನಿಸುವುದಿದೆ. ಯಾಕೆಂದರೆ, ಇವರು ಸಮುದಾಯಕ್ಕೆ ಕೆಟ್ಟ ಹೆಸರು ತರುವ ಕೆಲಸವನ್ನು ಗರಿಷ್ಠ ಮಾಡುತ್ತಿರುತ್ತಾರೆ. ಪ್ರಾಯಶಃ, ಇಸ್ಲಾಮನ್ನು ಒಂದು ಭೂತವಾಗಿ ಚಿತ್ರಿಸುವುದಕ್ಕೆ ಇವರಿಗಿಂತಲೂ ಹೆಚ್ಚಿನ ಕೊಡುಗೆ ನೀಡಲು ಇನ್ನಾರಿಗೂ ಸಾಧ್ಯವಾಗಲಾರದೇನೋ.

ಕೆಲವರು ಯಾಕೆ ಇಂಥ ಮತಿಹೀನ ಹಾದಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ? ಇದಕ್ಕೆ ಧರ್ಮದ ಬೋಧನೆಗಳು ಕಾರಣವೇ? ಈ ಭಯೋತ್ಪಾದಕರ ಪೋಷಕರು ಕಾರಣವೇ? ಅಥವಾ ಇಂಥ ಭಯೋತ್ಪಾದಕರು ಸೃಷ್ಟಿಯಾಗುವುದಕ್ಕೆ ಇನ್ನೇನಾದರೂ ಕಾರಣವಿದೆಯೇ? ಭಯೋತ್ಪಾದನೆಯ ಹಾದಿಯನ್ನು ಆಯ್ಕೆ ಮಾಡಿಕೊಳ್ಳಲು, ಅಮಾಯಕರನ್ನು ಕೊಲೆ ಮಾಡಲು ಅನೇಕ ಮಾರ್ಗಗಳಿವೆ. ಮುಸ್ಲಿಮ್ ವಿರೋಧಿ ಹತ್ಯಾಕಾಂಡವು ಮುಂಬೈನ ರಸ್ತೆಗಳಲ್ಲಿ ನಡೆದಾಗ ಒಬ್ಬ ಸಾಮಾನ್ಯ ಮುಸ್ಲಿಮ್ ಯುವಕ ಕೂಡಾ ತಾನು ಇದಕ್ಕೆ ಪ್ರತೀಕಾರ ತೀರಿಸುತ್ತೇನೆ ಎಂದು ಹೇಳುತ್ತಿದ್ದ. ಗುಜರಾತ್‌ನಲ್ಲಿ ಅಸಹಾಯಕ ಮುಸ್ಲಿಮರ ಮಾರಣ ಹೋಮ ನಡೆದಾಗ ಬಹಳಷ್ಟು ಮಂದಿ ಸಾಮಾಜಿಕ ಚಿಂತಕರು, ಇದು ಭಯೋತ್ಪಾದಕರಿಗೆ ಹುಟ್ಟು ನೀಡಬಹುದು ಎಂದು ಭವಿಷ್ಯ ನುಡಿದಿದ್ದರು. ಇಷ್ಟು ದೊಡ್ಡ ಸಮುದಾಯದಲ್ಲಿ ಖಂಡಿತವಾಗಿಯೂ ದ್ವೇಷ ಸಾಧನೆಗಾಗಿ ಭಯೋತ್ಪಾದನೆಯಂತಹ ಹುಚ್ಚು ಮಾರ್ಗಗಳನ್ನು ಆಯ್ದುಕೊಳ್ಳುವ ಗುಂಪು ಇದ್ದೇ ಇರುತ್ತದೆ. ಆಕ್ರೋಶ, ನೋವು ಮತ್ತು ಅಪರಾಧಿಗಳಿಗೆ ಶಿಕ್ಷೆಯಾಗುವುದಿಲ್ಲ ಎಂಬ ಭಾವನೆ ಭಯೋತ್ಪಾದನೆಯ ರೂಪದಲ್ಲಿ ಹಲವೊಮ್ಮೆ ಹೊರಹೊಮ್ಮುತ್ತದೆ.

ಸುದೈವವಶಾತ್, ಈ ಅತಂಕ ಕಾಲ್ಪನಿಕವೆಂಬುದು ಕಳೆದ ಒಂದು ದಶಕದಲ್ಲಿ ಸಾಬೀತಾಗಿದೆ. ಗುಜರಾತ್‌ನಲ್ಲಾಗಲೀ ಭಾರತದ ಇತರ ಕಡೆಗಳಲ್ಲಾಗಲೀ ಅಂಥದ್ದೇನೂ ನಡೆಯಲಿಲ್ಲ. ಮುಸ್ಲಿಮ್ ಸಂಘಟನೆಗಳು ಸರಣಿಯಂತೆ ಸಮಾವೇಶಗಳನ್ನು ಏರ್ಪಡಿಸಿ ಗಲಭೆ ಸಂತ್ರಸ್ತರು ನ್ಯಾಯಾಂಗದ ಮೂಲಕವೇ ಪರಿಹಾರ ಪಡೆಯಬೇಕೆಂದು ಪ್ರೇರೇಪಿಸಿದರು. ಮುಸ್ಲಿಮ್ ವಿದ್ವಾಂಸರು ಕೂಡಾ ಪ್ರತೀಕಾರಕ್ಕಿಳಿಯದಂತೆ ಮತ್ತು ಅಮಾಯಕರನ್ನು ಗುರಿ ಮಾಡದಂತೆ ಮನವಿ ಮಾಡಿದರು. ಕೆಲವು ಪ್ರಮುಖ ಮುಸ್ಲಿಮ್ ವಿದ್ವಾಂಸರು ಆತ್ಮಹತ್ಯಾ ದಾಳಿ ಹರಾಮ್ (ನಿಷಿದ್ಧ) ಎಂದು ಘೋಷಿಸಿದರು. ಕೈರೋ

ಮತ್ತು ಸೌದಿ ಅರೇಬಿಯಾದ ಧಾರ್ಮಿಕ ಕೇಂದ್ರಗಳಿಂದಲೂ ಇದೇ ರೀತಿಯ ಅಭಿಪ್ರಾಯಗಳು ಬಂದಿವೆ. ವಿದ್ವಾಂಸರ ವರ್ಗವು ಆತ್ಮಹತ್ಯಾ ದಾಳಿ ಪಾಪವೆಂದೂ ಇಸ್ಲಾಮಿಗೆ ವಿರುದ್ಧವಾದುದೆಂದೂ ಅಭಿಪ್ರಾಯಪಡುತ್ತಾರೆ.

ಕೆಲವು ಪಥಭ್ರಷ್ಟ ಮುಸ್ಲಿಮರು ಇಸ್ಲಾಮಿನಲ್ಲಿ ಯುದ್ಧದ ಬಗ್ಗೆ ಇರುವ ನೀತಿ ನಿಯಮಗಳ ಬಗ್ಗೆ ಅಜ್ಞಾನ ಪ್ರದರ್ಶಿಸುವುದನ್ನು ಇನ್ನಾದರೂ ನಿಲ್ಲಿಸಬೇಕು. ಇಸ್ಲಾಮಿನ ಪ್ರಕಾರ ಹರಾಮ್ (ನಿಷಿದ್ಧ) ಆಗಿರುವ ಸಂಗತಿಗಳು ಒಮ್ಮಿಂದೊಮ್ಮೆಲೆ ಹಲಾಲ್ (ಧರ್ಮಸಮ್ಮತ) ಆಗುವುದಿಲ್ಲ ಎಂಬುದನ್ನು ಅವರು ಮನಗಾಣಬೇಕು. ಆತ್ಮಹತ್ಯೆಯನ್ನು ಪ್ರವಾದಿ ಮುಹಮ್ಮದ್ ಮಾತ್ರವಲ್ಲ, ಅಲ್ಲಾಹನು ಕೂಡಾ ನಿಷೇಧಿಸಿದ್ದಾನೆ. ಆದ್ದರಿಂದ ಜ್ಞಾನ ಇರುವವರಿಂದ ಅದನ್ನು ಕಲಿಯಬೇಕೇ ಹೊರತು ತಮ್ಮದೇ ಆದ ನಿಯಮಗಳನ್ನು ರೂಪಿಸಿಕೊಳ್ಳುವ, ಅಲ್ಪಜ್ಞಾನಿಗಳಾದ ಮುಸ್ಲಿಮರಿಂದ ಅಲ್ಲ. ಈ ಪೈಕಿ ಅನೇಕ ದಾಳಿಗಳು ಕೇವಲ ರಾಜಕೀಯ ಕಾರಣಗಳಿಗಾಗಿ ನಡೆಯುತ್ತವೆ; ಧಾರ್ಮಿಕ ಕಾರಣಗಳಿಗಾಗಿ ಅಲ್ಲ. ಆದರೆ, ಇಂಥ ಪಾಪ ಕೃತ್ಯಗಳನ್ನು ನಡೆಸುವ ಮೂಲಕ ಹುತಾತ್ಮನ ಸ್ಥಾನ ಪಡೆಯುತ್ತೇನೆ ಎಂಬ ತಪ್ಪು ತಿಳಿವಳಿಕೆಯಲ್ಲಿ ಯಾರೂ ಇರಕೂಡದು.

> **“ಪರಸ್ಪರ ಹತ್ಯೆ ಮಾಡಬೇಡಿ. ಅಲ್ಲಾಹನು ನಿಮ್ಮ ಪಾಲಿಗೆ ಸದಾ ಕರುಣಾಮಿಯಾಗಿದ್ದಾನೆ.” (ಕುರ್‌ಆನ್ 4:29). “ನಿಮ್ಮನ್ನು ಸ್ವತಃ ನಿಮ್ಮ ಕೈಯಾರೆ ವಿನಾಶಕ್ಕೆ ತಳ್ಳಬೇಡಿ.”(ಕುರ್‌ಆನ್ 2:195).**

ಆತ್ಮಹತ್ಯೆಗೆ ಸಂಬಂಧಿಸಿ ಪ್ರವಾದಿವಚನವೂ ಇದೆ: ಪ್ರವಾದಿ ಮುಹಮ್ಮದ್ ಹೇಳುತ್ತಾರೆ:

> “ನಿಮ್ಮ ನಡುವೆ ಒಬ್ಬ ವ್ಯಕ್ತಿಯಿದ್ದ. ಆತನ ಮೇಲೆ ಗಾಯಗಳಿದ್ದವು. ನೋವು ತಡೆದುಕೊಳ್ಳಲಾಗದೆ ಆತ ಚೂರಿಯಿಂದ ತನ್ನ ನಾಡಿಯನ್ನು ಕತ್ತರಿಸಿಕೊಳ್ಳುತ್ತಾನೆ. ರಕ್ತ ಹರಿದು ಆತ ಸಾವಿಗೀಡಾಗುತ್ತಾನೆ. ಅಲ್ಲಾಹ್ ಆ ವ್ಯಕ್ತಿಯ ಬಗ್ಗೆ ಹೇಳುತ್ತಾನೆ: “ಆತ ಆತುರಾತುರವಾಗಿ ಸಾವು ತಂದುಕೊಂಡ. ಆತನಿಗೆ ಸ್ವರ್ಗ ಪ್ರವೇಶವನ್ನು ನಾನು ನಿಷಿದ್ಧಗೊಳಿಸಿದ್ದೇನೆ.” (ಉಲ್ಲೇಖ: ಸಹೀಹ್ ಬುಖಾರಿ: 4:56:669) “ಯಾರಾದರೂ (ಉದ್ದೇಶಪೂರ್ವಕವಾಗಿ) ತನ್ನನ್ನೇ ಕೊಂದು ಬಿಟ್ಟರೆ ಆತನನ್ನು ನರಕದ ಅಗ್ನಿಯಲ್ಲಿ ಶಿಕ್ಷಿಸಲಾಗುತ್ತದೆ. ಆತ ಎಂದೆಂದಿಗೂ ಅಲ್ಲೇ ನರಳಬೇಕಾಗುತ್ತದೆ.” (ಉಲ್ಲೇಖ: ಬುಖಾರಿ 5.77.87).

ಮೇಲಿನ ಕುರ್‌ಆನ್ ಮತ್ತು ಹದೀಸ್‌ನ ಉಲ್ಲೇಖಗಳು ವ್ಯಕ್ತಿ ತನ್ನ ಜೀವವನ್ನು ಹರಣ ಮಾಡುವುದು ನಿಷಿದ್ಧ ಎಂಬುದನ್ನು ದೃಢಪಡಿಸುತ್ತವೆ. ಅಂತಹ ವ್ಯಕ್ತಿ ಸ್ವರ್ಗ ಪ್ರವೇಶಕ್ಕೂ ಅನರ್ಹ ಎಂದು ಅಲ್ಲಾಹನು ಸ್ಪಷ್ಟಪಡಿಸಿದ್ದಾನೆ.

## ಇಸ್ಲಾಮೀ ಮೂಲಭೂತವಾದ

ಇಸ್ಲಾಮಿನ ಸಮರ್ಥನೆಯಲ್ಲಿ ಮಾತನಾಡುವ ಪ್ರತಿಯೊಬ್ಬನನ್ನೂ ಮೂಲಭೂತವಾದಿ ಎಂದು ಕರೆಯುವುದು ಅರ್ಥಹೀನ ಮಾತ್ರವಲ್ಲ, ಒಂದು ಅಪಾಯಕಾರಿ ತಪ್ಪು ಕೂಡಾ. ಮುಸ್ಲಿಮರು ಒಂದು ಏಕಶಿಲಾಕೃತಿಯ ಸಮುದಾಯವಲ್ಲ. ಹತ್ತು ಹಲವು ರಾಜಕೀಯ ಅಭಿಪ್ರಾಯಗಳನ್ನು, ನಿಲುವುಗಳನ್ನು ಹೊಂದಿರುವ ಜನರು ಅಲ್ಲಿದ್ದಾರೆ. ಅಷ್ಟೇ ಅಲ್ಲ, ಇಸ್ಲಾಮಿನ ವಿವಿಧ ವ್ಯಾಖ್ಯಾನಗಳಲ್ಲಿ ನಂಬಿಕೆ ಹೊಂದಿರುವವರೂ ಇದ್ದಾರೆ.

ಆದರೆ ಕಳೆದ ಕೆಲವು ದಶಕಗಳಲ್ಲಿ ಮುಸ್ಲಿಮರಲ್ಲಿನ ಅತ್ಯಂತ ಹೆಚ್ಚು ವಾಚಾಳಿ ಮತ್ತು ಪ್ರಭಾವಿಯಾದ ಸಂಪ್ರದಾಯವಾದಿ ಗುಂಪಿನೊಳಗೆ ಪ್ರತಿಗಾಮಿ ಒಲವು ಮತ್ತು ಅಸಹಿಷ್ಣುತೆ ಹೆಚ್ಚುತ್ತಿರುವುದನ್ನು ಗಮನಿಸಬಹುದು.

ಮೂಲಭೂತವಾದದ ಉಗಮಕ್ಕೆ ಹಲವು ಕಾರಣಗಳಿವೆ:

1. ಆಧುನಿಕವಾದಿ ನಾಯಕರು ಬಲಪ್ರಯೋಗದ ಮೂಲಕ ಮುಸ್ಲಿಮ್ ಸಮಾಜದ ಮೇಲೆ ತಮ್ಮ ಹತೋಟಿಯನ್ನು ಸಾಧಿಸಿರುವುದು. ಇವರು ಸಾಂಪ್ರದಾಯಿಕ ಮುಸ್ಲಿಮ್ ನಾಯಕತ್ವವನ್ನು ದಮನಿಸುತ್ತಾ ಬಂದಿದ್ದಾರೆ. ಜೈಲು ಶಿಕ್ಷೆ, ಚಿತ್ರಹಿಂಸೆ, ಧಾರ್ಮಿಕ ನಾಯಕರು ಮತ್ತು ಚಿಂತಕರನ್ನು ಗಲ್ಲಿಗೇರಿಸಿದ ಉದಾಹರಣೆಗಳೂ ಇವೆ.

2. ಆಧುನಿಕವಾದಿ ನಾಯಕರ ಆರ್ಥಿಕ ಮತ್ತು ಅಭಿವೃದ್ಧಿ ನೀತಿಗಳು ವಿಫಲವಾಗಿರುವುದು. ಈ ನೀತಿಯಿಂದಾಗಿ ಸಂಪತ್ತು ಕೆಲವೇ ಮಂದಿಯ ಕೈಯಲ್ಲಿ ಕೇಂದ್ರೀಕರಣಗೊಳ್ಳುವಂತಾಗಿದೆ.

3. ಐವತ್ತರ ದಶಕದ ನಂತರ ಸಾಂಪ್ರದಾಯಿಕ ಚಿಂತನೆ, ಜೀವನಶೈಲಿ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲವನ್ನೂ ಟೀಕಿಸುವ ಮತ್ತು ಗೇಲಿ ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ.

4. ಮುಸ್ಲಿಮ್ ದೇಶಗಳಲ್ಲಿ ಇಸ್ಲಾಮೀ ಪ್ರತಿರೋಧವನ್ನು ಹತ್ತಿಕ್ಕುವ, ಇಸ್ಲಾಮೀ ನಾಯಕರನ್ನು ಕ್ರೂರಿಗಳಾಗಿ ಚಿತ್ರಿಸುವ ಪಾಶ್ಚಾತ್ಯ ಶಕ್ತಿಗಳ ನೀತಿ. ಈ ಮೂಲಕ ಅತ್ಯಂತ ಹೆಚ್ಚು ಪಾಶ್ಚಾತ್ಯೀಕರಣಗೊಂಡ ಮರ್ದಕ ಆಡಳಿತವನ್ನು ಈ ದೇಶಗಳಲ್ಲಿ ಸ್ಥಾಪಿಸಲು ಪ್ರಯತ್ನಿಸಲಾಗಿದೆ ಮತ್ತು ಮುಸ್ಲಿಮ್ ರಾಷ್ಟ್ರಗಳನ್ನು ಆರ್ಥಿಕವಾಗಿ ದಿವಾಳಿಯನ್ನಾಗಿಯೂ ಸಾಲಗಾರರನ್ನಾಗಿಯೂ ಪರಿವರ್ತಿಸಲಾಗಿದೆ.

## ಇಂದು ಮತ್ತು...

ಇಸ್ಲಾಮ್ ಮತ್ತು ಭಯೋತ್ಪಾದನೆ ಸಮಾನಾರ್ಥಕ ಪದಗಳಾಗಿ ಬಿಟ್ಟಿವೆ. ಸೆಪ್ಟಂಬರ್ 11ರ ಘಟನೆಗಳ ನಂತರ ಇದೊಂದು ಸಹಜ ತೀರ್ಮಾನವೇನೋ ಅನ್ನಿಸತೊಡಗಿದೆ. ಆದರೆ ಇದು ಸತ್ಯಕ್ಕೆ ದೂರವಾದ ಮಾತು. ನ್ಯೂಯಾರ್ಕ್‌ನ ವರ್ಲ್ಡ್ ಟ್ರೇಡ್ ಸೆಂಟರ್ ಮತ್ತು ವಾಷಿಂಗ್ಟನ್‌ನ ಪೆಂಟಗಾನ್ ಮೇಲೆ ದಾಳಿ ನಡೆಸಿದ ಭಯೋತ್ಪಾದಕರ ಕೃತ್ಯಕ್ಕೆ ಇಸ್ಲಾಮನ್ನು ಹೊಣೆಯಾಗಿಸಲು ಸಾಧ್ಯವಿಲ್ಲ. ಹಿಟ್ಲರನ ಗ್ಯಾಸ್ ಚೇಂಬರ್‌ಗೆ ಕ್ರಿಶ್ಚಿಯಾನಿಟಿಯನ್ನು ಅಥವಾ ಐರಿಷ್ ಭಯೋತ್ಪಾದಕರ ಕೃತ್ಯಗಳಿಗೆ ಕೆಥೋಲಿಸಿಸಮನ್ನು ದೂರುವುದು ಸರಿಯಲ್ಲ ತಾನೆ? ಭಯೋತ್ಪಾದಕರು ತಮ್ಮದೇ ಆದ ವಿಕೃತ ತರ್ಕ ಹೊಂದಿರುತ್ತಾರೆ ಮತ್ತು ಅವರು ಬುದ್ಧಿ ಮತ್ತು ಸಹಜತೆಗೆ ಅತೀತವಾಗಿ ಬದುಕುತ್ತಾರೆ. ಅವರು ಮತಿಗೇಡಿ ಜನರಾಗಿದ್ದು ಅವರ ದುಷ್ಟ ವರ್ತನೆಗಳು ಆತ್ಮಸಾಕ್ಷಿಯಿರುವ ಎಲ್ಲರನ್ನೂ ಬೆಚ್ಚಿ ಬೀಳಿಸುತ್ತವೆ.

ಇಸ್ಲಾಮಿನ ಆತ್ಮಸಾಕ್ಷಿಯು, (ಅಂದರೆ ಬಹುಸಂಖ್ಯಾತ ಮುಸ್ಲಿಮರು) ನ್ಯಾಯ, ಸತ್ಯ ಮತ್ತು ಸಾರ್ವತ್ರಿಕ ಮಾನವೀಯ ಮೌಲ್ಯಗಳ ಪರವಾಗಿರುತ್ತದೆ. ಆದರೆ ಎಲ್ಲ ಮುಸ್ಲಿಮರನ್ನೂ ಒಂದೇ ಬಣ್ಣದಲ್ಲಿ ಅದ್ದುವ ಮೂಲಕ ಅವರ ಮನುಷ್ಯತ್ವವನ್ನೇ ಗೌಣಗೊಳಿಸಿ 1.7 ಶತಕೋಟಿಯಷ್ಟಿರುವ ಒಂದು ಸಮುದಾಯವನ್ನು,– ವಿಶ್ವದ ಪ್ರತಿ ಐದರಲ್ಲಿ ಒಬ್ಬ ವ್ಯಕ್ತಿ ಮುಸ್ಲಿಮ್ ಆಗಿದ್ದಾನೆ ಅವರ ಸಮಾಜಗಳನ್ನು, ಅವರ ಇತಿಹಾಸವನ್ನು ಪಶ್ಚಿಮದ ಒಂದು ಕರಾಳ ಮುಖವಾಗಿ ಚಿತ್ರಿಸುತ್ತಿದ್ದೇವೆ.

ಮುಸ್ಲಿಮರು ಇತಿಹಾಸವನ್ನು ಹೊಂದಿರುವ ಒಂದು ನೈಜ ಸಮುದಾಯವಾಗಿದ್ದಾರೆ. ಅವರ ನಾಗರಿಕತೆಯು ಜಗತ್ತನ್ನು ವಿಜ್ಞಾನ, ವಿಚಾರ, ಸಂಶೋಧನೆ, ಸಾಹಿತ್ಯ, ಪ್ರಯಾಣ, ರಾಜಕೀಯ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳಂತಹ ಹಲವು ಕ್ಷೇತ್ರಗಳಲ್ಲಿ ಮುನ್ನಡೆಸಿದೆ ಎಂಬುದು ಗಮನಾರ್ಹ.

ಮುಸ್ಲಿಮರು ಇಂದು ತಮ್ಮ ಐತಿಹಾಸಿಕ ಅನನ್ಯತೆಯನ್ನು ಮರುಸಂಶೋಧಿಸುವ ಪ್ರಯತ್ನದಲ್ಲಿದ್ದಾರೆ. ನವವಸಾಹತೀಕರಣ ಹಾಗೂ ಒಂದು ಮರ್ದಕ ವಿಶ್ವ ವ್ಯವಸ್ಥೆಯ ಹೊರೆಯಿಂದ ತಮ್ಮನ್ನು ಮುಕ್ತಗೊಳಿಸಿ ಒಂದು ಜವಾಬ್ದಾರಿಯುತ ಮತ್ತು ಕಾರ್ಯಸಾಧುವಾದ ಭವಿಷ್ಯವನ್ನು ರೂಪಿಸಲು ಶ್ರಮಿಸುತ್ತಿದ್ದಾರೆ.

## ನಾಳೆ....

ತನ್ನನ್ನು ವಿರುದ್ಧ ದಿಕ್ಕಿನಲ್ಲಿ ಎಳೆಯುತ್ತಿರುವ ಪ್ರಕ್ಷುಬ್ಧತೆ ಮತ್ತು ವೈರುಧ್ಯಗಳ ಹೊರತಾಗಿಯೂ ಮುಸ್ಲಿಮ್ ಜಗತ್ತು ತನ್ನನ್ನು ಭವಿಷ್ಯದ ಒಂದು ಚಲನಶೀಲ, ಅಭಿವೃದ್ಧಿಶೀಲ ನಾಗರಿಕತೆಯಾಗಿ ಮುಸ್ಲಿಮ್ ಜಗತ್ತು ಇಂದು ಪ್ರಯತ್ನಿಸುತ್ತಿದೆ. ಎದ್ದು ಕಾಣುವ ಒಂದು ಸಣ್ಣ ತೀವ್ರಗಾಮಿ ಗುಂಪಿನ ಘೋಷಣೆಗಳಿಗೆ ತದ್ವಿರುದ್ಧವಾಗಿ, ಮುಸ್ಲಿಮ್ ಸಮುದಾಯವು ಸಮಕಾಲೀನ ಮತ್ತು ಭಾವಿ ಜಗತ್ತಿಗೆ ಪ್ರವಾದಿ ಮುಹಮ್ಮದ್ ಅವರ ಸಂದೇಶಗಳು ಹೇಗೆ ಪ್ರಸ್ತುತವಾಗಬಲ್ಲದು ಎಂಬ ಕುರಿತು ಹೊಸ ಯೋಚನೆ, ಚರ್ಚೆ ಮತ್ತು ಸಂವಾದಗಳಲ್ಲಿ ತೊಡಗಿದೆ. ಈ ಪೈಕಿ ಅನೇಕ ಚಿಂತನೆಗಳು, ಥಿಯರಿಗಳು, ಸಂಸ್ಥೆಗಳು ಮತ್ತು ಕಾಣ್ಕೆಗಳು ಇಸ್ಲಾಮ್ ಮತ್ತು ಮುಸ್ಲಿಮ್ ಸಮುದಾಯವನ್ನು ಒಳಗಿನಿಂದ ಬದಲಾಯಿಸುವುದು ಮಾತ್ರವಲ್ಲ, ಒಂದು ಸಮ್ಮಿಶ್ರ ಜಗತ್ತನ್ನು ನಿರ್ಮಾಣಗೊಳಿಸುವುದರಲ್ಲಿ ಪ್ರಮುಖ ಕೊಡುಗೆ ನೀಡಲಿದೆ.

ಮುಸ್ಲಿಮ್ ಜಗತ್ತು ಎದುರಿಸುತ್ತಿರುವ ಪ್ರಶ್ನೆಗಳಿಗೆ ಸರಳವಾದ ಉತ್ತರಗಳಿಲ್ಲ ಎಂಬುದು ದಿಟ. ಅದೇ ರೀತಿ ಈ ಸಮಸ್ಯೆಗಳು ಉಪಶಾಮಕ ಪರಿಹಾರಗಳಿಂದ ಬಗೆಹರಿಯಲಾರದು ಎಂಬುದೂ ನಿಜವೇ. ಕೆಲವೊಮ್ಮೆ ಪರಿಸ್ಥಿತಿ ಅತ್ಯಂತ ಶೋಚನೀಯ ಮತ್ತು ನಿರಾಶಾದಾಯಕವಾಗಿದೆಯೇನೋ ಅನಿಸುತ್ತದೆ. ಆದರೆ, ಮುಸ್ಲಿಮರು ತಮ್ಮ ವಿಶ್ವಾಸದ ಬಲದಿಂದಾಗಿ ಯಾವತ್ತೂ ಆಶಾವಾದಿಗಳೇ. ಒಂದು ಸುದೀರ್ಘ ಬೌದ್ಧಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಯತ್ನ ಹಾಗೂ ಅದರ ಜತೆಗೆ ಮರುಚಿಂತನೆಯ ಸತತ ಪ್ರಕ್ರಿಯೆಯಿಂದ ಮಾತ್ರ ಭವಿಷ್ಯಕ್ಕೆ ಸಂಬಂಧಿಸಿದಂತೆ ಒಂದು ಕಾರ್ಯಸಾಧ್ಯವಾದ ಆಯ್ಕೆ ಮತ್ತು ಪರ್ಯಾಯಗಳನ್ನು ಕಂಡುಕೊಳ್ಳಲು ಸಾಧ್ಯ. ಜಾಗೃತಿಯನ್ನು ಮೂಡಿಸುವುದು ಅರ್ಧ ಯುದ್ಧವನ್ನು ಗೆಲ್ಲುವುದಕ್ಕೆ ಸಮ.

# ಮಹಿಳೆ: ಗುಪ್ತ ಚರಿತ್ರೆ ಮತ್ತು ಅನಿಶ್ಚಿತ ವರ್ತಮಾನ

ಪಾಶ್ಚಿಮಾತ್ಯ ಮತ್ತು ಪೌರಾತ್ಯರಲ್ಲಿರುವ ತಪ್ಪುತಿಳುವಳಿಕೆಗಳ ಹಿನ್ನೆಲೆಯಲ್ಲಿ ವಿವಿಧ ಸಮಾಜಗಳು ಮಹಿಳೆಯರ ಬಗ್ಗೆ ಎಂಥ ಧೋರಣೆ ಹೊಂದಿದ್ದವು ಎಂಬುದನ್ನು ಅಧ್ಯಯನ ಮಾಡುವುದು ತುಂಬಾ ಉಪಯುಕ್ತವಾಗಬಹುದು.

## ಬೆಬಿಲೋನಿಯನ್ ನಾಗರಿಕತೆ:

ಬೆಬಿಲೋನಿಯಾದ ನಾಗರಿಕತೆಯಲ್ಲಿ ಮಹಿಳೆಯರನ್ನು ಕಡೆಗಣಿಸಲಾಗಿತ್ತು ಮತ್ತು ಎಲ್ಲ ರೀತಿಯ ಹಕ್ಕುಗಳನ್ನು ಅವರಿಗೆ ನಿರಾಕರಿಸಲಾಗಿತ್ತು. ವ್ಯಕ್ತಿಯೊಬ್ಬ ಮಹಿಳೆಯನ್ನು ಕೊಲೆ ಮಾಡಿದರೆ, ಆತನನ್ನು ಶಿಕ್ಷಿಸುವ ಬದಲಿಗೆ ಆತನ ಪತ್ನಿಯನ್ನು ಕೊಲ್ಲಲಾಗುತ್ತಿತ್ತು.

## ಗ್ರೀಕ್ ನಾಗರಿಕತೆ:

ಗ್ರೀಕ್ ನಾಗರಿಕತೆ ಎಲ್ಲ ಪ್ರಾಚೀನ ನಾಗರಿಕತೆಗಳ ಪೈಕಿ ಉಜ್ವಲವಾಗಿತ್ತೆಂದು ಹೇಳಲಾಗುತ್ತದೆ. ಆದರೆ ಈ ಉಜ್ವಲ ವ್ಯವಸ್ಥೆಯಡಿಯಲ್ಲಿಯೂ ಮಹಿಳೆಯರ ಹಕ್ಕುಗಳನ್ನು ಕಸಿಯಲಾಗಿತ್ತು ಮತ್ತು ಅವರನ್ನು ಕೀಳಾಗಿ ನಡೆಸಿಕೊಳ್ಳಲಾಗುತ್ತಿತ್ತು. ಗ್ರೀಕ್ ಪುರಾಣಗಳ ಪ್ರಕಾರ "ಪಂಡೋರಾ" ಎಂಬ ಕಾಲ್ಪನಿಕ ಮಹಿಳೆಯು ಮನುಷ್ಯನ ಎಲ್ಲ ದುರದೃಷ್ಟಗಳಿಗೂ ಕಾರಣ ಎಂದು ಹೇಳುತ್ತವೆ ಗ್ರೀಕ್ ಪುರಾಣಗಳು.

ಗ್ರೀಕರು ಮಹಿಳೆಯನ್ನು ಮನುಷ್ಯರಿಗಿಂತಲೂ ಕಡೆ ಮತ್ತು ಪುರುಷನಿಗಿಂತಲೂ ಕೀಳು ಎಂದು ಪರಿಗಣಿಸುತ್ತಿದ್ದರು. ಮಹಿಳೆಯರ ಚಾರಿತ್ರ್ಯವನ್ನು ಅಮೂಲ್ಯವೆಂದು ಪರಿಗಣಿಸುತ್ತಿದ್ದರು. ಆದರೆ ಕಾಲಾನಂತರ ಪುರುಷರ ಅಹಂ ಮತ್ತು ಲೈಂಗಿಕ ತೃಷೆಗಳಿಗೆ ಅವರು ಗುರಿಯಾಗತೊಡಗಿದರು. ಗ್ರೀಕ್ ಸಮಾಜದ ಎಲ್ಲ ವರ್ಗಗಳಲ್ಲಿಯೂ ವೇಶ್ಯಾವಾಟಿಕೆ ಸಾಮಾನ್ಯವಾಯಿತು.

## ರೋಮನ್ ನಾಗರಿಕತೆ:

ರೋಮನ್ ನಾಗರಿಕತೆ ಕೂಡಾ ತನ್ನ ಉಚ್ಛ್ರಾಯದಲ್ಲಿತ್ತು. ಆದರೆ ಅಲ್ಲಿಯೂ ಪುರುಷರಿಗೆ ಪತ್ನಿಯ ಜೀವವನ್ನು ತೆಗೆಯುವ ಹಕ್ಕು ಇತ್ತು. ರೋಮನ್ನರಲ್ಲಿ ವೇಶ್ಯಾವಾಟಿಕೆ ಮತ್ತು ನಗ್ನತೆ ಸಾಮಾನ್ಯವಾಗಿತ್ತು.

## ಈಜಿಪ್ಟ್‌ನಾಗರಿಕತೆ:

ಈಜಿಪ್ಟ್‌ನ ಜನರು ಮಹಿಳೆಯನ್ನು ಕೆಡುಕೆಂದೂ ಪಿಶಾಚಿಯ ಸಂಕೇತವೆಂದೂ ಭಾವಿಸಿದ್ದರು.

## ಕ್ರೈಸ್ತ ಧರ್ಮದ ಆರಂಭ ಘಟ್ಟ:

ಕ್ರೈಸ್ತ ಧರ್ಮದ ಆರಂಭ ಘಟ್ಟದಲ್ಲಿ ಮಹಿಳೆಯನ್ನು ಸ್ವರ್ಗದಿಂದ ಆ್ಯಡಂ ಉಚ್ಚಾಟನೆಗೊಳ್ಳಲು ಕಾರಣವಾದ ಮೋಹಿನಿ (ಪುರುಷನನ್ನು ತನ್ನ ಆಕರ್ಷಣೆಯ ಮೂಲಕ ದುರ್ಮಾರ್ಗಕ್ಕೆ ಎಳೆಯುವ ಮಹಿಳೆ) ಎಂದು ಪರಿಗಣಿಸಲಾಗುತ್ತಿತ್ತು.

ಕ್ರಿ.ಶ. 587ನೇ ಇಸವಿಯಲ್ಲಿ ಮಹಿಳೆಯರ ಸ್ಥಿತಿಗತಿಯ ಸಮೀಕ್ಷೆ ನಡೆಸಿ ಅವರನ್ನು ನಿಜವಾಗಿಯೂ ಮನುಷ್ಯರೆಂದು ಪರಿಗಣಿಸಬಹುದೇ ಎಂಬುದನ್ನು ಪತ್ತೆ ಹಚ್ಚಲು ಫ್ರಾನ್ಸ್‌ನಲ್ಲಿ ಸಮಾವೇಶವೊಂದನ್ನು ಏರ್ಪಡಿಸಲಾಗಿತ್ತು. ಇಂಗ್ಲೆಂಡ್‌ನಲ್ಲಿ ಎಂಟನೇ ಹೆನ್ರಿ ಮಹಿಳೆಯರು ಬೈಬಲ್ ಓದುವುದರ ಮೇಲೆ ನಿರ್ಬಂಧ ಹೇರಿದ್ದ. ಕ್ಯಾಥೋಲಿಕ್ ಚರ್ಚ್‌ಗಳು ಮಧ್ಯ ಯುಗದಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆ ನಾಗರಿಕರೆಂದು ಪರಿಗಣಿಸಿದ್ದವು. ಕ್ರಿ.ಶ. 1850ಕ್ಕೂ ಮುನ್ನ ಇಂಗ್ಲೆಂಡ್‌ನಲ್ಲಿ ಮಹಿಳೆಯರನ್ನು ನಾಗರಿಕರೆಂದೇ ಪರಿಗಣಿಸಲಾಗುತ್ತಿರಲಿಲ್ಲ. 1882ರ ವರೆಗೆ ಮಹಿಳೆಯರಿಗೆ ತಮ್ಮದೇ ಆದ ವೈಯಕ್ತಿಕ ಹಕ್ಕುಗಳು ಇರಲಿಲ್ಲ.

## ಭಾರತೀಯ ನಾಗರಿಕತೆ:

ಕೆಲವು ಭಾರತೀಯ ಸಮುದಾಯಗಳಲ್ಲಿ ಸತಿಯು ಅಂತ್ಯಸಂಸ್ಕಾರದ ಭಾಗವಾಗಿತ್ತು. ವಿಧವಾ ಪತ್ನಿಯು ತನ್ನ ಪತಿಯ ಚಿತೆಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಿದ್ದಳು. ಈ ಪದ್ಧತಿಯನ್ನು ಅನೇಕ ಬಾರಿ ನಿಷೇಧಿಸಲಾಗಿತ್ತು.

## ಇಸ್ಲಾಮ್‌ಗೆ ಮುಂಚಿನ ಅರೇಬಿಯಾ:

ಮಹಿಳೆಯನ್ನು ದ್ವಿತೀಯ ದರ್ಜೆ ನಾಗರಿಕರಾಗಿ ನೋಡುವ ಮನೋಭಾವ ಜಗತ್ತಿನಲ್ಲಿ 7ನೇ ಶತಮಾನದಿಂದಲೂ ಇದೆ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಆಗಮನಕ್ಕೆ ಮುಂಚಿನ ಅರೇಬಿಯಾ ಸಮಾಜದಲ್ಲಿಯೂ ಇದು ಚಾಲ್ತಿಯಲ್ಲಿತ್ತು. ಗೋತ್ರಗಳ ನಡುವಿನ ಸಂಘರ್ಷ, ಕ್ಷುಲ್ಲಕ ಕಾರಣಕ್ಕೆ ಜಗಳ ಕಾಯುವುದು, ಲೂಟಿ ಮತ್ತು ಕ್ಷೋಭೆ ಸಾಮಾನ್ಯವಾಗಿತ್ತು. ಇಂಥ ಪರಿಸರದಲ್ಲಿ ಮಹಿಳೆಯ ಸ್ಥಾನಮಾನ ಹೇಗಿದ್ದಿರಬಹುದೆಂದು ನೀವೇ ಊಹಿಸಬಹುದು.

ಇಸ್ಲಾಮಿಗೆ ಮುಂಚಿನ ಅರೇಬಿಯಾದಲ್ಲಿ ಹೆಣ್ಣು ಮಗುವಿನ ಜನನವೇ ಅವಮಾನದ ಸಂಗತಿಯಾಗಿತ್ತು. ಇದನ್ನು ತಪ್ಪಿಸಲು ಹೆಣ್ಣು ಮಗುವನ್ನು ಜೀವಂತ ಹೂಳಲಾಗುತ್ತಿತ್ತು. ಕನಿಷ್ಠ ಹತ್ತು ಪುರುಷರಲ್ಲಿ ಒಬ್ಬನಾದರೂ ಇಂತಹ ಅಪರಾಧ ಎಸಗಿರುತ್ತಿದ್ದ. ಪುರುಷರಷ್ಟೇ ಅಲ್ಲ, ಮಹಿಳೆಯರು ಕೂಡಾ ಇಂಥ ಕೃತ್ಯದಲ್ಲಿ ಭಾಗಿಯಾಗಿರುತ್ತಿದ್ದರು. ತಾಯಂದಿರು ತಮ್ಮ ನವಜಾತ ಹೆಣ್ಣು ಶಿಶುವನ್ನು ಹೂಳಲಿಕ್ಕಾಗಿ ಪುರುಷರ ಕೈಗೆ ನೀಡುತ್ತಿದ್ದರು. ಬಡತನದ ಭೀತಿಯಿಂದಲೂ ಅವರು ಮಕ್ಕಳನ್ನು ಕೊಲ್ಲುತ್ತಿದ್ದರು.

ಇಸ್ಲಾಮಿಗೆ ಮುಂಚಿನ ಅರೇಬಿಯಾದಲ್ಲಿ ಹಲವು ವಿಚಿತ್ರ ಮದುವೆ ಸಂಪ್ರದಾಯಗಳು ಚಾಲ್ತಿಯಲ್ಲಿದ್ದವು. ಪುರುಷರು ಆಗಿಂದಾಗ್ಗೆ ಮದುವೆಯಾಗುತ್ತಿದ್ದರು. ಇಷ್ಟ ಬಂದಷ್ಟು ಪತ್ನಿಯರನ್ನು ಹೊಂದುತ್ತಿದ್ದರು. ಸಾಮಾಜಿಕ ಸ್ಥಾನಕ್ಕೆ ಅನುಗುಣವಾಗಿ ಹತ್ತೋ, ಇಪ್ಪತ್ತೋ, ನೂರೋ, ಹೀಗೆ ತಮಗಿಷ್ಟ ಬಂದಷ್ಟು ಹೆಂಡತಿಯರನ್ನು ಇಟ್ಟುಕೊಳ್ಳುತ್ತಿದ್ದರು. ವಿಚ್ಛೇದನ ಸುಲಭ ಮತ್ತು ಮಾಮೂಲಾಗಿತ್ತು. ಕುರ್‌ಆನ್ ಈ ಪದ್ಧತಿಯನ್ನು ಕೊನೆಗಾಣಿಸಿ ಕೆಲವು ಕಟ್ಟುನಿಟ್ಟಿನ ನಿರ್ಬಂಧಗಳನ್ನು ಹೇರಿತು. ಜೊತೆಗೆ ಇನ್ನೊಂದು ಕೆಟ್ಟ ಪದ್ಧತಿಯೂ ಇತ್ತು. ಪುರುಷರು ತಮ್ಮ ಪತ್ನಿಯರೊಂದಿಗೆ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವುದಿಲ್ಲ ಎಂದು ಏಕಪಕ್ಷೀಯ ಶಪಥ ತೆಗೆದುಕೊಳ್ಳುತ್ತಿದ್ದರು ಮತ್ತು ಇದು ಮಹಿಳೆಯರನ್ನು ಅಡಕತ್ತರಿಗೆ ಸಿಲುಕಿಸುತ್ತಿತ್ತು. ಈ ಮಹಿಳೆಯರು ವಿಚ್ಛೇದನವನ್ನೂ ಪಡೆದುಕೊಳ್ಳಲಾರದೆ, ಮರುವಿವಾಹವೂ ಆಗದೆ ಇಡೀ ಜೀವಿತಾವಧಿಯನ್ನು ಗುಲಾಮಗಿರಿಯಲ್ಲಿ ಕಳೆಯಬೇಕಿತ್ತು. ಕುರ್‌ಆನ್ ಈ ಪುರುಷರನ್ನುದ್ದೇಶಿಸಿ "(ಪತಿಯು ಪತ್ನಿಯನ್ನು ಪತ್ನಿಯಾಗಿ) ಉತ್ತಮ ರೀತಿಯಲ್ಲಿ ಉಳಿಸಿಕೊಳ್ಳಬೇಕು ಅಥವಾ ಉದಾರವಾಗಿ ಬಿಡುಗಡೆಗೊಳಿಸಬೇಕು" (2:229) ಎಂದು ನಿರ್ದೇಶಿಸಿತು.

ಅನೇಕ ಪ್ರಕರಣಗಳಲ್ಲಿ ವಿಧವೆಯರಾದ ಮಹಿಳೆಯನ್ನು ಆಕೆಯ ಪತಿಯ ಆಸ್ತಿಯ

ಭಾಗವೆಂದು ಪರಿಗಣಿಸಲಾಗುತ್ತಿತ್ತು. ಪುರುಷನ ಗಂಡು ಉತ್ತರಾಧಿಕಾರಿಗಳು ಆಕೆಯನ್ನೂ ಭೋಗ್ಯ ಮಾಡಬಹುದಾದ ಪಿತ್ರಾರ್ಜಿತ ಸೊತ್ತೆಂದು ಭಾವಿಸುತ್ತಿದ್ದರು. ಹೆಚ್ಚಿನ ಸಂದರ್ಭಗಳಲ್ಲಿ ಮೃತ ವ್ಯಕ್ತಿಯ ಇನ್ನೊಂದು ಪತ್ನಿಯ ಹಿರಿಯ ಮಗನೇ ತನ್ನ ಮಲತಾಯಿಯನ್ನು ಮದುವೆಯಾಗುತ್ತಿದ್ದ. ಆದರೆ ಕುರ್‌ಆನ್ ಈ ಅಸಹ್ಯ ಪದ್ಧತಿಗೆ ಕಡಿವಾಣ ಹಾಕಿತು.

> **"ನಿಮ್ಮ ತಂದೆ ವಿವಾಹವಾಗಿದ್ದ ಮಹಿಳೆಯನ್ನು ನೀವು ವಿವಾಹವಾಗಬೇಡಿ – ಹಿಂದೆ ಗತಿಸಿದ್ದು ಇದಕ್ಕೆ ಹೊರತಾಗಿದೆ. ಖಂಡಿತವಾಗಿಯೂ ಅದು ನಾಚಿಕೆಗೇಡಿನ ಹೀನ ಕಾರ್ಯವಾಗಿತ್ತು ಮತ್ತು ತೀರಾ ದುಷ್ಟ ಮಾರ್ಗವಾಗಿತ್ತು." (4:22)**

ವಿಧವೆಯಾದ ಮಹಿಳೆಯನ್ನು ಹಿರಿಯ ಸಾಕುಮಗ ಮದುವೆಯಾಗದಿದ್ದರೆ; ಆಕೆಯ ಭಾವಂದಿರೇ ವಿವಾಹವಾಗುತ್ತಿದ್ದರು. ಇಂತಹ ಸಂದರ್ಭದಲ್ಲಿ ಮೃತ ವ್ಯಕ್ತಿಯ ಸೋದರರ ಪೈಕಿ ಒಬ್ಬರು ಆಕೆಯ ಮೇಲೆ ಬಟ್ಟೆಯನ್ನು ಎಸೆದು ಹಕ್ಕು ಸ್ಥಾಪಿಸುತ್ತಿದ್ದರು. ಯಾವುದೇ ಸಂದರ್ಭದಲ್ಲಿ ವಿಧವೆಗೆ ತನ್ನ ಪತಿಯ ಮನೆಯನ್ನು ತೊರೆಯಲು ಅವಕಾಶ ಇರುತ್ತಿರಲಿಲ್ಲ.

ಇಸ್ಲಾಮ್ ಪೂರ್ವದ ಅರೇಬಿಯಾದಲ್ಲಿ ವ್ಯಾಪಕವಾಗಿದ್ದ ಸ್ವೇಚ್ಛಾಚಾರದಿಂದಾಗಿ ವಿವಾಹೇತರ ಗರ್ಭ ಧಾರಣೆ ಸಾರ್ವತ್ರಿಕವಾಗಿತ್ತು.

ಹೆಚ್ಚಿನ ಗೋತ್ರಗಳಲ್ಲಿ ಮಹಿಳೆಯ ಸ್ಥಾನ ನಿಕೃಷ್ಟವಾಗಿತ್ತು. ಆಕೆಯನ್ನು ಲೈಂಗಿಕ ಸಾಧನವಾಗಿ ನೋಡಲಾಗುತ್ತಿತ್ತು. ಮನೆಯಿಂದ ಹೊರಗೆ ಹೋಗುವಾಗ ಸರಿಯಾಗಿ ಬಟ್ಟೆ ಧರಿಸುವ ಸ್ವಾತಂತ್ರ್ಯವೂ ಅವರಿಗೆ ಇರುತ್ತಿರಲಿಲ್ಲ. ಮಕ್ಕಾದ ಪವಿತ್ರಭವನದಲ್ಲಿ ಹೆಣ್ಮಕ್ಕಳು ನಗ್ನರಾಗಿ ಪ್ರದಕ್ಷಿಣೆ ಮಾಡುತ್ತಿದ್ದರು. ಇದು ಪುರಷರಿಗೆ ಒಂದು ರೀತಿಯ ಮನರಂಜನೆಯ ಮಾರ್ಗವಾಗಿತ್ತು.

ಇಸ್ಲಾಮ್‌ಗೆ ಮುಂಚಿನ ಅರೆಬಿಯಾದಲ್ಲಿ ಮಹಿಳೆಯರಿಗೆ ಆಸ್ತಿಯ ಹಕ್ಕು ಇರಲಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಮಹಿಳೆಯರನ್ನೇ ಆಸ್ತಿ ಎಂದು ಪರಿಗಣಿಸಲಾಗುತ್ತಿತ್ತು. ಪುರುಷರಿಗೆ ಅವರನ್ನು ಖರೀದಿಸುವ, ಮಾರಾಟ ಮಾಡುವ ಅಥವಾ ಅಡವು ಇಡುವ ಅವಕಾಶವಿತ್ತು. ಕುರ್‌ಆನ್ ಇದನ್ನು ರದ್ದುಪಡಿಸಿ ಹೊಸ ನಿಯಮವನ್ನು ಜಾರಿಗೆ ತಂದಿತು. ಮಹಿಳೆಗೂ ವಾರೀಸು ಹಕ್ಕು ಮತ್ತು ಅದರ ಭಾಗವಾಗಿ ಸಂಪತ್ತನ್ನು ಹೊಂದುವ ಹಕ್ಕು ಇದೆ ಎಂದು ಅದು ಘೋಷಿಸಿತು.

## ಆಧುನಿಕ ಸಮಾಜದಲ್ಲಿ ಮಹಿಳೆ:

ವಿಶ್ವದ ಅನೇಕ ಭಾಗಗಳಿಂದ ಇತ್ತೀಚಿನ ದಿನಗಳಲ್ಲಿ ವರದಿಯಾಗುತ್ತಿರುವ ಅನೇಕ ಪ್ರಕರಣಗಳನ್ನು ಗಮನಿಸಿದರೆ, ಮಹಿಳೆಯರಿಗೆ ಗೌರವ ನೀಡುವ ವಿಷಯದಲ್ಲಿ ನಾವು ಏಳನೇ ಶತಮಾನ (ಇಸ್ಲಾಮ್‌ನ ಉಗಮ)ಕ್ಕೂ ಹಿಂದಕ್ಕೆ ತೆರಳುತ್ತಿದ್ದೇವೆ ಎಂಬ ಭಾವನೆ ಮೂಡುತ್ತದೆ.

ಆಧುನಿಕ ಯುಗದಲ್ಲಿಯೂ ಭ್ರೂಣಹತ್ಯೆಯ ಹೆಸರಿನಲ್ಲಿ ಹೆಣ್ಣು ಶಿಶುವನ್ನು ಕೊಲ್ಲುವ ಘಟನೆಗಳು ವರದಿಯಾಗುತ್ತಿವೆ. ಯುನಿಸೆಫ್ ಪ್ರಕಟಿಸಿದ ಮಕ್ಕಳ ಜಾಗತಿಕ ಸ್ಥಿತಿಗತಿಯ ವರದಿಯ ಪ್ರಕಾರ, ಭಾರತದಲ್ಲಿ ಗಂಡು ಮಕ್ಕಳ ಸಂಖ್ಯೆ ಹೆಣ್ಣು ಮಕ್ಕಳ ಸಂಖ್ಯೆಗಿಂತ ಹೆಚ್ಚಿದ್ದು, ಪ್ರತಿ ಸಾವಿರ ಗಂಡು ಮಕ್ಕಳಿಗೆ 880 ಹೆಣ್ಣು ಮಕ್ಕಳಿದ್ದಾರೆ. ಜಾಗತಿಕ ಲಿಂಗಾನುಪಾತದ ಪ್ರಮಾಣ ಪ್ರತಿ ಸಾವಿರ ಗಂಡು ಮಕ್ಕಳಿಗೆ 954 ಬಾಲಕಿಯರು. ಹೆಣ್ಣು ಶಿಶುಗಳ ಜನನ ಪ್ರಮಾಣ ಕಡಿಮೆಯಾಗಲಿಕ್ಕೆ ಹೆಣ್ಣು ಭ್ರೂಣಹತ್ಯೆಯೇ ಕಾರಣ.

ಪ್ರತಿ ವರ್ಷ ಅಂದಾಜು 70 ದಶಲಕ್ಷ ಹೆಣ್ಣು ಮಕ್ಕಳು ಹುಟ್ಟುವ ಮುನ್ನವೇ ಸಾಯುತ್ತಿದ್ದಾರೆ. ಇದು ಇಡೀ ಮನುಕುಲ ನಾಚಿ ತಲೆತಗ್ಗಿಸಬೇಕಾದ ನಮ್ಮ ಆತ್ಮಸಾಕ್ಷಿಯನ್ನು ಕಲಕಬೇಕಾದ ಸಂಗತಿ. ಆದರೆ ನಾವು ಮಾತ್ರ ಮಾನವ ಹಕ್ಕುಗಳನ್ನು ಗೌರವಿಸುವ ನಾಗರಿಕ ಸಮಾಜದಲ್ಲಿ ಬದುಕುತ್ತಿದ್ದೇವೆ ಎಂಬ ಭ್ರಮೆಯಲ್ಲಿ ಇದ್ದೇವೆ.

ಈ ಆಧುನಿಕ ಯುಗದಲ್ಲಿ ಮಹಿಳೆ ಕೇವಲ ಮನರಂಜನೆಯ ಸರಕಾಗಿ ಮಾರ್ಪಟ್ಟಿದ್ದಾಳೆ. ನೈಜ ಅಥವಾ ಕಾಲ್ಪನಿಕ ಸಮಾನತೆಯನ್ನು ಬೆನ್ನಟ್ಟುತ್ತಾ ಮಹಿಳೆ ತನಗರಿವಿಲ್ಲದೆಯೇ ತನ್ನ ಸ್ಥಾನವನ್ನು ಕುಂಠಿತಗೊಳಿಸಿ ಕೊಳ್ಳುತ್ತಿದ್ದಾಳೆ.

ಆಧುನಿಕ ಜಗತ್ತು ಮಹಿಳೆಯರಿಗೆ ಅವರ ಹಕ್ಕುಗಳನ್ನು ನೀಡಿರಬಹುದು. ಆದರೆ, ಅವರ ರಕ್ಷಣೆ ಮತ್ತು ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಿಲ್ಲ. ಈ 'ಸ್ವಾತಂತ್ರ್ಯ'ವು ಆಕೆಯ ಶೋಷಣೆಗೆ ಹೊಸ ಹೊಸ ಮಾರ್ಗಗಳನ್ನು ತೆರೆದುಕೊಟ್ಟಿದೆ. ಪರಿಣಾಮವಾಗಿ ಸಮಾಜದಲ್ಲಿ ಗೊಂದಲದ ವಾತಾವರಣವಿದೆ. ಈ ಸ್ವಾತಂತ್ರ್ಯವು ಹೆಣ್ಣನ್ನು ಮಾರುಕಟ್ಟೆಯಲ್ಲಿ ಖರೀದಿಗೆ ಲಭ್ಯವಿರುವ ಸರಕಾಗಿ ಮಾರ್ಪಡಿಸುವ ಒಂದು ಸಂಚಾಗಿದೆ. ಸೆಕ್ಸ್ ಎಂಬುದು ಅತಿದೊಡ್ಡ ಜಾಗತಿಕ ಮಾರುಕಟ್ಟೆಯಾಗಿ ಮಾರ್ಪಟ್ಟಿದ್ದು ಪ್ರಾಯಶಃ ಮನುಕುಲದ ದೊಡ್ಡ ಪಿಡುಗಾಗಿಯೂ ರೂಪಾಂತರಗೊಂಡಿದೆ. ಇದು ಮನುಷ್ಯರ ಸಾವು (ಏಡ್ಸ್, ಆತ್ಮಹತ್ಯೆ, ಕೊಲೆ) ಮತ್ತು ಕುಟುಂಬಗಳ ವಿನಾಶ ಮತ್ತು ಸಾಮಾಜಿಕ ಅಶಾಂತಿಗೆ ಕಾರಣವಾಗುತ್ತಿದೆ.

ಮಹಿಳೆಯರನ್ನು ಚರಾಸ್ತಿಗಿಂತಲೂ ನಿಕೃಷ್ಟವಾಗಿ ಪರಿಗಣಿಸಲಾಗುತ್ತಿದೆ.

ವೇಶ್ಯಾವೃತ್ತಿ, ಅಶ್ಲೀಲ ನೃತ್ಯ, ಮಾಡೆಲಿಂಗ್, ನಗ್ನತೆ, ವರದಕ್ಷಿಣೆ ಕೊಲೆ, ವಧುದಹನ, ಜೂಜಾಟ, ಮದ್ಯಪಾನ ಇತ್ಯಾದಿಗಳು ಸಾಮಾನ್ಯವಾಗಿ ಬಿಟ್ಟಿವೆ. ಸಲಿಂಗ ಕಾಮ ಮತ್ತು ಅಮಿತ ಕ್ಯಾಷುವಲ್ ಸೆಕ್ಸ್ ಹಾಗೂ ಒಂದಕ್ಕಿಂತ ಹೆಚ್ಚು ಲೈಂಗಿಕ ಸಂಗಾತಿಗಳನ್ನು ಹೊಂದುವುದು ಈಚೆಗೆ ಸಾಮಾನ್ಯವಾಗುತ್ತಿದೆ.

ಮಹಿಳೆಯರನ್ನು ಲೈಂಗಿಕ ಸರಕೆಂಬಂತೆ ನಡೆಸಿಕೊಳ್ಳುವ ಮನೋಭಾವ ಸಾಮಾಜಿಕವಾಗಿ ಅಂಗೀಕಾರಾರ್ಹವಾದ ರೂಪಗಳನ್ನು ಪಡೆಯತೊಡಗಿದೆ. ಮಾಧ್ಯಮ ಮತ್ತು ಜಾಹೀರಾತಿನಲ್ಲಿ ಕಡಿಮೆ ಬಟ್ಟೆ ತೊಟ್ಟ ಮಹಿಳೆಯರ ಪ್ರದರ್ಶನ, (ಹೆಚ್ಚಿನ ವೇಳೆ ಜಾಹೀರಾತಿನಲ್ಲಿ ಉತ್ಪನ್ನಗಳಿಗೂ ಅದರಲ್ಲಿ ಪ್ರತ್ಯಕ್ಷಗೊಳ್ಳುವ ರೂಪದರ್ಶಿಗಳಿಗೂ ಸಂಬಂಧವೇ ಇರುವುದಿಲ್ಲ), ಅಶ್ಲೀಲ ಚಿತ್ರಗಳು, ಸ್ಟ್ರಿಪ್ ಬಾರ್‌ಗಳು, ತುಂಡುಡುಗೆ ತೊಟ್ಟ ವೇಟರ್‌ಗಳು, ಮೈ ಪ್ರದರ್ಶನಕ್ಕೆ ಅವಕಾಶವಿರುವ ಸಮವಸ್ತ್ರಗಳು, ಜನಪ್ರಿಯವಾಗುತ್ತಿರುವ ಕಾಸ್ಮೆಟಿಕ್ ಸರ್ಜರಿ ಮತ್ತು ಸ್ತನದ ಗಾತ್ರ ಹೆಚ್ಚಿಸುವ ಶಸ್ತ್ರಚಿಕಿತ್ಸೆಗಳು ಈ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತವೆ.

## ಅನಿಯಂತ್ರಿತ ಲೈಂಗಿಕ ಹುಚ್ಚು

ಮಹಿಳೆಯರು, ಬಾಲಕಿಯರು, ಅಷ್ಟೇ ಯಾಕೆ? ಅಮಾಯಕ ಮಕ್ಕಳು ಕೂಡಾ ಇಂದು ಕಾಮುಕರ ದಾಳಿಯಿಂದ ಸುರಕ್ಷಿತರಲ್ಲ. ಮಹಿಳೆಯರು, ಬಾಲಕಿಯರನ್ನು ಅಪಹರಿಸಿ, ಲೈಂಗಿಕ ಕಿರುಕುಳ ನೀಡಿ ಕೊಂದ ಘಟನೆಗಳು ಸಾಕಷ್ಟಿವೆ. ಇನ್ನು ಕೆಲವು ಪ್ರಕರಣದಲ್ಲಿ ವೀಡಿಯೋ ಚಿತ್ರೀಕರಣ ಮಾಡಿ ಅಮಾಯಕರನ್ನು ಹೆದರಿಸಲಾಗುತ್ತದೆ, ಚಾರಿತ್ರ್ಯಹನನ ಮಾಡಲಾಗುತ್ತದೆ. ಕೆಲವು ಪ್ರಕರಣಗಳಲ್ಲಿ ಆರೋಪಿಗಳು ತಮ್ಮ ದುಷ್ಕೃತ್ಯದ ವಿಡಿಯೋಗಳನ್ನು ಸಾಮಾಜಿಕ ಜಾಲ ತಾಣಗಳಲ್ಲಿಯೂ ಪ್ರಕಟಿಸಿ ಕಾನೂನಿಗೆ ಸವಾಲು ಎಸೆಯುತ್ತಿದ್ದಾರೆ. ಈ ಬೆಳವಣಿಗೆಗಳು ಧಾರ್ಮಿಕತೆ, ಸಾಮಾಜಿಕ ಪ್ರಜ್ಞೆ ಮತ್ತು ನಾಗರಿಕ ಸಮಾಜದ ಅಣಕವಾಗಿದೆ.

ಹೆಣ್ಣಿನ ಮೇಲೆ ನಡೆಯುವ ಅನಿಯಂತ್ರಿತ ಶೋಷಣೆಗಳು ನಾಗರಿಕತೆಗಳನ್ನು ಧ್ವಂಸ ಗೊಳಿಸಿರುವುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ನಮ್ಮ ಸಿನಿಮಾ, ನಿಯತಕಾಲಿಕೆಗಳು, ದಿನಪತ್ರಿಕೆಗಳು ಕೂಡಾ ಲೈಂಗಿಕ ಪ್ರಚೋದನೆಗೆ ತಮ್ಮ ಕೊಡುಗೆ ಸಲ್ಲಿಸುತ್ತಿವೆ. ರಾಷ್ಟ್ರೀಯ ಮಟ್ಟದ ಇಂಗ್ಲಿಷ್ ನಿಯತಕಾಲಿಕಗಳು, ದಿನಪತ್ರಿಕೆಗಳು ಕೂಡಾ ನೀಲಿಚಿತ್ರಗಳನ್ನೊಳಗೊಂಡ ಪುರವಣಿಗಳನ್ನು ಹೊರತರುತ್ತಿವೆ. ಇಂಟರ್‌ನೆಟ್ ಸುಲಭದಲ್ಲೇ ಲಭ್ಯವಿರುವುದು ಯುವ ಮನಸ್ಸುಗಳು ಇಂತಹ ಅನಾರೋಗ್ಯಕರ

ಸಾಮಗ್ರಿಗಳನ್ನು ನೋಡುವ ಸಾಧ್ಯತೆಯನ್ನು ಹೆಚ್ಚಿಸಿದೆ.

ಅನಿಯಮಿತ ಲೈಂಗಿಕ ಹುಚ್ಚಿನ ಈ ಆಧುನಿಕ ಸಮಸ್ಯೆಯನ್ನು ಪರಿಹರಿಸಬೇಕಾದರೆ, ಸರ್ಕಾರ, ಸಾಮಾಜಿಕ ವಿಜ್ಞಾನ, ಮಾಧ್ಯಮ, ಧಾರ್ಮಿಕ ನಾಯಕರ ಸಾಮೂಹಿಕ ಪ್ರಯತ್ನ ಅಗತ್ಯವಿದೆ. ನಮ್ಮ ಸಂಸ್ಕೃತಿ, ಕೌಟುಂಬಿಕ ಬದುಕಷ್ಟೇ ಅಲ್ಲ, ನಾಗರಿಕತೆಯ ಬುನಾದಿಯೇ ಗಂಡಾಂತರಕ್ಕೆ ಸಿಲುಕಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಸಾಹಿತ್ಯ, ದೃಶ್ಯ ಮತ್ತು ಮುದ್ರಣ ಮಾಧ್ಯಮಗಳಲ್ಲಿ ಅನಾರೋಗ್ಯಕರ ಚಿತ್ರ/ಲೇಖನ ಪ್ರಕಟಿಸಲು ಅವಕಾಶ ಇರಬಾರದು. ಅಸಹಜ ಲೈಂಗಿಕತೆ, ವಿವಾಹ ಪೂರ್ವ ಲೈಂಗಿತತೆ, ಮದುವೆಗೆ ಹೊರತಾದ ಲೈಂಗಿಕತೆಯನ್ನು ಬೆಂಬಲಿಸುವ ಬೆಳವಣಿಗೆಗಳನ್ನು ಕಠಿಣ ಕ್ರಮಗಳ ಮೂಲಕ ತಡೆಯಬೇಕು. ದೇವರ ಭಯ, ನೈತಿಕ ಮೌಲ್ಯಗಳು ಮತ್ತು ಜವಾಬ್ದಾರಿ ಪ್ರಜ್ಞೆಯನ್ನು ಸಮಾಜದ ಮಾರ್ಗನಿರ್ದೇಶಿ ತತ್ವಗಳಾಗಿ ಬೆಳೆಸುವ ಅಗತ್ಯವಿದೆ.

ಇಸ್ಲಾಮಿನಲ್ಲಿ ಮಹಿಳೆಯರಿಗೆ ನೀಡಲಾಗಿರುವ ಹಕ್ಕುಗಳ ಕಡೆಗೆ ನಾವು ಒಮ್ಮೆ ಕಣ್ಣು ಹಾಯಿಸೋಣ. ಇಲ್ಲಿ ನಾವು ಒಂದು ಮೂಲಭೂತ ವ್ಯತ್ಯಾಸವನ್ನು ಗಣನೆಗೆ ತೆಗೆದುಕೊಳ್ಳಬೇಕು. ಅದೇನೆಂದರೆ ಇಸ್ಲಾಮ್ ಅವರಿಗೆ ನೀಡಿರುವ ಹಕ್ಕುಗಳು ಮತ್ತು ಇಪ್ಪತ್ತೊಂದನೇ ಶತಮಾನದ ಮುಸ್ಲಿಮ್ ಸಮಾಜದ ಸಾಮಾಜಿಕ–ಆರ್ಥಿಕ ವಾಸ್ತವಗಳ ನಡುವಿನ ಅಂತರವನ್ನು ನಾವು ಅರ್ಥಮಾಡಿಕೊಳ್ಳಬೇಕು.

# ಮಹಿಳೆಯರ ಬಗ್ಗೆ ಇಸ್ಲಾಮಿನ ದೃಷ್ಟಿಕೋನ – ಮೂಲ ಆಕರಗಳಿಂದ

ಕುರ್‌ಆನ್‌ನ ಅವತೀರ್ಣದ ಆರಂಭದಲ್ಲೇ ಇಸ್ಲಾಮ್ ಮಹಿಳೆಯರ ಹಕ್ಕುಗಳಿಗೆ ಮನ್ನಣೆ ನೀಡಿದ್ದು ಪುರುಷನಿಗೆ ಸಮಾನವಾದ ಅಧ್ಯಾತ್ಮಿಕ ಸಮಾನತೆಯನ್ನು ಕಲ್ಪಿಸಿದೆ. ಇಸ್ಲಾಮ್, ಗಂಡು ಮತ್ತು ಹೆಣ್ಣನ್ನು ಜೀವನದ ಪಾಲುದಾರರೆಂದು ಪರಿಗಣಿಸಿದ್ದು ತಮ್ಮ ವಿಶಿಷ್ಟ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ವಿಭಿನ್ನ, ಆದರೆ ಪೂರಕವಾದ ಹೊಣೆಗಾರಿಕೆ ಮತ್ತು ಪಾತ್ರಗಳನ್ನು ನಿಗದಿಪಡಿಸಿದೆ. ಅರೆಬಿಯಾದ ಮಹಿಳೆಯರು ಪ್ರವಾದಿ ಮುಹಮ್ಮದ್ ಅವರ ಬೋಧನೆಗಳು ತಮಗೆ ತಲುಪಿದ ಕೂಡಲೇ ಇವು ತಮ್ಮ ವಿಮೋಚನೆಯ ಸಂದೇಶ ಎಂಬುದನ್ನು ಅರ್ಥಮಾಡಿಕೊಂಡಿದ್ದರು. ವಸ್ತುತಃ ಇಸ್ಲಾಮನ್ನು ಮೊಟ್ಟ ಮೊದಲು ಸ್ವೀಕರಿಸಿದ್ದು ಒಬ್ಬ ಮಹಿಳೆ. (ಖದೀಜಾ, ಪ್ರವಾದಿ ಅವರ ಪತ್ನಿ). ಉಮರ್ ಇಸ್ಲಾಮ್ ಸ್ವೀಕರಿಸುವುದಕ್ಕೆ ಮುಂಚೆ ಅವರ ಪುತ್ರಿ ಫಾತಿಮಾ ಇಸ್ಲಾಮ್ ಸ್ವೀಕರಿಸಿದ್ದರು. ಅಷ್ಟೇ ಅಲ್ಲ, ತನ್ನ ಪಿತ ಇಸ್ಲಾಮ್ ಸ್ವೀಕರಿಸುವುದರಲ್ಲೂ ಫಾತಿಮಾ ನಿರ್ಣಾಯಕ ಪಾತ್ರವಹಿಸಿದ್ದರು. ಏಕದೇವನ ದಾಸರಾಗುವ ಮೂಲಕ ಅವರು ಸೃಷ್ಟಿಗಳ ದಾಸ್ಯತ್ವದಿಂದ ವಿಮೋಚನೆ ಹೊಂದಿದ್ದರು.

ಇಸ್ಲಾಮ್ ಸ್ವೀಕರಿಸುವ ಮೂಲಕ ಮಹಿಳೆಯರು ತಮ್ಮ ಮೇಲೆ ಹೇರಲಾಗಿದ್ದ ಮರ್ದನದ ಸಂಕೋಲೆಗಳಿಂದ ಮುಕ್ತಿ ಪಡೆದರು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮಹಿಳೆಯರ ಹಕ್ಕುಗಳನ್ನು ಬಲವಾಗಿ ಎತ್ತಿ ಹಿಡಿದಿದ್ದು ತಮ್ಮ ವಿದಾಯ ಭಾಷಣದಲ್ಲೂ ಅವರು ಅದನ್ನು ಪ್ರಸ್ತಾಪಿಸಿದ್ದರು: 'ಓ ಜನರೇ, ನಿಮ್ಮ ಮಹಿಳೆಯರ ಮೇಲೆ ನಿಮಗೆ ಕೆಲವು ಹಕ್ಕುಗಳಿವೆ ಎಂಬುದು ನಿಜ. ಅದೇ ಸಂದರ್ಭದಲ್ಲಿ ಅವರೂ ನಿಮ್ಮ ಮೇಲೆ ಕೆಲವು ಹಕ್ಕುಗಳನ್ನು ಹೊಂದಿದ್ದಾರೆ. ನೆನಪಿಡಿ, ನೀವು ಅವರನ್ನು ಕೇವಲ ದೇವರ ನಂಬಿಕೆ, ಅನುಮತಿಯೊಂದಿಗೆ ಪತ್ನಿಯಾಗಿ ಸ್ವೀಕರಿಸಿದ್ದೀರಿ. ಅವರು ನಿಮ್ಮ ಹಕ್ಕುಗಳಿಗೆ ಬದ್ಧರಾಗಿರಬೇಕಿದ್ದರೆ; ನೀವು ಅವರಿಗೆ ಪ್ರೀತಿಯಿಂದ ಉಣ್ಣಲು ಮತ್ತು ಉಡಲು ಕೊಡಬೇಕು. ನಿಮ್ಮ ಮಹಿಳೆಯರನ್ನು ಸರಿಯಾಗಿ ನೋಡಿಕೊಳ್ಳಿ, ಅವರೊಂದಿಗೆ ಸಹಾನುಭೂತಿ ಮತ್ತು ಸೌಮ್ಯದಿಂದ ವರ್ತಿಸಿ. ಅವರು ನಿಮ್ಮ ಬದುಕಿನ ಪಾಲುದಾರರು ಮತ್ತು ನಿಮ್ಮ ಜೀವನದ ಬದ್ಧ ಸಹಾಯಕರು. ನೀವು ಇಷ್ಟಪಡದವರ ಜತೆ ಸ್ನೇಹ ಮಾಡದಿರುವುದು ಮತ್ತು ತಮ್ಮ ಶೀಲವನ್ನು ಕಾಯ್ದುಕೊಳ್ಳಬೇಕಾದದ್ದು ಅವರು ನಿಮಗೆ ತೋರಬೇಕಾದ ನಿಷ್ಠೆ.'

## ಬದಲಾವಣೆ

ಶತಮಾನಗಳ ಕಾಲ ಬದುಕಿನ ಎಲ್ಲ ಘಟ್ಟಗಳಲ್ಲಿಯೂ ದ್ವಿತೀಯ ದರ್ಜೆ ನಾಗರಿಕರಾಗಿಯೇ ಇದ್ದ ಮಹಿಳೆಯರು ಕೊನೆಗೂ ವಿಮೋಚನೆ ಪಡೆದರು. ಇಸ್ಲಾಮಿನ ಆಗಮನದೊಂದಿಗೆ ಅವರಿಗೆ ಹಕ್ಕುಗಳು ದೊರೆತವು. ಪುರುಷರ ಪಾಲುದಾರರಾಗಿ, ಸಹಾಯಕರಾಗಿ ಸಮಾನತೆಯನ್ನು ಪಡೆದುಕೊಂಡರು. ಪ್ರತಿ ಮಳೆಯರಿಗೂ ನಿರ್ದಿಷ್ಟ ಮತ್ತು ಪವಿತ್ರವಾದ ಹಕ್ಕುಗಳನ್ನು ನಿಗದಿಪಡಿಸಿ ಆಕೆಗೆ ಸಲ್ಲಬೇಕಾದ ಪಾವನ ಸ್ಥಾನಮಾನವನ್ನು ಕಲ್ಪಿಸಿತು. ಈ ದೂರಗಾಮಿ ಮತ್ತು ಅಭೂತಪೂರ್ವ ಬದಲಾವಣೆಗಳು ಸಂಭವಿಸಿದ್ದಾದರೂ ಹೇಗೆ?

ಇಸ್ಲಾಮ್‌ನಲ್ಲಿ ಮಹಿಳೆಯರ ವಿಮೋಚನೆ ಪುರುಷರು ಅಥವಾ ಮಹಿಳೆಯರಿಂದಾಗಿ ಸಂಭವಿಸಿಲ್ಲ. ಅದು ದೇವರೇ ನಿಗದಿಪಡಿಸಿದ ಹಕ್ಕುಗಳಾಗಿವೆ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರು ತಮಗೆ ಕುರ್‌ಆನ್‌ನ ಸೂಕ್ತಗಳು ಅವತೀರ್ಣಗೊಂಡ ಕೂಡಲೇ ಅದನ್ನು ಜನರಿಗೆ ತಲುಪಿಸುತ್ತಿದ್ದರು. ಈ ಬೋಧನೆಗಳು ತಕ್ಷಣವೇ ಅನುಷ್ಠಾನಗೊಳ್ಳುತ್ತಿದ್ದವು. ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದಂತೆ, ಅವರನ್ನು ಗೌರವದಿಂದ ನಡೆಸಿಕೊಳ್ಳುವಂತೆ ತಾಕೀತು ಮಾಡುವ ಕುರ್‌ಆನ್‌ನ ನಿರ್ದೇಶನಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿತ್ತು. ಮುಸ್ಲಿಮ್ ಪುರುಷರು ಈ ನಿರ್ದೇಶನಗಳನ್ನು ಕೇಳಿಸಿಕೊಂಡ ಕೂಡಲೇ ತಮ್ಮ ವರ್ತನೆಗಳನ್ನು ಆಲೋಚನೆಗಳನ್ನು ಬದಲಾಯಿಸಿಕೊಂಡರು. ಮಹಿಳೆಯರು ತಮ್ಮ ಹಕ್ಕುಗಳಿಗೆ ಹೋರಾಟ ನಡೆಸಬೇಕಾದ ಅಗತ್ಯ ತಲೆದೋರಲಿಲ್ಲ. ಯಾವುದೇ ಬಂಡಾಯವಾಗಲೀ ರ‍್ಯಾಲಿ, ಪ್ರತಿಭಟನೆಗಳ ಅಗತ್ಯವಾಗಲೀ ತಲೆದೋರಲಿಲ್ಲ. ಇಸ್ಲಾಮ್‌ಗೆ ಮುಂಚಿನ ಅರೇಬಿಯಾದಲ್ಲಿ ಮಕ್ಕಳನ್ನು ಜೀವಂತವಾಗಿ ಹೂಳುತ್ತಿದ್ದ, ಮಹಿಳೆಯರ ಜತೆ ಅಸಭ್ಯವಾಗಿ ವರ್ತಿಸುತ್ತಿದ್ದ ಜನರೇ ದೇವಭಯ ಮತ್ತು ಕರುಣೆಯುಳ್ಳ ತಮ್ಮ ಹಿಂದಿನ ತಪ್ಪುಗಳ ಬಗ್ಗೆ ಪ್ರಾಯಶ್ಚಿತಪಡುವ ಮನುಷ್ಯರಾಗಿ ಮಾರ್ಪಟ್ಟಿದ್ದರು. ಪ್ರವಾದಿ ಮುಹಮ್ಮದ್ ಅವರ ಈ ಕೆಳಗಿನ ಮಾತುಗಳನ್ನು ಅವರು ಜೀವನದಲ್ಲಿ ಅಳವಡಿಸಿಕೊಂಡಿದ್ದರು.

'ಯಾರು ತನ್ನ ಪತ್ನಿಯೊಂದಿಗೆ ಅತ್ಯುತ್ತಮ ರೀತಿಯಲ್ಲಿ ವರ್ತಿಸುತ್ತಾನೋ ಅವನೇ ನಿಮ್ಮ ಪೈಕಿ ಶ್ರೇಷ್ಠ ವ್ಯಕ್ತಿ.'

ಇನ್ನೊಂದು ಸಂದರ್ಭದಲ್ಲಿ ಪ್ರವಾದಿವರ್ಯರು ಹೀಗೆಂದರು: "ಯಾರು ಮೂವರು ಹೆಣ್ಣು ಮಕ್ಕಳನ್ನು ಪೋಷಿಸಿದನೋ ಮತ್ತು ಅವರ ಜತೆ ಸದ್ವರ್ತನೆ

ಮಾಡಿದನೋ ಅವನಿಗೆ ಸ್ವರ್ಗವಿದೆ.'

ಸಮಾಜದಲ್ಲಿ ಆಮೂಲಾಗ್ರ ಸುಧಾರಣೆಯನ್ನು ತಂದ ನಂತರ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅತ್ಯಾಚಾರ, ನವಜಾತ ಹೆಣ್ಣು ಶಿಶುವಿನ ಹತ್ಯೆ ಮಾಡುವವರಿಗೆ ಕಠಿಣ ಶಿಕ್ಷೆ ನಿಗದಿಪಡಿಸಿದರು. ವೇಶ್ಯಾವಾಟಿಕೆ, ಜೂಜು, ನೃತ್ಯ ಮತ್ತು ಮದ್ಯಪಾನವನ್ನು ನಿಷೇಧಿಸಿದರು. ಲೈಂಗಿಕ ಸ್ವೇಚ್ಛಾಚಾರ ಮತ್ತು ಆಡಂಭರವನ್ನು ನಿಷೇಧಿಸಿದರು. ಮಹಿಳೆಯರನ್ನು ಆರ್ಥಿಕ ಹೊರೆ, ಆಟದ ವಸ್ತು ಅಥವಾ ಕಾಮದ ಸರಕು ಎಂಬ ದೃಷ್ಟಿಯಲ್ಲಿ ನೋಡಕೂಡದೆಂದು ತಾಕೀತು ಮಾಡಿದರು.

## ಇಸ್ಲಾಮೀ ಕಾನೂನಿನ ಪ್ರಕಾರ ಮಹಿಳೆಯರ ಹಕ್ಕುಗಳು

ಇಸ್ಲಾಮ್, ಮದುವೆಯನ್ನು ಭಾವನಾತ್ಮಕ ಮತ್ತು ಲೈಂಗಿಕ ಅಗತ್ಯಗಳ ಈಡೇರಿಕೆ ಹಾಗೂ ಕಾನೂನುಬದ್ಧವಾದ ಸಂತಾನಾಭಿವೃದ್ಧಿ ಮತ್ತು ಪರಿವಾರಗಳ ನಡುವಿನ ಸಂಬಂಧವನ್ನು ಸ್ಥಾಪಿಸುವ ಮತ್ತು ಸದೃಢಗೊಳಿಸುವ ಸಾಧನವೆಂದು ಪರಿಗಣಿಸುತ್ತದೆ. ಇಸ್ಲಾಮಿನ ಪ್ರಕಾರ ವಿವಾಹವು ಒಂದು ಒಪ್ಪಂದವೇ ಹೊರತು ಮಾಲಿಕತ್ವವಲ್ಲ. ಇಸ್ಲಾಮಿನ ಈ ನಿಲುವು ಮಹಿಳೆಯ ಸ್ಥಾನಮಾನದ ಮೇಲೆ ಸಕಾರಾತ್ಮಕ ಪ್ರಭಾವ ಬೀರುತ್ತದೆ.

1. ಮುಸ್ಲಿಮ್ ಮಹಿಳೆ ಮದುವೆಯಾಗುವಾಗ ತನ್ನ ಕನ್ಯಾ ಹೆಸರನ್ನು ಕಳೆದುಕೊಳ್ಳುವುದಿಲ್ಲ. ತನ್ನದೇ ಆದ ಗುರುತನ್ನು ಉಳಿಸಿಕೊಳ್ಳುತ್ತಾಳೆ.

2. ಯುವತಿಗೆ ತನ್ನ ಪತಿಯನ್ನು ಆಯ್ಕೆ ಮಾಡಿ ಕೊಳ್ಳುವ ಸ್ವಾತಂತ್ರ್ಯವಿದೆ. ಮದುವೆಯ ವಿಚಾರದಲ್ಲಿ ಮತ್ತು ಯಾರನ್ನು ಮದುವೆಯಾಗಬೇಕೆಂಬ ವಿಚಾರದಲ್ಲಿ ಆಕೆಯ ಒಪ್ಪಿಗೆ ಕಡ್ಡಾಯ.

3. ವರನು ವಧುದಕ್ಷಿಣೆಯನ್ನು (ಮೆಹರ್) ವಧುವಿಗೆ ನೀಡಬೇಕೇ ಹೊರತು ಆಕೆಯ ತಂದೆಗೆ ಅಲ್ಲ. ಮದುವೆ ಸಮಯದಲ್ಲಿ ಎಷ್ಟು ವಧುದಕ್ಷಿಣೆ ಬೇಕೆಂದು ಬೇಡಿಕೆ ಇಡುವ ಮತ್ತು ಅದನ್ನು ಪಡೆಯುವ ಹಕ್ಕು ಆಕೆಗಿದೆ. ಇದು, ಆಕೆಯದೇ ಸ್ವಂತ ಆಸ್ತಿಯಾಗಲಿದ್ದು, ಈ ಹಣವನ್ನು ತನಗೆ ಇಷ್ಟ ಬಂದಂತೆ ವ್ಯಯಿಸಬಹುದು. ಈ ವಿಚಾರದಲ್ಲಿ ಆಕೆಯ ಪುರುಷ ಸಂಬಂಧಿಕರು ಯಾವುದೇ ನಿರ್ದೇಶನ ನೀಡುವಂತಿಲ್ಲ.

4. ವಧು ಅಥವಾ ಆಕೆಯ ಪೋಷಕರಿಂದ ವರದಕ್ಷಿಣೆ ಪಡೆಯುವುದನ್ನು ಇಸ್ಲಾಮ್ ನಿರ್ಬಂಧಿಸುತ್ತದೆ.

5. ಪೋಷಕರಿಂದ ವಾರೀಸು ಸೊತ್ತು ಅಥವಾ ಉಡುಗೊರೆ ಪಡೆಯುವ ಹಕ್ಕು ಆಕೆಗಿದೆ. ಆಕೆ ಅದರ ಪೂರ್ಣ ಮಾಲೀಕಳಾಗಿರುತ್ತಾಳೆ ಮತ್ತು ಅದನ್ನು ಪತಿ ಅಥವಾ ಆತನ ಸಹೋದರರ ಜೊತೆಗೆ ಹಂಚಿಕೊಳ್ಳುವ ಅಗತ್ಯವಿಲ್ಲ.

ಆಕೆ ತನ್ನ ಪೋಷಕರ ಮತ್ತು ಪತಿಯ ಆಸ್ತಿಯಲ್ಲಿ ಪಾಲು ಹೊಂದಿರುತ್ತಾಳೆ. (ಕುರ್‌ಆನ್ 4:7, 32, 176).

6. ಕುರ್‌ಆನ್ ಪುರುಷರ ಮೇಲೆ ತನ್ನ ಎಲ್ಲ ಮಹಿಳಾ ಸಂಬಂಧಿಗಳ ಪೋಷಣೆಯ ಹೊಣೆಯನ್ನು ವಹಿಸುತ್ತದೆ. ಪತ್ನಿಯ ಬಳಿ ತನ್ನದೇ ಆದ ಹಣ ಇದ್ದರೂ ಪುರುಷನು ಆಕೆಯನ್ನೂ ಪರಿವಾರವನ್ನೂ ಸಲಹುವ ಜವಾಬ್ದಾರಿ ವಹಿಸಬೇಕು. ಆಕೆ ತನ್ನ ಬಳಿಯಿರುವ ಹಣವನ್ನು ಕುಟುಂಬದ ನಿರ್ವಹಣೆಗೆ ಬಳಸುವ ಅಗತ್ಯವಿಲ್ಲ. ಇದಕ್ಕೆ ಪ್ರತಿಯಾಗಿ ಮಹಿಳೆಯು ನಿಷ್ಠಾವಂತಳಾಗಿರಬೇಕು ಮತ್ತು ಶೀಲವನ್ನು ರಕ್ಷಿಸಿಕೊಳ್ಳಬೇಕು. (ಕುರ್‌ಆನ್ 4:34).

7. ತನ್ನ ಪತಿಯ ಜೊತೆಗೆ ಬದುಕಲು ಆಗದಿದ್ದರೆ; ಅಥವಾ ಆತ ವಿಚ್ಛೇದನ ನೀಡಲು ಬಯಸದೇ ಇದ್ದರೆ ಆಕೆಯೇ ಸ್ವತಃ ವಿಚ್ಛೇದನ (ಖುಲಾ) ಪಡೆಯಬಹುದು.

8. ವಿಧವೆಯರು ಮತ್ತು ವಿಚ್ಛೇದಿತೆಯರು ಮರು ಮದುವೆಯಾಗಬಹುದು.

9. ಮಹಿಳೆಯೂ ತನಗಿಷ್ಟವಿದ್ದರೆ ಅಥವಾ ಪರಿಸ್ಥಿತಿ ಬಯಸಿದರೆ ದುಡಿಮೆ ಮಾಡಬಹುದು ಮತ್ತು ಸಂಪಾದನೆ ಮಾಡಬಹುದು.

ಸಾಮಾನ್ಯವಾಗಿ ಚಿತ್ರಿಸಲಾಗುವಂತೆ, ಇಸ್ಲಾಮ್ ಮಹಿಳೆಯನ್ನು ನಾಲ್ಕು ಗೋಡೆಯ ನಡುವೆ ಇರಬೇಕು ಎಂದು ಒತ್ತಾಯಿಸುವುದಿಲ್ಲ. ಉದ್ಯೋಗ ಮಾಡಬಯಸುವ ಮಹಿಳೆಯ ಮೇಲೆ ಅದು ಯಾವುದೇ ನಿಯಂತ್ರಣ ಹೇರುವುದಿಲ್ಲ.

10. ಮದುವೆಯ ನಂತರ ಪತಿ ನಗದು ಅಥವಾ ಯಾವುದಾದರೂ ಉಡುಗೊರೆ ನೀಡಿದ್ದರೆ ವಿಚ್ಛೇದನದ ಬಳಿಕ ಅದನ್ನು ವಾಪಸು ಪಡೆಯುವಂತಿಲ್ಲ.

11. ಇಸ್ಲಾಮ್ ಜ್ಞಾನ ಸಂಪಾದನೆಯ ವಿಷಯದಲ್ಲಿ ಮಹಿಳೆ ಮತ್ತು ಪುರುಷರಿಬ್ಬರೂ ಸಮಾನರು ಎಂದು ಪರಿಗಣಿಸುತ್ತದೆ. ಜ್ಞಾನಾರ್ಜನೆ ಇಬ್ಬರಿಗೂ ಕಡ್ಡಾಯ ಎಂದು ಪ್ರತಿಪಾದಿಸುತ್ತದೆ.

ಇದು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮತ್ತು ಕುರ್‌ಆನ್ ಪ್ರತಿಪಾದಿಸುವ ಸಂಸ್ಕೃತಿ. ಇದು ಸ್ತ್ರೀಪುರುಷರಿಗೆ ಇಸ್ಲಾಮ್ ನಿಗದಿಪಡಿಸಿರುವ

ಜೀವನ ವಿಧಾನ. ದೇವರಿಗಿಂತಲೂ ಹೆಚ್ಚು ತಿಳಿದವರು ಯಾರಿದ್ದಾರೆ?

ಮಹಿಳೆಗೆ ನೀಡಲಾಗಿರುವ ಯಾವ ಹಕ್ಕು ಕೂಡಾ ಸಮಾಜದ ಕೊಡುಗೆಯಲ್ಲ. ಇದನ್ನು ಯಾವುದೇ ಸಂದರ್ಭದಲ್ಲಿ ವಾಪಸು ಪಡೆಯಲು ಆಗದು. ಈ ಹಕ್ಕುಗಳಿಗೆ ಇಸ್ಲಾಮಿನಲ್ಲಿ ಕಾನೂನಿನ ರಕ್ಷಣೆ ಇದೆ. ಹೀಗೆ ಇಸ್ಲಾಮ್ ಮಹಿಳೆಯ ಘನತೆಯನ್ನು ಎತ್ತಿಹಿಡಿಯುತ್ತದೆ. ಮಹಿಳೆಯರನ್ನು ಪಾಶ್ಚಾತ್ಯ ಸಮಾಜ ಚರಾಸ್ತಿಯೆಂದು ಪರಿಗಣಿಸುತ್ತಿದ್ದ ಮತ್ತು ಆಕೆಗೆ ಆತ್ಮವಿದೆಯೇ ಎಂದು ಸಂಶಯ ಪಡುತ್ತಿದ್ದ ಕಾಲದಲ್ಲಿ ಇಸ್ಲಾಮ್ ಈ ಎಲ್ಲ ಹಕ್ಕುಗಳನ್ನು ನೀಡಿತ್ತೆಂಬುದು ಇಲ್ಲಿ ಗಮನಾರ್ಹ.

ಮಹಿಳೆಯನ್ನು ಅಮೂಲ್ಯವೆಂದು ಪರಿಗಣಿಸುವ ಇಸ್ಲಾಮ್ ಆಕೆಯನ್ನು ಗೌರವಿಸಬೇಕೆಂದೂ ಅವಮಾನಿಸಬಾರದೆಂದೂ ತಾಕೀತು ಮಾಡುತ್ತದೆ.

ಪಶ್ಚಿಮ ಏಷ್ಯಾದ ಕೆಲವು ದೇಶಗಳಲ್ಲಿ ಅಥವಾ ಭಾರತೀಯ ಉಪಖಂಡದಲ್ಲಿ ಅಥವಾ ಕೆಲ ಮುಸ್ಲಿಮ್ ಕುಟುಂಬಗಳಲ್ಲಿ ಮಹಿಳೆಯರ ಜೊತೆ ದುರ್ವರ್ತನೆ ನಡೆಯುತ್ತಿದ್ದರೆ ಅದಕ್ಕೆ ಕಾರಣ ಮುಸ್ಲಿಮರು ಅಳವಡಿಸಿಕೊಂಡಿರುವ ಕೆಲವು ಸಾಂಸ್ಕೃತಿಕ ಅಂಶಗಳೇ ಹೊರತು ಇಸ್ಲಾಮ್ ಅಲ್ಲ. ಇಸ್ಲಾಮ್ ಒಂದು ವೇಳೆ ದಮನಕಾರಿ ಧರ್ಮವಾಗಿದ್ದರೆ ವಿಶ್ವದ ವಿವಿಧೆಡೆ ಅನೇಕ ಮಹಿಳೆಯರು ಸ್ವಯಂಪ್ರೇರಿತರಾಗಿ ಇಸ್ಲಾಮ್ ಧರ್ಮ ಸ್ವೀಕರಿಸಲು ಸಾಧ್ಯವಿತ್ತೇ?

## ಇಸ್ಲಾಮ್‌ನಲ್ಲಿ ಮಹಿಳೆಯರ ಕರ್ತವ್ಯಗಳು

ಇಸ್ಲಾಮ್ ಒಂದು ನ್ಯಾಯೋಚಿತ ಮತ್ತು ಸಂತುಲಿತ ಜೀವನ ವ್ಯವಸ್ಥೆ. ಅದು ಮಹಿಳೆಯರಿಗೆ ಹಕ್ಕುಗಳನ್ನು ನೀಡಿರುವಂತೆಯೇ ಅವರಿಗೆ ಕರ್ತವ್ಯಗಳನ್ನೂ ನಿಗದಿಪಡಿಸಿದೆ. ಮುಸ್ಲಿಮ್ ಮಹಿಳೆಯರು ಈ ಕೆಳಗಿನವುಗಳನ್ನು ಪಾಲಿಸಬೇಕು.

1. ಏಕದೇವರಲ್ಲಿ ನಂಬಿಕೆ (ತೌಹೀದ್) ಮತ್ತು ಇಸ್ಲಾಮಿನ ಆಚರಣೆ ಆಕೆಯ ಆದ್ಯ ಕರ್ತವ್ಯ. ಮುಸ್ಲಿಮ್ ಮಹಿಳೆ ನಮಾಜ್ ನಿರ್ವಹಿಸಬೇಕು; ರಮದಾನ್ ಸಂದರ್ಭದಲ್ಲಿ ಉಪವಾಸ (ಸೌಮ್) ಆಚರಿಸಬೇಕು; ನಿರ್ದಿಷ್ಟ ಪ್ರಮಾಣಕ್ಕಿಂತ ಹೆಚ್ಚಿನ ಸಂಪತ್ತಿದ್ದರೆ ದಾನ (ಝಕಾತ್) ನೀಡಬೇಕು; ವೆಚ್ಚ ಭರಿಸಲು ಶಕ್ತಳಾದರೆ ಹಜ್ ಯಾತ್ರೆ ಕೈಗೊಳ್ಳಬೇಕು.

2. ಶೀಲ ಉಳಿಸಿಕೊಳ್ಳಬೇಕು ಮತ್ತು ವಿವಾಹೇತರ ಸಂಬಂಧಗಳಿಂದ ದೂರವಿರಬೇಕು.

3. ಸಭ್ಯ ಉಡುಪು ಧರಿಸಬೇಕು, ಹತ್ತಿರದ ಸಂಬಂಧಿಗಳನ್ನು ಹೊರತು ಪಡಿಸಿ ಅನ್ಯ ಪುರುಷರನ್ನು ಭೇಟಿಯಾಗುವಾಗ ಅಥವಾ ಹೊರಗೆ ಹೋಗುವಾಗ ಹಿಜಾಬ್ (ಉದ್ದನೆಯ ಮೇಲ್ವಸ್ತ್ರ ಅಥವಾ ಶಿರವಸ್ತ್ರ) ಧರಿಸಬೇಕು. (ಕುರ್‌ಆನ್ 33:59, 24:30–31).

4. ಮಕ್ಕಳನ್ನು ಉತ್ತಮ ನಡತೆಯ ವ್ಯಕ್ತಿಗಳಾಗಿ ಇಸ್ಲಾಮಿನ ನಿಯಮಗಳ ಅನುಸಾರ ಬೆಳೆಸುವುದು ಆಕೆಯ ಕರ್ತವ್ಯ. ಕುಟುಂಬವನ್ನು ನೋಡಿಕೊಳ್ಳುವ ಹೊಣೆಗಾರಿಕೆ ಆಕೆಯ ಮೇಲಿದೆ. ಸ್ತ್ರೀಪುರುಷರು ಪರಸ್ಪರ ಸಹಕಾರ ಮತ್ತು ಸಮಾಲೋಚನೆಯಿಂದ ಕುಟುಂಬವನ್ನು ಮುನ್ನಡೆಸಿದರೂ ಎಲ್ಲ ಕೌಟುಂಬಿಕ ವಿಷಯಗಳಲ್ಲಿ ಆಕೆಯ ಮಾತೇ ಅಂತಿಮ. ನಿಜವಾಗಿ ಮನೆಯಲ್ಲಿ ಆಕೆಯೇ ರಾಣಿ.

5. ಆಕೆಯು ಪತಿಗೆ ಸದಾ ನೆರವಾಗುತ್ತಿರಬೇಕು. ನಂಬಿಗಸ್ತ ಪತ್ನಿಯನ್ನು ಉಡುಪಿಗೆ ಹೋಲಿಸಲಾಗಿದ್ದು ಆಕೆ, ಪತಿಗೆ ಶಾಂತಿ, ಪ್ರೀತಿ, ಮತ್ತು ಸಂತೃಪ್ತಿಯನ್ನು ಒದಗಿಸಬೇಕು. (ಕುರ್‌ಆನ್, 30:21, 2:187).

6. ಒಂದು ವೇಳೆ ಅಲ್ಲಾಹನ ಆದೇಶವನ್ನು ಮೀರಿ ಹೋಗುವಂತೆ ತನಗೆ ನಿರ್ದೇಶನ ಬಂದರೆ ಆಕೆ ತನ್ನ ಪತಿ, ತಂದೆ, ಅಥವಾ ಸಹೋದರನ ಮಾತನ್ನೂ ಧಿಕ್ಕರಿಸಬಹುದು. (ಕುರ್‌ಆನ್ 9:23).

7. ಇಸ್ಲಾಮ್ ಪತಿ ಮತ್ತು ಪತ್ನಿಯರನ್ನು ಪರಸ್ಪರರಿಗೆ ಪೂರಕವಾಗಿರುವವರೆಂದು ಪರಿಗಣಿಸುತ್ತದೆ. ಒಬ್ಬರು ಇನ್ನೊಬ್ಬರ ಮೇಲೆ ಹಕ್ಕು ಚಲಾಯಿಸಬಾರದು. ಪ್ರತಿಯೊಬ್ಬರು ತಮ್ಮದೇ ಆದ ಹಕ್ಕು, ಕರ್ತವ್ಯಗಳನ್ನು ಹೊಂದಿದ್ದು, ಶಾಂತಿ ಮತ್ತು ನೆಮ್ಮದಿ ಕುಟುಂಬದ ಅಡಿಪಾಯವಾಗಿದೆ.

# ಹಿಜಾಬ್ ಅಥವಾ ಬುರ್ಖಾ

ಮುಸ್ಲಿಮ್ ಮಹಿಳೆಯ ವಸ್ತ್ರಸಂಹಿತೆಯು ಇಂದು ಆಕೆಯ ವಿರುದ್ಧ ಮಾಡಲಾಗುತ್ತಿರುವ ಟೀಕೆಗಳ ಕೇಂದ್ರ ಬಿಂದು. ಇಂದು ಕಡಿಮೆ ಬಟ್ಟೆಯು ಮಹಿಳೆಯ ಸ್ವಾತಂತ್ರ್ಯ ಮತ್ತು ವಿಮೋಚನೆಯ ದ್ಯೋತಕ ಎಂಬ ಭಾವನೆ ಹಲವರ ಮನದಲ್ಲಿದೆ. ಒಬ್ಬ ಮಹಿಳೆ ಎಷ್ಟು ಹೆಚ್ಚು ಮೈ ಪ್ರದರ್ಶನ ಮಾಡುತ್ತಾಳೆ ಎಂಬುದು ಆಕೆ ಎಷ್ಟು ಸ್ವತಂತ್ರಳಾಗಿದ್ದಾಳೆ ಎಂಬುದರ ಪ್ರತೀಕ ಎಂದು ಭಾವಿಸಲಾಗುತ್ತದೆ. ಆದರೆ ವಾಸ್ತವವೆಂದರೆ ಪ್ರಾಚೀನ ಕಾಲದ ಸಮಾಜಗಳಲ್ಲಿ ಮಹಿಳೆಯನ್ನು ಎಷ್ಟು ಸಾಧ್ಯವೋ ಅಷ್ಟು ನಗ್ನವಾಗಿರುವಂತೆ ಒತ್ತಾಯಿಸಲಾಗುತ್ತಿತ್ತು. ಒಂದು ವೇಳೆ ವಸ್ತ್ರಧಾರಣೆ ಮಾಡಿದರೂ ಅವು ಅತ್ಯಂತ ಹೆಚ್ಚು ಪ್ರಚೋದನಕಾರಿಯಾಗಿರುವಂತೆ ಪುರುಷ ಸಮಾಜ ನೋಡಿಕೊಳ್ಳುತ್ತಿತ್ತು. ಇದು ಯಾವ ದೃಷ್ಟಿಯಲ್ಲೂ ಮಹಿಳೆಯ ಮಟ್ಟಿಗೆ ಸ್ವಾತಂತ್ರ್ಯ ಅಥವಾ ಹಕ್ಕಿನ ಪ್ರಶ್ನೆಯಾಗಿರಲಿಲ್ಲ. ಬದಲಾಗಿ ಪುರುಷರು ತಮ್ಮ ವಾಂಛೆಯನ್ನು ತೀರಿಸಿಕೊಳ್ಳಲು ಮಹಿಳೆಯರನ್ನು ನಗ್ನವಾಗಿ ನೋಡ ಬಯಸುತ್ತಿದ್ದರು. ಇಂದು ಕೂಡಾ ಪರಿಸ್ಥಿತಿ ಹೆಚ್ಚೇನೂ ಭಿನ್ನವಾಗಿಲ್ಲ.

ಸಾಮಾನ್ಯವಾಗಿ ಮುಸ್ಲಿಮ್ ಮಹಿಳೆಗೆ ಸಂಬಂಧಿಸಿದಂತೆ ನಡೆಯುವ ಹೆಚ್ಚಿನ ಚರ್ಚೆಗಳು ಬುರ್ಖಾ ಅಥವಾ ಪರ್ದಾದ ಸುತ್ತ ಗಿರಕಿ ಹೊಡೆಯುತ್ತಿರುತ್ತದೆ. ಅದು ಶೋಷಣೆ, ಗುಲಾಮತನ ಮತ್ತು ಹಿಂದುಳಿಕೆಯ ಸಂಕೇತ ಎಂದು ಭಾವಿಸಲಾಗುತ್ತದೆ. ಒಂದು ಕಡೆ ಹಿಜಾಬ್‌ನ ಬೆಂಬಲಿಗರು ಅದನ್ನು ಉತ್ಕಟವಾಗಿ ಸಮರ್ಥಿಸಿದರೆ ಮತ್ತೊಂದೆಡೆ ಟೀಕಾಕಾರರು ಅದನ್ನು ಅಷ್ಟೇ ಉಗ್ರವಾಗಿ ವಿರೋಧಿಸುತ್ತಿದ್ದಾರೆ. ಶತಮಾನಗಳಿಂದಲೂ ಮುಸ್ಲಿಮ್ ಮಹಿಳೆಯ ಪ್ರಾತಿನಿಧಿಕ ಗುರುತಾಗಿ ಹಿಜಾಬನ್ನು ಬಳಸಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಇದು ಸಾಂಕೇತಿಕ ಮತ್ತು ರಾಜಕೀಯ ಮಹತ್ವವನ್ನೂ ಪಡೆದುಕೊಂಡಿದೆ. ಕುರ್‌ಆನ್ ಈ ವಿಷಯದಲ್ಲಿ ಹೇಳುವುದು ಏನು?

ಮುಸುಕಿಗೆ ಸಂಬಂಧಿಸಿದಂತೆ ಕುರ್‌ಆನ್‌ನಲ್ಲಿ ಬಳಕೆಯಾಗಿರುವ ಪಾರಿಭಾಷಿಕ ಹಿಜಾಬ್ ಆಗಿದ್ದು ಎಂಟು ಕಡೆ ಈ ಪದವನ್ನು ಉಲ್ಲೇಖಿಸಲಾಗಿದೆ 19:17, 38:32; 17:45; 7:46; 33:53, 83:15. ಹಿಜಾಬ್‌ನ ಶಬ್ದಾರ್ಥ ಪರದೆ. ತಲೆ ಮತ್ತು ಸಂಪೂರ್ಣ ದೇಹವನ್ನು ಮುಚ್ಚುವ ವಸ್ತ್ರ ಎಂಬ ಅರ್ಥದಲ್ಲಿ ಹಿಜಾಬನ್ನು ತಲೆತಲಾಂತರದಿಂದ

ಮುಸ್ಲಿಮ್ ಸಮಾಜಗಳು ಅರ್ಥಮಾಡಿಕೊಳ್ಳುತ್ತಾ ಬಂದಿದೆ.

ಶೀಲ ಮತ್ತು ಗೌರವವನ್ನು ಕಾಪಾಡಲು ಮತ್ತು ಒಂದು ಪಾವನ ಸಮಾಜವನ್ನು ಬೆಳೆಸಲು ಮಹಿಳೆಯರು ಸಡಿಲವಾದ ಉಡುಪುಗಳನ್ನು ತೊಡಬೇಕೆಂದು ಆದೇಶಿಸಲಾಗಿದೆ. ಭಾರತೀಯ ಉಪಖಂಡದಲ್ಲಿ ಮಹಿಳೆಯರು ಧರಿಸುವ ತಲೆಯಿಂದ ಅಂಗುಷ್ಠದವರೆಗೂ ತಲಪುವ ಬಟ್ಟೆಯನ್ನು ಬುರ್ಖಾ ಎಂದು ಕರೆಯಲಾಗುತ್ತದೆ. ಪಶ್ಚಿಮ ಏಷ್ಯಾದಲ್ಲಿ ಈ ವಸ್ತ್ರವನ್ನು ನಿಕಾಬ್ ಎಂದೂ, ಇರಾನ್‌ನಲ್ಲಿ ಚಾದರ್ ಎಂದೂ ಅರಬ್ ರಾಷ್ಟ್ರಗಳಲ್ಲಿ ಅಬಾಯಾ ಕರೆಯಲಾಗುತ್ತದೆ. ಜಗತ್ತಿನ ಇತರ ಅನೇಕ ರಾಷ್ಟ್ರಗಳಲ್ಲಿ ಅಲ್ಲಿನ ಪಾರಂಪರಿಕ ವಸ್ತ್ರಗಳ ಜತೆ ಶಿರವಸ್ತ್ರವನ್ನು ಧರಿಸಲಾಗುತ್ತದೆ.

## ಹಿಜಾಬ್: 'ದೇವರನ್ನು ಮೆಚ್ಚಿಸಲು' ಮಹಿಳೆಯ ಆಯ್ಕೆ

ಹಿಜಾಬ್, ಸಡಿಲ ಅಥವಾ ಸಭ್ಯ ಉಡುಪಿನ ಲಾಭ ಏನು ಎಂಬುದನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಕಷ್ಟ ಪಡಬೇಕಾಗಿಲ್ಲ. ಇಂದಿಗೂ ತಮ್ಮ ದೇಹದ ಗಾತ್ರ ಮತ್ತು ಆಕಾರವನ್ನು ಪ್ರದರ್ಶಿಸುವಂತಹ ಬಿಗಿಯಾದ ಅಥವಾ ಮೈ ತೋರಿಸುವ ಉಡುಪು ಧರಿಸದ ಮಹಿಳೆಯರನ್ನು ಸಮಾಜ ಗೌರವದಿಂದ ಕಾಣುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಚಿತ್ರಗಳಲ್ಲಿ ನಟಿಸುವ, ನೃತ್ಯ ಮಾಡುವ, ಮೈಪ್ರದರ್ಶಿಸುವ ಮತ್ತು ಜಾಹೀರಾತುಗಳಲ್ಲಿ ರೂಪದರ್ಶಿನಿಯರಾಗಿ ಅಭಿನಯಿಸುವವರು ಕಾಮುಕ ಕಣ್ಣುಗಳಿಗೆ ತುತ್ತಾಗುತ್ತಾರೆ. ವಾಸ್ತವವೆಂದರೆ ಪ್ರಸಾಧನ ಸಾಮಗ್ರಿಗಳಿಂದ ಹಿಡಿದು ಸಾಬೂನು, ಶಾಂಪೂ, ಒಳಉಡುಪು, ವ್ಯಾನಿಟಿ ಬ್ಯಾಗ್, ಉಡುಪು ಇತ್ಯಾದಿಗಳವರೆಗೆ, ಅಷ್ಟೇ ಯಾಕೆ, ಸ್ಯಾನಿಟರಿ ನ್ಯಾಪ್‌ಕಿನ್ ಮತ್ತು ಗರ್ಭನಿರೋಧಕ ಮಾತ್ರೆಯವರೆಗೆ ಪ್ರತಿಯೊಂದು ಕೂಡಾ ಹೆಣ್ಣಿನ ಮೈಪ್ರದರ್ಶನದ ಬೆಂಬಲದೊಂದಿಗೆ ಮಾರುಕಟ್ಟೆಯಲ್ಲಿ ಬಿಕರಿಯಾಗುತ್ತಿದೆ. ಬಾಹ್ಯ ಆಕರ್ಷಣೆಯನ್ನು ಮಾರುಕಟ್ಟೆಯ ತಂತ್ರವಾಗಿ ಬಳಸುವ ನಿಟ್ಟಿನಲ್ಲಿ ಪಶ್ಚಿಮವು ಯಾವ ರೀತಿ ಪುರುಷರಿಗಿಂತಲೂ ಮಹಿಳೆಯರನ್ನು ನೆಚ್ಚಿಕೊಂಡಿದೆ ಎಂಬುದು ಜಾಹೀರಾತುಗಳಲ್ಲಿ ಪುರುಷರನ್ನು ಸೂಟುಧಾರಿಗಳಾಗಿಯೂ, ಹೆಣ್ಣನ್ನು ತುಂಡುಡುಗೆಯಲ್ಲೂ ಪ್ರಸ್ತುತಪಡಿಸುವುದನ್ನು ನೋಡಿ ಅರ್ಥಮಾಡಿಕೊಳ್ಳಬಹುದು.

ಮುಸ್ಲಿಮ್ ಮಹಿಳೆಯ ಶೋಷಣೆಯ ಕೂಗು ಹಬ್ಬಿಸುತ್ತಿರುವ ಮತ್ತು ಹಿಜಾಬ್-ಬುರ್ಖಾ ನಿಷೇಧದಂತಹ ಕ್ರಮಗಳಿಗೆ ಮುಂದಾಗಿರುವ ಭೌತಿಕವಾದಿ ಸಮಾಜದ ಬಂಡವಾಳವು ಇದರಿಂದ ಬಯಲಾಗುತ್ತದೆ. ಸಹಜವಾಗಿಯೇ ಮಹಿಳೆಯರು ತಮ್ಮ ಸೌಂದರ್ಯವನ್ನು ತಮ್ಮ ಬಾಳಸಂಗಾತಿಗಳಿಗೆ ಮಾತ್ರ ಮೀಸಲಿಟ್ಟರೆ ಬಿಲಿಯನ್

ಡಾಲರ್ ಉದ್ಯಮವಾಗಿ ಮಾರ್ಪಟ್ಟಿರುವ ಪ್ರಸಾಧನ ಸಾಮಗ್ರಿಗಳ ತಯಾರಿಕೆ ತೀವ್ರ ಹೊಡೆತ ಅನುಭವಿಸಬೇಕಾಗುತ್ತದೆ. ಆದ್ದರಿಂದ ಮಹಿಳೆಯರು ಭಾರಿ ಸಂಖ್ಯೆಯಲ್ಲಿ ಇಸ್ಲಾಮಿನೆಡೆಗೆ ಆಕರ್ಷಿತರಾಗುತ್ತಿರುವುದರಿಂದ ಪಶ್ಚಿಮ ಯಾಕೆ ಇಷ್ಟು ತಲೆಕೆಡಿಸುತ್ತಿದೆ ಎಂಬುದನ್ನು ಅರ್ಥಮಾಡುವುದು ಕಷ್ಟವಲ್ಲ. ಇಸ್ಲಾಮಿನಲ್ಲಿ ತಮಗೆ ಜನರ ಮತ್ತು ಮಾಧ್ಯಮದ ಕಾಮುಕ ಕಣ್ಣುಗಳಿಂದ ರಕ್ಷಣೆ ಇದೆ ಎಂದು ಹೆಚ್ಚು ಹೆಚ್ಚು ಮಹಿಳೆಯರು ಇದೀಗ ಅರ್ಥಮಾಡಿಕೊಳ್ಳುತ್ತಿದ್ದಾರೆ.

ಪಶ್ಚಿಮವು ಹೇಳುತ್ತಿರುವ ಮಹಿಳಾ ವಿಮೋಚನೆಯು ನಿಜವಾಗಿ ಆಕೆಯ ದೇಹವನ್ನು ಅಪ್ರತ್ಯಕ್ಷವಾಗಿ ಶೋಷಿಸುವ, ಆತ್ಮವನ್ನು ಹಳಿಯುವ ಮತ್ತು ಗೌರವವನ್ನು ಮೂರಾಬಟ್ಟೆ ಮಾಡುವ ಒಂದು ಸಾಧನ. ಪಾಶ್ಚಾತ್ಯ ಸಮಾಜವು ತಾನು ಮಹಿಳೆಯರನ್ನು ಮೇಲೆತ್ತಿದೆ ಎಂದು ವಾದಿಸುತ್ತದೆ. ಆದರೆ ಅದು ನಿಜವಾಗಿ ಮಹಿಳೆಯನ್ನು ಉಪಪತ್ನಿಯರ ಮತ್ತು ಸಾಮಾಜಿಕ ಕೂಟಗಳಲ್ಲಿ ಪ್ರತ್ಯಕ್ಷವಾಗುವ ವಯ್ಯಾರಿಗಳ ಸ್ಥಾನಕ್ಕೆ ಇಳಿಸಿಬಿಟ್ಟಿದೆ. ಇವರು ಕಲೆ ಮತ್ತು ಸಂಸ್ಕೃತಿಯ ಮುಖವಾಡ ಹೊತ್ತ ಕಾಮುಕರ ಮತ್ತು ಸೆಕ್ಸ್‌ನ್ನು ಮಾರುಕಟ್ಟೆ ಮಾಡುವ ಜನರ ಕೈಯಲ್ಲಿ ಸಿಲುಕಿ ಬಿಡುತ್ತಾರೆ.

ಮಹಿಳೆಯರಿಗೆ ತಾನು ಏನನ್ನು ಆಯ್ಕೆ ಮಾಡಬೇಕೆಂಬ ಸ್ವಾತಂತ್ರ್ಯವು ಹೆಚ್ಚು ಹೆಚ್ಚು ಲಭ್ಯವಾಗುತ್ತಿರುವ ಈ ಕಾಲದಲ್ಲಿ ಆಕೆ ಏನನ್ನು ಧರಿಸಬೇಕು ಎಂಬ ಮೂಲಭೂತ ಸ್ವಾತಂತ್ರ್ಯದಿಂದ ವಂಚಿತಳಾಗುತ್ತಿರುವುದು ವಿಚಿತ್ರವೇ ಸರಿ. ಒಂದು ವೇಳೆ ಯಾರ ಮೇಲಾದರೂ ಬಲಾತ್ಕಾರದಿಂದ ಬುರ್ಖಾವನ್ನು ಹೇರುವುದು ದಮನಕಾರಿ ಕೃತ್ಯ ಎಂದಾದರೆ ಅದನ್ನು ಕಳಚುವಂತೆ ಹೇಳುವುದು ಕೂಡಾ ಅಷ್ಟೇ ದಮನಕಾರಿಯಲ್ಲವೇ? ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವವನ್ನು ಪ್ರತಿಪಾದಿಸುವವರು ಯಾಕೆ ಇಸ್ಲಾಮಿನ ಅನುಯಾಯಿಗಳ ಮೇಲೆ ಒಂದು ದಮನಕಾರಿ ವಸ್ತ್ರಸಂಹಿತೆಯನ್ನು ಹೇರುತ್ತಿದ್ದಾರೆ?

ಹಿಜಾಬ್ ಅಥವಾ ಬುರ್ಖಾ ಎಂಬುದು ಮುಸ್ಲಿಮ್ ಮಹಿಳೆಯ ವೈಯಕ್ತಿಕ ಆಯ್ಕೆಯಾಗಿದ್ದು ಅದನ್ನು ಇತರರು ಗೌರವಿಸಬೇಕು. ಕ್ರೈಸ್ತ ಸನ್ಯಾಸಿನಿಯರು ಧರಿಸುವ ವಸ್ತ್ರವಾಗಲಿ, ಪಾದ್ರಿಗಳ ವಸ್ತ್ರವಾಗಲಿ, ಡಾಕ್ಟರ್, ವಕೀಲರು, ನ್ಯಾಯಾಧೀಶರು ಧರಿಸುವ ಸಮವಸ್ತ್ರವಾಗಲಿ ಅಥವಾ ಪೇಟಾ, ಟೋಪಿ ಅಥವಾ ಶಿಲುಬೆಯ ಬಗ್ಗೆಯಾಗಲೀ ಯಾರೂ ಚಕಾರವೆತ್ತುವುದಿಲ್ಲ. ಅಷ್ಟೇ ಅಲ್ಲ, ಈ ಎಲ್ಲ ಉಡುಪುಗಳನ್ನು ವಿಶೇಷವಾಗಿ ಗೌರವಿಸಲಾಗುತ್ತದೆ. ಹಾಗೆ ನೋಡಿದರೆ ಬುರ್ಖಾ ಕ್ರೈಸ್ತ ಸನ್ಯಾಸಿನಿಯರ ವಸ್ತ್ರಕ್ಕಿಂತ ಹೆಚ್ಚೇನೂ ಭಿನ್ನವಲ್ಲ. ಹೀಗಿರುವಾಗ ಇಸ್ಲಾಮಿನ ಹಿಜಾಬ್ ಮತ್ತು ಸಭ್ಯತೆಯ ಇತರ ನೀತಿನಿಯಮಗಳ ಮಧ್ಯೆ ಈ ರೀತಿಯ ದ್ವಿಮುಖ ಧೋರಣೆ ಯಾಕೆ?

ನಿಮ್ಮಂತೆಯೇ ಇರುವ ಮತ್ತು ವರ್ತಿಸುವ ವ್ಯಕ್ತಿಗಳನ್ನು ಒಪ್ಪುವುದಕ್ಕೆ ಸಹನಶೀಲತೆ ಎನ್ನಲಾಗದು. ಭಿನ್ನಾಭಿಪ್ರಾಯಗಳ ಹೊರತಾಗಿಯೂ ಇತರರ ಆಯ್ಕೆಗಳನ್ನು ಸ್ವೀಕರಿಸುವುದೇ ನಿಜವಾದ ಸಹನಶೀಲತೆ.

ಗ್ಲಾಮರ್ ಜಗತ್ತಿನ ಬಹಳಷ್ಟು ಖ್ಯಾತನಾಮ ಮಹಿಳೆಯರು ಮತ್ತು ಸಾಮಾನ್ಯ ಮಹಿಳೆಯರು ಇಂದು ಭೌತಿಕವಾದಿ ಸಂಸ್ಕೃತಿ ಮತ್ತು ಮಹಿಳಾ ಸ್ವಾತಂತ್ರ್ಯದ ಭ್ರಮೆಯಿಂದ ನಿರಾಶರಾಗಿದ್ದಾರೆ. ಪಶ್ಚಿಮದಲ್ಲಿ ಸಹಸ್ರಾರು ಮಹಿಳೆಯರು ಇಸ್ಲಾಮ್ ಮತ್ತು ಹಿಜಾಬ್‌ನಲ್ಲಿ ಸಂತೃಪ್ತಿ ಕಂಡುಕೊಳ್ಳುತ್ತಿದ್ದಾರೆ. ಮಾಜಿ ಬ್ರಿಟಿಷ್ ಪ್ರಧಾನಿ ಟೋನಿ ಬ್ಲೇರ್‌ರ ನಾದಿನಿ ಲಾರೆನ್ ಬೂತ್, ಮರ್ಯಮ್ ಜಮೀಲಾ, ಬ್ರಿಟಿಷ್ ಪತ್ರಕರ್ತೆ ಇವಾನ್ ರಿಡ್ಲಿ ಮತ್ತು ಮಲಯಾಳಮ್ ಬರಹಗಾರ್ತಿ ಕಮಲಾ ಸುರಯ್ಯ ಈ ಪೈಕಿ ಕೆಲವರು. ಭಾರತದಲ್ಲೂ ಸಿಎನ್‌ಎನ್–ಐಬಿಎನ್ ಸಮೀಕ್ಷೆಯ ಪ್ರಕಾರ ಮಹಿಳೆಯರು ಶೀಲರಕ್ಷಣೆಗಾಗಿ ಸ್ವಯಿಚ್ಛೆಯಿಂದ ಬುರ್ಖಾ ತೊಡುತ್ತಿದ್ದು ಲೈಂಗಿಕ ಕಿರುಕುಳ ಮತ್ತು ಕಿಡಿಗೇಡಿಗಳ ಆಕ್ರಮಣದಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು ಕೂಡಾ ಅವರ ಉದ್ದೇಶ.

ಒಟ್ಟಿನಲ್ಲಿ, ಇಸ್ಲಾಮಿನ ಶಿರವಸ್ತ್ರಧಾರಣೆಯು ಮಹಿಳೆಯರಲ್ಲಿ ಯಾವುದೇ ರೀತಿಯ ನೆಗೆಟಿವ್ ಭಾವನೆಗಳನ್ನು ಬೆಳೆಸುವುದಿಲ್ಲ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಇಸ್ಲಾಮನ್ನು ಪ್ರಚಾರಪಡಿಸಿ ಹದಿನಾಲ್ಕು ಶತಮಾನಗಳು ಕಳೆದಿದ್ದರೂ ಮುಸ್ಲಿಮ್ ಮಹಿಳೆಯರು ಇಂದಿಗೂ ಅತ್ಯಂತ ಹೆಮ್ಮೆಯಿಂದ ಧಾರ್ಮಿಕ ಅನನ್ಯತೆ ಮತ್ತು ಸಭ್ಯತೆ ಪ್ರತಿನಿಧಿಸುವ ಈ ಪೋಷಾಕನ್ನು ತೊಡುತ್ತಿದ್ದಾರೆ. ಅಷ್ಟೇ ಅಲ್ಲ, ಈ ವಸ್ತ್ರಸಂಹಿತೆಯನ್ನು ಮಿಲಿಯಗಟ್ಟಲೆ ಮಹಿಳೆಯರು ಸ್ವಯಿಚ್ಛೆಯಿಂದಲೇ ಪಾಲಿಸುತ್ತಿದ್ದಾರೆ. ಪಶ್ಚಿಮ ಭಾವಿಸುವಂತೆ ಇದರ ಹಿಂದೆ ಯಾವುದೇ ರೀತಿಯ ಒತ್ತಾಯ ಇಲ್ಲ. ಒಬ್ಬ ಮಹಿಳೆ ಹೇಳಿರುವಂತೆ, ಈ ರೀತಿ ವಸ್ತ್ರಧಾರಣೆ ಮಾಡುವುದು 'ದೇವರ ಮೆಚ್ಚುಗೆ'ಗಾಗಿಯೇ ಹೊರತು ತಾವು ಬದುಕುತ್ತಿರುವ ಸಮಾಜಗಳನ್ನು ಖುಷಿಪಡಿಸಲಿಕ್ಕಾಗಿ ಅಲ್ಲ.

## ಹಿಜಾಬ್:
## ಬೌದ್ಧಿಕತೆ ಮತ್ತು ನಾಜೂಕುತನದ ಉತ್ಕೃಷ್ಟ ಮಟ್ಟ

ಇಸ್ಲಾಮ್ ಧರ್ಮದಲ್ಲಿ ಮಹಿಳೆಗೆ ಲಭ್ಯವಿರುವ ಘನತೆ ಮತ್ತು ಗೌರವವನ್ನು 2011ರ ನೊಬೆಲ್ ಪ್ರಶಸ್ತಿ ಪುರಸ್ಕೃತೆ ಯಮನ್‌ನ ತವಕ್ಕುಲ್ ಕರ್ಮಾನ್‌ರಷ್ಟು ಪರಿಣಾಮಕಾರಿಯಾಗಿ ವಿವರಿಸಿದವರು ಪ್ರಾಯಶಃ ಬೇರಾರೂ ಇರಲಾರರು. ನಾರ್ವೆಯ ರಾಜಧಾನಿ ಓಸ್ಲೋದಲ್ಲಿ ನಡೆದ ನೊಬೆಲ್ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಹಿಜಾಬ್ ತೊಟ್ಟು ಆಗಮಿಸುವ ಮೂಲಕ ಈಕೆ ಅಂತಾರಾಷ್ಟ್ರೀಯ ಮುದ್ರಣ ಮತ್ತು ಟಿವಿ ಮಾಧ್ಯಮಗಳ ಪ್ರತಿನಿಧಿಗಳನ್ನು ಅಚ್ಚರಿಗೀಡು ಮಾಡಿದ್ದರು.

ಪತ್ರಕರ್ತರು ಆಕೆಯ ಬೆನ್ನು ಬಿದ್ದರು: "ನಿಮ್ಮ ಶೈಕ್ಷಣಿಕ ಮತ್ತು ಬೌದ್ಧಿಕ ಹಿನ್ನೆಲೆಯನ್ನು ಗಮನಿಸಿದರೆ ನೀವು ಧರಿಸಿರುವ ಈ ಪೋಷಾಕು ಒಂದು ರೀತಿಯ ವಿರೋಧಾಭಾಸವಲ್ಲವೇ? ಹಿಜಾಬ್ ಸಾಮಾನ್ಯವಾಗಿ ಸ್ತ್ರೀ ಶೋಷಣೆ ಮತ್ತು ಹಿಂದುಳಿಯುವಿಕೆಯ ಪ್ರತೀಕವಾಗಿಯೇ ಗುರುತಿಸಲ್ಪಡುತ್ತಿದೆಯಲ್ಲವೇ?" ಎಂದು ಆಕೆಯನ್ನು ಪ್ರಶ್ನಿಸಿದರು.

ತವಕ್ಕುಲ್ ಯಾವುದೇ ಉದ್ವೇಗಕ್ಕೊಳಗಾಗದೆ ಹೀಗೆ ಉತ್ತರಿಸಿದರು: "ಮನುಷ್ಯ ತನ್ನ ಆರಂಭ ಕಾಲದಲ್ಲಿ ಬಹುತೇಕ ನಗ್ನಗಾಗಿದ್ದ. ಆತನ ಬುದ್ಧಿ ವಿಕಸನಗೊಂಡಂತೆ ಆತ ಬಟ್ಟೆ ಧರಿಸಿಲಾರಂಭಿಸಿದ. ನಾನು ಇಂದು ತೊಟ್ಟಿರುವ ಉಡುಗೆ ಮನುಷ್ಯ ಕಾಲಾನುಕ್ರಮದಲ್ಲಿ ತಲುಪಿದ ಬೌದ್ಧಿಕತೆ ಮತ್ತು ನಾಜೂಕುತನದ ಉತ್ಕೃಷ್ಟ ಮಟ್ಟವನ್ನು ಪ್ರತಿಬಿಂಬಿಸುತ್ತದೆಯೇ ಹೊರತು ಹಿಂದುಳಿಯುವಿಕೆಯನ್ನಲ್ಲ. ನಗ್ನತೆಯು ನಿಜವಾಗಿ ಹಿಂದುಳಿಯುವಿಕೆಯ ಸಂಕೇತ. ಇದು ಮನುಷ್ಯನ ಬುದ್ಧಿಮತ್ತೆಯು ಮತ್ತೆ ಶಿಲಾಯುಗದತ್ತ ತೆರಳುತ್ತಿರುವುದರ ದ್ಯೋತಕ."

# ಮುಸ್ಲಿಮ್ ಮಹಿಳೆಗೆ ಸಂಬಂಧಿಸಿದ ಕೆಲ ವಿವಾದಾತ್ಮಕ ವಿಷಯಗಳು

## ಇಸ್ಲಾಮೀ ಕಾನೂನಿನ ಪ್ರಕಾರ ವಾರೀಸು ಹಕ್ಕಿನಲ್ಲಿ ಮಹಿಳೆಯರ ಪಾಲು ಪುರುಷನಿಗಿಂತ ಅರ್ಧದಷ್ಟು ಮಾತ್ರ ಏಕೆ ?

ಇಸ್ಲಾಮ್‌ಗೆ ಮುಂಚಿನ ಅರಬ್ ಸಮಾಜದಲ್ಲಿ ಕೇವಲ ಗಂಡು ಮಕ್ಕಳು ಮಾತ್ರ ತಮ್ಮ ತಂದೆಯ ಆಸ್ತಿಗೆ ಹಕ್ಕು ಉಳ್ಳವರಾಗಿದ್ದರು. ಆದರೆ, ಕುರ್‌ಆನ್ ಹೆಣ್ಣು ಮಕ್ಕಳಿಗಳಿಗೂ, ಗಂಡು ಮಕ್ಕಳು ಪಡೆಯುವ ಆಸ್ತಿಯ ಅರ್ಧದಷ್ಟು ಪಾಲನ್ನು ನೀಡಬೇಕು ಎಂದು ತಾಕೀತು ಮಾಡಿತು. ಹೆಣ್ಣನ್ನೇ ಒಂದು ಆಸ್ತಿ ಎಂದೂ ಮತ್ತು ವಾರೀಸು ಹಕ್ಕಿನ ಭಾಗವೆಂದೂ ಪರಿಗಣಿಸುತ್ತಿದ್ದ ಆ ಕಾಲದಲ್ಲಿ ಇದೊಂದು ಕ್ರಾಂತಿಕಾರಿ ಹೆಜ್ಜೆಯಾಗಿತ್ತು.. ಇದರ ಹಿಂದೆ ಎರಡು ಉದ್ದೇಶಗಳಿವೆ. ಮೊದಲನೆಯದು, ಮಹಿಳೆಯನ್ನು ಸ್ವತಂತ್ರ ಮತ್ತು ಸ್ವಾವಲಂಬಿ ವ್ಯಕ್ತಿ ಎಂದು ಗುರುತಿಸುವುದು. ಎರಡನೆಯದು, ಅವರನ್ನು ಆರ್ಥಿಕವಾಗಿ ಸಬಲಗೊಳಿಸುವುದು.

ಕುರ್‌ಆನ್, ಮಹಿಳೆಯರಿಗೆ ತಮ್ಮ ತಂದೆ, ಪತಿ, ಮಕ್ಕಳು ಮತ್ತು ಮಕ್ಕಳಿಲ್ಲದ ಸಹೋದರರ ಆಸ್ತಿಯಿಂದಲೂ ಪಾಲು ಪಡೆಯುವ ಹಕ್ಕು ನೀಡಿದೆ. ಮಹಿಳೆಯ ಆಸ್ತಿಯ ಪಾಲನ್ನು ವಿವರಿಸುವ ಸೂಕ್ತಗಳನ್ನು ಕುರ್‌ಆನ್‌ನ ನಾಲ್ಕನೇ ಅಧ್ಯಾಯವಾದ ಅನ್ನಿಸಾ(11, 12, ಮತ್ತು 176)ದಲ್ಲಿ ಕಾಣಬಹುದು. ಈ ಸೂಕ್ತಗಳಲ್ಲಿ ಅಲ್ಲಾಹನು ವಾರೀಸು ಸೊತ್ತಿನಲ್ಲಿ ಮಕ್ಕಳು, ಹೆತ್ತವರು ಮತ್ತು ಬಾಳಸಂಗಾತಿಯ ಪಾಲು ಏನೆಂಬುದನ್ನು ಯಾವುದೇ ಮಾನವ ಹಸ್ತಕ್ಷೇಪ ಮತ್ತು ಭಾವನೆಗಳಿಗೆ ಬಿಟ್ಟುಕೊಡದೆ ಸ್ಪಷ್ಟಪಡಿಸಿದ್ದಾನೆ. ಉತ್ತರಾಧಿಕಾರದ ಇಸ್ಲಾಮೀ ವ್ಯವಸ್ಥೆಯು ಮನುಷ್ಯನ ಅಗತ್ಯಗಳ ಬಗ್ಗೆ ಸೃಷ್ಟಿಕರ್ತನಿಗೆ ಇರುವ ತಿಳಿವಳಿಕೆಯನ್ನು ಪ್ರತಿಬಿಂಬಿಸುತ್ತದೆ.

ತಂದೆಯ ಆಸ್ತಿಯಲ್ಲಿ ಹೆಣ್ಣಿಗೆ ಗಂಡಿಗಿಂತ ಅರ್ಧದಷ್ಟು ಮಾತ್ರ ನೀಡಿದರೆ ಅದು ಇಂದಿನ ಸಂದರ್ಭದಲ್ಲಿ ಅನ್ಯಾಯದ ಕ್ರಮ ಎಂದು ಅನಿಸಬಹುದು. ಆದರೆ ಮೇಲೆ

ನಮೂದಿಸಿದಂತೆ ಆಕೆಗೆ ಹೆತ್ತವರು, ಪತಿ, ಮಕ್ಕಳು, ಮಕ್ಕಳಿಲ್ಲದ ಸಹೋದರರ ಆಸ್ತಿಯಲ್ಲೂ ಪಾಲು ದೊರೆಯುತ್ತದೆ. ಏಳನೇ ಶತಮಾನದ ಅರೇಬಿಯಾ ಸಮಾಜದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡರೆ ಇದೊಂದು ವಿಶಿಷ್ಟ ಉಪಕ್ರಮ ಎಂಬುದು ಮನವರಿಕೆಯಾಗುತ್ತದೆ. ಈ ಮೂಲಕ ಹೆಣ್ಮಕ್ಕಳಿಗೆ ತಾವು ಊಹಿಸಲಿಕ್ಕೂ ಸಾಧ್ಯವಾಗದಂತೆ ಸಂಪತ್ತು ಮತ್ತು ಸಂಪನ್ಮೂಲಗಳ ಒಡೆತನ, ನಿಯಂತ್ರಣ, ಬಳಕೆ, ವ್ಯಯ ಮತ್ತು ಹೂಡಿಕೆಯ ಹಕ್ಕನ್ನು ಇಸ್ಲಾಮ್ ಮತ್ತು ಪ್ರವಾದಿವರ್ಯರು ನೀಡಿದರು. ಆಸ್ತಿಯ ಹಕ್ಕಿನಲ್ಲಿ ಕಿಂಚಿತ್ ಪಾಲೂ ಸಿಗದಿರುವುದಕ್ಕಿಂತ ಹೆಣ್ಣಿಗೆ ತನ್ನ ಸಹೋದರನಿಗೆ ಸಿಗುವ ಪಾಲಿನ ಅರ್ಧದಷ್ಟಾದರೂ ಸಿಗುತ್ತದೆ ಎಂಬುದನ್ನು ನಾವು ಇಲ್ಲಿ ಒಪ್ಪಿಕೊಳ್ಳಬೇಕು. ಈ ದೃಷ್ಟಿಯಿಂದ ನೋಡಿದರೆ ಇದೊಂದು ಶ್ಲಾಘನಾರ್ಹ ಕ್ರಮವೆಂದೇ ಹೇಳಬೇಕಾಗುತ್ತದೆ.

ಇಸ್ಲಾಮಿನಲ್ಲಿ ಹೆಣ್ಣಿನ ಪಾತ್ರ ಏನು ಮತ್ತು ವಾರೀಸು ಹಕ್ಕಿನಲ್ಲಿ ಆಕೆಗೆ ನಿಗದಿಪಡಿಸಲಾಗಿರುವ ಪ್ರಮಾಣಕ್ಕೆ ಇರುವ ಸಮರ್ಥನೆ ಏನು ಎಂಬುದನ್ನು ಪರಿಶೀಲಿಸೋಣ. ಸಮಾಜದಲ್ಲಿ ಹೆಣ್ಣಿಗೆ ನಿಗದಿಪಡಿಸಿರುವ ಪಾತ್ರದ ದೃಷ್ಟಿಯಿಂದ ನೋಡಿದರೆ ಇಸ್ಲಾಮ್ ಮತ್ತು ಕುರ್‌ಆನ್ ಆಕೆಗೆ ನಿಗದಿಪಡಿಸಿದ ಪಾಲು ಕೂಡಾ ನ್ಯಾಯೋಚಿತವಾಗಿದೆ. ಇದು ತಾರ್ಕಿಕವಾಗಿ ನೋಡಿದರೆ ಮಹಿಳೆಯ ಮೇಲೆ ಇರುವ ಆರ್ಥಿಕ ಮತ್ತು ಸಾಮಾಜಿಕ ಹೊಣೆಗಾರಿಕೆಗೆ ಅನುಗುಣವಾಗಿಯೇ ಇದೆ. ಯಾಕೆಂದರೆ ಇಸ್ಲಾಮ್ ಕುಟುಂಬವನ್ನು ಪೋಷಿಸುವ, ಮುನ್ನಡೆಸುವ ಜವಾಬ್ದಾರಿಯನ್ನು ಪುರುಷನಿಗೆ ನೀಡಿದೆ. ಪತ್ನಿ, ಮಕ್ಕಳು, ಪೋಷಕರನ್ನು ನೋಡಿಕೊಳ್ಳಬೇಕಾದ ಹೊಣೆಯೂ ಪುರುಷನದ್ದು. ಇವರೆಲ್ಲರ ಬಟ್ಟೆ, ಆಹಾರ, ವಸತಿ, ಶಿಕ್ಷಣ ಮತ್ತು ಮದುವೆಗಾಗಿಯೂ ಪುರುಷ ಹಣ ವ್ಯಯಿಸಬೇಕು. ಹೀಗೆ ಪುರುಷರಿಗೆ ಹೋಲಿಸಿದರೆ ಮಹಿಳೆಯರಿಗೆ ಎಲ್ಲ ರೀತಿಯ ಖರ್ಚುವೆಚ್ಚಗಳಿಂದ ವಿನಾಯಿತಿ ನೀಡಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ವಾರೀಸು ಹಕ್ಕಿನಲ್ಲಿ ಆಕೆಗೆ ತನ್ನ ಸಹೋದರಿಗಿಂತ ಅರ್ಧದಷ್ಟು ಪಾಲು ಸಿಕ್ಕಿದರೂ ಅದು ನ್ಯಾಯೋಚಿತವೇ. ಮಗಳಾಗಿ, ಪತ್ನಿಯಾಗಿ ಮತ್ತು ಅಮ್ಮನಾಗಿ ಜೀವನಾದ್ಯಂತ ಪುರುಷರ ಆಸರೆ ಹೆಣ್ಣಿನ ಮೇಲಿರುತ್ತದೆ. ಅವರ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಿರುವುದರಿಂದ ವಾರೀಸು ಹಕ್ಕಿನಲ್ಲಿ ಅವರಿಗೆ ಒಂದು ಗಮನಾರ್ಹ ಪಾಲು ದೊರೆಯುತ್ತದೆ.

ಹಾಗಾಗಿ ಲಿಂಗ ತಾರತಮ್ಯ ಅಥವಾ ಪಕ್ಷಪಾತದ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಇಸ್ಲಾಮ್, ಪುರುಷರು ಮತ್ತು ಮಹಿಳೆಯರ ನಡುವಿನ ಆರ್ಥಿಕ ಹಕ್ಕು ಮತ್ತು ಜವಾಬ್ದಾರಿಗಳ ಮಧ್ಯೆ ಯಾವ ರೀತಿ ಸಮತೋಲನ ಕಾಯ್ದುಕೊಳ್ಳುತ್ತದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮಹಿಳೆಯರು ತಮ್ಮ ಸಂಪತ್ತನ್ನು ಉಳಿತಾಯ ಮಾಡಲು

ಅಥವಾ ಹೂಡಿಕೆ ಮಾಡುವ ಸ್ವಾತಂತ್ರ್ಯವಿದೆ. ಆದರೆ ಪುರುಷರು ತಮ್ಮ ಆಸ್ತಿ ಮತ್ತು ಸಂಪತ್ತನ್ನು ಮಕ್ಕಳು, ಪತ್ನಿಯರಿಗಾಗಿ ವ್ಯಯಿಸಬೇಕಾದುದು ಕಡ್ಡಾಯ. ಹೆಣ್ಣಿಗೆ ವಾರೀಸಿನಲ್ಲಿ ದೊರೆಯುವ ಸೊತ್ತಿನ ಹೊರತಾಗಿಯೂ ಮದುವೆಯ ಸಂದರ್ಭದಲ್ಲಿ ತನ್ನ ಭಾವಿ ಪತಿಯಿಂದ ಮೆಹರ್ (ವಧುದಕ್ಷಿಣೆ) ಪಡೆಯುವ ಅಧಿಕಾರವಿದೆ.

ಒಂದು ಗಂಡು ಮತ್ತು ಒಂದು ಹೆಣ್ಣು ಮಗಳನ್ನು ಹೊಂದಿರುವ ವ್ಯಕ್ತಿ ಮರಣ ಹೊಂದಿದ ಎಂದಿಟ್ಟುಕೊಳ್ಳೋಣ. ಗಂಡು ಮಗನಿಗೆ ಆತನ ತಂಗಿಗಿಂತ ಎರಡು ಪಟ್ಟು ಹೆಚ್ಚು ಪಿತ್ರಾರ್ಜಿತ ಸೊತ್ತು ದೊರೆಯಿತೆಂದು ಭಾವಿಸೋಣ. ಈಗ ಆತನ ಮೇಲೆ ಇರುವ ಜವಾಬ್ದಾರಿಗಳನ್ನು ನೋಡಿ. ಮೊದಲನೆಯದಾಗಿ ಆತ ತನ್ನ ಮತ್ತು ತನ್ನ ಸೋದರಿಯ ಹೊಟ್ಟೆಹೊರೆಯಲಿಕ್ಕಾಗಿ ಸಂಪಾದನೆ ಮಾಡಬೇಕು. ಎರಡನೆಯದಾಗಿ, ಸ್ವತಃ ತಾನು ವಿವಾಹವಾಗುವಾಗ ತನ್ನ ಭಾವಿ ಪತ್ನಿಗೆ ವಧುದಕ್ಷಿಣೆ (ಮೆಹರ್) ನೀಡಬೇಕು. ಮತ್ತೊಂದೆಡೆ, ಸೋದರನಿಗಿಂತ ಅರ್ಧ ಪಾಲು ಕಡಿಮೆ ಆಸ್ತಿಯನ್ನು ಪಿತ್ರಾರ್ಜಿತವಾಗಿ ಪಡೆದುಕೊಂಡ ಸೋದರಿ ತನ್ನ ಸಂಪತ್ತನ್ನು ಯಾರ ಮೇಲೂ ಖರ್ಚು ಮಾಡಬೇಕಾಗಿಲ್ಲ. ಸ್ವತಃ ತನಗಾಗಿಯೂ ಅದನ್ನು ವ್ಯಯಿಸಬೇಕಾಗಿಲ್ಲ. ಅದನ್ನು ಆಕೆ ಹಾಗೆಯೇ ಉಳಿಸಿಕೊಳ್ಳಬಹುದು. ಒಂದು ವೇಳೆ ಎಲ್ಲಾದರೂ ಹೂಡಿಕೆ ಮಾಡಿದರೆ ಸಂಪತ್ತು ವೃದ್ಧಿಯೂ ಆಗಬಹುದು. ಮುಂದೆ ಆಕೆ ವಿವಾಹವಾದಾಗ, ತನ್ನ ಭಾವಿ ಪತಿಯಿಂದ ವಧುದಕ್ಷಿಣೆ ಪಡೆಯಲಿದ್ದು ಆಗಲೂ ಆಕೆಯ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇರುವುದಿಲ್ಲ. ಈ ಉದಾಹರಣೆಯನ್ನು ನೋಡಿದರೆ, ಇಸ್ಲಾಮ್ ಮಹಿಳೆಯ ಪರವಾಗಿದೆಯೇನೋ ಎಂಬ ಭಾವನೆ ಪುರುಷರಲ್ಲಿ ಬಂದರೂ ಆಶ್ಚರ್ಯವಿಲ್ಲ.

## ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮಹಿಳೆಗೆ ಮತದಾನ ಹಕ್ಕಿದೆ. ಬಹುತೇಕ ಮುಸ್ಲಿಮ್ ರಾಷ್ಟ್ರಗಳಲ್ಲಿ ಏಕೆ ಮಹಿಳೆಗೆ ಇನ್ನೂ ಮತದಾನದ ಹಕ್ಕು ನೀಡಲಾಗಿಲ್ಲ?

ಪ್ರಜಾಪ್ರಭುತ್ವವನ್ನು ಅನುಸರಿಸುವ ಎಲ್ಲ ಮುಸ್ಲಿಮ್ ರಾಷ್ಟ್ರಗಳೂ ಪುರುಷ ಮತ್ತು ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಮತ್ತು ಮತದಾನ ಮಾಡುವ ಸಮಾನ ಹಕ್ಕುಗಳನ್ನು ನೀಡಿವೆ. ಮಹಿಳೆಯರಿಗೆ ಮುಸ್ಲಿಮ್ ರಾಷ್ಟ್ರಗಳಲ್ಲಿ ಮತದಾನದ ಹಕ್ಕು ಇರುವುದು ಮಾತ್ರವಲ್ಲ, ಅವರು ಟರ್ಕಿ (ಶ್ರೀಮತಿ ತನ್ಸು ಸಿಲ್ಲರ್, ಪ್ರಧಾನಮಂತ್ರಿ 1992 ರಿಂದ 1996), ಬಾಂಗ್ಲಾದೇಶ (ಇಬ್ಬರು ಜನಪ್ರಿಯ ಬೇಗಂಗಳು 1991ರಿಂದ ಅಧಿಕಾರದಲ್ಲಿ ಇದ್ದಾರೆ), ಪಾಕಿಸ್ತಾನ (ಬೆನಜೀರ್ ಭುಟ್ಟೋ, ಎರಡು ಬಾರಿ ಪ್ರಧಾನಮಂತ್ರಿ ಆಗಿದ್ದರು) ಮತ್ತು ಅತಿದೊಡ್ಡ ಮುಸ್ಲಿಮ್ ರಾಷ್ಟ್ರವಾದ

ಇಂಡೋನೇಷಿಯಾ (ಇಲ್ಲಿ ಮೇಗವತಿ ಸುಕರ್‌ನೊಪುತ್ರಿ, ನಾಲ್ಕು ವರ್ಷ ಅಧ್ಯಕ್ಷೆಯಾಗಿದ್ದರು)ದಲ್ಲಿ ಆಳ್ವಿಕೆಯನ್ನೂ ನಡೆಸಿದ್ದಾರೆ. ಕೇವಲ ಆರು ಗಲ್ಫ್ ರಾಷ್ಟ್ರಗಳಲ್ಲಿ ಮಾತ್ರ ಏಕಚಕ್ರಾಧಿಪತ್ಯವಿದ್ದು, ಅಲ್ಲಿ ಪುರಷರಿಗಾಗಲೀ ಮಹಿಳೆಯರಿಗಾಗಲೀ ಮತದಾನದ ಹಕ್ಕಿಲ್ಲ. ಕುವೈತ್ ಇದಕ್ಕೆ ಅಪವಾದವಾಗಿದ್ದು ಅಲ್ಲಿ ಚುನಾಯಿತ ಸಂಸತ್ತು ಇದೆ. ಮಹಿಳೆಯರಿಗೆ ಮತದಾನ ಮಾಡಲು ಮತ್ತು ಸ್ಪರ್ಧಿಸಲು ಅಲ್ಲಿ ಅವಕಾಶವಿದೆ. ಆದರೆ, ಕುವೈತ್ ಸಂಸತ್ತು ಸೀಮಿತ ಅಧಿಕಾರವನ್ನು ಮಾತ್ರ ಹೊಂದಿದ್ದು, ಅದರ ತೀರ್ಮಾನವನ್ನು ಪ್ರಶ್ನಿಸುವ ಅಧಿಕಾರ ಕುವೈತ್‌ನ ರಾಜನಿಗಿದೆ. ಸೌದಿ ಅರೆಬಿಯಾದಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಗಳು ಸ್ಥಳೀಯ ಸಂಸ್ಥೆಗಳ ಮೂಲಕ ಆರಂಭಗೊಂಡಿದ್ದು, ಸದ್ಯಕ್ಕೆ ಅಲ್ಲಿ ಕೇವಲ ಪುರುಷರಿಗೆ ಮಾತ್ರ ಮತದಾನದ ಹಕ್ಕಿದೆ. ಕ್ರಿ.ಶ. 2015ರ ನಂತರ ಮಹಿಳೆಯರಿಗೂ ಮತದಾನದ ಹಕ್ಕು ನೀಡುವ ಭರವಸೆ ನೀಡಲಾಗಿದೆ. ಈ ಸಾಮ್ರಾಜ್ಯಗಳು ಕೂಡಾ ಮಹಿಳೆಯರಿಗೆ ಮತದಾನ ಮತ್ತು ಚುನಾವಣೆಗೆ ನಿಲ್ಲುವ ಅವಕಾಶ ನೀಡಬೇಕೆಂಬ ಒತ್ತಡಕ್ಕೆ ಮಣಿಯುವ ನಿರೀಕ್ಷೆಯಿದೆ. ಆದರೂ, ಜನರಿಗೆ ಮತದಾನದ ಹಕ್ಕು ದೊರೆಯುವುದಕ್ಕೆ ಮುಂಚೆ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಾಗಬೇಕಾದುದು ಅತ್ಯಗತ್ಯ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಬಹುತೇಕ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮಹಿಳೆಯರಿಗೆ ಮತದಾನ ಮಾಡುವ ಅವಕಾಶ ದೊರೆತಿದ್ದು ಕಳೆದ ಶತಮಾನದ ಆರಂಭದಲ್ಲಿ. ಆದರೆ, ನಿರಂಕುಶ ಪ್ರಭುತ್ವ ಕೇವಲ ಮುಸ್ಲಿಮ್ ರಾಷ್ಟ್ರಗಳಿಗೆ ಸೀಮಿತವಾಗಿಲ್ಲ. ಜಗತ್ತಿನ ದೊಡ್ಡ ಶಕ್ತಿಗಳಲ್ಲೊಂದಾಗಿರುವ ಚೀನಾದಲ್ಲಿ ಈಗಲೂ ಕಮ್ಯುನಿಸ್ಟ್ ಪಕ್ಷದ ಸರ್ವಾಧಿಕಾರಿ ಆಡಳಿತವಿದ್ದು ಯಾರಿಗೂ ಮತದಾನದ ಹಕ್ಕು ಇಲ್ಲ.

ರಾಜಕೀಯ ಸಮಾಲೋಚನೆಯ ವಿಚಾರಕ್ಕೆ ಬಂದಾಗ ಇಸ್ಲಾಮ್ ಸ್ತ್ರೀಪುರುಷರ ಮಧ್ಯೆ ಭೇದ ಮಾಡುವುದಿಲ್ಲ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರ ಮರಣದ ಬಳಿಕ ಸಮಾಲೋಚನೆ (ಶೂರಾ)ಯ ಮೂಲಕ ಖಲೀಫರನ್ನು ಆಯ್ಕೆ ಮಾಡಲಾಯಿತು. ಆ ಸಂದರ್ಭದಲ್ಲಿ ಸ್ತ್ರೀಪುರುಷರಿಬ್ಬರ ಅಭಿಪ್ರಾಯಗಳನ್ನೂ ಕೇಳಲಾಗಿತ್ತು. ಖಲೀಫರ ನೇಮಕಾತಿಯ ನಂತರ ಪುರುಷರು ಮತ್ತು ಮಹಿಳೆಯರಿಬ್ಬರೂ ಪ್ರಮಾಣ (ಬೈಅತ್) ಮಾಡಬೇಕಾಗಿತ್ತು.

ಇಸ್ಲಾಮೀ ಇತಿಹಾಸದ ಆರಂಭ ಹಂತವನ್ನು ಗಮನಿಸಿದರೆ, ಪ್ರವಾದಿಯ ಪ್ರಮುಖ ಸಂಗಾತಿಯಾಗಿದ್ದ ಅಬ್ದುರ್ರಹ್‌ಮಾನ್ ಬಿನ್ ಔಫ್ ಅವರು ಮೂರನೇ ಖಲೀಫರ ಆಯ್ಕೆಯ ಸಂದರ್ಭದಲ್ಲಿ ಯಾರು ರಾಷ್ಟ್ರದ ಆಡಳಿತಗಾರನಾಗಬೇಕೆಂಬ ವಿಷಯದಲ್ಲಿ ಮದೀನಾದಲ್ಲಿ ಜನಮತಗಣನೆ ನಡೆಸಿದ್ದರು. ಈ ಪ್ರಕ್ರಿಯೆಯಲ್ಲಿ

ಮಹಿಳೆಯರು ಮತ್ತು ಯುವ ಜನತೆ ಸೇರಿದ್ದರು. ತದನಂತರ ಅವರು ತಮ್ಮ ಫಲಿತಾಂಶವನ್ನೂ ಪ್ರಕಟಿಸಿದರು: "ನಾನು ಮದೀನಾದ ಎಲ್ಲ ಪುರುಷರು, ಮಹಿಳೆಯರು ಮತ್ತು ಯುವಜನರ ಅಭಿಪ್ರಾಯಗಳನ್ನು ಪಡೆದಿದ್ದೇನೆ. ಅವರ ಪ್ರಕಾರ ಅಲಿಯವರಿಗಿಂತ ಮುಂಚೆ ಉಸ್ಮಾನ್ ಅವರನ್ನು ಖಲೀಫ ಆಗಬೇಕೆಂದು ಬಯಸುತ್ತಾರೆ." (ಅವಾಸಿಮ್ ಮಿನ್ ಅಲ್ ಕವಾಸಿಮ್, ಇಬ್ನ್ ಅಲ್ ಅರಬಿ)

ತಮ್ಮನ್ನು ಮನೆಯೊಳಗಿನ ಚಟುವಟಿಕೆಗಳಿಗೆ ಸೀಮಿತಗೊಳಿಸಿದ್ದ ಮಹಿಳೆಯರನ್ನೂ ಖಲೀಫರ ಆಯ್ಕೆ ವಿಚಾರದಲ್ಲಿ ಸಂಪರ್ಕಿಸಲಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಆದ್ದರಿಂದ ಮಹಿಳೆಯರಿಗೆ ಮತದಾನದ ಹಕ್ಕನ್ನು ನಿರಾಕರಿಸುವುದಕ್ಕೆ ಇಸ್ಲಾಮಿನಲ್ಲಿ ಯಾವುದೇ ಆಧಾರವಿಲ್ಲ. ವಸ್ತುತಃ ಇದು ಪ್ರವಾದಿಯ ಸಂಗಾತಿಗಳ ಮಧ್ಯೆ ಪ್ರಚಲಿತವಿದ್ದ ಇಜ್ಮಾ (ಸಹಮತ)ದ ಪ್ರಕ್ರಿಯೆಗೆ ತದ್ವಿರುದ್ಧವಾಗಿದೆ. ಇಸ್ಲಾಮ್‌ನ ಆಗಮನದ ಎರಡು ಶತಮಾನಗಳ ನಂತರ ಮಹಿಳೆಯರ ಸ್ಥಾನಮಾನವನ್ನು ತಗ್ಗಿಸಲಾಯಿತು ಮತ್ತು ಅವರನ್ನು ದ್ವಿತೀಯ ದರ್ಜೆಯ ನಾಗರಿಕರಂತೆ ನೋಡಲಾಯಿತು.

## ಮಹಿಳೆಯ ಶಿಕ್ಷಣ ಪಡೆಯುವ ಮತ್ತು ವಾಹನ ಚಲಾಯಿಸುವ ಹಕ್ಕು?

ಮುಸ್ಲಿಮ್ ಹೆಣ್ಮಕ್ಕಳಿಗೆ ಶಾಲೆಗಳಲ್ಲಿ ವ್ಯಾಸಂಗ ಮಾಡಿ ಉನ್ನತ ಶಿಕ್ಷಣ ಪಡೆಯುವ ಅವಕಾಶ ಇಲ್ಲ. ಕೆಲವು ರಾಷ್ಟ್ರಗಳಲ್ಲಿ ಅವರಿಗೆ ಕಾರು ಚಲಾಯಿಸುವ ಹಕ್ಕೂ ಇಲ್ಲ. ಇಸ್ಲಾಮೀ ಶರೀಯತ್ ಈ ಬಗ್ಗೆ ಏನು ಹೇಳುತ್ತದೆ?

ಇಸ್ಲಾಮ್ ಹೆಣ್ಮಕ್ಕಳಿಗೆ ಶಿಕ್ಷಣದ ಹಕ್ಕು ನಿರಾಕರಿಸುವುದಿಲ್ಲ. ಅಷ್ಟೇ ಅಲ್ಲ, ಪುರುಷ ಮತ್ತು ಮಹಿಳೆ ಇಬ್ಬರ ಶಿಕ್ಷಣದ ಹಕ್ಕನ್ನೂ ಇಸ್ಲಾಮ್ ಎತ್ತಿಹಿಡಿಯುತ್ತದೆ. ಮುಸ್ಲಿಮ್ ಸ್ತ್ರೀಪುರುಷರ ಮೇಲೆ ವಿದ್ಯಾರ್ಜನೆ ಕಡ್ಡಾಯ ವಾಗಿದೆ ಎಂದು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಹೇಳಿರುವುದಾಗಿ ವರದಿಯಾಗಿದೆ. ಬಹುತೇಕ ಗಲ್ಫ್ ರಾಷ್ಟ್ರಗಳು ಮತ್ತು ಈಜಿಪ್ಟ್‌ನ ವಿಶ್ವವಿದ್ಯಾಲಯಗಳಲ್ಲಿ, ಮಹಿಳೆಯರ ಸಂಖ್ಯೆ ಪುರುಷರಿಗಿಂತಲೂ ಹೆಚ್ಚಿದೆ. ಪದವೀಧರರಲ್ಲೂ ಮಹಿಳೆಯರ ಸಂಖ್ಯೆಯೇ ಹೆಚ್ಚು. ಇದು ಮಹಿಳೆಯರಿಗೆ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ನೀಡಲಾದ ಬಳಿಕ ಕಳೆದ ಕೆಲವು ದಶಕಗಳಲ್ಲಿ ಆಗಿರುವ ಬದಲಾವಣೆ. ಹೆಣ್ಮಕ್ಕಳ ಶಾಲೆಗಳನ್ನು ಧ್ವಂಸಗೊಳಿಸುತ್ತಿರುವುದು ಕೇವಲ ಅಫ್ಘಾನಿಸ್ತಾನದ ಮೂಲಭೂತವಾದಿ ತಾಲಿಬಾನಿಗಳು ಮಾತ್ರ. ಅವರು ಪ್ರತಿಪಾದಿಸುವ ಇಸ್ಲಾಮಿಗೆ ಯಾವುದೇ ಇಸ್ಲಾಮೀ ವಲಯದ ಮನ್ನಣೆ ಇಲ್ಲ.

ಮಹಿಳೆಯರಿಗೆ ಕಾರು ಚಲಾಯಿಸಲು ಮಾಡಲು ಅವಕಾಶ ನೀಡುವುದಕ್ಕೆ

ಸಂಬಂಧಿಸಿದಂತೆ ಕೇವಲ ಸೌದಿ ಅರೇಬಿಯಾ ಮಾತ್ರ ಬಿಗಿ ನಿಲುವು ಹೊಂದಿದೆ. ಸೌದಿ ಅರೇಬಿಯಾದಲ್ಲಿ ಸಂಪ್ರದಾಯವಾದಿ ಏಕಚಕ್ರಾಧಿಪತ್ಯವಿದೆ. ಮಹಿಳೆಯರಿಗೆ ವಾಹನ ಚಲಾಯಿಸಲು ಮುಕ್ತ ಅವಕಾಶ ನೀಡಿದರೆ, ಸ್ತ್ರೀಪುರುಷರಿಗೆ ಮುಕ್ತವಾಗಿ ಬೆರೆಯಲು ಅವಕಾಶ ಮಾಡಿ ಕೊಟ್ಟಂತಾಗುತ್ತದೆ ಎಂಬುದು ಅವರ ವಾದ. ಆದರೆ, ಇಸ್ಲಾಮೀ ಶರೀಯತ್ ವಾಹನ ಚಲಾಯಿಸುವುದರಿಂದ ಮಹಿಳೆಯರನ್ನು ತಡೆಯುವುದಿಲ್ಲ. ಪ್ರವಾದಿಯ ಕಾಲದಲ್ಲಿಯೂ ಮಹಿಳೆಯರು ಕುದುರೆ ಮತ್ತು ಒಂಟೆಯ ಮೇಲೆ ಪ್ರಯಾಣ ಮಾಡುತ್ತಿದ್ದರು. ಇದನ್ನು ಗಮನಿಸಿದರೆ ಮಹಿಳೆಯರ ಓಡಾಟದ ಮೇಲೆ ಯಾವುದೇ ನಿರ್ಬಂಧ ಇರಬಾರದು ಎಂಬುದು ಸ್ಪಷ್ಟವಾಗುತ್ತದೆ. ಸ್ತ್ರೀಪುರುಷರ ಮುಕ್ತ ಬೆರೆಯುವಿಕೆಗೆ ದಾರಿ ಮಾಡಿಕೊಡಬಹುದು ಎಂಬ ಆತಂಕವೊಂದೇ ಮಹಿಳೆಯರಿಗೆ ವಾಹನ ಚಲಾಯಿಸುವ ಅವಕಾಶ ನಿರಾಕರಿಸಲು ನೆಪವಾಗಬಾರದು. ಯಾವುದೇ ರಾಷ್ಟ್ರ ಹೀಗೆ ಮಾಡುತ್ತಿದ್ದರೆ, ಅದು ತನ್ನ ಸ್ವಯಿಚ್ಛೆಯಿಂದ ಅದನ್ನು ಮಾಡುತ್ತಿದೆ. ಖಂಡಿತವಾಗಿಯೂ ಇದು ಶರೀಯತ್‌ಗೆ ವಿರುದ್ಧವಾದುದು. ಇಂಥ ನಿರ್ಬಂಧಗಳಿಗೆ ಇಸ್ಲಾಮನ್ನು ದೂಷಿಸುವುದು ಸರಿಯಲ್ಲ.

# ಬಹುಪತ್ನಿತ್ವ ಮತ್ತು ಏಕಪತ್ನಿತ್ವ

ಬಹುಪತ್ನಿತ್ವ ಎಂದರೆ ಏಕಕಾಲದಲ್ಲಿ ಒಬ್ಬರಿಗಿಂತ ಹೆಚ್ಚು ಸಂಗಾತಿಗಳನ್ನು ಹೊಂದಿರುವುದು. ಒಬ್ಬ ವ್ಯಕ್ತಿ ಒಂದೇ ಸಮಯದಲ್ಲಿ ಒಬ್ಬರಿಗಿಂತ ಹೆಚ್ಚು ಪತ್ನಿಯರನ್ನು ಹೊಂದುವುದಕ್ಕೆ ಬಹುಪತ್ನಿತ್ವ ಎನ್ನುವರು. ಒಬ್ಬಳೇ ವೈವಾಹಿಕ ಸಂಗಾತಿ ಇದ್ದರೆ ಅದನ್ನು ಏಕಪತ್ನಿತ್ವ ಎನ್ನುವರು.

## ಬಹುಪತ್ನಿತ್ವ – ಪಾಶ್ಚಿಮಾತ್ಯರ ಒಂದು ಅಸ್ತ್ರ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರ ಬಹುಪತ್ನಿತ್ವದ ಬಗ್ಗೆ ಅಜ್ಞಾನಿಗಳು ಟೀಕೆ ಮಾಡುವುದಿದೆ. ಈ ವಿವಾಹಗಳ ಉದ್ದೇಶ, ಸ್ವರೂಪ ಅಥವಾ ವೈಖರಿಯನ್ನು ಗಂಭೀರವಾಗಿ ಅಧ್ಯಯನ ನಡೆಸದೆ ಅವರು ಈ ಟೀಕೆ ಮಾಡುತ್ತಾರೆ. ಈ ಟೀಕೆಗಳಿಗೆ ಯಾವುದೇ ಐತಿಹಾಸಿಕ ಸಮರ್ಥನೆಯಾಗಲಿ ವೈಚಾರಿಕ ಹಿನ್ನೆಲೆಯಾಗಲಿ ಇಲ್ಲ.

ಮಾನವ ಸಂಸ್ಕೃತಿ ಮತ್ತು ನಾಗರಿಕತೆಗೆ ಪ್ರವಾದಿವರ್ಯರು ಸಲ್ಲಿಸಿದ ಕೊಡುಗೆಗಳನ್ನು ಕಡೆಗಣಿಸಲಿಕ್ಕಾಗಿ ಈ ಬಗೆಯ ವಿವಾದಗಳನ್ನು ಆಗಿಂದಾಗ್ಗೆ ಹುಟ್ಟುಹಾಕಲಾಗುತ್ತಿದೆ. ಟೀಕಾಕಾರರ ಅಜ್ಞಾನ, ಧಾರ್ಮಿಕ ಪೂರ್ವಗ್ರಹ ಅಥವಾ ಪ್ರವಾದಿವರ್ಯರ ವ್ಯಕ್ತಿತ್ವ ಮತ್ತು ಅವರು ಪ್ರತಿಪಾದಿಸಿದ ವಿಶಿಷ್ಟ ಜೀವನದರ್ಶನದ ಬಗೆಗಿನ ದ್ವೇಷವೇ ಇದಕ್ಕೆ ಕಾರಣ. ಹೀಗೆ ಟೀಕಿಸುವಾಗ ಇವರಿಗೆ ಪ್ರವಾದಿಯ ತತ್ವಗಳಿಂದ ತಮಗಾಗಿರುವ ಲಾಭಗಳ ಅರಿವೂ ಇರುವುದಿಲ್ಲ.

ಏಕಪತ್ನಿತ್ವವು ನೈತಿಕತೆಯನ್ನು ಹೇರಲಿಕ್ಕಾಗಿ ಪಾಶ್ಚಿಮಾತ್ಯರು ಶೋಧಿಸಿದ ಇತ್ತೀಚಿನ ಅಸ್ತ್ರ ಎಂಬುದನ್ನು ನಾವು ಮರೆಯಬಾರದು. ಮಧ್ಯಕಾಲೀನ ಯುಗದಲ್ಲಿ ಜಗತ್ತಿನ ಹೆಚ್ಚಿನ ಕಡೆಗಳಲ್ಲಿ ಬಹುಪತ್ನಿತ್ವ ಚಾಲ್ತಿಯಲ್ಲಿತ್ತು. ಪುರುಷರು ಸಾಮಾಜಿಕ

ಸ್ಥಾನಮಾನಕ್ಕಾಗಿ ನೂರಾರು ಪತ್ನಿಯರನ್ನು ಇಟ್ಟುಕೊಳ್ಳುತ್ತಿದ್ದರು. ಅವಿವಾಹಿತರಾಗಿದ್ದ ಏಸು ಕ್ರಿಸ್ತರನ್ನು ಹೊರತು ಪಡಿಸಿ, ಹೆಚ್ಚಿನ ಪ್ರವಾದಿಗಳು ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದಿದ್ದರು. ಸಂತರು ಉಪಪತ್ನಿಯರನ್ನೂ ಇಟ್ಟುಕೊಳ್ಳುತ್ತಿದ್ದರು.

ಅರೇಬಿಯಾದಲ್ಲಿ ಮಹಿಳೆಯರನ್ನು ಚರಾಸ್ತಿಗಿಂತ ಕಡೆಯಾಗಿ ನೋಡಲಾಗುತ್ತಿತ್ತು. ಅಪ್ಪಂದಿರು ತಮ್ಮ ನವಜಾತ ಹೆಣ್ಣು ಶಿಶುಗಳನ್ನು ಜೀವಂತ ಹೂಳುತ್ತಿದ್ದರು. ಸಾಮಾಜಿಕ ಅನುಕೂಲತೆಗಾಗಿ ಮದುವೆಗಳು ನಡೆಯುತ್ತಿದ್ದವು. ವಿವಾಹ ವಿಚ್ಛೇದನಗಳು ಸರ್ವೇಸಾಮಾನ್ಯವಾಗಿದ್ದವು ಮತ್ತು ಅದನ್ನು ಕೀಳಾಗಿ ನೋಡಲಾಗುತ್ತಿರಲಿಲ್ಲ.

ಇಂದು ಪಾಶ್ಚಾತ್ಯ ಸಮಾಜದಲ್ಲಿ ಸ್ವಚ್ಛಂದ ಲೈಂಗಿಕತೆಯು ಸಾಮಾನ್ಯವಾಗಿದೆ.

ಇಂದಿಗೂ ಪಶ್ಚಿಮ ಮತ್ತು ಪೂರ್ವದ ಬಹುತೇಕ ದೇಶಗಳಲ್ಲಿ ಮುಸ್ಲಿಮರು ಮತ್ತು ಮುಸ್ಲಿಮೇತರರು ಬಹುಪತ್ನಿತ್ವದಲ್ಲಿ ತೊಡಗಿದ್ದಾರೆ. ಈ ಪೈಕಿ ಕೆಲವು ಕಾನೂನು ಬದ್ಧವಾಗಿದ್ದರೆ, ಇನ್ನು ಕೆಲವು ಕಾನೂನುಬಾಹಿರ ಮತ್ತು ಬೂಟಾಟಿಕೆಯಿಂದ ಕೂಡಿವೆ. ಈ ಪೈಕಿ ಕೆಲವು ಸಂಬಂಧಗಳು ರಹಸ್ಯವಾಗಿದ್ದರೆ ಇನ್ನು ಕೆಲವು ಬಹಿರಂಗವಾಗಿಯೇ ನಡೆಯುತ್ತವೆ. ದೊಡ್ಡ ಸಂಖ್ಯೆಯ ವಿವಾಹಿತ ಪುರುಷರು ಖಾಸಗಿಯಾಗಿ ಪ್ರೇಯಸಿಯರನ್ನೂ ಉಪಪತ್ನಿಯರನ್ನೂ ಇರಿಸಿಕೊಂಡಿರುತ್ತಾರೆ ಇಲ್ಲವೇ ಅನ್ಯ ಮಹಿಳೆಯರೊಂದಿಗೆ ಸಂಬಂಧ ಹೊಂದಿರುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಸಂಶೋಧನೆಯ ಅಗತ್ಯವೇನೂ ಇಲ್ಲ. ನೈತಿಕವಾದಿಗಳು ಒಪ್ಪಲಿ, ಬಿಡಲಿ, ಕಾನೂನು ಬಾಹಿರವಾಗಿ ಬಹುಪತ್ನಿತ್ವವು ಆಚರಣೆಯಲ್ಲಿದೆ ಮತ್ತು ಅದು ಸಾರ್ವತ್ರಿಕವಾಗಿದೆ ಎಂಬುದು ವಾಸ್ತವ.

## ಯಹೂದಿ ಧರ್ಮದಲ್ಲಿ ಬಹುಪತ್ನಿತ್ವ

ಬೈಬಲ್ ಮತ್ತು ತಲ್ಮೂದ್ ಕಾಲದ ಇತಿಹಾಸವನ್ನು ಗಮನಿಸಿದರೆ ಪ್ರಾಚೀನ ಇಸ್ರೇಲಿಯರು ಬಹುಪತ್ನಿತ್ವ ಆಚರಿಸುತ್ತಿದ್ದರು ಮತ್ತು ಕೆಲವರು ನೂರಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದಿದ್ದರು ಎಂಬುದು ತಿಳಿದುಬರುತ್ತದೆ. ತಲ್ಮೂದ್ ಮತ್ತು ತೌರಾತ್ ಕಾನೂನುಗಳು ಬಹುಪತ್ನಿತ್ವವನ್ನು ಪ್ರೋತ್ಸಾಹಿಸಿದ್ದವು. ಅವರ ಹೆಚ್ಚಿನ ಪ್ರವಾದಿಗಳು ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದಿದ್ದರು. ವಿಕಿಪೀಡಿಯಾದ ಪ್ರಕಾರ, ಪ್ರವಾದಿ ಇಬ್ರಾಹೀಮ್ (ಅವರ ಮೇಲೆ ಶಾಂತಿ ಇರಲಿ) ಇಬ್ಬರು ಪತ್ನಿಯರನ್ನು, ಪ್ರವಾದಿ ಸುಲೈಮಾನ್ (ಅವರ ಮೇಲೆ ಶಾಂತಿ ಇರಲಿ) 700 ಮಂದಿ ಪತ್ನಿಯರನ್ನು ಮತ್ತು 300

ಮಂದಿ ಉಪಪತ್ನಿಯರನ್ನು ಹೊಂದಿದ್ದರು. ಪ್ರವಾದಿ ಯಾಕೂಬ್ (ಅವರ ಮೇಲೆ ಶಾಂತಿ ಇರಲಿ) ನಾಲ್ವರು ಪತ್ನಿಯರನ್ನು, ಪ್ರವಾದಿ ದಾವೂದ್ (ಅವರ ಮೇಲೆ ಶಾಂತಿ ಇರಲಿ) ಎಂಟು ಮಂದಿ ಪತ್ನಿಯರನ್ನು ಮತ್ತು ಪ್ರವಾದಿ ಮೂಸಾ (ಅವರ ಮೇಲೆ ಶಾಂತಿ ಇರಲಿ) ನಾಲ್ವರು ಪತ್ನಿಯರನ್ನು (ಸಫೈರ್, ಗಿಬ್ಷಿಯಾ, ಬಿಂತ್ ಕಿನಿ ಮತ್ತು ಬಿಂತ್ ಹುಬಾಬ್) ಹೊಂದಿದ್ದರು.

ಎನ್‌ಸೈಕ್ಲೋಪೀಡಿಯಾ ಬಿಬ್ಲಿಕಾ ಪ್ರಕಾರ, ಸಾಮಾನ್ಯ ಯಹೂದಿ ವ್ಯಕ್ತಿ ನಾಲ್ವರು ಪತ್ನಿಯರನ್ನು ಇಟ್ಟುಕೊಳ್ಳುತ್ತಿದ್ದ. ರಾಜ ಹದಿನೆಂಟು ಮಂದಿ ಮಹಿಳೆಯರನ್ನು ವಿವಾಹ ಆಗಬಹುದಿತ್ತು.

ಯಹೂದಿಯರಲ್ಲಿ ಬಹುಪತ್ನಿತ್ವದ ಸಂಪ್ರದಾಯವು ರಾಬಿ ಗೆರ್ಶೋಮ್ ಬಿನ್ ಯಹೂದ (ಕ್ರಿ.ಶ. 960–1030) ಈ ಪದ್ಧತಿಯ ವಿರುದ್ಧ ಆದೇಶ ಹೊರಡಿಸುವವರೆಗೂ ಮುಂದುವರೆದಿತ್ತು. ಯಹೂದಿಯರ ಸೆಫಾರ್ಡಿಕ್ ಪಂಗಡಗಳು ಈ ಸಂಪ್ರದಾಯವನ್ನು ತೀರಾ ಇತ್ತೀಚಿನವರೆಗೆ ಅಂದರೆ 1950ರ ತನಕ ಅನುಸರಿಸುತ್ತಿದ್ದವು. ಇಸ್ರೇಲಿನ ಮುಖ್ಯ ಧರ್ಮಾಧಿಕಾರಿ ಬಹುಪತ್ನಿತ್ವವನ್ನು ನಿಷೇಧಿಸುವವರೆಗೆ ಈ ಸಂಪ್ರದಾಯ ಮುಂದುವರಿದಿತ್ತು.

ಯಹೂದಿ ಮತ್ತು ಕ್ರೈಸ್ತ ಧರ್ಮಗಳು ಏಕಪತ್ನಿತ್ವ ಪಾಲಿಸುವ ಮತ್ತು ಬಹುಪತ್ನಿತ್ವವನ್ನು ಸಾರಾಸಗಟಾಗಿ ವಿರೋಧಿಸುವ ಧರ್ಮಗಳಾಗಿರಲಿಲ್ಲ ಮತ್ತು ಈಗಲೂ ವಿರೋಧಿಸುತ್ತಿಲ್ಲ ಎಂದು ಪ್ರಮುಖ ಯಹೂದಿ ಪಂಡಿತರಾದ ಎಸ್.ಡಿ.ಗೊಟೀನ್, (ಜ್ಯೂವ್ಸ್ ಎಂಡ್ ಅರಬ್ಸ್), ಎಲ್‌ಟಿ ಹೊಬ್‌ಹೌಸ್ (ಮೋರಲ್ಸ್ ಇನ್ ಇವೊಲುಷನ್), ಮತ್ತು ಎ.ಎ.ವೆಸ್ಟರ್‌ಮಾರ್ಕ್ (ಎ ಶಾರ್ಟ್ ಹಿಸ್ಟರಿ ಆಫ್ ಮ್ಯಾರೇಜ್) ವಾದಿಸುತ್ತಾರೆ.

ಕ್ರಿಶ್ಚಿಯನ್ ಮೋರ್ಮೋನ್‌ಗಳ ನಿಲುವು ಏನೆಂಬುದು ಸ್ಪಷ್ಟ. ಆಫ್ರೋ–ಏಷಿಯನ್ ಬಿಷಪ್‌ಗಳು ವ್ಯಭಿಚಾರ, ವಿವಾಹೇತರ ಸಂಬಂಧ ಮತ್ತು ಸಂಗಾತಿಗಳನ್ನು ಅದಲುಬದಲುಗೊಳಿಸುವುದಕ್ಕಿಂತ ಬಹುಪತ್ನಿತ್ವವೇ ಒಳ್ಳೆಯದೆಂಬ ಧೋರಣೆ ಹೊಂದಿದ್ದಾರೆ.

ಏಕಪತ್ನಿತ್ವವನ್ನು ಕಟ್ಟುನಿಟ್ಟಾಗಿ ಹೇರುವುದಕ್ಕೂ ವೇಶ್ಯಾವಾಟಿಕೆ, ಸಲಿಂಗ ಕಾಮ, ವಿವಾಹೇತರ ಲೈಂಗಿಕ ಸಂಬಂಧ, ಮತ್ತು ಲೈಂಗಿಕ ಸ್ವಚ್ಛಂದತೆಗೂ ನೇರ ಸಂಬಂಧ ಇರುವುದನ್ನು ಗಮನಿಸಬಹುದು. ಗ್ರೀಕ್–ರೋಮನ್ ಮತ್ತು ಯಹೂದಿ–ಕ್ರೈಸ್ತ ನಾಗರಿಕತೆಗಳ ಚರಿತ್ರೆಯು ಈ ವಾದವನ್ನು ಮತ್ತಷ್ಟು ಸಮರ್ಥಿಸುತ್ತದೆ ಮತ್ತು ಕುಟುಂಬಗಳ ಸಾಮಾಜಿಕ ಚರಿತ್ರೆಯನ್ನು ಅವಲೋಕಿಸಿದಾಗಲೂ ಇದು ಸ್ಪಷ್ಟಗೊಳ್ಳುತ್ತದೆ.

# ಕ್ರೈಸ್ತ ಧರ್ಮದಲ್ಲಿ ಬಹುಪತ್ನಿತ್ವ

ಬೈಬಲ್‌ನ ಅವತೀರ್ಣದ ಸಂದರ್ಭದಲ್ಲಿ ಬಹುಪತ್ನಿತ್ವಕ್ಕೆ ಸಮಾಜದಲ್ಲಿ ಮಾನ್ಯತೆಯಿತ್ತು. ಪ್ರವಾದಿ ಏಸು ಕ್ರಿಸ್ತರು ಬಹುಪತ್ನಿತ್ವದ ವಿರುದ್ಧ ಮಾತನಾಡಿದವರಲ್ಲ. ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ನೈತಿಕವಾಗಿ ಬಹುಪತ್ನಿತ್ವಕ್ಕೆ ಅಂಗೀಕಾರವಿತ್ತು ಮತ್ತು ಯಾರೂ ಅದನ್ನು ಪ್ರಶ್ನಿಸುತ್ತಿರಲಿಲ್ಲ. ಬಹುಶಃ ಈ ಕಾರಣದಿಂದ ಬೈಬಲ್‌ನಲ್ಲಿ ಅದರ ಪ್ರಸ್ತಾಪವಿಲ್ಲ. ಆದ್ದರಿಂದ ಬೈಬಲ್ ಬಹುಪತ್ನಿತ್ವವನ್ನು ನಿಷೇಧಿಸುವುದಿಲ್ಲ, ನಿಯಂತ್ರಿಸುವುದಿಲ್ಲ ಅಥವಾ ನಿರ್ಬಂಧ ಹೇರುವುದಿಲ್ಲ. ಈ ಸಂಬಂಧ ಬೈಬಲ್‌ನ ಕಾಲದ ಪ್ರವಾದಿಗಳ, ರಾಜರ ಮತ್ತು ಗೋತ್ರದ ಮುಖಂಡರ ಕತೆಗಳು ಕುತೂಹಲಕಾರಿಯಾಗಿವೆ.

ಅನೇಕ ಕ್ರೈಸ್ತ ರಾಜರು ಒಂದಕ್ಕಿಂತ ಹೆಚ್ಚು ವಿವಾಹವನ್ನು ಮಾಡಿಕೊಂಡಿದ್ದ ಉದಾಹರಣೆಗಳಿವೆ. ಚರ್ಚ್ ಮತ್ತು ಸ್ವತಃ ಸೇಂಟ್ ಲೂಥರ್‌ರ ಪೂರ್ವಾನುಮತಿಯೊಂದಿಗೆ ಎರಡನೆಯ ಫೆಡ್ರಿಕ್ ವಿಲ್‌ಹೆಲ್ಮ್ ಮತ್ತು ಫಿಲಿಪ್ ಒಂದಕ್ಕಿಂತ ಹೆಚ್ಚು ವಿವಾಹವಾಗಿದ್ದರು. ಕ್ರಿ.ಶ. 1650ರ ನುರೆಂಬರ್ಗ್ ಸಮ್ಮೇಳನವು ಜನಸಂಖ್ಯೆಯ ಇಳಿಕೆಯ ಸಮಸ್ಯೆಯನ್ನು ಪರಿಹರಿಸಲಿಕ್ಕಾಗಿ ಒಂದಕ್ಕಿಂತ ಹೆಚ್ಚಿನ ವಿವಾಹ ಮಾಡಿಕೊಳ್ಳಲು ಜನರಿಗೆ ಅನುಮತಿ ನೀಡಿತ್ತು.

17ನೇ ಶತಮಾನದ ತನಕ ಕ್ರೈಸ್ತ ಚರ್ಚ್ ಬಹುಪತ್ನಿತ್ವದ ಆಚರಣೆಯನ್ನು ಅನುಮೋದಿಸಿತ್ತು. ಮಾರ್‌ಮೋನ್ಸ್ (ಚರ್ಚ್ ಆಫ್ ಜೀಸಸ್ ಕ್ರೈಸ್ಟ್ ಆಫ್ ದ ಲ್ಯಾಟರ್‌ಡೇ ಸೇಂಟ್ಸ್) ಬಹುಪತ್ನಿತ್ವಕ್ಕೆ ಅನುಮತಿಸಿದ್ದು ಸಮಾಜದಲ್ಲಿ ಅದು ಆಚರಣೆಯಲ್ಲೂ ಇತ್ತು.

ಬಹುಪತ್ನಿತ್ವ ಎಲ್ಲಾ ಕಾಲಗಳಲ್ಲಿಯೂ, ಎಲ್ಲಾ ದೇಶಗಳಲ್ಲಿಯೂ ಕಾನೂನುಬದ್ಧವಾಗಿ ಆಚರಣೆಯಲ್ಲಿತ್ತು ಇತ್ತು ಎಂಬುದು ಈ ಅಂಶಗಳಿಂದ ವ್ಯಕ್ತವಾಗುತ್ತದೆ. ಯಹೂದಿ ಧರ್ಮದ ಪ್ರವಾದಿಗಳು ಬಹುಪತ್ನಿತ್ವ ಆಚರಿಸುತ್ತಿದ್ದರು ಮತ್ತು ಪ್ರವಾದಿ ಏಸುಕ್ರಿಸ್ತರು ಕೂಡಾ ಇದನ್ನು ನಿಷೇಧಿಸಲಿಲ್ಲ.

ಕ್ರೈಸ್ತ ಧರ್ಮದಲ್ಲಿ ಅನೇಕ ಬದಲಾವಣೆಗಳಾಗುತ್ತಿದ್ದ ಕಾಲದಲ್ಲಿ ಪೌಲನು ಏಕಪತ್ನಿತ್ವವನ್ನು ಆಚರಣೆಗೆ ತಂದನು. ಇದು ಗ್ರೀಕ್ – ರೋಮನ್ ಸಂಸ್ಕೃತಿಗೆ ಚರ್ಚನ್ನು ಅನುಯೋಜ್ಯಗೊಳಿಸಲಿಕ್ಕಾಗಿ ಕೈಗೊಂಡ ಕ್ರಮವಾಗಿತ್ತು. ಗ್ರೀಕ್ – ರೋಮನ್ ಸಂಸ್ಕೃತಿಯಲ್ಲಿ ಜನರು ಏಕಪತ್ನಿತ್ವ ಅನುಸರಿಸುತ್ತಿದ್ದರು. ಆದರೆ ಅವರು ಅನೇಕ ದಾಸಿಯರನ್ನು ಹೊಂದಿದ್ದರು ಮತ್ತು ಮನಬಂದಂತೆ ಅವರನ್ನು ಬಳಸಿಕೊಳ್ಳುತ್ತಿದ್ದರು.

ಅಂದರೆ ಪರೋಕ್ಷವಾಗಿ ಆ ಸಮಾಜದಲ್ಲಿ ಅಮಿತ ಬಹುಪತ್ನಿತ್ವ ಆಚರಣೆಯಲ್ಲಿತ್ತು.

ಆರಂಭ ಕಾಲದ ಕ್ರೈಸ್ತರಲ್ಲಿ, 'ಮಹಿಳೆಯರು ಜನ್ಮತಃ ಪಾಪಿ' ಗಳಾಗಿರುವುದರಿಂದ ಪುರುಷರು ವಿವಾಹದಿಂದ ದೂರವಿದ್ದರೆ ಒಳ್ಳೆಯದು ಎಂಬ ಭಾವನೆ ಇತ್ತು. ಆದರೆ ಈ ಧೋರಣೆ ಮಾನವ ಪೀಳಿಗೆಯ ಮುಂದುವರಿಕೆಗೆ ಅಡ್ಡಿಬರುತ್ತದೆ ಎಂಬ ಕಾರಣದಿಂದ 'ಕೇವಲ ಒಬ್ಬಳನ್ನು ವಿವಾಹವಾಗಿ' ಎಂಬ ರಾಜಿ ಸೂತ್ರವನ್ನು ಅನುಸರಿಸಲಾಯಿತು.

## ಹಿಂದೂ ಧರ್ಮದಲ್ಲಿ ಬಹುಪತ್ನಿತ್ವ

ಪ್ರಾಚೀನ ಕಾಲದಿಂದಲೂ ಬಹುಪತ್ನಿತ್ವಕ್ಕೆ ಎಲ್ಲ ನಾಗರಿಕತೆಗಳಲ್ಲಿ ಮನ್ನಣೆ ಇತ್ತು. ಪ್ರಾಚೀನ ಭಾರತದಲ್ಲಿ ಬಹುಪತ್ನಿತ್ವಕ್ಕೆ ಸಂಪ್ರದಾಯಗಳ ಮನ್ನಣೆ ಇದ್ದದ್ದು ಮಾತ್ರವಲ್ಲ ಅದು ಸಾರ್ವತ್ರಿಕವಾಗಿ ಆಚರಣೆಯಲ್ಲೂ ಇತ್ತು. ಅನೇಕ ರಾಜರು ಬಹುಪತ್ನಿಯರನ್ನು ಹೊಂದಿದ್ದರು. ವಿಕಿಪೀಡಿಯಾದ ಅನುಸಾರ, ಋಗ್ವೇದ ಮತ್ತು ಹಿಂದೂ ಧರ್ಮದ ಪುಸ್ತಕಗಳಲ್ಲಿ ಬಹುಪತ್ನಿತ್ವದ ಉಲ್ಲೇಖವಿದೆ. ಶ್ರೀರಾಮನ ತಂದೆ ದಶರಥನಿಗೆ ಮೂವರು ಪತ್ನಿಯರಿದ್ದರು ಕೌಶಲ್ಯ, ಸುಮಿತ್ರಾ ಮತ್ತು ಕೈಕೇಯಿ. ಶ್ರೀಕೃಷ್ಣ 16,100 ಪತ್ನಿಯರನ್ನು ಹೊಂದಿದ್ದ. ರಾಧಾ, ರುಕ್ಮಿಣಿ, ಸತ್ಯಭಾಮಾ, ಜಂಭಾವತಿ, ಸತ್ಯ, ಲಕ್ಷ್ಮಣ, ಭದ್ರಾ, ಕಳಿಂದಿ, ಮಿತ್ರಾವಿಂದ ಇವರಲ್ಲಿ ಪ್ರಮುಖರು.

ಹಿಂದೂ ಧಾರ್ಮಿಕ ಗ್ರಂಥಗಳಾದ ವೇದ, ರಾಮಾಯಣ, ಮಹಾಭಾರತ, ಗೀತೆ ಒಬ್ಬ ವ್ಯಕ್ತಿ ಇಟ್ಟುಕೊಳ್ಳಬಹುದಾದ ಪತ್ನಿಯರ ಸಂಖ್ಯೆಗೆ ಮಿತಿ ಹೇರುವುದಿಲ್ಲ. ಈ ಗ್ರಂಥಗಳ ಪ್ರಕಾರ ಒಬ್ಬ ವ್ಯಕ್ತಿ ತನಗೆ ಇಷ್ಟವಿರುವಷ್ಟು ಸಂಖ್ಯೆಯ ಮಹಿಳೆಯರನ್ನು ವಿವಾಹವಾಗಬಹುದು. 1955ರಲ್ಲಿ ಹಿಂದೂ ವಿವಾಹ ಕಾಯ್ದೆ ಜಾರಿಗೆ ಬಂದ ನಂತರವಷ್ಟೇ ಹಿಂದೂ ಧರ್ಮೀಯರಿಗೆ ಬಹುಪತ್ನಿತ್ವವನ್ನು ನಿಷೇಧಿಸಲಾಯಿತು. ಹಾಗಾಗಿ ಬಹುಪತ್ನಿತ್ವಕ್ಕೆ ನಿಷೇಧ ಇರುವುದು ಹಿಂದೂ ಧಾರ್ಮಿಕ ಗ್ರಂಥಗಳಲ್ಲಿ ಅಲ್ಲ, ಭಾರತೀಯ ಕಾನೂನಿನಲ್ಲಿ.

## ಪಾಶ್ಚಾತ್ಯ ಸಮಾಜದಲ್ಲಿ ಬಹುಪತ್ನಿತ್ವ

ಪಾಶ್ಚಾತ್ಯ ಸಮಾಜದಲ್ಲಿ ಪುರುಷನು ಪತ್ನಿಯ ಜತೆಗಿನ ಸಂಬಂಧದಲ್ಲಿ ಬಿರುಕು ಮೂಡಿದಾಗ ಆಕೆಯನ್ನು ತೊರೆದು ನಂತರ ವಿವಾಹವಾಗದೆಯೇ ಪರಸ್ತ್ರೀಯರೊಂದಿಗೆ ಸಂಬಂಧ ಬೆಳೆಸುತ್ತಾನೆ. ಪಾಶ್ಚಾತ್ಯ ಸಮಾಜದಲ್ಲಿ ಮೂರು ವಿಧದ ಬಹುಪತ್ನಿತ್ವ

ಆಚರಣೆಯಲ್ಲಿರುವುದನ್ನು ಕಾಣಬಹುದು. (1) ಸತತ ಬಹುಪತ್ನಿತ್ವ. ಅಂದರೆ ಮದುವೆ, ವಿಚ್ಛೇದನ, ಮದುವೆ, ವಿಚ್ಛೇದನ, ಮದುವೆ, ವಿಚ್ಛೇದನ ಹೀಗೆ ಸರಣಿ ನಿರಂತರವಾಗಿ ಮುಂದುವರಿಯುತ್ತದೆ. (2) ವಿವಾಹಿತ ಪುರುಷ ಒಂದಕ್ಕಿಂತ ಹೆಚ್ಚು ಮಹಿಳೆಯರೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಳ್ಳುವುದು ಮತ್ತು (3) ಅವಿವಾಹಿತ ಪುರುಷ ಅನೇಕ ಉಪಪತ್ನಿಯರನ್ನು ಹೊಂದುವುದು.

ಪಾಶ್ಚಾತ್ಯ ಸಮಾಜವು ಬಹುಪತ್ನಿತ್ವವನ್ನು ತಾತ್ವಿಕವಾಗಿ ಒಪ್ಪಿಕೊಳ್ಳದಿರಬಹುದು, ಆದರೆ ಆಚರಣೆಯಲ್ಲಂತೂ ಒಪ್ಪಿಕೊಂಡಿದೆ. ಬ್ರಿಟಿಷ್ ಸಮಾಜತಜ್ಞೆ ಮತ್ತು ಮಹಿಳಾ ಹಕ್ಕು ಹೋರಾಟಗಾರ್ತಿ ಡಾ. ಅನ್ನಿಬೆಸೆಂಟ್ ಈ ಬಗ್ಗೆ ಹೇಳಿರುವ ಮಾತುಗಳನ್ನು ಗಮನಿಸಿ:

"ಪಾಶ್ಚಾತ್ಯ ಸಮಾಜದಲ್ಲಿ ತೋರಿಕೆಯ ಏಕಪತ್ನಿತ್ವ ಆಚರಣೆಯಲ್ಲಿದೆ. ವಾಸ್ತವವೆಂದರೆ ಇಲ್ಲಿ ನಡೆಯುತ್ತಿರುವುದು ಬೇಜವಾಬ್ದಾರಿ ಬಹುಪತ್ನಿತ್ವ. ತನಗೆ ಸಾಕೆನಿಸಿದಾಗ ಆತ ಉಪಪತ್ನಿಯರನ್ನು ಕೈ ಬಿಡುತ್ತಾನೆ. ಕ್ರಮೇಣ ಈ ಮಹಿಳೆಯರು ಬೀದಿಯ ಹೆಣ್ಣಾಗುತ್ತಾರೆ. ಬಹುಪತ್ನಿತ್ವ ಆಚರಿಸುವ ಗಂಡನ ಮನೆಯಲ್ಲಿರುವ ಪತ್ನಿಗೆ ಸಿಗುವ ರಕ್ಷಣೆ ಇವರಿಗೆ ಇರುವುದಿಲ್ಲ. ಪಶ್ಚಿಮದ ಬೀದಿಗಳಲ್ಲಿ ಗಿರಾಕಿಗಳಿಗೆ ಕಾಯುವ ಸ್ತ್ರೀಯರನ್ನು ನೋಡಿದರೆ, ಇಸ್ಲಾಮಿನ ಬಹುಪತ್ನಿತ್ವ ವ್ಯವಸ್ಥೆಯನ್ನು ಟೀಕಿಸಲು ಪಾಶ್ಚಾತ್ಯರಿಗೆ ಯಾವುದೇ ಆಧಾರವಿಲ್ಲವೆಂಬುದು ನಿಚ್ಚಳ. ಯಾವುದೇ ರಕ್ಷಣೆ ಇಲ್ಲದೆ, ಅನೈತಿಕ ಸಂಬಂಧದಿಂದ ಜನಿಸಿದ ಮಗುವಿನೊಂದಿಗೆ ಬೀದಿಯಲ್ಲಿ ಜೀವಿಸುವುದಕ್ಕಿಂತ ವಿವಾಹಿತ ಪುರುಷನ ರಕ್ಷಣೆಯಲ್ಲಿ ಗೌರವದೊಂದಿಗೆ ಪತ್ನಿಯಾಗಿ ಬಾಳುವುದು ಮಹಿಳೆಯರಿಗೆ ಶ್ರೇಯಸ್ಕರ."

ಸ್ತ್ರೀ, ಪುರುಷರು ಪರಸ್ಪರ ಸಮ್ಮತಿಯಿಂದ ಲೈಂಗಿಕ ಕ್ರಿಯೆ ನಡೆಸಬಹುದು ಎಂದು ಹೇಳುವ ಪಾಶ್ಚಾತ್ಯ ಸಮಾಜವು ವಾಸ್ತವದಲ್ಲಿ ಜವಾಬ್ದಾರಿರಹಿತ ಲೈಂಗಿಕ ಸಂಬಂಧಗಳಿಗೆ ಹಾದಿ ಮಾಡಿಕೊಟ್ಟಿದೆ. ಇದರಿಂದಾಗಿ 'ಅಪ್ಪ ಇಲ್ಲದ' ಅನೇಕ ಮಕ್ಕಳು, ಅವಿವಾಹಿತ ಮತ್ತು ಹದಿಹರೆಯದ ತಾಯಂದಿರು ಸೃಷ್ಟಿಯಾಗಿದ್ದಾರೆ. ಇವರೆಲ್ಲರೂ ಸಮಾಜದ ಕಲ್ಯಾಣ ವ್ಯವಸ್ಥೆಗೆ ಹೊರೆಯಾಗಿ ಪರಿಣಮಿಸಿದ್ದಾರೆ.

ಕೆಲವು ಪಾಶ್ಚಾತ್ಯ ಚಿಂತಕರು ಏಕಪತ್ನಿತ್ವವು ಮಹಿಳೆಯರ ಹಕ್ಕುಗಳನ್ನು ರಕ್ಷಿಸುತ್ತದೆ ಎಂದು ವಾದಿಸುತ್ತಾರೆ. ಆದರೆ ಇವರಿಗೆ ನಿಜವಾಗಿಯೂ ಮಹಿಳೆಯರ ಹಕ್ಕುಗಳ ಬಗ್ಗೆ ಕಾಳಜಿ ಇದೆಯೇ? ವಾಸ್ತವದಲ್ಲಿ ಹೆಣ್ಣಿನ ಮೇಲೆ ದೌರ್ಜನ್ಯ, ಶೋಷಣೆ ಇವರ ಸಮಾಜಗಳಲ್ಲಿ ಎಷ್ಟರ ಮಟ್ಟಿಗೆ ನಡೆಯುತ್ತಿದೆ ಎಂದರೆ ಎಲ್ಲ ರೀತಿಯ ಮಹಿಳಾ ವಿಮೋಚನಾ ಚಳವಳಿಗಳು ಇಲ್ಲಿಂದಲೇ ಆರಂಭಗೊಂಡಿವೆ.

ಪಾಶ್ಚಾತ್ಯ ಸಮಾಜಗಳಲ್ಲಿ ಇರುವ ಏಕಪತ್ನಿತ್ವವು ಪುರುಷರಿಗೆ ಪರವಾಗಿದ್ದು,

ಯಾವುದೇ ಜವಾಬ್ದಾರಿಯಿಲ್ಲದೆ ಅನ್ಯ ಸ್ತ್ರೀಯರೊಂದಿಗೆ ಚೆಲ್ಲಾಟವಾಡಲು ಇದು ಅವಕಾಶ ಮಾಡಿಕೊಡುತ್ತದೆ. ಸುಲಭದಲ್ಲೇ ಸಿಗುವ ಗರ್ಭ ನಿರೋಧಕ ಸಾಮಗ್ರಿಗಳು ಮತ್ತು ಗರ್ಭಪಾತದ ಸೌಲಭ್ಯಗಳು ಮಹಿಳೆಯರಿಗೆ ಅನೈತಿಕ ಲೈಂಗಿಕತೆಯ ದಾರಿಯನ್ನು ಮುಕ್ತಗೊಳಿಸಿದ್ದು ಲೈಂಗಿಕ ಕ್ರಾಂತಿಯು ಆಕೆಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಆಕೆ ಗರ್ಭಪಾತ ಮತ್ತು ಗರ್ಭನಿರೋಧಕ ಕ್ರಮದ ಅಡ್ಡಪರಿಣಾಮಗಳನ್ನು ಎದುರಿಸುತ್ತಲೇ ಇದ್ದಾಳೆ. ಏಡ್ಸ್ ಮತ್ತಿತರ ಲೈಂಗಿಕ ಕಾಯಿಲೆಗಳಿಗೆ ತುತ್ತಾಗುವುದು ಬಿಟ್ಟರೆ ಪುರುಷರಿಗೆ ಹೆಚ್ಚಿನ ತೊಂದರೆಯೇನೂ ಇಲ್ಲ.

ಏಕಪತ್ನಿತ್ವವು ಪುರುಷರಿಗೆ ರಕ್ಷಣೆ ನೀಡಿದ್ದು, ಮಹಿಳೆಯರು ನಿರಂತರ ಪುರುಷನ ವಾಂಛೆಗಳಿಗೆ ಬಲಿಯಾಗುತ್ತಿದ್ದಾರೆ. ತಮ್ಮ ಮೇಲೆ ಜವಾಬ್ದಾರಿ ಮತ್ತು ನಿಷ್ಠೆಯನ್ನು ಬೇಡುವ ಕಾರಣಕ್ಕಾಗಿ ಪುರುಷ ಪ್ರಧಾನ ಸಮಾಜವು ಬಹುಪತ್ನಿತ್ವವನ್ನು ಪ್ರಬಲವಾಗಿ ವಿರೋಧಿಸುತ್ತಿದೆ. ಒಂದಕ್ಕಿಂತ ಹೆಚ್ಚು ಹೆಣ್ಣುಗಳೊಂದಿಗೆ ಸಂಬಂಧ ಬೆಳೆಸುವುದಕ್ಕೆ ಪ್ರತಿಯಾಗಿ ಜವಾಬ್ದಾರಿ ಹೊತ್ತು ಕೊಳ್ಳುವುದಕ್ಕೆ ಅವರು ಸಿದ್ಧರಿಲ್ಲ. ಅದೇ ರೀತಿ ಮಹಿಳೆಯರನ್ನೂ ಮಕ್ಕಳನ್ನೂ ನೋಡಿಕೊಳ್ಳುವ ಹೊಣೆಯೂ ಅವರಿಗೆ ಬೇಡ.

## ಇಸ್ಲಾಮಿನಲ್ಲಿ ಬಹುಪತ್ನಿತ್ವ

ಪಾಶ್ಚಾತ್ಯ ಮತ್ತು ಪೌರಾತ್ಯ ಜಗತ್ತಿನ ಕೆಲ ಪೂರ್ವಗ್ರಹಪೀಡಿತ ಜನರು, ಮುಸ್ಲಿಮರು ಕಾಮಾಸಕ್ತರೆಂದೂ ಈ ಕಾರಣದಿಂದ ಅನೇಕ ಸ್ತ್ರೀಯರನ್ನು ವಿವಾಹ ಮಾಡಿಕೊಳ್ಳುತ್ತಾರೆಂದೂ ಪ್ರಚಾರ ಮಾಡುತ್ತಾರೆ. ಜನರು ಬಟ್ಟೆ ಬದಲಾಯಿಸಿದಂತೆ ಮುಸ್ಲಿಮರು, ಸ್ತ್ರೀಯರನ್ನು ಬದಲಾಯಿಸುವ ಸ್ವಾತಂತ್ರ್ಯ ಹೊಂದಿದ್ದಾರೆ ಎಂಬ ಭಾವನೆ ಅನೇಕರಲ್ಲಿದೆ. ಕೆಲವು ಚಲನಚಿತ್ರಗಳು, ಟಿ.ವಿ. ಧಾರಾವಾಹಿಗಳು, ಕಾದಂಬರಿಗಳು ಮತ್ತು ಮಾಧ್ಯಮಗಳು ಮುಸ್ಲಿಮರನ್ನು ತಪ್ಪಾಗಿ ಚಿತ್ರಿಸುತ್ತಿರುವುದು ಕೂಡಾ ಈ ಪರಿಸ್ಥಿತಿಗೆ ಕಾರಣ. ಮುಸ್ಲಿಮ್ ಸಮಾಜದ ಕೆಲವು ವ್ಯಕ್ತಿಗಳ ಬೇಜವಾಬ್ದಾರಿ ನಡವಳಿಕೆಗಳಿಂದಲೂ ಈ ತಪ್ಪುಕಲ್ಪನೆ ತೀವ್ರಗೊಂಡಿದೆ.

ದುರದೃಷ್ಟವಶಾತ್, ಕುರ್‌ಆನ್‌ನಲ್ಲಿ ಪ್ರತಿಪಾದಿಸಲಾದ ಮತ್ತು ಪ್ರವಾದಿ ಮುಹಮ್ಮದ್ ಅನುಷ್ಠಾನಗೊಳಿಸಿದ ಹಲವು ವಿಚಾರಗಳನ್ನು ಮುಸ್ಲಿಮ್ ಆಡಳಿತಗಾರರು ಮನಸೋಇಚ್ಛೆ ಉಲ್ಲಂಘಿಸಿದರು. ಅಷ್ಟೇ ಅಲ್ಲ, ತಮ್ಮ ಸಮಾಧಾನಕ್ಕಾಗಿ ಅವರು ಪ್ರವಾದಿಯ ಹೆಸರಲ್ಲಿ ಹಲವು ಹದೀಸ್ (ಪ್ರವಾದಿ ವಚನ)ಗಳನ್ನು ಕೃತಕವಾಗಿ ಸೃಷ್ಟಿಸಿಕೊಂಡರು. ಇವು ಪ್ರವಾದಿ ಮುಹಮ್ಮದ್‌ರ ವ್ಯಕ್ತಿತ್ವಕ್ಕೆ ಸಾಕಷ್ಟು ಮಸಿ ಬಳಿಯಿತು

ಮತ್ತು ಅವರ ತೇಜೋವಧೆಗೆ ಬೇಕಾದ ಸಾಮಗ್ರಿಯನ್ನು ಒದಗಿಸಿತು.

ಇದರ ಪರಿಣಾಮವಾಗಿ ಇಸ್ಲಾಮಿನ ಬೆಳಕು ಮತ್ತು ಅದರ ಸಾಮಾಜಿಕ ತತ್ವಗಳು ಮಿಲಿಯಗಟ್ಟಲೆ ಜನರಿಗೆ ತಲುಪದೇ ಹೋಯಿತು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರು ಇಸ್ಲಾಮಿನ ತತ್ವಗಳನ್ನು ಬೋಧಿಸುತ್ತಿದ್ದ ಸಂದರ್ಭದಲ್ಲಿ ಬಹುಪತ್ನಿತ್ವದ ಆಚರಣೆಯು ಮಾಮೂಲಾಗಿತ್ತು ಮತ್ತು ಅದು ಅವರ ಸಾಮಾಜಿಕ ಬದುಕಿನಲ್ಲಿ ಆಳವಾಗಿ ಬೇರೂರಿತ್ತು. ಪವಿತ್ರ ಕುರ್‌ಆನ್ ಈ ಪದ್ಧತಿಯನ್ನು ನಿರ್ಲಕ್ಷಿಸಲಿಕ್ಕೆ ಅಥವಾ ರದ್ದುಪಡಿಸಲಿಕ್ಕೆ ಹೋಗಲಿಲ್ಲ. ಆದರೆ, ಅದನ್ನು ಅನಿಯಂತ್ರಿತವಾಗಿ ಮುಂದುವರೆಯಲೂ ಬಿಡಲಿಲ್ಲ. ಬಹುಪತ್ನಿತ್ವದ ಜತೆಗಿನ ಅರಾಜಕತೆ, ಬೇಜವಾಬ್ದಾರಿತನಗಳ ಬಗ್ಗೆ ಕುರ್‌ಆನ್ ಮೌನವಾಗಿರುವುದು ಸಾಧ್ಯವಿರಲಿಲ್ಲ. ಸಮಾಜದ ಇತರ ಕೆಡಕುಗಳನ್ನು ತೊಡೆದು ಹಾಕಲು ಆದೇಶಿಸಿದಂತೆಯೇ, ಬಹುಪತ್ನಿತ್ವ ಪದ್ಧತಿಯ ಕೆಡುಕುಗಳನ್ನು ನಿರ್ಮೂಲಗೊಳಿಸಿ ಅದರ ಲಾಭಗಳನ್ನು ಖಾತ್ರಿಪಡಿಸಲು ಕುರ್‌ಆನ್ ಮಾರ್ಗದರ್ಶನ ನೀಡಿತು. ಸಮಾಜದ ಮೂಲ ಘಟಕವಾದ ಕುಟುಂಬದಲ್ಲಿ ಯಾವುದೇ ಅರಾಜಕತೆ ಸೃಷ್ಟಿಯಾಗುವುದನ್ನು ತಡೆಯಲಿಕ್ಕಾಗಿ ಕುರ್‌ಆನ್ ಈ ವಿಚಾರದಲ್ಲಿ ಹಸ್ತಕ್ಷೇಪ ಮಾಡಲೇಬೇಕಾಗಿತ್ತು.

ಏಕಪತ್ನಿತ್ವವನ್ನು ಪ್ರತಿಪಾದಿಸುವ ಏಕೈಕ ಧಾರ್ಮಿಕ ಗ್ರಂಥ ಕುರ್‌ಆನ್ ಆಗಿದೆ. ಪವಿತ್ರ ಕುರ್‌ಆನ್‌ನ ಈ ಕೆಳಗಿನ ಸೂಕ್ತವನ್ನು ಗಮನಿಸಿ:

> **"....ಸ್ತ್ರೀಯರಲ್ಲಿ ನೀವು ಉತ್ತಮ ಎಂದು ಭಾವಿಸುವವ ಇಬ್ಬರನ್ನೋ ಮೂವರನ್ನೋ ನಾಲ್ವರನ್ನೋ ವಿವಾಹ ಮಾಡಿಕೊಳ್ಳಿರಿ. ಆದರೆ ಅವರಿಗೆ ನ್ಯಾಯ ಒದಗಿಸಲು ಆಗುವುದಿಲ್ಲ ಎಂಬ ಅನುಮಾನ ಇದ್ದರೆ, ಒಬ್ಬರನ್ನು ಮಾತ್ರವೇ ವಿವಾಹವಾಗಿರಿ" (ಅನ್ನಿಸಾ: 3)**

ಕುರ್‌ಆನ್‌ನ ಅವತೀರ್ಣಕ್ಕೆ ಮುಂಚೆ ಪತ್ನಿಯರ ಸಂಖ್ಯೆಗೆ ಯಾವುದೇ ಮಿತಿ ಇರಲಿಲ್ಲ. ಪುರುಷರು ಹತ್ತಾರು ಪತ್ನಿಯಂದಿರನ್ನು ಕೆಲವರು ನೂರಾರು ಪತ್ನಿಯಂದಿರನ್ನು ಇಟ್ಟುಕೊಳ್ಳುತ್ತಿದ್ದರು. ಆದರೆ ಕುರ್‌ಆನ್ ಪತ್ನಿಯರ ಸಂಖ್ಯೆಯನ್ನು ನಾಲ್ಕಕ್ಕೆ ಸೀಮಿತಗೊಳಿಸಿತು. ಅಷ್ಟೇ ಅಲ್ಲ, ಹಲವು ಷರತ್ತುಗಳನ್ನೂ ವಿಧಿಸಿತು. ಗಂಡನಾದವನು ಪ್ರೀತಿ ಮಾಡುವುದು ಸೇರಿದಂತೆ ಎಲ್ಲಾ ವಿಷಯಗಳಲ್ಲಿ ತನ್ನ ಪತ್ನಿಯರ ಮಧ್ಯೆ ನ್ಯಾಯ ಪಾಲಿಸಬೇಕು ಎಂಬುದೇ ಆ ಷರತ್ತು. ಹೀಗೆ ಮಾಡುವುದು ಸಾಧ್ಯವಿಲ್ಲ ಎಂಬ ದೃಢವಾದ ಅಭಿಪ್ರಾಯವನ್ನೂ ಕುರ್‌ಆನ್ ವ್ಯಕ್ತಪಡಿಸುತ್ತದೆ.

> **"ನೀವೆಷ್ಟೇ ಬಯಸಿದರೂ ಪತ್ನಿಯರ ನಡುವೆ ಸಂಪೂರ್ಣ ನ್ಯಾಯಪಾಲಿಸಲು**

> **ನಿಮಗೆ ಸಾಧ್ಯವಾಗದು. ಆದರೆ (ಅವರಲ್ಲಿ ಯಾರ ಕಡೆಗೂ) ಸಂಪೂರ್ಣ ವಾಲಿಬಿಡಬೇಡಿ ಹಾಗೂ (ಯಾರನ್ನೂ) ಸಂಪೂರ್ಣವಾಗಿ ನಿರ್ಲಕ್ಷಿಸಿ ಜೋತಾಡುವ ಸ್ಥಿತಿಯಲ್ಲಿ ಬಿಟ್ಟುಬಿಡಬೇಡಿ... (ಕುರ್‌ಆನ್ 4:129)**

ಕುರ್‌ಆನಿನ ಈ ಸೂಕ್ತವು ಪತ್ನಿಯರ ನಡುವೆ ನ್ಯಾಯ ಪಾಲಿಸುವಂತೆ ಸೂಚಿಸುತ್ತದೆ. ಆದರೆ ವಿಶೇಷ ಸಂದರ್ಭಗಳಲ್ಲಿ ಇಸ್ಲಾಮ್ ಬಹುಪತ್ನಿತ್ವಕ್ಕೆ ಅನುಮತಿ ನೀಡುತ್ತದೆ. ಈ ಸಂದರ್ಭಗಳು ಯಾವುವು?

1. ಪತ್ನಿ ಬಂಜೆಯಾಗಿದ್ದು, ಆಕೆಗೆ ಮಕ್ಕಳಾಗದಿದ್ದಲ್ಲಿ ಮತ್ತು ಪತಿಗೆ ಸಂತಾನದ ಬಯಕೆ ಇದ್ದಲ್ಲಿ. ಈ ಸಂದರ್ಭದಲ್ಲಿ ಬಂಜೆಯಾದ ಪತ್ನಿಗೆ ವಿಚ್ಛೇದನ ನೀಡುವುದಕ್ಕಿಂತ ಇನ್ನೊಂದು ಪತ್ನಿಯನ್ನು ಹೊಂದುವುದು ಉತ್ತಮ. ಆದರೆ, ತನ್ನ ಪತಿ ಎರಡನೆಯ ವಿವಾಹಕ್ಕೆ ಮುಂದಾದಾಗ ಮೊದಲ ಪತ್ನಿಗೆ ಅದು ಇಷ್ಟವಿಲ್ಲವೆಂದಾದಲ್ಲಿ ಆತನಿಂದ ವಿಚ್ಛೇದನ ಪಡೆಯುವ ಹಕ್ಕಿರುತ್ತದೆ.

2. ಮೊದಲ ಪತ್ನಿ ಗಂಭೀರ ರೋಗದಿಂದ ಬಳಲುತ್ತಿದ್ದು, ಮನೆಯನ್ನು ನಿರ್ವಹಿಸಲು ಆಕೆಗೆ ಅಸಾಧ್ಯವಾಗಿದ್ದರೆ, ಕುಟುಂಬದ ಪಾಲನೆ ಪೋಷಣೆಗಾಗಿ ಪತಿ ಎರಡನೆಯ ವಿವಾಹವನ್ನು ಮಾಡಿಕೊಳ್ಳಬಹುದು.

3. ಸ್ತ್ರೀಯರ ಸಂಖ್ಯೆಯು ಪುರುಷರಿಗಿಂತ ಹೆಚ್ಚಿರುವ ಸಮಾಜದಲ್ಲಿ ಎದುರಾಗುವ ಸಮಸ್ಯೆಯನ್ನು ನಿಭಾಯಿಸಲು ಬಹುಪತ್ನಿತ್ವ ಒಂದು ಒಳ್ಳೆಯ ಮಾರ್ಗ. ವಿಶೇಷವಾಗಿ ಯುದ್ಧದ ನಂತರ ಈ ರೀತಿಯ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಕುರ್‌ಆನ್‌ನ ಮೇಲಿನ ಸೂಕ್ತವು ಉಹುದ್ ಯುದ್ಧದ ನಂತರ ಅವತೀರ್ಣಗೊಂಡಿತ್ತು ಎಂಬುದು ಇಲ್ಲಿ ಗಮನಾರ್ಹ. ಈ ಯುದ್ಧದಲ್ಲಿ ಅನೇಕ ಮುಸ್ಲಿಮ್ ಯೋಧರು ಹತರಾಗಿ, ಅನೇಕರು ವಿಧವೆಯರೂ ತಬ್ಬಲಿಗಳೂ ಆಗಿ ಬಿಟ್ಟಿದ್ದರು. ಬದುಕುಳಿದಿದ್ದ ಮುಸ್ಲಿಮ್ ಪುರುಷರ ಮೇಲೆ ಇವರ ರಕ್ಷಣೆ, ಪಾಲನೆ, ಮತ್ತು ಪೋಷಣೆಯ ಹೊಣೆಯಿತ್ತು. ವಿವಾಹವು ಈ ವಿಧವೆಯರನ್ನು ರಕ್ಷಿಸುವ ಒಂದು ಮಾರ್ಗವಾಗಿತ್ತು.

4. ಪ್ರಥಮ ಮತ್ತು ದ್ವಿತೀಯ ಮಹಾಯುದ್ಧದಲ್ಲಿ ಪಾಲ್ಗೊಂಡ ದೇಶಗಳಲ್ಲಿ ಸ್ತ್ರೀಯರ ಸಂಖ್ಯೆ ಪುರುಷರಿಗಿಂತ ಹೆಚ್ಚಾಗಿತ್ತು. ಆ ಸಂದರ್ಭದಲ್ಲಿ ಸಹಸ್ರಾರು ವಿಧವೆಯರು 'ಗಂಡ ಬೇಕಾಗಿದ್ದಾನೆ' ಎಂಬ ಘೋಷಣಾ ಫಲಕಗಳನ್ನು ತಮ್ಮ ಮನೆಯ ಹೊರಗಡೆ ನೇತಾಡಿಸಿದ್ದರು. ಈಗಾಗಲೇ

ಮದುವೆಯಾಗಿರುವವರು ಮರುಮದುವೆಯಾಗುವುದೇ ಈ ಸಮಸ್ಯೆಗೆ ಇರುವ ಪರಿಹಾರ. ಆದರೆ ಅವರು ತಮ್ಮ ಪತ್ನಿಯರ ಮಧ್ಯೆ ನ್ಯಾಯ ಪಾಲಿಸಲು ಸಾಧ್ಯವಾಗಬೇಕು. ಭಾರಿ ಸಂಖ್ಯೆಯ ಅವಿವಾಹಿತ ಮಹಿಳೆಯರನ್ನು ಹಾಗೆಯೇ ಬಿಡುವುದಕ್ಕಿಂತ ಇದು ಉತ್ತಮ.

5. ಇಸ್ಲಾಮ್ ವಿವಾಹೇತರ ಲೈಂಗಿಕ ಸಂಬಂಧಗಳನ್ನು ನಿಷೇಧಿಸಿದೆ. ಉಪಪತ್ನಿಯ ಕಲ್ಪನೆ ಇಸ್ಲಾಮಿನಲ್ಲಿಲ್ಲ. ಇಸ್ಲಾಮ್ ಪುರುಷರಿಗೆ ಘನತೆಯನ್ನು ನೀಡಿದ್ದು ಉಪಪತ್ನಿಯರನ್ನು ಹೊಂದುವುದಕ್ಕಿಂತ, ಬಹುಪತ್ನಿತ್ವವನ್ನು ಆಚರಿಸುವುದು ಪುರುಷರ ಘನತೆಗೆ ತಕ್ಕುದಾದ ನಡವಳಿಕೆಯಾಗಿದೆ. ಇಸ್ಲಾಮ್ ಪುರುಷನನ್ನು ತನ್ನ ಕೃತ್ಯಗಳಿಗೆ ಜವಾಬ್ದಾರನನ್ನಾಗಿಸುತ್ತದೆ. ಪುರುಷರು ಹೆಣ್ಣಿನಿಂದ ಕೇವಲ ಲೈಂಗಿಕ ಸುಖವನ್ನು ಪಡೆದು ಅನಂತರ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಿಲ್ಲ. ಇದು ಅಮಾನವೀಯ ಮತ್ತು ಅನ್ಯಾಯ.

6. ಒಬ್ಬ ಮಹಿಳೆಯು ಈಗಾಗಲೇ ಪತ್ನಿಯನ್ನು ಹೊಂದಿರುವ ವ್ಯಕ್ತಿಯೊಂದಿಗೆ ಮದುವೆಯಾಗಲು ಇಚ್ಛಿಸದಿದ್ದರೆ ಅವಳು ವಿವಾಹದ ಪ್ರಸ್ತಾವವನ್ನು ತಿರಸ್ಕರಿಸಬಹುದು. ಆದರೆ ತನ್ನ ಗಂಡನು ಇನ್ನೊಂದು ಪತ್ನಿಯನ್ನು ಹೊಂದುವುದು ಒಬ್ಬ ಮಹಿಳೆಗೆ ಆಕ್ಷೇಪಾರ್ಹವಲ್ಲ ಎಂದಾದಲ್ಲಿ ಮತ್ತು ಎರಡನೇ ಪತ್ನಿಯೂ ಅದಕ್ಕೆ ಸಿದ್ಧಳಾಗಿದ್ದಾಳೆಂದಾದಲ್ಲಿ ಇತರರು ಯಾಕೆ ಈ ಮದುವೆಗೆ ಆಕ್ಷೇಪ ಎತ್ತಬೇಕು?

"ಒಬ್ಬ ವ್ಯಕ್ತಿ ಎರಡು ಪತ್ನಿಯರನ್ನು ಹೊಂದಿದ್ದು, ಒಬ್ಬಳ ಕಡೆಗೆ ವಿಶೇಷ ಒಲವು ತೋರಿ ಮತ್ತೊಬ್ಬಳನ್ನು ಕಡೆಗಣಿಸಿದರೆ, ನಿರ್ಣಾಯಕ ದಿನದಂದು ಆತನ ದೇಹದ ಒಂದು ಭಾಗವು ಅಂಗವಿಕಲರ ಹಾಗೆ ನೇತಾಡುತ್ತಿರುತ್ತದೆ" ಎಂದು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಹೇಳಿದ್ದಾರೆ.

ಇಸ್ಲಾಮ್‌ನ ಪ್ರಕಾರ ಏಕಪತ್ನಿತ್ವವು ಒಂದು ನಿಯಮವಾಗಿದ್ದು ಬಹುಪತ್ನಿತ್ವಕ್ಕೆ ಅಸಾಮಾನ್ಯ ಸಂದರ್ಭದಲ್ಲಿ ಮಾತ್ರ ಅನುಮತಿ ನೀಡಲಾಗಿದೆ. ಇಸ್ಲಾಮೀ ಕರ್ಮಶಾಸ್ತ್ರಜ್ಞ ಇಮಾಮ್ ಅಬೂ ಹನೀಫಾ ಅವರು ಪ್ರವಾದಿವರ್ಯರು ಹೀಗೆ ಹೇಳಿರುವುದಾಗಿ ವರದಿ ಮಾಡಿದ್ದಾರೆ.

'ಒಬ್ಬಳೇ ಪತ್ನಿಯನ್ನು ಹೊಂದಿರುವ ವ್ಯಕ್ತಿಯು ಸಂತೋಷ ಮತ್ತು ನೆಮ್ಮದಿಯ ಜೀವನ ನಡೆಸುತ್ತಾನೆ. ಎರಡು ಪತ್ನಿಯರನ್ನು ಹೊಂದಿರುವಾತ ಕಷ್ಟ ಕಾರ್ಪಣ್ಯಗಳಿಗೆ ಸಿಲುಕುತ್ತಾನೆ'.

ಜಗತ್ತಿನ ಬಹುಸಂಖ್ಯಾತ ಮುಸ್ಲಿಮರು ಏಕಪತ್ನಿತ್ವವನ್ನೇ ಅನುಸರಿಸುತ್ತಾರೆ ಆದರೆ ಬಹುಪತ್ನಿತ್ವ ಆಚರಿಸುತ್ತಿರುವ ಕೆಲವೇ ಮಂದಿ, ಇಸ್ಲಾಮೀ ಜೀವನವಿಧಾನದ ಬಗ್ಗೆ ತಪ್ಪುಕಲ್ಪನೆಗಳನ್ನು ಮೂಡಲು ಕಾರಣರಾಗುತ್ತಾರೆ. ಈ ಅಪಪ್ರಚಾರದಲ್ಲಿ ಇಸ್ಲಾಮನ್ನು ಜೀವನದಲ್ಲಿ ಪಾಲಿಸದವರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ. ಬಹುಪತ್ನಿತ್ವವು ಇಸ್ಲಾಮಿನಲ್ಲಿ ಒಂದು ಷರತ್ತುಬದ್ಧ ಅನುಮತಿಯಾಗಿದೆಯೇ ಹೊರತು ಪುರುಷರ ಅಧಿಕಾರವಲ್ಲ. ಆದರೆ ಅನೇಕರು, ಒಂದಕ್ಕಿಂತ ಹೆಚ್ಚಿನ ಪತ್ನಿಯನ್ನು ಹೊಂದುವುದು ಮುಸ್ಲಿಮ್ ಪುರುಷರ ಮಟ್ಟಿಗೆ ಕಡ್ಡಾಯ ಎಂಬ ತಪ್ಪು ಕಲ್ಪನೆ ಹೊಂದಿದ್ದಾರೆ.

ಈ ಹಿನ್ನೆಲೆಯಲ್ಲಿ, ಬಹುಪತ್ನಿತ್ವವು ಇಸ್ಲಾಮಿನ ಸಂಶೋಧನೆಯಲ್ಲ. ಬದಲಾಗಿ ಹತ್ತು ಹಲವು ಷರತ್ತುಗಳನ್ನು ಜಾರಿಗೊಳಿಸುವ ಮೂಲಕ ಅದು ಬಹುಪತ್ನಿತ್ವವನ್ನು ನಿರುತ್ತೇಜಿಸಿದೆ. ಬಹುಪತ್ನಿತ್ವವನ್ನು ಒಂದು ವೇಳೆ ನಿಷೇಧಿಸಿದ್ದರೆ, ಅದು ಕೇವಲ ಪುಸ್ತಕದಲ್ಲಿ ಮಾತ್ರ ಇರುತ್ತಿತ್ತು. ಕಾನೂನಿನನ್ವಯ ಬಹುಪತ್ನಿತ್ವವನ್ನು ನಿಷೇಧಿಸಿದ ಸಮಾಜ, ರಾಷ್ಟ್ರಗಳಲ್ಲಿ ಇಂದು ಕಂಡುಬರುವಂತೆ, ಬಹುಪತ್ನಿತ್ವವು ಪ್ರತ್ಯಕ್ಷ ಅಥವಾ ಪರೋಕ್ಷವಾಗಿಯೋ ಜಾರಿಯಲ್ಲಿರುತ್ತಿತ್ತು.

ಇಸ್ಲಾಮ್ ಬದುಕಿನಲ್ಲಿ ಅಳವಡಿಸಲು ಇರುವ ಒಂದು ವಿಚಾರಧಾರೆಯೇ ಹೊರತು ಕೇವಲ ಒಂದು ತತ್ವ ಅಲ್ಲ. ಅದು ವಾಸ್ತವಕ್ಕೆ ಹತ್ತಿರವಾಗಿದ್ದು, ಜೀವನದ ಬಗ್ಗೆ ಅದರ ನಿಲುವು ಅತ್ಯಂತ ಪ್ರಾಯೋಗಿಕವಾದುದು. ಆದ್ದರಿಂದಲೇ ಅದು ಷರತ್ತುಬದ್ಧ ಮತ್ತು ನಿಯಂತ್ರಿತ ಬಹುಪತ್ನಿತ್ವಕ್ಕೆ ಅನುಮತಿ ನೀಡಿದೆ. ಒಂದು ವೇಳೆ ಅದರಿಂದ ಮಾನವಕುಲಕ್ಕೆ ಯಾವುದೇ ಲಾಭ ಇಲ್ಲವೆಂದಾದಲ್ಲಿ ಅದನ್ನು ದೇವನು ನಿಷೇಧಿಸಿ ಬಿಡುತ್ತಿದ್ದನೇನೋ. ಸೃಷ್ಟಿಕರ್ತನಿಗಿಂತ ಹೆಚ್ಚು ತಿಳಿದವರು ಯಾರಿದ್ದಾರೆ?

# ಪ್ರವಾದಿ ಮುಹಮ್ಮದ್ ಮತ್ತು ಅವರ ಕೌಟುಂಬಿಕ ಬದುಕು

ಇಸ್ಲಾಮಿನ ವಿರೋಧಿಗಳು ಮತ್ತು ಟೀಕಾಕಾರರು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರ ಕೌಟುಂಬಿಕ ಬದುಕನ್ನು ಹೆಚ್ಚಾಗಿ ವಿಮರ್ಶೆಗೆ ಗುರಿಪಡಿಸುತ್ತಾರೆ. ಪ್ರವಾದಿ ಮುಹಮ್ಮದ್ ಅವರ ಬಹುಪತ್ನಿತ್ವವನ್ನೂ ಏಸು ಕ್ರಿಸ್ತರು ಅವಿವಾಹಿತರಾಗಿ ಉಳಿದಿದ್ದನ್ನೂ ತುಲನೆ ಮಾಡಲಾಗುತ್ತದೆ. ಬ್ರಹ್ಮಚರ್ಯೆ ಅಥವಾ ಮದುವೆಯಾಗದೇ ಇರುವುದು ಪ್ರವಾದಿತ್ವ ಮತ್ತು ಸಂತ ಪದವಿಯ ಬೇಡಿಕೆ ಎಂಬ ಭಾವನೆಯ ಮೇಲೆ ಧಾರ್ಮಿಕ ಚಿಂತನೆಗಳು ನಿಂತಿವೆ. ಹಾಗೆಯೇ ವಿವಾಹವಾಗುವುದು ಮತ್ತು ಕುಟುಂಬ ಜೀವನವು ಆಸೆ ಆಕಾಂಕ್ಷೆಗಳನ್ನು ಹೊಂದಿದ ಜನಸಾಮಾನ್ಯರ ಲಕ್ಷಣ ಎಂದೂ ಸಾಮಾನ್ಯವಾಗಿ ಭಾವಿಸಲಾಗುತ್ತದೆ.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಅನುಯಾಯಿಗಳಿಗೆ ಮಾದರಿಯಾಗುವ ರೀತಿಯಲ್ಲಿ ಬದುಕಿದರು. ಒಂದು ಪ್ರವಾದಿವಚನ ಹೀಗಿದೆ. ಪ್ರವಾದಿಯ ಕೆಲವು ಸಂಗಾತಿಗಳು ತಾವು ಪಾವನ ಬದುಕು ಸಾಗಿಸುತ್ತಿರುವುದಾಗಿ ಸದಾ ಕೊಚ್ಚಿಕೊಳ್ಳುತ್ತಿದ್ದರು. ಈ ಪೈಕಿ ಒಬ್ಬನು, ತಾನು ಮದುವೆಯಾಗಲೇ ಇಲ್ಲ ಎಂದೂ ಎರಡನೆಯವನು ತಾನು ಮಾಂಸ ತಿನ್ನುವುದಿಲ್ಲವೆಂದೂ ಮೂರನೆಯವನು ತಾನು ನೆಲದಲ್ಲಿಯೇ ಮಲಗುತ್ತೇನೆ ಎಂದೂ ನಾಲ್ಕನೆಯವನು, ತಾನು ಸದಾ ಉಪವಾಸದಿಂದ ಇರುವುದಾಗಿಯೂ ಹೇಳಿಕೊಳ್ಳುತ್ತಿದ್ದ. ಇದನ್ನು ಕೇಳಿಸಿಕೊಂಡ ಪ್ರವಾದಿವರ್ಯರು ಹೀಗೆಂದರು: "ಅಲ್ಲಾಹನಿಗೆ ಸ್ತುತಿ. ನಾನು ಮದುವೆಯಾಗಿದ್ದೇನೆ. ನಾನು ಪಾವನ ಜೀವನ ಸಾಗಿಸುತ್ತಿದ್ದೇನೆ. ನಾನು ಮಾಂಸ ತಿನ್ನುತ್ತೇನೆ, ಉಪವಾಸವನ್ನೂ ಮಾಡುತ್ತೇನೆ. ನಾನು ನಿದ್ರಿಸುತ್ತೇನೆ, ಜಾಗರಣೆಯನ್ನೂ ಮಾಡುತ್ತೇನೆ."

ಹೀಗೆ ಪ್ರವಾದಿ ಮುಹಮ್ಮದ್ ಅವರು ಒಂದು ರೀತಿಯ ಸಮತೋಲನ ಕಾಯ್ದುಕೊಂಡಿದ್ದರು. ಧಾರ್ಮಿಕ ಚಟುವಟಿಕೆಗಳನ್ನು ಲೌಕಿಕ ಅಪೇಕ್ಷೆಗಳ ಜತೆಗೆ ಹೇಗೆ ಸಮೀಕರಿಸಬಹುದು ಎಂಬುದನ್ನು ಅವರು ತೋರಿಸಿಕೊಟ್ಟರು. ಅವರು ಭೌತಿಕ ವಿಚಾರಗಳಿಗೆ ಅತಿಯಾದ ಮಹತ್ವ ಕೊಡಲಿಲ್ಲ. ಅದೇ ರೀತಿ ಅಧ್ಯಾತ್ಮಿಕತೆಯನ್ನೂ ಕಡೆಗಣಿಸಲಿಲ್ಲ. ಅವರು ಜಗತ್ತಿನ ಹಿಂದೆ ಬೀಳುವುದನ್ನು ಮತ್ತು ಅದರ ವೈಭೋಗವನ್ನು ತ್ಯಜಿಸಿದರು. ಆದರೆ ಕಾಠಿಣ್ಯ ಮತ್ತು ಪರಿತ್ಯಾಗವನ್ನೂ ನೆಚ್ಚಿಕೊಳ್ಳಲಿಲ್ಲ. ಜೀವನವನ್ನು ದೈವಿಕ ಮತ್ತು ಲೌಕಿಕ ಎಂದು ಅವರು ವಿಂಗಡಿಸಲಿಲ್ಲ. ಇದು ಪ್ರವಾದಿ ಮುಹಮ್ಮದ್ ಮತ್ತು ಏಸು ಕ್ರಿಸ್ತರ ಧೋರಣೆಗಳ ನಡುವೆ ಇದ್ದ ಮುಖ್ಯ ವ್ಯತ್ಯಾಸ. ಇಸ್ಲಾಮ್ ಎಂದಿಗೂ ಅತಿರೇಕದ ವರ್ತನೆಯನ್ನು ಬೆಂಬಲಿಸುವುದಿಲ್ಲ. ಅದು ದೇಹದಂಡನೆಯನ್ನಾಗಲಿ ಸುಖಲೋಲುಪತೆಯನ್ನಾಗಲಿ ಸಮರ್ಥಿಸುವುದಿಲ್ಲ. ಏಕಪತ್ನಿತ್ವಕ್ಕೆ ಆದ್ಯತೆ

ನೀಡುತ್ತದೆ, ಆದರೆ ಅದನ್ನು ಹೇರುವುದಿಲ್ಲ. ಕೆಲವೊಂದು ಸಂದರ್ಭದಲ್ಲಿ ಷರತ್ತುಬದ್ಧವಾಗಿ ಯುದ್ಧಕ್ಕೆ ಅನುಮತಿ ನೀಡುತ್ತದೆ. ಆದರೆ ದೇವರಿಗೆ ಶರಣಾಗಿ ಬದುಕುವುದು ಮತ್ತು ಶಾಂತಿಯು ಇಸ್ಲಾಮಿನ ತಿರುಳಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಅದು ಮಾನವನ ವರ್ತನೆಯನ್ನು ಆತನ ಸಾಮರ್ಥ್ಯ, ಅಗತ್ಯ ಮತ್ತು ಮಿತಿಗಳ ಆಧಾರದಲ್ಲಿ ನಿಯಂತ್ರಿಸಬಯಸುತ್ತದೆ. ಆದರೆ ಅದು ಮನುಷ್ಯನ ಸ್ವಭಾವವನ್ನು ಸಾರಾಸಗಟಾಗಿ ಬದಲಾಯಿಸಲು ಇಷ್ಟಪಡುವುದಿಲ್ಲ. ಇದು ಕಾರ್ಯಸಾಧ್ಯವಲ್ಲ. ಅಧ್ಯಾತ್ಮಿಕವಾಗಿ ಅಪೇಕ್ಷಣೀಯವೂ ಅಲ್ಲ.

ಜೀವನದ ಅಧ್ಯಾತ್ಮಿಕ ಮತ್ತು ಲೌಕಿಕ ಅಂಶಗಳನ್ನು ಇಸ್ಲಾಮ್ ಬದುಕಿನಲ್ಲಿ ಮಿಳಿತಗೊಳಿಸುತ್ತದೆ. ಆದರೆ, ಎರಡರ ಮಧ್ಯೆ ವ್ಯತ್ಯಾಸ ಮಾಡುವುದಿಲ್ಲ. ಯಾವ ರೀತಿ ಎರಡನ್ನೂ ಪರಸ್ಪರ ಪೂರಕವಾಗಿ ತೆಗೆದುಕೊಂಡು ಹೋಗಬೇಕು ಎಂದು ಮಾರ್ಗದರ್ಶನ ಮಾಡುತ್ತದೆ. ಮಾನವನ ಭೌತಿಕ ಮತ್ತು ಅಧ್ಯಾತ್ಮಿಕ ಅಗತ್ಯಗಳನ್ನು ಅಂಗೀಕರಿಸುವ ಇಸ್ಲಾಮ್ ಯಾವ ಮಿತಿಯೊಳಗೆ ಈ ಅಪೇಕ್ಷೆಗಳನ್ನು ಈಡೇರಿಸಿಕೊಳ್ಳಬಹುದು ಎಂಬುದನ್ನೂ ಸೂಚಿಸುತ್ತದೆ. ಒಂದು ವೇಳೆ ಭೌತಿಕ ಅಗತ್ಯಗಳನ್ನು ಸಿಂಧುವಾದ ಮಾರ್ಗದಲ್ಲಿ ಮತ್ತು ನೈತಿಕ ಮಿತಿಯೊಳಗೆ ಈಡೇರಿಸಿಕೊಳ್ಳಲು ಅವಕಾಶ ನೀಡದಿದ್ದರೆ ಮನುಷ್ಯನ ಬದುಕು ಭ್ರಷ್ಟಗೊಳ್ಳಬಹುದು ಮತ್ತು ಒಳಗಿಂದಲೇ ನಾಶಗೊಳ್ಳಬಹುದು.

ಅಂತೆಯೇ, ಜನರು ತಮ್ಮ ಶಾರೀರಿಕ ಬಯಕೆಗಳನ್ನು ಈಡೇರಿಸುತ್ತಲೇ ಪಾರದರ್ಶಕವಾಗಿ ಬದುಕಲು ಸಾಧ್ಯವಿರುವ ಸಮಾಜವನ್ನು ಇಸ್ಲಾಮ್ ರೂಪಿಸಬಯಸುತ್ತದೆ. ಬ್ರಹ್ಮಚರ್ಯೆಯ ಹೆಸರಲ್ಲಿ ದೈಹಿಕ ಅಗತ್ಯಗಳನ್ನು ಹತ್ತಿಕ್ಕುವುದರ ಅಪಾಯವನ್ನೂ ಇಸ್ಲಾಮ್ ಮನಗಂಡಿದೆ. ಈ ಧೋರಣೆಯು ಹಲವು ಸಮಾಜಗಳ ಸ್ವಯಂ ವಿನಾಶಕ್ಕೆ ದಾರಿ ಮಾಡಿಕೊಟ್ಟಿದೆ ಎಂಬುದು ಗಮನಾರ್ಹ. ವಿಶ್ರಾಂತಿಧಾಮಗಳು ದುಷ್ಟರ ಅಡಗುದಾಣಗಳಾಗಿಯೂ ಆಶ್ರಮಗಳು ಹಗರಣಗಳ ಕೇಂದ್ರಗಳಾಗಿಯೂ ಮಾರ್ಪಟ್ಟದ್ದನ್ನು ನಾವು ಕಂಡಿದ್ದೇವೆ. ಇಂಥ ಪರಿಸ್ಥಿತಿಯು ಸಮಾಜದಲ್ಲಿ ತಲೆದೋರದಿರಲಿ ಎಂಬ ಉದ್ದೇಶದಿಂದ ಇಸ್ಲಾಮ್ ತನ್ನ ಅನುಯಾಯಿಗಳಿಗೆ ಮದುವೆಯಾಗುವಂತೆಯೂ ಸಂತಾನ ಹೊಂದುವಂತೆಯೂ ತಾಕೀತು ಮಾಡಿದೆ. ಹುಟ್ಟು ಮತ್ತು ವೈವಾಹಿಕ ಸಂಬಂಧದ ಆಧಾರದಲ್ಲಿ ಸಮಾಜವನ್ನು ಕಟ್ಟಲು ಅದು ನಿರ್ದೇಶನ ನೀಡುತ್ತದೆ. ಆರ್ಥಿಕ ಹೊಣೆಗಾರಿಕೆಗಳನ್ನು ನಿಗದಿಪಡಿಸಲು ಮತ್ತು ಜನರನ್ನು ಹಕ್ಕು ಮತ್ತು ಕರ್ತವ್ಯಗಳ ಆಧಾರದಲ್ಲಿ ವ್ಯಕ್ತಿಗಳ ಮಧ್ಯೆ ಸಂಬಂಧ ಏರ್ಪಡಿಸಲಿಕ್ಕೂ ಇದು ಅತ್ಯಗತ್ಯ.

ಒಬ್ಬ ಆದರ್ಶ ಪತಿ ಮತ್ತು ತಂದೆಯಾಗಿ ಹೇಗೆ ಬದುಕಬೇಕೆಂಬುದನ್ನು ಪ್ರವಾದಿಯಿಂದ ತಿಳಿದುಕೊಳ್ಳಲು ಜನರು ಅಪೇಕ್ಷಿಸುತ್ತಾರೆ. ಪ್ರವಾದಿ ಮುಹಮ್ಮದ್ ಅವರ ಬಹುಪತ್ನಿತ್ವ (ಅವರು ಹೆಚ್ಚಾಗಿ ವಿಧವೆಯರನ್ನೇ ವಿವಾಹವಾಗಿದ್ದರು) ಮತ್ತು ಅವರು ಯಾವ

ರೀತಿ ಕುಟುಂಬವನ್ನು ಬೆಳೆಸಿದರು ಎಂಬುದು ಈ ದೃಷ್ಟಿಯಿಂದ ನಮಗೆ ಅಧ್ಯಯನಯೋಗ್ಯವೆನಿಸುತ್ತದೆ. ಪ್ರವಾದಿ ಮುಹಮ್ಮದ್ ಅವರು ತಮ್ಮನ್ನು ಒಬ್ಬ ಮನುಷ್ಯ ಎಂದು ಜನರಿಗೆ ಪರಿಚಯಿಸುತ್ತಿದ್ದರು ಎಂಬ ಅಂಶವೂ ಇಲ್ಲಿ ಗಮನಾರ್ಹ. ಯಾವನೇ ವ್ಯಕ್ತಿಯು ಸಮಾಜದ ಮಟ್ಟಿಗೆ ಅನುಸರಣಯೋಗ್ಯ ಮಾದರಿಯನ್ನು ಬಿಟ್ಟು ಹೋಗಬೇಕಾದರೆ ಆತ ಮನುಷ್ಯನೇ ಆಗಿರಬೇಕು. ಮನುಷ್ಯನ ಗುಣಾವಗುಣಗಳನ್ನು ಹೊಂದಿರದ ಜೀವಿಯನ್ನು ದೇವಚರರೆಂದಷ್ಟೆ ಕರೆಯಬಹುದು. ಅಂತಹ ಜೀವಿಗಳ ಬಗ್ಗೆ ಗೌರವ ಮತ್ತು ಭಕ್ತಿಯ ಭಾವವೂ ಮೂಡಬಹುದು. ಆದರೆ ಅದು ಮನುಷ್ಯನ ಗುಣಲಕ್ಷಣಗಳನ್ನು ಬಿಂಬಿಸಲಾರದು. ಅಂತಹ ಜೀವಿಯ ಬಗ್ಗೆ ವಿಸ್ಮಯ ಮತ್ತು ಆರಾಧನಾಭಾವ ಮೂಡಬಹುದು. ಆದರೆ ಅನುಸರಣಯೋಗ್ಯ ಮಾದರಿಯಂತೂ ಆಗಲಾರದು. ಯಾಕೆಂದರೆ ಅಲ್ಲಿ ಮನುಷ್ಯನಲ್ಲಿ ಮೂಲಭೂತವಾಗಿ ಇರಬೇಕಾದ ಲಕ್ಷಣಗಳು ಇರುವುದಿಲ್ಲ. ಅದೇ ರೀತಿ, ಮದುವೆಯಾಗಿ ಕುಟುಂಬವನ್ನು ನಿರ್ಮಿಸಿದ ಪ್ರವಾದಿಗೆ ಮಾತ್ರ ಕುಟುಂಬದ ಸಮಸ್ಯೆ ಮತ್ತು ಸವಾಲುಗಳನ್ನು ಅರ್ಥ ಮಾಡಿಕೊಂಡು ತನ್ನ ಬೆಂಬಲಿಗರಿಗೆ ಇಂಥ ಬದುಕಿನ ಸವಾಲುಗಳನ್ನು ಹೇಗೆ ಎದುರಿಸಬೇಕೆಂದು ಮಾರ್ಗದರ್ಶನ ಮಾಡಲು ಸಾಧ್ಯ. ಇಂಥ ನಾಯಕರನ್ನು ಮಾತ್ರವೇ ದೈನಂದಿನ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಸೂಚಿಸಬಲ್ಲ ಮಾದರಿ ವ್ಯಕ್ತಿಯಾಗಿ ಪರಿಗಣಿಸಬಹುದು.

ಪ್ರವಾದಿ ಮುಹಮ್ಮದ್ ಅವರು ಅವಿವಾಹಿತರಾಗಿಯೇ ಉಳಿದುಬಿಟ್ಟಿದ್ದರೆ ಅವರು ಮನುಷ್ಯ ಸಮಾಜಕ್ಕೆ ನಾಯಕರಾಗುವುದು ಬಿಡಿ, ಒಬ್ಬ ಪರಿಪಕ್ವ ವ್ಯಕ್ತಿಯಾಗಿಯೂ ನಮಗೆ ಕಾಣಿಸುತ್ತಿರಲಿಲ್ಲ. ಒಂದು ಆದರ್ಶ ಸಮಾಜದ ಬಗೆಗಿನ ಅವರ ಕಲ್ಪನೆ ಅಪೂರ್ಣವಾಗಿಯೇ ಉಳಿಯುತ್ತಿತ್ತು ಮತ್ತು ಅವರು ಸಮಾಜದ ವಿಶ್ವಾಸಾರ್ಹತೆ ಗಳಿಸುತ್ತಿರಲಿಲ್ಲ. ಸ್ವಾನುಭವದಿಂದ ಕೊಡುವ ಮಾರ್ಗದರ್ಶನ ಮಾತ್ರ ಇಂಥ ಗೌರವವನ್ನು ಪಡೆಯಬಲ್ಲದು. ಅಷ್ಟೇ ಅಲ್ಲ, ಒಬ್ಬ ಅನುಭವಿ ನಾಯಕನ ಮಾರ್ಗದರ್ಶನ ಇಲ್ಲದೇ ಹೋದರೆ, ಮನುಷ್ಯ ತನ್ನ ಲೈಂಗಿಕ, ಜೈವಿಕ ಅಗತ್ಯಗಳನ್ನು ಯಾವ ರೀತಿ ಈಡೇರಿಸಿಕೊಳ್ಳಬಹುದು, ಸಾಮಾಜಿಕ ಮತ್ತು ಕೌಟುಂಬಿಕ ವಿಷಯಗಳನ್ನು ಹೇಗೆ ನಿಭಾಯಿಸಬಹುದು ಎಂಬುದನ್ನು ತಿಳಿದುಕೊಳ್ಳುವುದು ಕಷ್ಟವಾಗುತ್ತಿತ್ತು. ದೈವಿಕ ಮಾರ್ಗದರ್ಶನದ ಭಾಗವಾಗಿ ಈ ಎಲ್ಲ ಕ್ಷೇತ್ರಗಳನ್ನು ನೈತಿಕತೆಯ ಜತೆ ಸಂಯೋಜಿಸುವುದು ಸಾಧ್ಯವಾಗುತ್ತಿರಲಿಲ್ಲ.

ಈ ಕೆಳಗಿನ ಅಧ್ಯಾಯವು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರು ಯಾವ ರೀತಿ ಕೌಟುಂಬಿಕ ಬದುಕು ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು ಎಂಬುದನ್ನು ವಿವರಿಸುತ್ತದೆ. ಜತೆಗೆ ಎಂತಹ ಶಾಶ್ವತ ಮಾದರಿಯನ್ನು ಬಿಟ್ಟುಹೋದರು ಎಂಬುದರ ಮೇಲೂ ಅದು ಬೆಳಕು ಚೆಲ್ಲುತ್ತದೆ.

# ಇಸ್ಲಾಮಿನಲ್ಲಿ ವಿಚ್ಛೇದಿತೆಯರು ಮತ್ತು ವಿಧವೆಯರ ಮರುವಿವಾಹ

ಬಹುಪತ್ನಿತ್ವಕ್ಕೆ ಮತ್ತು ವಿಚ್ಛೇದಿತೆಯರ, ವಿಧವೆಯರ ಮರುವಿವಾಹಕ್ಕೆ ಇಸ್ಲಾಮ್ ಏಕೆ ಅನುಮತಿ ನೀಡಿದೆ ಎಂಬುದಕ್ಕೆ ಅನೇಕ ಕಾರಣಗಳಿವೆ. ಆದರೆ, ಪೂರ್ವಗ್ರಹಪೀಡಿತರಾಗಿ ಕಾರಣಗಳನ್ನು ಕಲ್ಪಿಸಿಕೊಳ್ಳುವುದು ಅಥವಾ ಊಹೆಯ ಆಧಾರದಲ್ಲಿ ತೀರ್ಮಾನಕ್ಕೆ ಬರುವುದು ಸರಿಯಲ್ಲ. ಇವು ವಾಸ್ತವಿಕ ಮತ್ತು ನಿತ್ಯವೂ ಗೋಚರವಾಗುವ ಕಾರಣಗಳಾಗಿವೆ. ಇಂಥ ಕೆಲವು ಕಾರಣಗಳನ್ನು ಈಗ ಗಮನಿಸೋಣ.

ಎನ್‌ಸೈಕ್ಲೋಪಿಡೀಯಾ ಬ್ರಿಟಾನಿಕಾ ಪ್ರಕಾರ, "ಯಾವುದೇ ನಿರ್ದಿಷ್ಟ ವಯಸ್ಸನ್ನು ತೆಗೆದುಕೊಂಡರೂ ಮಹಿಳೆಯರ ಜೀವಿತಾವಧಿ ಪುರುಷರಿಗಿಂತ ದೀರ್ಘವಾದುದು."

ಅನೇಕ ಸಾಮಾಜಿಕ ಮತ್ತು ರಾಜಕೀಯ ಕಾರಣಗಳಿಗಾಗಿ ವಿಧವೆಯರು ಮತ್ತು ನಿರ್ಗತಿಕ ಮಹಿಳೆಯರ ಸಂಖ್ಯೆ ಹೆಚ್ಚುತ್ತಲೇ ಇರುತ್ತದೆ. ಈ ಪೈಕಿ ಮುಖ್ಯ ಕಾರಣಗಳೆಂದರೆ, ಯುದ್ಧ, ಅಪಘಾತ, ಪ್ರಾಕೃತಿಕ ವಿಕೋಪಗಳು ಮತ್ತು ಜೈಲುವಾಸ.

ಮೊದಲ ಮಹಾಯುದ್ಧದಲ್ಲಿ (1914–18) ಅಂದಾಜು 80 ಲಕ್ಷ ಸೈನಿಕರು ಹತರಾದರು. ಸಾವಿಗೀಡಾದ ಅನೇಕ ನಾಗರಿಕ ಸೈನಿಕರೂ ಪುರುಷರೇ.

ಎರಡನೇ ಮಹಾಯುದ್ಧದಲ್ಲಿ (1939–45) ಸುಮಾರು 6 ಕೋಟಿ ಜನರು ಕೊಲೆಯಾದರು ಅಥವಾ ಶಾಶ್ವತವಾಗಿ ಅಂಗವಿಕಲರಾದರು. ಈ ಪೈಕಿ ಹೆಚ್ಚಿನವರು ಪುರುಷರಾಗಿದ್ದರು.

ಇರಾನ್–ಇರಾಕ್ ಯುದ್ಧದಲ್ಲಿಯೇ (1979–1988) ಸುಮಾರು 82,000 ಇರಾನಿ ಮಹಿಳೆಯರು, 1,00,000 ಇರಾಕಿ ಮಹಿಳೆಯರು ವಿಧವೆಯರಾದರು. ಹತ್ತು ವರ್ಷದ ಅವಧಿಯಲ್ಲಿ ಇವೆಲ್ಲವೂ ನಡೆಯಿತು.

ರಸ್ತೆಗಳಲ್ಲಿ ನಿತ್ಯವೂ ಅಪಘಾತ ನಡೆಯದ ರಾಷ್ಟ್ರಗಳೇ ಇಲ್ಲ. ಭಾರತದಲ್ಲಿ

ಅಧಿಕೃತ ವರದಿಯ ಪ್ರಕಾರ, 2009ನೇ ಸಾಲಿನಲ್ಲಿ ಒಟ್ಟು 3,60,000 ಮಂದಿ ಅಪಘಾತಗಳಲ್ಲಿ ಮೃತಪಟ್ಟಿದ್ದಾರೆ. ಈ ಪೈಕಿ ಪುರುಷರ ಪ್ರಮಾಣ ಶೇ. 77 ಇದ್ದರೆ ಮಹಿಳೆಯರ ಪ್ರಮಾಣ ಶೇ. 23 ಮಾತ್ರ.

ಸಮಾಜದಲ್ಲಿ ಪುರುಷರ ಸಂಖ್ಯೆ ಕಡಿಮೆಯಾಗಲು ಇರುವ ಇನ್ನೊಂದು ಕಾರಣ ಬಂದೀಖಾನೆಗಳು. ಅಮೇರಿಕದ ಬ್ಯೂರೋ ಆಫ್ ಜಸ್ಟೀಸ್ ಸ್ಟಾಟಿಸ್ಟಿಕ್ಸ್ ಅನುಸಾರ, ಜೈಲುಗಳಲ್ಲಿರುವ ಕೈದಿಗಳ ಸಂಖ್ಯೆ 1,613,740. ಈ ಪೈಕಿ 1484641 ಮಂದಿ ಅಥವಾ ಶೇ. 92 ಪುರುಷರು. ಮಹಿಳೆಯರ ಸಂಖ್ಯೆ ಶೇ.8 ಅಥವಾ 129099. (ಮೂಲ: ಬ್ಯೂರೋ ಆಫ್ ಜಸ್ಟೀಸ್ ಸ್ಟಾಟಿಸ್ಟಿಕ್ಸ್, ಯುಎಸ್ ಡಿಪಾರ್ಟ್‌ಮೆಂಟ್ ಆಫ್ ಜಸ್ಟೀಸ್, ಪ್ರಿಸನರ್ಸ್ 2009. ಲೇಖಕ: ಹೀತರ್ ಸಿ. ವೆಸ್ಟ್ ಮತ್ತು ಇತರರು).

ಈ ಪೈಕಿ ಕೆಲವರು ಸುದೀರ್ಘ ಜೈಲು ಶಿಕ್ಷೆಗೆ ಇಲ್ಲವೇ ಮರಣದಂಡನೆಗೆ ಗುರಿಯಾಗುತ್ತಾರೆ. ಆರೋಗ್ಯಕರ ಸಮಾಜಕ್ಕಾಗಿ ಸೂಕ್ತವಾದ, ಮಾನವೀಯ ನೆಲೆಯ ಪರಿಹಾರಗಳು ಅಗತ್ಯವಿದೆ. ಮಹಿಳೆಯರ ಹಕ್ಕುಗಳನ್ನು ಖಾತ್ರಿಪಡಿಸುವುದೇ ಇದಕ್ಕಿರುವ ಪರಿಹಾರ. ಇಂತಹ ವಿಚಿತ್ರ ಸನ್ನಿವೇಶಗಳಲ್ಲಿ ಇಸ್ಲಾಮ್ ವಿವಾಹ ವಿಚ್ಛೇದನದ ಅವಕಾಶವನ್ನು ಕಲ್ಪಿಸುತ್ತದೆ. ಕೆಲವು ಪ್ರಕರಣಗಳಲ್ಲಿ ಮೂರು ವರ್ಷಕ್ಕೂ ಹೆಚ್ಚು ಜೈಲು ಶಿಕ್ಷೆಗೆ ಗುರಿಯಾದರೆ ಮದುವೆಯು ತನ್ನಿಂತಾನೆ ವಜಾಗೊಳ್ಳುತ್ತದೆ. ಇಂಥ ಸಂದರ್ಭದಲ್ಲಿ ತೊಂದರೆಗೆ ತುತ್ತಾಗುವ ಮಹಿಳೆಯರಿಗೆ ಕಾನೂನುಬದ್ಧವಾಗಿ ಹೊಸ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಇಸ್ಲಾಮ್ ನೀಡುತ್ತದೆ. ಹೀಗೆ ಬಹುಪತ್ನಿತ್ವವು ಇಂಥ ಮಹಿಳೆಯರಿಗೆ ಪ್ರಯೋಜನಕಾರಿಯಾಗಿದ್ದು ಸಮಸ್ಯೆಗೆ ಪರಿಹಾರವನ್ನೂ ಒದಗಿಸುತ್ತದೆ.

ಯಾವುದೇ ಸಮಾಜದಲ್ಲಿ ಇಂತಹ ಪರಿಸ್ಥಿತಿ ತಲೆದೋರಿದರೆ ಮತ್ತು ಆ ಸಮಾಜದಲ್ಲಿ ಬಹುಪತ್ನಿತ್ವಕ್ಕೆ ನಿರ್ಬಂಧವಿದ್ದರೆ ಅಲ್ಲಿನ ವಿಧವೆಯರು ಮತ್ತು ವಿಚ್ಛೇದಿತೆಯರು ಏನು ಮಾಡಬೇಕು? ಸಹಜವಾದ ಮತ್ತು ನ್ಯಾಯಬದ್ಧವಾದ ಸಂಗಾತಿಗಳನ್ನು ಅವರು ಎಲ್ಲಿಂದ ಪಡೆಯಬೇಕು. ಅವರಿಗೆ ರಕ್ಷಣೆ, ಬೆಂಬಲ, ಮತ್ತು ಸಾಂತ್ವನ ಎಲ್ಲಿಂದ ಸಿಗಬೇಕು. ಈ ಸಮಸ್ಯೆಯು ಕೇವಲ ದೈಹಿಕ ಪರಿಣಾಮಗಳನ್ನು ಬೀರುವುದು ಮಾತ್ರವಲ್ಲ, ನೈತಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಪ್ರಾಕೃತಿಕವಾದ ಪರಿಣಾಮಗಳನ್ನೂ ಬೀರುತ್ತದೆ. ಪ್ರತಿಯೊಬ್ಬ ಮಹಿಳೆಯೂ, ಆಕೆ ಉದ್ಯಮಿಯಾಗಿರಬಹುದು, ವಿದೇಶಾಂಗ ಸೇವೆಯಲ್ಲಿ ನೌಕರಿ ಮಾಡುತ್ತಿರಬಹುದು ಅಥವಾ ಗೂಢಚರ ವಿಭಾಗದಲ್ಲಿ ಕೆಲಸ ಮಾಡುತ್ತಿರಬಹುದು, ಕೌಟುಂಬಿಕ ಬದುಕಿಗಾಗಿ ಹಾತೊರೆಯುತ್ತಿರುತ್ತಾಳೆ. ಆಕೆಗೆ ತನ್ನ ಆರೈಕೆ ಮಾಡುವ ಒಬ್ಬರ ಅತ್ಯವಿರುತ್ತದೆ. ಇದನ್ನು

ನಾವು ಕೇವಲ ದೈಹಿಕ ನೆಲೆಯಲ್ಲಿ ನೋಡಿದರೂ, ಇದರಿಂದ ಸೃಷ್ಟಿಯಾಗುವ ಪರಿಣಾಮಗಳು ಅತ್ಯಂತ ಗಂಭೀರವಾಗಿರುತ್ತವೆ. ಇವುಗಳನ್ನು ನಿರ್ಲಕ್ಷಿಸಿದರೆ ಮಹಿಳೆ ಮಾನಸಿಕ ಸಂಕೀರ್ಣತೆ, ಆಘಾತ, ಸಾಮಾಜಿಕ ಜಿಗುಪ್ಸೆ ಹಾಗೂ ಮಾನಸಿಕ ಅಸ್ಥಿರತೆಗೆ ಸಿಲುಕುತ್ತಾಳೆ.

ಈ ನೈಸರ್ಗಿಕ ಮತ್ತು ಭಾವನಾತ್ಮಕ ಬಯಕೆಗಳಿಗೆ ಪರಿಹಾರ ಕಂಡುಕೊಳ್ಳಲೇಬೇಕು. ತನ್ನನ್ನು ಯಾರಾದರೂ ನೋಡಿಕೊಳ್ಳಬೇಕು, ತನಗೆ ಒಂದು ನೆಲೆ ಇರಬೇಕು ಎಂಬ ನಿರೀಕ್ಷೆಗಳನ್ನು ಈಡೇರಿಸಿಕೊಳ್ಳಲೇಬೇಕು. ಇಂಥ ಸಂದರ್ಭದಲ್ಲಿ ಮಹಿಳೆಯರು ಸಹಜ ಬದುಕು ಸಾಗಿಸುವುದು ಅಥವಾ ಅತಿಮಾನುಷ ಜೀವನ ಸಾಗಿಸುವುದು ಸಾಧ್ಯವಿಲ್ಲ. ತಮಗೂ ಎಲ್ಲರಂತೆ ಜೀವನವನ್ನು ಆನಂದಿಸಲು ಹಕ್ಕು ಇದೆ ಎಂದು ಅವರು ಭಾವಿಸುತ್ತಾರೆ. ಒಂದು ವೇಳೆ ಅದನ್ನು ಕಾನೂನುಬದ್ಧವಾಗಿ ಮತ್ತು ಗೌರವಯುತ ಮಾರ್ಗದಲ್ಲಿ ಪಡೆಯಲು ಸಾಧ್ಯವಾಗದಿದ್ದರೆ, ಅವರು ಇತರ ಮಾರ್ಗಗಳನ್ನು ಹುಡುಕಿಕೊಳ್ಳುತ್ತಾರೆ. ಈ ಮಾರ್ಗ ಹಲವೊಮ್ಮೆ ಕ್ಷಣಿಕವೂ ಅಪಾಯಕಾರಿಯೂ ಆಗಿರುತ್ತದೆ. ಕೇವಲ ಕೆಲವೇ ಮಹಿಳೆಯರು ಶಾಶ್ವತ ಮತ್ತು ಖಚಿತ ಪುರುಷ ಸಾಂಗತ್ಯವಿಲ್ಲದೇ ಬದುಕಬಲ್ಲರು. ಇಂತಹ ಪರಿಸ್ಥಿತಿಯಲ್ಲಿ ಯಾವುದೇ ಮಹಿಳೆ ಮಾನಸಿಕ ಆಘಾತಕ್ಕೆ ಒಳಗಾಗಬಹುದು ಇಲ್ಲವೇ ಬಂಡಾಯ ಏಳಬಹುದು. ಕೆಲವು ಸಂದರ್ಭಗಳಲ್ಲಿ ನೈತಿಕತೆಯನ್ನು ಗಾಳಿಗೆ ತೂರಬಹುದು.

ಪ್ರಾಚೀನ ಸಮಾಜದಲ್ಲಿ ಪತಿ ಮೃತಪಟ್ಟ ನಂತರ ಹೆಣ್ಣನ್ನು ಆಕೆಯ ಸಹೋದರನಿಗೆ ವಾರೀಸು ಹಕ್ಕಿನ ರೂಪದಲ್ಲಿ ನೀಡಲಾಗುತ್ತಿತ್ತು. ಮಲಮಕ್ಕಳು ಆಕೆಯ ಜತೆ ಕ್ರೂರವಾಗಿ ವರ್ತಿಸುತ್ತಿದ್ದರು. ಭಾರತೀಯ ಸಮಾಜದಲ್ಲಿ, ಪತಿಯ ಚಿತೆಯ ಜೊತೆಗೆ ಪತ್ನಿಯೂ ಹಾರಿ ಆತ್ಮಾಹುತಿ ಮಾಡುವ ಸಂಪ್ರದಾಯವಿತ್ತು. ಆಕೆ ಬದುಕಲು ಬಯಸಿದರೂ ಲೌಕಿಕ ಆಕರ್ಷಣೆಯಿಂದ ದೂರ ಉಳಿಯಬೇಕಿತ್ತು ಮತ್ತು ಕೊರಗಿ ಕೊರಗಿ ಜೀವನವನ್ನು ಕಳೆಯಬೇಕಾಗಿತ್ತು.

ಆದರೆ, ಇಸ್ಲಾಮ್ ವಿಚ್ಛೇದಿತೆಯರು ಮತ್ತು ವಿಧವೆಯರ ಶೋಕದ ಅವಧಿಯನ್ನು ನಾಲ್ಕು ತಿಂಗಳು ಮತ್ತು ಹತ್ತು ದಿನಗಳಿಗೆ ಸೀಮಿತಗೊಳಿಸಿತು. ಇದನ್ನು ಇದ್ದತ್ ಅಥವಾ ಕಾಯುವ ಅವಧಿ ಎಂದು ಕರೆಯಲಾಗುತ್ತದೆ. ಈ ಅವಧಿಯ ನಂತರ ಆಕೆಗೆ ತನ್ನನ್ನು ಸಿಂಗರಿಸಿಕೊಳ್ಳುವ ಅನುಮತಿಯನ್ನು ನೀಡಲಾಗಿದೆ. ಆಕೆ ಮರುವಿವಾಹಕ್ಕೂ ಮುಂದಾಗಬಹುದು. ಕುರ್‌ಆನ್ ಇದಕ್ಕೆ ಅವಕಾಶ ನೀಡುತ್ತದೆ. "ನೀವು ನಿಮ್ಮಲ್ಲಿನ ವಿಧುರ ಮತ್ತು ವಿಧವೆಯರಿಗೆ, ನಿಮ್ಮ ಸಜ್ಜನ ದಾಸರಿಗೆ ಮತ್ತು ನಿಮ್ಮ ದಾಸಿಯರಿಗೆ ವಿವಾಹ ಮಾಡಿಸಿರಿ.' (ಕುರ್‌ಆನ್ 24:32)

## ಅಪಾರ್ಥಕ್ಕೊಳಗಾದ ಕುರ್‌ಆನ್ ಸೂಕ್ತಗಳು

ಇಸ್ಲಾಮಿಗೆ ತನ್ನದೇ ಆದ ವಿಮರ್ಶಕರು ಮತ್ತು ಶತ್ರುಗಳಿದ್ದಾರೆ. ಇಸ್ಲಾಮ್ ಮುಸ್ಲಿಮೇತರರ ವಿರುದ್ಧ ಹಿಂಸೆ ನಡೆಸುವಂತೆ ಪ್ರಚೋದಿಸುತ್ತಿದೆ ಎಂಬುದು ಇವರ ಪ್ರಮುಖ ಆರೋಪ. ಈ ಟೀಕಾಕಾರರ ಪೈಕಿ ಹೆಚ್ಚಿನವರು ಮಾನವ ಜನಾಂಗದ ಮೇಲೆ ಗುರುತರ ಅಪರಾಧಗಳನ್ನೆಸಗಿದ ವಲಯಗಳಿಂದ ಬಂದವರಾಗಿದ್ದಾರೆ. ಎರಡು ಮಹಾಯುದ್ಧಗಳು, ಬೊಸ್ನಿಯಾದ ನರಮೇಧ, ಸ್ಟಾಲಿನಿಸ್ಟ್ ಭಯೋತ್ಪಾದಕತೆ, ಜಪಾನ್ ಮೇಲಿನ ಅಣುಶಕ್ತಿ ದಾಳಿ, ಇರಾಕ್ ಮೇಲಿನ ದಬ್ಬಾಳಿಕೆ, ಅಫ್ಘಾನಿಸ್ತಾನ, ಲಿಬಿಯಾ, ಲೆಬನಾನ್ ಮೇಲೆ ದಾಳಿ ನಡೆದ ನಂತರವೂ ಅವರ ಬಂದೂಕಿನ ಸದ್ದು ನಿಂತಿಲ್ಲ. ಇಸ್ಲಾಮನ್ನು ಕರಾಳವಾಗಿ ಚಿತ್ರಿಸಲು ಅವರ ಮಾಧ್ಯಮಗಳು, ಕುರ್‌ಆನ್ ಸೂಕ್ತಗಳು ಹಿಂಸೆಯನ್ನು ಬೋಧಿಸುತ್ತಿವೆ ಎಂದು ತಿರುಚಿ ಹೇಳುತ್ತಿವೆ. ಈಗಷ್ಟೇ ಅಭಿವೃದ್ಧಿ ಹೊಂದುತ್ತಿರುವ, ಆದರೆ ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ಮುಸ್ಲಿಮ್ ರಾಷ್ಟ್ರಗಳ ಮೇಲೆ ತಾನು ನಡೆಸುವ ದಾಳಿಯನ್ನು ಸಮರ್ಥಿಸಿಕೊಳ್ಳಲು ಇವೆಲ್ಲವನ್ನೂ ಮಾಡಲಾಗುತ್ತಿದೆ.

ಪವಿತ್ರ ಕುರ್‌ಆನ್ ಮುಸ್ಲಿಮರ ಮಟ್ಟಿಗೆ ಮಹತ್ವದ ಮಾರ್ಗದರ್ಶಕ ಗ್ರಂಥ. ಇದು ಒಂದೇ ಬಾರಿಗೆ ಅವತೀರ್ಣಗೊಂಡಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಮಕ್ಕಾ ಮತ್ತು ಮದೀನಾ ನಗರಗಳಲ್ಲಿ ಪ್ರವಾದಿ ಮುಹಮ್ಮದ್‌ರ ಬೆಂಬಲಿಗರಾಗಿ ನಿಂತಿದ್ದ ಸಣ್ಣ ಸಮಾಜವೊಂದರ ಬದಲಾವಣೆಗೆ ಮಾರ್ಗದರ್ಶಿಯಾಗಿ ಈ ಗ್ರಂಥ ಸುಮಾರು 23 ವರ್ಷಗಳ ಕಾಲ ಅವತೀರ್ಣಗೊಂಡಿತು. ಎರಡೂ ನಗರಗಳಲ್ಲಿನ ಶ್ರೋತೃಗಳು ಪರಸ್ಪರ ಭಿನ್ನವಾಗಿದ್ದರು. ಅಲ್ಲಿನ ಪರಿಸ್ಥಿತಿಗಳೂ ಭಿನ್ನವಾಗಿದ್ದವು. ತಮ್ಮ ಪ್ರವಾದಿತ್ವದ 23 ವರ್ಷಗಳ ಪೈಕಿ 13 ವರ್ಷಗಳನ್ನು ಪ್ರವಾದಿವರ್ಯರು ಮಕ್ಕಾದಲ್ಲಿ ಕಳೆದರು. ಪರಿಸ್ಥಿತಿ ಅತ್ಯಂತ ಪ್ರತಿಕೂಲಕರವಾಗಿತ್ತು. ಆರಂಭದಲ್ಲಿ ಇದ್ದ ವಿರೋಧವು ಕ್ರಮೇಣ ಶತ್ರುತ್ವಕ್ಕೆ ತಿರುಗಿತು. ಟೀಕೆ, ಕಿರುಕುಳ, ದೌರ್ಜನ್ಯ, ಮರ್ದನ ಮತ್ತು ಹತ್ಯೆ ಯತ್ನ – ಹೀಗೆ ವಿವಿಧ ಹಂತಗಳ ಮೂಲಕ ಅದು ಮುಂದುವರಿಯಿತು. ಶಾಂತಿಯನ್ನು ಅರಸುತ್ತಾ ಪ್ರವಾದಿ ಮುಹಮ್ಮದ್ ಮತ್ತು ಅವರ ಅನುಯಾಯಿಗಳು ನಂತರ ಮದೀನಾಕ್ಕೆ

ವಲಸೆ ಹೋದರು. ಇವರ ಪೈಕಿ ಅನೇಕರನ್ನು ಗಡೀಪಾರು ಮಾಡಲಾಗಿತ್ತು. ಕುಟುಂಬ ಮತ್ತು ಆಸ್ತಿಯನ್ನು ಬಿಟ್ಟು ಹೊರಹೋಗುವಂತೆ ಸೂಚಿಸಲಾಯಿತು. ಕೆಲವರು ರಾತೋರಾತ್ರಿ ಜೀವಭಯದಿಂದ ಓಡಿಹೋದರು. ಕೆಲವರು ತಾವು ವಲಸೆ ಹೋಗುವುದಾಗಿ ಹೇಳುವ ಧೈರ್ಯ ತೋರಿದರು. ಮದೀನಾದಲ್ಲಿ ಅವರಿಗೆ ದೊಡ್ಡ ಸಂಖ್ಯೆಯ ಬೆಂಬಲಿಗರ ಗುಂಪು ಇತ್ತು. ಅತ್ಯಂತ ವಿಧೇಯರಾಗಿದ್ದ ಇವರು ದೇವರು ಮತ್ತು ಪ್ರವಾದಿಯ ಆದೇಶಗಳಿಗೆ ಅನುಗುಣವಾಗಿ ತಮ್ಮ ಬದುಕನ್ನು ಬದಲಾಯಿಸಲು ಸಿದ್ಧರಿದ್ದರು.

ಆದರೆ, ವಲಸೆಯ ಎರಡನೇ ವರ್ಷವೇ ಇಸ್ಲಾಮಿನ ವೈರಿಗಳಾಗಿದ್ದ ಮಕ್ಕಾದ ಕುರೈಷರು ಮದೀನಾದ ಮೇಲೆ ದಾಳಿ ಮಾಡಿದರು. ಬದ್ರ್‌ನಲ್ಲಿ ನಡೆದ ಯುದ್ಧದಲ್ಲಿ ಮುಸ್ಲಿಮರು ಸತ್ಯನಿಷೇಧಿಗಳಾಗಿದ್ದ ಕುರೈಷರನ್ನು ಸಂಪೂರ್ಣ ಸೋಲಿಸಿದರು. ಮೂರನೇ ವರ್ಷವೂ ಮಕ್ಕಾದವರು ಮದೀನಾದ ಮೇಲೆ ದಾಳಿ ನಡೆಸಿದರು. ಮುಸ್ಲಿಮರಿಗೆ ಯುದ್ಧದಲ್ಲಿ ಹೆಚ್ಚಿನ ನಾಶನಷ್ಟವಾದರೂ ಸಂಪೂರ್ಣ ನಾಮಾವಶೇಷವಾಗುವುದು ತಪ್ಪಿತು. ವಲಸೆಯ ಐದನೇ ವರ್ಷ ಮಕ್ಕಾದವರು 10,000 ಮಂದಿಯ ದೊಡ್ಡ ಸೇನೆಯೊಂದಿಗೆ ಆಗಮಿಸಿದರು. ತಮ್ಮ ಸಂಖ್ಯೆ ಕಡಿಮೆಯಿದೆ ಎಂದು ಮನಗಂಡ ಪ್ರವಾದಿ ಮತ್ತು ಅವರ ಬೆಂಬಲಿಗರು ಮದೀನಾದ ಸುತ್ತ ಕಂದಕ ತೋಡಿ ನೇರ ಸಂಘರ್ಷ ತಪ್ಪಿಸಿಕೊಂಡರು.  ಯುದ್ಧದಿಂದ ಬಸವಳಿದ ಮಕ್ಕಾದವರು ಅನಂತರ ಹಿಂದಿರುಗಲಿಲ್ಲ. ಏಳನೇ ವರ್ಷ ಎರಡೂ ಗುಂಪುಗಳು ಒಪ್ಪಂದಕ್ಕೆ ಬಂದವು. ಆದರೆ ಆರು ತಿಂಗಳ ಅವಧಿಯಲ್ಲಿ ಮಕ್ಕಾದವರು ಅದನ್ನು ಉಲ್ಲಂಘಿಸಿದರು. ಇದಕ್ಕೆ ಪ್ರತೀಕಾರವಾಗಿ ಎಂಟನೇ ವರ್ಷದಲ್ಲಿ ಪ್ರವಾದಿ ಮುಹಮ್ಮದ್ ಸ್ವತಃ 10,000 ಯೋಧರ ನೇತೃತ್ವ ವಹಿಸಿ ಮಕ್ಕಾ ಪ್ರವೇಶಿಸಿದರು ಮತ್ತು ಯಾವುದೇ ಯುದ್ಧ, ರಕ್ತಪಾತ ಇಲ್ಲದೇ ಮಕ್ಕಾದ ಮೇಲೆ ಅಧಿಪತ್ಯ ಸಾಧಿಸಿದರು. ಇಸ್ಲಾಮ್ ಮತ್ತು ಪ್ರವಾದಿಯ ಬದ್ಧ ವೈರಿಗಳಿಗೂ ಕ್ಷಮೆ ಘೋಷಿಸಲಾಯಿತು. ಈ ಎಲ್ಲ ಹಂತಗಳಲ್ಲೂ ಪ್ರವಾದಿವರ್ಯರಿಗೆ ಕುರ್‌ಆನ್ ಸತತವಾಗಿ ಮಾರ್ಗದರ್ಶನ ಮಾಡುತ್ತಿತ್ತು.

ಇತಿಹಾಸದ ಈ ಅಧ್ಯಾಯದಿಂದ ನಮಗೆ ಸ್ಪಷ್ಟವಾಗುವುದೆಂದರೆ ಪ್ರವಾದಿವರ್ಯರು ಸ್ವತಃ ತಾನಾಗಿಯೇ ಯಾವುದೇ ಯುದ್ಧವನ್ನು ಆರಂಭಿಸಲಿಲ್ಲ; ಯುದ್ಧವನ್ನು ಅವರ ಮೇಲೆ ಹೇರಲಾಯಿತು. ಆದರೆ ತಮ್ಮ ಮೇಲೆ ದಾಳಿ ನಡೆದಾಗ ಅವರು ಅದನ್ನು ಪೂರ್ಣ ಶಕ್ತಿಯೊಂದಿಗೆ ಹೆಮ್ಮೆಟ್ಟಿಸಿದರು.  ಒಪ್ಪಂದವನ್ನು ಮುರಿದಾಗ ವಚನಭ್ರಷ್ಟರ ವಿರುದ್ಧ ಯುದ್ಧ ಹೂಡುವ ತಮ್ಮ ಸಂಕಲ್ಪವನ್ನು ಬಹಿರಂಗಪಡಿಸಿದರು. ಆದರೆ ಶಸ್ತ್ರ ಎತ್ತಿಕೊಳ್ಳದ ಎಲ್ಲರಿಗೂ ಅವರು ಕ್ಷಮೆ ನೀಡಿದರು.

ಇದೊಂದು ಐತಿಹಾಸಿಕ ಸತ್ಯವಾಗಿದ್ದು ಪ್ರವಾದಿ ಮುಹಮ್ಮದ್‌ರಿಗೆ ಹೀಗೆಯೇ ಮಾಡಬೇಕೆಂಬ ದೈವಿಕ ನಿರ್ದೇಶನವಿತ್ತು. ನಾವು ಈ ಸಂದರ್ಭದಲ್ಲಿ ಅವತೀರ್ಣಗೊಂಡ ಕುರ್‌ಆನ್‌ನ ಸೂಕ್ತಗಳನ್ನು ಅರ್ಥಮಾಡಿಕೊಳ್ಳುವಾಗ ಅಂದಿನ ಪರಿಸ್ಥಿತಿಯನ್ನೂ ಗಣನೆಗೆ ತೆಗೆದುಕೊಳ್ಳುವುದು ಮುಖ್ಯವಾಗುತ್ತದೆ. ಆದರೆ ಕುರ್‌ಆನ್‌ನ ಟೀಕಾಕಾರರು ಇದನ್ನು ಉದ್ದೇಶಪೂರ್ವಕವಾಗಿ ಮರೆಮಾಚಿದ್ದು, ಇಸ್ಲಾಮಿನ ಬಗ್ಗೆ ತಮಗಿರುವ ಪೂರ್ವಗ್ರಹಗಳಿಗೆ ಪೂರಕವಾಗಿ ಅವರು ಈ ಸೂಕ್ತಗಳನ್ನು ಅವುಗಳ ಹಿನ್ನೆಲೆಯಿಂದ ಪ್ರತ್ಯೇಕಿಸಿ ಪ್ರಸ್ತುತಪಡಿಸುತ್ತಾರೆ.

ಕುರ್‌ಆನ್‌ನ ಕೆಲವು ಸೂಕ್ತಗಳ ಬಗ್ಗೆ ಗೊಂದಲ ಮೂಡಿಸುವ ಯತ್ನ ಭಾರತ ಮತ್ತು ವಿಶ್ವದ ಇತರ ಭಾಗಗಳಲ್ಲಿ ಆಗಿಂದಾಗ್ಗೆ ನಡೆಯುತ್ತಿದೆ. ಲೇಖಕರು ದುರುದ್ದೇಶದಿಂದ ಕುರ್‌ಆನ್‌ನ ಸೂಕ್ತಗಳನ್ನು ತಪ್ಪಾಗಿ ಉದ್ಧರಿಸಿ, ಕಪೋಲಕಲ್ಪಿತ ವ್ಯಾಖ್ಯಾನಗಳನ್ನು ನೀಡುತ್ತಾರೆ. ಆದರೆ ಕುರ್‌ಆನ್‌ನ್ನು ಅದರ ಅವತೀರ್ಣದ ಹಿನ್ನೆಲೆಯಿಂದ ಪ್ರತ್ಯೇಕಿಸಿ ಓದಲು ಸಾಧ್ಯವಿಲ್ಲ. ಯಾರಾದರೊಬ್ಬರು ಕುರ್‌ಆನ್‌ನ ಒಂದು ಸೂಕ್ತವನ್ನು ಹೆಕ್ಕಿ ಅದರ ಹಿನ್ನೆಲೆಯನ್ನು ಕಡೆಗಣಿಸಿದರೆ ಆತ ದಾರಿ ತಪ್ಪುವ ಸಾಧ್ಯತೆಯಿದೆ. ಕುರ್‌ಆನ್ ಓದುವ ಮುನ್ನ ಇರಬೇಕಾದ ಏಕೈಕ ಷರತ್ತು ಎಂದರೆ ಓದುಗನಿಗೆ ಅದರ ಮೇಲೆ ಪ್ರಾಮಾಣಿಕವಾದ ನಂಬಿಕೆ ಇರಬೇಕು.. ಕೆಟ್ಟ ಉದ್ದೇಶದಿಂದ ಅದನ್ನು ಓದಿದರೆ ಆತನಿಗೆ ಮಾರ್ಗದರ್ಶನ ಲಭಿಸಲಾರದು.

ಪ್ರವಾದಿ ಮುಹಮ್ಮದ್ ಅವರ ಜೀವನ, ಪವಿತ್ರ ಕುರ್‌ಆನ್ ಮತ್ತು ಐತಿಹಾಸಿಕ ದೃಷ್ಟಿಕೋನಗಳ ಬಗ್ಗೆ ಜ್ಞಾನ ಹೊಂದಿರುವ ವ್ಯಕ್ತಿಗಳು ಕುರ್‌ಆನ್ ಸೂಕ್ತಗಳಿಗೆ ನೀಡಿದ ಅಧಿಕೃತ ವಿವರಣೆ ಮತ್ತು ವ್ಯಾಖ್ಯಾನಗಳಷ್ಟೆ ಅಂಗೀಕಾರಾರ್ಹವಾದುದು.

ಜನರನ್ನು ಹಾದಿ ತಪ್ಪಿಸಲು ಮತ್ತು ಅವರ ಮನದಲ್ಲಿ ಗೊಂದಲ ಮೂಡಿಸುವ ಉದ್ದೇಶದಿಂದ ಕೆಲವು ಬರಹಗಾರರು ದುರುಪಯೋಗಪಡಿಸುವಂತಹ ಕೆಲವು ಕುರ್‌ಆನ್ ಸೂಕ್ತಗಳನ್ನು ಈ ಕೆಳಗೆ ನೀಡಲಾಗಿದೆ:

> **2:190: ನಿಮ್ಮ ವಿರುದ್ಧ ಯುದ್ಧ ಮಾಡುವವರ ವಿರುದ್ಧ ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಿರಿ. ಆದರೆ ಅತಿರೇಕವೆಸಗಬೇಡಿ. ಖಂಡಿತವಾಗಿಯೂ ಅಲ್ಲಾಹನು, ಅತಿರೇಕವೆಸಗುವವರನ್ನು ಮೆಚ್ಚುವುದಿಲ್ಲ.**
>
> **2:191: ಮತ್ತು ಅಂಥವರನ್ನು (ಅತಿರೇಕವೆಸಗಿದವರನ್ನು) ನೀವು ಕಂಡಲ್ಲಿ ವಧಿಸಿರಿ ಮತ್ತು ಅವರು ಎಲ್ಲಿಂದ ನಿಮ್ಮನ್ನು ಹೊರದಬ್ಬಿರುವರೋ ಅಲ್ಲಿಂದ ನೀವು ಅವರನ್ನು ಹೊರದಬ್ಬಿರಿ. ಅಶಾಂತಿಯು ಕೊಲೆಗಿಂತ ಕೆಟ್ಟದಾಗಿದೆ. ಇನ್ನು,**

**ಮಸ್ಜಿದುಲ್ ಹರಾಮ್‌ನ ಬಳಿ – ಅವರು ನಿಮ್ಮ ವಿರುದ್ಧ ಯುದ್ಧ ಮಾಡುವ ತನಕ ನೀವು ಅವರ ವಿರುದ್ಧ ಯುದ್ಧ ಮಾಡಬೇಡಿ. ಅಲ್ಲಿ ಅವರು ನಿಮ್ಮ ವಿರುದ್ಧ ಯುದ್ಧ ಮಾಡಿದರೆ, ನೀವು ಅವರನ್ನು ವಧಿಸಿರಿ. ಇದುವೇ ಸತ್ಯವನ್ನು ಧಿಕ್ಕರಿಸಿದವರಿಗಿರುವ ಪ್ರತಿಫಲ.**

**2:192: ಒಂದು ವೇಳೆ ಅವರು ತಡೆದು ನಿಂತರೆ, ಖಂಡಿತವಾಗಿಯೂ ಅಲ್ಲಾಹನು ಕ್ಷಮಿಸುವವನು ಮತ್ತು ಕರುಣೆ ತೋರುವವನಾಗಿದ್ದಾನೆ.**

**2:193: ಯಾವುದೇ ಅಶಾಂತಿ ಇಲ್ಲವಾಗಿ ಬಿಡುವ ತನಕ ಹಾಗೂ ಧರ್ಮವು ಸಂಪೂರ್ಣವಾಗಿ ಅಲ್ಲಾಹನಿಗೆ ಮೀಸಲಾಗಿ ಬಿಡುವ ತನಕ ನೀವು ಅವರ ವಿರುದ್ಧ ಯುದ್ಧ ಮಾಡಿರಿ. ಇನ್ನು, ಅವರು ತಡೆದು ನಿಂತರೆ, ಅಕ್ರಮ ಎಸಗಿದವರ ಹೊರತು ಇನ್ನಾರ ಮೇಲೂ ಆಕ್ರಮಣಕ್ಕೆ ಅವಕಾಶ ಇಲ್ಲ.**

**2:194: ಪವಿತ್ರ ತಿಂಗಳುಗಳಿಗೆ ಪವಿತ್ರ ತಿಂಗಳುಗಳೇ ಪರಿಹಾರ. ಹಾಗೆಯೇ, ಎಲ್ಲ ಪಾವಿತ್ರ್ಯಗಳು 'ಕಿಸಾಸ್'ನ (ಪ್ರತೀಕಾರದ) ನಿಯಮಗಳಿಗೆ ಅಧೀನವಾಗಿವೆ. ನಿಮ್ಮ ಮೇಲೆ ಅತಿಕ್ರಮ ಎಸಗಿದವರ ಮೇಲೆ ನೀವು, (ಹೆಚ್ಚೆಂದರೆ) ಅವರು ನಿಮ್ಮ ಮೇಲೆ ಎಸಗಿದಷ್ಟೇ ಪ್ರತಿಕ್ರಮವನ್ನೆಸಗಿರಿ ಮತ್ತು ಅಲ್ಲಾಹನಿಗೆ ಅಂಜಿರಿ. ಅಲ್ಲಾಹನು ಧರ್ಮನಿಷ್ಠರ ಜತೆಗಿದ್ದಾನೆ ಎಂಬುದು ನಿಮಗೆ ತಿಳಿದಿರಲಿ.**

ಈ ಮೇಲೆ ಉಲ್ಲೇಖಿಸಿದ ಕುರ್‌ಆನ್‌ನ ಸೂಕ್ತಗಳು ಹೆಚ್ಚು ಕಡಿಮೆ ನಾವು ಬದುಕುತ್ತಿರುವ ಆಧುನಿಕ ಯುಗದ ಅನಿವಾರ್ಯತೆ ಮತ್ತು ದ್ವಂದ್ವಗಳನ್ನು ಪ್ರತಿಬಿಂಬಿಸುತ್ತವೆ. ಈ ಸೂಕ್ತಗಳನ್ನು ದುರ್ವ್ಯಾಖ್ಯಾನಿಸಿ, ಇಸ್ಲಾಮಿನ ಟೀಕಾಕಾರರು ಮತ್ತು ಪೂರ್ವಗ್ರಹಪೀಡಿತ ಜನರು ಇಸ್ಲಾಮ್ ಸ್ವಭಾವತಃ ಹಿಂಸಾವಾದಿ ಧರ್ಮ ಎಂದು ವಾದಿಸುತ್ತಾರೆ.

ಮುಸ್ಲಿಮರು ಮತ್ತು ಮುಸ್ಲಿಮೇತರ ಸಮುದಾಯಗಳ ನಡುವಣ ಸಂಬಂಧಗಳು ಯಾವ ರೀತಿ ಇರಬೇಕೆಂಬುದಕ್ಕೆ ಈ ಸೂಕ್ತಗಳು ಮಾರ್ಗದರ್ಶಿ ಸೂತ್ರಗಳಾಗಿವೆ. ಆದ್ದರಿಂದ ಇವುಗಳನ್ನು ಅತ್ಯಂತ ಎಚ್ಚರಿಕೆಯಿಂದ ವಿಶ್ಲೇಷಿಸಬೇಕಾದುದು ಮತ್ತು ಈ ಬಗ್ಗೆ ಎಲ್ಲರೂ ಸರಿಯಾದ ತಿಳಿವಳಿಕೆ ಹೊಂದಿರಬೇಕಾದುದು ಅಗತ್ಯ. ಮುಸ್ಲಿಮರು ತಮ್ಮ ಬಗ್ಗೆ ಇರುವ ನಿರೀಕ್ಷೆಗಳೇನು ಮತ್ತು ಮುಸ್ಲಿಮೇತರ ಸಮುದಾಯಗಳು ಯಾವ ಯಾವ ನೆಲೆಯಲ್ಲಿ ಮುಸ್ಲಿಮರನ್ನು ಉತ್ತರದಾಯಿಯನ್ನಾಗಿಸಬಹುದು ಎಂಬುದನ್ನು ತಿಳಿದುಕೊಳ್ಳಲು ಈ ಸೂಕ್ತಗಳು ಅತ್ಯಂತ ನಿರ್ಣಾಯಕ.

ಈಗ ನಮ್ಮ ಮುಂದಿರುವ ಪ್ರಶ್ನೆ ತುಂಬಾ ಸರಳ. ಈ ಸೂಕ್ತಗಳ ಆರಂಭದಲ್ಲೇ ಇರುವ ಘೋಷಣೆಯ "ಅತಿರೇಕವೆಸಗಬೇಡಿ. ಖಂಡಿತವಾಗಿಯೂ ಅಲ್ಲಾಹನು, ಅತಿರೇಕವೆಸಗುವವರನ್ನು ಮೆಚ್ಚುವುದಿಲ್ಲ" ಹೊರತಾಗಿಯೂ ಈ ಸೂಕ್ತವು ಹಿಂಸಾಚಾರಕ್ಕೆ ನೀಡುವ ಮುಕ್ತ ಕರೆ ಎಂದು ವ್ಯಾಖ್ಯಾನಿಸುವುದು ಸಾಧ್ಯವೇ?

ಈ ಸೂಕ್ತವನ್ನು ಕುರ್‌ಆನ್ ಪ್ರತಿಪಾದಿಸುವ ಒಟ್ಟಾರೆ ನೈತಿಕ ಚೌಕಟ್ಟಿನಿಂದ ಹೊರಗಿಟ್ಟು ಮಾತ್ರ ಈ ರೀತಿ ದುರ್ವ್ಯಾಖ್ಯಾನಿಸಲು ಸಾಧ್ಯ.

ನಿಆ. ಈ ಸಾಲುಗಳನ್ನು ಓದುವಾಗ ಬರೇ ಒಂದು ಅಂಶವನ್ನು ಮಾತ್ರವಲ್ಲ, ಹಲವಾರು ಎಚ್ಚರಿಕೆ ವಿಚಾರಗಳನ್ನು ನೆನಪಿಟ್ಟುಕೊಳ್ಳಬೇಕು. ಯಾವುದೇ ಸೂಕ್ತವನ್ನು ಅದರ ಹಿನ್ನೆಲೆಯಿಂದ ಪ್ರತ್ಯೇಕಿಸಿ ಓದಬಾರದು. ಹಾಗೆಯೇ ಕುರ್‌ಆನ್‌ನ ಇತರ ಸೂಕ್ತಗಳ ಜತೆಗಿನ ಸಂಬಂಧಗಳ ಹಿನ್ನೆಲೆಯಲ್ಲಿ ಮತ್ತು ಒಟ್ಟು ಕುರ್‌ಆನ್‌ನ ಜತೆಗಿನ ಸಂಬಂಧಗಳ ಹಿನ್ನೆಲೆಯಲ್ಲಿ ಈ ಸೂಕ್ತಗಳನ್ನು ಓದಬೇಕು. ಎರಡನೆಯದಾಗಿ, ಕುರ್‌ಆನ್ 23 ಸುದೀರ್ಘ ಅವಧಿಯಲ್ಲಿ ಬಿಡಿಬಿಡಿಯಾಗಿ ಅವತೀರ್ಣಗೊಂಡಿದೆ ಎಂಬುದನ್ನು ನಾವು ಮರೆಯಬಾರದು. ಅದು ಒಂದು ಜೀವಂತ ಸಮುದಾಯದ ಜನಸಾಮಾನ್ಯರನ್ನು ಮಾತ್ರ ಸಂಬೋಧಿಸುತ್ತಿರುವುದಲ್ಲ, ಅಂತ್ಯ ದಿನದವರೆಗೆ ಬರುವ ಎಲ್ಲ ಮಾನವರನ್ನೂ ಅದು ಸಂಬೋಧಿಸುತ್ತದೆ. ಆದ್ದರಿಂದ ಕುರ್‌ಆನ್ ಅವತೀರ್ಣಗೊಂಡ ಸಂದರ್ಭದಲ್ಲಿ, ಅಂದರೆ 1,500 ವರ್ಷಗಳ ಹಿಂದೆ, ಮುಸ್ಲಿಮರು ಎದುರಿಸಿದ್ದ ಸಮಸ್ಯೆಗಳನ್ನು ತಿಳಿದುಕೊಳ್ಳುವುದಕ್ಕಿಂತಲೂ ಕುರ್‌ಆನ್ ಯಾವ ರೀತಿಯ ಮನೋಭಾವ ಮತ್ತು ಜೀವನದೃಷ್ಟಿಯನ್ನು ಪ್ರತಿಪಾದಿಸಲು ಪ್ರಯತ್ನಿಸುತ್ತಿದೆ ಎಂಬುದನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕು.

ಈ ಸೂಕ್ತಗಳು ಅವತೀರ್ಣಗೊಂಡ ಸಂದರ್ಭಗಳನ್ನು ಕೂಡಾ ನಾವು ಅಧ್ಯಯನ ಮಾಡುವ ಅಗತ್ಯವಿದೆ. ಕೇವಲ ಕೆಲವು ನೂರರಷ್ಟಿದ್ದ, ಹೊಸದಾಗಿ ಉದಯಿಸುತ್ತಿದ್ದ ಮುಸ್ಲಿಮ್ ಸಮುದಾಯ ದಿಗ್ಬಂಧನವನ್ನೂ ಸಾವು–ಬದುಕಿನ ಸನ್ನಿವೇಶವನ್ನೂ ಎದುರಿಸಬೇಕಾಗಿ ಬಂದಿತ್ತು. ಮುಸ್ಲಿಮರು ಮತ್ತು ಅರಬ್ ಗೋತ್ರಗಳ ಮಧ್ಯೆ, ಮುಖ್ಯವಾಗಿ ಕುರೈಷರೊಂದಿಗೆ, ಬಹಿರಂಗವಾದ ಹಗೆತನ ಕಾಣಿಸಿಕೊಂಡಿತ್ತು. ಮಕ್ಕಾದಲ್ಲಿ ಇಸ್ಲಾಮನ್ನು ಹತ್ತಿಕ್ಕಲು ವಿಫಲರಾದ ಕುರೈಷರು, ಮುಸ್ಲಿಮರು ಮದೀನಾದಲ್ಲಿ ಆಶ್ರಯ ಪಡೆದು ಅಲ್ಲೇ ಪ್ರಾಬಲ್ಯ ಗಳಿಸುತ್ತಾ ಹೋಗುತ್ತಿರುವುದನ್ನು ಕಂಡು ದಿಗ್ಭ್ರಾಂತರಾಗಿ ಖಡ್ಗ, ಶಸ್ತ್ರಾಸ್ತ್ರಗಳನ್ನು ಹಿಡಿದು ಮುಸ್ಲಿಮರನ್ನು ನಾಮಾವಶೇಷಗೊಳಿಸಲು ಮುಂದಾಗುತ್ತಾರೆ.

ಮುಸ್ಲಿಮರ ಅಳಿವು ಉಳಿವನ್ನು ನಿರ್ಧರಿಸುವ ನಿರ್ಣಾಯಕ ಯುದ್ಧಕ್ಕೆ ಕುರೈಷರು ಸಜ್ಜಾಗುತ್ತಾರೆ. ಇದು ನಂತರ ಬದ್ರ್ ಯುದ್ಧ ಎಂದು ಹೆಸರು ಪಡೆದ ಅತ್ಯಂತ ಮಹತ್ವದ ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತದೆ (ಕುರ್‌ಆನ್ 2:624). ಕುರೈಷರು ಈ ಮೂಲಕ ಮುಸ್ಲಿಮ್ ಸಮುದಾಯವನ್ನು ಸಂಪೂರ್ಣ ನಾಶಪಡಿಸಲು ಉದ್ದೇಶಿಸಿದ್ದರು ಎಂಬುದು ತದನಂತರ ಅವತೀರ್ಣಗೊಂಡ ಕುರ್‌ಆನ್ ಸೂಕ್ತಗಳಿಂದ ಸ್ಪಷ್ಟವಾಗುತ್ತದೆ.

> **"(ಧಿಕ್ಕಾರಿಗಳು) ತಮಗೆ ಸಾಧ್ಯವಾದರೆ, ನಿಮ್ಮನ್ನು ನಿಮ್ಮ ಧರ್ಮದಿಂದ ವಿಮುಖರಾಗಿಸಿಬಿಡುವ ತನಕವೂ ನಿಮ್ಮ ವಿರುದ್ಧ ಯುದ್ಧ ಹೂಡುತ್ತಲೇ ಇರುವರು." (ಕುರ್‌ಆನ್ 2:217).**

ಈ ಸೂಕ್ತದ ಮೂಲಕ ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಯಾವ ರೀತಿ ಅವರು ತಮ್ಮನ್ನು ಮರ್ದನ ಮತ್ತು ದೌರ್ಜನ್ಯದಿಂದ ರಕ್ಷಿಸಿಕೊಳ್ಳಬಹುದು ಮತ್ತು ತಮ್ಮ ಮೇಲೆ ಆಕ್ರಮಣ ನಡೆಸಲು ಬಂದವರ ಜತೆಗೆ ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಿಕೊಡುತ್ತಾನೆ.

ಇಲ್ಲಿ ನಾವು ಕೇಳಬೇಕಾದ ಪ್ರಶ್ನೆ ಇಷ್ಟೆ. ಮುಸ್ಲಿಮ್ ಸಮುದಾಯ ಆಕ್ರಮಣಕ್ಕೊಳಗಾಗುತ್ತಿರುವಾಗ, ದೇವರು ಅವರನ್ನುದ್ದೇಶಿಸಿ, "ನೀವು ನಿಮ್ಮ ವೈರಿಗಳನ್ನು ಅಪ್ಪಿಕೊಳ್ಳಿ. ನಿಮ್ಮನ್ನು ಮನೆ ಮಠಗಳಿಂದ ಹೊರಗೆ ಹಾಕಿ ಕೊಲ್ಲಲು ಮುಂದಾಗಿದ್ದಕ್ಕೆ ಪ್ರತಿಯಾಗಿ ಅವರನ್ನು ಚುಂಬಿಸಿ" ಎಂದು ಹೇಳಬೇಕಾಗಿತ್ತೇ? ಜಗತ್ತಿನ ಯಾವುದೇ ಕಾನೂನಾನಾಗಲಿ ಸಾಮಾನ್ಯ ಬುದ್ಧಿಯಾಗಲೀ ಇಂತಹ ವಾದವನ್ನು ಸಮರ್ಥಿಸಲಾರದು. ಆಧುನಿಕ ಕಾಲದಲ್ಲಂತೂ ಕೆಲವು ರಾಷ್ಟ್ರಗಳು ತಮ್ಮ ಮೇಲೆ ಆಕ್ರಮಣ ನಡೆಯುವ ಸಾಧ್ಯತೆಯಿದೆ ಎಂಬ ನೆಪದಲ್ಲೇ ಬೇರೆಯವರ ಮೇಲೆ ದಂಡೆತ್ತಿ ಹೋಗುವುದನ್ನು ನಾವು ನೋಡುತ್ತೇವೆ. ಇಲ್ಲಿ ರಾಷ್ಟ್ರಗಳು ಸಂಘರ್ಷ ಆರಂಭಗೊಳ್ಳಲು ಕಾಯದೆ ಪ್ರತಿಬಂಧಕ ಆಕ್ರಮಣ ನಡೆಸುತ್ತವೆ.

ಇಂತಹ ಪರಿಸ್ಥಿತಿಯಲ್ಲಿ ಮುಸ್ಲಿಮರಿಗಿದ್ದ ಆಯ್ಕೆಗಳಾದರೂ ಏನು? ಪ್ರತಿಕೂಲ ಪರಿಸ್ಥಿತಿಯಲ್ಲಿ ತಮ್ಮ ವಿಶ್ವಾಸದ ರಕ್ಷಣೆಗಾಗಿ ಯುದ್ಧ ಮಾಡುವಂತೆ ದೇವರು ಮುಸ್ಲಿಮ್ ಸಮುದಾಯಕ್ಕೆ ಅನುಮತಿ ನೀಡುತ್ತಾರೆ. ಈ ಆದೇಶ ಬರುವವರೆಗೂ ಮುಸ್ಲಿಮರು ಯುದ್ಧದಿಂದ ದೂರವುಳಿದಿದ್ದರೆಂಬುದನ್ನು ನಾವಿಲ್ಲಿ ಗಮನಿಸಬೇಕು. ಮಕ್ಕಾದ ಕುರೈಷರು ಮತ್ತು ಮದೀನಾದ ಮುಸ್ಲಿಮರ ನಡುವಿನ ವೈರತ್ವ ಮುಂದುವರಿದು, ಮುಸ್ಲಿಮರ ಅಸ್ತಿತ್ವವೇ ಗಂಡಾಂತರಕ್ಕೆ ಸಿಲುಕಿದ ಸಂದರ್ಭದಲ್ಲಿ ಈ ಕುರ್‌ಆನ್ ಸೂಕ್ತಗಳು ಅವತೀರ್ಣಗೊಂಡವು.

ಈ ಸೂಕ್ತಗಳಲ್ಲಿರುವ ಕೆಲವು ನಿರ್ದಿಷ್ಟ ಸೂಚನೆಗಳು ಅಂದು ಪ್ರಚಲಿತವಿದ್ದ ಚಾರಿತ್ರಿಕ ಸನ್ನಿವೇಶವನ್ನು ಬಹಿರಂಗಪಡಿಸುತ್ತವೆ. ಉದಾಹರಣೆಗೆ "ನೀವು ಅವರನ್ನು ವಧಿಸಿರಿ" ಎಂದು ಹೇಳುವಾಗ ಕುರ್‌ಆನ್ ಸತ್ಯವಿಶ್ವಾಸಿಗಳಿಗೆ ಸಾರಾಸಗಟಾಗಿ ಹತ್ಯೆ ಮಾಡುವ ಆದೇಶ ನೀಡುತ್ತಿಲ್ಲ. ಮುಸ್ಲಿಮರ ವಿರುದ್ಧ ಸಂಘರ್ಷದಲ್ಲಿ ತೊಡಗಿರುವ ಮಕ್ಕಾದ ಕುರೈಷರ ವಿರುದ್ಧ ಕ್ರಮ ಕೈಗೊಳ್ಳಿರಿ ಎಂಬುದಷ್ಟೆ ಈ ಆದೇಶದ ತಾತ್ಪರ್ಯ. ಈ ಮರ್ದಕರು ಅರ್ಥಾತ್ ಕುರೈಷರು, ಮುಸ್ಲಿಮರನ್ನು ಮಕ್ಕಾದ ಅವರ ಮನೆಗಳಿಂದ ಹೊರಗಟ್ಟಿದ್ದರು. ಆದ್ದರಿಂದ ಕುರ್‌ಆನ್, ಪ್ರವಾದಿಯ ಅನುಯಾಯಿಗಳಿಗೆ, "ಅವರು ಎಲ್ಲಿಂದ ನಿಮ್ಮನ್ನು ಹೊರದಬ್ಬಿರುವರೋ ಅಲ್ಲಿಂದ ನೀವು ಅವರನ್ನು ಹೊರದಬ್ಬಿರಿ" ಎಂದು ಹೇಳಿತು. ಅವರು ಮಕ್ಕಾದ ಪವಿತ್ರ ಮಸೀದಿಗೆ ದಿಗ್ಬಂಧನ ಹೇರಿದ್ದರು. ಆದರೆ ಮುಸ್ಲಿಮರು ಪವಿತ್ರ ಮಸೀದಿಯ ಆವರಣದೊಳಗೆ ಯುದ್ಧ ಮಾಡಬಾರದೆಂದು ಕುರ್‌ಆನ್ ನಿರ್ದೇಶನ ನೀಡಿತು. .

ಆದರೂ, ಈ ಸಂಕಷ್ಟದ ಪರಿಸ್ಥಿತಿಯಲ್ಲಿ, ಮುಸ್ಲಿಮರೊಡನೆ 'ನೀವು ಅತಿರೇಕ ಎಸಗಬಾರದು' ಎಂದು ಆದೇಶಿಸಲಾಯಿತು. ಅರ್ಥಾತ್, ಯುದ್ಧದ ಸಂದರ್ಭದಲ್ಲಿ ಕೂಡಾ ಮಹಿಳೆಯರು, ಮಕ್ಕಳು ಮತ್ತು ಸಾಮಾನ್ಯ ನಾಗರಿಕರನ್ನು ಕೊಲೆ ಮಾಡಬಾರದು, ಆಸ್ತಿ ನಾಶಪಡಿಸಬಾರದು, ಬೆಳೆ, ಜಾನುವಾರು ನಾಶಪಡಿಸಬಾರದು ಎಂದು ತಾಕೀತು ಮಾಡಲಾಯಿತು. ತಮ್ಮ ಮೇಲೆ ಆಗಿರುವುದಕ್ಕಿಂತಲೂ ಹೆಚ್ಚಿನ ಕಿರುಕುಳವನ್ನು ಶತ್ರುಗಳಿಗೆ ನೀಡಬಾರದು ಎಂಬ ಸೂಚನೆಯನ್ನೂ ನೀಡಲಾಯಿತು. ಅತಿರೇಕವೆಸಗುವುದು ಸ್ವವಿನಾಶಕ್ಕೆ ದಾರಿ ಎಂದು ಕುರ್‌ಆನ್ ಸ್ಪಷ್ಟಪಡಿಸಿದೆ:

**'ನಿಮ್ಮನ್ನು ಸ್ವತಃ ನಿಮ್ಮ ಕೈಯಾರೆ ವಿನಾಶಕ್ಕೆ ತಳ್ಳಬೇಡಿ' (2:195)**.

ಶತ್ರುಗಳು ಯುದ್ಧವಿರಾಮ ಘೋಷಿಸಿದರೆ, ಮುಸ್ಲಿಮರು ಶಸ್ತ್ರಾಸ್ತ್ರವನ್ನು ಕೆಳಗಿಡಬೇಕು. ದಾಳಿಗೆ ಪ್ರತಿಯಾಗಿ ಮಾತ್ರ ದಾಳಿ ನಡೆಸಬೇಕು. ಅಂದರೆ ಮುಸ್ಲಿಮರ ಯುದ್ಧದ ಉದ್ದೇಶ ವೈರಿಯನ್ನು ನಾಶಪಡಿಸುವುದಲ್ಲ; ಆತ್ಮರಕ್ಷಣೆ ಮಾತ್ರ.

ಮೇಲಿನ ಕುರ್‌ಆನ್ ಸೂಕ್ತಗಳಲ್ಲಿ ಕೆಲವು ಸಾರ್ವತ್ರಿಕವಾಗಿ ಅನ್ವಯವಾಗುವ ನೀತಿನಿಯಮಗಳೂ ಇವೆ. ಇಸ್ಲಾಮ್ ಮತ್ತು ಮುಸ್ಲಿಮರ ವಿರುದ್ಧ ಯುದ್ಧ ಹೂಡುವವರನ್ನು ಮಾತ್ರ ಶತ್ರುಗಳೆಂದು ಪರಿಗಣಿಸಲಾಗಿದ್ದು ಅವರ ವಿರುದ್ಧ ಆತ್ಮರಕ್ಷಣೆಗಾಗಿ ಯುದ್ಧ ಹೂಡುವ ಅನುಮತಿಯನ್ನು ಕುರ್‌ಆನ್ ನೀಡುತ್ತದೆ. (ಯಾರ ವಿರುದ್ಧ ಯುದ್ಧ ಹೂಡಲಾಗಿತ್ತೋ [ಅವರಿಗೆ (ಯುದ್ಧ ಹೂಡುವ) ಅನುಮತಿ ನೀಡಲಾಗಿದೆ. ಏಕೆಂದರೆ ಅವರ ಮೇಲೆ ಅಕ್ರಮ ನಡೆದಿದೆ (22:39)]. (ಜೊತೆಗೆ ಕುರ್‌ಆನ್‌ನ 60:80 ಮತ್ತು 4:91 ಸೂಕ್ತಗಳನ್ನೂ ನೋಡಿ). ಇದೇ ಕಾರಣಕ್ಕೆ

ಪ್ರವಾದಿಯವರ ಮೂರು ಯುದ್ಧಗಳು – ಬದ್ರ್, ಉಹುದ್ ಮತ್ತು ಕಂದಕ – ಎಲ್ಲವೂ ರಕ್ಷಣಾತ್ಮಕ ಸ್ವರೂಪದ್ದಾಗಿದ್ದವು. ಈ ಪೈಕಿ ಕೊನೆಯದು ಯುದ್ಧವೇ ಆಗಿರಲಿಲ್ಲ. ಶತ್ರು ಪಾಳಯವನ್ನು ಹಿಮ್ಮೆಟ್ಟಿಸಲು ಮದೀನಾ ಸುತ್ತ ತೋಡಲಾಗಿದ್ದ ಕಂದಕವು ಎಷ್ಟು ಆಳವಾಗಿತ್ತೆಂದರೆ ಮಕ್ಕಾದವರಿಗೆ ಅದನ್ನು ದಾಟಲು ಆಗಲಿಲ್ಲ. ಇಲ್ಲಿ ವ್ಯಕ್ತವಾಗುವ ಇನ್ನೊಂದು ವಿಚಾರವೆಂದರೆ ಅತಿರೇಕವೆಸಗುವುದು ಯುದ್ಧ ನೀತಿಯ ಉಲ್ಲಂಘನೆಯಾಗಿದ್ದು ಸ್ವತಃ ತಾವೇ ಯುದ್ಧ ಆರಂಭಿಸಕೂಡದೆಂದೂ ಮುಸ್ಲಿಮರಿಗೆ ನಿರ್ದೇಶನ ನೀಡಲಾಗಿದೆ.

> **"ಅತಿರೇಕವೆಸಗಬೇಡಿ. ಖಂಡಿತವಾಗಿಯೂ ಅಲ್ಲಾಹನು, ಅತಿರೇಕವೆಸಗುವವರನ್ನು ಮೆಚ್ಚುವುದಿಲ್ಲ" (ಕುರ್‌ಆನ್, 2:190)**

ಕುರ್‌ಆನ್‌ನಲ್ಲಿ ಪ್ರತಿಪಾದಿಸಲಾಗಿರುವ ಸ್ವರಕ್ಷಣೆಯ ಹೋರಾಟವು ನೇರವಾಗಿ ಮರ್ದನಕ್ಕೆ ಸಂಬಂಧಿಸಿದ್ದಾಗಿದೆ. ಮರ್ದನ ಮತ್ತು ದೌರ್ಜನ್ಯವು ಹತ್ಯೆಗೆ ಒಳಾಗುವುದಕ್ಕಿಂತಲೂ ಕೆಟ್ಟದ್ದು ಎನ್ನುತ್ತದೆ ಕುರ್‌ಆನ್. ದಬ್ಬಾಳಿಕೆಯು ಅವರ್ಣನೀಯ ಹಿಂಸೆಗೆ, ಅವಮಾನಕ್ಕೆ ದಾರಿ ಮಾಡಿಕೊಡುತ್ತದೆ. ಇದು ನಿಜವಾಗಿ ಮಾನವನ ಘನತೆಯ ಮೇಲೆ ಆಗುವ ಹಲ್ಲೆ. ಪ್ರಗತಿ ಮತ್ತು ಸಮೃದ್ಧಿಯ ಅವಕಾಶಗಳನ್ನು ಅದು ನಿರಾಕರಿಸುತ್ತದೆ. ಮರ್ದನವು ನಿಜವಾಗಿ ಎರಡೂ ಕಡೆಯ ಜನರ ಗೌರವವನ್ನು ಕುಗ್ಗಿಸುತ್ತದೆ. ಅದು ಮತ್ತಷ್ಟು ದ್ವೇಷ ಮತ್ತು ಹಿಂಸಾಚಾರಕ್ಕೆ ಕಾರಣವಾಗುತ್ತದೆ. ಮನುಷ್ಯನ ಹಕ್ಕು, ಅವಕಾಶ ಮತ್ತು ಸ್ವಾತಂತ್ರ್ಯವನ್ನು ಅದು ನಿರಾಕರಿಸುತ್ತದೆ. ಅಮಾಯಕರ ಮನೋಬಲವನ್ನು ಕುಗ್ಗಿಸುತ್ತದೆ. ಕುರ್‌ಆನ್ ಮದಿನಾದಲ್ಲಿರುವ ಮುಸಲ್ಮಾನರಿಗೆ, ಮಕ್ಕಾದಲ್ಲಿದ್ದ ದಮನಿತರಿಂದ ಆಗುತ್ತಿರುವ ಕಿರುಕುಳ, ಇದನ್ನು ತಪ್ಪಿಸಲಿಕ್ಕಾಗಿಯೇ ಕುರ್‌ಆನ್ ಮದೀನಾದ ಮುಸ್ಲಿಮರಿಗೆ, ಮಕ್ಕಾದ ಮರ್ದಕರಿಂದ ಆಗುತ್ತಿರುವ ಅನ್ಯಾಯ ದೌರ್ಜನ್ಯಗಳ ವಿರುದ್ಧ ಎದ್ದು ನಿಲ್ಲುವಂತೆ ಸೂಚಿಸಿತು.

ಇನ್ನೊಂದು ಸೂಕ್ತದಲ್ಲಿ ಈ ಮರ್ದನದ ಸ್ವರೂಪವನ್ನು ಕುರ್‌ಆನ್ (4;90) ಹೀಗೆ ವಿವರಿಸುತ್ತದೆ: "ಅವರು ನಿಮ್ಮಿಂದ ದೂರ ಉಳಿದರೆ ಹಾಗೂ ನಿಮ್ಮ ವಿರುದ್ಧ ಹೋರಾಡದಿದ್ದರೆ ಮತ್ತು ಶಾಂತಿಯ ಪ್ರಸ್ತಾಪ ಇಟ್ಟರೆ, ಅಲ್ಲಾಹನು ಅವರ ವಿರುದ್ಧ (ಹೋರಾಡಲು) ನಿಮಗೆ ಯಾವ ಅವಕಾಶವನ್ನೂ ಇಟ್ಟಿಲ್ಲ." ಬೇರೆ ಮಾತಿನಲ್ಲಿ ಹೇಳುವುದಾದರೆ ಮರ್ದನ ಎಂಬುದು ಕೇವಲ ಒಂದು ಬಿಡಿ ಘಟನೆಯಲ್ಲ. ಅದು ವ್ಯಕ್ತಿ ಮತ್ತು ಸಮುದಾಯವನ್ನು ತಮ್ಮ ಆತ್ಮಸಾಕ್ಷಿಗನುಗುಣವಾಗಿ ಬದುಕುವ ಹಕ್ಕಿನಿಂದ ವಂಚಿಸುವುದು ಮತ್ತು ಶಾಂತಿಯ ಆಯ್ಕೆಯೇ ಇಲ್ಲದಂತೆ ಮಾಡುವುದಾಗಿದೆ. ಮರ್ದನ ಎಂಬುದು ಕುರ್‌ಆನ್‌ನಲ್ಲಿ ಬಳಕೆಯಾಗಿರುವ 'ಫಿತ್ನಾ' ಎಂಬ ಮೂಲ ಪದಕ್ಕೆ

ಸಮೀಪವಾದುದು. ಪೀಡನೆ, ಯಾತನೆ, ಹತ್ಯೆ, ದ್ರೋಹ ಮತ್ತು ಸತತ ಸಂಕಷ್ಟ ಎಲ್ಲವನ್ನೂ ಒಳಗೊಂಡಿದೆ. ಜನರನ್ನು ತಮ್ಮ ನಂಬಿಕೆಯಂತೆ ಬದುಕಲು ಬಿಡದಿರುವುದಕ್ಕೂ ಅನ್ವಯಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ಮಾತ್ರ, ಕುರ್‌ಆನ್ 'ಅತ್ಯಂತ ಹೇಯವಾದುದು' ಎಂದು ಅಭಿಪ್ರಾಯಪಡುವ ಯುದ್ಧವು ಸಮರ್ಥನಿಯವೂ ಕಾನೂನುಬದ್ಧವೂ ಆಗಿಬಿಡುತ್ತದೆ.

ಮರ್ದನದ ವಿರುದ್ಧ ಮತ್ತು ತಮ್ಮ ಉಳಿವಿಗಾಗಿ ನಡೆಯುವ ಈ ಪ್ರತಿರೋಧವನ್ನೇ ಕುರ್‌ಆನ್, 'ದೇವ ಮಾರ್ಗದಲ್ಲಿ' ನಡೆಯುವ ನ್ಯಾಯೋಚಿತ ಯುದ್ಧ ಎಂದು ಪರಿಗಣಿಸುತ್ತದೆ. 'ದೇವ ಮಾರ್ಗದಲ್ಲಿ' ನಡೆಯುವ ಹೋರಾಟ ಎಂದರೆ ಧರ್ಮಪ್ರಚಾರಕ್ಕಾಗಿ ನಡೆಯುವ ಸಂಘರ್ಷ ಎಂದರ್ಥವಲ್ಲ. ಇಂತಹ ಒಕ್ಕಣೆ ಕುರ್‌ಆನ್‌ನಲ್ಲಿ ಎಲ್ಲೂ ಕಂಡು ಬರುವುದಿಲ್ಲ. ಇಲ್ಲಿ ಹೋರಾಟದ ಉದ್ದೇಶ ಕೇವಲ ದಮನ ಮತ್ತು ದೌರ್ಜನ್ಯದಿಂದ ಮುಕ್ತಿ ಹೊಂದುವುದು. ಅದೇ ರೀತಿ "ಯಾವುದೇ ಅಶಾಂತಿ ಇಲ್ಲವಾಗಿ ಬಿಡುವ ತನಕ ಹಾಗೂ ಧರ್ಮವು ಸಂಪೂರ್ಣ ಅಲ್ಲಾಹನಿಗೆ ಮೀಸಲಾಗಿ ಬಿಡುವ ತನಕ ನೀವು ಅವರ ವಿರುದ್ಧ ಯುದ್ಧ ಮಾಡಿರಿ" (ಕುರ್‌ಆನ್ 2:193) ಎಂಬುದರ ಅರ್ಥ ಇಸ್ಲಾಮನ್ನು ಹೇರುವುದಾಗಲೀ ಮುಸ್ಲಿಮೇತರರನ್ನು ದಾಸ್ಯಕ್ಕೆ ಅಥವಾ ಮರ್ದನಕ್ಕೆ ಗುರಿಪಡಿಸುವುದಾಗಲಿ ಅಲ್ಲ.

ಮನುಷ್ಯರನ್ನು ಮನುಷ್ಯರ ಅಡಿಯಾಳಾಗಿಸದ ಒಂದು ಸಾಮಾಜಿಕ ವ್ಯವಸ್ಥೆಯ ಕಡೆಗೆ ಈ ಮೇಲಿನ ಸೂಕ್ತ ಬೆಟ್ಟು ಮಾಡುತ್ತದೆ. ಮರ್ದನದಿಂದ ಬಿಡುಗಡೆಗೊಳ್ಳುವುದರ ಪರಿಣಾಮವೇನೆಂಬುದನ್ನೂ ಅದು ಸೂಚಿಸುತ್ತದೆ. ಯಾವುದೇ ಮರ್ದನದ ಭಯವಿಲ್ಲದೆ ದೇವರನ್ನು ಆರಾಧಿಸಬಹುದು ಎಂಬುದೇ ಇದರ ಮರ್ಮ. "ಧರ್ಮವು ಸಂಪೂರ್ಣ ಅಲ್ಲಾಹನಿಗೆ ಮೀಸಲಾಗಿ ಬಿಡುವ ತನಕ" ಎಂಬ ವಾಕ್ಯವು ಸಾಮಾನ್ಯವಾಗಿ ಎಲ್ಲ ಧರ್ಮಗಳ ಜನರ ಆರಾಧನೆಗಳಿಗೂ ಅನ್ವಯವಾಗುತ್ತದೆ. ಇದನ್ನು ಕುರ್‌ಆನ್ 22ನೇ ಅಧ್ಯಾಯದ 40ನೇ ಸೂಕ್ತದಲ್ಲೂ ಸ್ಪಷ್ಟಪಡಿಸಿದೆ. ಇಲ್ಲಿ ದೇವರ ಮಾರ್ಗದಲ್ಲಿ ಮರ್ದನದ ವಿರುದ್ಧ ಹೋರಾಡುವವರು "ಆಶ್ರಮಗಳನ್ನು, ಕ್ರೈಸ್ತರ ಇಗರ್ಜಿಗಳನ್ನು, ಯಹೂದ್ಯರ ಪ್ರಾರ್ಥನಾಲಯಗಳನ್ನು ಮತ್ತು ಧಾರಾಳವಾಗಿ ಅಲ್ಲಾಹನ ಹೆಸರನ್ನು ಉಚ್ಚರಿಸಲಾಗುವ ಮಸೀದಿಗಳನ್ನು" ರಕ್ಷಿಸುತ್ತಾರೆ ಎನ್ನಲಾಗಿದೆ. ಇಲ್ಲಿಯೂ ಬಳಕೆಯಾಗಿರುವ ಪದಗಳು "ಧರ್ಮವು ಸಂಪೂರ್ಣವಾಗಿ ಅಲ್ಲಾಹನಿಗೆ ಮೀಸಲಾಗಿ ಬಿಡುವ ತನಕ" ಎಂದಾಗಿದೆ.

ಧರ್ಮದ ಆಧಾರದ ಮೇಲೆ ದೌರ್ಜನ್ಯ ನಡೆಯದಂತೆ ನೋಡಿಕೊಳ್ಳುವುದೇ ಮರ್ದನದ ವಿರುದ್ಧ ನಡೆಯುವ ಹೋರಾಟದ ಅಂತಿಮ ಗುರಿಯಾಗಿರಬೇಕೆಂಬುದು ಈ ಸೂಕ್ತದ ಇಂಗಿತವಾಗಿದೆ. ತನ್ಮೂಲಕ ಪ್ರತಿಯೊಬ್ಬರಿಗೂ ತಮ್ಮ ನಂಬಿಕೆಯನ್ನು ಪಾಲಿಸಲು

ಅವಕಾಶ ಇರಬೇಕು. ಆದ್ದರಿಂದ ಈ ಸೂಕ್ತಗಳು ಮತ್ತು ಬಹುತ್ವವನ್ನು ಎತ್ತಿ ಹಿಡಿಯುವ ಇತರ ಸೂಕ್ತಗಳ ಮಧ್ಯೆ ಯಾವುದೇ ವಿರೋಧಾಭಾಸವಿಲ್ಲ.

ಜನರು ಇಸ್ಲಾಮನ್ನು ಬಲವಂತವಾಗಿ ಒಪ್ಪಿಕೊಳ್ಳುವವರೆಗೂ ಹೋರಾಟ ಮುಂದುವರಿಯಬೇಕು ಎಂಬ ವ್ಯಾಖ್ಯಾನವು ಕುರ್‌ಆನ್‌ನ ಮೂಲ ಸ್ಫೂರ್ತಿಗೆ ವಿರುದ್ಧವಾಗಿದೆ. "ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ" (2:256) ಎಂಬ ಚರಣವೂ ಸೇರಿದಂತೆ ಕುರ್‌ಆನ್‌ನ ಹಲವು ಸೂಕ್ತಗಳಿಗೆ ಇದಕ್ಕೆ ತದ್ವಿರುದ್ಧವಾಗಿದೆ. ಅಷ್ಟೇ ಅಲ್ಲ, ಸತ್ಯವಿಶ್ವಾಸಿಗಳನ್ನುದ್ದೇಶಿಸಿ ಸಂಧಾನ, ಮಾತುಕತೆ, ಒಪ್ಪಂದಗಳಿಗೆ ಮುಂದಾಗುವಂತೆ ಸೂಚಿಸಿರುವ ಹಲವಾರು ಕುರ್‌ಆನ್ ಸೂಕ್ತಗಳನ್ನೂ ಈ ವಾದವು ಅಪ್ರಸ್ತುತಗೊಳಿಸಿಬಿಡುತ್ತದೆ.

ಈ ಕುರ್‌ಆನ್‌ನ ಸೂಕ್ತಗಳನ್ನು (2:190–195) ಸಾಮಾನ್ಯವಾಗಿ ಯುದ್ಧಕ್ಕೆ ಅನುಮತಿ ನೀಡುವ ಇತರ ಅನೇಕ ಚರಣಗಳ ಜೊತೆಗೆ (4:76, 4:345, 4:89, 4:91, ಮತ್ತು 9:5, 9:12, 9:14, 98:29:, 9:36, 9:123) ಓದಲಾಗುತ್ತದೆ. ಆದರೆ ಟೀಕಾಕಾರರನ್ನು ಹೆಚ್ಚಾಗಿ ಆಕರ್ಷಿಸಿದ ಚರಣಗಳೆಂದರೆ 9:5 ಮತ್ತು 3:149. ಇವು ಇಲ್ಲಿ ಅತ್ಯಂತ ಪ್ರಸ್ತುತವಾಗಿರುವುದರಿಂದ ಚರ್ಚೆಗೆ ಅರ್ಹವಾದುದಾಗಿದೆ.

"ಆ ಬಹುದೇವಾರಾಧಕರನ್ನು ಕಂಡಲ್ಲಿ ಕೊಲ್ಲಿರಿ, ಅವರನ್ನು ಹಿಡಿಯಿರಿ, ಸುತ್ತುವರಿಯಿರಿ ಮತ್ತು ಪ್ರತಿಯೊಂದು ಆಯಕಟ್ಟಿನ ಸ್ಥಳದಲ್ಲಿ ಅವರಿಗಾಗಿ ಹೊಂಚಿನಲ್ಲಿರಿ" ಎಂಬ 9:5ನೇ ಸೂಕ್ತವು ಎಲ್ಲ ಕಾಲಗಳಿಗೂ ಅನ್ವಯವಾಗುವ ಆದೇಶವೇನಲ್ಲ. ಇದು, ನಿರ್ದಿಷ್ಟ ಶಾಂತಿ ಒಪ್ಪಂದವನ್ನು ಉಲ್ಲಂಘಿಸಿದವರನ್ನುದ್ದೇಶಿಸಿ ಹೇಳಲಾಗಿರುವ ಮಾತು. ಈ ಸೂಕ್ತವು ಆರಂಭದಲ್ಲಿ "ಪವಿತ್ರ ತಿಂಗಳುಗಳ" ಬಗ್ಗೆ ಪ್ರಸ್ತಾಪಿಸುತ್ತದೆ. ಈ ಅವಧಿಯಲ್ಲಿ ಕದನವಿರಾಮ ಜಾರಿಯಲ್ಲಿತ್ತು. ಬನೀ ದಮ್ರಾ ಮತ್ತು ಬನೀ ಕನಾನಾಹ್ ಬುಡಕಟ್ಟು ಜನರನ್ನು ಹೊರತು ಪಡಿಸಿ, ಮದೀನಾ ಆಸುಪಾಸಿನಲ್ಲಿದ್ದ ಇತರೆಲ್ಲ ಬುಡಕಟ್ಟುಗಳು ಆಗಾಗ್ಗೆ ಒಪ್ಪಂದವನ್ನು ಉಲ್ಲಂಘಿಸುತ್ತಿದ್ದರು ಮತ್ತು ಮುಸ್ಲಿಮರ ಹತ್ಯೆ, ಮರ್ದನವನ್ನು ಮುಂದುವರಿಸಿದ್ದರು. ಮುಸ್ಲಿಮರ ಜತೆಗಿನ ಸಂಬಂಧದಲ್ಲಿ ಈ ರೀತಿ ಒಪ್ಪಂದ ಉಲ್ಲಂಘನೆಯು ಅರೆಬಿಯನ್ ಗೋತ್ರಗಳಿಗೆ ಮಾಮೂಲಾಗಿತ್ತು. ಮುಸ್ಲಿಮ್ ಸಮುದಾಯದ ಉಳಿವಿನ ಪ್ರಶ್ನೆ ತಲೆದೋರಿತ್ತು. ಮುಸ್ಲಿಮರು ಪ್ರತಿಕೂಲ ಪರಿಸ್ಥಿತಿ ತಿಳಿಯಾಗುವವರೆಗೂ ತಮ್ಮನ್ನು ರಕ್ಷಿಸಿಕೊಳ್ಳಲು ಯುದ್ಧಕ್ಕೆ ಇಳಿಯಬೇಕೆಂದು ಇಲ್ಲಿ ಸೂಚಿಸಲಾಯಿತು. ಯುದ್ಧರಂಗದಲ್ಲಿ ಇಸ್ಲಾಮಿನ ವೈರಿಗಳು ನ್ಯಾಯಕ್ಕೆ ಬೆಲೆ ನೀಡುತ್ತಿರಲಿಲ್ಲ. ಬುಡಕಟ್ಟುಗಳ ನಡುವೆ ಏರ್ಪಟ್ಟ ಒಪ್ಪಂದವನ್ನು ಪಾಲಿಸುತ್ತಿರಲಿಲ್ಲ. ಯುದ್ಧ ಕೊನೆಗೊಳಿಸುವುದಕ್ಕೆ ಸಂಬಂಧಿಸಿದ ಆದೇಶಗಳನ್ನು ಮುಸ್ಲಿಮರು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಶತ್ರುಗಳು ತಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟಾಗ ಮುಸ್ಲಿಮರು ತಮ್ಮ

ಖಡ್ಗಗಳನ್ನು ಒರೆಯಲ್ಲಿಡುತ್ತಿದ್ದರು. ಆದರೆ, ಮುಸ್ಲಿಮರ ಈ ನೀತಿಯನ್ನು ಮಕ್ಕಾದ ಕುರೈಷರು ಹೆಚ್ಚಿನ ವೇಳೆ ದುರುಪಯೋಗಪಡಿಸಿಕೊಳ್ಳುತ್ತಿದ್ದರು. ವಂಚನೆ, ಮೋಸದಿಂದ ಅನೇಕ ಮುಸ್ಲಿಮರನ್ನು ಕೊಂದುಬಿಡುತ್ತಿದ್ದರು. ಮೇಲಿನ ಸೂಕ್ತವು ನಿಜವಾಗಿ "ಪ್ರತಿ ಬಾರಿಯೂ ಕರಾರು ಉಲ್ಲಂಘಿಸುವ" (ಕುರ್‌ಆನ್ 8:56) ಜನರ ವಿರುದ್ಧ ವ್ಯಕ್ತಪಡಿಸಿರುವ ಆಕ್ರೋಶವಾಗಿದೆ.

ಈಗ ನಾವು ಇನ್ನೊಂದು ಸೂಕ್ತವನ್ನು ತೆಗೆದುಕೊಳ್ಳೋಣ. "ಧಿಕ್ಕಾರಿಗಳು ಅಲ್ಲಾಹನ ಜತೆ ಪಾಲುದಾರರನ್ನು ಸೇರಿಸಿದ್ದಕ್ಕಾಗಿ ಶೀಘ್ರವೇ ನಾವು ಅವರ ಮನದಲ್ಲಿ ಭಯವನ್ನು ಬಿತ್ತುವೆವು" (3:151). ಈ ಸೂಕ್ತವೂ ಇಸ್ಲಾಮಿನ ನೈಜ ಮತ್ತು ಕಾಲ್ಪನಿಕ ವೈರಿಗಳ ಪ್ರಮುಖ ಬತ್ತಳಿಕೆಯಾಗಿ ಮಾರ್ಪಟ್ಟಿದೆ.

ಇಸ್ಲಾಮ್ ಎಂದರೆ ಬೆಚ್ಚಿ ಬೀಳುವವರು ಹಾಗೂ ಟೀಕಾಕಾರರು ತಿಳಿದುಕೊಂಡಿರುವುದಕ್ಕೆ ವ್ಯತಿರಿಕ್ತವಾಗಿ ಈ ಸೂಕ್ತವು ಒಂದು ವಾಸ್ತವಿಕ ಹೇಳಿಕೆಯಾಗಿದೆ. ಮುಸ್ಲಿಮರು ಬದ್ರ್ ಯುದ್ಧವನ್ನು ಜಯಿಸಿದ ಒಂದು ವರ್ಷದಲ್ಲೇ ಮತ್ತೆ ಮಕ್ಕಾದ ಶತ್ರುಗಳ ದಾಳಿಯನ್ನು ಎದುರಿಸಬೇಕಾಗಿ ಬಂದಾಗ ಈ ಸೂಕ್ತ ಅವತೀರ್ಣಗೊಂಡಿತು. ಇಲ್ಲಿ ಅಲ್ಲಾಹನು ಪ್ರವಾದಿವರ್ಯರನ್ನು ಸಮಾಧಾನಪಡಿಸುತ್ತಾ, ಮುಸ್ಲಿಮರ ಸೇನೆಯು ವೃತ್ತಿಪರವಲ್ಲದಿದ್ದರೂ ಶಸ್ತ್ರಾಸ್ತ್ರಗಳ ಕೊರತೆ ಎದುರಿಸುತ್ತಿದ್ದರೂ ಶತ್ರುಗಳ 'ಮನದಲ್ಲಿ ಭಯ' ಬಿತ್ತಲಾಗುವುದು ಎಂದು ಹೇಳಿದ್ದಾನೆ. ಇದು ಶತ್ರು ಪಾಳಯಕ್ಕೆ ಮುಸ್ಲಿಮ್ ಸೇನೆ ಯಾವ ರೀತಿ ಗೋಚರವಾಗಲಿದೆ ಎಂಬುದನ್ನು ಸೂಚಿಸುತ್ತದೆಯೇ ಹೊರತು, ಮುಸ್ಲಿಮರಿಗೆ ನೀಡಲಾದ ಆದೇಶವಲ್ಲ.

ಆತ್ಮರಕ್ಷಣೆಯ ಕ್ರಮಗಳಲ್ಲೂ ಭಯೋತ್ಪಾದನೆಯನ್ನು ನೋಡಲು ತವಕಿಸುವ ಜನರು, ಈ ಸೂಕ್ತಕ್ಕೆ ಇಲ್ಲದ ಅರ್ಥ ಹಚ್ಚಲು ಪ್ರಯತ್ನಿಸುತ್ತಾರೆ. ಧರ್ಮಗ್ರಂಥಗಳಿಗೆ ಮಸಿಬಳಿಯುವ ಇವರ ಅತ್ಯುತ್ಸಾಹಕ್ಕೆ ಭಗವದ್ಗೀತೆಯಲ್ಲೂ ಕಾರಣಗಳು ಸಿಗಬಹುದು. ಗೀತೆಯೂ ಆತ್ಮರಕ್ಷಣೆಗಾಗಿ ನ್ಯಾಯಕ್ಕಾಗಿ ಮತ್ತು ಮರ್ದನದ ವಿರುದ್ಧ ಯುದ್ಧ ನಡೆಸುವಂತೆ ಆದೇಶಿಸುತ್ತದೆ. ಅರ್ಜುನ ತನ್ನ ದಾಯಾದಿಗಳಾದ ಕೌರವರ ವಿರುದ್ಧ ಹೋರಾಡುವುದಕ್ಕಿಂತಲೂ ಶಸ್ತ್ರಾಸ್ತ್ರವಿಲ್ಲದೇ ಸಾಯುವುದು ಮೇಲು ಎಂದು ಭಾವಿಸಿದಾಗ, ಕೃಷ್ಣ ಕೆಳಕಂಡ ಸೂಕ್ತಗಳ ಮೂಲಕ ಅರ್ಜುನನಿಗೆ ಪ್ರೋತ್ಸಾಹ ನೀಡುತ್ತಾನೆ: "ಇಂಥದೊಂದು ಆಲೋಚನೆ ನಿನಗೆ ಬಂದದ್ದಾದರೂ ಹೇಗೆ? ಇದು ನೀನು ಸ್ವರ್ಗಕ್ಕೆ ಹೋಗುವುದನ್ನು ತಪ್ಪಿಸಲಿದೆ. ಇಂಥ ಅಧೈರ್ಯ ಬಿಡು, ಮನಸ್ಸು ದುರ್ಬಲವಾಗಲು ಬೇಡ. ಓ ವೈರಿಯನ್ನು ಹಿಮ್ಮೆಟ್ಟಿಸುವವನೇ" (ಭಗವದ್ಗೀತಾ ಅಧ್ಯಾಯ 1, ಚರಣ 43–46, ಅಧ್ಯಾಯ 2 ಚರಣ 2–3).

ಯಾರಾದರೂ ಭಗವದ್ಗೀತೆಯ ಈ ಚರಣವನ್ನು ಹಿಂಸೆ ಮತ್ತು ಹತ್ಯೆಗೆ ಉತ್ತೇಜನ ನೀಡುತ್ತದೆ ಎಂದು ವಾದಿಸಿದರೆ ಹೇಗಿರಬಹುದು? ಇಂಥ ವಾದ ಧೂರ್ತ ಮತ್ತು ಮೂರ್ಖತನದ್ದೆಂದು ನಿಮಗೆ ಅನಿಸುವುದಿಲ್ಲವೇ? ಸಂದರ್ಭ ಮತ್ತು ಸನ್ನಿವೇಶವನ್ನು ಗಮನದಲ್ಲಿಟ್ಟು ಓದಿದಾಗ ಗೀತೆಯ ಈ ಆದೇಶವು ನ್ಯಾಯಕ್ಕೋಸ್ಕರ ಮತ್ತು ಕೆಡುಕಿನ ವಿರುದ್ಧದ ಹೋರಾಟಕ್ಕೆ ಸಂಬಂಧಿಸಿದ್ದೆಂಬುದು ಸ್ಪಷ್ಟವಾಗುತ್ತದೆ.

# ಕೃತಜ್ಞತೆ

ಕಳೆದ ಹಲವು ವರ್ಷಗಳಲ್ಲಿ ನೂರಾರು ಜನರಿಂದ ನಾನು ಪಡೆದ ಅನುಭವ ಮತ್ತು ಒಳನೋಟಗಳ ಪ್ರತಿಬಿಂಬವೇ ಈ ಪುಸ್ತಕ. ಇಲ್ಲಿ ಚರ್ಚಿಸಿರುವ ಹತ್ತು ಹಲವು ವಿಷಯಗಳಿಗೆ ಸಂಬಂಧಿಸಿ ನನ್ನ ಮೇಲೆ ಪ್ರಭಾವ ಬೀರಿದವರು ಯಾರು ಎಂಬುದನ್ನು ನಾನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಈ ಪುಸ್ತಕವನ್ನು ಬರೆಯುವಾಗ ಹಲವಾರು ಮಂದಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನೆರವಾಗಿದ್ದಾರೆ. ಅವರೆಲ್ಲರನ್ನೂ ನಾನು ನೆನಪಿಸಲೇಬೇಕು. ಈ ಕೃತಿಯ ರಚನೆ ಮತ್ತು ಸಂಕಲನದ ಸಂದರ್ಭದಲ್ಲಿ ಹಲವು ಲೇಖಕರ ಕೃತಿಗಳಿಂದ ನಾನು ಲಾಭ ಪಡೆದಿದ್ದೇನೆ. ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಈ ಪೈಕಿ ನಾನು ಪ್ರಸ್ತಾಪಿಸಬೇಕಾದ ಮೊಟ್ಟ ಮೊದಲ ಹೆಸರು ಶ್ರೀ ಗ್ರಹಾಮ್ ಇ. ಫುಲ್ಲರ್ ಅವರದ್ದು. ಹಿರಿಯ ರಾಜಕೀಯ ಪಂಡಿತರಾಗಿರುವ ಇವರು ಅಮೆರಿಕದ ಸಿಐಎಯ ನ್ಯಾಷನಲ್ ಇಂಟೆಲಿಜೆನ್ಸ್ ಕೌನ್ಸಿಲ್‌ನ ಮಾಜಿ ಉಪಾಧ್ಯಕ್ಷರಾಗಿಯೂ ಕೆಲಸ ನಿರ್ವಹಿಸಿದ್ದಾರೆ. ಸುಪ್ರೀಮ್ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮತ್ತು ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಹಾಲಿ ಅಧ್ಯಕ್ಷ ಶ್ರೀ ಮಾರ್ಕಂಡೇಯ ಕಾಟ್ಜು, ಜಾರ್ಜ್‌ಟೌನ್ ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ವ್ಯವಹಾರಗಳು ಮತ್ತು ಇಸ್ಲಾಮೀ ಅಧ್ಯಯನ ವಿಭಾಗದ ಪ್ರಾಚಾರ್ಯ ಶ್ರೀ ಜಾನ್ ಲೂಯಿಸ್ ಎಸ್ಪೊಸಿಟೊ, ಭಾರತದ ಪ್ರಖ್ಯಾತ ಇಸ್ಲಾಮೀ ವಿದ್ವಾಂಸ ದಿವಂಗತ ಡಾ. ರಫೀಕ್ ಝಕಾರಿಯಾ, ಬಿಬಿಸಿಯೂ ಸೇರಿದಂತೆ ಹಲವು ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುವ ಬೆಂಗಳೂರು ಮೂಲದ ಹಿರಿಯ ಪತ್ರಕರ್ತ ಶ್ರೀ ಮಕ್ಬೂಲ್ ಅಹಮದ್ ಸಿರಾಜ್ ಅವರನ್ನು ನಾನು ಇಲ್ಲಿ ಸ್ಮರಿಸಲೇಬೇಕು ಮತ್ತು www.karnatakamuslims.com ನ ಮುಖ್ಯ ಸಂಪಾದಕ ಸೈಯದ್ ತನ್ವೀರ್ ಅಹಮದ್ ಅವರು ಈ ಕೃತಿ ರಚನೆಯ ಎಲ್ಲ ಹಂತಗಳಲ್ಲೂ ನನ್ನ ಜತೆಗಿದ್ದು ಬೆಂಬಲಿಸಿದ್ದಾರೆ. ಅವರಿಗೆ ನಾನು ಆಭಾರಿ.

ಈ ಕೃತಿಯ ಪ್ರಾಥಮಿಕ ಕರಡನ್ನು ಹಲವಾರು ಪ್ರಾಜ್ಞರ ಪರಿಶೀಲನೆಗೆ ನಾನು ಒಪ್ಪಿಸಿದ್ದೇನೆ. ಈ ಪೈಕಿ ನಾನು ಉಲ್ಲೇಖಿಸಲೇಬೇಕಾದ ಹೆಸರುಗಳೆಂದರೆ; ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಬರಹಗಾರ ಡಾ. ಯು.ಆರ್. ಅನಂತಮೂರ್ತಿ, ಮಂಗಳೂರು ಮತ್ತು ಗೋವಾ ವಿಶ್ವವಿದ್ಯಾಲಯಗಳ ಸ್ಥಾಪಕ ಉಪಕುಲಪತಿ ಡಾ. ಬಿ. ಷೇಕ್ ಅಲಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ

ಕನ್ನಡ ಲೇಖಕ ಚಂದ್ರಶೇಖರ ಕಂಬಾರ, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಮಹಾನಿರ್ದೇಶಕ ಬಿಪಿನ್ ಗೋಪಾಲಕೃಷ್ಣ, ಯುನೆಸ್ಕೋ, ಯುನೈಡೋ ಮತ್ತು ಐಡಿಬಿಗಳ ಮಾಜಿ ಸಲಹೆಗಾರ ಶ್ರೀ ಅಬ್ದುಲ್ ರಹ್ಮಾನ್ ಕಮರುದ್ದೀನ್, ಕರ್ನಾಟಕ ಸರಕಾರದ ಪ್ರಧಾನ ಕಾರ್ಯದರ್ಶಿ ಮತ್ತು ಐಪಿಎಸ್ ಅಧಿಕಾರಿ ಮೊಹಮ್ಮದ್ ಸನಾವುಲ್ಲಾ, ಹಿರಿಯ ಪೊಲೀಸ್ ಅಧಿಕಾರಿ ಯು. ನಿಸಾರ್ ಅಹಮದ್ (ಐಪಿಎಸ್) ಮತ್ತು ಮಹಮ್ಮದ್ ಜಿಲಾನಿ.

ಈ ಪುಸ್ತಕವನ್ನು ಮತ್ತಷ್ಟು ಪರಿಷ್ಕರಿಸಲು ಈ ಎಲ್ಲ ಮಹಾನುಭಾವರ ಸಲಹೆಗಳು ನನಗೆ ನೆರವಾಗಿವೆ. ಇವರೆಲ್ಲರಿಗೂ ದೇವರು ಆಶೀರ್ವದಿಸಲಿ ಮತ್ತು ಈ ಕೃತಿಯನ್ನು ಪೂರ್ಣಗೊಳಿಸುವುದರಲ್ಲಿ ಇವರು ನಿರ್ವಹಿಸಿದ ಪಾತ್ರವನ್ನು ಪುಣ್ಯ ಕಾರ್ಯವಾಗಿ ಸ್ವೀಕರಿಸಲಿ. ಆಮೀನ್.

ಈ ಕೃತಿಯ ಕನಸನ್ನು ನನಸಾಗಿಸುವುದರಲ್ಲಿ ನನಗೆ ಬೆಂಗಾವಲಾಗಿ ನಿಂತ ಮುಹಮ್ಮದ್ ನುಮಾನ್ ಖಾನ್ ಅವರ ಉತ್ಸಾಹ, ವಿಧೇಯತೆ ಮತ್ತು ನಿಸ್ಪೃಹತೆಗೆ ನಾನು ಋಣಿ. ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿದ ತುಫೈಲ್ ಮುಹಮ್ಮದ್‌ರಿಗೂ ನಾನು ಆಭಾರಿ.

ನನ್ನ ಕುಟುಂಬ ಸದಸ್ಯರು, ಸೋದರ ಸೋದರಿಯರಿಗೂ ನನ್ನ ಕೃತಜ್ಞತೆಗಳು. ಈ ಪುಸ್ತಕದ ಕೆಲಸದಲ್ಲಿ ತಲ್ಲೀನನಾಗಿದ್ದ ಸಂದರ್ಭದಲ್ಲಿ ಪತ್ನಿ ಶಬಾನಾ ಫಿರ್ದೋಸ್ ಮತ್ತು ಸಯೀದಾ ಸೂಫಿಯಾರೊಂದಿಗೆ ಹೆಚ್ಚು ಸಮಯವನ್ನು ಕಳೆಯಲು ಸಾಧ್ಯವಾಗಲಿಲ್ಲ. ಅವರನ್ನೂ ನಾನು ಪ್ರೀತಿಪೂರ್ವಕ ನೆನೆಯುತ್ತೇನೆ. ಎಲ್ಲಕ್ಕಿಂತಲೂ ಹೆಚ್ಚಾಗಿ, ನನ್ನ ಈ ಕೆಲಸದ ಹಿಂದಿರುವ ಪ್ರೇರಕ ಶಕ್ತಿ ನನ್ನ ಅಮ್ಮ ಅಸ್ಮತ್ ಸಾರಾ. ಆಕೆಯ ಪ್ರಾರ್ಥನೆಗಳು ಮತ್ತು ಸೌಜನ್ಯದ ಮಾತುಗಳೇ ನನ್ನನ್ನು ಸಾಧನೆಯ ಹಾದಿಯಲ್ಲಿ ಮುನ್ನುಗ್ಗುವಂತೆ ಹುರಿದುಂಬಿಸುತ್ತಿದ್ದವು.

ಈ ಕೈಂಕರ್ಯಕ್ಕೆ ಬೇಕಾದ ಸಂಪನ್ಮೂಲ, ಒಳನೋಟ ಮತ್ತು ಉತ್ಸಾಹವನ್ನು ಒದಗಿಸಿದ ಸರ್ವಶಕ್ತನಾದ ಅಲ್ಲಾಹನ ಚಿರಂತನ ಅನುಗ್ರಹನಿಗೂ ನನ್ನ ಅನಂತ ವಂದನೆಗಳು. ಆತನ ಆಶೀರ್ವಾದವಿಲ್ಲದೇ ಹೋಗಿದ್ದರೆ ಈ ಕಾರ್ಯ ಪೂರ್ಣಗೊಳ್ಳುವುದು ಅಥವಾ ಫಲ ನೀಡುವುದು ಸಾಧ್ಯವಿರಲಿಲ್ಲ. ಇಡೀ ಮಾನವ ಜನಾಂಗಕ್ಕೆ ಪ್ರೀತಿ ಮತ್ತು ಶಾಂತಿಯ ಸಂದೇಶವನ್ನು ಪಸರಿಸುವ ಮಾರ್ಗದಲ್ಲೇ ನನ್ನನ್ನು ಮುಂದುವರಿಸು ಎಂಬುದೇ ಆ ದೇವರಲ್ಲಿ ನನ್ನ ಪ್ರಾರ್ಥನೆ. ಆಮೀನ್

**ಸೈಯದ್ ಹಾಮಿದ್ ಮುಹ್ಸಿನ್**
ಅಧ್ಯಕ್ಷರು, ಸಲಾಮ್ ಸೆಂಟರ್

ಜುಲೈ, 2013

# Bibliographic References

| | |
|---|---|
| 1. Muhammad Encyclopedia of Seerah | Afzalur Rehman. |
| 2. The Emergence of Islam | Dr. Mohammed Hameedullah. |
| 3. The Life of Muhammad | Haykal. |
| 4. Muhammad | Martine Lings. |
| 5. Prophet Muhammad | Fethullah Gulen. |
| 6. Muhammad, all that Matters | Ziauddin Sardar. |
| 7. Islam, the West and the Challenges of Modernity | Tariq Ramadan. |
| 8. A World Without Islam | Graham E. Fuller. |
| 9. Islam and *Jihad* | A.G. Noorani. |
| 10. The Islamic Threat, Myth or Reality | John L. Esposito. |
| 11. Demystifying Islam | Dr. Ali Shehata. |
| 12. Muhammad and the Quran | Rafiq Zakaria. |
| 13. Islam in Focus | Hammudah Abdalati. |
| 14. The Holy Quran | Abdullah Yusuf Ali. |
| 15. The Quran | Dr. Nazeer Ahmed. |

This document was created with the Win2PDF “Print to PDF” printer available at

https://www.win2pdf.com

This version of Win2PDF 10 is for evaluation and non-commercial use only.
Visit https://www.win2pdf.com/trial/ for a 30 day trial license.

This page will not be added after purchasing Win2PDF.

https://www.win2pdf.com/purchase/